ಆಧುನಿಕ ಕನ್ನಡ ಸಾಹಿತ್ಯ : ವೈದಿಕ ವಿರೋಧಿ ಪ್ರಜ್ಞೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಪ್ರದೀಪ ಕೆ. ವಿ.

ಮಾರ್ಗದರ್ಶಕರು

ಡಾ. ಕೆ. ಸಿ. ಶಿವಾರೆಡ್ಡಿ

ಪ್ರಾಧ್ಯಾಪಕರು

ಭಾಷಾನಿಕಾಯ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೨೦

ಆಧುನಿಕ ಕನ್ನಡ ಸಾಹಿತ್ಯ: ವೈದಿಕ ವಿರೋಧಿ ಪ್ರಜ್ಞೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಪ್ರದೀಪ ಕೆ.ವಿ.

ಮಾರ್ಗದರ್ಶಕರು
ಡಾ. ಕೆ.ಸಿ. ಶಿವಾರೆಡ್ಡಿ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

*****

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **"ಆಧುನಿಕ ಕನ್ನಡ ಸಾಹಿತ್ಯ : ವೈದಿಕ ವಿರೋಧಿ ಪ್ರಜ್ಞೆ"** ಎಂಬ ಮಹಾಪ್ರಬಂಧವು ಡಾ. ಕೆ. ಸಿ. ಶಿವಾರೆಡ್ಡಿ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಪ್ರದೀಪ ಕೆ. ವಿ.

ಪ್ರದೀಪ ಕೆ. ವಿ.
ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ

ದಿನಾಂಕ: ೨೨-೧೦-೨೦೨೦

ಸ್ಥಳ: ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

'ಆಧುನಿಕ ಕನ್ನಡ ಸಾಹಿತ್ಯ: ವೈದಿಕ ವಿರೋಧಿ ಪ್ರಜ್ಞೆ' ಎಂಬ ವಿಷಯದ ಕುರಿತು ಪ್ರದೀಪ ಕೆ. ವಿ. ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಹಾಗೂ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

[signature]

ಡಾ. ಕೆ. ಸಿ. ಶಿವಾರೆಡ್ಡಿ
ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: 22·10·20.

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪ ಅಧ್ಯಯನದ ಸ್ವರೂಪ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ

ಪ್ರಸ್ತಾವನೆ

'ಆಧುನಿಕ ಕನ್ನಡ ಸಾಹಿತ್ಯ: ವೈದಿಕ ವಿರೋಧಿ ಪ್ರಜ್ಞೆ' ಎಂಬ ಶೀರ್ಷಿಕೆಯ ಈ ಸಂಶೋಧನೆಯು ಮುಖ್ಯವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ಹೇಗೆ ಮೂಡಿಬಂದಿದೆ ಎಂಬುದನ್ನು ಅರಿಯುವ, ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ. ವಸಾಹತುಶಾಹಿ ಕಾಲಘಟ್ಟದಲ್ಲಿ ಆರಂಭವಾದ ಆಧುನಿಕ ಕನ್ನಡ ಸಾಹಿತ್ಯವು ಒಂದು ಕಡೆ ವಸಾಹತುಶಾಹಿಯಿಂದ ತನಗೆ ಬೇಕಾದುದನ್ನು ಪಡೆದುಕೊಂಡಿದೆ. ಮತ್ತೊಂದು ಕಡೆ ಅದನ್ನು ವಿರೋಧಿಸಿದೆ. ಅದೇ ರೀತಿಯಲ್ಲಿ ವೈದಿಕ ಪ್ರಜ್ಞೆಯಿಂದ ತನಗೆ ಬೇಕಾದುದನ್ನು ಪಡೆದುಕೊಂಡಿದೆ. ಮತ್ತೊಂದು ಕಡೆ ಅದೇ ವೈದಿಕ ಪ್ರಜ್ಞೆಯನ್ನು ವಿರೋಧಿಸಿದೆ. ಹೀಗೆ ವೈದಿಕ ಪ್ರಜ್ಞೆಯನ್ನು ವಿರೋಧಿಸುತ್ತಾ, ವೈದಿಕ ವಿರೋಧಿ ಪ್ರಜ್ಞೆಯನ್ನು ಬೆಳೆಸಿದೆ. ಈ ವೈದಿಕ ವಿರೋಧಿ ಪ್ರಜ್ಞೆಯು ಒಂದು ಕಡೆ ಆಧುನಿಕ ಕನ್ನಡ ಸಾಹಿತ್ಯವನ್ನು ವಿಸ್ತಾರವಾಗಿ ಬೆಳೆಸಿದೆ. ಕನ್ನಡ ಸಮಾಜದ ಆಳ-ಅಗಲಗಳನ್ನು, ಮೇಲು-ಕೀಳುಗಳನ್ನು ಗ್ರಹಿಸಲು ಬೇಕಾದ ಸೂಕ್ಷ್ಮನೋಟಗಳನ್ನು ಕೊಟ್ಟಿದೆ. ಚರಿತ್ರೆ, ಪರಂಪರೆ, ಸಮಾಜ, ಸಂಸ್ಕೃತಿ ಮುಂತಾದುವುಗಳನ್ನು ಸಾಂಪ್ರದಾಯಿಕವಾಗಿ ಗ್ರಹಿಸುತ್ತಿದ್ದ ಕಾಲದಲ್ಲಿ; ಇವುಗಳನ್ನು ಅದಕ್ಕಿಂತ ಭಿನ್ನವಾಗಿ ಗ್ರಹಿಸಬಹುದು ಎಂಬುದನ್ನು ವೈದಿಕ ವಿರೋಧಿ ಪ್ರಜ್ಞೆ ಕನ್ನಡ ಸಾಹಿತಿಗಳಿಗೆ ಕಲಿಸಿದೆ. ವೈದಿಕ ವಿರೋಧಿ ಪ್ರಜ್ಞೆಯಿಂದ ಕಲಿತ ಕನ್ನಡ ಸಾಹಿತಿಗಳು ಇದೇ ವೈದಿಕ ವಿರೋಧಿ ಪ್ರಜ್ಞೆಯನ್ನು ಬಹಳ ವಿಸ್ತಾರವಾಗಿ ಬೆಳೆಸಿದ್ದಾರೆ.

ಪ್ರಶ್ನೆ ಮಾಡದೆ ಎಲ್ಲವನ್ನೂ ಒಪ್ಪಿಕೊಳ್ಳುವಂತೆ ಮಾಡಿದ್ದ ವೈದಿಕ ಪ್ರಜ್ಞೆಗೆ, ವೈದಿಕ ವಿರೋಧಿ ಪ್ರಜ್ಞೆಯು ಬಲವಾದ ಪೆಟ್ಟನ್ನು ಕೊಟ್ಟಿತು. ಇದು ಎಲ್ಲವನ್ನೂ ಪ್ರಶ್ನೆ ಮಾಡುವುದನ್ನು ಕಲಿಸಿತು; ಆಧುನಿಕತೆಯನ್ನು ಸ್ವೀಕಾರ ಮಾಡುವುದನ್ನು ಕಲಿಸಿತು; ವೈಜ್ಞಾನಿಕ ಮನೋಭಾವವನ್ನು ಕಲಿಸಿತು. ಎಲ್ಲಾ ರೀತಿಯ ಯಜಮಾನಿಕೆ ಹಾಗೂ ಮೌಢ್ಯಗಳನ್ನು ನಿರಾಕರಿಸುವ ಹಾಗೂ ಪ್ರಜೆಗಳ

ಪರವಾಗಿ, ಮಹಿಳೆಯರ ಪರವಾಗಿ ಆಲೋಚಿಸುವಂತೆ ಮಾಡಿತು. ಇದರಿಂದಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಲವು ಪ್ರಕಾರಗಳೂ ಹಲವು ಅಭಿವ್ಯಕ್ತಿಗಳೂ ಬರಲು ಸಾಧ್ಯವಾಯಿತು.

ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಸಾಹಿತ್ಯದ ಪ್ರಭಾವವನ್ನು ಪಡೆದಿದೆ ನಿಜ. ಅದಕ್ಕಿಂತ ಹೆಚ್ಚಾಗಿ ಇದು ವೈದಿಕ ವಿರೋಧಿ ಪ್ರಜ್ಞೆಗೆ ಸಂಬಂಧಿಸಿದಂತೆ ಪ್ರಾಚೀನ ಕನ್ನಡ ಸಾಹಿತ್ಯದಿಂದಲೂ ಪ್ರಭಾವವನ್ನು ಪಡೆದಿದೆ. ಕುವೆಂಪು ಅವರು ಭಾರತೀಯ ಕಾವ್ಯಮೀಮಾಂಸೆಯಿಂದ, ಪಂಪ, ರನ್ನ, ನಾಗಚಂದ್ರ, ಕುಮಾರವ್ಯಾಸ, ಲಕ್ಷ್ಮೀಶ ಈ ಕವಿಗಳ ಕಾವ್ಯದಿಂದ ಪ್ರಭಾವ ಪಡೆದಿದ್ದಾರೆ. ಕುವೆಂಪು ಅವರು ಮಾತ್ರವೇ ಅಲ್ಲ; ಆ ಕಾಲದ ಮಹತ್ವದ ಲೇಖಕರು ಪ್ರಾಚೀನ ಕನ್ನಡ ಸಾಹಿತ್ಯದಿಂದ ಪ್ರಭಾವ ಹೊಂದಿದ್ದಾರೆ. ಈ ಪ್ರಭಾವವು ಎಲ್ಲವನ್ನೂ ಪ್ರಶ್ನೆ ಮಾಡುವ ಹಾಗೂ ಎಲ್ಲವನ್ನೂ ಕಾಲದ ಅಗತ್ಯಕ್ಕೆ ತಕ್ಕಂತೆ ಮುರಿದುಕಟ್ಟುವ ಹೊಸ ಪ್ರಯತ್ನಕ್ಕೆ ಸಂಬಂಧಪಟ್ಟುದು. ಹಾಗಾಗಿ ಆಧುನಿಕ ಕಾಲದ ಮಹತ್ವದ ಬರಹಗಾರರು ಪ್ರಗತಿಪರ ಚಿಂತಕರಾಗಿದ್ದು, ವೈದಿಕ ಪ್ರಜ್ಞೆಯನ್ನು ವಿರೋಧಿಸುವಂತಹ ಆಶಯವುಳ್ಳವರಾಗಿದ್ದರೆ ಅವರೆಲ್ಲರೂ ಕೂಡ ಒಂದಿಲ್ಲ ಒಂದು ರೀತಿಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಿಂದ ಪ್ರೇರಣೆ, ಪ್ರಭಾವ ಪಡೆದವರೇ ಆಗಿದ್ದಾರೆ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಇಡೀ ಕನ್ನಡ ಸಾಹಿತ್ಯದ ಪರಂಪರೆಯನ್ನು ವೈದಿಕ ವಿರೋಧಿ ಪ್ರಜ್ಞೆಯ ಮೂಲಕ ವಿಮರ್ಶಾತ್ಮಕವಾಗಿ ಅವಲೋಕನ ಮಾಡುವ ಅಗತ್ಯವಿದೆ. ಇದನ್ನು ಈ ಮುಂದಿನ ಉಪ ಅಧ್ಯಾಯಗಳಲ್ಲಿ ಮಾಡಲಾಗಿದೆ. ೧. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ದೃಷ್ಟಿಕೋನ, ೨. ಮಧ್ಯಕಾಲಿನ ಸಂದರ್ಭ: ವೈದಿಕ ವಿರೋಧಿ ಚಿಂತನೆಗಳು, ೩. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಸ್ವರೂಪ ಮತ್ತು ೪. ಆಧುನಿಕ ಚಳುವಳಿಗಳು.

೧. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ದೃಷ್ಟಿಕೋನ

ಪ್ರಾಚೀನ ಕನ್ನಡ ಸಾಹಿತ್ಯ ರಾಜರ ಆಶ್ರಯದಲ್ಲೇ ಬೆಳೆದು ಬಂದಿದೆ ಎಂಬ ಮಾತಿದೆ. ಕವಿಗಳು ರಾಜನ ಆಶ್ರಯದಲ್ಲಿ ಇದ್ದು ಕೃತಿಗಳನ್ನು ರಚಿಸಿದರು. ಕೃತಿಗಳಲ್ಲಿ ರಾಜನನ್ನು ಓಲೈಸುವುದು, ಪುರಾಣಗಳಲ್ಲಿ ಬರುವ ಪಾತ್ರಗಳಿಗೆ ಸಮೀಕರಿಸಿ ಬರೆದಿರುವುದನ್ನು ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪ್ರಾಚೀನ ಕನ್ನಡ ಸಾಹಿತ್ಯ ರಚನೆಯು ಒಂದು ವೃತ್ತಿಯಾಗಿತ್ತು. ಕವಿಗಳು ಕೃತಿಗಳನ್ನು ರಚಿಸಿ ತಮ್ಮ ಜೀವನವನ್ನು ನಡೆಸುತ್ತಿದ್ದುದನ್ನು ಕಾಣಬಹುದಾಗಿದೆ. ರಾಜನ ಆಶ್ರಯದಲ್ಲಿ ಕವಿಗಳು ತಮ್ಮ ಬದುಕನ್ನು ರೂಪಿಸಿಕೊಂಡಿದಕ್ಕೆ ರಾಜನಿಗೆ ವಿಧೇಯರಾಗಿದ್ದರು ಎಂಬ ಅಭಿಪ್ರಾಯವೂ ಇದೆ. ಆದ್ದರಿಂದ ಇವರ ಕಾವ್ಯ-ಕೃತಿಗಳಲ್ಲಿ ಸ್ವಾಮಿನಿಷ್ಠೆ, ತ್ಯಾಗ, ಸ್ವರ್ಗ-ಸುಖಗಳನ್ನು ಮೌಲ್ಯಗಳನ್ನಾಗಿಸಿ ಕೃತಿಗಳನ್ನು ರಚನೆ ಮಾಡಿದರು. ಈ ರೀತಿಯಾಗಿ ಬೆಳೆದುಬಂದ ಪ್ರಾಚೀನ ಕನ್ನಡ ಸಾಹಿತ್ಯವು ಧರ್ಮಸಂಘರ್ಷಕ್ಕೆ ಒಳಗಾಗಿದೆ. ಆಯಾ ರಾಜರ ಆಳ್ವಿಕೆಯ ಕಾಲದಲ್ಲಿ ಇದ್ದ ಧರ್ಮಗಳನ್ನು ಅನುಸರಿಸಿಯೇ ಕವಿಗಳು ಕೃತಿಗಳನ್ನು ಬರೆಯಬೇಕಾಗಿತ್ತು. ರಾಜಪ್ರಭುತ್ವವನ್ನು ವಿರೋಧಿಸಿದರೆ ಪ್ರಭುತ್ವವಿರೋಧಿ ಎಂದು ಕವಿಗಳಿಗೆ ಪಟ್ಟ ಕಟ್ಟಲಾಗುತ್ತಿತ್ತು. ಆದರೆ ಕವಿಗಳು ಸಾಮಾಜಿಕ ವ್ಯವಸ್ಥೆಯ ಮೌಲ್ಯಗಳನ್ನು ತಮ್ಮ ಕಾವ್ಯಗಳಲ್ಲಿ ಅಲ್ಲಲ್ಲಿ ಪ್ರಸ್ತಾಪ

ಮಾಡುವುದರ ಮೂಲಕ ಸಾಮಾಜಿಕ ಅಸಮಾನತೆಗಳನ್ನು ವಿರೋಧಿಸಿರುವುದಕ್ಕೆ ಸಾಕ್ಷಿಯಾಗಿವೆ. ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳು, ಧರ್ಮ ಮತ್ತು ರಾಜಾಶ್ರಯಗಳನ್ನು ಹೇಳುವುದರ ಜೊತೆ ಜೊತೆಗೆ ಕವಿಗಳು ತಮ್ಮ ಸುತ್ತಮುತ್ತಲಿನ ಸಾಮಾಜಿಕ ವ್ಯವಸ್ಥೆಯಲ್ಲಿನ ಜಾತೀಯತೆ, ಅಸ್ಪೃಶ್ಯತೆ, ಕ್ರೌರ್ಯ, ದಬ್ಬಾಳಿಕೆ, ಅಮಾನವೀಯ ಆಚರಣೆಗಳು, ಧರ್ಮಸಂಘರ್ಷಗಳು, ಪುರೋಹಿತರ ವಂಚನೆಗಳು, ಕೆಳವರ್ಗದ ಜನರ ಬದುಕು ಇತ್ಯಾದಿ ಅಂಶಗಳನ್ನು ತಮ್ಮ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ರೀತಿಯಾಗಿ ಪ್ರಾಚೀನ ಕಾಲದ ಕನ್ನಡ ಕವಿಗಳು ತಮ್ಮ ಕೃತಿಗಳಲ್ಲಿ ಬದುಕಿನ ವಿವಿಧ ಆಯಾಮಗಳನ್ನು ಕಲಾತ್ಮಕವಾಗಿ ರೂಪಿಸುವ ಕೆಲಸವನ್ನು ಮಾಡಿದ್ದಾರೆ.

ಕರ್ನಾಟಕದಲ್ಲಿ ಐದು ಮತ್ತು ಆರನೆಯ ಶತಮಾನದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳ ಪ್ರಸಾರ ಹೆಚ್ಚಾಗಿ ಕಂಡುಬಂದಿದೆ. ಈ ಧರ್ಮಗಳು ವೈದಿಕ ಧರ್ಮದ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿದವು. ವೈದಿಕ ಧರ್ಮದಲ್ಲಿ ಇದ್ದ ಮೌಢ್ಯ ಹಾಗೂ ಅಮಾನವೀಯ ಶೋಷಣೆಯನ್ನು ವಿರೋಧಿಸಿದವು. ಯಜ್ಞಯಾಗಾದಿಗಳಲ್ಲಿ ಮಾಡುತ್ತಿದ್ದ ಪ್ರಾಣಿಬಲಿ, ಯುದ್ಧದಿಂದ ಆಗುತ್ತಿದ್ದ ಹಿಂಸೆಯನ್ನು ವಿರೋಧಿಸುವುದರ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸಲು ಮುಂದಾದವು. ಆದ್ದರಿಂದ ಜೈನ ಮತ್ತು ಬೌದ್ಧ ಧರ್ಮಗಳಲ್ಲಿ ಇದ್ದ, ತತ್ವ ಮತ್ತು ಸಿದ್ಧಾಂತಗಳನ್ನು ಅರಿತ ರಾಜರು ಜೈನ ಮತ್ತು ಬೌದ್ಧ ಧರ್ಮಗಳನ್ನು ಪೋಷಿಸಿ, ಅನುಸರಿಸುವುದರ ಮೂಲಕ ಅವನ್ನು ಬೆಳೆಸಿದರು. ವೈದಿಕ ಧರ್ಮ ಅನುಸರಿಸುತ್ತಿದ್ದ ಸಂಸ್ಕೃತ ಭಾಷೆಯನ್ನು ವಿರೋಧಿಸಲಾಯಿತು. ಪ್ರಾಕೃತ, ಪಾಳಿ ಮತ್ತು ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯವನ್ನು ರಚನೆ ಮಾಡಲು ರಾಜಾಸಕ್ತರ ಮಾನ್ಯತೆ ಸಿಕ್ಕಿತು. ಆದ್ದರಿಂದ ಸಂಸ್ಕೃತ ಭಾಷೆಯನ್ನು ವಿರೋಧಿಸಿ ಕನ್ನಡದಲ್ಲಿ ಸಾಹಿತ್ಯವನ್ನು ರಚನೆ ಮಾಡಲಾಯಿತು. ಹೀಗೆ ಕನ್ನಡ ಕವಿಗಳಾದ ಪಂಪ, ಪೊನ್ನ, ರನ್ನ, ನಾಗವರ್ಮ, ನಯಸೇನ, ಆಂಡಯ್ಯ ಮತ್ತು ಅಗ್ಗಳ ಮುಂತಾದವರು ಕನ್ನಡವನ್ನು ಬೆಳೆಸಲು ಮುಂದಾದರು. ಶಾಸನಗಳಲ್ಲಿ ಕನ್ನಡ ಭಾಷೆಯನ್ನು ಬಳಕೆ ಮಾಡುವುದರ ಮೂಲಕ ಕನ್ನಡದ ಪ್ರಾಚೀನತೆ ಮತ್ತು ಸಂಸ್ಕೃತ ಭಾಷೆಗಿಂತ ಹಳೆಯದಾದ, ಹೆಚ್ಚು ಜನರು ದಿನಬಳಕೆಯಲ್ಲಿ ಬಳಸುವ ಭಾಷೆಯಾಗಿ ಕನ್ನಡ ಕಾಣಿಸಿತು.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಸೂಕ್ಷ್ಮವಾಗಿ ಗಮನಿಸಿದಾಗ ವೈದಿಕ ಧರ್ಮವನ್ನು ವಿರೋಧಿಸಿ ಹುಟ್ಟಿಕೊಂಡಿರುವುದನ್ನು ಕಾಣಬಹುದು. ಇದರ ಬಗೆಗೆ ಸಿ. ವೀರಣ್ಣ ಅವರು ಈ ರೀತಿ ಹೇಳುತ್ತಾರೆ. "ಕನ್ನಡ ಸಾಹಿತ್ಯ ಚರಿತ್ರೆಯನ್ನು ಪರಿಶೀಲಿಸಿದರೆ, ಕನ್ನಡ ಸಾಹಿತ್ಯ ಪ್ರಾರಂಭವಾದದ್ದೇ ಒಂದು ರೀತಿಯ ಪ್ರತಿಭಟನೆಯಾಗಿ. ಕನ್ನಡ ಕಾವ್ಯದ ಆರಂಭದಲ್ಲಿ ವೈದಿಕ ಕಾವ್ಯ ಏಕಿರಲಿಲ್ಲ ಎನ್ನುವುದಕ್ಕೆ ಚಾರಿತ್ರಿಕ ಕಾರಣಗಳಿವೆ. ಸಂಸ್ಕೃತದ ಮೂಲಕ ಬೌದ್ಧಿಕ ವ್ಯವಹಾರವನ್ನು ಮಾಡುತ್ತಿದ್ದ ವೈದಿಕರಿಗೆ, ಜನರ ಮಾತಿನಲ್ಲಿ ಬೌದ್ಧಿಕ ಚಟುವಟಿಕೆಯನ್ನು ನಡೆಸುವ ಅಗತ್ಯ ಬೀಳಲಿಲ್ಲ. ಆದರೆ ಕರ್ನಾಟಕಕ್ಕೆ ಬಂದ ಜೈನರಿಗೆ ತಮ್ಮ ಧರ್ಮವನ್ನು ವೈದಿಕ ವಿರೋಧಿ ನೆಲೆಯಲ್ಲಿ ಬೆಳೆಸಬೇಕಾಗಿತ್ತು. ದಾಸಪದ್ಧತಿಯಿಂದ ಬಿಡುಗಡೆ ಹೊಂದುವುದಕ್ಕಾಗಿ ಬಹಳಷ್ಟು ಜನಸಾಮಾನ್ಯರು ಬೌದ್ಧರೂ ಜೈನರೂ

ಆದರು. ಹಾಗೆ ನೋಡಿದರೆ ಈ ಎರಡೂ ಮತಗಳು ಶೋಷಣಾ ವಿರೋಧಿ ಮನೋಧರ್ಮದಿಂದಲೇ ಹುಟ್ಟಿಕೊಂಡಿದ್ದು."[೧] ಈ ರೀತಿ ಪ್ರಾಚೀನ ಕನ್ನಡ ಸಾಹಿತ್ಯವು ವೈದಿಕ ಧರ್ಮದ ಬೌದ್ಧಿಕ ಚಟುವಟಿಕೆಗಳ ವಂಚನೆಯನ್ನು ವಿರೋಧಿಸಲು ವೈದಿಕ ವಿರೋಧಿ ಮಾಡಿರುವುದು ಕಂಡುಬರುತ್ತದೆ.

ವೈದಿಕ ಧರ್ಮದ ಜೊತೆ ಜೊತೆಯಲ್ಲಿ ಮತ್ತು ಸಂಸ್ಕೃತ ಭಾಷೆಯ ಜೊತೆಯಲ್ಲಿ ಕನ್ನಡವನ್ನು ಬಳಸಿರುವುದನ್ನು ಹಲ್ಮಿಡಿ ಶಾಸನ ಮತ್ತು ಕವಿರಾಜಮಾರ್ಗದಲ್ಲಿ ನಾವು ಕಾಣಬಹುದು. ಆದರೆ ಆರ್ಯರ ಪ್ರಭಾವದಿಂದ ಕನ್ನಡವು ಬೆಳಕಿಗೆ ಬಂದಿರಲಿಲ್ಲ. ಕನ್ನಡವು ಹಳೆಯದಾದ ಭಾಷೆಯಾಗಿದೆ. ಸಂಸ್ಕೃತ ಭಾಷೆಗಿಂತ ಕನ್ನಡ ಭಾಷೆಯಲ್ಲಿನ ವ್ಯಾಕರಣ, ಛಂದಸ್ಸು, ಕಾವ್ಯ ಕಟ್ಟುವ ಪ್ರಕಾರಗಳು, ಲಯ, ಭಾಷೆಯ ಹಿರಿಮೆ, ಪದ ಸಂಪತ್ತು ಮುಂತಾದವುಗಳು ಇವೆ. ಹಾಗಾಗಿ ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಕಂದ, ರಗಳೆ, ಅಕ್ಕರ, ತ್ರಿಪದಿ ಎಂಬ ವೈವಿಧ್ಯವನ್ನು ಬಳಸಿದ್ದಾರೆ. ಈ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯವು ಕನ್ನಡದ ಪ್ರಾಚೀನತೆ ಮತ್ತು ವೈವಿಧ್ಯತೆಯನ್ನು ತೋರಿಸುವುದರ ಮೂಲಕ ವೈದಿಕ ವಿರೋಧ ಮಾಡಿರುವುದನ್ನು ಗಮನಿಸಬಹುದಾಗಿದೆ.

ವಡ್ಡಾರಾಧನೆಯಲ್ಲಿ ಬರುವ ಜೈನಕಥೆಗಳಲ್ಲಿ ವೈದಿಕ ಧರ್ಮದ ವಂಚನೆ, ಕ್ರೌರ್ಯ, ಚಾತುರ್ವರ್ಣ ವ್ಯವಸ್ಥೆ, ಜಾತಿಪದ್ಧತಿ, ಅಸ್ಪೃಶ್ಯತೆಗಳಾದ ಸಾಮಾಜಿಕ ವಿಷಯಗಳನ್ನು ವಸ್ತುಗಳಾಗಿ ಕಥೆಗಳು ರಚನೆಯಾಗಿವೆ ಹಾಗೂ ಈ ಕೃತಿಯಲ್ಲಿ ಸಂಸ್ಕೃತ ಪದಗಳ ಜೊತೆಯಲ್ಲಿ ಕನ್ನಡದ ಪದಗಳು ಸೇರಿಕೊಳ್ಳುವುದರ ಮೂಲಕ ಸಂಸ್ಕೃತ ಭಾಷೆಯನ್ನು ವಿರೋಧಿಸಿರುವುದನ್ನು ಕಾಣಬಹುದಾಗಿದೆ. ಜೈನಧರ್ಮವು ವೈದಿಕ ಧರ್ಮದ ವರ್ಣಾಶ್ರಮವನ್ನು ವಿರೋಧಿಸಿ ಕೆಳವರ್ಗದ ಜನರಿಗೆ ವಿದ್ಯೆ ಮತ್ತು ಸಾಮಾಜಿಕ ಸ್ಥಾನಮಾನವನ್ನು ಕೊಡುವುದರ ಮೂಲಕ "ಹುಟ್ಟುಗುರುಡಿಯಾದ ಹೊಲತಿಗೂ ಶ್ರಾವಕ ವ್ರತಗಳನ್ನಿತ್ತು ಜೈನಳನ್ನಾಗಿ ಮಾಡುತ್ತಿದ್ದರಲ್ಲದೆ, ಸೌದೆಪುರುಳೆ ಮಾರಿ ಜೀವಿಸುತ್ತಿದ್ದ ಅನಾಮಧೇಯರನ್ನೂ ಮಹಾಪುರುಷರನ್ನಾಗಿ ಮಾಡುತ್ತಿದ್ದರು. ಜೈನಧರ್ಮಕ್ಕೆ ಬಂದ, ಮತವೇ ಇಲ್ಲದಿದ್ದ ಸಾಮಾನ್ಯರಿಗೆ ಮೊದಲು ಅನ್ನಿಸಿದ್ದು "ಇಂತಪ್ಪ ರೂಪಮಂ ಕೈಕೊಂಡೊಡೆ ಲೋಕದೊಳ್ ಗೌರವಮುಂ ಪೂಜೆಯುಂ ಪೆರಲಕ್ಕುಮೊಂದು ಕ್ಲೇಶಮಿಲ್ಲದೆ ದಿವ್ಯಾಹಾರಮೆಲ್ಲಾಕಾಲಮುಣಲ್ಪೆಟಲಕ್ಕುಂ" ಇಂತಹದೊಂದು ಆತ್ಮವಿಶ್ವಾಸವನ್ನು, ವ್ಯಕ್ತಿತ್ವವನ್ನು ಆ ಧರ್ಮ ಸಾಮಾನ್ಯರಿಗೆ ಕೊಟ್ಟಿದ್ದರಿಂದಲೇ ಬಹಳಷ್ಟು ದೀನ ದಲಿತರು ಜೈನರಾದರು."[೨] ಈ ರೀತಿ ವಡ್ಡಾರಾಧನೆ ಕಥೆಗಳಲ್ಲಿ ವೈದಿಕ ಧರ್ಮ ಕೆಳಜಾತಿಯವರಿಗೆ ನೀಡಿದ್ದ ಅಸ್ಪೃಶ್ಯತೆಯನ್ನು ವಿರೋಧಿಸಿ ಮಾನವತಾವಾದವನ್ನು ಪ್ರತಿಪಾದಿಸುತ್ತವೆ. "ತಪಂಬಟ್ಟನಪ್ಪೊಡೊಳ್ಳಿಕೆಯ್ದಂ, ತನ್ನ ಮುಂಗೆಯ್ದ ಪಾಪಮುಮ್ ಯಶಮುಂ ಪಳಿಯುಂ ಪೊಲ್ಲಮೆಯುಮಂ ನೀಗಿದ" ಎಂದು ಹೇಳಿ ವೈದಿಕ ಧರ್ಮ ಅಸ್ಪೃಶ್ಯರನ್ನು ದೂರ ಮಾಡಿತ್ತು. ಅಂತಹವರಿಗೆ ಜೈನಧರ್ಮ ಆಶ್ರಯ ಕೊಟ್ಟಿತು. ವಡ್ಡಾರಾಧನೆಯಲ್ಲಿ ಬರುವ ನಾಗಶ್ರೀಯ ಕಥೆಯಲ್ಲಿ ವೈದಿಕ ಧರ್ಮದಲ್ಲಿ ಸ್ತ್ರೀಯರು ವೇದಗಳನ್ನು ಕಲಿಯಬಾರದು ಎಂಬುದನ್ನು ಹೇಳುತ್ತಾರೆ. ಆದರೆ ಜೈನಾಚಾರ್ಯರು ಸ್ತ್ರೀಯರಿಗೆ ಧಾರ್ಮಿಕ ವಿದ್ಯೆಯನ್ನು ಕಲಿಸುವುದರ ಮೂಲಕ ವೈದಿಕ ವಿರೋಧಿ ಪ್ರಜ್ಞೆಯನ್ನು ಕೊಟ್ಟಿತು.

ಕುವೆಂಪು ಅವರು ಹೇಳಿರುವಂತೆ, "ವೈದಿಕ ಸಾಹಿತ್ಯವನ್ನು ಹಳೆಯ ಸಾಹಿತ್ಯ ಇದು ಎಂದು ನಾವು ತಿರಸ್ಕರಿಸಿಬಿಟ್ಟರೆ ಅದು ನಮಗೆ ತುಂಬಾ ನಷ್ಟವಾಗುತ್ತದೆ. ಆದ್ದರಿಂದ ವೈದಿಕ ಸಾಹಿತ್ಯವನ್ನು ಪುನಃಸೃಷ್ಟಿಸುವುದರ ಮೂಲಕ ವೈದಿಕ ಚಿಂತನೆಗಳನ್ನು ವಿರೋಧಿಸಬೇಕು', ಎಂದು ಹೇಳುತ್ತಾರೆ. ಅದೇ ರೀತಿ ಪ್ರಾಚೀನ ಕನ್ನಡ ಸಾಹಿತ್ಯವು ಸಂಸ್ಕೃತ ಕವಿಗಳು ಸೃಷ್ಟಿಸಿದ ಸಾಹಿತ್ಯವನ್ನು ಕನ್ನಡದ ಕವಿಗಳು ಪುನಃಸೃಷ್ಟಿಸಿರುವುದನ್ನು ಕಾಣಬಹುದಾಗಿದೆ. ವೈದಿಕರು ಸೃಷ್ಟಿಸಿದ ಪಾತ್ರಗಳಿಗೆ ಮರುವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರ ಸಾಹಿತ್ಯದಲ್ಲಿ ಐತಿಹಾಸಿಕ, ಪೌರಾಣಿಕ, ಧಾರ್ಮಿಕ, ಪುರಾಣದಂತಹ ಚಿಂತನೆಗಳು ವರ್ತಮಾನಗಳಿಗೆ ಮುಖಾಮುಖಿಯಾಗಿ ಪುನಃಸೃಷ್ಟಿ ಸಾಹಿತ್ಯ ಹುಟ್ಟಿಕೊಂಡಿದೆ. ಸಾಮಾಜಿಕ ಸಂಗತಿಗಳಿಗೆ ಪುನರ್ವ್ಯಾಖ್ಯಾನ ಮತ್ತು ಮರುವ್ಯಾಖ್ಯಾನಗಳನ್ನು ಪ್ರಾಚೀನ ಕನ್ನಡ ಸಾಹಿತ್ಯದ ಕವಿಗಳಲ್ಲಿ ನಡೆದಿರುವುದನ್ನು ಗಮನಿಸಬಹುದು. ಇಂತಹ ಬೆಳವಣಿಗೆಯ ಬಗೆಗೆ ಪೂರ್ಣಚಂದ್ರ ತೇಜಸ್ವಿ ಅವರು ಈ ರೀತಿ ಹೇಳುತ್ತಾರೆ. "ಪ್ರಾಚೀನ ಕನ್ನಡ ಸಾಹಿತ್ಯ ಬರಹಗಾರರು ವೈದಿಕ ಸಂಸ್ಕೃತಿಯನ್ನು ವಿರೋಧಿಸುವುದರ ಮೂಲಕ ಕರ್ನಾಟಕದಲ್ಲಿ ನಡೆದ ಸಂಸ್ಕೃತಿ ಆಂದೋಲನಗಳಲ್ಲಿ ವೈದಿಕ ಧರ್ಮ ವಿರೋಧ ಮನೋಭಾವ ಒಂದು ಸುಪ್ತವಾಗಿ ಕೆಲಸ ಮಾಡಿದೆಯಷ್ಟೆ. ಆದರೆ ಇಲ್ಲಿಯ ಇನ್ನೊಂದು ಅಚ್ಚರಿಯ ಅಂಶವೇನೆಂದರೆ, ಈ ಆಂದೋಲನಗಳಲ್ಲಿ ವೈದಿಕ ಸಂಸ್ಕೃತಿಗೆ ಸಂಬಂಧಿಸಿದವರೆ ಬಂಡಾಯವೆದ್ದು ಈ ಆಂದೋಲನಗಳ ನೇತೃತ್ವ ವಹಿಸುತ್ತಿದ್ದುದು. ಪಂಪನೂ ಕೂಡ ಬಂಡಾಯವೆದ್ದ ವೈದಿಕ ಸಂಸ್ಕೃತಿಗೆ ಸಂಬಂಧಿಸಿದವನೇ. ಅನುಭವದ ಟಂಕವಿಲ್ಲದ ಅಮೂರ್ತ ಆಲೋಚನೆಗಳ ಬಗ್ಗೆ ಕೇವಲ ಅತೀಂದ್ರಿಯ ಅನುಭವದ ಆಧಾರದ ಮೇಲೆ ರೂಪುಗೊಂಡ, ಬೌದ್ಧಿಕತೆಯ ಬಗ್ಗೆ ಬಂಡಾಯವೇಳುತ್ತಿದ್ದ ಸಾಹಿತಿ ಬ್ರಾಹಣನೇ, ಸಂಕುಚಿತ ವೈದಿಕ ಸಂಸ್ಕೃತಿಯ ಬಗ್ಗೆ ಬಂಡಾಯವೇಳುತ್ತಿದ್ದ ಸುಧಾರಕನೂ ಆಗಿರುತ್ತಿದ್ದನು."[೩] ಆದ್ದರಿಂದ ಪ್ರಾಚೀನ ಕನ್ನಡ ಸಾಹಿತ್ಯದ ಕವಿಗಳು ವೈದಿಕ ವಿರೋಧಿ ಚಿಂತನೆಗಳನ್ನು ತಮ್ಮ ಕೃತಿಯಲ್ಲಿ ಸಂಸ್ಕೃತ ಕೃತಿಗಳನ್ನು ಪುನಃಸೃಷ್ಟಿಸುವುದರ ಮೂಲಕ ವಿರೋಧಿಸುವುದನ್ನು ಕಾಣಬಹುದಾಗಿದೆ. ಹಾಗೂ ಜೈನಧರ್ಮವು ವೈದಿಕ ಧರ್ಮವನ್ನು ವಿರೋಧಿಸುವ ಮೂಲಕ ಧರ್ಮಸಂಘರ್ಷಗಳು ಆಗಿರುವುದು ಕಂಡುಬರುತ್ತದೆ.

ವೈದಿಕ ಧರ್ಮದಿಂದ ಸೃಷ್ಟಿಯಾದ ಜಾತಿ ಅಸಮಾನತೆಯನ್ನು ಪಂಪ ವಿರೋಧಿಸಿ "ಮನುಷ್ಯ ಜಾತಿ ತಾನೊಂದೆ ವಲಂ" ಎಂದು ಹೇಳುವುದರ ಮೂಲಕ ವಿಶ್ವಮಾನವ ಸಂದೇಶವನ್ನು ಸಾರುತ್ತಾನೆ. ಪಂಪಭಾರತದಲ್ಲಿ ದ್ರೋಣಾಚಾರ್ಯ ಮತ್ತು ಕರ್ಣನ ಸಂವಾದದಲ್ಲಿ ವೈದಿಕ ಧರ್ಮ ಸೃಷ್ಟಿಸಿದ ಜಾತಿಯ ಶ್ರೇಣೀಕರಣದಿಂದ ದ್ರೋಣಾಚಾರ್ಯ ಕರ್ಣನನ್ನು ಕೀಳು ಕುಲದವನು ಎಂದು ಹೇಳುತ್ತಾನೆ. ಆದರೆ ಕರ್ಣ ಜಾತಿಯ ಬಗ್ಗೆ ಈ ರೀತಿ ಹೇಳಿ, ವೈದಿಕ ಧರ್ಮದ ಜಾತಿ ಪದ್ಧತಿಯನ್ನು ಪ್ರಶ್ನೆ ಮಾಡುತ್ತಾನೆ.

ಕುಲಮನೆ ಮುನ್ನಂ, ಉಗ್ಗಡಿಪಿರೇಂ ಗಳ, ನಿಮ್ಮ ಕುಲಂಗಳಾಂತು ಮಾ
ರ್ಮಲೆವರನ್, ಅಟ್ಟಿ ತಿಂಬುವೆ, ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ

ಕುಲಂ, ಅಭಿಮಾನಮೊಂದೆ ಕುಲಂ, ಅಣ್ಮು ಕುಲಂ ಬಗೆವಾಗಳೀಗಳ್ ಈ

ಕಲಹದೊಳಣ್ಣ ನಿಮ್ಮ ಕುಲಂ, ಆಕುಲಮಂ, ನಿಮಗುಂಟುಮಾಡುಗುಂ[೪]

ವೈದಿಕ ಧರ್ಮ ಹೇಳುವ ಜಾತಿಪದ್ಧತಿಯೇ ಕುಲ ಅಲ್ಲ. ಬ್ರಾಹ್ಮಣ ಕುಲ ಶತ್ರುಗಳನ್ನು ಅಟ್ಟಿ ಕೊಲ್ಲಬಹುದೆ? ಎಂದು ವ್ಯಂಗ್ಯವಾಗಿ ಪ್ರಶ್ನೆ ಮಾಡುತ್ತಾನೆ. ಕುಲ ಎಂಬುದು ನೀವು ಹೇಳಿದಂತೆ ಹುಟ್ಟಿನಿಂದ ಬರುವುದಿಲ್ಲ. ಯುದ್ಧದಲ್ಲಿ ಹೋರಾಡುವ ಛಲವೇ ಕುಲ, ಪೌರುಷವೇ ಕುಲ, ಸ್ವಾಮಿಯ ಬಗ್ಗೆ ಇರುವ ಅಭಿಮಾನವೇ ಕುಲ, ಗುಣವೇ ಕುಲ ಎಂದು ಕರ್ಣ ಹೇಳುತ್ತಾನೆ. ವೈದಿಕರು ಸೃಷ್ಟಿಸಿದ ಜಾತಿ ಶ್ರೇಣೀಕರಣ ನಮ್ಮನ್ನೆಲ್ಲ ಮೌಢ್ಯತೆಗೆ ಸಿಕ್ಕಿಸಿ ಹಾಕುವುದೆ ಕುಲವಾಗಿಬಿಟ್ಟಿದೆ ಎಂದು ಪಂಪ ತನ್ನ ಕಾವ್ಯದಲ್ಲಿ ಪ್ರಾಚೀನ ಕಾಲದ ಜಾತಿಪದ್ಧತಿಯನ್ನು ಪ್ರಶ್ನಿಸುವುದರ ಮೂಲಕ ವೈದಿಕ ವಿರೋಧಿ ಚಿಂತನೆಗಳನ್ನು ಮತ್ತು ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸಿದ್ದಾನೆ.

ವೈದಿಕರ ಮಹಾಭಾರತದಲ್ಲಿ ಶ್ರೀಕೃಷ್ಣನನ್ನು ಪರಮಾತ್ಮನ ಅವತಾರ ಎಂದು ಆರಾಧಿಸಲಾಗುತ್ತದೆ. ಆದರೆ ಪಂಪ ತನ್ನ ಪಂಪಭಾರತದಲ್ಲಿ ಶ್ರೀಕೃಷ್ಣನನ್ನು ಒಬ್ಬ ವ್ಯಕ್ತಿಯಾಗಿ ಚಿತ್ರಿಸಿದ್ದಾನೆ. ಮಹಾಭಾರತದಲ್ಲಿ ಕೃಷ್ಣ ಲೋಕಪೂಜ್ಯನಾದವನಲ್ಲ ಎಂದು ಈ ರೀತಿ ಹೇಳಿದ್ದಾನೆ.

ಚಲದೊಳ್ ದುರ್ಯೋಧನಂ, ನನ್ನಿಯೊಳ್ ಇನತನಯಂ, ಗಂಡಿನಳ್ ಭೀಮಸೇನಂ,

ಬಲದೊಳ್ ಮದ್ರೇಶನ್, ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ, ಚಾಪವಿದ್ಯಾ

ಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್

ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್ ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ[೫]

ಕೃಷ್ಣನನ್ನು ಒಬ್ಬ ಉತ್ತಮ ರಾಜಕಾರಣಿ, ಚತುರಮತಿ, ಧರ್ಮದ ಪರ ನಿಂತವನು ಅಷ್ಟೇ. ಇವನು ಒಬ್ಬ ಮಹಾವ್ಯಕ್ತಿ ಅಲ್ಲ ಎಂದು ಪಂಪ ತನ್ನ ಕಾವ್ಯದಲ್ಲಿ ಹೇಳುವುದರ ಮೂಲಕ ವೈದಿಕ ಧರ್ಮ ಹೇಳುವ ಶ್ರೀಕೃಷ್ಣ ಪರಮಾತ್ಮನ ಅವತಾರ ಎಂಬುದನ್ನು ವಿರೋಧಿಸಲಾಗಿದೆ.

ನಾಗಚಂದ್ರನ ರಾಮಚಂದ್ರ ಚರಿತ ಪುರಾಣವನ್ನು ವೈದಿಕ ರಾಮಾಯಣಕ್ಕಿಂತ ಭಿನ್ನವಾಗಿ ರಚಿಸಲಾಗಿದೆ. ಜೈನ ಕವಿ ವಿಮಲಸೂರಿ ಪ್ರಾಕೃತದಲ್ಲಿ ಬರೆದ ಜೈನ ರಾಮಾಯಣದ ಸಂಪ್ರದಾಯವನ್ನು ಬಳಸಿ ಬರೆದ ಕನ್ನಡದಲ್ಲಿ ಮೊದಲ ಕೃತಿಯಾಗಿದೆ. ಈ ಕೃತಿಯಲ್ಲಿ ಅಹಿಂಸೆಯನ್ನು ಪ್ರತಿಪಾದಿಸಲಾಗಿದೆ. "ವಿಮಲಸೂರಿಯ ಜೈನ ರಾಮಾಯಣ ವಾಲ್ಮೀಕಿ ರಾಮಾಯಣಕ್ಕಿಂತ ವಸ್ತುವಿನಲ್ಲಿ ಸಾಕಷ್ಟು ಭಿನ್ನವಾದದ್ದು. ಅದರಲ್ಲಿ ಯಜ್ಞಗಳ ಪ್ರಸ್ತಾಪವಾಗಲೀ, ಋಷಿಗಳ ಓಡಾಟವಾಗಲೀ ಇಲ್ಲ. ರಾಮ ವಿಷ್ಣುವಿನ ಅವತಾರವಲ್ಲ, ಸೀತೆ ನೆಲದಲ್ಲಿ ದೊರೆತವಳಲ್ಲ, ಜನಕನ ಔರಸಪುತ್ರಿ, ಹನುಮಂತ ಬ್ರಹ್ಮಚಾರಿಯಲ್ಲ, ರಾವಣನ ತಂಗಿಯ ಅಳಿಯ. ಸುಗ್ರೀವ ಅಂಗದ ಮೊದಲಾದವರು ಕಪಿಧ್ವಜವುಳ್ಳವರೇ ಹೊರತು ಕಪಿಗಳಲ್ಲ. ಅವರು ಸಮುದ್ರಕ್ಕೆ ಸೇತುವೆ ಕಟ್ಟುವುದಿಲ್ಲ. ಲಂಕೆಗೆ ಹಾರಿಹೋಗುತ್ತಾರೆ. ವಾಲಿ, ಮಂಥರೆ ಮೊದಲಾದ ಪಾತ್ರಗಳೇ ಇಲ್ಲಿ ಬರುವುದಿಲ್ಲ. ರಾವಣನನ್ನು

ಕೊಲ್ಲುವವನು ಲಕ್ಷ್ಮಣ, ರಾಮನಲ್ಲ."[೬] ಈ ರೀತಿ ವೈದಿಕರು ಸೃಷ್ಟಿಸಿದ ರಾಮಾಯಣ ಕತೆಯನ್ನು ಭಿನ್ನವಾಗಿ ಸೃಷ್ಟಿಸುವುದರ ಮೂಲಕ ವೈದಿಕ ವಿರೋಧಿ ಪ್ರಜ್ಞೆಯನ್ನು ರೂಪಿಸಲಾಗಿದೆ. ವೈದಿಕರ ಯಜ್ಞಯಾಗಾದಿಗಳು ಮತ್ತು ವೈದಿಕ ಋಷಿಗಳು ಈ ರಾಮಾಯಣದಲ್ಲಿ ಇಲ್ಲ.

ನಯಸೇನನ ಧರ್ಮಾಮೃತ ಕೃತಿಯು ಎಲ್ಲಾ ಧರ್ಮಗಳನ್ನು ವಿರೋಧಿಸಿ ಜೈನಧರ್ಮದ ಬಗ್ಗೆ ಮಾತ್ರ ಹೇಳುತ್ತದೆ. ಅಲ್ಲದೆ ಜನಸಾಮಾನ್ಯರಿಗೆ ಹತ್ತಿರವಾಗಲು ಜನಸಾಮಾನ್ಯರು ಬಳಸುತ್ತಿದ್ದ ಕನ್ನಡ ಭಾಷೆಯಲ್ಲೇ ಈ ಕೃತಿಯನ್ನು ಬರೆಯಲಾಗಿದೆ. ಈ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ವೈದಿಕ ಸಂಸ್ಕೃತಿಯನ್ನು ವಿರೋಧಿಸಿ ಜೈನಧರ್ಮ ಶ್ರೇಷ್ಠ ಎಂದು ಹೇಳಲಾಗಿದೆ. ಸಂಸ್ಕೃತವನ್ನು ವಿರೋಧಿಸದಿದ್ದರೂ ಕನ್ನಡ ಪರವಾದ ಚಿಂತನೆಗಳನ್ನು ಗಮನಿಸಬಹುದು. ಈ ಕೃತಿಯಲ್ಲಿ ಗಾದೆಗಳು, ನಾಣ್ಣುಡಿಗಳು, ಉಪಮೆ ಮಾಲೋಪಮೆಗಳ ಮೂಲಕ ಆಕರ್ಷಕ ಶೈಲಿಯಲ್ಲಿ ಕಥೆಯನ್ನು ಹೇಳುವುದರ ಮೂಲಕ ಜನಸಾಮಾನ್ಯರನ್ನು ಕಲಾತ್ಮಕವಾಗಿ ಸೆಳೆದಿದ್ದಾನೆ. ಈ ಮೂಲಕ ಸಂಸ್ಕೃತ ಭಾಷೆಗಿಂತ ಕನ್ನಡವನ್ನು ಹೆಚ್ಚು ಬೆಳೆಸಲು ಮುಂದಾಗಿರುವುದನ್ನು ಗಮನಿಸಹುದಾಗಿದೆ.

ಬ್ರಹ್ಮಶಿವ ರಚಿಸಿದ 'ಸಮಯ ಪರೀಕ್ಷೆ' ಮತ್ತು 'ತ್ರೈಲೋಕ್ಯ ಚೂಡಾಮಣಿ ಸ್ತೋತ್ರ' ಕೃತಿಯಲ್ಲಿ ವೈದಿಕ ಧರ್ಮದ ತಾತ್ವಿಕ ಚಿಂತನೆಗಳನ್ನು ವಿಡಂಬನೆ ಮಾಡುವುದರ ಮೂಲಕ ವೈದಿಕ ಧರ್ಮವನ್ನು ವಿರೋಧಿಸಿ ಜೈನಧರ್ಮದ ತಾತ್ವಿಕ ಚಿಂತನೆಗಳನ್ನು ಪ್ರತಿಪಾದಿಸಲಾಗಿದೆ. ಈ ಕೃತಿ ರಚನೆ ಆಗುವ ಕಾಲದಲ್ಲಿ ಇದ್ದ ಸಾಮಾಜಿಕ ಅಸಮಾನತೆ, ಜಾತೀಯತೆ, ಮೂಢನಂಬಿಕೆಗಳು, ಅರ್ಥವಿಲ್ಲದ ಆಚರಣೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ವೈದಿಕ ಸಂಸ್ಕೃತಿಯ ಆಚರಣೆಗಳನ್ನು ತರ್ಕಬದ್ಧವಾಗಿ ಪ್ರಶ್ನೆ ಮಾಡಲಾಗಿದೆ. ಈ ಕೃತಿಯಲ್ಲಿ ಕವಿ, "ವೈದಿಕ ಧರ್ಮದ ದೇವತೆಗಳ ಕಥೆಗಳನ್ನು ಪ್ರಸ್ತಾಪಿಸಿ ಅವುಗಳಲ್ಲಿರುವ ಅಸಮಂಜಸತೆ, ಅಸಾಂಗತ್ಯಗಳನ್ನು ಗೇಲಿ ಮಾಡುತ್ತಾನೆ. ವೈದಿಕರ ಆಚಾರವಿಚಾರಗಳನ್ನು ಪ್ರಶ್ನಿಸುತ್ತಾನೆ. ಅನ್ಯಮತಗಳ ಹುಳುಕುಗಳನ್ನು ವಿಡಂಬಿಸಿ ಚಪ್ಪಾಳೆ ತಟ್ಟುವುದರಲ್ಲಿ ಇವನು ಮೇಲುಗೈ. ಹರಿ ಲೋಕಕ್ಕೆಲ್ಲ ಒಡೆಯ ತಾನೆ? ಅಂತಹವನು ಬಲಿ ಮಹಾರಾಜನ ಬಳಿ ಹೋಗಿ ಮೂರಡಿ ನೆಲವನ್ನು ಭಿಕ್ಷೆ ಕೇಳುವುದೇ? ಲಕ್ಷ್ಮಿಯ ಪತಿಯಾದವನು ಅರ್ಜುನನ ಬಂಡಿ ಹೊಡೆಯುವುದೇ? ವೈದಿಕ ಧರ್ಮದ ಜನರು ಸ್ವಲ್ಪ ಹಾಲು ಕೊಡುವ ಹಸುವನ್ನು ಪೂಜಿಸುತ್ತಾರೆ. ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನಾದರೂ ಪೂಜಿಸಿ ಪುಣ್ಯ ಪಡೆಯಬಾರದೆ? ಹೆಣದ ಹೆಸರು ಹೇಳುವುದೇ ಮೈಲಿಗೆ ಎಂದ ಮೇಲೆ ಹೆಣಗಳ ಮಧ್ಯೆಯೇ ಇರುತ್ತ ಮಾಂಸವನ್ನು ಭಕ್ಷಿಸಿ, ಮದ್ಯಪಾನ ಮಾಡುವ ಭೈರವಿಯನ್ನು ಆರಾಧಿಸುವ ವೈದಿಕರನ್ನು ಜೈನ ಮುಟ್ಟಲೂಬಾರದು. ದೇವರಿಗೆ ಅರ್ಪಿಸಿದ ಹೂವನ್ನು ನಿರ್ಮಾಲ್ಯವೆಂದು ಪರಿಗಣಿಸಿ ಅದನ್ನು ಮುಟ್ಟಿದರೆ ಸ್ನಾನ ಮಾಡಿ ಮೈಲಿಗೆ ಕಳೆದುಕೊಳ್ಳಬೇಕೆಂದು ಶಿವನ ಭಕ್ತರು ಭಾವಿಸುತ್ತಾರೆ. ಅವರ ದೇವರೇ ಮೈಲಿಗೆ ಎಂದು ನಾವು ಹೇಳುವ ಅಗತ್ಯವಿದೆಯೇ? ಇಂತಹ ಮಾತೆಲ್ಲ ಇವನ ಅನ್ಯಮತ ವಿಡಂಬನೆಗೆ ಕೆಲವು ನಿದರ್ಶನಗಳು."[೭] ಈ ರೀತಿಯಾಗಿ ಹನ್ನೊಂದನೇ ಶತಮಾನದಲ್ಲಿ ಬ್ರಹ್ಮಶಿವ ವೈದಿಕ ಧರ್ಮದ ಆಚರಣೆಗಳನ್ನು ವ್ಯಂಗ್ಯ, ವಿಡಂಬನೆ ಮತ್ತು ತಾರ್ಕಿಕ ಪ್ರಶ್ನೆಗಳನ್ನು ಮಾಡುವುದರ ಮೂಲಕ

ವಿರೋಧ ಮಾಡಲಾಗಿದೆ. ಇವನ ಕೃತಿಯಲ್ಲಿ ವೈದಿಕ ಧರ್ಮ ಪ್ರತಿಪಾದಿಸುವ ಶ್ರೇಣೀಕರಣ, ಅಸಮಾನತೆ, ಶೇಷ್ಠ-ಕನಿಷ್ಠ, ಮೇಲು-ಕೀಳುಗಳನ್ನು ಪ್ರಶ್ನಿಸುವುದರ ಮೂಲಕ ಅವೈದಿಕ ಪ್ರಜ್ಞೆಯನ್ನು ರೂಪಿಸುವ ಕೆಲಸ ಮಾಡಿದ್ದಾನೆ.

ಒಟ್ಟಿನಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಚಿಂತನೆಗಳು ವ್ಯಕ್ತವಾಗಿವೆ. ಈ ಚಿಂತನೆಗಳು ಧರ್ಮ, ಭಾಷೆ, ಪ್ರಭುತ್ವದ ಹಿನ್ನೆಲೆಯಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ಹಾಗೂ ಪ್ರಾಚೀನ ಕನ್ನಡ ಸಾಹಿತ್ಯದ ಕವಿಗಳೆಲ್ಲ ಜೈನಧರ್ಮವನ್ನು ಪ್ರತಿಪಾದಿಸುವವರು ಆಗಿದ್ದಾರೆ. ಹಾಗಾಗಿ ಜೈನಧರ್ಮದ ಉದ್ದೇಶ ವೈದಿಕ ಧರ್ಮವನ್ನು ಮತ್ತು ಅದರ ವೈಚಾರಿಕತೆಯನ್ನು ವಿರೋಧಿಸುವುದಾಗಿದೆ. ಪ್ರಾಚೀನ ಕಾಲಘಟ್ಟದಲ್ಲಿ ಇದ್ದ ಅಸಮಾನತೆ, ಜಾತಿಪದ್ಧತಿಗಳನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸುವುದರ ಮೂಲಕ ವೈದಿಕ ಧರ್ಮದ ಮೂಲಭೂತವಾದವನ್ನು ವಿರೋಧಿಸಲಾಗಿದೆ. ವೈದಿಕ ಧರ್ಮ ಪ್ರತಿಪಾದಿಸುವ ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಕೃತಿಗಳನ್ನು ಜನಸಾಮಾನ್ಯರು ಬಳಸುವ ಭಾಷೆಯಲ್ಲಿ ಕೃತಿಯನ್ನು ಪುನಃಸೃಷ್ಟಿಸುವುದರ ಮೂಲಕ ವೈದಿಕ ಭಾಷೆಯ ಯಜಮಾನಿಕೆಯನ್ನು ವಿರೋಧಿಸಲಾಗಿದೆ. ಹಾಗಾಗಿ ಪ್ರಾಚೀನ ಕನ್ನಡ ಸಾಹಿತ್ಯವು ವೈದಿಕ ಚಿಂತನೆಗಳನ್ನು ಕಾವ್ಯದಲ್ಲಿ ಹೇಳುವುದು, ತೋರಿಸುವುದು ಮತ್ತು ಚಿತ್ರಿಸುವುದರ ಮೂಲಕ ವೈದಿಕ ವಿರೋಧ ಪ್ರಜ್ಞೆಯನ್ನು ರೂಪಿಸಲಾಗಿದೆ.

೨. ಮಧ್ಯಕಾಲಿನ ಸಂದರ್ಭ: ವೈದಿಕ ವಿರೋಧಿ ಚಿಂತನೆಗಳು

ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನದ ವಚನ ಸಾಹಿತ್ಯ ಆತ್ಮವಿಮರ್ಶೆಯನ್ನು ತನ್ನ ಮಾಧ್ಯಮವಾಗಿ ಮಾಡಿಕೊಂಡು ಸ್ವತಂತ್ರವಾಗಿ ಬೆಳೆದ ಕಾಲ. ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದುಬಂದ ವಚನ ಸಾಹಿತ್ಯ, ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಯಿತು. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುತ್ತಾ ನೈತಿಕ ಬದುಕನ್ನು ಕಟ್ಟಿತು. ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಚೌಕಟ್ಟುಗಳನ್ನು ಮೀರಿ ಜನಸಾಮಾನ್ಯರಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸಿತು. ಬಸವಣ್ಣ ಈ ಯುಗದಲ್ಲಿ ಕೇಂದ್ರಬಿಂದುವಾದ. ಅಲ್ಲಮಪ್ರಭು ಅನುಭವ ಮಂಟಪದ ಅಧ್ಯಕ್ಷನಾದ. ಚನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಮೋಳಿಗೆ ಮಾರಯ್ಯ, ಸೂಳೆ ಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ ಮುಂತಾದ ಕೆಳವರ್ಗದ ವಚನಕಾರರು ಕಾಯಕದ ಮೂಲಕ ತಮ್ಮನ್ನು ಗುರುತಿಸಿಕೊಂಡರು. ಸಮಾಜದಲ್ಲಿ ಸಮಾನತೆಯನ್ನು ಬೆಳೆಸಲು ಮುಂದಾದರು. ವೈದಿಕ ವಿರೋಧಿ ಚಿಂತನೆಗಳು ಮಧ್ಯಕಾಲೀನ ಸಂದರ್ಭದಲ್ಲಿ ವಚನಕಾರರ ಮೂಲಕ ಹೇಗೆ ವ್ಯಕ್ತವಾಗಿವೆ ಎಂದು ಗ್ರಹಿಸುವುದು ಇಲ್ಲಿನ ಉದ್ದೇಶವಾಗಿದೆ.

ವೈದಿಕ ಧರ್ಮದಲ್ಲಿ ಇದ್ದ ಅಸ್ಪೃಶ್ಯತೆ, ಅಮಾನವೀಯತೆ, ಕಂದಾಚಾರ, ಮೌಢ್ಯಗಳನ್ನು ಜೈನ, ಬೌದ್ಧ ಮತ್ತು ಚಾರ್ವಾಕ ಧರ್ಮಗಳು ವಿರೋಧಿಸುತ್ತಾ ಬಂದವು. ಆದರೆ ರಾಜಕೀಯ ಪ್ರಭುತ್ವದಿಂದ ವೈದಿಕ ಧರ್ಮ ಈ ಎಲ್ಲಾ ಧರ್ಮಗಳನ್ನು ಸೋಲಿಸಿತು. ವೈದಿಕ ಧರ್ಮದಲ್ಲಿ

ಇದ್ದ ಜಾತೀಯತೆ, ಪೊಳ್ಳುತನ, ವಂಚನೆ, ಡಾಂಬಿಕತೆಗಳನ್ನು ವಿರೋಧಿಸಲು ೧೨ನೇ ಶತಮಾದಲ್ಲಿ ವಚನ ಸಾಹಿತ್ಯ ಹುಟ್ಟಿತು. ವೈದಿಕ ಧರ್ಮದ ಆಚರಣೆಗಳಲ್ಲಿ ಸಿಲುಕಿಕೊಂಡಿದ್ದ ಜನಸಾಮಾನ್ಯರನ್ನು ಎಚ್ಚರಿಸಲು ಆಡುಭಾಷೆಯಲ್ಲಿ ಅನುಭವಗಳನ್ನು ಹೇಳುವುದರ ಮೂಲಕ ವಿವೇಚನೆಯನ್ನು ಮೂಡಿಸಿತು ಹಾಗೂ ವೈಚಾರಿಕತೆ ಮಾರ್ಗವನ್ನು ತೋರಿಸಿತು.

ವಚನ ಸಾಹಿತ್ಯವನ್ನು ಹುಟ್ಟುಹಾಕಿದ ಬಸವಣ್ಣ ವರ್ಣವ್ಯವಸ್ಥೆಯಲ್ಲಿ ಶ್ರೇಷ್ಠವೆಂದು ಭ್ರಮಿಸಲ್ಪಟ್ಟ ವೈದಿಕ ಧರ್ಮದಲ್ಲಿ ಹುಟ್ಟಿದವನು. ಆದರೆ ಬಸವಣ್ಣ ವೈದಿಕ ಧರ್ಮದಲ್ಲಿ ಇದ್ದ ಅಸಮಾನತೆ, ಮೂಢನಂಬಿಕೆ, ಜಾತೀಯತೆ, ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ವೈದಿಕ ಧರ್ಮವನ್ನು ತೊರೆದು ವೈದಿಕ ವಿರೋಧಿ ಚಿಂತನೆಗಳನ್ನು ವಚನದ ಮೂಲಕ ಸಮಾಜದಲ್ಲಿ ಎಚ್ಚರ ಮಾಡಿರುವುದನ್ನು ಎಂ.ಎಂ. ಕಲಬುರ್ಗಿ ಅವರು ಹೀಗೆ ಹೇಳುತ್ತಾರೆ. "ವೈದಿಕವನ್ನು ಒಪ್ಪಿಕೊಂಡು ಬಾಳುತ್ತಲಿದ್ದ ತನ್ನ ಆಗಮಿಕ ಶೈವಬ್ರಾಹ್ಮಣ ಕುಟುಂಬವನ್ನು ಬಿಟ್ಟು ಬಸವಣ್ಣ ಹೊರಬಂದನು. ಹೀಗಾಗಿ ಅವನು ತನ್ನ ಕುಟುಂಬದ ಆಗಮಿಕ ಶೈವಬ್ರಾಹ್ಮಣ ವಿರೋಧಿಯಾದನಲ್ಲದೆ, ಸಹಜವಾಗಿಯೇ ವೈದಿಕ ಬ್ರಾಹ್ಮಣ ವಿರೋಧಿಯೂ ಆದನು. 'ವೇದಕ್ಕೆ ಒರೆಯ ಕಟ್ಟುವೆ, ಆಗಮದ ಮೂಗು ಕೊಯ್ವೆ' ಇತ್ಯಾದಿ ವಚನ ವಾಕ್ಯಗಳಿಂದ ಈ ಎರಡೂ ಬ್ರಾಹ್ಮಣ ಧರ್ಮಗಳನ್ನು ಅವನು ನಿರಾಕರಿಸಿದನೆಂದು ಸ್ಪಷ್ಟವಾಗುತ್ತದೆ. ಹೀಗಿದ್ದೂ ಅವನು ಆ ಕಾಲದಲ್ಲಿ ಸಬಲವಾಗಿದ್ದ ವೈದಿಕ ಬ್ರಾಹ್ಮಣದ ವಿರುದ್ಧವೇ ದೊಡ್ಡ ಹೋರಾಟವನ್ನು ಕೈಗೆತ್ತಿಕೊಂಡನು. ವಚನಗಳಲ್ಲಿ ಏರುದನಿಯಿಂದ ಹೇಳಿದ ವೈದಿಕರ ವಿರುದ್ಧದ ಮಾತುಗಳು ಮತ್ತು ಆ ಕಾಲದ ಹಾವಿನ ಹಾಳ ಕಲ್ಲಯ್ಯನೆಂಬ ಶರಣ ನಾಯಿಯಿಂದ ವೇದ ಓದಿಸಿದನೆಂಬ, ಇವನ ಮಗಳು ವೈದಿಕನೊಬ್ಬ ಮುಟ್ಟಿದ ಕಾರಣ ಮೈಲಿಗೆ ಆಯಿತೆಂದು ನೀರು ತುಂಬಿದ ಮಣ್ಣಿನ ಬಿಂದಿಗೆ ಒಡೆದು ಹಾಕಿದಳೆಂಬ, ಗಗನಗಾಮಿಯಾದ ಸಾಮವೇದಿ(ವೈದಿಕ)ಯ ನೆರಳು ತಾನು ಸಿದ್ಧಪಡಿಸುತ್ತಲಿದ್ದ ಅಡುಗೆಯ ಮೇಲೆ ಬೀಳದಿರಲೆಂದು, ಅದರ ಮೇಲೆ ಚಪ್ಪಲು ಮುಚ್ಚಿದನೆಂಬ ಕಥೆಗಳು ವೇದಪಥ್ಯದ, ವೈದಿಕ ವ್ಯಕ್ತಿಯ ಶ್ರೇಷ್ಠತೆಯನ್ನು ವಿರೋಧಿಸುವ ನೇರ ಉದಾಹರಣೆಗಳಾಗಿವೆ."[೮] ಸಹಸ್ರಾರು ವರ್ಷಗಳಿಂದ ಶೋಷಣೆಯನ್ನು ಮಾಡಿಕೊಂಡು ಬಂದ ವೈದಿಕ ಧರ್ಮವನ್ನು ಪೋಷಿಸುವ ಪುರೋಹಿತಶಾಹಿಯ ಅಮಾನವೀಯ ಕೃತ್ಯಗಳನ್ನು ವಚನ ಸಾಹಿತ್ಯ ವಿರೋಧಿಸಿತು. ಬಸವಣ್ಣ ವೈದಿಕ ಧರ್ಮವನ್ನು ತ್ಯಜಿಸುವುದರ ಮೂಲಕ ಸಮಾಜದಲ್ಲಿ ಇದ್ದ ವರ್ಣ ಶ್ರೇಣೀಕರಣವನ್ನು ಒಡೆದು ಹಾಕಿ ವರ್ಣಸಂಕರಕ್ಕೆ ಮುಂದಾದನು. ಈ ಮೂಲಕ ಬಸವಣ್ಣ ವೈದಿಕ ಧರ್ಮವನ್ನು ನಿರಾಕರಿಸುವ ಮತ್ತು ವಿರೋಧಿವುದನ್ನು ಈ ವಚನದಲ್ಲಿ ನೋಡಬಹುದು. ಬಸವಣ್ಣ ತನ್ನ ಮೂಲಧರ್ಮವಾದ ವೈದಿಕ ಧರ್ಮದಲ್ಲಿ ಇದ್ದ ಅಸಮಾನತೆ, ಅನ್ಯಾಯಗಳು, ಜಾತೀಯತೆ ಮತ್ತು ವೇದದಲ್ಲಿ ಇದ್ದ ಅರ್ಥಹೀನ ಆಚರಣೆಗಳನ್ನು ವಿರೋಧಿಸಿ ಈ ರೀತಿ ಹೇಳಿದ್ದಾರೆ.

ವೇದಕ್ಕೆ ಒರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯ್ಯುವೆ
ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ^

ಶತಶತಮಾನದಿಂದ ವೈದಿಕ ಧರ್ಮ ಜನಸಾಮಾನ್ಯರಿಗೆ ವೇದಗಳ ಮೂಲಕ ವಂಚನೆ ಮಾಡಿರುವುದನ್ನು ಬಸವಣ್ಣ ಗಮನಿಸಿ ವೇದಗಳನ್ನು ಒರೆಯ ಕಟ್ಟಬೇಕು. ಶಾಸ್ತ್ರವನ್ನು ಆನೆ ಕಟ್ಟುವ ಸರಪಳಿಯಿಂದ ಕಟ್ಟಬೇಕು, ಎಂದು ವೈದಿಕ ಧರ್ಮವನ್ನು ವಿರೋಧಿಸುತ್ತಾರೆ. ಬ್ರಾಹ್ಮಣರ ಮೂಲಭೂತ ಸರಕನ್ನು ನೇರವಾಗಿ ಲೇವಡಿ ಮಾಡುವುದರ ಮೂಲಕ ವಿರೋಧವನ್ನು ಮಾಡಿರುವುದನ್ನು ಕಾಣಬಹುದು. ಮುಂದುವರಿದು ಅಕ್ಕಮಹಾದೇವಿ ಹೀಗೆ ಹೇಳುತ್ತಾಳೆ.

ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು
ಕೊಟ್ಟಣವ ಕುಟ್ಟಿದ ನುಚ್ಚು ತೌಡು
ಕಾಣಿಭೋ
ಇವ ಕುಟ್ಟಲೇಕೆ ಕುಸುಕಲೇಕೆ
ಅತ್ತಲಿತ್ತ ಹರಿವ ಮನದ ಶಿರವನರಿದಡೆ
ಬಚ್ಚಬರಿಯ ಬಯಲು ಚೆನ್ನಮಲ್ಲಿಕಾರ್ಜುನ [೧೦]

ವೈದಿಕ ಧರ್ಮದ ಶಾಸ್ತ್ರಗಳಲ್ಲಿ ಯಾವುದೇ ಸತ್ವ ಇಲ್ಲ. ಉಪಯೋಗಕ್ಕೆ ಬಾರದ ಜೊಳ್ಳು ಎಂದು ವೈದಿಕ ಧರ್ಮವನ್ನು ಲೇವಡಿ ಮಾಡುವುದರ ಮೂಲಕ ವೈದಿಕ ಧರ್ಮದ ನಿರರ್ಥಕತೆಯನ್ನು ಅಕ್ಕಮಹಾದೇವಿ ಹೇಳಿದ್ದಾಳೆ.

ಅಲ್ಲಮಪ್ರಭು ವೈದಿಕ ಧರ್ಮವನ್ನು ವ್ಯಂಗ್ಯವಾಗಿ ವಿರೋಧಿಸುತ್ತಾನೆ. ವೇದವನ್ನು ಪಠಿಸುವ ಪುರೋಹಿತಶಾಹಿಯನ್ನು ಅಲ್ಲಗಳೆಯುತ್ತಾನೆ.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ತಗರ ಹೋರಟೆ

ಭಕ್ತಿ ಎಂಬುದು ತೋರುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು[೧೧]

ಹೀಗೆ ವೈದಿಕ ಧರ್ಮ ಪ್ರತಿಪಾದಿಸುವ ವೇದ, ಬರಿ ಓದಿಗೆ ಸಿಮೀತ, ಶಾಸ್ತ್ರಗಳಿಂದ ಯಾವುದೇ ಉಪಯೋಗವಿಲ್ಲ, ಪುರಾಣಗಳಲ್ಲಿ ಯಾವುದೇ ತಾತ್ವಿಕತೆ ಇಲ್ಲ, ತರ್ಕವೆಂಬುದು ಜೂಜಾಟದ ಹೋರಾಟ, ಭಕ್ತಿ ಎಂಬುದು ಬರಿ ಡಾಂಬಿಕತೆಯ ತೋರಿಕೆ ಎಂದು ವೈದಿಕ ಧರ್ಮದ ತಾತ್ವಿಕತೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಹೀಗೆ ಮುಂದುವರಿದು ಈ ರೀತಿ ಅಲ್ಲಮ ಹೇಳುತ್ತಾನೆ.

ವೇದ ಪ್ರಮಾಣವಲ್ಲ ಶಾಸ್ತ್ರ ಪ್ರಮಾಣವಲ್ಲ
ಶಬ್ದ ಪ್ರಮಾಣವಲ್ಲ ಕಾಣಿಭೋ ಲಿಂಗಕ್ಕೆ
ಅಂಗಸಂಗದ ಮಧ್ಯದಲ್ಲಿದ್ದುದ
ಬೈಚಿಟ್ಟು ಬಳಸಿದ ಗುಹೇಶ್ವರ ನಿಮ್ಮ ಶರಣ[೧೨]

ವೈದಿಕ ಧರ್ಮ ಪ್ರತಿಪಾದಿಸುವ ಚಾತುರ್ವರ್ಣ ವ್ಯವಸ್ಥೆಯನ್ನು ವಿರೋಧಿಸುವುದನ್ನು ವಚನಗಳಲ್ಲಿ ಕಾಣಬಹುದು. ಮೇಲು-ಕೀಳು ಎಂಬುದನ್ನು ವಿರೋಧಿಸಿ ಮಾನವೀಯ ಮೌಲ್ಯವನ್ನು ವಚನಗಳು ಬೋಧಿಸುತ್ತವೆ. ಕೆಳವರ್ಗದಲ್ಲಿ ಹುಟ್ಟುವುದು ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿ ಕನಿಷ್ಠವೆಂದು ಭಾವಿಸಿದ್ದನ್ನು ಬಸವಣ್ಣ ಅವರು ಕೆಳವರ್ಗದಲ್ಲಿ ಹುಟ್ಟುವುದು ಪವಿತ್ರ ಎಂದು ಈ ರೀತಿ ವಚನದಲ್ಲಿ ಹೇಳಿದ್ದಾರೆ.

ಚೆನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ[೧೩]

ಕೆಳವರ್ಗದಲ್ಲಿ ನಾನು ಹುಟ್ಟಿದವನು ಎಂದು ಹೇಳುವುದರ ಮೂಲಕ ವೈದಿಕ ಪ್ರಜ್ಞೆಯ ಶ್ರೇಷ್ಠತೆಯನ್ನು ವಿರೋಧಿಸಿ ಸಮಾಜದ ರೂಢಿಗತ ಕಟ್ಟುಪಾಡುಗಳನ್ನು ಧಿಕ್ಕರಿಸಲಾಗಿದೆ. ೧೨ನೇ ಶತಮಾನದಲ್ಲಿ ಬಸವಣ್ಣ ಸಮಾಜದಲ್ಲಿ ಇರುವ ಜಾತಿವ್ಯವಸ್ಥೆಯನ್ನು ವಿರೋಧಿಸಿ ವರ್ಣಸಂಕರಕ್ಕೆ ಮುಂದಾಗುತ್ತಾರೆ.

ವೈದಿಕ ಸಂಸ್ಕೃತಿಯ ಗುಡಿ ಪೂಜೆ, ಪುರೋಹಿತ-ಪೂಜಾರಿ, ಮೂಢನಂಬಿಕೆ, ಮಠ, ಪೌರೋಹಿತ್ಯದ ದಬ್ಬಾಳಿಕೆಯನ್ನು ವಚನ ಸಾಹಿತ್ಯ ವಿರೋಧಿಸಿತು. ಜನಸಾಮಾನ್ಯರಿಗೆ ಭಕ್ತಿಯ

ಹೆಸರಿನಲ್ಲಿ ಮಾಡುತ್ತಿದ್ದ ವಂಚನೆಯನ್ನು ಶರಣರು ವಚನಗಳ ಮೂಲಕ, ಪ್ರಭುತ್ವದ ವ್ಯವಸ್ಥೆಯನ್ನು ಅರ್ಥ ಮಾಡಿಸುವುದರ ಮೂಲಕ ಗುಡಿಸಂಸ್ಕೃತಿಯನ್ನು ವಿರೋಧಿಸಿ ಈ ರೀತಿ ಹೇಳಿದ್ದಾರೆ.

ಉಳ್ಳವರು ಶಿವಾಲಯ ಮಾಡಿಹರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಬ ದೇಹವೇ ದೇಗುಲ
ಶಿರವೆ ಹೊನ್ನ ಕಲಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.[೧೪]

ವೈದಿಕ ಧರ್ಮದ ಮೂರ್ತಿಪೂಜೆಯನ್ನು ವಿರೋಧಿಸುವುದರ ಮೂಲಕ ಮಾನವೀಯ ಮೌಲ್ಯಗಳು ಹೆಚ್ಚು ಮುಖ್ಯ ಎಂದು ಹೇಳಲಾಯಿತು. ವೈದಿಕ ಧರ್ಮದ ಸಂಪ್ರದಾಯಗಳನ್ನು ಬಸವಣ್ಣ ಈ ರೀತಿ ಟೀಕಿಸುತ್ತಾನೆ.

ನೀರ ಕಂಡಲ್ಲಿ ಮುಳುಗುವರಯ್ಯಾ
ಮರ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ ಒಣಗುವ ಮರನ
ಮುಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲಸಂಗಮದೇವಾ[೧೫]

ಪುರೋಹಿತಶಾಹಿಯ ಅರ್ಥವಿಲ್ಲದ ಆಚರಣೆಗಳಿಂದ ಯಾವುದೇ ಫಲವಿಲ್ಲ ಎಂದು ಮಾರ್ಮಿಕವಾಗಿ ವೈದಿಕ ಧರ್ಮದ ಪೂರ್ವಾಶ್ರಮದ ಚಿಂತನೆ ಮತ್ತು ಸಂಪ್ರದಾಯಗಳನ್ನು ವಚನ ಸಾಹಿತ್ಯ ವಿರೋಧಿಸಿದೆ.

ಕಲ್ಲ ಮನೆಯ ಮಾಡಿ
ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕೆಡೆದರೆ
ದೇವರೆತ್ತ ಹೋದರೋ
ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ
ಗುಹೇಶ್ವರ[೧೬]

ವೈದಿಕ ಸಂಸ್ಕೃತಿಯಲ್ಲಿ ದೇವರ ಹೆಸರಿನಲ್ಲಿ ಗುಡಿ ಗೋಪುರಗಳನ್ನು ಕಟ್ಟುವುದನ್ನು ಅಲ್ಲಮ ವಿರೋಧಿಸುತ್ತಾನೆ. ವೈದಿಕ ಧರ್ಮವನ್ನು ಪ್ರತಿಪಾದಿಸುವ ಪುರೋಹಿತಶಾಹಿ ದೇವರನ್ನು ಕಲ್ಲು

ಮನೆಯಲ್ಲಿ ಬಂದಿಸಿರುವ ಬಗ್ಗೆ ವ್ಯಂಗ್ಯವಾಗಿ ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ ಎಂದು ಹೇಳುವುದರ ಮೂಲಕ ಮೂರ್ತಿಪೂಜೆಯನ್ನು ವಿರೋಧಿಸಿದ್ದಾನೆ.

ವೈದಿಕಶಾಹಿಯ ವರ್ಣಾಶ್ರಮ ಪದ್ಧತಿಯನ್ನು ಕೆಳವರ್ಗದ ವಚನಕಾರರಾದ ಅಂಬಿಗರ ಚೌಡಯ್ಯ ಈ ರೀತಿ ತನ್ನ ವಚನದ ಮೂಲಕ ವಿರೋಧಿಸುತ್ತಾನೆ.

ಕುರಿಕೋಳಿ ಕಿರುಮೀನ ತಿಂಬವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು
ಆ ತನು ಹರಿಗೋಲಾಯಿತ್ತು
ಬೊಕ್ಕಣ ಸಿದಿಕೆ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು
ಈ ಬುದ್ಧಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತೆಕ್ಕೊಂಡು
ಬಾಯ ಕೊಯ್ಯುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ[೧೭]

ಈ ವಚನದಲ್ಲಿ ವೈದಿಕ ಧರ್ಮ ಮಾಡಿರುವ ಜಾತಿ ನೀತಿಗಳ ಬಗ್ಗೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ಬ್ರಾಹ್ಮಣರ ಪ್ರಕಾರ ಗೋವು ಪವಿತ್ರವಾದ ಪ್ರಾಣಿ, ಗೋವು ತಿನ್ನುವರು ಊರಿಂದ ಹೊರಗಿರಬೇಕು ಎಂದು ಹೇಳುತ್ತಾರೆ. ಆದರೆ ಬ್ರಾಹ್ಮಣರು ಯಜ್ಞ ಯಾಗಾದಿಗಳಿಗೆ ಪ್ರಾಣಿ ಬಲಿಯನ್ನು ಕೊಟ್ಟು ತಿನ್ನುತ್ತಿದ್ದರು. ಧರ್ಮದ ಹೆಸರಿನಲ್ಲಿ ಪ್ರಾಣಿಯನ್ನು ತಿಂದು ಊರೊಳಗಿರಬಹುದು. ಸತ್ತ ಗೋವು ತಿಂದವರು ಊರ ಹೊರಗೆ ಇರಬೇಕು? ಗೋವಿನ ಎಲ್ಲಾ ಉಪ ಉತ್ಪನ್ನಗಳನ್ನು ಬ್ರಾಹ್ಮಣರು ಉಪಯೋಗಿಸುತ್ತಾರೆ. ಆದರೆ ಕೆಳವರ್ಗದವರು ಗೋವು ಸತ್ತಮೇಲೆ ಅದರ ಮಾಂಸವನ್ನು ತಿನ್ನುವರು ಊರಹೊರಗೆ ಇರಬೇಕು ಎಂಬುದು ಯಾವ ನೀತಿ ಎಂದು ವಚನಕಾರರು ವೈದಿಕ ಧರ್ಮದ ನೀತಿಗಳನ್ನು ಪ್ರಶ್ನೆ ಮಾಡುವುದರ ಮೂಲಕ ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ವೇದವನೋದಿ ವೇದಾಧ್ಯಯನ ಮಾಡಿಸಿದರೇನು
        ಬ್ರಾಹ್ಮಣನಾಗಬಲ್ಲನೇ
ಬ್ರಹ್ಮವೇತ್ತುಗಳ ಶುಕ್ಲ ಸೋಣಿತದಿಂದ ಜನಿಸಿದರೇನು

ಬ್ರಾಹ್ಮಣನಾಗಬಲ್ಲನೇ?

ಯಜನಾಧ್ಯಷ್ಟ ಷಟ್ಕರ್ಮಂಗಳ ಬಿಡದೆ ಮಾಡಿದರೇನು

ಬ್ರಾಹ್ಮಣನಾಗಬಲ್ಲನೇ?

'ಬ್ರಹ್ಮಜಾನಾತಿ ಬ್ರಾಹ್ಮಣ' ಎಂಬ ವೇದವಾಕ್ಯವನರಿತು

ಬ್ರಹ್ಮೀಭೂತನಾದವನೇ ಬ್ರಾಹ್ಮಣ ನೋಡಾ

ಕಪಿಲಸಿದ್ಧ ಮಲ್ಲಿಕಾರ್ಜುನಾ[೧೮]

ಈ ಮೇಲಿನ ವಚನವು ಸಿದ್ಧರಾಮನ ವಚನವಾಗಿದ್ದು, ವೈದಿಕ ಧರ್ಮ ನಂಬಿಸಿರುವ ಮೂಲಭೂತವಾದವನ್ನು ಖಂಡಿಸುತ್ತದೆ. ನಾವು ವೇದಾಧ್ಯಯನ ಮಾಡಿದವರು, ಮಂತ್ರ ಯಜ್ಞಯಾಗಾದಿಗಳನ್ನು ಮಾಡುವರು ಎಂದು ಹೇಳಿಕೊಂಡಿರುವ ಬ್ರಾಹ್ಮಣರೆಲ್ಲ ಬ್ರಾಹ್ಮಣರಾಗುವುದಿಲ್ಲ. ಕೆಳವರ್ಗದ ಜನರು ಕೂಡ ವೇದ ಉಪನಿಷತ್ತುಗಳನ್ನು ಓದಿ ಬ್ರಹ್ಮೀಭೂತನಾಗಬಹುದು ಎಂದು ತಾತ್ವಿಕ ವಿಚಾರವನ್ನು ಸಿದ್ಧರಾಮ ಹೇಳುತ್ತಾನೆ. ವೈದಿಕರ ಸಂಸ್ಕೃತ ಭಾಷೆಯು ಪವಿತ್ರವೆಂಬ ಭಾವನೆಗಳು ದಟ್ಟವಾಗಿದ್ದವು. ಆದರೆ ವಚನ ಸಾಹಿತ್ಯ ವೈದಿಕ ಭಾಷೆಯ ನಿರಾಕರಣೆಯನ್ನು ಸೂಚಿಸುತ್ತದೆ. ಹೀಗೆ ಶೋಷಣೆಗೆ ಮಾಧ್ಯಮವಾಗಿದ್ದ ವೈದಿಕ ಧರ್ಮದ ವಿರೋಧಗಳು ವಚನಗಳಲ್ಲಿ ತಾತ್ವಿಕವಾಗಿ ವ್ಯಕ್ತವಾಗಿವೆ. ಆಚರಣೆ, ಭಾಷೆ, ಸಾಹಿತ್ಯ ಮೊದಲಾದ ದಾರಿಗಳಿಂದ ಸ್ಥಳೀಯರ ಮೇಲೆ ನಡೆಸಿದ ದಬ್ಬಾಳಿಕೆಯನ್ನು ಶರಣರು ವಿರೋಧಿಸಿದರು.

ವಚನ ಸಾಹಿತ್ಯದಲ್ಲಿ ವೈದಿಕ ವಿರೋಧಿಯ ನಿಲುವುಗಳು ಸ್ಪಷ್ಟವಾಗಿ ನಿಷ್ಠುರವಾಗಿ ಗೋಚರವಾಗುತ್ತವೆ. ಜಾತಿವ್ಯವಸ್ಥೆ, ಲಿಂಗತಾರತಮ್ಯ, ಮಡಿ ಮೈಲಿಗೆ, ಯಜ್ಞ ಯಾಗಾದಿಗಳು, ವೇದ ಉಪನಿಷತ್ತುಗಳನ್ನು ವಚನ ಸಾಹಿತ್ಯ ವಿರೋಧಿಸಿತು. ವೈದಿಕರ ಗುಡಿ ದೇವಾಲಯ, ಮೂಢನಂಬಿಕೆ, ಜಾತಿತಾರತಮ್ಯ, ಅಸ್ಪೃಶ್ಯತೆ ಮತ್ತು ಸುಳ್ಳು ವೇದಾಂತಗಳನ್ನು ವಚನ ಸಾಹಿತ್ಯ ವಿರೋಧಿಸಿತು. ಅವೈದಿಕ ಚಿಂತನೆಗಳು ಜನರಲ್ಲಿ ಬೆಳೆಯಲು ಶರಣರು ಕ್ರಾಂತಿಕಾರಿಗಳಾದರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನಕಾರರ ನಂತರ ಬಂದ ಹರಿಹರ, ರಾಘವಾಂಕ ಮತ್ತು ಕನಕದಾಸ ಮುಂತಾದ ಮಹತ್ವದ ಕವಿಗಳು ತಮ್ಮ ಕಾವ್ಯಗಳಲ್ಲಿ ಈ ಅವೈದಿಕ ಪ್ರಜ್ಞೆಯನ್ನು ಮತ್ತಷ್ಟು ಮುಂದುವರಿಸಿದರು. ರಾಘವಾಂಕನು ತನ್ನ ಹರಿಶ್ಚಂದ್ರ ಚಾರಿತ್ರದಲ್ಲಿ ವಶಿಷ್ಠನ ಎದುರು, ವಿಶ್ವಾಮಿತ್ರನ ಪಾತ್ರವನ್ನು ಸೃಷ್ಟಿ ಮಾಡಿ ಕಾವ್ಯ ಕಟ್ಟಿದ್ದಾನೆ. ವಿಶ್ವಾಮಿತ್ರನ ಮೂಲಕ ಕವಿ ರಾಘವಾಂಕ ಹೊಲತಿಯರನ್ನು ಮದುವೆಯಾಗು ಎಂಬುದಾಗಿ ಒತ್ತಾಯಿಸುತ್ತಾನೆ. ಆದರೆ ವಶಿಷ್ಠ ಅದಕ್ಕೆ ಒಪ್ಪುವುದಿಲ್ಲ. ವೈದಿಕ ಪ್ರಜ್ಞೆಯಿಂದ ಕಾಣುವ ವಶಿಷ್ಠನ ಪ್ರಜ್ಞೆಯು ಹರಿಶ್ಚಂದ್ರನ ಸ್ವಭಾವವಾಗಿ ಕಾವ್ಯದಲ್ಲಿ ರೂಪುಪಡೆದಂತೆ ಭಾಸವಾಗುತ್ತದೆ. ಹಾಗಾಗಿಯೇ ಹರಿಶ್ಚಂದ್ರ ಹೊಲತಿಯರೊಂದಿಗಿನ ಮದುವೆಯನ್ನು ನಿರಾಕರಿಸುತ್ತಾನೆ. ಈ ಮೂಲಕ ವರ್ಣಸಂಕರ ಮತ್ತು ಜಾತಿಸಂಕರವನ್ನು

ನಿರಾಕರಿಸುತ್ತಾನೆ. ಇವೆರಡರ ನಿರಾಕರಣೆಯು ವೈದಿಕ ಪ್ರಜ್ಞೆಯಾಗಿದೆ. ವರ್ಣಸಂಕರ ಆಗುವುದು ಮತ್ತು ಜಾತಿಸಂಕರ ಆಗುವುದು ಅವೈದಿಕ ಪ್ರಜ್ಞೆಯಾಗಿದೆ. ಈ ಮೂಲಕ ಹರಿಶ್ಚಂದ್ರ ಕಾವ್ಯವು ವೈದಿಕ ಮತ್ತು ಅವೈದಿಕ ಪ್ರಜ್ಞೆಗಳ ಬಹಳ ದೊಡ್ಡ ಸಂಘರ್ಷದಂತೆ ಬಿಂಬಿತವಾಗಿದೆ.

೩. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಸ್ವರೂಪ

ವೈದಿಕ ವಿರೋಧಿ ಪ್ರಜ್ಞೆಯ ಚಿಂತನೆಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ವ್ಯಾಪಕವಾಗಿ ಚರ್ಚಿತವಾಗಿವೆ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಂಶೋಧನೆ, ಚಿಂತನೆ, ಸಾಹಿತ್ಯ ವಿಮರ್ಶೆ, ಸಮಾಜಶಾಸ್ತ್ರೀಯ ವಿಶ್ಲೇಷಣೆಗಳು ನಡೆದವು. ಹಾಗಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಕೆಳವರ್ಗದ ಜನಸಾಮಾನ್ಯರಿಗೆ ಅರಿವು ಮೂಡಿಸಲಾಯಿತು. ಶತಶತಮಾನಗಳಿಂದ ವೈದಿಕ ಧರ್ಮ ಸೃಷ್ಟಿಸಿದ ಜಾತಿಪದ್ಧತಿ, ಅಸ್ಪೃಶ್ಯತೆ, ಮೂಲಭೂತವಾದ, ಅರ್ಥವಿಲ್ಲದ ಆಚರಣೆಗಳು, ಅಮಾನವೀಯತೆ, ವೈದಿಕ ಯಾಜಮಾನ್ಯ, ವೈದಿಕ ಕ್ರಿಯಾಚರಣೆಗಳು, ಸ್ಥಳೀಯ ಧಾರ್ಮಿಕ ನಂಬಿಕೆಗಳು, ವೈದಿಕ ಕರ್ಮಸಿದ್ಧಾಂತ, ಪುರೋಹಿತಶಾಹಿ ಮತ್ತು ಸ್ಥಳೀಯ ಮಠಮಾನ್ಯಗಳ ಅಧಿಕಾರಗಳ ಬಗ್ಗೆ ಪ್ರಶ್ನೆ ಮಾಡುವುದರ ಮೂಲಕ ವೈದಿಕ ಚಿಂತನೆಗಳನ್ನು ವಿರೋಧಿಸಲಾಗಿದೆ. ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯ, ಭಿನ್ನ ಭಿನ್ನ ದೃಷ್ಟಿಕೋನಗಳನ್ನು ಹೊಂದುತ್ತಾ ಹೋಯಿತು. ಮನುಷ್ಯಕೇಂದ್ರಿತ ಬದುಕಿನ ನೋಟ ನವೋದಯ ಸಾಹಿತ್ಯದ ಜೀವಾಳವಾಗಿ, ಸಾಮಾಜಿಕ ವ್ಯವಸ್ಥೆಯನ್ನು ತರ್ಕಬದ್ಧವಾಗಿ ವಿಶ್ಲೇಷಿಸುವ ಪ್ರಗತಿಶೀಲ ಸಾಹಿತ್ಯ, ಪಶ್ಚಿಮದ ತಿಳುವಳಿಕೆಯಿಂದ ತನ್ನ ಚಿಂತನೆಯನ್ನು ವಿಸ್ತರಿಸಿಕೊಂಡ ನವ್ಯ ಸಾಹಿತ್ಯ ಮತ್ತು ಸಾಮಾಜಿಕ ಬದಲಾವಣೆಗೆ ಚಳುವಳಿಯ ಉತ್ಪನ್ನವಾಗಿ ೭೦–೮೦ರ ದಶಕದ ದಲಿತ ಬಂಡಾಯ ಸಾಹಿತ್ಯವನ್ನು ನಾವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗುರುತಿಸಬಹುದು. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯವು ಕಥೆ, ಕಾವ್ಯ, ಕಾದಂಬರಿ, ಪ್ರಬಂಧ, ವಿಮರ್ಶೆ ಮತ್ತು ಸಂಶೋಧನೆ ಎಂಬ ಪ್ರಕಾರಗಳಲ್ಲಿ ವೈದಿಕ ವಿರೋಧಿ ಪ್ರಜ್ಞೆಯ ಚಿಂತನೆಗಳನ್ನು ಹೇಳುವುದು, ತೋರಿಸುವುದು, ಮರುಪರಿಶೀಲನೆ ಮಾಡುವುದು ಮತ್ತು ತಾರ್ಕಿವಾಗಿ ಆಲೋಚನೆ ಮಾಡಿಸುವ ಕೆಲಸವನ್ನು ಮಾಡಿದೆ.

ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ವಿಸ್ತರಣೆ ಮಾಡುವುದರ ಮೂಲಕ ಭಾರತದ ಸಂಪತ್ತನ್ನು ಕೊಳ್ಳೆ ಹೊಡೆಯಲು ಮುಂದಾದರು ಹಾಗೂ ಕ್ರೈಸ್ತ ಮಿಶನರಿಗಳ ಮೂಲಕ ಕ್ರೈಸ್ತಧರ್ಮವನ್ನು ಪ್ರಸಾರ ಮಾಡಿದರು. ಅಲ್ಲದೆ ಹಿಂದೂಧರ್ಮವನ್ನು ಟೀಕೆ ಮಾಡಿದರು. ಕೆಳವರ್ಗದ ಜನರಿಗೆ ಶಿಕ್ಷಣವನ್ನು ಕೊಡುವುದರ ಮೂಲಕ ಕ್ರೈಸ್ತ ಮಿಶನರಿಗಳು ಆಧುನಿಕ ಚಿಂತನೆಗಳನ್ನು ಪಸರಿಸಿದವು. ಪಾಶ್ಚಿಮಾತ್ಯ ಚಿಂತಕರು ಹಿಂದೂಧರ್ಮವನ್ನು ಕಟುವಾಗಿ ವಿಮರ್ಶೆ ಮಾಡಿದರು. ಮೊಗ್ಲಿಂಗನು 'ಜಾತಿವಿಚಾರಣೆ', 'ಮತವಿಚಾರಣೆ'. ಬಾಸೆಲ್ ಮಿಶನ್‌ನಿಂದ 'ಮತಭೇದ ರತ್ನಾಕರ', 'ವಜ್ರಸೂಚಿ', 'ವೇದದಲ್ಲಿ ಏನಿದೆ?' ಮತ್ತು ಮಿಶನರಿಗಳಿಂದ 'ವಿಗ್ರಹಾರಾಧನೆಯ ಕುರಿತು', 'ದೇವವಿಚಾರಣೆ' ಮತ್ತು 'ದೈವಪರೀಕ್ಷೆಯು' ಎಂಬ ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ವೈದಿಕ ಧರ್ಮದ

ಶ್ರಾದ್ಧ ಕರ್ಮ, ವಿಗ್ರಹಾರಾಧನೆ ಮತ್ತು ಮೌಢ್ಯಗಳನ್ನು ವಿರೋಧಿಸುವುದರ ಮೂಲಕ ಟೀಕಿಸಿದನು. ವಿಜ್ಞಾನ ಸಾಹಿತ್ಯವನ್ನು ಪರಿಚಯ ಮಾಡುವುದರ ಮೂಲಕ ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವವನ್ನು ಬೆಳೆಸಲು ಮುಂದಾದರು. "ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಯ ಅನುಯಾಯಿಗಳಾಗುವ ಹಂಬಲವಿದ್ದ ಬರ್ಟ್ರ್ಂಡ್ ರಸೆಲ್ ಮತ್ತು ಆಲ್ಡಸ್ ಹಕ್ಸ್ಲಿಯಂತಹವರಿಂದ ಪ್ರಾತಿನಿಧ್ಯ ಪಡೆದ ಲೇಖಕರ ಗುಂಪು ಆದರ್ಶಪ್ರಾಯವಾದುದಾಗಿತ್ತು. ಜೊತೆಗೆ ಹಿಂದೂಧರ್ಮದಲ್ಲಿ ಬಹು ಪೂರ್ವಕಾಲದಿಂದಲೂ ಅಂಗೀಭೂತವಾಗಿದ್ದ ವರ್ಣಾಶ್ರಮ, ಜಾತಿಪದ್ಧತಿ, ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ಅನ್ಯಾಯಗಳನ್ನು ಭಾರತೀಯ ಮುಂದಾಳುಗಳೇ ತೀವ್ರವಾಗಿ ಖಂಡಿಸಿ, ಕ್ರಾಂತಿ ನವತರುಣರ ಮಾಸನ ದಿಗಂತದಲ್ಲಿ ವಿಚಾರ ಕ್ರಾಂತಿಯ ಅರುಣೋದಯವಾಗುವಂತೆ ಮಾಡಿದ್ದರು."[೧೯]

ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದು ನವೋದಯ ಸಾಹಿತ್ಯವು ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವನೆಗಳನ್ನು ಸಾಹಿತ್ಯದ ಮೂಲಕ ತಂದಿತು. ಆದ್ದರಿಂದ ಪ್ರಾಚೀನ ಸಾಹಿತ್ಯದ ಸತ್ತ್ವದೊಡನೆ ಪಾಶ್ಚಾತ್ಯದಿಂದ ಬಂದ ನೂತನ ಭಾವನೆಗಳನ್ನು ಅಳವಡಿಸಿಕೊಂಡು, ಹೊಸತು ಹಳತನ್ನು ಸಮನ್ವಯಗೊಳಿಸಿಕೊಂಡು ಆಧುನಿಕ ಸಾಹಿತ್ಯ ಶ್ರೀಮಂತವಾಯಿತು. ಹಾಗಾಗಿ ವೈದಿಕ ಧರ್ಮದಲ್ಲಿ ಇದ್ದ ಅಸಮಾನತೆ, ಅಸ್ಪೃಶ್ಯತೆ, ಹಿಂದೂ ಮೂಲಭೂತವಾದ, ಕರ್ಮ, ಆತ್ಮ ಮತ್ತು ಪುನರ್ಜನ್ಮವನ್ನು ನವೋದಯ ಸಾಹಿತ್ಯ ಪ್ರಶ್ನೆ ಮಾಡಿತು ಹಾಗೂ ವೈಜ್ಞಾನಿಕ ದೃಷ್ಟಿಯಲ್ಲಿ ಸಮಾಜವನ್ನು ನೋಡುವುದನ್ನು ತೋರಿಸಿತು. ಹೊಸ ಸಾಹಿತ್ಯ ಬೆಳೆಯುವುದರ ಜೊತೆ ಜೊತೆಯಲ್ಲೇ ಸಂಪ್ರದಾಯಬದ್ಧವಾಗಿ ಬಂದ ಸಂಸ್ಕೃತದ ಸಾಹಿತ್ಯದ ಕಾವ್ಯ ಪ್ರಕಾರಗಳನ್ನು ಬಿಟ್ಟು ಭಾವಗೀತೆಗಳನ್ನು ನವೋದಯ ಲೇಖಕರು ರಚಿಸಿದರು. ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ' ಕಾದಂಬರಿಗಳಲ್ಲಿ ವೈದಿಕ ಧರ್ಮದಿಂದ ಶೋಷಣೆಗೆ ಒಳಗಾದ ಕೆಳವರ್ಗದ ಜನರನ್ನು ಚಿತ್ರಿಸಿದರು. ವೈದಿಕ ಧರ್ಮವನ್ನು ಪೋಷಿಸುವ ಬ್ರಾಹ್ಮಣರನ್ನು ಟೀಕಿಸುವುದು, ವ್ಯಂಗ್ಯವಾಡಿರುವುದನ್ನು ಕಾಣಬಹುದಾಗಿದೆ. ನವೋದಯ ಕಾಲಘಟ್ಟದಲ್ಲಿ ಸಾಹಿತ್ಯವನ್ನು ಬರೆಯುವ ಲೇಖಕರು ಬಹುಪಾಲು ಬ್ರಾಹ್ಮಣರಾಗಿದ್ದರು. ಆದರೆ ಬೇಂದ್ರೆ, ಶಿವರಾಮ ಕಾರಂತ ಮತ್ತು ಶಂಬಾ ಜೋಶಿ ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ಇವರ ಸಾಹಿತ್ಯದಲ್ಲಿ ವೈದಿಕ ವಿರೋಧಿ ಚಿಂತನೆಗಳು ಕಾಣುತ್ತವೆ. ಹೀಗೆ ಶಿಕ್ಷಣ, ಭಾಷೆ ಮತ್ತು ಪ್ರಭುತ್ವದಲ್ಲಿ ವೈದಿಕ ಚಿಂತನೆಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ.

ನವೋದಯ ಕಾಲಘಟ್ಟದಲ್ಲಿ ಬರುವ ಲೇಖಕರು ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ವೈದಿಕ ಸಾಹಿತ್ಯ ಕೃತಿಗಳನ್ನು ಆಕರವಾಗಿ ಮಾಡಿಕೊಂಡು ಆಧುನಿಕ ಸಂದರ್ಭಕ್ಕೆ ತಕ್ಕಂತೆ ರೂಪಾಂತರ ಮಾಡಿ, ಸನಾತನವಾದಿ ಚಿಂತನೆಗಳಿಗೆ ಹೊಸ ದೃಷ್ಟಿಕೋನವನ್ನು ಕೊಟ್ಟರು. ಹಾಗೂ ಶೂದ್ರ, ಅವೈದಿಕ ಸಾಹಿತ್ಯ ಚಿಂತನೆಗಳು ಬ್ರಾಹ್ಮಣ, ವೈದಿಕ, ಸಂಸ್ಕೃತ ಸಾಹಿತ್ಯ ಚಿಂತನೆಗಳನ್ನು ವಿರೋಧಿಸಿದವು ಮತ್ತು ಎದುರಾಳಿಗಳನ್ನಾಗಿ ಮಾಡಿಕೊಂಡವು. ಪ್ರಗತಿಶೀಲ ಸಾಹಿತ್ಯವು ಮಾರ್ಕ್ಸ್‌ವಾದ

ಮತ್ತು ಕಮ್ಯೂನಿಸ್ಟ್ ಚಿಂತನೆಗಳಿಂದ ಪ್ರಭಾವಿತವಾಗಿ ಸಮಾಜದಲ್ಲಿ ಇದ್ದ ವರ್ಗ–ವರ್ಣ ಸಂಘರ್ಷಕ್ಕೆ ಕಾರಣವಾದ ವೈದಿಕ ಧರ್ಮದ ಮೂಢನಂಬಿಕೆಗಳನ್ನು ವಿರೋಧಿಸಿತು. ಶೋಷಕ ವರ್ಗವು ದೇವರು, ಧರ್ಮ, ಕರ್ಮ, ಸ್ವರ್ಗ, ನರಕ ಇತ್ಯಾದಿಗಳ ಹೆಸರಿನಲ್ಲಿ ದುಡಿಯುವ ಶೋಷಿತ ವರ್ಗದವರಿಗೆ ನಂಬಿಸಿ ವಂಚಿಸುವುದನ್ನು ವಿರೋಧಿಸಿತು. ಪ್ರಗತಿಶೀಲರು ಯಾವುದೇ ಆಧ್ಯಾತ್ಮಿಕ ಕಲ್ಪನೆಯ ನೆರವನ್ನೂ ಪಡೆಯದೆ ಸಾಹಿತ್ಯ ಮತ್ತು ಚರಿತ್ರೆಯನ್ನು ಕಟ್ಟುವ ಕೆಲಸವನ್ನು ಮಾಡಿದರು. ಈ ಕಾಲದ ಲೇಖಕರು ನಾಸ್ತಿಕರಾಗಿದ್ದರು. ಅ.ನ.ಕೃ., ಬಸವರಾಜ ಕಟ್ಟೀಮನಿ, ನಿರಂಜನ, ಚದುರಂಗ, ತ.ರಾ.ಸು., ಇವರ ಸಾಹಿತ್ಯದಲ್ಲಿ ವೈದಿಕ ವಿರೋಧಿ ಚಿಂತನೆಗಳನ್ನು ಕಾಣಹುದಾಗಿದೆ. ವೈದಿಕ ಧರ್ಮದ ಹಲವು ಪರಿಣಾಮಗಳ ಫಲದಿಂದ ಹುಟ್ಟಿಕೊಂಡ ಕೋಮುವಾದ, ಊಳಿಗಮಾನ್ಯ ಪ್ರಭುತ್ವ, ಜಾತಿಶ್ರೇಣೀಕರಣ, ಸ್ತ್ರೀ ಶೋಷಣೆಗಳನ್ನು ಪ್ರಗತಿಶೀಲರು ಪ್ರಮುಖ ವಸ್ತುವಾಗಿ ಮಾಡಿಕೊಂಡು ಸಾಹಿತ್ಯವನ್ನು ರಚಿಸಿದರು.

ನವ್ಯ ಸಾಹಿತ್ಯವನ್ನು ಸೃಷ್ಟಿ ಮಾಡಿದ ಲೇಖಕರು ಬಹುತೇಕ ಬ್ರಾಹ್ಮಣರಾಗಿದ್ದರು. ಇದರಿಂದಾಗಿ ಸನಾತನ ಧರ್ಮದ ವಕ್ತಾರನಂತೆ ಇಡೀ ನವ್ಯಕಾವ್ಯ ಹುಟ್ಟಿಕೊಂಡಿತು. ವೈದಿಕ ಧರ್ಮ ಪ್ರತಿಪಾದಿಸುವ ಜಾತಿಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ, ಸತಿಪದ್ಧತಿಯನ್ನು ನವ್ಯ ಲೇಖಕರು ಪ್ರತಿಪಾದಿಸುತ್ತಿದ್ದರು. ಆದ್ದರಿಂದ ತೇಜಸ್ವಿ ಅವರು ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದ ಮುನ್ನುಡಿಯಲ್ಲಿ ಈ ರೀತಿ ಹೇಳುತ್ತಾರೆ. "ನವ್ಯ ಕಾವ್ಯದ ಸ್ಫೂರ್ತಿ ಮೂಲಗಳು ಆಂಗ್ಲ ಕಾವ್ಯದಿಂದ ಎರವಲು ತಂದ ಸಿದ್ಧಾಂತಗಳಿಂದ ಮಾತ್ರವೆಂದು ಹೇಳಬೇಕು. ಏಕೆಂದರೆ ಈ ವಿಚಾರ ಸರಣಿಗೆ ವಿಸ್ತೃತ ವ್ಯಾಪ್ತಿಯೇ ಕಾಣುತ್ತಿಲ್ಲ. ಕನ್ನಡದ ಹಲವು ಕ್ರಾಂತಿಗಳು ಇದೇ ರೀತಿ ಮುಗ್ಗರಿಸಿದ್ದುಕ್ಕೆ ಮೂಲ ಕಾರಣ ಅವುಗಳ ಮುಂಚೂಣಿಯಲ್ಲಿ ಚುಕ್ಕಾಣಿ ಹಿಡಿದಿದ್ದವರು ಬ್ರಾಹ್ಮಣರು. ಆದ್ದರಿಂದಲೇ ಹಳೆ ಸಾಹಿತ್ಯಕ್ಕೂ ಹೊಸ ಸಾಹಿತ್ಯಕ್ಕೂ ಸಂಭವಿಸಿದ ಘರ್ಷಣೆ, ಹಳೆ ಸಂಪ್ರದಾಯ, ಆಚಾರ, ಪದ್ಧತಿ ಮುಂತಾದವುಗಳೆಲ್ಲದರ ವಿರುದ್ಧದ ಆಂದೋಲನವಾಗಲಿಲ್ಲ. ನವ್ಯ ಚಳುವಳಿ ತಮಿಳು ನಾಡಿನಲ್ಲಾದಂತೆ ಭಾಷೆ, ಜಾತಿಪದ್ಧತಿ, ತತ್ವಚಿಂತನೆ, ರಾಜಕೀಯ ಆಂದೋಲನ ಮೊದಲಾದ ಜೀವನದ ವಿಶಾಲ ವ್ಯಾಪ್ತಿಗೆ, ಎಲ್ಲ ಕ್ಷೇತ್ರಗಳಿಗೂ ವಿಸ್ತರಿಸಲೇ ಇಲ್ಲ. ನವ್ಯ ಮಾರ್ಗದ ಹಿರಿಯರೂ ಅಗ್ರಗಣ್ಯರೂ ಆದ ಕೆಲವರು ಸಾಹಿತ್ಯದಲ್ಲಿ ಕ್ರಾಂತಿಕಾರಿಗಳಾದರೂ ಜಾತಿಪದ್ಧತಿ, ವರ್ಣಾಶ್ರಮ ಧರ್ಮ ಮುಂತಾದವುಗಳನ್ನು ಪ್ರತಿಪಾದಿಸಿದರು."[೨೦] ಆದ್ದರಿಂದ ವೈದಿಕ ಮೌಲ್ಯ ಪ್ರಜ್ಞೆಯನ್ನು ಹಾಗೂ ನಂಬಿಕೆಗಳನ್ನು ಸಾಹಿತ್ಯದಲ್ಲಿ ಪ್ರತಿಪಾದಿಸುವ ನವ್ಯ ಸಾಹಿತ್ಯವನ್ನು ತೇಜಸ್ವಿಯವರು ಸಕಾರಣವಾಗಿ ವಿರೋಧಿಸಿ ತಮ್ಮ ನಿಲುವುಗಳನ್ನು ಬದಲಾಯಿಸಿಕೊಂಡರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆಯ ಚಿಂತನೆಗಳನ್ನು ಬರವಣಿಗೆಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ನವ್ಯ ಕಾಲಘಟ್ಟದ ಲೇಖಕರು ಹೆಚ್ಚು ಬ್ರಾಹ್ಮಣ ಲೇಖಕರಾಗಿದ್ದರು. ಹಿಂದೂ ಮೂಲಭೂತವಾದದ ಬಗ್ಗೆ ಹೆಚ್ಚು ಚರ್ಚಿಸದೆ ಹಿಂದೆ ಸರಿದರು. ಕನ್ನಡ ಸಾಹಿತ್ಯದ ಪರಂಪರೆ ವೈದಿಕ ವಿರೋಧಿ ಪರಂಪರೆ ಎನ್ನುವುದನ್ನು ನವ್ಯ ಸಾಹಿತ್ಯದ ಪ್ರಮುಖ ಲೇಖಕರು ಅಪವ್ಯಾಖ್ಯಾನ ಮಾಡಿ ಕನ್ನಡ

ಸಂಸ್ಕೃತಿ ಎಲ್ಲಾ ಭಾರತೀಯ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿ ಎಂದು ತಿರುಚುವ ಪ್ರಯತ್ನಗಳು ನಡೆದವು ಎಂಬುದರ ಬಗ್ಗೆ ತೇಜಸ್ವಿ ಅವರು ಹೀಗೆ ಉಲ್ಲೇಖಿಸುತ್ತಾರೆ. "ನವ್ಯ ಸಾಹಿತ್ಯ ವ್ಯಕ್ತಿ ಕೇಂದ್ರೀಕೃತವಾಗಿ ಸಾಹಿತ್ಯ ತನ್ನ ಸಾಮಾಜಿಕ ಅರಿವನ್ನೇ ಕಳೆದುಕೊಳ್ಳುವ ಮಟ್ಟ ಮುಟ್ಟಿತ್ತು. ಜಾತಿಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಸನಾತನ ಧರ್ಮದ ಭಯಂಕರ ನ್ಯೂನತೆಗಳನ್ನು ಪಕ್ಕಕ್ಕೆ ಸರಿಸಿ ವೈದಿಕ ಪರಂಪರೆಯೇ ಕರ್ನಾಟಕದ ಪರಂಪರೆ ಎಂದು ಅಪವ್ಯಾಖ್ಯಾನ ಮಾಡಲು ಶುರುವಾಗಿತ್ತು. ಕನ್ನಡ ಸಾಹಿತ್ಯದ ಪರಂಪರೆ ಎಂದರೆ ವೈದಿಕ ಪರಂಪರೆಯ ವಿರುದ್ಧ ನಡೆದ ಮತ್ತು ನಡೆಯುತ್ತಿರುವ ನಿರಂತರ ಹೋರಾಟ ಎನ್ನುವ ಸತ್ಯ ಸಂಗತಿಯನ್ನು ತಿರುಚುವ ಪ್ರಯತ್ನ ನವ್ಯ ಸಾಹಿತ್ಯದ ಉದ್ದಾಮ ಬರಹಗಾರರಿಂದ ನಡೆಯುತ್ತಿತ್ತು. ಸಂಪೂರ್ಣ ಅವೈದಿಕ ಹಿನ್ನೆಲೆಯಿಂದ ಬಂದ ನನಗೆ ಜಾಜ್ವಲ್ಯಮಾನ ಪ್ರತಿಮೆಗಳೆಂದು ಹೊಗಳುತ್ತಿದ್ದ ಇವರ ಕೃತಿಗಳಲ್ಲಿ ಯಾವ ಮಹತ್ತೂ ಕಾಣುತ್ತಿರಲಿಲ್ಲ. ನನಗೆ ಸಾಹಿತ್ಯದಲ್ಲೇ ಆಸಕ್ತಿ ನಶಿಸತೊಡಗಿತ್ತು."[೨೧] ಹೀಗೆ ನವ್ಯ ಕಾಲಘಟ್ಟದಲ್ಲಿ ವೈದಿಕ ವಿರೋಧಿ ಚಿಂತನೆಗಳನ್ನು ತಿರುಚುವ ಕೆಲಸವನ್ನು ಮಾಡಲಾಗಿದೆ. ವೈದಿಕ ಸಂಸ್ಕೃತಿಯಿಂದ ಸಾಮಾಜಿಕವಾಗಿ ಆಗುತ್ತಿದ್ದ ಅಪಮಾನ, ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲಿಲ್ಲ. ಹಾಗಾಗಿ ನವ್ಯದ ಬ್ರಾಹ್ಮಣವರ್ಗದ ಲೇಖಕರು ವೈದಿಕ ಚಿಂತನೆಗಳಿಗೆ ವಿರೋಧವನ್ನು ವ್ಯಕ್ತಪಡಿಸಲಿಲ್ಲ.

ಬ್ರಾಹ್ಮಣಿಕೆಯನ್ನು ಪ್ರತಿಪಾದಿಸುವ ವೈದಿಕ ಧರ್ಮವನ್ನು ವಿರೋಧಿಸಲು ೧೯೭೦ರಲ್ಲಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಹುಟ್ಟಿಕೊಂಡಿತು. ಶತಶತಮಾನಗಳಿಂದ ಬೌದ್ಧಿಕವಾಗಿ ದಬ್ಬಾಳಿಕೆ ಮಾಡುತ್ತಿರುವ ಬ್ರಾಹ್ಮಣವರ್ಗದ ಕಲೆ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ಅದು ವಿರೋಧಿಸಿತು. ಸಾಹಿತ್ಯ, ಕಲೆ, ವೃತ್ತಪತ್ರಿಕೆ, ಸಿನಿಮಾ, ರೇಡಿಯೊ ಕ್ಷೇತ್ರದಲ್ಲಿ ಬ್ರಾಹ್ಮಣ ಲೇಖಕರು ಮತ್ತು ಕಲಾವಿದರು ಮುಂಚೂಣಿಯಲಿದ್ದರು. ಜನರಿಗೆ ತಿಳಿಯದ ಭಾಷೆಯ ಮೂಲಕ, ಆಡಳಿತ ಸೂತ್ರಗಳ ಮೂಲಕ, ನಮ್ಮ ಜನರನ್ನು ಮೂಕರನ್ನಾಗಿಸಿದ ಉಚ್ಚವರ್ಗದ ವಿರುದ್ಧ ಈ ಬರಹಗಾರರ ಒಕ್ಕೂಟ ಧ್ವನಿ ಎತ್ತಿತು. ಆದ್ದರಿಂದ ಕೆಳವರ್ಗದ ಲೇಖಕರು ಸಾಹಿತ್ಯವನ್ನು ರಚನೆ ಮಾಡಲು ಮುಂದಾದರು. ವೈದಿಕ ಧರ್ಮದ ಮೂಲಕ ಶೋಷಣೆ ಮಾಡುತ್ತಿದ್ದ ಬ್ರಾಹ್ಮಣಿಕೆಯನ್ನು ವಿರೋಧಿಸಿದರು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ದೂರ ಉಳಿದ ಕೆಳವರ್ಗದ ಜನರನ್ನು ಕುರಿತು ಕೆಳವರ್ಗದ ವಿದ್ಯಾವಂತರು ಸಾಹಿತ್ಯವನ್ನು ರಚನೆ ಮಾಡಿದರು. ಜಾತಿವಿರೋಧಿ ಚಳುವಳಿ, ಜಾತಿ ವಿನಾಶ ಸಮ್ಮೇಳನ ಮತ್ತು ಪಾಂಚಾಲಿ ಪತ್ರಿಕೆಯ ಮೂಲಕ ಬ್ರಾಹ್ಮಣ ವಿರೋಧಿ ಚಳುವಳಿಯನ್ನು ಮಾಡಲಾಯಿತು.

ದಲಿತ ಸಾಹಿತ್ಯವು ಎಪ್ಪತ್ತರ ದಶಕದಲ್ಲಿ ವೈದಿಕ ಚಿಂತನೆಗಳನ್ನು ಹಾಗೂ ಊಳಿಗಮಾನ್ಯಶಾಹಿಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿತು. ಆಧುನಿಕ ಸಂದರ್ಭದಲ್ಲಿ ವೈದಿಕಶಾಹಿ ಪ್ರಭುತ್ವದ ಜೊತೆಗೆ ಅನುಸಂಧಾನ ಮಾಡಿಕೊಂಡು ಮೂಲಭೂತವಾದವನ್ನು ಬೆಳೆಸಲು ಮುಂದಾಯಿತು. ಹಾಗಾಗಿ ದಲಿತ ಲೇಖಕರು ಬಸವ, ಬುದ್ಧ, ಅಂಬೇಡ್ಕರ್ ಚಿಂತನೆಗಳಿಂದ ಪ್ರೇರಿತರಾಗಿ ವೈದಿಕ ಪ್ರಜ್ಞೆಯನ್ನು ವಿರೋಧಿಸಿದರು. ಶತಶತಮಾನದಿಂದ ದಲಿತರ ಮೇಲೆ

ಮಾಡಿಕೊಂಡು ಬಂದಿರುವ ವರ್ಣಾಶ್ರಮ ಆಧಾರಿತ ಜಾತಿಪದ್ಧತಿ ಮತ್ತು ತರತಮಭೇದಗಳನ್ನು ಖಂಡಿಸಲಾಯಿತು. ವೈದಿಕ ಧರ್ಮದ ಹಿನ್ನೆಲೆಯಿಂದ ಸೃಷ್ಟಿಯಾದ ಜಾತಿಯ ಅಸಮಾನತೆಯನ್ನು ವಿರೋಧಿಸಲು 'ದಲಿತ ಸಂಘರ್ಷ ಸಮಿತಿ' ಹುಟ್ಟಿಕೊಂಡಿತು. 'ದಲಿತರು ಬರುವರು ದಾರಿ ಬಿಡಿ, ದಲಿತರ ಕೈಗೆ ರಾಜ್ಯ ಕೊಡಿ' ಎಂಬ ಘೋಷಣೆಯ ಮೂಲಕ ವೈದಿಕ ಚಿಂತನೆಗಳಿಗೆ ವಿರೋಧ ವ್ಯಕ್ತಪಡಿಸಲಾಯಿತು. ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಅಕ್ಷರದ ಮೂಲಕ ದಲಿತ ಸಾಹಿತ್ಯವು ಅಭಿವ್ಯಕ್ತವಾಯಿತು. ಪ್ರಾದೇಶಿಕ ಭಾಷೆಯನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಮಾಡಿಕೊಂಡು ವೈದಿಕ ಮೂಲದಿಂದ ಸೃಷ್ಟಿಯಾದ ಅವಮಾನ, ಅಸ್ಪೃಶ್ಯತೆ, ಜಾತೀಯತೆ, ವರ್ಣತಾರತಮ್ಯ, ದೌರ್ಜನ್ಯಗಳನ್ನು ವಿರೋಧಿಸಲಾಯಿತು.

ವೈದಿಕಶಾಹಿ ಪ್ರತಿಪಾದಿಸುವ ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಣಭೇದ ನೀತಿಗಳ ವಿರುದ್ಧ ಹೋರಾಟವನ್ನು ಕಟ್ಟುವ ಹಿನ್ನೆಲೆಯಲ್ಲಿ ಬಂಡಾಯ ಸಾಹಿತ್ಯವು ಹುಟ್ಟಿಕೊಂಡಿತು. ವೈದಿಕ ಧರ್ಮದ ಅಸಮಾನತೆಗೆ ಒಳಗಾಗದ ಶೋಷಿತ ಜನಾಂಗದ ನೋವಿನ ಧ್ವನಿಯಾಯಿತು. ಸಮಾಜದಲ್ಲಿ ಸ್ಥಗಿತವಾಗಿದ್ದ ಮೂಲಭೂತ ಸಂಪ್ರದಾಯಗಳಿಗೆ ವಿರೋಧ ವ್ಯಕ್ತಪಡಿಸಲಾಯಿತು. ಹೀಗೆ ಸಮಾಜ ಬದಲಾವಣೆಯ ಧೋರಣೆಗೆ ಬದ್ಧವಾಯಿತು. "ಬಂಡಾಯ ಸಾಹಿತಿಗಳಲ್ಲಿ ಕೆಳವರ್ಗ, ಕೆಳಮಧ್ಯಮ ವರ್ಗ ಮತ್ತು ಮಧ್ಯಮವರ್ಗದವರಿದ್ದಾರೆ. ಪ್ರಗತಿಪರ ದಲಿತರು ಮೊಟ್ಟಮೊದಲ ಬಾರಿಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಕ್ಷರಾಭಿವ್ಯಕ್ತಿ ನೀಡುತ್ತಿದ್ದಾರೆ. ಆದ್ದರಿಂದ ಶೋಷಣೆವಿರೋಧಿ ಧೋರಣೆಯಂತಹ ಸಾಮಾನ್ಯ ನಿಲುವೊಂದು ಸಹ ಇವರೆಲ್ಲರ ವಸ್ತು, ವಿನ್ಯಾಸ ಅಭಿವ್ಯಕ್ತಿಗಳಲ್ಲಿ ಸೂಕ್ಷ್ಮ ವ್ಯತ್ಯಾಸ ಪಡೆಯಲಿಕ್ಕೆ ಸಾಧ್ಯವಿದೆ. ಬಂಡಾಯ ಸಾಹಿತ್ಯವೆಂದರೆ ಪ್ರತಿ ಕಲಾಕೃತಿಯೂ ಪ್ರತಿಭಟನೆಯೊಂದಿಗೇ ಮುಕ್ತಾಯವಾಗಬೇಕೆಂಬ ಭ್ರಮೆ ಬೇಕಿಲ್ಲ; ಯಾವುದೇ ಧೋರಣೆ ಸ್ಪಷ್ಟವಾಗಿ ಪ್ರಕಟವಾಗದಿದ್ದಾಗಲೂ ನಿರೂಪಣಾ ವಿಧಾನವೇ ಲೇಖಕನ ನಿಲುವನ್ನು ಸೂಕ್ಷ್ಮವಾಗಿ ನಿರ್ದೇಶಿಸಲು ಸಾಧ್ಯವಿರುತ್ತದೆ ಹಾಗೂ ಕೃತಿಯೊಂದರಲ್ಲಿ ವ್ಯಂಗ್ಯ ಮುಖ್ಯವಾಗಬಹುದು; ಆಕ್ರೋಶ ಪ್ರಮುಖವಾಗಬಹುದು. ಅಸಹಾಯಕತೆ, ವಿಡಂಬನೆ, ವಿಷಾದ ಹೀಗೆ ಅನೇಕ ಸ್ತರಗಳಲ್ಲಿ ವಿವಿಧ ರೂಪಗಳಲ್ಲಿ ಅಭಿವ್ಯಕ್ತವಾಗಬಹುದು. ಈ ವಿವಿಧ ಅಭಿವ್ಯಕ್ತಿ ವಿಧಾನಗಳಿಗೆ ಕ್ರೂರ ವ್ಯವಸ್ಥೆಯ ವಿರೋಧಿ ನೆಲೆಯೊಂದು ಪ್ರೇರಣೆಯಾಗಿರುವುದು ಸಾಮಾನ್ಯ ಅಂಶ. ಹೀಗೆ ಸಾಮಾನ್ಯ ಧೋರಣೆಯೊಂದು ಪ್ರೇರಕಶಕ್ತಿಯಾಗಿ ಕೆಲಸ ಮಾಡುವುದು ಜನಪರ ಸಾಹಿತ್ಯ ಚಳುವಳಿಗಳ ವಿಶಿಷ್ಟ ಲಕ್ಷಣವೇ ಆಗಿದೆ."[೨೨] ಹೀಗೆ ಬಂಡಾಯ ಸಾಹಿತ್ಯವು ಕೂಡ ವೈದಿಕ ವಿರೋಧಿ ಪ್ರಜ್ಞೆ ನಿಲುವುಗಳನ್ನು ಅಂತರ್ಗತವಾಗಿ ಮಾಡಿಕೊಂಡು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹುಟ್ಟಿಕೊಂಡಿತು.

ಒಟ್ಟಿನಲ್ಲಿ ಆಧುನಿಕ ಕನ್ನಡ ಸಾಹಿತ್ಯ ಕಾಲಘಟ್ಟವಾದ ನವೋದಯ, ನವ್ಯ ಮತ್ತು ದಲಿತ–ಬಂಡಾಯ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆ ವ್ಯಕ್ತವಾಗಿರುವುದನ್ನು ಗುರುತಿಸಬಹುದಾಗಿದೆ ಹಾಗೂ ವೈದಿಕಶಾಹಿಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಸಾಹಿತ್ಯ ಹುಟ್ಟಿಕೊಂಡಿರುವುದನ್ನು ಗಮನಿಸಬಹುದು. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಲೇಖಕರು ವೈದಿಕ ಧರ್ಮದ ಸಿದ್ಧಾಂತಗಳಿಗೆ

ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ರಚಿಸಿದರು. ವೈದಿಕ ಪ್ರಜ್ಞೆ ಪ್ರತಿಪಾದಿಸುವ ಹಿಂದೂ ಮೂಲಭೂತವಾದಗಳನ್ನು ಕಥೆ, ಕಾದಂಬರಿ, ಲೇಖನ ಮತ್ತು ವಿಮರ್ಶೆ ಕೃತಿಗಳಲ್ಲಿ ಚರ್ಚಿಸಿ ವಿಶ್ಲೇಷಣೆ ಮಾಡುವುದರ ಮೂಲಕ ವಿರೋಧ ವ್ಯಕ್ತವಾಗಿದೆ.

೪. ಆಧುನಿಕ ಚಳುವಳಿಗಳು

ಪ್ರಪಂಚದಲ್ಲಿ ಬಹುಪಾಲು ಚಳುವಳಿಗಳು ಎಲ್ಲ ರೀತಿಯ ಅಸಮಾನತೆಗಳನ್ನು ವಿರೋಧಿಸಿ ಹುಟ್ಟಿಕೊಂಡಿವೆ ಹಾಗೂ ಸಮಾಜದಲ್ಲಿ ಇರುವ ಸಮಸ್ಯೆಗಳನ್ನು ಪರಿಹರಿಸುವ ಗುರಿಯನ್ನಿಟ್ಟುಕೊಂಡು ಹೋರಾಡುತ್ತಿವೆ. ಸಮಾಜದಲ್ಲಿ ಇರುವ ಅಸ್ಪೃಶ್ಯತೆ, ಬಡತನ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಳುವಳಿಗಳು ಬೆಳಕು ಚೆಲ್ಲುತ್ತವೆ. ಆದ್ದರಿಂದ ಶತಮಾನಗಳಿಂದ ಮೇಲುವರ್ಗದ ಜನರು ಕೆಳವರ್ಗದ ಜನರ ಮೇಲೆ ಮಾಡಿರುವ ಬೌದ್ಧಿಕ ಮತ್ತು ಭೌತಿಕ ದಬ್ಬಾಳಿಕೆಗಳ ಬಗ್ಗೆ ಚಳುವಳಿಗಳು ನಡೆದವು. ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆದ ಮಧ್ಯಮವರ್ಗ ಮತ್ತು ಕೆಳವರ್ಗದ ಜನರು ಚಳುವಳಿ ಮಾಡಲು ಮುಂದಾದರು. ಹಾಗಾಗಿ ವೈದಿಕ ಧರ್ಮದಲ್ಲಿ ಇದ್ದ ಅಸಮಾನತೆಯ ಬಗ್ಗೆ ಚಳುವಳಿಗಳು ನಡೆದಿವೆ. ಈ ಚಳುವಳಿಗಳಿಂದ ಹಲವಾರು ಸಂಘ ಸಂಸ್ಥೆಗಳು ಮತ್ತು ಸಂಘಟನೆಗಳು ಹುಟ್ಟಿಕೊಂಡವು ಮತ್ತು ಚಳುವಳಿಗಳಿಂದ ಕೆಳಸ್ತರದ ಜನಸಮುದಾಯಕ್ಕೆ ಮೇಲ್ಮುಖ ಚಲನೆಯ ಅವಕಾಶಗಳು ದೊರೆತವು.

ಬ್ರಾಹ್ಮಣರ ಪೌರೋಹಿತ್ಯದಿಂದ ಹಿಂದೂಧರ್ಮವು ಪ್ರಾಬಲ್ಯವನ್ನು ಹೊಂದಿತ್ತು. ಮೂಢನಂಬಿಕೆ, ವಿಗ್ರಹಾರಾಧನೆ, ಪ್ರಾಣಿಬಲಿ, ದೈಹಿಕ ಹಿಂಸೆಗಳಿಂದ ಸಮಾಜದ ಜನರು ಸಾಮಾಜಿಕವಾಗಿ ಖಿನ್ನತೆಗೆ ಒಳಗಾಗಿದ್ದರು. ವೈದಿಕ ಧರ್ಮ ಪ್ರತಿಪಾದಿಸುವ ಸತಿಸಹಗಮನ, ಬಾಲ್ಯವಿವಾಹ ಪದ್ಧತಿ, ವಿಧವೆಯರನ್ನು ಸಾಮಾಜಿಕವಾಗಿ ಬಹಿಷ್ಕಾರ, ಹೆಣ್ಣು ಶಿಶುಹತ್ಯೆಗಳು ಸಮಾಜದಲ್ಲಿ ಪ್ರಾಬಲ್ಯ ಪಡೆದುಕೊಂಡಿದ್ದವು. ಜಾತಿವ್ಯವಸ್ಥೆಯ ಮೂಲಕ ಸಮಾಜದಲ್ಲಿ ವಿಭಜನೆಗಳನ್ನು ಮಾಡಿ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತಿತ್ತು. ಈ ಎಲ್ಲಾ ಅಮಾನವೀಯ ಆಚರಣೆಗಳನ್ನು ೧೯ನೇ ಶತಮಾನದಲ್ಲಿ ಸಾಮಾಜಿಕ ಸುಧಾರಕರು ಮೌಢ್ಯಗಳನ್ನು ವಿರೋಧಿಸಲು ಚಳುವಳಿಗಳನ್ನು ಮಾಡಿದರು ಹಾಗೂ ಜನಸಾಮಾನ್ಯರಲ್ಲಿ ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿ ಜಾಗೃತಿಯನ್ನು ಮೂಡಿಸಲು ಮುಂದಾದರು.

ರಾಜಾರಾಮ್ ಮೋಹನ್‌ರಾಯ್ ಅವರು ಬ್ರಹ್ಮಸಮಾಜವನ್ನು ಸ್ಥಾಪಿಸಿ ವೈದಿಕ ಧರ್ಮವನ್ನು ಶುದ್ಧೀಕರಣ ಮಾಡಲು ಪ್ರಯತ್ನಿಸಿದರು ಹಾಗೂ ಸಾಮಾಜಿಕ, ಧಾರ್ಮಿಕ ಸುಧಾರಣೆಗಳನ್ನು ತಂದರು. ಹೆಣ್ಣು ಶಿಶುಹತ್ಯೆಯನ್ನು ವಿರೋಧಿಸಿದರು. ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ನೀಡಿದರು. ವೈದಿಕ ಧರ್ಮ ನಿರ್ಮಾಣ ಮಾಡಿದ್ದ ಮೂಢನಂಬಿಕೆಗಳನ್ನು ವಿರೋಧಿಸಿದರು. ಪಾಶ್ಚಿಮಾತ್ಯ ಚಿಂತನೆಯ ಮತ್ತು ಭಾರತೀಯ ಚಿಂತನೆಗಳಿಂದ ಪ್ರಭಾವಿತರಾದ ಈಶ್ವರಚಂದ್ರ ವಿದ್ಯಾಸಾಗರ್ ಅವರು ಬ್ರಾಹ್ಮಣರಿಗೆ ಮಾತ್ರ ಸೀಮಿತವಾದ ಸಂಸ್ಕೃತ ಕಲಿಕೆಯನ್ನು ವಿರೋಧಿಸಿ ಬ್ರಾಹ್ಮಣೇತರರಿಗೂ

ಸಂಸ್ಕೃತ ಕಲಿಸಲು ಸಂಸ್ಕೃತ ಕಾಲೇಜುಗಳನ್ನು ತೆರೆದರು. ವೇದಜ್ಞಾನ ಮತ್ತು ಧರ್ಮಜ್ಞಾನ ಪುರೋಹಿತರ ಏಕಸ್ವಾಮ್ಯವಾಗಿತ್ತು. ಆದ್ದರಿಂದ ಈ ಏಕಸ್ವಾಮ್ಯವನ್ನು ಮುರಿಯಲು ಇವರು ಪ್ರಯತ್ನಿಸಿದರು. ಆರ್ಯ ಸಮಾಜವನ್ನು ಸ್ಥಾಪಿಸಿದ ಸ್ವಾಮಿ ದಯಾನಂದ ಸರಸ್ವತಿ ಅವರು ವೈದಿಕ ಧರ್ಮ ಪ್ರತಿಪಾದಿಸುತ್ತಿದ್ದ ವಿಗ್ರಹಾರಾಧನೆ, ಜಾತಿವಾದ, ಬಾಲ್ಯವಿವಾಹವನ್ನು ವಿರೋಧಿಸಿದರು ಹಾಗೂ ಅಂತರ್ಜಾತಿ ವಿವಾಹ ಮತ್ತು ವಿಧವಾ ಪುನರ್ವಿವಾಹವನ್ನು ಮಾಡಲು ಮುಂದಾದರು. ಆತ್ಮಾರಾಮ್ ಪಾಂಡುರಂಗ ಅವರು ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದರು. ಸಮಾಜದಲ್ಲಿನ ಸಾಮಾಜಿಕ ಅನಿಷ್ಟ ಪದ್ಧತಿಗಳಾದ ತಾರತಮ್ಯದ ಭೋಜನ ಪದ್ಧತಿ, ಅಂತರ್ಜಾತಿ ವಿವಾಹ, ವಿಧವಾ ಪುನರ್ವಿವಾಹ, ಮಹಿಳೆಯರ ಉನ್ನತಿ ಮತ್ತು ಖಿನ್ನತೆಗೆ ಒಳಗಾದ ವರ್ಗಗಳನ್ನು ಉತ್ತೇಜಿಸಿದರು. ಸ್ವಾಮಿ ವಿವೇಕಾನಂದ ಅವರು ರಾಮಕೃಷ್ಣ ಮಿಷನ್ ಎಂಬ ಸಾಮಾಜಿಕ ಸಂಘಟನೆಯನ್ನು ಸ್ಥಾಪಿಸಿ ವೈದಿಕ ಧರ್ಮದಲ್ಲಿ ಇದ್ದ ಮೂಢನಂಬಿಕೆ ಮತ್ತು ಜಾತಿವ್ಯವಸ್ಥೆಯನ್ನು ವಿರೋಧಿಸಿದರು. ಆನಿ ಬೆಸೆಂಟ್ ಅವರು ಥಿಯೊಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸುವುದರ ಮೂಲಕ ವರ್ಣತಾರತಮ್ಯದ ವಿರುದ್ಧ ಹೋರಾಡಿದರು. ಸತ್ಯಶೋಧಕ ಸಾಮಾಜವನ್ನು ಸ್ಥಾಪಿಸಿದ ಜ್ಯೋತಿಬಾ ಫುಲೆ ಅವರು ಬ್ರಾಹ್ಮಣರ ದಬ್ಬಾಳಿಕೆಗಳನ್ನು ವಿರೋಧಿಸಿದರು. ಅವರ ಮಡದಿ ಸಾವಿತ್ರಿಬಾಯಿ ಫುಲೆ ಕೂಡ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಡಾ. ಬಿ.ಆರ್. ಅಂಬೇಡ್ಕರ್ ಅವರು ಕೆಳವರ್ಗದ ಜನರನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೆಳೆಸಲು ಬಹಿಷ್ಕೃತ ಹಿತವರ್ಷಿಣಿ ಸಭೆಯನ್ನು ಸ್ಥಾಪಿಸುವುದರ ಮೂಲಕ ಕಾಲರಾಂ ದೇವಾಲಯ ಪ್ರವೇಶ ಚಳುವಳಿ, ಮನುಸ್ಮೃತಿಯನ್ನು ಸುಡುವುದು ಮತ್ತು ಮಹಾದ್ ವಾಟರ್ ಟ್ಯಾಂಕ್ ಸತ್ಯಾಗ್ರಹವನ್ನು ಮಾಡಿದರು. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂಶೋಧನಾತ್ಮಕ ಬರವಣಿಗೆಗಳೆಲ್ಲವೂ ಮುಖ್ಯವಾಗಿ ವೈದಿಕ ಧರ್ಮದ ಕಟುವಿಮರ್ಶೆಗಳೇ ಆಗಿವೆ. ಭಾರತದಲ್ಲಿ ವರ್ಣ-ಜಾತಿ-ಅಸ್ಪೃಶ್ಯತಾ ಅಸಮಾನತೆಗಳನ್ನು ವೈದಿಕ ಪ್ರಜ್ಞೆಯೇ ಸೃಷ್ಟಿಸಿದೆ ಹಾಗೂ ಅದನ್ನು ವರ್ತಮಾನದಲ್ಲೂ ಮುಂದುವರಿಸಿಕೊಂಡು ಬರುತ್ತಿದೆ ಎಂಬುದನ್ನು ಅವರು ಆಧಾರಗಳ ಸಮೇತ ತಮ್ಮ ಬರವಣಿಗೆಗಳಲ್ಲಿ ಮಂಡಿಸಿದರು. ಮಹಿಳೆಯರನ್ನು ಅತ್ಯಂತ ತುಚ್ಛವಾಗಿ ಕಾಣುತ್ತಿದ್ದ ವೈದಿಕ ಧರ್ಮದ ಅಂತರಂಗದ ಕ್ರೌರ್ಯವನ್ನು ಅವರು ತಮ್ಮ ಸಂಶೋಧನೆಗಳ ಮೂಲಕ ಬಗೆದು ತೋರಿಸಿದರು. ಅಸಮಾನತೆಯನ್ನೇ ಉಸಿರಾಡುವ ವೈದಿಕ ಧರ್ಮದ ಗೊಡವೆಯೇ ಬೇಡ ಎಂದು ತೀರ್ಮಾನಿಸಿ ಅವರು ಬೌದ್ಧಧರ್ಮವನ್ನು ಸ್ವೀಕರಿಸಿದರು. ಇದರ ಪರಿಣಾಮ ಭಾರತದಲ್ಲಿ ಬಹಳ ದೊಡ್ಡದು. ಮಧ್ಯಕಾಲೀನ ಭಾರತದಲ್ಲಿ ಅನೇಕ ಕೆಳಜಾತಿಗಳು ಹಾಗೂ ಅಸ್ಪೃಶ್ಯ ಜಾತಿಗಳು ಇಸ್ಲಾಂಧರ್ಮಕ್ಕೆ ಮತಾಂತರ ಆಗಿದ್ದರು. ಈ ಕಾಲದಲ್ಲಿಯೂ ಕೂಡ ಭಾರತದ ಅನೇಕ ಕೆಳಜಾತಿಗಳು, ಆದಿವಾಸಿ, ಅಲೆಮಾರಿ, ಬುಡಕಟ್ಟು ಜನರು ಹಾಗೂ ಅಸ್ಪೃಶ್ಯರು ಒಂದು ಕಡೆ ಬೌದ್ಧಧರ್ಮಕ್ಕೆ ಮತ್ತೊಂದು ಕಡೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗುತ್ತಿದ್ದಾರೆ. ಇವರೆಲ್ಲರೂ ವೈದಿಕ ಪ್ರಜ್ಞೆಯ ಕ್ರೂರ ಅಟ್ಟಹಾಸಕ್ಕೆ ಬಲಿಯಾದವರು. ವೈದಿಕ ಧರ್ಮದ ದಬ್ಬಾಳಿಕೆಯನ್ನು ತಾಳಲಾರದೆ ಇಂತಹ

ನಿರ್ಧಾರಗಳಿಗೆ ಬರುತ್ತಿದ್ದಾರೆ. ಹೀಗಾಗಿ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಇಂತಹ ಬೆಳವಣಿಗೆಗಳು ಕಂಡರೆ ವೈದಿಕ ಮೌಲ್ಯಗಳ ಪ್ರತಿಪಾದಕರು ಮತಾಂತರ ಸರಿಯಲ್ಲ ಎಂದು ಉಪದೇಶ ಮಾಡುತ್ತಿದ್ದಾರೆ. ಇದನ್ನು ಯಾಕೆ ಇಲ್ಲಿ ಪ್ರಸ್ತಾಪ ಮಾಡಲಾಯಿತು ಎಂದರೆ ಇಂತಹ ತಳಸಮುದಾಯಗಳ ಮತಾಂತರ ಪ್ರಕ್ರಿಯೆಯು ಪ್ರಾಥಮಿಕವಾಗಿ ಮತ್ತು ಅಂತಿಮವಾಗಿ ಒಂದು ಕಡೆ ವೈದಿಕ ಪ್ರಜ್ಞೆಯ ವಿರೋಧಿಯೂ; ಮತ್ತೊಂದು ಕಡೆ ಅವೈದಿಕ ಪ್ರಜ್ಞೆಯ ಬೆಳವಣಿಗೆಯೂ ಆಗಿದೆ ಎಂಬುದನ್ನು ಹೇಳುವ ಸಲುವಾಗಿ.

ಹತ್ತೊಂಬತ್ತು ಹಾಗೂ ಇಪ್ಪತ್ತನೇ ಶತಮಾನದಲ್ಲಿ ಪಾಶ್ಚಾತ್ಯ ಶಿಕ್ಷಣ ಪಡೆದ ಭಾರತದ ಹಿಂದುಳಿದ ವರ್ಗಗಳ ಪ್ರಾಂತ್ಯಗಳಲ್ಲಿ ಚಳುವಳಿಗಳು ನಡೆದವು. ಪಶ್ಚಿಮ ಭಾರತ ಮತ್ತು ದಕ್ಷಿಣ ಭಾರತದಲ್ಲಿ 'ಬ್ರಾಹ್ಮಣೇತರ ಚಳುವಳಿ'ಯು ಹೆಚ್ಚು ವ್ಯಾಪಕವಾಗಿ ಬೆಳೆಯಿತು. ನಿಧಾನವಾಗಿ ಭಾರತದ ಎಲ್ಲಾ ಭಾಗಗಳಲ್ಲಿ ಈ ಚಳುವಳಿಗಳು ನಡೆದವು. ಈ ಚಳುವಳಿಗೆ ಮುಖ್ಯ ಕಾರಣಗಳೆಂದರೆ, ೧. ಶತಮಾನಗಳಿಂದ ಧಾರ್ಮಿಕ ಚೌಕಟ್ಟಿನೊಳಗೆ ಜಾತಿ ಅಸಮಾನತೆಯ ಸಮಾಜದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದು. ಈ ಜಾತಿ ಅಸಮಾನತೆಯಿಂದ ಅಸಮಾನತೆ, ವೃತ್ತಿ ಆಧಾರಿತ ಕೆಲಸ, ಅಸ್ಪೃಶ್ಯತೆ ಮತ್ತು ಶ್ರೇಣೀಕರಣ ವ್ಯವಸ್ಥೆಗಳು ಸಮಾಜದಲ್ಲಿ ಜಾರಿಯಲ್ಲಿದ್ದುದಕ್ಕೆ. ೨. ಬ್ರಾಹ್ಮಣವರ್ಗವು ಪಾರಂಪರಿಕವಾಗಿ ಪುರೋಹಿತರಾಗಿ, ಜ್ಯೋತಿಷಿಗಳಾಗಿ, ಬೋಧಕರಾಗಿ ಮತ್ತು ಅರ್ಚಕರಾಗಿ ಸಮಾಜದಲ್ಲಿ ಪ್ರಮುಖ ಸ್ಥಾನದಲ್ಲಿ ಗುರುತಿಸಿಕೊಂಡು ಮೂಢನಂಬಿಕೆಗಳ ಮೂಲಕ ಜನಸಾಮಾನ್ಯರಿಗೆ ವಂಚನೆ ಮಾಡಿದಕ್ಕೆ. ೩. ಬ್ರಾಹ್ಮಣರು ಅಧಿಕಾರ ನಿರ್ವಹಣೆ ಮಾಡುವುದರ ಮೂಲಕ ಆಡಳಿತದಲ್ಲಿ ಉತ್ತಮ ಪದವಿಗಳಲ್ಲಿ ಇದ್ದು ವ್ಯವಸ್ಥೆಯ ಮೇಲೆ ಹಿಡಿತವನ್ನು ಸಾಧಿಸಿದ್ದು. ೪. ವೈದಿಕರು ತಮ್ಮ ಬೌದ್ಧಿಕ ಹಿನ್ನೆಲೆಯಿಂದ ಮುಸ್ಲಿಂ ಮತ್ತು ಬ್ರಿಟಿಷ್ ಆಡಳಿತದಲ್ಲಿ ಪರ್ಷಿಯನ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿಯುವುದರ ಮೂಲಕ ತಮ್ಮ ಅಧಿಕಾರ ಮತ್ತು ಸ್ಥಾನಮಾನಗಳನ್ನು ಭದ್ರಗೊಳಿಸಿಕೊಂಡರು. ೫. ಹಿಂದುಳಿದ ವರ್ಗದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜದಲ್ಲಿ ಹಿಂದೆ ಉಳಿದುಕೊಂಡಿದ್ದಕ್ಕೆ. ೬. ಜಾತಿಪದ್ಧತಿ ಮತ್ತು ಗುಲಾಮ ಪದ್ಧತಿಗಳ ಮೂಲಕ ಕೆಳವರ್ಗದ ಜನರನ್ನು ಶೋಷಿಸಿದ್ದಕ್ಕೆ. ಮಹಾರಾಷ್ಟ್ರದಲ್ಲಿ ಜ್ಯೋತಿಬಾ ಫುಲೆ ಅವರು ಬ್ರಾಹ್ಮಣೇತರ ಚಳುವಳಿ ಪ್ರಾರಂಭ ಮಾಡಿದರು. ವೈದಿಕರು ಮಾತ್ರ ಶಿಕ್ಷಣವನ್ನು ಪಡೆಯಬೇಕು ಎಂಬುದನ್ನು ವಿರೋಧಿಸಿ, ಹಿಂದುಳಿದ ವರ್ಗಗಳಿಗೆ ಅಸ್ಪೃಶ್ಯರಿಗೆ ಹಾಗೂ ಮಹಿಳೆಯರಿಗೆ ಶಾಲೆಗಳನ್ನು ತೆರೆಯುವುದರ ಮೂಲಕ ಶೈಕ್ಷಣಿಕ ಕ್ರಾಂತಿಯನ್ನು ಮಾಡಿದರು. 'ಬ್ರಾಹ್ಮಣಾಚೆ ಕಸಬ್', 'ಗುಲಾಮಗಿರಿ', ಮತ್ತು 'ಸಾರ್ವಜನಿಕ ಸತ್ಯಧರ್ಮ' ಎಂಬ ಪುಸ್ತಕಗಳನ್ನು ಬರೆದು ಕೆಳವರ್ಗದ ಜನರಿಗೆ ಸ್ಥೈರ್ಯ ತುಂಬಿದರು. ಹಾಗೂ ಸತ್ಯಶೋಧಕ ಸಮಾಜದ ಸ್ಥಾಪಿಸಿ ದಲಿತರು ಮತ್ತು ಮಹಿಳೆಯರಿಗೆ ಸ್ಫೂರ್ತಿ ತುಂಬಿದರು ವೈದಿಕರು ಸೃಷ್ಟಿಸಿದ ಜಾತಿ ಕಟ್ಟುಪಾಡುಗಳು ಮತ್ತು ಮೌಢ್ಯಗಳನ್ನು ಧಿಕ್ಕರಿಸುವಂತೆ ಕರೆ ನೀಡಿದರು. ಮಹಾರಾಷ್ಟ್ರದಲ್ಲಿ ಫುಲೆಯವರು ಪ್ರಾರಂಭಿಸಿದ ಬ್ರಾಹ್ಮಣೇತರ ಚಳುವಳಿಯನ್ನು ಶಾಹು ಮಹಾರಾಜರು, ವಿಠಲರಾವ್ ಶಿಂಧೆ ಮತ್ತು ಕೇಶವರಾವ್ ಜೇಧೆ ಅವರು ಮುಂದುವರಿಸಿದರು. ಆಡಳಿದಲ್ಲಿ ಹಿಂದುಳಿದವರಿಗೆ ಮೀಸಲಾತಿ, ಬ್ರಾಹ್ಮಣೇತರರಿಗೆ

ಶಾಲೆಗಳನ್ನು ಸ್ಥಾಪನೆ ಮಾಡಿ, ಶಿಕ್ಷಣ ಕೊಡುವುದು ಮತ್ತು ಸಾರ್ವಜನಿಕ ಕೆರೆ ಬಾವಿಗಳಲ್ಲಿ ಅಸ್ಪೃಶ್ಯರಿಗೂ ಅವಕಾಶ ಕೊಡಿಸಲು ಈ ಚಳುವಳಿಯಿಂದ ಮುಂದಾದರು.

ಮದ್ರಾಸ್ ಪ್ರಾಂತ್ಯದಲ್ಲಿ ದ್ರಾವಿಡ ಚಳುವಳಿಯ ಪ್ರಭಾವದಿಂದ 'ಬ್ರಾಹ್ಮಣೇತರರ, ಬ್ರಾಹ್ಮಣೇತರರಿಗಾಗಿ ಬ್ರಾಹ್ಮಣೇತರರಿಂದ' ಎಂಬ ಘೋಷಣೆ ಮತ್ತು ಸಂಘಟನೆಯಿಂದ ಬ್ರಾಹ್ಮಣೇತರ ಚಳುವಳಿ ಪ್ರಾರಂಭವಾಯಿತು ಹಾಗೂ ದ್ರಾವಿಡ ರಾಜ್ಯವನ್ನು ಸ್ಥಾಪಿಸಲು ಮುಂದಾಯಿತು. ಪೆರಿಯಾರ್ ಈ ಚಳುವಳಿಯನ್ನು ಮುಂದುವರಿಸಿದರು. ಬ್ರಾಹ್ಮಣ ವರ್ಗದವರಿಗೆ ಹೆಚ್ಚು ಸರ್ಕಾರಿ ಹುದ್ದೆಗಳನ್ನು ಕೊಡುವುದನ್ನು ವಿರೋಧಿಸಿತು. ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕೊಡಿಸಲು ಹೋರಾಟವನ್ನು ಮಾಡಿತು. 'ಜಸ್ಟಿಸ್ ಪಕ್ಷ'ವನ್ನು ಸ್ಥಾಪಿಸಲಾಯಿತು. 'ದ್ರಾವಿಡಿಯನ್', 'ಜಸ್ಟೀಸ್', 'ಆಂಧ್ರ ಪ್ರಕಾಶಿಕ' ಎಂಬ ಪತ್ರಿಕೆಗಳಲ್ಲಿ ವೈದಿಕರ ತಾತ್ವಿಕ ಚಿಂತನೆಗಳನ್ನು ವಿರೋಧಿಸಲಾಯಿತು. ತಮಿಳರನ್ನು ಗುಲಾಮಗಿರಿಗೆ ತಳ್ಳಿದ ವೈದಿಕ ಧರ್ಮ ಮತ್ತು ಸಂಸ್ಕೃತಿಯನ್ನು ನಿರಾಕರಿಸುವಂತೆ ಆತ್ಮಾಭಿಮಾನ ಚಳುವಳಿಯಲ್ಲಿ ಪೆರಿಯಾರ್ ಕರೆ ನೀಡಿದರು.

ನಂಬೂದಿರಿ ಬ್ರಾಹ್ಮಣರ ವಿರುದ್ಧ ಕೇರಳದಲ್ಲಿ ಬ್ರಾಹ್ಮಣೇತರ ಚಳುವಳಿ ಹುಟ್ಟಿಕೊಂಡಿತು. ಈ ಬ್ರಾಹಣರು ಕೆಳವರ್ಗದ ಜನರನ್ನು ಅತಿ ಕೀಳಾಗಿ ಮತ್ತು ಜಾತಿ ಕಟ್ಟುಪಾಡುಗಳಿಂದ ಅವಹೇಳನ ಮಾಡಿ ಶಿಕ್ಷೆಗೆ ಗುರಿ ಮಾಡುತ್ತಿದ್ದರು. ಕೇರಳದಲ್ಲಿ ಕೆಳವರ್ಗದ ಜನರಿಗೆ ಮಿಷನರಿಗಳು ಶಿಕ್ಷಣ ಹಾಗೂ ಉದ್ಯೋಗಗಳಿಗೆ ಉತ್ತೇಜನ ನೀಡಿದವು. ಕ್ರೈಸ್ತ ಮಿಷನರಿಗಳಿಂದ ಮತಾಂತರ ಪಡೆದು ಶಿಕ್ಷಣ ಪಡೆದವರು ಬ್ರಾಹ್ಮಣರನ್ನು ವಿರೋಧಿಸಲು ಮುಂದಾದರು. 'ಮಲೆಯಾಳಿ ಮೆಮೋರಿಯಲ್' ಎಂಬ ಮನವಿಯನ್ನು ಕೊಡುವುದರ ಮೂಲಕ ಬ್ರಾಹ್ಮಣರ ವಿರುದ್ಧ ಚಳುವಳಿಯನ್ನು ನಡೆಸಿದರು. ಶ್ರೀ ನಾರಾಯಣಗುರು ಅವರು ಧರ್ಮ ಪರಿಪಾಲನಾ ಚಳುವಳಿ, ನಾಯರ್ ಸರ್ವಿಸ್ ಸೊಸೈಟಿ ಎಂಬ ಸಂಘಟನೆಗಳನ್ನು ಕಟ್ಟಿ ಕೆಳವರ್ಗದ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಕಾಲಕ್ರಮೇಣ ಕೇರಳದಲ್ಲಿ ಬ್ರಾಹ್ಮಣೇತರ ಚಳುವಳಿಯು ಎಡಪಂಥೀಯ ನಿಲುವುಗಳನ್ನು ಪ್ರತಿಪಾದಿಸಿತು. ಆದ್ದರಿಂದ ಶೋಷಿತ ಸಮುದಾಯಗಳನ್ನು ಬೆಳೆಸಲು ಮುಂದಾದವು.

ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣರು ಉನ್ನತ ಹುದ್ದೆಯಲ್ಲಿದ್ದರು. ಇದನ್ನು ವಿರೋಧಿಸಿ ಮದ್ರಾಸ್ ಚಳುವಳಿಯ ಪ್ರಭಾವದಿಂದ ಮೈಸೂರಿನಲ್ಲಿ ಬ್ರಾಹ್ಮಣೇತರ ಚಳುವಳಿ ಹುಟ್ಟಿಕೊಂಡಿತು. ಲಿಂಗಾಯತರು 'ಮೈಸೂರು ಲಿಂಗಾಯತ ಶಿಕ್ಷಣ ನಿಧಿ ಸಂಘ' ಮತ್ತು ಒಕ್ಕಲಿಗರು 'ಒಕ್ಕಲಿಗರ ಸಂಘ'ವನ್ನು ಸ್ಥಾಪಿಸಿ ಹಾಗೂ 'ಮಹಮದೀಯ ಕೇಂದ್ರ ಸಂಘ'ವನ್ನು ಸ್ಥಾಪಿಸಿ ಮೈಸೂರಿನಲ್ಲಿ ಬ್ರಾಹ್ಮಣೇತರ ಚಳುವಳಿಗೆ ಚಾಲನೆ ನೀಡಲಾಯಿತು. ಈ ಚಳುವಳಿಯ ಪ್ರಭಾವದಿಂದ ಮೈಸೂರಿನಲ್ಲಿ ಮಿಲ್ಲರ್ ಸಮಿತಿಯು ನೀಡಿದ ಶಿಫಾರಸ್ಸಿನಿಂದ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದ ಎಲ್ಲಾ ಜಾತಿಗಳಿಗೆ ಸರಕಾರದ ಮೀಸಲಾತಿಯನ್ನು ನೀಡಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳನ್ನು ತೆರೆಯಲಾಯಿತು. ಈ ಚಳುವಳಿಯು ಪ್ರಾರಂಭದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಯಾಗಿ ಮುಂದುವರಿದಿತ್ತು. ನಂತರ ರಾಜಕೀಯ ಅಧಿಕಾರ ಮತ್ತು ಆಡಳಿತ ಸ್ಥಾನಗಳ ಕಡೆಗೆ ಆಸಕ್ತಿಯನ್ನು

ಬೆಳೆಸಿಕೊಂಡು ಹಿಂದುಳಿದ ವರ್ಗಗಳ ಬೆಳವಣಿಗೆಗೆ ಹೋರಾಟ ಮಾಡತೊಡಗಿತು.

ವೈದಿಕ ವಿರೋಧಿ ಪ್ರಜ್ಞೆಯು ಕನ್ನಡದ ವೈಚಾರಿಕತೆಯೊಳಗೆ ಬೆರೆತುಹೋಗಿದೆ. ಕನ್ನಡ ವೈಚಾರಿಕ ಚಿಂತನೆಯ ಬಹಳ ಮುಖ್ಯವಾದ ಒಂದು ಶಕ್ತಿಶಾಲಿ ಚಿಂತನೆಯಾಗಿ ಕ್ರಿಯಾಶೀಲವಾಗಿದೆ. ಇದು ಕನ್ನಡ ಸಾಹಿತ್ಯ, ಕರ್ನಾಟಕದ ಸಮಾಜ, ಕನ್ನಡ ಸಂಸ್ಕೃತಿ ಹಾಗೂ ನಾಡಿನ ರಾಜಕಾರಣದ ಬಹಳ ಮುಖ್ಯವಾದ ಒಂದು ಭಾಗವಾಗಿದೆ. ಈ ಚಿಂತನೆಯು ಕನ್ನಡ ಸಾಹಿತ್ಯದ ಆದಿಯಿಂದಲೂ ಕ್ರಿಯಾಶೀಲವಾಗಿದ್ದು, ಸಾಹಿತ್ಯದ ವಿವಿಧ ರೂಪಗಳನ್ನೂ ಮತ್ತು ಕಾಲಕಾಲಕ್ಕೆ ಸಾಹಿತ್ಯದ ಜನತಾ ಆಶಯಗಳನ್ನೂ ಒಳಗೊಂಡು ಬೆಳೆದಿದೆ. ಇದಲ್ಲದೆ ಕಲೆ, ಸಂಗೀತ, ರಂಗಕಲೆ ಇತ್ಯಾದಿ ಕ್ಷೇತ್ರಗಳಲ್ಲಿ ತನ್ನ ಪರಿಣಾಮಗಳನ್ನು ಬೀರಿದೆ. ಈ ಚಿಂತನೆಯು ಕರ್ನಾಟಕದ ಸಮಾಜದಲ್ಲಿ ಅನಾದಿ ಕಾಲದಿಂದ ಮುಚ್ಚಿಟ್ಟಿದ್ದ ಹಲವು ಅಸಮಾನತೆಗಳನ್ನು, ಅನ್ಯಾಯಗಳನ್ನು ಮತ್ತು ಶೋಷಣೆಯ ವಿವಿಧ ವಿನ್ಯಾಸಗಳನ್ನು ತೆರೆದುತೋರಿಸಿದೆ. ಕರ್ನಾಟಕದಲ್ಲಿ ಹಲವು ಪ್ರಗತಿಪರ ಚಳುವಳಿಗಳಿಗೆ ಹಾಗೂ ಹೋರಾಟಗಳಿಗೆ ವೈಚಾರಿಕ ದ್ರವ್ಯವನ್ನು ಕೊಟ್ಟಿದೆ.

ಸ್ವಾತಂತ್ರ್ಯೋತ್ತರ ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅದುವರೆಗೆ ಮುಂಚೂಣಿಗೆ ಬಾರದಿದ್ದ ಹಲವು ವಸ್ತುವಿಷಯಗಳ ಗ್ರಹಿಕೆಗೆ ತಕ್ಕ ಬುನಾದಿಯನ್ನು ಹಾಕಿದೆ. ಅದು ದಲಿತಸಮಸ್ಯೆ ಇರಬಹುದು, ಮಹಿಳಾಸಮಸ್ಯೆ ಇರಬಹುದು, ಕಾರ್ಮಿಕರ ಸಮಸ್ಯೆ ಇರಬಹುದು, ಅಸ್ಪೃಶ್ಯತೆಯ ಸಮಸ್ಯೆ ಇರಬಹುದು, ಪ್ರಾದೇಶಿಕ ಅಸಮಾನತೆಯ ಪ್ರಶ್ನೆ ಇರಬಹುದು, ದೇಸಿ ಸಂಸ್ಕೃತಿಯ ಪ್ರಶ್ನೆ ಇರಬಹುದು, ದಲಿತ ಚರಿತ್ರೆಯ ಪ್ರಶ್ನೆ ಇರಬಹುದು. ಇಂತಹ ಹತ್ತು ಹಲವು ಸಮಸ್ಯೆಗಳನ್ನು ಹೊಸದಾಗಿ ನೋಡಲು ಮತ್ತು ಹೊಸದಾಗಿ ಗ್ರಹಿಸಲು ವೈದಿಕ ವಿರೋಧಿ ಪ್ರಜ್ಞೆಯು ಸಹಾಯ ಮಾಡಿದೆ.

೧.೧. ಅಧ್ಯಯನದ ಉದ್ದೇಶಗಳು

ಒಂದು

ಆಧುನಿಕ ಕನ್ನಡ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯನ್ನು ಗ್ರಹಿಸಿರುವ ಕ್ರಮಗಳನ್ನು ಕುರಿತು ಚರ್ಚೆ ಮಾಡುವುದು.

ಎರಡು

ಆಧುನಿಕ ಕನ್ನಡ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯನ್ನು ಅಭಿವ್ಯಕ್ತಿಸಿರುವ ಕ್ರಮಗಳನ್ನು ಕುರಿತು ಚರ್ಚೆ ಮಾಡುವುದು.

ಮೂರು

ಆಧುನಿಕ ಕನ್ನಡ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯನ್ನು ರೂಪಿಸಿಕೊಳ್ಳಲು ಪಡೆದಿರುವ ಪ್ರೇರಣೆ ಹಾಗೂ ಪ್ರಭಾವಗಳನ್ನು ಕುರಿತು ಕುರಿತು ಚರ್ಚೆ ಮಾಡುವುದು.

ನಾಲ್ಕು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾಗಿರುವ ವೈದಿಕ ವಿರೋಧಿ ಪ್ರಜ್ಞೆಯ ಸ್ವರೂಪಗಳನ್ನು ಕುರಿತು ಚರ್ಚೆ ಮಾಡುವುದು.

ಐದು

ಆಧುನಿಕ ಕನ್ನಡ ಸಾಹಿತ್ಯವು ಭಾಷಿಕ ನೆಲೆಯಲ್ಲಿ, ಶಿಕ್ಷಣ ಮತ್ತು ಪ್ರಭುತ್ವದ ನೆಲೆಯಲ್ಲಿ ಪ್ರಕಟಿಸಿರುವ ವೈದಿಕ ವಿರೋಧಿ ಪ್ರಜ್ಞೆಯ ಸ್ವರೂಪಗಳನ್ನು ಕುರಿತು ಚರ್ಚೆ ಮಾಡುವುದು.

೧.೨. ಅಧ್ಯಯನದ ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ವೈದಿಕ ವಿರೋಧಿ ಪ್ರಜ್ಞೆಯ ಮುಖ್ಯ ನೆಲೆಗಳನ್ನು ಕುರಿತು ಪರಿಶೀಲಿಸುವುದು ಹಾಗೂ ಚರ್ಚಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಸ್ವರೂಪವಾಗಿದೆ. ಆಧುನಿಕ ಸಾಹಿತ್ಯವು ಪ್ರಮಾಣದ ದೃಷ್ಟಿಯಿಂದ ಬಹಳ ಬೃಹತ್ ಆದುದು. ಅದರ ವ್ಯಾಪ್ತಿ ಬಹಳ ದೊಡ್ಡದು. ಸಾಹಿತಿಗಳ ಸಂಖ್ಯೆ, ಕೃತಿಗಳ ರಾಶಿ ಇವುಗಳ್ನು ಕಲ್ಪಿಸಿಕೊಂಡರೆ ಅದರ ಬೃಹತ್ ಪ್ರಮಾಣ ನಮ್ಮ ಗಮನಕ್ಕೆ ಬರುತ್ತದೆ. ಆ ಎಲ್ಲಾ ಕೃತಿರಾಶಿಯನ್ನು ಕುರಿತು ಸಂಶೋಧನೆ ಮಾಡಲು ಸಾಧ್ಯವಿಲ್ಲ ಅಥವಾ ಅಂತಹ ಒಂದು ಅಕಡೆಮಿಕ್ ಪ್ರಯತ್ನ ಒಂದು ಪಿಎಚ್.ಡಿ. ಸಂಶೋಧನೆಯನ್ನು ಮೀರಿದ್ದು. ಈ ದೃಷ್ಟಿಯಿಂದ ಅಧ್ಯಯನವನ್ನು ಒಂದು ಚೌಕಟ್ಟಿಗೆ ಒಳಪಡಿಸುವ ದೃಷ್ಟಿಯಿಂದ ಕೆಲವು ಬರಹಗಾರರನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯವೂ ಜೊತೆಗೆ ಅಗತ್ಯವೂ ಆಗಿದೆ. ಹೀಗೆ ಆಯ್ಕೆ ಮಾಡಿಕೊಳ್ಳದಿದ್ದರೆ ಅಧ್ಯಯನವು ಕೇವಲ ಸಾರಸಂಗ್ರಹದ ಒಂದು ಸಾಮಾನ್ಯ ವರದಿಯಾಗುವ ಅಪಾಯವಿರುತ್ತದೆ. ಈ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು, ಕನ್ನಡದ ಬಹಳ ಮಹತ್ವದ ಮೂರು ಜನ ಲೇಖಕರನ್ನು ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅವರುಗಳೆಂದರೆ, ೧. ಕುವೆಂಪು, ೨. ಪೂರ್ಣಚಂದ್ರ ತೇಜಸ್ವಿ ಮತ್ತು ೩. ದೇವನೂರ ಮಹಾದೇವ.

ಆಯ್ಕೆಗೆ ಕಾರಣಗಳು

ಕುವೆಂಪು

ಕುವೆಂಪು ಅವರು ನವೋದಯ ಕಾಲದ ಮತ್ತು ಇಡೀ ಆಧುನಿಕ ಕನ್ನಡ ಸಾಹಿತ್ಯದ ಬಹಳ ಮುಖ್ಯವಾದ ಪ್ರತಿಭೆ. ಪಾಶ್ಚಾತ್ಯ, ಪೌರಾತ್ಯ, ಪ್ರಾಚೀನ ಮತ್ತು ಆಧುನಿಕ ತತ್ವಶಾಸ್ತ್ರ, ಕಲೆ, ಸಾಹಿತ್ಯ, ಸಂಸ್ಕೃತಿ, ವಿಚಾರವಾದ, ವೈಜ್ಞಾನಿಕ ಗ್ರಹಿಕೆ, ಕಾವ್ಯಮೀಮಾಂಸೆ ಮುಂತಾದುಗಳಿಂದ ಕುವೆಂಪು ಅವರು ಪ್ರಭಾವಿತರಾದವರು. ಪಾಶ್ಚಾತ್ಯ ಕಲೆ, ಸಾಹಿತ್ಯ, ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆಗಳಿಂದ ಪ್ರಭಾವಿತರಾದವರು. ಜೊತೆಗೆ ಅದನ್ನು ವಿಮರ್ಶಾತ್ಮಕವಾಗಿ ಗ್ರಹಿಸಿದವರು. ಭಾರತದ ವೈದಿಕ ಹಾಗೂ ಅವೈದಿಕ ಪರಂಪರೆಗಳಿಂದ ಪ್ರಭಾವಿತರಾದವರು ಜೊತೆಗೆ ಅದನ್ನು ವಿಮರ್ಶಾತ್ಮಕವಾಗಿ

ಗ್ರಹಿಸಿದವರು. ಅದೇ ರೀತಿಯಲ್ಲಿ ಪ್ರಾಚೀನ ಕನ್ನಡ ಕಾವ್ಯಗಳಿಂದ, ಅದರ ಕಾವ್ಯಮೀಮಾಂಸೆಯಿಂದ ಪ್ರಭಾವಿತರಾದವರು ಜೊತೆಗೆ ಅದನ್ನು ವಿಮರ್ಶಾತ್ಮಕವಾಗಿ ಗ್ರಹಿಸಿದವರು.

ನವೋದಯ ಸಾಹಿತ್ಯವು ಅತ್ಯಂತ ಸ್ಥೂಲವಾಗಿ ವೈದಿಕ ಪ್ರಜ್ಞೆಯ ವ್ಯಾಪ್ತಿಯಲ್ಲಿ ಕ್ರಿಯಾಶೀಲವಾಗಿದ್ದಾಗ, ಕುವೆಂಪು ಅವರು ತಮ್ಮ ಕೃತಿ ದರ್ಶನಗಳ ಮೂಲಕ, ತಾವು ತಮ್ಮ ಕೃತಿಗಳ ಮೂಲಕ ರೂಪಿಸಿದ ಜೀವನ ನಿರ್ದೇಶನದ ಮೂಲಕ ಹಾಗೂ ತಮ್ಮ ಸೃಜನಶೀಲತೆಯನ್ನು ರೂಪಿಸಲು ಪ್ರಯೋಗಿಸಿದ ಭಾಷೆಯ ಮೂಲಕ ಅವೈದಿಕ ಪ್ರಜ್ಞೆಯನ್ನು ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ಶೋಧಿಸಿದರು. ತಾವು ರಚನೆ ಮಾಡಿದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವೈದಿಕ ಪ್ರಜ್ಞೆಯನ್ನು ಗಟ್ಟಿಗೊಳಿಸಿದರು. ತದನಂತರದ ದಿನಗಳಲ್ಲಿ ಕರ್ನಾಟಕದಲ್ಲಿ ಹಾಗೂ ವಿಸ್ತರಿಸಿ, ಭಾರತದಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ರಂಗದಲ್ಲಿ ತಾನು ಕ್ರಿಯಾಶೀಲವಾದಾಗ ಕುವೆಂಪು ಅವರು ಸೃಷ್ಟಿಸಿದ ಈ ಪ್ರಜ್ಞೆಗೆ ಹೆಚ್ಚು ಹೆಚ್ಚು ಮಹತ್ವ ಬಂದುದನ್ನು ನಾವು ಕಾಣುತ್ತೇವೆ.

ವೈದಿಕ ವಿರೋಧಿ ಪ್ರಜ್ಞೆಯನ್ನು ರೂಪಿಸಿದ ಕುವೆಂಪು ಅವರ ಸಾಹಿತ್ಯದಿಂದ ತದನಂತರದ ಕನ್ನಡ ಸಾಹಿತಿಗಳು ಪ್ರೇರಣೆ ಹಾಗೂ ಪ್ರಭಾವ ಪಡೆದರು ಎಂಬುದು ಕುವೆಂಪು ಅವರು ಸೃಷ್ಟಿಸಿದ ವೈದಿಕ ವಿರೋಧಿ ಪ್ರಜ್ಞೆಯ ಮಹತ್ವವನ್ನು ನಮಗೆ ತೋರಿಸುತ್ತದೆ. ಹೀಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರು ವೈದಿಕ ವಿರೋಧಿ ಪ್ರಜ್ಞೆಯನ್ನು ಕಟ್ಟಿದ್ದು, ರೂಪಿಸಿದ್ದು ಕೇವಲ ಅವರ ಕೃತಿಗಳ ವ್ಯಾಪ್ತಿಗೆ ಮಾತ್ರ ಸೀಮಿತವಾಗಲಿಲ್ಲ ಎಂಬುದು ನಾಡಿನ ಸಾಂಸ್ಕೃತಿಕ ಸಂಗತಿಗಳಲ್ಲಿ ಬಹಳ ಮುಖ್ಯವಾದುದು ಎಂಬುದನ್ನು ಗಮನಿಸಬೇಕು. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನಕ್ಕೆ ಕುವೆಂಪು ಅವರ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಪೂರ್ಣಚಂದ್ರ ತೇಜಸ್ವಿ

ಪೂರ್ಣಚಂದ್ರ ತೇಜಸ್ವಿಯವರು ಕನ್ನಡದ ನವ್ಯ ಸಾಹಿತ್ಯದ ಸಂದರ್ಭದಲ್ಲಿ ತಮ್ಮ ಸಾಹಿತ್ಯ ರಚನೆಯನ್ನು ಆರಂಭಿಸಿದರು. ಅವರು ತಾವು ಸಾಹಿತ್ಯ ಕೃಷಿಯನ್ನು ಆರಂಭಿಸಿದಾಗ ಕನ್ನಡದಲ್ಲಿ ನವ್ಯ ಸಾಹಿತ್ಯ ಪರಾಕಾಷ್ಠೆಯಲ್ಲಿತ್ತು. ಜೊತೆಗೆ ತೇಜಸ್ವಿ ಅವರು ತಮ್ಮ ಮೊದಲ ಕೆಲವು ಬರವಣಿಗೆಗಳಲ್ಲಿ ನವ್ಯದ ಛಾಯೆಗಳನ್ನು ಹೊಂದಿದವರಾಗಿದ್ದಾರೆ. ಅನಂತರದ ದಿನಗಳಲ್ಲಿ ಕನ್ನಡದ ನವ್ಯ ಸಾಹಿತ್ಯವು ಇಂಗ್ಲಿಷ್ ಅಧ್ಯಾಪಕರಿಂದ ಕೂಡಿದೆ ಹಾಗೂ ಪಾಶ್ಚಾತ್ಯ ಸಾಹಿತ್ಯ ಆಕೃತಿ ಹಾಗೂ ಅಭಿವ್ಯಕ್ತಿಗಳ ಸ್ವರೂಪದಲ್ಲಿ ಇದೆ ಎಂಬುದನ್ನು ಅವರು ಕಂಡುಕೊಂಡರು. ಮುಂದೆ ಅವರು ನವ್ಯ ಸಾಹಿತ್ಯದ ಮಿತಿಗಳನ್ನು ಹಾಗೂ ಅದರ ಬಿಕ್ಕಟ್ಟುಗಳನ್ನು ತಮ್ಮ ಅಬಚೂರಿನ ಪೋಸ್ಟಾಫೀಸು ಕೃತಿಗೆ ಬರೆದ ಮುನ್ನುಡಿಯಲ್ಲಿ ಪ್ರಸ್ತಾಪ ಮಾಡಿದರು. ತದನಂತರದ ದಿನಗಳಲ್ಲಿ ಅವರು ನವ್ಯದ ಹಿಡಿತದಿಂದ ಬಿಡಿಸಿಕೊಂಡರು. ಅದರ ಅಭಿವ್ಯಕ್ತಿ ವಿಧಾನಗಳಿಂದ ಬಿಡಿಸಿಕೊಂಡರು. ನವ್ಯ ಕೃತಿಗಳ ರಚನೆಗಿಂತ ಭಿನ್ನವಾದ ರಚನೆಗಳನ್ನು ಅವರು ಮಾಡಿದರು. ಆ ಮೂಲಕ ಕನ್ನಡದಲ್ಲಿ ನವ್ಯ ಸಾಹಿತ್ಯದ ವಸ್ತು

ಮತ್ತು ಆಕೃತಿಗೆ ಚಲನಶೀಲತೆಯನ್ನು ಉಂಟುಮಾಡಿದರು. ತಮ್ಮ ಸುತ್ತಮುತ್ತ ನಡೆಯುವ, ಸ್ಥಳೀಯ ಪರಿಸರದ ವಿಷಯಗಳನ್ನು ಕುರಿತು ಸಾಹಿತ್ಯವನ್ನು ರೂಪಿಸುತ್ತಾ ಹೋದರು.

ಕನ್ನಡ ನವ್ಯ ಸಾಹಿತ್ಯದಲ್ಲಿ ವೈದಿಕ ಪ್ರಜ್ಞೆಯು ಬಹಳ ದಟ್ಟವಾಗಿ ಕೆಲಸ ಮಾಡುತ್ತಿತ್ತು. ಇದರಿಂದ ಪೂರ್ಣಚಂದ್ರ ತೇಜಸ್ವಿ ಅವರು ಬೇಸತ್ತು ಹೋಗಿದ್ದರು. ಆ ಧೋರಣೆಯಿಂದ ಕನ್ನಡ ಸಾಹಿತ್ಯವನ್ನು ಪಾರು ಮಾಡುವುದು ಹೇಗೆ ಎಂದು ತೇಜಸ್ವಿ ಅವರು ಅನೇಕ ಸಲ ಆಲೋಚನೆ ಮಾಡಿದ್ದಾರೆ. ಅವರ ಪ್ರಸಿದ್ಧವಾದ ಲೇಖನ "ಕರ್ನಾಟಕ ಸಂಸ್ಕೃತಿಯ ವಿಶ್ಲೇಷಣೆ" ಎಂಬುದು. ಈ ಲೇಖನವು ಯು.ಆರ್. ಅನಂತಮೂರ್ತಿ ಅವರು "ಭಾರತೀಯ ಸಂಸ್ಕೃತಿ ಮತ್ತು ಲೇಖಕ" ಎಂಬ ಲೇಖನಕ್ಕೆ ಒಂದು ವಿಮರ್ಶಾತ್ಮಕ ಪ್ರತಿಕ್ರಿಯೆಯಾಗಿ ಬರೆದ ಲೇಖನ. ತೇಜಸ್ವಿಯವರ ಈ ಲೇಖನದಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ತಾತ್ವಿಕ ಗಟ್ಟಿತನದಿಂದ ಕೂಡಿದೆ. ಪ್ರಸ್ತುತ ಲೇಖನವು ಆ ಮುಂದಿನ ಕನ್ನಡದ ವೈಚಾರಿಕ, ವಿಮರ್ಶಾತ್ಮಕ ಬರವಣಿಗೆಗಳನ್ನು ದೊಡ್ಡ ಮಟ್ಟದಲ್ಲಿ ಪ್ರಭಾವಿಸಿದೆ ಎಂಬುದು ಒಂದು ಕಡೆ ಆ ಲೇಖನದ ಮಹತ್ವವನ್ನೂ; ಮತ್ತೊಂದು ಕಡೆ ತೇಜಸ್ವಿಯವರ ವೈದಿಕ ವಿರೋಧಿ ಪ್ರಜ್ಞೆಯನ್ನೂ ನಮಗೆ ಒಟ್ಟೊಟ್ಟಿಗೆ ಕೊಡುತ್ತವೆ.

ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ ಸಾಹಿತ್ಯ ಹಾಗೂ ಬದುಕಿನಲ್ಲಿ ಸಂಪೂರ್ಣ ವೈದಿಕ ವಿರೋಧಿ ನಿಲುವಿನವರಾಗಿದ್ದರು. ಕುವೆಂಪು ಅವರು ಭಾರತದ ತತ್ವಶಾಸ್ತ್ರದಿಂದ ಪ್ರಭಾವಿತರಾಗಿ ಪುನರ್‌ಜನ್ಮದ ಬಗೆಗೆ ನಂಬಿಕೆಯುಳ್ಳವರಾಗಿದ್ದರು. ಆದರೆ ತೇಜಸ್ವಿಯವರು ಅದನ್ನೂ ಕೂಡ ನಂಬುತ್ತಿರಲಿಲ್ಲ. ಅಷ್ಟರಮಟ್ಟಿಗೆ ತೇಜಸ್ವಿಯವರಿಗೆ ವೈದಿಕ ವಿರೋಧಿ ಪ್ರಜ್ಞೆ ಇತ್ತು. ಈ ದೃಷ್ಟಿಯಿಂದ ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯವನ್ನು ಪ್ರಸ್ತುತ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ದೇವನೂರ ಮಹಾದೇವ

ದೇವನೂರ ಮಹಾದೇವ ಅವರು ಕನ್ನಡದ ವಿಶಿಷ್ಟವಾದ, ಅನನ್ಯವಾದ ಪ್ರತಿಭೆ ಇರುವ ಲೇಖಕ. ಸಾಹಿತ್ಯದಲ್ಲಿ ಹೇಗೋ ಹಾಗೆ ಬದುಕಿನಲ್ಲೂ ಬದ್ಧತೆಯನ್ನು ಇಟ್ಟುಕೊಂಡವರು. ಕನ್ನಡದ ನವ್ಯ ಸಾಹಿತ್ಯದ ಕಾಲದಲ್ಲಿ ಸಣ್ಣ ಕಥೆಗಳನ್ನು ಬರೆಯುವ ಮೂಲಕ ತಮ್ಮ ಸಾಹಿತ್ಯ ಕೃಷಿಯನ್ನು ಆರಂಭಿಸಿದವರು. ಅವರ ಮೊದಲ ಕತೆಗಳಾದ ಗ್ರಸ್ತರು, ಒಂದು ದಹನದ ಕತೆ ಮತ್ತು ದತ್ತ, ಈ ಕಥೆಗಳು ನವ್ಯ ಮಾದರಿಯ ಕಥೆಗಳು. ಅನಂತರದಲ್ಲಿ ಅವರು ನವ್ಯ ಸಾಹಿತ್ಯ ರಚನೆಯ ವಿನ್ಯಾಸದಿಂದ ಬಿಡಿಸಿಕೊಂಡು, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸದಾಗಿ ಕಥೆ ಹೇಳುವ ಹಾಗೂ ಕಾದಂಬರಿಗಳನ್ನು ಸೃಷ್ಟಿಸುವ ಕಲಾತ್ಮಕತೆಯನ್ನು ರೂಪಿಸಿದರು. ಈ ಆಯಾಮದಲ್ಲಿ ದೇವನೂರ ಮಹಾದೇವ ಅವರಿಗೆ ಅವರೇ ಸಾಟಿ ಎನ್ನುವಂತೆ ಕನ್ನಡ ಸಾಹಿತ್ಯ ವಿಮರ್ಶೆ ಅಭಿಪ್ರಾಯ ಪಟ್ಟಿದೆ.

ದೇವನೂರ ಮಹಾದೇವರ ಕಥೆಗಳು ಮತ್ತು ಕಾದಂಬರಿಗಳಲ್ಲಿ ಹಾಗೂ ಗದ್ಯ ಬರವಣಿಗೆಗಳಲ್ಲಿ ವಸ್ತುಗಳಿರಬಹುದು, ಅಭಿವ್ಯಕ್ತಿಯ ಕ್ರಮಗಳಿರಬಹುದು, ಅವು ಬಹುತೇಕ ವೈದಿಕ ಚೌಕಟ್ಟಿಗೆ

ವಿರುದ್ಧವಾಗಿರುವಂತಹವು. ಹಾಗಾಗಿಯೇ ಅವರು ಗದ್ಯ-ಪದ್ಯ ಮಿಶ್ರಿತವಾದ, ಸಂಗೀತಮಯವಾದ ಕುಸುಮಬಾಲೆಯಂತಹ ಕೃತಿಯನ್ನು ಬರೆಯಲು ಸಾಧ್ಯವಾಯಿತು. ಇವರ ಸಾಹಿತ್ಯದಲ್ಲಿ, ಭಾಷಣಗಳಲ್ಲಿ ಹಾಗೂ ಇತ್ತೀಚೆಗೆ ಅವರು ಮಾಡುತ್ತಿರುವ ಹೋರಾಟಗಳಲ್ಲಿ ಕೂಡಾ ವೈದಿಕ ವಿರೋಧಿ ಪ್ರಜ್ಞೆಯು ಹೆಚ್ಚು ಹೆಚ್ಚಾಗಿ ಕೆಲಸ ಮಾಡುತ್ತಿದೆ. ದೇವನೂರರ ಸಮಕಾಲೀನರಾದ ಅನೇಕ ಸಾಹಿತಿಗಳು ವೈದಿಕ ವಿರೋಧಿ ಪ್ರಜ್ಞೆಯನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ತಂದಿದ್ದಾರೆ. ಆದರೆ ಅಂತಹ ಕೃತಿಗಳು ಅನೇಕ ಕಡೆಗಳಲ್ಲಿ ಎಲ್ಲೋ ಒಂದು ಕಡೆ ಸಾಹಿತ್ಯದ ಆಚೆಗಿನ ಬರಿಯ ಹೇಳಿಕೆಗಳಾಗಿಯೋ ಅಥವಾ ಕಪ್ಪು-ಬಿಳುಪು ಪಾತ್ರಗಳಾಗಿಯೋ ಬಂದುದುಂಟು. ಆದರೆ ದೇವನೂರ ಮಹಾದೇವರ ಸಾಹಿತ್ಯದಲ್ಲಿ ಇಂತಹ ಮಿತಿಗಳು ಕಾಣುವುದಿಲ್ಲ. ಈ ದೃಷ್ಟಿಯಿಂದ ದೇವನೂರರ ಸಾಹಿತ್ಯವನ್ನು ಪ್ರಸ್ತುತ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

೧.೩. ಅಧ್ಯಯನದ ವಿಧಾನ

ಈ ಪ್ರಬಂಧದ ಉದ್ದೇಶಗಳಿಗೆ ಮತ್ತು ಅಧ್ಯಾಯಗಳ ವಿಭಾಗಕ್ಕೆ ಅನುಗುಣವಾಗಿ ಇದುವರೆಗೆ ವೈದಿಕ ವಿರೋಧಿ ಪ್ರಜ್ಞೆ ಕುರಿತು ನಡೆದಿರುವ ಅಧ್ಯಯನಗಳನ್ನು ಸಮೀಕ್ಷೆ ಮಾಡುವಾಗ ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗುವುದು. ನಿರ್ದಿಷ್ಟವಾಗಿ ವೈದಿಕ ವಿರೋಧಿ ಕುರಿತು ಚರ್ಚೆ ಮಾಡುವಾಗ, ಇದರ ಸ್ವರೂಪಕ್ಕೆ ತಕ್ಕ ಹಾಗೆ ಕೆಲವು ಕಡೆ ವಿಚಾರ ಸಂಗ್ರಹ, ವಿವರಣಾತ್ಮಕ ವಿಧಾನವನ್ನು ಮತ್ತು ಕೆಲವು ಕಡೆಗಳಲ್ಲಿ ವಿಶ್ಲೇಷಣಾತ್ಮಕ ವಿಧಾನವನ್ನು ಈ ಸಂಶೋಧನೆಗೆ ಅಳವಡಿಸಿಕೊಳ್ಳಲಾಗಿದೆ.

೧.೪. ಅಧ್ಯಯನದ ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆ ಎಂಬ ವಿಷಯವನ್ನು ಕುರಿತ ಪ್ರಸ್ತುತ ಸಂಶೋಧನಾ ಬರವಣಿಗೆಯಲ್ಲಿ, ಪದ್ಧತಿಯ ಪ್ರಕಾರ ಮೊದಲ ಅಧ್ಯಾಯವು ಇದರ ಪ್ರಸ್ತಾವನೆಯಾಗಿರುತ್ತದೆ. ಇದರಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೇಗೆ ರೂಪುಗೊಂಡಿದೆ ಎಂಬುದರ ಒಂದು ಸ್ಥೂಲ ನೋಟದಿಂದ ಇದು ಆರಂಭವಾಗಿದೆ. ಇದು ಮುಂದುವರಿದು, ಮಧ್ಯಕಾಲೀನ ಸಾಹಿತ್ಯ, ಮುಂದಿನ ಆಧುನಿಕ ಸಾಹಿತ್ಯದಲ್ಲಿ ಇದು ಹೇಗೆ ಪ್ರಕಟವಾಗಿದೆ ಎಂಬುದರ ಸಂಕ್ಷಿಪ್ತವಾದ ಚರ್ಚೆ ಇದೆ. ಜೊತೆಗೆ ಇದರ ಚರ್ಚೆಯನ್ನು ಆಧುನಿಕ ಚಳುವಳಿಗಳವರೆಗೆ ವಿಸ್ತರಿಸಲಾಗಿದೆ. ಕರ್ನಾಟಕದ ಕೆಲವು ಪ್ರಗತಿಪರ ಚಳುವಳಿಗೂ ಕೂಡ ವೈದಿಕ ವಿರೋಧಿ ಪ್ರಜ್ಞೆಯನ್ನು ಹಿನ್ನೆಲೆಯಾಗಿಟ್ಟುಕೊಂಡು, ಅದನ್ನು ತನ್ನ ವೈಚಾರಿಕತೆ ಮತ್ತು ಹೋರಾಟದಲ್ಲಿ ಕ್ರಿಯಾಶೀಲಗೊಳಿಸಿದೆ ಎಂಬ ಕಾರಣವು ಇಲ್ಲಿ ಮುಖ್ಯವಾಗಿದೆ.

ಎರಡನೇ ಅಧ್ಯಾಯವು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯಾಗಿದೆ. ಪ್ರಸ್ತುತ ಸಂಶೋಧನೆಯು ಆಯ್ಕೆ ಮಾಡಿಕೊಂಡಿರುವ ಕೃತಿಕಾರರ ಸಾಹಿತ್ಯದ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಅವೆಲ್ಲವನ್ನೂ ಸಮೀಕ್ಷೆ ಮಾಡುವುದು ಈ ಅಧ್ಯಾಯದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ನಿರ್ದಿಷ್ಟವಾಗಿ ವೈದಿಕ ವಿರೋಧಿ ನೆಲೆಯಲ್ಲಿ ಅಥವಾ ವೈದಿಕ ವಿರೋಧಿ ದೃಷ್ಟಿಕೋನದಲ್ಲಿ ನಡೆದಿರುವ ವಿಮರ್ಶೆಯ ವೈಚಾರಿಕತೆಯನ್ನು ಇದರಲ್ಲಿ ಪರಿಶೀಲನೆ ಮಾಡಲಾಗಿದೆ.

ಮೂರನೇ ಅಧ್ಯಾಯವು ಸಂಶೋಧನೆಯ ಪರಿಕಲ್ಪನೆಯ ಚರ್ಚೆಯಾಗಿದ್ದು, ಇದರಲ್ಲಿ ವೈದಿಕ ಪ್ರಜ್ಞೆಯ ಸ್ವರೂಪವನ್ನು ಮೊದಲು ಸಮೀಕರಿಸಿಕೊಂಡು, ನಂತರದ ಭಾಗದಲ್ಲಿ, ವೈದಿಕ ವಿರೋಧಿ ಪ್ರಜ್ಞೆಯು ಚಾರ್ವಾಕ, ಜೈನ ಬೌದ್ಧ ಹಾಗೂ ಆಧುನಿಕ ಚಿಂತನೆಗಳಲ್ಲಿ ಹೇಗೆ ಮೂಡಿದೆ ಎಂಬುದರ ಪರಿಶೀಲನೆ ಹಾಗೂ ಚರ್ಚೆ ಇದೆ. ಈ ಚಿಂತನಾಧಾರೆಗಳು ಪ್ರಾಚೀನ ಭಾರತದಲ್ಲಿ ವೈದಿಕ ವಿರೋಧಿ ಚಿಂತನೆಗಳನ್ನು ಬಹಳ ಗಟ್ಟಿಯಾಗಿ ಚರ್ಚೆ ಮಾಡಿವೆ. ಈ ಆಲೋಚನಾಧಾರೆಗಳ ಗ್ರಹಿಕೆಗಳು ಆಧುನಿಕ ಕಾಲದ ಅಥವಾ ವರ್ತಮಾನದಲ್ಲಿ ವೈದಿಕ ವಿರೋಧಿ ಪ್ರಜ್ಞೆಯನ್ನು ಕಟ್ಟಿಕೊಳ್ಳಲು ಬುನಾದಿಯನ್ನು ಹಾಕುತ್ತವೆ. ಈ ದೃಷ್ಟಿಯಿಂದ ಈ ಮೂರು ಚಿಂತನಾಧಾರೆಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಅಗತ್ಯವೂ; ಅನಿವಾರ್ಯವೂ ಆಗಿದೆ. ಇವು ವೈದಿಕ ವಿರೋಧಿ ಚಿಂತನೆಗಳಿಗೆ ಮೂಲಬೇರುಗಳು ಇದ್ದ ಹಾಗೆ. ಅಂದರೆ ವೈದಿಕ ವಿರೋಧಿ ಪ್ರಜ್ಞೆಗೆ ಭಾರತದಲ್ಲಿ ದೀರ್ಘವಾದ ಪರಂಪರೆ ಇದೆ ಎಂಬುದನ್ನು ಕಟ್ಟಿಕೊಳ್ಳುವುದು· ಈ ಭಾಗದ ಉದ್ದೇಶ ಅಲ್ಲ; ಇದರ ಬದಲು ನಮ್ಮ ಕಾಲದ ವೈದಿಕ ವಿರೋಧಿ ಚಿಂತನೆಗಳ ಮೂಲ ಬೇರುಗಳು ಪ್ರಾಚೀನ ತಾತ್ವಿಕ ಧಾರೆಗಳಲ್ಲಿ ಇವೆ; ಅಲ್ಲಿಂದ ತಾತ್ವಿಕ ಪ್ರೇರಣೆ ಪಡೆಯಬೇಕು ಎಂಬುದು ಈ ಚರ್ಚೆಯ ಮುಖ್ಯ ಗುರಿ.

ನಾಲ್ಕನೇ ಅಧ್ಯಾಯವು ಆಧುನಿಕ ಸಾಹಿತ್ಯದ ಭಾಷಿಕ ನೆಲೆಗಳನ್ನು ಕುರಿತದ್ದಾಗಿದೆ. ಸಾಹಿತ್ಯ ಕೃತಿಗಳಲ್ಲಿ ಸಾಹಿತ್ಯದ ವಸ್ತು, ಆಶಯಗಳು ಎಷ್ಟು ಮುಖ್ಯವೋ, ಅದರ ಭಾಷಿಕ ನೆಲೆಗಳೂ ಕೂಡಾ ಅಷ್ಟೇ ಮುಖ್ಯವಾದ ನೆಲೆ. ಯಾಕೆಂದರೆ ಸಾಹಿತ್ಯವು ಸಾಹಿತ್ಯವಾಗಿ ಅರಳುವುದೇ ತನ್ನ ಭಾಷಿಕ ಶರೀರದ ಮೂಲಕ. ಸಾಹಿತ್ಯವನ್ನು ಭಾಷೆಯಿಂದ ಬೇರ್ಪಡಿಸಲು ಆಗುವುದಿಲ್ಲ. ಈ ದೃಷ್ಟಿಯಲ್ಲಿ ವಿಶಿಷ್ಟವಾದ ಭಾಷಿಕ ರಚನೆಯೇ ಸಾಹಿತ್ಯ. ಸಾಹಿತ್ಯದ ಧೋರಣೆ, ಸಾಹಿತ್ಯದ ದೃಷ್ಟಿಗಳು ಅದರ ಭಾಷಿಕ ಅಭಿವ್ಯಕ್ತಿಯಲ್ಲಿ ಅಡಗಿರುತ್ತವೆ. ಆದ್ದರಿಂದ ಈ ಅಧ್ಯಾಯದಲ್ಲಿ ಇದರ ಬಗೆಗೆ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಶಿಕ್ಷಣದಲ್ಲಿ ವೈದಿಕ ಪ್ರಜ್ಞೆ ಹಾಗೂ ವೈದಿಕ ವಿರೋಧಿ ಪ್ರಜ್ಞೆಯ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದಾಗಿದೆ. ಶಿಕ್ಷಣವು ಸಮಾಜದಲ್ಲಿ ಒಂದು ಶಕ್ತಿಶಾಲಿಯಾದ ವೈಚಾರಿಕ ಮಾಧ್ಯಮವಾಗಿದೆ. ಪ್ರಭುತ್ವ ಹಾಗೂ ಸಂಸ್ಥೆಗಳು ತಮ್ಮ ಧೋರಣೆಗಳನ್ನು ಹಾಗೂ ದೃಷ್ಟಿಕೋನಗಳನ್ನು ಶಿಕ್ಷಣದ ಮೂಲಕ ಪ್ರಚಾರ ಮಾಡುತ್ತವೆ. ಭಾರತೀಯ ಸಮಾಜವು ಸಾಂಪ್ರದಾಯಿಕವಾಗಿ ವೈದಿಕ ಪ್ರಜ್ಞೆಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಇದು ಶಿಕ್ಷಣದ ಮೂಲಕ ಇರಬಹುದು; ಇಲ್ಲವೆ ಅದರ ಆಚೆಗಿನ ಕೆಲವು ಮಾಧ್ಯಮಗಳ ಮೂಲಕ ಕೂಡ ಇರಬಹುದು. ಶಿಕ್ಷಣದ ಆಚೆಗಿನ ಮಾಧ್ಯಮಗಳು ಎಂದರೆ, ಸುದ್ದಿ ಮಾಧ್ಯಮಗಳು ಎಂದು ಹೇಳಬಹುದು; ಮಠಮಾನ್ಯಗಳು ಎಂದು ಹೇಳಬಹುದು. ಇಲ್ಲೆಲ್ಲ ಅಪ್ರಯತ್ನಪೂರ್ವಕವಾಗಿ ವೈದಿಕ ಪ್ರಜ್ಞೆಯನ್ನು

ಪ್ರಚಾರ ಮಾಡಿ, ಅದನ್ನು ವಿವಿಧ ಆಯಾಮಗಳಲ್ಲಿ ಗಟ್ಟಿಗೊಳಿಸಲಾಗುತ್ತಿದೆ. ಈ ವೈದಿಕ ಪ್ರಜ್ಞೆಯನ್ನು ಎಲ್ಲರೂ ಪ್ರಶ್ನಾತೀತವಾಗಿ ಒಪ್ಪಿಕೊಳ್ಳುವಂತೆ ಮಾಡುವ ಹುನ್ನಾರ ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಗಿ ಮುಂದುವರಿದಿದೆ.

ಈಗ ಜಾರಿಯಲ್ಲಿರುವ ಶಿಕ್ಷಣವು ಬ್ರಿಟಿಷರ ಬಳುವಳಿ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಶಿಕ್ಷಣವೂ ಕೂಡ ಧರ್ಮನಿರಪೇಕ್ಷವಾಗಿ ಹಾಗೂ ಜಾತ್ಯತೀತವಾಗಿ ಇರಬೇಕಾಗುತ್ತದೆ. ಇದು ಯಾವುದೋ ಒಂದು ಧರ್ಮದ ಪರವಾಗಿ, ಯಾವುದೋ ಒಂದು ಜಾತಿಯ ಪರವಾಗಿ ಹಾಗೂ ಯಾವುದೋ ಒಂದು ವರ್ಗದ ಪರವಾಗಿದ್ದರೆ ಅದನ್ನು ನಾವು ಎಲ್ಲಾ ಆಯಾಮಗಳಿಂದಲೂ ಪ್ರಜಾತಾಂತ್ರಿಕ ಶಿಕ್ಷಣ ಎನ್ನಲು ಬರುವುದಿಲ್ಲ. ನಮಗೆ ಧರ್ಮನಿರಪೇಕ್ಷವಾದ ಸಮಾಜ ಬೇಕು ಎನ್ನುವವರು, ನಮಗೆ ಜಾತ್ಯತೀತವಾದ ಸಮಾಜ ಬೇಕು ಎನ್ನುವವರು ಇದೇ ದೃಷ್ಟಿಕೋನದಲ್ಲಿ ಶಿಕ್ಷಣವನ್ನು ಜಾರಿಗೊಳಿಸಬೇಕಾಗುತ್ತದೆ. ಯಾಕೆಂದರೆ ಶಿಕ್ಷಣವು ಒಂದು ಹೊಸ ತಲೆಮಾರನ್ನು ನಿರ್ಮಾಣ ಮಾಡುವಂತಹದ್ದು. ಶಿಕ್ಷಣವು ಒಂದು ಗಟ್ಟಿಯಾದ ಸಾಮಾಜಿಕ ಶಕ್ತಿ. ಇಂತಹ ಶಿಕ್ಷಣವನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೆ, ಶಿಕ್ಷಣದಲ್ಲಿ ಸಮಾಜದ ಎಂತಹ ಮೌಲ್ಯಗಳನ್ನು ಬಿತ್ತಿ ಬೆಳೆಯಬೇಕು ಎಂಬ ಭವಿಷ್ಯದ ಎಚ್ಚರಿಕೆಯನ್ನು ಇಟ್ಟುಕೊಳ್ಳದಿದ್ದರೆ; ಪ್ರಭುತ್ವವು ತನಗೆ ಬೇಕಾದ ಮೌಲ್ಯಗಳನ್ನು, ಪ್ರಜ್ಞೆಯನ್ನು ಶಿಕ್ಷಣದಲ್ಲಿ ತುಂಬಬಹುದು. ಇಂತಹ ಸಂದರ್ಭದಲ್ಲಿ ಪ್ರಜ್ಞಾವಂತ ಸಾಹಿತಿಗಳು, ಚಿಂತಕರು ಹೆಚ್ಚುವರಿ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಶಿಕ್ಷಣದಲ್ಲಿ ಯಾರ ಮೌಲ್ಯಗಳು ಇವೆ; ಯಾರ ಮೌಲ್ಯಗಳು ಇರಬೇಕು ಎಂದು ಆಲೋಚನೆ ಮಾಡಬೇಕಾಗುತ್ತದೆ. ಶಿಕ್ಷಣದಲ್ಲಿ ಕೇವಲ ಮೇಲುವರ್ಗದವರ, ಮೇಲುಜಾತಿಯವರ, ಒಂದು ಧರ್ಮದ ಹಾಗೂ ಪುರುಷರ ಆಲೋಚನೆಗಳು, ಅಭಿರುಚಿಗಳು, ಹಿತಾಸಕ್ತಿಗಳು, ಧೋರಣೆಗಳು, ಮೌಲ್ಯಗಳು ಹಾಗೂ ಪ್ರಜ್ಞೆಗಳು ತುಂಬಿದಾಗ; ಅದನ್ನು ಗುರುತಿಸಿ, ಅದರ ಅಪಾಯಗಳ ಬಗೆಗೆ ಗಂಭೀರವಾಗಿ ಚರ್ಚೆ ಮಾಡಬೇಕಾಗುತ್ತದೆ. ಜೊತೆಗೆ ಇದಕ್ಕೆ ಅತ್ಯಂತ ಸೂಕ್ತವಾದ ಪರ್ಯಾಯಗಳನ್ನು ಸೂಚಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಕುವೆಂಪು, ತೇಜಸ್ವಿ ಹಾಗೂ ದೇವನೂರ ಮಹಾದೇವ ಅವರು ಶಿಕ್ಷಣವನ್ನು ಕುರಿತು ಮಾಡಿರುವ ಆಲೋಚನೆಗಳನ್ನು, ಮಂಡಿಸಿರುವ ವಿಚಾರಗಳನ್ನು ಈ ಅಧ್ಯಾಯದಲ್ಲಿ ಪರಿಶೀಲನೆ ಮಾಡಲಾಗಿದೆ.

ಆರನೆಯ ಅಧ್ಯಾಯವು ವೈದಿಕ ಪ್ರಜ್ಞೆ ಹಾಗೂ ವೈದಿಕ ವಿರೋಧಿ ಪ್ರಜ್ಞೆಯನ್ನು ಪ್ರಭುತ್ವ ಹೇಗೆ ಗ್ರಹಿಸಿದೆ ಎಂಬುವುದರ ಕುರಿತ ವಿಚಾರಗಳನ್ನು ಚರ್ಚೆ ಮಾಡುವುದಾಗಿದೆ. ಪ್ರಭುತ್ವವು ಸಮಾಜದಲ್ಲಿ ಅಸಮಾನತೆ, ಅನ್ಯಾಯಗಳು ಇದ್ದರೆ ಅವುಗಳನ್ನು ಸಮರ್ಥಿಸಿ ಮುಂದುವರಿಸುತ್ತದೆ; ಜೊತೆಗೆ ತನ್ನ ಅಗತ್ಯಗಳಿಗೆ ಬೇಕಾದ ಅಸಮಾನತೆ ಹಾಗೂ ಅನ್ಯಾಯಗಳನ್ನು ಸೃಷ್ಟಿ ಮಾಡುತ್ತದೆ. ಜನರ ನಡುವೆ, ಸ್ತ್ರೀ ಪುರುಷರ ನಡುವೆ, ವಿವಿಧ ಧರ್ಮಗಳ ನಡುವೆ ಸಂಘರ್ಷವನ್ನು ಸೃಷ್ಟಿ ಮಾಡುತ್ತದೆ. ವಿಚಾರವಂತ ಸಾಹಿತಿಗಳು, ಬರಹಗಾರರು ಇವುಗಳ ಸೂಕ್ಷ್ಮಗಳನ್ನು ಗುರುತಿಸುತ್ತಾರೆ; ಆ ಕುರಿತು ಚರ್ಚೆ ಮಾಡುತ್ತಾರೆ; ಜೊತೆಗೆ ಅದಕ್ಕೆ ಪರಿಹಾರದ ಸಾಧ್ಯತೆಗಳನ್ನು ಸೂಚಿಸುತ್ತಾರೆ.

ಪ್ರಭುತ್ವವು ತಾನು ಏಕಮುಖವಾಗಿ ಯಜಮಾನಿಕೆಯನ್ನು ಮಾತ್ರ ಮುಂದುವರಿಸಿದಾಗ, ಕೇವಲ ಆಳ್ವಿಕೆಯನ್ನು ಮಾತ್ರ ನಡೆಸಿದಾಗ, ಪ್ರಜೆಗಳ, ದಲಿತರ, ಮಹಿಳೆಯರ ಹಾಗೂ ಜನಸಾಮಾನ್ಯರ ಬೇಕು–ಬೇಡಗಳಿಗೆ ಸರಿಯಾಗಿ ಸ್ಪಂದಿಸದೇ ಇದ್ದಾಗ ವಿಚಾರವಂತ ಸಾಹಿತಿಗಳು, ಬರಹಗಾರರು ಪ್ರಭುತ್ವದ ಇಂತಹ ನೀತಿಗಳನ್ನು, ಅನುಷ್ಠಾನಗಳನ್ನು ಗುರುತಿಸುತ್ತಾರೆ. ಜನಸಮುದಾಯಗಳ ಮೇಲೆ ಅವುಗಳ ದುಷ್ಪರಿಣಾಮಗಳನ್ನು ಕುರಿತು ಚಿಂತನೆ ನಡೆಸುತ್ತಾರೆ. ಪ್ರಭುತ್ವವು ಸಮಾಜದ ಅಭಿವೃದ್ಧಿಗೆ ಪೂರಕವಾಗಿ, ದೀನದಲಿತರ ಹಾಗೂ ಮಹಿಳೆಯರ ಬದುಕಿನ ಮಹತ್ವದ ಪಲ್ಲಟಗಳಿಗೆ ಅನುಗುಣವಾಗಿ ಎಂತಹ ಕಾರ್ಯಕ್ರಮಗಳನ್ನು ರೂಪಿಸಬಹುದು ಅಂತಹ ಕಾರ್ಯಕ್ರಮಗಳನ್ನು ರೂಪಿಸಲು ಪ್ರಭುತ್ವಕ್ಕೆ ಎಂತಹ ಬೌದ್ಧಿಕ ತಯಾರಿ ಇರಬೇಕು, ಎಂತಹ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಜವಾಬ್ದಾರಿ ಇರಬೇಕು ಎಂಬುದನ್ನು ಕುರಿತು ಆಲೋಚನೆ ಮಾಡುತ್ತಾರೆ; ಆಲೋಚನೆ ಮಾಡಲೇಬೇಕು. ಇಲ್ಲದಿದ್ದರೆ ಪ್ರಭುತ್ವವು ತಾನೇ ತಾನಾಗಿ ತನ್ನ ಗುರಿ ಮುಟ್ಟಲು, ತಾನು ಸರಿಯಾದ ದಾರಿಯನ್ನು ನಿರ್ಮಿಸುತ್ತದೆ ಎಂದು ಹೇಳಲು ಬರುವುದಿಲ್ಲ. ಇದರ ಅರ್ಥ ಸಾಹಿತಿಗಳು, ಬರಹಗಾರರು ನೇರವಾಗಿ ಪ್ರಭುತ್ವಕ್ಕೆ ಮಾರ್ಗದರ್ಶನ ಮಾಡುವ ಚಿಂತಕರಾಗಿ ಕೆಲಸ ಮಾಡುತ್ತಾರೆ ಎಂದಾಗಲಿ ಅಥವಾ ಮಾಡಬೇಕು ಎಂದಾಗಲಿ ಅಲ್ಲ; ಒಂದು ವೇಳೆ ಹಾಗೆ ಸಾಹಿತಿಗಳು, ಬರಹಗಾರರು ಪ್ರಭುತ್ವಕ್ಕೆ ಚಿಂತಕರಾಗಿ ಕೆಲಸ ಮಾಡಲು ಶುರು ಮಾಡಿದರೆ ಪ್ರಭುತ್ವವು ಅವರನ್ನು ನೇರವಾಗಿ ತನ್ನ ಗುಲಾಮಗಿರಿಗೆ ಒಳಪಡಿಸಿಕೊಳ್ಳುತ್ತದೆ. ನಾಡಿನ ಪ್ರಭುತ್ವದಲ್ಲಿ ಇಂತಹ ಬೆಳವಣಿಗೆಗಳಿಗೂ ಕೆಲವು ಉದಾಹರಣೆಗಳಿವೆ. ಆ ಮಾತು ಬೇರೆ.

ವೈದಿಕ ಪ್ರಜ್ಞೆಯಿಂದ ಸೃಷ್ಟಿಯಾದ ದೇವಾಲಯಗಳು, ಪುರೋಹಿತಶಾಹಿ, ಧರ್ಮಪ್ರಜ್ಞೆಯು ಮೂಲಕ ಪ್ರಭುತ್ವವನ್ನು ನಿಯಂತ್ರಿಸುವ ಬಗ್ಗೆ, ಜಾತಿ, ವರ್ಣ ಮತ್ತು ಮಹಿಳೆಯ ಕುರಿತು ಆಲೋಚನೆ ಮಾಡಿರುವ ಸಾಮಾಜಿಕ ಪ್ರಭುತ್ವದ ಬಗ್ಗೆ ಹಾಗೂ ಆರ್ಥಿಕ ಪ್ರಭುತ್ವವನ್ನು ವೈದಿಕ ಪ್ರಜ್ಞೆಯು ಗ್ರಹಿಸಿರುವ ಬಗೆಗೆ ಈ ಅಧ್ಯಯದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅವರ ಆಲೋಚನೆಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡಲಾಗಿದೆ.

ಈ ಮಹಾಪ್ರಬಂಧದ ಕೊನೆಯ ಅಧ್ಯಾಯವು ಸಮಾರೋಪ ಎಂದಿದೆ. ಇದರಲ್ಲಿ ಪ್ರಸ್ತುತ ಅಧ್ಯಯನದ ಮುಖ್ಯ ಫಲಿತಗಳನ್ನು ಕ್ರೋಡೀಕರಿಸಲಾಗಿದೆ. ನಂತರ ಈ ಅಧ್ಯಯನಕ್ಕೆ ಬಳಸಿಕೊಂಡಿರುವ ಮೂಲ ಆಕರಗಳ ಹಾಗೂ ಪೂರಕ ಆಕರಗಳ ಸೂಚಿಯನ್ನು ಕೊಡಲಾಗಿದೆ.

ಕೊನೆ ಟಿಪ್ಪಣಿಗಳು

೧. ವೀರಣ್ಣ ಸಿ., ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಮುಖಪುಟದಲ್ಲಿ

೨. ಅದೇ, ಪುಟ ೯೨

೩. ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ ೨೯

೪. ಅನಂತರಂಗಾಚಾರ್ ಎನ್. (ಗದ್ಯಾನುವಾದ), ಪಂಪಭಾರತ, ದಶಮಾಶ್ವಾಸಂ, ಪದ್ಯ ೨೧

೫. ಅದೇ, ಚತುರ್ದಶಾಶ್ವಾಸಂ, ಪದ್ಯ ೬೪

೬. ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್., ಕನ್ನಡ ಸಾಹಿತ್ಯ ಚರಿತ್ರೆ, ಪುಟ ೩೭

೭. ಅದೇ, ಪುಟ ೪೦, ೪೧

೮. ಕಲಬುರ್ಗಿ. ಎಂ.ಎಂ., ವಚನ ಸಾಹಿತ್ಯ ಸಂವಾದ, ಪುಟ ೧೨

೯. ನಾಗಭೂಷಣಸ್ವಾಮಿ ಓ.ಎಲ್. (ಸಂ.), ವಚನ ಸಾವಿರ, ಬಸವಣ್ಣ, ಪುಟ ೨೭೦

೧೦. ಅದೇ, ಅಕ್ಕಮಹಾದೇವಿ ಪುಟ ೨೬೮, ೨೬೯

೧೧. ಅದೇ, ಅಲ್ಲಮ, ಪುಟ ೨೭೦

೧೨. ಅದೇ, ಅಲ್ಲಮ, ಪುಟ ೨೬೮

೧೩. ಅದೇ, ಬಸವಣ್ಣ ಪುಟ ೧೫೪, ೧೫೫

೧೪. ಅದೇ, ಬಸವಣ್ಣ, ಪುಟ ೬೫

೧೫. ಅದೇ, ಬಸವಣ್ಣ, ಪುಟ ೨೦೦

೧೬. ಅದೇ, ಅಲ್ಲಮ, ಪುಟ ೧೦೯

೧೭. ಅದೇ, ಅಂಬಿಗರ ಚೌಡಯ್ಯ, ಪುಟ ೧೩೧

೧೮. ಅದೇ, ಕಪಿಲಸಿದ್ಧ ಮಲ್ಲಿಕಾರ್ಜುನ, ಪುಟ ೩೫

೧೯. ಕುವೆಂಪು, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಮೂರನೆಯ ಮುದ್ರಣಕ್ಕೆ ಮುನ್ನುಡಿ ಪುಟ ೬೨

೨೦. ತೇಜಸ್ವಿ, ಅಬಚೂರಿನ ಪೋಸ್ಟಾಪೀಸು ಮುನ್ನುಡಿ, ಪುಟ ೨೩

೨೧. ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ ೧೧೭

೨೨. ಬರಗೂರು ರಾಮಚಂದ್ರಪ್ಪ, ಬಂಡಾಯ ಸಹಿತ್ಯದ ನೆಲೆ, ದಲಿತ ಚಿಂತನೆ, ಮೊಗಳ್ಳಿ ಗಣೇಶ್ (ಸಂ.), ಪುಟ ೧೫೭, ೧೫೮

* * *

ಅಧ್ಯಾಯ: ಎರಡು

ಸಾಹಿತ್ಯ ಸಮೀಕ್ಷೆ: ಇದುವರೆಗಿನ ಅಧ್ಯಯನಗಳು

ಅಧ್ಯಾಯ: ಎರಡು

ಸಾಹಿತ್ಯ ಸಮೀಕ್ಷೆ: ಇದುವರೆಗಿನ ಅಧ್ಯಯನಗಳು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕ ಬರಹಗಳು ಸಾಮಾಜಿಕ ಪ್ರಜ್ಞೆಯಾಗಿ ಕೆಲಸ ಮಾಡಿಕೊಂಡು ಬಂದಿರುವ ನಿಲವುಗಳನ್ನು ಕಾಣಬಹುದಾಗಿದೆ. ಅವೆಂದರೆ ಮೌಢ್ಯಾಚರಣೆ, ಅಸ್ಪೃಶ್ಯತೆ, ಜಾತಿಪದ್ಧತಿ, ಪುರೋಹಿತಶಾಹಿಯ ಮೂಲಭೂತವಾದಿತನ, ವೈದಿಕ ಕ್ರಿಯಾಚರಣೆಗಳು, ಯಜಮಾನಿಕೆ ಇತ್ಯಾದಿ ನಿಲವುಗಳನ್ನು ವಿರೋಧಿಸಿ ಚರ್ಚಿಸಿವೆ. ವೈದಿಕ ವಿರೋಧಿ ಪ್ರಜ್ಞೆಯನ್ನು ಕುರಿತು ಸಂಶೋಧನೆಗಳು ಮತ್ತು ಲೇಖನಗಳು ಬಿಡಿ ಬಿಡಿಯಾಗಿ ಪ್ರಕಟಕೊಂಡಿವೆ. ಆದರೆ ಒಂದು ನಿರ್ದಿಷ್ಟವಾಗಿ ಭಾಷೆ, ಶಿಕ್ಷಣ, ಪ್ರಭುತ್ವ, ಜಾತಿ, ಧರ್ಮಗಳಲ್ಲಿ ವೈದಿಕ ವಿರೋಧಿ ಪ್ರಜ್ಞೆಯ ಬಗ್ಗೆ ಒಟ್ಟಾಗಿ ಸಂಶೋಧನೆ ನಡೆದಿಲ್ಲ. ಆದರೆ ಈ ಅಧ್ಯಯನಕ್ಕೆ ಪೂರಕವಾಗಿ ಸಂಶೋಧನಾ ಅಧ್ಯಯನಗಳು ಪ್ರಕಟಗೊಂಡಿವೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಸಾಹಿತ್ಯ ಸಮೀಕ್ಷೆ ನಡೆಸುವುದರಿಂದ ಪ್ರಸ್ತುತ ಅಧ್ಯಯನದ ಚೌಕಟ್ಟನ್ನು ನಿರ್ಧರಿಸಿಕೊಂಡು ಮತ್ತು ಉದ್ದೇಶಗಳ ಹಿನ್ನೆಲೆಯಲ್ಲಿ ಚರ್ಚಿಸುವುದು ಅಗತ್ಯವಿದೆ. ಆದ್ದರಿಂದ ಇದುವರೆಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆ ಎಂಬ ಪರಿಕಲ್ಪನೆಯ ಬಗ್ಗೆ ನಡೆದಿರುವ ಸಂಶೋಧನ ಗ್ರಂಥಗಳು, ಸಾಹಿತ್ಯ ಕೃತಿ ಮತ್ತು ಲೇಖನಗಳನ್ನು ಸಮೀಕ್ಷೆ ಮಾಡಲಾಗಿದೆ.

ಸಂಶೋಧನ ಗ್ರಂಥಗಳು

ಕುವೆಂಪು ಅವರ ಕಥಾ ಸಾಹಿತ್ಯದ ಅನನ್ಯತೆ ಮತ್ತು ಅದರ ಸಾಂಸ್ಕೃತಿಕ ವಿವರಗಳನ್ನು ಗುರುತಿಸುವ ಮತ್ತು ಕುವೆಂಪು ಅವರ ಕಥನ ಸಾಹಿತ್ಯ ಪರಂಪರೆಯು ಲೇಖಕರಿಂದ ಭಿನ್ನವಾಗುವ ಬಗೆ, ಸಮಕಾಲೀನತೆಯಲ್ಲಿ ವಿಶಿಷ್ಟವಾಗುವ ಅವರ ಕಥನದ ಅನನ್ಯತೆಯನ್ನು ಹುಡುಕುವ ಆಶಯದ ಮೇಲೆ ಕನ್ನಡ ವಿಶ್ವವಿದ್ಯಾಲಯದ ಕರೀಗೌಡ ಬೀಚನಹಳ್ಳಿ ಮಾರ್ಗದರ್ಶನದಲ್ಲಿ ಉದ್ದಂಡಯ್ಯ ಅವರು 'ಕನ್ನಡ ಕಥನ ಪರಂಪರೆ ಮತ್ತು ಕುವೆಂಪು ಕಥಾ ಸಾಹಿತ್ಯ' ಎಂಬ ಸಂಶೋಧನೆ ಮಾಡಿದ್ದಾರೆ. ಈ ಸಂಶೋಧನ ಕೃತಿಯು ಪ್ರಕಟಿತಗೊಂಡಿದ್ದು, ಇದರಲ್ಲಿ ವಸಾಹತುಶಾಹಿ ಸಂಸ್ಕೃತಿಯ ಮತಾಂತರ ಪ್ರಕ್ರಿಯೆಗೆ ಕುವೆಂಪು ಕಥನ ತೋರಿದ ಪ್ರತಿಕ್ರಿಯೆ ಮತ್ತು ಸ್ಥಳೀಯ

ಮತ್ತು ಕ್ರೈಸ್ತಾದಿ ಪುರೋಹಿತಶಾಹಿ ಸಂಸ್ಕೃತಿಗಳಿಗೆ ಕುವೆಂಪು ಕಥನ ತೋರಿದ ಪ್ರತಿರೋಧ ಎಂಬ ಎರಡು ಅಧ್ಯಾಯಗಳು ಪ್ರಸ್ತುತ ಸಂಶೋಧನೆಗೆ ಪೂರಕವಾಗಿವೆ.

ವಸಾಹತುಶಾಹಿ ಸಂದರ್ಭದಲ್ಲಿ ಕ್ರೈಸ್ತ ಪಾದ್ರಿಗಳು ಸ್ಥಳೀಯ ಪುರೋಹಿತಶಾಹಿಯ ಜೊತೆ ಮುಖಾಮುಖಿ, ಧರ್ಮ ಸಂಘರ್ಷ, ಬ್ರಿಟಿಷ್ ಸಾಮ್ರಾಜ್ಯಶಾಹಿ, ಶಿಕ್ಷಣವ್ಯವಸ್ಥೆ, ಸ್ಥಳೀಯ ಪುರೋಹಿತಶಾಹಿಯು ಕೆಳವರ್ಗಗಳ ಮೇಲೆ ತಾನು ಸ್ಥಾಪಿಸಿದ ಯಾಜಮಾನ್ಯದ ಕ್ರೌರ್ಯವನ್ನು ಈ ಮಹಾಪ್ರಬಂಧದಲ್ಲಿ ಚರ್ಚಿಸಿ ವಿಶ್ಲೇಷಣೆ ಮಾಡಲಾಗಿದೆ. ಹಿಂದೂ ಪುರೋಹಿತಶಾಹಿ ಮತ್ತು ಕ್ರೈಸ್ತ ಪುರೋಹಿತಶಾಹಿಯನ್ನು ಮುಖಾಮುಖಿ ಮಾಡಿಸಿ ಅವುಗಳ ಹುನ್ನಾರಗಳು, ಧರ್ಮಸಂಘರ್ಷ, ರಾಜಕೀಯ ನೆಲೆಗಳನ್ನು ವೈದಿಕ ವಿರೋಧಿ ನೆಲೆಯಲ್ಲಿ ಗ್ರಹಿಸಲಾಗಿದೆ. ಪುರೋಹಿತಶಾಹಿಯು ಶಿಕ್ಷಣದ ಮೇಲೆ ನಿಯಂತ್ರಣವನ್ನು ಹೊಂದಿರುವ ಬಗ್ಗೆ ಸಂಶೋಧಕರು ಪ್ರಶ್ನಿಸುತ್ತಾ, ವೈದಿಕ ಚಿಂತನೆಯ ಶಿಕ್ಷಣಪದ್ಧತಿಯನ್ನು ವಿರೋಧಿಸಿದ್ದಾರೆ. ಸ್ಥಳೀಯ ಮತ್ತು ಕ್ರೈಸ್ತಾದಿ ಪುರೋಹಿತಶಾಹಿಯ ಸಂಸ್ಕೃತಿಗಳಿಗೆ ಕುವೆಂಪು ಕಥನದ ಪ್ರತಿರೋಧ ಎಂಬ ಅಧ್ಯಾಯದಲ್ಲಿ ಕುವೆಂಪು ಅವರು ಪುರೋಹಿತಶಾಹಿ ವಿರೋಧಿ ನೆಲೆಗಳು ಯಾವ ಬಗೆಯದೆಂಬುದನ್ನು ಹೀಗೆ ಗುರುತಿಸಲಾಗಿದೆ. "ಯಾವುದೇ ದೇಶದ, ಯಾವುದೇ ಧರ್ಮದ, ಯಾವುದೇ ಮತದ ಸೀಮಿತ ವರ್ಗಕ್ಕೆ ಮಾತ್ರ ಅವರ ಪ್ರತಿರೋಧ ನಿಲ್ಲದೆ, ಸಮಷ್ಟಿ ಅಮಾನವೀಯ ನೆಲೆಗಳ ಮತ್ತು ಧೋರಣೆಗಳ ಬಗೆಗೆ ತಾವು ತೋರಿದ ಪ್ರತಿಕ್ರಿಯೆಯೆಂದು ಅವರು ಸ್ಪಷ್ಟಪಡಿಸುತ್ತಾರೆ. ಯಾವುದೇ ಬಗೆಯ ಮೂಲಭೂತವಾದದ ಮುಖೇನ ಪುರೋಹಿಶಾಹಿ ನಡೆಸುವ ಆಧಿಪತ್ಯವನ್ನು ಕುವೆಂಪು ಕಥನಗಳು ಸಂವಾದ ನಡೆಸುತ್ತವೆ ಎಂಬುದನ್ನು ನಾವು ಇಂದು ಅರ್ಥೈಸಿಕೊಳ್ಳಬೇಕಾದ ಅಗತ್ಯವಿದೆ."[೧]

ಒಟ್ಟಿನಲ್ಲಿ ಈ ಸಂಶೊಧನೆಯಲ್ಲಿ ಪುರೋಹಿತಶಾಹಿಯ ಮೂಲಭೂತವಾದಿತನವನ್ನು ಪ್ರಶ್ನಿಸಿ ವಿಮರ್ಶೆಗೆ ಒಳಪಡಿಸಲಾಗಿದೆ ಹಾಗೂ ಮುಂದಿನ ಅಧ್ಯಯನಕ್ಕೆ ಪೂರಕವಾದ ಮಾಹಿತಿಯ ಸುಳಿವನ್ನು ನೀಡಲಾಗಿದೆ.

ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ ಎಂಬ ಮಹಾಪ್ರಬಂಧವು ಕನ್ನಡ ವಿಶ್ವವಿದ್ಯಾಲಯಕ್ಕೆ ಕಿ.ರಂ. ನಾಗರಾಜ ಅವರ ಮಾರ್ಗದರ್ಶನದಲ್ಲಿ ಕೆ.ಸಿ. ಶಿವಾರೆಡ್ಡಿ ಅವರು ರೂಪಿಸಿದ ಸಂಶೋಧಾನ ಗ್ರಂಥವಾಗಿದೆ. ಈ ಪ್ರಬಂಧದಲ್ಲಿ ಕುವೆಂಪು ಅವರ ಸಾಹಿತ್ಯ ಕೃತಿಯಲ್ಲಿ ವ್ಯಕ್ತವಾಗಿರುವ ವೈದಿಕ ವಿರೋಧಿ ನಿಲುವುಗಳ ಬಗ್ಗೆ ಹೀಗೆ ಗುರುತಿಸಲಾಗಿದೆ. "ದ್ವಂದ್ವ ವೈದಿಕ ಸಂಸ್ಕೃತಿಯಲ್ಲಿನ ಮಾನವೀಯ ಮೌಲ್ಯಗಳ ಆಯ್ಕೆಗಳು ಹಾಗೂ ಅಮಾನವೀಯ ಮೌಲ್ಯಗಳ ನಿರಾಕರಣೆಯ ಸಂದರ್ಭದಲ್ಲಿಯೂ ಎದುರಾಗುತ್ತವೆ. ಅಂದರೆ, ಅಮಾನವೀಯ ನೆಲೆಗಳನ್ನು ವಿಮರ್ಶೆ, ವಿಶ್ಲೇಷಣೆಗಳಿಗೆ ಒಳಪಡಿಸುವುದು ಇವರ ಕೃತಿಗಳ ಮೂಲಧಾತು. ಹೀಗಾಗಿ ಕುವೆಂಪು ಅವರ ಕೃತಿಗಳ ಅಧ್ಯಯನದಿಂದ ವೈದಿಕ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯೊಂದಿಗೆ ವಸಾಹತು ಸಂಸ್ಕೃತಿಗೆ ತೋರಿದ ಪ್ರಕ್ರಿಯೆಯನ್ನು ಕಾಣುತ್ತೇವೆ. ಆದ್ದರಿಂದ ಈ ಬರೆಹಕ್ಕೆ ಕುವೆಂಪು ಅವರ ಕಾವ್ಯ ವಸಾಹತುಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯನ್ನು

ಕುರಿತ ಅಧ್ಯಯನ ಎಂಬ ತಲೆಬರಹವಿದ್ದರೂ, ಕುವೆಂಪು ಸಾಹಿತ್ಯ ಯಾವುದೇ ಬಗೆಯ ಆಕ್ರಮಣಕಾರಿ ವ್ಯವಸ್ಥೆಗೆ ತೊರಿದ ಪ್ರಕ್ರಿಯೆಯೇ ಆಗಿದೆ ಎಂಬ ನಿಲುವಿನಿಂದ ಈ ಅಧ್ಯಯನವನ್ನು ನಡೆಸಲಾಗಿದೆ.[೨] ಹಾಗಾಗಿ ಈ ಸಂಶೋಧನೆಯಲ್ಲಿ ಕುವೆಂಪು ವೈದಿಕ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯೊಂದಿಗೆ ವಸಾಹತುಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಯನ್ನು ಕಾಣಬಹುದಾಗಿದೆ. ಆದ್ದರಿಂದ ವಸಾಹತು ಸಂಸ್ಕೃತಿಯು ಇಂಗ್ಲಿಷ್ ಸಾಮ್ರಾಜ್ಯಶಾಹಿಯ ಧೋರಣೆಗಳು, ಕ್ರೈಸ್ತ ಪುರೋಹಿತ ಹುನ್ನಾರಗಳು, ಸ್ಥಳಿಯ ಪುರೋಹಿತಶಾಹಿಯ ಮುಖಾಮುಖಿಯಾಗಿಸುವುದನ್ನು ಕಾಣಬಹುದಾಗಿದೆ. ವೈದಿಕ ಸಂಸ್ಕೃತಿಗೆ ತೋರಿದ ಪ್ರತಿಕ್ರಿಯೆಗಳನ್ನು ಕುವೆಂಪು ಕಾವ್ಯಗಳ ಹಿನ್ನೆಲೆಯಲ್ಲಿ ಈ ಸಂಶೋಧನೆಯಲ್ಲಿ ಚರ್ಚಿಸಲಾಗಿದೆ.

'ಸಾಂಸ್ಕೃತಿಕ ಆಕೃತಿಯಾಗಿ ದೇವರು ಮತ್ತು ದಲಿತ ಬಂಡಾಯ ಸಾಹಿತ್ಯ' ಎಂಬ ವಿಷಯದಲ್ಲಿ ಪ್ರಕಾಶ ಬಿ.ಎನ್. ಅವರು ಶ್ರೀಕಂಠ ಕೂಡಿಗೆ ಅವರ ಮಾರ್ಗದರ್ಶನದಲ್ಲಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧವಾಗಿದೆ. ದಲಿತ ಬಂಡಾಯ ಸಾಹಿತ್ಯವು ದೇವರು, ಧರ್ಮದ ಸಂಗತಿಗಳನ್ನು ಎದುರುಗೊಂಡ ಬಗೆಯ ಬಗ್ಗೆ ಅರ್ಥೈಸಲಾಗಿದೆ ಹಾಗೂ ದೇವರು, ಧರ್ಮವನ್ನು ಗ್ರಹಿಸಲಾಗಿದೆ. ಭಾರತೀಯ ಪರಂಪರೆ ಮತ್ತು ದೇವರು ಅಧ್ಯಾಯದಲ್ಲಿ ವೈದಿಕಕ್ಕೆ ಎದುರಾಗಿ ಅವೈದಿಕ ಪರಂಪರೆ ಹುಟ್ಟಿದ ಬಗೆ ಮತ್ತು ಅವೈದಿಕ ಪರಂಪರೆಯ ವಿವಿಧ ಕವಲುಗಳು ಹೇಗೆ ರೂಪುಗೊಂಡಿವೆ ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ಮಹಾಪ್ರಬಂಧದಲ್ಲಿ ವೈದಿಕಶಾಹಿಯ ವಿರೋಧದಲ್ಲಿ ನಾಸ್ತಿಕ ನೆಲೆ ಮಾತ್ರವಿರದೆ ಭಿನ್ನ ಭಿನ್ನ ನೆಲೆಗಳು ಹೇಗೆಲ್ಲಾ ನಿರೂಪಿತಗೊಂಡಿವೆ ಎನ್ನುವುದನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ಈ ಮಹಾಪ್ರಬಂಧದಲ್ಲಿ ವೈದಿಕ ವಿರೋಧವನ್ನು ಮಾಡುವ ಬದಲಾಗಿ, ವೈದಿಕ ವಿರೋಧದ ಮಾದರಿಗಳನ್ನು ಗ್ರಹಿಸಲಾಗಿದೆ.

ಕುವೆಂಪು ನಾಟಕಗಳಲ್ಲಿ ವರ್ಣ-ವರ್ಗ ಸಂಘರ್ಷ ಎಂ.ಫಿಲ್. ಸಂಶೋಧನ ಗ್ರಂಥವಾಗಿದ್ದು ಕೆ.ಸಿ. ಶಿವಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಭಾಗ್ಯನಾರಾಯಣ ಅವರು ಸಲ್ಲಿಸಿದ ಪ್ರಬಂಧವಾಗಿದೆ. ಅಧ್ಯಾಯ ಮೂರರಲ್ಲಿ ಪುರೋಹಿತಶಾಹಿ ಹುನ್ನಾರಗಳ ಅನಾವರಣದಲ್ಲಿ ವರ್ಣತಾರತಮ್ಯ, ಆಳುವ ಶಕ್ತಿಗಳ ಮೂಲಕ ದಮನ ಪ್ರವೃತ್ತಿ, ವರ್ಣಾಶ್ರಮ ಸಿದ್ಧಾಂತಗಳಿಗೆ ಪೆಟ್ಟು ನೀಡಿದ ವೈದಿಕ ಸಂಸ್ಕೃತಿಯನ್ನು ಚರ್ಚಿಸಲಾಗಿದೆ.

ಪುಸ್ತಕಗಳು ಮತ್ತು ಲೇಖನಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಣೆಯ 'ಧರ್ಮ' ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: ೩ರಲ್ಲಿ ಕೆ.ಎಸ್. ಭಗವಾನ್ ಬರೆದ ಪುರೋಹಿತಶಾಹಿ ಎಂಬ ಲೇಖನವು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ. ಈ ಲೇಖನದಲ್ಲಿ 'ಪುರೋಹಿತಶಾಹಿ' ಎಂಬ ಪರಿಕಲ್ಪನೆಯನ್ನು ವಿಶಾಲ ಅರ್ಥದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಪುರೋಹಿತಶಾಹಿ ಎಂಬ ಪದ ಆಧುನಿಕ ಧರ್ಮಗಳಲ್ಲಿ ಬೇರೆ ಬೇರೆ ಆರ್ಥದಲ್ಲಿ ಬಳಕೆಯಾಗಿರುವ ಬಗೆ, ಪ್ರಪಂಚದ ಎಲ್ಲ ಧರ್ಮದಲ್ಲಿ

ಪುರೋಹಿತಶಾಹಿ ಎಂಬ ಪರಿಕಲ್ಪನೆಯ ವಿವರಣೆ, ಚಾರಿತ್ರಿಕ ಹಿನ್ನೆಲೆ, ಪ್ರಪಂಚದ ಧರ್ಮಗಳಲ್ಲಿ ಪುರೋಹಿತರಾಗುವ ವಿಧಾನ, ಪುರೋಹಿತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಅಂಶಗಳು, ಪೌರೋಹಿತ್ಯದ ತರಬೇತಿ ಮತ್ತು ದೀಕ್ಷೆ ಕೊಡುವಾಗ ಪಾಲಿಸುವ ಮೂರು ಅಂಶಗಳಾದ ಅನುಷ್ಠಾನ, ತತ್ವ ಮತ್ತು ಶಿಸ್ತು, ಪುರೋಹಿತಶಾಹಿ ಪ್ರಪಂಚದ ಎಲ್ಲಾ ರಾಜ್ಯ ಪ್ರಭುತ್ವದ ಜತೆಗಿನ ರಾಜಕೀಯ, ಸಾಮಾಜಿಕ, ಆಡಳಿತಕ್ಕೆ ಸಂಬಂಧಿಸಿದ ಅಧಿಕಾರಗಳು ಮತ್ತು ಇವರ ಕ್ರಿಯವಿಧಾನಗಳು, ಧಾರ್ಮಿಕ ಆಚರಣೆಗಳು ವಿದಿವಿಧಾನಗಳನ್ನು ಒಳಗೊಂಡಿದೆ.

ಯಹೂದಿಗಳಲ್ಲಿ ಪುರೋಹಿತರನ್ನು ಬೈಬಲ್ಲಿನ ಪ್ರೀಸ್ಟ್ ಎಂಬ ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಉಲ್ಲೇಖಗಳ ಪ್ರಕಾರ ಮುಖ್ಯ ಪುರೋಹಿತರು ಎಂಬುದನ್ನು ಬಳಸಲಾಗಿದೆ. ಕ್ರೈಸ್ತ ಮತದಲ್ಲಿ ಹೊಸ ಒಡಂಬಡಿಕೆಯ ಭಾಗಗಳಲ್ಲಿ ಹೀಬ್ರೂಸ್ ಎಂಬುದು ಏಸುಕ್ರಿಸ್ತನನ್ನು ಜನಾಂಗದ ಏಕೈಕ ಪುರೋಹಿತ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ವೈದಿಕ ಧರ್ಮದ ಆರ್ಯರಲ್ಲಿ ಮೂರು ವರ್ಗಗಳಿದ್ದವು ಇವು ಧಾರ್ಮಿಕ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ವಿಭಜಿತವಾಗಿದ್ದವು. ಪುರೋಹಿತವರ್ಗ ಎಲ್ಲದಕ್ಕಿಂತ ಮೇಲಿನ ವರ್ಗವಾಗಿದೆ. ಬೌದ್ಧಧರ್ಮದಲ್ಲಿ ಬೌದ್ಧ ಭಿಕ್ಕುಗಳಿಗೆ ಪುರೋಹಿತ ಶಬ್ದವನ್ನು ಬಳಸಲಾಗಿದೆ. ಲಾಮಗಳು ಎಂದು ಕೂಡ ಕರೆಯುತ್ತಾರೆ. ಶಿಂಟೋ ಮತದಲ್ಲಿ ಆಧುನಿಕ ಜಪಾನಿನಲ್ಲಿ ನಾನಾ ಬಗೆಯ ಧಾರ್ಮಿಕ ಕರ್ತವ್ಯಗಳನ್ನು ನೆರವೇರಿಸುವ ಜನರಿಗೆ ಶಿನಪೋಕು ಎಂಬ ಪದವನ್ನು ಬಳಸಲಾಗಿದೆ. ಇಲ್ಲಿ ಪ್ರಾದೇಶಿಕ ಧರ್ಮಪಾಲ, ಮುಖ್ಯ ಪುರೋಹಿತ, ದೇವರ ಯಜಮಾನ ಎಂಬ ಶ್ರೇಣೀಕರಣ ಪುರೋಹಿತರಲ್ಲಿ ಇದೆ. ತಾವೋ ಪಂಥದಲ್ಲಿ ಪಿತೃಪೂಜೆ, ಬುದ್ಧಧರ್ಮ ಮತ್ತು ಸಾಮೂಹಿಕ ಧರ್ಮಾಚರಣೆಯಲ್ಲಿ ಭಾಗಿ ಆಗುವ ತಾವು ಪುರೋಹಿತ, ಕಾಲಜ್ಞಾನಿ ಯುವಕರು, ವೈಧಾನಿಕ ಯಜಮಾನರುಗಳನ್ನು ಪುರೋಹಿತ ವರ್ಗಕ್ಕೆ ಸೇರಿಸಲಾಗಿದೆ. ಈ ರೀತಿಯಾಗಿ ಪ್ರಪಂಚದ ಎಲ್ಲಾ ಧರ್ಮಗಳಲ್ಲಿ ಪುರೋಹಿತಶಾಹಿಯ ಸ್ವರೂಪ ಮತ್ತು ಇವರ ಕ್ರಿಯಾವಿಧಿಗಳ ವಿವರಗಳೊಂದಿಗೆ ಪುರೋಹಿತಶಾಹಿ ಎಂಬ ಲೇಖನದಲ್ಲಿ ವ್ಯಕ್ತವಾಗಿದೆ.

ಕುವೆಂಪು ಅವರನ್ನು ಓದುವ ಬಗೆ ಮತ್ತು ಅರ್ಥ ಮಾಡಿಕೊಳ್ಳುವ ಬಗೆಯನ್ನು ದೇವಯ್ಯ ಹರವೆ ಅವರ ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು ಪುಸ್ತಕದ 'ಶೂದ್ರಶಾಹಿಯಿಂದ ಪುರೋಹಿತಶಾಹಿಯೆಡೆಗೆ(ಕುವೆಂಪು ಅವರ ನೆನಪಿನ ದೋಣಿಯಲ್ಲಿ: ಒಂದು ಅಧ್ಯಯನ) ಲೇಖನದಲ್ಲಿ ವ್ಯಕ್ತವಾಗಿದೆ. ಅಲ್ಲದೆ ಕುವೆಂಪು ಅವರು ವೈದಿಕ ಸಂಸ್ಕೃತಿಯ ಬಗ್ಗೆ ಅವರ ದ್ವಂದ್ವ ನಿಲುಗಳ ಬಗ್ಗೆ ಚರ್ಚಿಸಲಾಗಿದೆ. ಭಾಷೆಯ ದೃಷ್ಟಿಯಲ್ಲಿ ಪುರೋಹಿತಶಾಹಿ ತಾರತಮ್ಯ ಮಾಡುವುದನ್ನು ಹೀಗೆ ಚರ್ಚಿಸಿದ್ದಾರೆ. "ಶೂದ್ರ ವರ್ಗದವರನ್ನು ಎಷ್ಟೋ ರೀತಿಯಲ್ಲಿ ಸಿರಿವಂತರಾಗಿದ್ದರೂ ಪುರೋಹಿತವರ್ಗದವರು ಅಪ್ಪ, ಅಣ್ಣ ಇತ್ಯಾದಿಯಾಗಿರುವ ವಿಶೇಷಣಗಳಿಂದ ಕರೆದು ತಮಗಿಂತ ದೊಡ್ಡವರು ಎಂದು ತಿಳಿದುಕೊಳ್ಳುವ ಗೋಜಿಗೆ ಹೊಗುತ್ತಿರಲಿಲ್ಲ. ಅದರಿಂದಲೇ ಅವರ ಹೆಸರುಗಳಲ್ಲಿ

ಕೊನೆಯಲ್ಲಿ ಅಯ್ಯ ಎಂದು ಸೇರಿಸಿ ಕರೆಯುತ್ತಿದ್ದುದು ಹಾಗೂ ಶಾಲೆಗಳಲ್ಲಿ ಮಾಸ್ತರಿಕೆ ಕೆಲಸದಲ್ಲಿ ಹೆಚ್ಚು ಜನ ಪುರೋಹಿತ ವರ್ಗದವರೇ ಇರುತ್ತಿದ್ದುದರಿಂದ ಶೂದ್ರ ಹುಡುಗರ ಹೆಸರನ್ನು ನೋಂದಾಯಿಸಿಕೊಳ್ಳುವ ಸಂದರ್ಭದಲ್ಲಿ ಅಯ್ಯ ಎಂಬ ಪದವನ್ನು ಸೇರಿಸುತ್ತಿದ್ದುದೇ ವಾಡಿಕೆಯಾಗಿತ್ತು. ಶೂದ್ರರನ್ನು ಅಪ್ಪ, ಅಣ್ಣ ಎಂಬ ವಿಶೇಷಣದಿಂದ ಕರೆಯುವುದರ ಮುಖಾಂತರ ತಮ್ಮ ಅಭಿಮಾನಕ್ಕೆ ಕುಂದುಂಟಾಗುವುದು ಎಂದು ಎಷ್ಟರ ಮಟ್ಟಿಗೆ ಪುರೋಹಿತವರ್ಗದವರು ಭಾವಿಸಿಕೊಳ್ಳುವ ಸಾಧ್ಯತೆಯಿತ್ತೋ, ಹಾಗೆಯೇ ವೆಂಕಟಯ್ಯಗೌಡ ಎಂದು ತನ್ನ ತಂದೆಯ ಹೆಸರನ್ನು ನೋಂದಾಯಿಸುವುದರಿಂದ ತನ್ನ ಅಭಿಮಾನಕ್ಕೆ ಪೆಟ್ಟು ಎಂಬುದು ಮನೋಭಾವವನ್ನು ಕುವೆಂಪು ಬಾಲ್ಯದಿಂದಲೇ ರೂಢಿಸಿಕೊಂಡಿರುವುದು ನಮಗೆ ತಿಳಿಯುವುದು."[೩]

ಈ ಮೇಲಿನ ಉಲ್ಲೇಖದಲ್ಲಿ ವ್ಯಕ್ತವಾಗಿರುವ ಪುರೋಹಿತಶಾಹಿಯ ಶ್ರೇಣೀಕರಣ ವ್ಯವಸ್ಥೆ, ಯಾಜಮಾನ್ಯ, ಶೂದ್ರರನ್ನು ನೋಡುವ ಕ್ರಮಗಳು, ಪುರೋಹಿತಶಾಹಿಯ ಶಿಕ್ಷಣಕ್ರಮ, ಪುರೋಹಿತಶಾಹಿ ಬಳಸುವ ಭಾಷೆಯ ರಚನೆಯನ್ನು ಗಮನಿಸಬಹುದಾಗಿದೆ. ಕುವೆಂಪು ಅವರ ಸಾಹಿತ್ಯದಲ್ಲಿ ಅಧ್ಯಾತ್ಮ, ದೇವರು ಪೂಜೆ ಸಂಪ್ರದಾಯಗಳಲ್ಲಿ ಮತ್ತು ಪುರೋಹಿತಶಾಹಿಯ ವಿರೋಧದಲ್ಲಿ ಕಂಡುಬರುವ ದ್ವಂದ್ವ ಅಂಶಗಳನ್ನು ನಿರೂಪಿಸುತ್ತಾ ನವಪುರೋಹಿತ ಜನಾಂಗವನ್ನು ಸೃಷ್ಟಿಸಲು ಸಾಧ್ಯವಾಗುವ ಮನಸ್ಥಿತಿ ಹೊಂದಿರುವವರಾಗಿದ್ದಾರೆ ಎಂದು ಈ ಲೇಖನದಲ್ಲಿ ಹೇಳಲಾಗಿದೆ. ಕುವೆಂಪು ಅವರು ಪುರೋಹಿತಶಾಹಿಯ ಬಗ್ಗೆ ಇದ್ದ ನಿಲುವುಗಳ ತಾತ್ವಿಕ ಅಂಶಗಳು ಮತ್ತು ಕುವೆಂಪು ಅವರನ್ನು ಶೂದ್ರವರ್ಗದವರು ನೋಡುವ ಕ್ರಮ ಮತ್ತು ಗ್ರಹಿಸುವ ಬಗೆಯನ್ನು ಈ ಲೇಖನ ಒಳಗೊಂಡಿದೆ.

'ಬ್ರಾಹ್ಮಣಧರ್ಮದ ದಿಗ್ವಿಜಯ! ರಾಜಹತ್ಯೆ ಅಥವಾ ಪ್ರತಿಕ್ರಾಂತಿಯ ಉಗಮ' ಎಂಬ ಪುಸ್ತಕವನ್ನು ಎನ್. ಎಸ್. ಶಂಕರ್ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ಬಿ.ಆರ್. ಅಂಬೇಡ್ಕರ್ ಅವರು ಸಂಶೋಧನೆಯ ಫಲವಾಗಿ ಹೊರತಂದ ಕೃತಿಯಾಗಿದೆ. ಈ ಕೃತಿಯಲ್ಲಿ ಇತಿಹಾಸದಲ್ಲಿ ಬ್ರಾಹ್ಮಣ ಧರ್ಮ ಯಾವ ಬಗೆಯಲ್ಲಿ ಏರಿಳಿತವನ್ನು ಕಂಡಿದೆ, ಬ್ರಾಹ್ಮಣಧರ್ಮ ಸೃಷ್ಟಿಸಿದ ಮನುಸ್ಮೃತಿಯ ಅರ್ಥವೇನು? ಹಿಂದೂಧರ್ಮದಲ್ಲಿ ಸ್ತ್ರೀ ಮತ್ತು ಶೂದ್ರರು ಹೀನಾಯ ಸ್ಥಿತಿಗೆ ತಲುಪಲು ಮಾಡಿದ ಬ್ರಾಹ್ಮಣರ ಹುನ್ನಾರಗಳು ಯಾವುವು? ಬೌದ್ಧಧರ್ಮ ಮತ್ತು ವೈದಿಕ ಧರ್ಮದ ನಡುವೆ ನಡೆದ ವಾಗ್ವಾದಗಳ ಬಗ್ಗೆ ಈ ಕೃತಿ ಬೆಳಕು ಚೆಲ್ಲುತ್ತದೆ. ಅಲ್ಲದೇ ಅಂಬೇಡ್ಕರ್ ಅವರು ಭಾರತದ ಇತಿಹಾಸವೆಂದರೆ ಬೌದ್ಧಧರ್ಮ ಹಾಗೂ ಬ್ರಾಹ್ಮಣ ಧರ್ಮಗಳ ನಡುವಣ ಮಾರಕ ಕಾಳಗದ ಚರಿತ್ರೆಯೇ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಹೀಗೆ ಈ ಪುಸ್ತಕವು ವೈದಿಕ ಧರ್ಮವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರಚಿಸಲಾಗಿದೆ.

'ಅನನ್ಯತೆ' ಎಂಬ ಪುಸ್ತಕವು ಕೆ.ಎಸ್. ಭಗವಾನ್ ಅವರ ಲೇಖನಗಳ ಸಂಗ್ರಹದ ಪುಸ್ತಕವಾಗಿದೆ. ಈ ಪುಸ್ತಕದಲ್ಲಿ ಬುದ್ಧನ ಅನನ್ಯತೆ, ಸ್ವಾಮಿ ವಿವೇಕಾನಂದ: ಶಕ್ತಿಯ ಸಂಕೇತ, ವಿವೇಕಾನಂದರ ಮಾನವತಾವಾದ, ಮತಾಂತರಕ್ಕೆ ಕೊನೆ ಹಿಂದೂಧರ್ಮದ ಪುನಾರಚನೆ, ಶ್ರೀರಾಮ ದೇವರೇ?

ಅಲ್ಲ, ಕೊಲೆಗಡುಕ! ದೇವರು – ಮಾನವ ದೌರ್ಬಲ್ಯಗಳ ಉತ್ಪನ್ನ, ಶರಣ ಚಳವಳಿ ಸಬಲಗೊಳಿಸುವ ಕಾರ್ಯಾವಳಿ, ಬಸವಣ್ಣ ಮಾದಾರ! ವೀರಶೈವ–ಹಿಂದೂಮತ ಅಲ್ಲ, ಮೂಢನಂಬಿಕೆ ನಿರ್ಮೂಲನೆ ನೈಜ ಸುಖದ ಸಂಪಾದನೆ, ಆಧುನಿಕ ಜಗತ್ತಿಗೆ ಅಧ್ಯಾತ್ಮ ಬೇಕೆ?, ಆದಿ ಶಂಕರಾಚಾರ್ಯ ದೊಡ್ಡವನಲ್ಲ, ಮತಾಚಾರ ಮತ್ತು ಮಾಂಸಾಹಾರ ಎಂಬ ಲೇಖನಗಳು ವೈದಿಕ ವಿರೋಧಿ ಪ್ರಜ್ಞೆಯನ್ನು ಧ್ವನಿಸುವ ಲೇಖನಗಳಾಗಿವೆ. ಹಿಂದೂ ಧರ್ಮದ ಜಾತಿಪದ್ಧತಿ, ಮೌಢ್ಯಗಳು, ಕಂದಾಚಾರ, ಮತೀಯತೆ ಮತ್ತು ಸಂಕುಚಿತತೆಗಳನ್ನು ಚರ್ಚೆಗೆ ಗುರಿ ಮಾಡಲಾಗಿದೆ. ವೈಚಾರಿಕತೆಯ ಹಿನ್ನೆಲೆಯಲ್ಲಿ ಈ ಕೃತಿಯನ್ನು ಗುರುತಿಸಬಹುದಾಗಿದೆ.

ಆರ್. ಚಲಪತಿ ಅವರು 'ಕುವೆಂಪು ಬರೆಹಗಳ ಓದಿನ ರಾಜಕಾರಣ' ಎಂಬ ಪುಸ್ತಕವನ್ನು ಬರೆದಿದ್ದು ಈ ಪುಸ್ತಕದಲ್ಲಿ ಕುವೆಂಪು ಬರೆಹಗಳನ್ನು ವೈದಿಕ ವಿರೋಧಿ ಹಿನ್ನೆಲೆಯಲ್ಲಿ ಓದುವ ಬಗೆಗೆ ಮತ್ತು ಕುವೆಂಪು ಬರೆಹಗಳ ಓದಿನ ರಾಜಕಾರಣವನ್ನು ಗ್ರಹಿಸುವ ಪ್ರಯತ್ನವನ್ನು ಮಾಡಿದ್ದಾರೆ. 'ಕುವೆಂಪು ಬರೆಹಗಳ ಶೂದ್ರ ಓದು' ಎಂಬ ಅಧ್ಯಾಯದಲ್ಲಿ ಕುವೆಂಪು ಸಾಹಿತ್ಯವನ್ನು ವೈದಿಕ ವಿರೋಧಿ ಪ್ರಜ್ಞೆಯ ಹಿನ್ನೆಲೆಯಲ್ಲಿ ಗ್ರಹಿಸುವ ಓದಿನ ಬಗ್ಗೆ ಚರ್ಚಿಸಿ ವಿಶ್ಲೇಷಣೆ ಮಾಡಲಾಗಿದೆ. 'ಕುವೆಂಪು ಬರೆಹಗಳ ಶೂದ್ರ ಓದು ಅಂದರೆ ಈ ನಿಟ್ಟಿನಲ್ಲಿ ಬ್ರಾಹ್ಮಣ–ಶೂದ್ರ ಚರ್ಚೆಯೇ ಆಗಿದೆ. ಅವು ಒಂದನ್ನೊಂದು ಎದುರುಗೊಂಡ ಬಗೆಯೆಂದೇ ಗ್ರಹಿಸಬೇಕಾಗಿದೆ.' ಹೀಗೆ ಕುವೆಂಪು ಸಾಹಿತ್ಯವನ್ನು ಓದುವ ಆಯಾಮಗಳ ಬಗ್ಗೆ ಈ ಪುಸ್ತಕ ಬೆಳಕು ಚೆಲ್ಲುತ್ತದೆ. ಹಾಗಾಗಿ ವೈದಿಕ ವಿರೋಧಿ ಪ್ರಜ್ಞೆಯನ್ನು ಓದಿನ ರಾಜಕಾರಣದಲ್ಲಿ ಗ್ರಹಿಸುವ ದಾರಿಯ ಸುಳಿವನ್ನು ಕೊಡುತ್ತದೆ.

ರಹಮತ್ ತರೀಕೆರೆ ಅವರು ಬರೆದಿರುವ 'ಕನ್ನಡ ಸಂಶೋಧನೆ: ತಾತ್ವಿಕ ವಿಚಾರ' ಪುಸ್ತಕದಲ್ಲಿ 'ವೈದಿಕ ವಿರೋಧದ ಸಮಸ್ಯೆ' ಎಂಬ ಲೇಖನದಲ್ಲಿ ವೈದಿಕ ಎಂಬ ಶಬ್ದದ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧ ವ್ಯಕ್ತವಾಗಿರುವ ಬಗ್ಗೆ ಚರ್ಚಿಸಲಾಗಿದೆ. ವೈದಿಕ ವಿರೋಧ ಎಂಬ ಪರಿಕಲ್ಪನೆಯನ್ನು ಸಾಹಿತ್ಯದಲ್ಲಿ ಬಳಸಿರುವ ಬಗ್ಗೆ ಹೀಗೆ ವಿವರಿಸಲಾಗಿದೆ. "ಕನ್ನಡದ ವೈಚಾರಿಕ ಬರೆಹಗಳಲ್ಲಿ ವೈದಿಕ, ಅವೈದಿಕ ಎನ್ನುವುದನ್ನು ಬ್ರಾಹ್ಮಣ ಬ್ರಾಹ್ಮಣೇತರ ಎನ್ನುವ ಸೀಮಿತ ಅರ್ಥದಲ್ಲಿ ಬಳಸಲಾಗುತ್ತದೆ. ವೇದ ಬ್ರಾಹ್ಮಣರು ಸನಾತನವಾದ ರಾಮಾಯಣ ಮಹಾಭಾರತ ಉಪನಿಷತ್ತು ವೇದಗಳು ಮನುಸ್ಮೃತಿ ಇವೆಲ್ಲವು ಕೂಡಿದ ವಿಶಾಲ ಅರ್ಥದಲ್ಲಿ ವೈದಿಕವನ್ನು ಬಳಸಿದರೆ, ಬಂಡುಕೋರ ಜಾನಪದ, ವೇದವಿರೋಧಿ, ಶೂದ್ರ, ದಲಿತ ಚಿಂತನೆಗಳನ್ನು, ನಾಸ್ತಿಕವಾದಿ ಭೌತವಾದಿ ದರ್ಶನಗಳನ್ನು, ಕ್ರೈಸ್ತ ಇಸ್ಲಾಂ ಬೌದ್ಧ ಮುಂತಾದ ಧರ್ಮಗಳನ್ನೂ ಸೇರಿಸಿದ ವಿಶಾಲ ಪರಿಕಲ್ಪನೆಯಾಗಿ ಅವೈದಿಕವನ್ನು ಬಳಸಲಾಗುತ್ತದೆ."[೪] ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪರಿಕಲ್ಪನೆಯನ್ನು ಗ್ರಹಿಸುವ ಮತ್ತು ವಿರೋಧಿಸುವುದರಲ್ಲಿ ವ್ಯತ್ಯಾಸಗಳನ್ನು ಒಳಗೊಂಡಿದೆ. ೨೦ನೇ ಶತಮಾನದ ನಂತರ ವೈದಿಕ ವಿರೋಧಿ ನೆಲೆಗಳನ್ನು ಮತ್ತು ಸನಾತನವಾದಿ ವೈದಿಕ ಸಂಸ್ಕೃತಿಯನ್ನು ವಿರೋಧಿಸುವುದು ವ್ಯಾಪಕವಾಗಿ ಬೆಳೆದು ಸಮಾಜದಲ್ಲಿ ವೈಚಾರಿಕತೆಯನ್ನು ಮೂಡಿಸಿಲು ಮುಂದಾಗಿದೆ ಎಂಬ ವಿಚಾರಗಳನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ ಮಾಡಿರುವ 'ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ' ಪುಸ್ತಕದಲ್ಲಿ 'ಶಾಸನಗಳು: ಪ್ರಭುತ್ವ ಮತ್ತು ಜನತೆ' ಕುರಿತು ಡಾ. ಬಸವರಾಜ ಸಬರದ, 'ಪ್ರಾಚೀನ ಸಾಹಿತ್ಯ: ಪ್ರಭುತ್ವ ಮತ್ತು ಸೃಜನಶೀಲತೆಯ ಸವಾಲು' ಕುರಿತು ರಾಜಪ್ಪ ದಳವಾಯಿ, 'ಮಧ್ಯಕಾಲೀನ ಸಾಹಿತ್ಯ: ಪ್ರಭುತ್ವ ಮತ್ತು ಮೀರುವ ಪ್ರಕ್ರಿಯೆ' ವಿ. ಚಂದ್ರಶೇಖರ ನಂಗಲಿ ಇವರ ಲೇಖನಗಳಲ್ಲಿ ಪ್ರಭುತ್ವ ಎಂದರೇನು ಪ್ರಭುತ್ವದ ಸ್ವರೂಪವನ್ನು ಚರ್ಚಿಸಲಾಗಿದೆ. ವೈದಿಕಶಾಹಿ ಪ್ರಭುತ್ವವನ್ನು ವಿರೋಧಿಸುವ ನೆಲೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಧಾರ್ಮಿಕ ಪ್ರಭುತ್ವ, ರಾಜಪ್ರಭುತ್ವ, ಸಾಮಾಜಿಕ ಪ್ರಭುತ್ವ ಮತ್ತು ಆರ್ಥಿಕ ಪ್ರಭುತ್ವದ ಮೂಲಕ ವೈದಿಕಶಾಹಿ ಸಮಾಜದಲ್ಲಿ ಮಾಡಿದ ಹುನ್ನಾರಗಳನ್ನು ಚರ್ಚಿಸಲಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಯಸೇನ ಮತ್ತು ಆಂಡಯ್ಯ ಇಬ್ಬರ ಕಾವ್ಯಗಳೂ ಪ್ರಭುತ್ವದ ವಿರುದ್ಧದ ನೆಲೆಯಲ್ಲಿ ಕೆಲಸ ಮಾಡಿದಂತವು. ಅದುವರೆಗೆ ಪ್ರಭುತ್ವ ಮಾನ್ಯ ಮಾಡುತ್ತಿದ್ದ ಭಾಷೆ ಸಂಸ್ಕೃತಭೂಯಿಷ್ಠವಾದುದಾಗಿತ್ತು. ಆದರೆ ಆಂಡ್ಯ ಅಚ್ಚಗನ್ನಡವನ್ನು ಮತ್ತು ನಯಸೇನ ಜನಕ್ಕೆ ಹತ್ತಿರವಾದ ದೇಶಿ ಭಾಷೆಯನ್ನು ಬಳಸುತ್ತಾರೆ. ಹೀಗೆ ಸಂಸ್ಕೃತ ಭಾಷೆಯನ್ನು ವಿರೋಧಿಸಿರುವುದನ್ನು ಈ ಲೇಖನಗಳಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ವಚನ ಸಾಹಿತ್ಯ ವೈದಿಕಶಾಹಿಯ ಹುನ್ನಾರಗಳನ್ನು, ಮೌಢ್ಯಗಳನ್ನು ವಿರೋಧಿಸಿರುವುದನ್ನು ಈ ಲೇಖನಗಳಲ್ಲಿ ಚರ್ಚೆಗೆ ಒಳಪಡಿಸಲಾಗಿದೆ ಮತ್ತು ವೈದಿಕ ವಿರೋಧಿ ಧೋರಣೆಯ ಗ್ರಹಿಕೆಗಳ ಬಗ್ಗೆ ಮಾಹಿತಿಯನ್ನು ಕೊಡಲಾಗಿದೆ.

ಚಂದ್ರಿಕಾ ಪಿ. ಅವರು ಸಂಪಾದನೆ ಮಾಡಿರುವ 'ಯಾರ ಜಪ್ತಿಗೂ ಸಿಗದ ನವಿಲುಗಳು' ಎಂಬ ಪುಸ್ತಕವು ದೇವನೂರ ಮಹಾದೇವರ ಸಾಹಿತ್ಯ ಕುರಿತು ವಿವಿಧ ಲೇಖಕರು ವಿಮರ್ಶೆ, ವಿಶ್ಲೇಷಣೆ ಮಾಡಿರುವುದನ್ನು ಕಾಣಬಹುದಾಗಿದೆ. ದೇವನೂರು ಮಹಾದೇವ ಅವರ ಕಥೆ, ಕಾದಂಬರಿಯಲ್ಲಿ ವ್ಯಕ್ತವಾಗಿರುವ ಭಾಷೆ, ಸಂಸ್ಕೃತಿ, ದಲಿತ ಚಿಂತನೆ ಮತ್ತು ವೈಚಾರಿಕ ಪ್ರಜ್ಞೆಯನ್ನು ವಿವರಿಸಲಾಗಿದೆ. ಸಿದ್ಧಲಿಂಗಯ್ಯ ಅವರು ಬರೆದಿರುವ 'ಭಾಷೆಯ ಮೂಲಕ ಉಲ್ಲಂಘನೆ ಮತ್ತು ಪ್ರತಿಭಟನೆ' ಲೇಖನವು ದೇವನೂರು ಮಹಾದೇವ ಅವರು ಸಾಹಿತ್ಯದಲ್ಲಿ ಬಳಸಿರುವ ಭಾಷೆಯ ಬಗ್ಗೆ ವಿವರಿಸಲಾಗಿದೆ. ಶಿಷ್ಟಾಚಾರದ ಉಲ್ಲಂಘನೆ ಮತ್ತು ಪ್ರತಿಭಟನೆಯಾಗಿ ದೇವನೂರ ಮಹಾದೇವ ಅವರ ಭಾಷೆ ಕಾಣುತ್ತದೆ ಎಂದು ವಿಶ್ಲೇಷಣೆ ಮಾಡಲಾಗಿದೆ. ಈ ಪುಸ್ತಕದಲ್ಲಿ ದೇವನೂರ ಮಹಾದೇವ ಅವರ ಒಟ್ಟು ಸಾಹಿತ್ಯವನ್ನು ವಿಮರ್ಶೆಗೆ ಒಳಪಡಿಸಲಾಗಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಬದುಕು-ಬರಹ ಎಂಬ ಪುಸ್ತಕವನ್ನು ಕರೀಗೌಡ ಬೀಚನಹಳ್ಳಿ ಅವರು ಬರೆದ್ದಾರೆ. ಈ ಪುಸ್ತಕದಲ್ಲಿ ತೇಜಸ್ವಿ ಅವರ ಒಟ್ಟು ಸಾಹಿತ್ಯವನ್ನು ವಿಶ್ಲೇಷಣೆ ಮಾಡಿದ್ದಾರೆ ಹಾಗೂ ಸಾಂಸ್ಕೃತಿಕ-ವೈಚಾರಿಕ ಕಾಳಜಿಗಳನ್ನು ವಿವರಣಾತ್ಮಕವಾಗಿ ಈ ಕೃತಿಯಲ್ಲಿ ವಿವರಿಸಿದ್ದಾರೆ. ತೇಜಸ್ವಿ ಅವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಲೇಖನದಲ್ಲಿ ವ್ಯಕ್ತವಾಗುವ ವೈದಿಕ ವಿರೋಧಿ ಪ್ರಜ್ಞೆ ಬಗ್ಗೆ ವಿವರಿಸಲಾಗಿದೆ. ತೇಜಸ್ವಿ ಅವರ ಕಥೆಗಳಲ್ಲಿ ವ್ಯಕ್ತವಾಗಿರುವ ವೈಚಾರಿಕ ಪ್ರಜ್ಞೆ ಬಗ್ಗೆ ಚರ್ಚಿಸಲಾಗಿದೆ. ಸ್ವರೂಪ, ಚಿದಂಬರ ರಹಸ್ಯ ಕಾದಂಬರಿಯಲ್ಲಿ ಕಾಣುವ ವೈದಿಕ ವಿರೋಧಿ ದೃಷ್ಟಿಕೋನದ ಸುಳುಹುಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಕುವೆಂಪು ಅವರ ಪುರೋಹಿತಶಾಹಿ ಮೌಲ್ಯಗಳು, ವೈದಿಕಶಾಹಿ ಚಿಂತನೆಗಳ ವಿರೋಧಿಯಾಗಿರುವುದನ್ನು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಕಾದಂಬರಿಯ ಹಿನ್ನೆಲೆಯಲ್ಲಿ ಕುವೆಂಪು ಕೃತಿಗಳಲ್ಲಿ ಬ್ರಾಹ್ಮಣತ್ವದ ವಿರೋಧ ಹಾಗೂ ದೇಸಿ ಚಿಂತನೆ ಎಂಬ ಲೇಖನದಲ್ಲಿ ಬಂಜಗೆರೆ ಜಯಪ್ರಕಾಶ್ ಅವರ ಚರ್ಚೆಗಳು ಮತ್ತು ವೈದಿಕ ವಿರೋಧಿ ನಿಲುವು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ.

ಪೂರ್ಣಚಂದ್ರ ತೇಜಸ್ವಿ ವೈಚಾರಿಕ ನಿಲುವುಗಳು ಅಥವಾ ಒಂದು ಬದುಕಿನ ಬಗ್ಗೆ ಲೇಖನವನ್ನು ಕೆ.ಸಿ. ಶಿವಾರೆಡ್ಡಿ ಅವರು ಬರೆದಿದ್ದು, ವಡ್ಡಗೆರೆ ನಾಗರಾಜಯ್ಯ ಅವರು ಸಂಪಾದಿಸಿರುವ ಸಮಾಜವಾದಿಗಳ ನೆನಪಿನ ಸಂಪುಟದಲ್ಲಿ ಪ್ರಕಟವಾಗಿದೆ. ತೇಜಸ್ವಿ ಅವರ ಒಟ್ಟು ಬರಹಗಳಲ್ಲಿ ವೈಚಾರಿಕತೆಯ ಪ್ರಜ್ಞೆ ಚಿಂತನೆಗಳು, ಪುರೋಹಿತಶಾಹಿ ವರ್ಗದ ಬೌದ್ಧಿಕ ದಬ್ಬಾಳಿಕೆ, ತೇಜಸ್ವಿ ಬರಹಗಳಲ್ಲಿ ವ್ಯಕ್ತವಾಗಿರುವ ವೈದಿಕಶಾಹಿ ಧೋರಣೆಗಳು, ಹಿಂದೂ-ಮುಸ್ಲಿಂ ಮೂಲಭೂತವಾದಿಗಳ ತಂತ್ರಗಳು, ಮನುಷ್ಯನ ಧಾರ್ಮಿಕ ಮತಾಂಧತೆಗಳನ್ನು ಈ ಲೇಖನದಲ್ಲಿ ಕಾಣಬಹುದಾಗಿದೆ.

ಭಾರತದ ವೈದಿಕ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುವ 'ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ' ಎಂಬ ಕೃತಿಯು ಭಾರತದ ಸುಮಾರು ೪೦ ಶತಮಾನಗಳ ಇತಿಹಾಸವನ್ನು ಅವಲೋಕಿಸಲಾಗಿರುವ ಕೃತಿಯನ್ನು ಸ್ವಾಮಿ ಧರ್ಮತೀರ್ಥ ಬರೆದಿದ್ದು, ಕನ್ನಡಕ್ಕೆ ಭಗವಾನ್ ಅನುವಾದಿಸಿದ್ದಾರೆ ಈ ಕೃತಿಯು ವೈಚಾರಿಕ ಹಾಗೂ ಬೌದ್ಧಿಕ ಬರಹಗಳನ್ನು ಒಳಗೊಂಡ ಕೃತಿಯಾಗಿದೆ. ಬ್ರಾಹ್ಮಣ ಸಾಮ್ರಾಜ್ಯಶಾಹಿಯು ಚರಿತ್ರೆಯುದ್ದಕ್ಕೂ ಬೆಳೆದುಬಂದ ಬಗೆ, ವೈದಿಕ ಯುಗ, ಬೌದ್ಧ ಯುಗ, ಮುಸ್ಲಿಮರ ಆಳ್ವಿಕೆಯಲ್ಲಿ, ಬ್ರಿಟಿಷರ ಆಳ್ವಿಕೆಯಲ್ಲಿ, ಬ್ರಾಹ್ಮಣ ಸಾಮ್ರಾಜ್ಯಶಾಹಿಯ ಆಧಿಪತ್ಯ, ಕ್ರೌರ್ಯ, ಅಸಮಾನತೆ, ಯಜಮಾನಿಕೆ, ಪುರೋಹಿತರ ಮೂಢಾಚಾರಗಳು, ಬ್ರಾಹ್ಮಣರ ದಬ್ಬಾಳಿಕೆ, ಜಾತಿವ್ಯವಸ್ಥೆ, ಕ್ಷತ್ರಿಯ ಬ್ರಾಹ್ಮಣ ಸಂಘರ್ಷ, ಬ್ರಾಹ್ಮಣ ಧರ್ಮ ಮತ್ತು ಬೌದ್ಧ ಧರ್ಮಗಳ ಮುಖಾಮುಖಿ, ವಸಹಾತು ಸಂದರ್ಭದಲ್ಲಿನ ಬ್ರಾಹ್ಮಣ ಧರ್ಮ, ಪುರೋಹಿತಶಾಹಿಯ ರಾಜಕೀಯ ಆರ್ಥಿಕ, ಸಾಮಾಜಿಕವಾಗಿ ಹಿಂದೂ ಸಾಮ್ರಾಜ್ಯಶಾಹಿಯ ಮೇಲೆ ಬ್ರಾಹ್ಮಣ ಸಾಮ್ರಾಜ್ಯಶಾಹಿಯ ಪರ್ಯಾಯವಾಗಿ ಪ್ರಭಾವ ಬಿದ್ದಿರುವುದನ್ನು ನೋಡಬಹುದಾಗಿದೆ. ಈ ಕೃತಿಯು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ.

'ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಮತ್ತು ದ್ರಾವಿಡ ಚಳುವಳಿ' ಎಂಬ ಲೇಖನವನ್ನು ತೇಜಸ್ವಿ ಕಟ್ಟಿಮನಿ ಅವರು ಬರೆದಿದ್ದಾರೆ. ಈ ಲೇಖನವು ವಿರೂಪಾಕ್ಷಿ ಪೂಜಾರಹಳ್ಳಿ ಸಂಪಾದಿಸಿರುವ 'ದಲಿತರು ಮತ್ತು ಚರಿತ್ರೆ' ಎಂಬ ಪುಸ್ತಕದಲ್ಲಿ ಪ್ರಕಟಕೊಂಡಿದೆ. ದಕ್ಷಿಣ ಭಾರತದಲ್ಲಿ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರು ದ್ರಾವಿಡ ಚಳುವಳಿಯ ಮೂಲಕ ಬ್ರಾಹ್ಮಣರ ಅಮಾನವೀಯ ಆಚರಣೆಗಳನ್ನು ವಿರೋಧಿಸಿರುವುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ದ್ರಾವಿಡ ಚಳುವಳಿ ಹುಟ್ಟಿಗೆ ಕಾರಣ, ಪೆರಿಯಾರ್ ಅವರ ವೈಚಾರಿಕ ಚಿಂತನೆಗಳು, ವೈಕಂ ಸತ್ಯಾಗ್ರಹ, ಸ್ವಗೌರವ ಚಳುವಳಿ, ಮೂರ್ತಿಭಂಜನೆ ಗುಡಿ ಗುಂಡಾರ ಬಹಿಷ್ಕಾರ ಚಳುವಳಿ, ಸ್ವಗೌರವ ವಿವಾಹ

ಮಾಹಿತಿಯನ್ನು ಈ ಲೇಖನದಲ್ಲಿ ಕೊಡಲಾಗಿದೆ. "ಪೌರಾಣಿಕ ಆದರ್ಶಗಳ ಹಿನ್ನೆಲೆಯಲ್ಲಿ ರಾಜಕೀಯ ಅಧಿಕಾರ ಹಾಗೂ ಸಾಮಾಜಿಕ ಶಕ್ತಿ ಕೇಂದ್ರಗಳಾಗಿ ಬ್ರಾಹ್ಮಣ ಪುರೋಹಿತರ ಕೈಯಲ್ಲಿ ಧಾರ್ಮಿಕ, ನ್ಯಾಯಿಕ ಮುಖಂಡತ್ವ ಅನೂಚಾನವಾಗಿ ಕೇಂದ್ರೀಕೃತವಾಗಿರುವುದರಿಂದ, ಪಾಪ ಪುಣ್ಯಗಳೆಂಬ ಮಂತ್ರದಂಡದಿಂದ ವೈದಿಕ ಮುಖಂಡರು, ಸ್ಥಳೀಯ ನಾಯಕರನ್ನು, ಹಳ್ಳಿಗಳ ಹಿರಿಯರನ್ನು, ಮಂತ್ರವಾದಿಗಳನ್ನು, ವೈಚಾರಿಗಳನ್ನು, ಸಣ್ಣ ಪುಟ್ಟ ಪುರೋಹಿತರನ್ನು ತಮಗೆ ತಕ್ಕ ಹಾಗೆ ಕುಣಿಸುವ ದೃಶ್ಯ ಇಲ್ಲಿ ಸರ್ವೇ ಸಾಮಾನ್ಯವಾಗಿದ್ದ ಕಾಲವೊಂದಿತ್ತು."[೫] ಹೀಗೆ ಪ್ರಭುತ್ವವನ್ನು ತನ್ನ ವಶಮಾಡಿಕೊಂಡ ಪುರೋಹಿತಶಾಹಿ ಸಮಾಜದಲ್ಲಿ ವೇದ, ಮೂರ್ತಿಪೂಜೆ, ಅಚರಣೆಗಳು, ಜಾತಿ, ಕರ್ಮ ಸಿದ್ಧಾಂತದ ನಂಬಿಕೆ, ಮೋಕ್ಷ ಮುಂತಾದ ಅಮಾವೀಯ ಆಚರಣೆಗಳನ್ನು ಜನಸಾಮನ್ಯರಿಗೆ ಹೇರಲಾಯಿತು. ಹೀಗೆ ಈ ಲೇಖನದಲ್ಲಿ ವೈದಿಕಶಾಹಿಯ ಹುನ್ನಾರಗಳನ್ನು ಚರ್ಚಿಸಲಾಗಿದೆ ಮತ್ತು ವೈದಿಕ ಆಚರಣೆಗಳನ್ನು ವಿರೋಧ ಮಾಡಿರುವುದರ ಬಗ್ಗೆ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ದೇಜಗೌ ಅವರು ಬರೆದಿರುವ 'ಮಹಾಕವಿ ಕುವೆಂಪು ದರ್ಶನ' ಎಂಬ ಪುಸ್ತಕದಲ್ಲಿ ಕುವೆಂಪು ವಿಶ್ವಮಾನವ ಸಂದೇಶ, ಅಭಿಜಾತ ವಿಡಂಬನಕಾರ ಕುವೆಂಪು, ಶಿಕ್ಷಣ ತತ್ತ್ವವಿಚಾರ, ವಿಚಾರಕ್ರಾಂತಿಗೆ ಕುವೆಂಪು ಕರೆ ಎಂಬ ಅಧ್ಯಾಯಗಳಲ್ಲಿ ಕುವೆಂಪು ವ್ಯಕ್ತಪಡಿಸಿದ ವೈದಿಕ ವಿರೋಧಿ ಚಿಂತನೆಗಳ ಬಗ್ಗೆ ವಿಶ್ಲೇಷಣೆ ಮತ್ತು ವಿಮರ್ಶೆಯನ್ನು ಮಾಡಲಾಗಿದೆ. ಪುರೋಹಿತಶಾಹಿ ಎಂಬ ಪರಿಕಲ್ಪನೆಯನ್ನು ವಿಶಾಲ ದೃಷ್ಟಿಕೋನದಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಬ್ರಾಹ್ಮಣರನ್ನು ಕುವೆಂಪು ನಾಟಕ ಮತ್ತು ಕಾವ್ಯಗಳಲ್ಲಿ ವ್ಯಂಗ್ಯ, ವಿಡಂಬನೆ ಮತ್ತು ಹಾಸ್ಯ ಮಾಡುವುದರ ಮೂಲಕ ವೈದಿಕರನ್ನು ವಿರೋಧಿಸಿರುವ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಒಟ್ಟಿನಲ್ಲಿ ಈ ಕೃತಿಯಲ್ಲಿ ಕುವೆಂಪು ಅವರ ವೈಚಾರಿಕ ಚಿಂತನೆಗಳನ್ನು ಚರ್ಚಿಸಲಾಗಿದೆ.

ದಿನೇಶ್ ಹೆಗಡೆ ಬರೆದಿರುವ 'ದ್ರಾವಿಡ ಮತ್ತು ಹಿಂದುಳಿದ ವರ್ಗಗಳ ಚಳವಳಿಗಳು' ಎಂಬ ಲೇಖನವು ವಿಜಯ್ ಪೂಣಚ್ಚ ತಂಬಂಡ ಅವರು ಸಂಪಾದಿಸಿದ 'ಭಾರತ ಉಪಖಂಡದ ಆಧುನಿಕ ಚರಿತ್ರೆ' ಪುಸ್ತಕದಲ್ಲಿ ಪ್ರಕಟಕೊಂಡಿದೆ. ಈ ಲೇಖನದಲ್ಲಿ ಭಾರತದ ಸಾಮಾಜಿಕ ಸುಧಾರಕರಾದ ಜ್ಯೋತಿಬಾ ಫುಲೆ, ಪೆರಿಯಾರ್, ಶ್ರೀ ನಾರಾಯಣ ಗುರು ಇವರು ವೈದಿಕ ಚಿಂತನೆಗಳ ವಿರುದ್ಧ ಚಳುವಳಿಯನ್ನು ಮಾಡಲು ಮುಂದಾಗಿರುವ ಬಗ್ಗೆ ವಿವರಿಸಲಾಗಿದೆ. ಹಾಗೂ ದಕ್ಷಿಣ ಭಾರತದಲ್ಲಿ ಬ್ರಾಹ್ಮಣೇತರ ಚಳುವಳಿ ಹುಟ್ಟಿಗೆ ಕಾರಣ ಮತ್ತು ಪರಿಣಾಮವನ್ನು ವಿಶ್ಲೇಷಣೆ ಮಾಡಲಾಗಿದೆ. ಒಟ್ಟಿನಲ್ಲಿ ಈ ಲೇಖನವು ವೈದಿಕ ವಿರೋಧಿ ಚಿಂತನೆಗಳನ್ನು ವಿರೋಧಿಸಲು ಬ್ರಾಹ್ಮಣೇತರರು ಮಾಡಿದ ಚಳುವಳಿಯ ಬಗ್ಗೆ ಮಾಹಿತಿಯನ್ನು ಕೊಡುತ್ತದೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ 'ವಚನ ಸಾಹಿತ್ಯ ಸಂವಾದ' ಲೇಖನಗಳನ್ನು ಪ್ರಜಾವಾಣಿ ಪ್ರಕಾಶನ ಪ್ರಕಟಿಸಿದೆ. ಈ ಪುಸ್ತಕದಲ್ಲಿ 'ವಚನ ಸಾಹಿತ್ಯ: ವೈದಿಕ ವಿರೋಧ ಮತ್ತು ಜಾತಿನಿರಸನ' ಕುರಿತು ಎಂ.ಎಂ. ಕಲಬುರ್ಗಿ, 'ವಚನ ಸಾಹಿತ್ಯ: ಅಪವರ್ಣೀಕರಣ... ವೈದಿಕ

ವಿರೋಧ' ಕುರಿತು ಎಸ್.ಜಿ. ಸಿದ್ಧರಾಮಯ್ಯ, 'ವೈದಿಕ ವಿರೋಧಿ ನಿಲುವೇ ವಚನಕಾರರ ಮೂಲ ಗುರಿ' ಕುರಿತು ಬಿ.ಎಲ್. ವೇಣು ಅವರ ಲೇಖನದಲ್ಲಿ ವಚನ ಸಾಹಿತ್ಯದ ವಚನಕಾರರು ವಚನಗಳ ಮೂಲಕ ವೈದಿಕ ಧರ್ಮವನ್ನು ವಿರೋಧಿಸಿರುವ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ವೈದಿಕ ಧರ್ಮ ಸೃಷ್ಟಿಸಿದ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆಗಳನ್ನು ವಚನಕಾರರು ವಿರೋಧಿಸಿರುವ ಬಗ್ಗೆ ಚರ್ಚಿಸಲಾಗಿದೆ. ಒಟ್ಟಿನಲ್ಲಿ ೧೨ನೇ ಶತಮಾನದ ವಚನ ಸಾಹಿತ್ಯ ವೈದಿಕ ವಿರೋಧಿ ಪ್ರಜ್ಞೆಯನ್ನು ಹೊಂದಿರುವ ವಿವರಗಳನ್ನು ಈ ಲೇಖನದಲ್ಲಿ ಗುರುತಿಸಬಹುದಾಗಿದೆ.

ಜ.ಹೊ. ನಾರಾಯಣಸ್ವಾಮಿ ಬರೆದಿರುವ 'ಬ್ರಾಹ್ಮಣ್ಯದ ತಂತ್ರಗಳು, ಅದರ ಭಾಷೆ, ನುಡಿಕಟ್ಟು ಇತ್ಯಾದಿ' ಎಂಬ ಲೇಖನವು ಎಚ್.ಟಿ. ಪೋತೆ ಸಂಪಾದಿಸಿರುವ ವಿಚಾರ ಸಾಹಿತ್ಯ ೨೦೦೬ ಪುಸ್ತಕದಲ್ಲಿ ಪ್ರಕಟವಾಗಿದೆ. ಈ ಲೇಖನವು ವೈದಿಕ ವಿರೋಧಿ ಪ್ರಜ್ಞೆಯನ್ನು ಧ್ವನಿಸುವ ಲೇಖನವಾಗಿದೆ. ಪುರೋಹಿತಶಾಹಿ ಸಮಾಜದಲ್ಲಿ ಜನರನ್ನು ವಂಚಿಸುವ ವಂಚನೆಗಳ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ. ಬ್ರಾಹ್ಮಣಿಕೆಯನ್ನು ನಾವೆಲ್ಲರೂ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ರಕ್ತಗತ ಮಾಡಿಕೊಳ್ಳುವ ಅಪಾಯಗಳ ಬಗ್ಗೆ ವಿವರಿಸಲಾಗಿದೆ. ವೈದಿಕಶಾಹಿಯ ತಂತ್ರಗಳಿಂದ ಸಮಾಜದಲ್ಲಿ ಮಾಧ್ಯಮಗಳು ಬ್ರಾಹ್ಮಣ್ಯೀಕರಣಗೊಂಡು ವಿಜೃಂಭಣೆಯಿಂದ ಮೆರೆಯುತ್ತಿರುವುದರ ಬಗ್ಗೆ ಈ ಲೇಖನದಲ್ಲಿ ಖಂಡಿಸಲಾಗಿದೆ. ಬ್ರಾಹ್ಮಣ್ಯದ ತಂತ್ರಗಳು ಸೌಮ್ಯವಾಗಿ ಕ್ರೌರ್ಯವನ್ನು ಎಸಗುತ್ತಾ ಎಲ್ಲರ ತಲೆ ಮೇಲೆ ಮೆರೆಯುತ್ತಾ ಇದೆ ಎಂದು ವೈದಿಕ ವಿರೋಧವನ್ನು ವ್ಯಕ್ತಪಡಿಸಲಾಗಿದೆ. "ಭಾರತದ ಇತಿಹಾಸವನ್ನು ಗಮನಿಸಿದರೆ ಬಹುಸಂಖ್ಯಾತರಾದ ಶೂದ್ರರಿಗೆ, ಸ್ತ್ರೀಯರಿಗೆ ವಿದ್ಯೆಯಾಗಲಿ, ಸಾಮಾಜಿಕ ಮನ್ನಣೆಯಾಗಲಿ ಸಿಗಲಿಲ್ಲ. ಬ್ರಾಹ್ಮಣ್ಯ ಮನುಸ್ಮೃತಿ ಮುಂತಾದವನ್ನು ರಚಿಸಿಕೊಂಡು ತಂತ್ರಗಳ ಮೂಲಕ ಮಾಡಿದ ನಯವಂಚನೆಗಳು ಜನಸಾಮಾನ್ಯ ಅವಿದ್ಯಾವಂತ ವರ್ಗಕ್ಕೆ ಅರಿವಾಗಲಿಲ್ಲ. ನಿಮ್ಮ ಏಳಿಗೆಗೋಸ್ಕರವೇ ಮಾಡುತ್ತಿದ್ದೇವೆ ಅಂತ ದೇವರು ಧರ್ಮದ ಹೆಸರಿನಲ್ಲಿ ಜೇನುತುಪ್ಪದ ಲೇಪನವನ್ನು ಮೂಗಿಗೆ ಹಚ್ಚಿ ತನ್ಮೂಲಕ ಶೋಷಣೆ ಮಾಡುವ ಬ್ರಾಹ್ಮಣರ ಕ್ರೂರ ವ್ಯವಸ್ಥೆಯ ಅಡಿಯಲ್ಲಿ ಬೆಳೆದು ಬಂದಿದ್ದೇವೆ. ಆ ನಯವಂಚನೆ ಅಂದಿಗೇ ನಿಲ್ಲದೆ ಇಂದಿಗೂ ನವೀಕರಣಗೊಂಡು ತನ್ನ ಪ್ರಾಬಲ್ಯವನ್ನು ಬ್ರಾಹ್ಮಣ್ಯ ಮೆರೆಯುತ್ತಲೇ ಇದೆ. ಪೂಜೆಯ ಮಂಗಳಾರತಿಯನ್ನು ಸ್ವೀಕರಿಸುವುದೆಂದರೆ ಬ್ರಾಹ್ಮಣ್ಯವನ್ನು ಒಪ್ಪಿಕೊಂಡಂತೆ. ಅಗ್ನಿಶಿಖೆಯನ್ನು ಬಿಟ್ಟ ಅವರು ಅಗ್ನಿ ಪುತ್ರರು. ಮಂಗಳಾರತಿ ಅಗ್ನಿಯ ಸಂಕೇತ. ಇಷ್ಟು ಸೂಕ್ಷ್ಮವಾಗಿ ಬ್ರಾಹ್ಮಣ್ಯ ಶೂದ್ರರನ್ನು ಸೆರೆ ಹಿಡಿದಿದೆ. ಏಕೆಂದರೆ ಶೂದ್ರವರ್ಗ ವಿದ್ಯೆಯಿಂದ ವಂಚಿತವಾದ ವರ್ಗ. ಬ್ರಿಟಿಷರು ಬರಲಾಗಿ ಶೂದ್ರರಿಗೆ ವಿದ್ಯೆ ಸಿಕ್ಕಿದೆ. ಡಾ. ಅಂಬೇಡ್ಕರ್ ಅಂಥ ಮೇಧಾವಿ ಚಿಂತಕರು ಈ ದೇಶದ ಹೀನ ಸಂಸ್ಕೃತಿಯನ್ನು ಅರಿತು ಬಹಿರಂಗವಾಗಿ ಅಸಮಾನತೆಯ ಮನುಸ್ಮೃತಿಯನ್ನು ಸುಟ್ಟು ದೇಶಕ್ಕೆ ಸಮಾನತೆಯ ಸಂವಿಧಾನವನ್ನು ಕೊಟ್ಟಿದ್ದಾರೆ."[5] ಹೀಗೆ ಅಮಾನವೀಯತೆಯಿಂದ ಕೂಡಿದ ಬ್ರಾಹ್ಮಣ್ಯವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಈ ಲೇಖನವನ್ನು ರಚಿಸಲಾಗಿದೆ ಮತ್ತು ಬ್ರಾಹ್ಮಣ್ಯದ ಸುಲಿಗೆಯ ತಂತ್ರಗಳನ್ನು ವಿಶ್ಲೇಷಿಸುವುದರ ಮೂಲಕ ವಿರೋಧವನ್ನು ವ್ಯಕ್ತಪಡಿಸಲಾಗಿದೆ.

'ಕಹಳೆ' ವಾರಪತ್ರಿಕೆಯಲ್ಲಿ ಪ್ರಕಟವಾದ ಸಿದ್ಧಲಿಂಗಯ್ಯ ಅವರ ಸಂದರ್ಶನವು 'ಉರಿಕಂಡಾಯ' ಕೃತಿಯಲ್ಲಿ 'ದಲಿತರ ಬ್ರಾಹ್ಮಣೀಕರಣ ಅಪಾಯಕರ' ಎಂಬ ಶೀರ್ಷಿಕೆಯಲ್ಲಿದೆ. ಈ ಸಂದರ್ಶನದಲ್ಲಿ ಬ್ರಾಹ್ಮಣೀಕರಣದ ಅಪಾಯದ ಬಗ್ಗೆ ಸಿದ್ಧಲಿಂಗಯ್ಯ ಅವರು ಈ ರೀತಿ ಹೇಳಿದ್ದಾರೆ. "ದಲಿತರು ಬ್ರಾಹ್ಮಣೀಕರಣಗೊಳ್ಳುತ್ತಿದ್ದಾರೆನ್ನುವುದರಲ್ಲಿ ಅರ್ಥವಿದೆ, ಆದರೆ, ಬ್ರಾಹ್ಮಣರು ಜಾಗತೀಕರಣಗೊಳ್ಳುತ್ತಿದ್ದಾರೆ. ದಲಿತರು ಬ್ರಾಹ್ಮಣೀಕರಣಗೊಳ್ಳುತ್ತಿದ್ದಾರೆ. ಇದು ಎರಡೂ ಅಪಾಯಗಳೇ. ಒಂದು ಪುರೋಹಿತಶಾಹಿ ಪ್ರವೃತ್ತಿ ದಲಿತ ವರ್ಗದಲ್ಲಿ ಬರುತ್ತಿರುವುದು, ಅದರಲ್ಲೂ ವಿದ್ಯಾವಂತ ದಲಿತರಲ್ಲಿ ಎದ್ದು ಕಾಣುತ್ತಿರುವುದು ತುಂಬಾ ಅಪಾಯಕರ. ಇದರ ವಿರುದ್ಧ ನಾವು ಹೋರಾಟ ಮಾಡಬೇಕಾಗಿದೆ. ದಲಿತರು ಬ್ರಾಹ್ಮಣೀಕರಣಗೊಳ್ಳುತ್ತಿದ್ದಾರೆಂದರೆ ಮತ್ತೆ ದಲಿತರು ಶೋಷಕರಾಗೋದು ಅಂತ. ಶೋಷಿತರಾಗಿದ್ದ ದಲಿತರು ಶೋಷಕರ ಒಂದು ಮನೋಧರ್ಮವನ್ನು, ಶೋಷಕರ ಒಂದು ಸಿದ್ಧಾಂತವನ್ನು ಒಪ್ಪಿಕೊಂಡಂತಾಗುತ್ತದೆ. ಆದ್ದರಿಂದ ಬ್ರಾಹ್ಮಣೀಕರಣ ಒಂದು ಜಾತಿ ಅಂತ ನಾನು ಹೇಳೋಲ್ಲ. ಅದು ಎಲ್ಲಾ ಜಾತಿಯಲ್ಲೂ ಕೂಡ ಬ್ರಾಹ್ಮಣೀಕರಣ ಇವತ್ತು ಬರುತ್ತಿದೆ. ದಲಿತರಲ್ಲೂ ಕೂಡ ನವ ಬ್ರಾಹ್ಮಣೀಕರಣ ಸೃಷ್ಟಿಯಾಗುತ್ತಿದೆ. ಇದನ್ನು ನಾವು ಬಲವಾಗಿ ವಿರೋಧಿಸಬೇಕಾಗಿದೆ."[೭] ಈ ಮೇಲಿನ ಮಾತುಗಳು ವೈದಿಕ ಪ್ರಜ್ಞೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ದಲಿತರು ಬ್ರಾಹ್ಮಣೀಕರಣದ ಅಪಾಯಕ್ಕೆ ಸಿಲುಕಿ ಮತ್ತೆ ಶೋಷಿತರಾಗುತ್ತಿದ್ದಾರೆ ಹಾಗೂ ವೈದಿಕ ಪ್ರಜ್ಞೆಯು ಜಾಗತೀಕರಣದಲ್ಲಿ ಸೇರಿಕೊಂಡು ಮತ್ತಷ್ಟು ಅಪಾಯವನ್ನು ಒಡ್ಡುತ್ತಿರುವುದನ್ನು ಸಿದ್ಧಲಿಂಗಯ್ಯ ಅವರು ಗುರುತಿಸಿರುವುದನ್ನು ಕಾಣಬಹುದಾಗಿದೆ.

ರಾಜಾರಾಮ ಹೆಗಡೆ ಅವರು 'ಸಂಚಯ ದ್ವೈಮಾಸಿಕ' ಪತ್ರಿಕೆಯಲ್ಲಿ ಬರೆದಿರುವ 'ಕುವೆಂಪು 'ನೆನಪಿನ ದೋಣಿಯಲ್ಲಿ'; ಜಾತಿವ್ಯವಸ್ಥೆ ಕುರಿತ ಅಭಿಜಾತ ಕ್ಲಾಸಿಕಲ್ ನಿರೂಪಣೆಯ ಚೌಕಟ್ಟು' ಎಂಬ ಲೇಖನವಿದೆ. ಈ ಲೇಖನದಲ್ಲಿ ಕುವೆಂಪು ಅವರು ನೆನಪಿನ ದೋಣಿಯಲ್ಲಿ ಉಲ್ಲೇಖಿಸಿರುವ ಬ್ರಾಹ್ಮಣ ವಿರೋಧಿ ಚಿಂತನೆಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಕುವೆಂಪು ಬರವಣಿಗೆ, ವರ್ತಮಾನದ ಅನುಭವ, ಪ್ರಪಂಚ ಮತ್ತು ಇತಿಹಾಸ ಜ್ಞಾನದ ಮೂಲಕವಷ್ಟೇ ದೃಷ್ಟಾಂತವಾಗಲು ಸಾಧ್ಯವಿರುವ ಅರ್ಥ ಪ್ರಪಂಚ ಇವರ ಬರವಣಿಗೆಗಳಲ್ಲಿ ಕಾಣಬಹುದು ಎಂದು ಗುರುತಿಸಿದ್ದಾರೆ. ಕುವೆಂಪು ಅವರ ಬರವಣಿಗೆಗಳಲ್ಲಿ ವ್ಯಕ್ತವಾಗಿರುವ ಹಿಂದೂಧರ್ಮ ಮತ್ತು ಜಾತಿವ್ಯವಸ್ಥೆಯ ಕುರಿತ ಗ್ರಹಿಕೆಗಳನ್ನು ಪಟ್ಟಿ ಮಾಡಿದ್ದಾರೆ. ಕುವೆಂಪು ವಿಚಾರಗಳು ಅವರ ಕಾಲದಲ್ಲಿ ಇದ್ದ ಭಾರತೀಯ ಸಾಂಸ್ಕೃತಿಕ ಇತಿಹಾಸದ ಕುರಿತು ಪ್ರಚಲಿತದಲ್ಲಿದ್ದ ಅಭಿಜಾತ ಕ್ಲಾಸಿಕಲ್ ನಿರೂಪಣೆಗಳಿಂದ ಬಂದಿರುವುದು ಎಂದು ಗುರುತಿಸಲಾಗಿದೆ. ಕುವೆಂಪು ಸನಾತನ ಹಿಂದೂಧರ್ಮಕ್ಕೆ ಮತ್ತು ಜಾತಿ ವ್ಯವಸ್ಥೆಗೆ ತೋರಿದ ಪ್ರತಿಕ್ರಿಯೆಯನ್ನು ವಿಶ್ಲೇಷಣೆ ಮಾಡಲಾಗಿದೆ.

ಜ್ಯೋತಿಬಾ ಫುಲೆ ಅವರು ಬರೆದಿರುವ 'ಪುರೋಹಿತಶಾಹಿ ಮತ್ತು ಗುಲಾಮಗಿರಿ' ಎಂಬ ಕೃತಿಯನ್ನು ಕನ್ನಡಕ್ಕೆ ಬಿ. ಶ್ರೀನಿವಾಸ ಅವರು ಅನುವಾದಿಸಿದ್ದಾರೆ. ಈ ಕೃತಿಯಲ್ಲಿ ಬ್ರಾಹ್ಮಣಶಾಹಿ ಶತಶತಮಾನದಿಂದ ಧರ್ಮ ಮತ್ತು ನಂಬಿಕೆಯ ಹೆಸರಿನಲ್ಲಿ ಕೆಳವರ್ಗದ ಜನರನ್ನು ಶೋಷಣೆ

ಮಾಡುತ್ತ ಬಂದಿರುವ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಪುರೋಹಿಶಾಹಿ ಧರ್ಮಗ್ರಂಥಗಳು ಮತ್ತು ಪುರಾಣಗಳನ್ನು ತಮ್ಮ ಅನೂಕೂಲಕ್ಕೆ ತಕ್ಕಂತೆ ತಿರುಚಿ ಕೆಳವರ್ಗದ ಜನರಿಗೆ ಭಯ ಭಕ್ತಿಯ ಹೆಸರಿನಲ್ಲಿ ಶೋಷಣೆ ಮಾಡಿರುವ ಬಗ್ಗೆ ವಿವರಿಸಲಾಗಿದೆ. ಪುರೋಹಿತಶಾಹಿ ಸಮಾಜದಲ್ಲಿ ಅಮಾನವೀಯ ನಂಬಿಕೆಗಳನ್ನು ಸೃಷ್ಟಿಸಿ ದಲಿತರನ್ನು ಗುಲಾಮರನ್ನಾಗಿ ಮಾಡಿಕೊಳ್ಳಲು ಮಾಡಿದ ತಂತ್ರಗಳ ಬಗ್ಗೆ ಈ ಕೃತಿಯಲ್ಲಿ ವಿವರಿಸಲಾಗಿದೆ. ಬ್ರಾಹ್ಮಣರ ಗುಲಾಮಗಿರಿ ಮತ್ತು ಶೋಷಣೆಯಿಂದ ಬಿಡುಗಡೆಗೊಳಿಸುವುದು ಈ ಪುಸ್ತಕದ ಉದ್ದೇಶವಾಗಿದೆ.

ಪಾ.ವೆಂ. ಆಚಾರ್ಯರ ಅವರ ಲೇಖನ ಸಂಗ್ರಹವಾದ 'ಬ್ರಾಹ್ಮಣರೇನು ಮಾಡಬೇಕು?" ಎಂಬುದು ಪುಸ್ತಕವಾಗಿದೆ. ಈ ಪುಸ್ತಕದಲ್ಲಿ ಬ್ರಾಹ್ಮಣ್ಯ ಎಂಬ ಅಧ್ಯಾಯದಲ್ಲಿ ಬ್ರಾಹ್ಮಣರೇನು ಮಾಡಬೇಕು? ಎಂಬ ಲೇಖನವು ಆಳವಾದ ಚಿಂತನೆಯ ಫಲವಾಗಿದೆ. ಬ್ರಾಹ್ಮಣರ ಮೇಲೆ ಮಾಡಲಾಗುವ ಆರೋಪಗಳಲ್ಲಿ ಹುರಳಿಲ್ಲವೆಂದು ತೋರಿಸುವುದೇ ಈ ಲೇಖನದ ವಸ್ತುವಾಗಿದೆ. ಬ್ರಾಹ್ಮಣ-ಬ್ರಾಹ್ಮಣೇತರ ಚರ್ಚೆಯಲ್ಲಿ ಬ್ರಾಹ್ಮಣರನ್ನು ವಿರೋಧಿಸಲಾಗಿದೆ. ಬ್ರಾಹ್ಮಣೇತರ ಜಾತಿಗಳಲ್ಲಿ ಯಾವ ರೀತಿ ಶೋಷಣೆ ಮಾಡುತ್ತಾರೆ. ಈ ಜಾತಿಗಳಲ್ಲಿಯೂ ಪುರೋಹಿತಶಾಹಿ ಇದೆ ಎಂಬುದನ್ನು ಈ ಲೇಖನವು ತೋರಿಸಿಕೊಡುತ್ತದೆ. ಬ್ರಾಹ್ಮಣರು ವಿದ್ಯೆಯನ್ನು ಗುತ್ತಿಗೆ ಹಿಡಿದವರು. ಬ್ರಾಹ್ಮಣರ ಮೆದುಳು ಎಲ್ಲರಿಗಿಂತ ಶ್ರೇಷ್ಠ ಎಂದೆಲ್ಲ ಆರೋಪಗಳಿವೆ. ಅದರೆ ಬ್ರಾಹ್ಮಣರು ವಿದ್ಯೆಯ ವಿಷಯದಲ್ಲಿ ಮುಂದುವರಿದವರು. ವಿದ್ಯೆ ಬ್ರಾಹ್ಮಣರನ್ನು ಪ್ರೇರಿಸುತ್ತಿರುವುದರಿಂದ ಅವಕಾಶ ಸಿಕ್ಕಾಗಲೆಲ್ಲ ಬ್ರಾಹ್ಮಣರು ವಿದ್ಯಾರ್ಜನೆಯನ್ನು ಉಳಿದೆಲ್ಲಕ್ಕಿಂತ ಹೆಚ್ಚಾಗಿ ಬೆಂಬತ್ತಿದವರು. ಹೀಗೆ ವಿದ್ಯೆಯನ್ನು ಪಡೆದ ಸಾಮಾನ್ಯ ಬ್ರಾಹ್ಮಣನು ಮಧ್ಯಜಾತಿಯವರಿಗಿಂತ ಬಡವನೇ ಆಗಿದ್ದಾನೆ ಎಂಬ ವಾದವನ್ನು ಮಂಡಿಸಲಾಗಿದೆ. ಬ್ರಾಹ್ಮಣವರ್ಗವನ್ನು ಮಾನವೀಯ ನೆಲೆಯಲ್ಲಿ ನೋಡಬೇಕು ಎಂಬ ಸೂಚನೆಗಳನ್ನು ಈ ಲೇಖನದಲ್ಲಿ ಮಂಡಿಸಲಾಗಿದೆ. ಬ್ರಾಹ್ಮಣರೇನು ಮಾಡಬೇಕು? ಎಂಬ ಲೇಖನಕ್ಕೆ ಬಂದ ಪ್ರತಿಕ್ರಿಯೆಗಳಿಗೆ ಪ್ರತಿಕ್ರಿಯೆಯನ್ನು ಮಂಡಿಸಲಾಗಿದೆ. ಸಂಕ್ರಮಣದಲ್ಲಿ ಭಗವಾನ್ ಬರೆದ 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕ ಮತ' ಎಂಬ ಲೇಖನಕ್ಕೆ ಪಾ.ವೆಂ. ಆಚಾರ್ಯರು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ. ಒಟ್ಟಿನಲ್ಲಿ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಬ್ರಾಹ್ಮಣ್ಯವೇ ಕಾರಣವಲ್ಲ. ಬ್ರಾಹ್ಮಣರಲ್ಲೂ ಬಡವರಿದ್ದಾರೆ. ಬ್ರಾಹ್ಮಣರು ವಿದ್ಯೆಯನ್ನು ಗುತ್ತಿಗೆ ತೆಗೆದುಕೊಂಡಿಲ್ಲ. ಎಂಬ ವಾದಗಳನ್ನು ಈ ಲೇಖನದಲ್ಲಿ ಗಮನಿಸಬಹುದಾಗಿದೆ. ಬ್ರಾಹ್ಮಣರನ್ನು ವಿರೋಧಿಸುವಾಗ ಏಕಪಕ್ಷೀಯವಾದ ವಿವೇಚನೆ ಇರಬಾರದು ಎಂಬ ನಿಲುವುಗಳನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿ

೧. ಉದ್ದಂಡಯ್ಯ, ಕುವೆಂಪು ಕಥನ, ಪುಟ ೫೭, ೫೮

೨. ಶಿವಾರೆಡ್ಡಿ ಕೆ.ಸಿ., ಕನ್ನಡದ ಹಾಡುಪಾಡು, ಪುಟ ೧೧೪, ೧೧೫

೩. ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಪುಟ ೪೬

೪. ರಹಮತ್ ತರೀಕೆರೆ, ಕನ್ನಡ ಸಂಶೋಧನೆ: ತಾತ್ವಿಕ ವಿಚಾರ, ಪುಟ ೯೫, ೯೬

೫. ತೇಜಸ್ವಿ ಕಟ್ಟಿಮನಿ(ಲೇ.), ವಿರೂಪಾಕ್ಷಿ ಪೂಜಾರಹಳ್ಳಿ(ಸಂ.), ದಲಿತರು ಮತ್ತು ಚರಿತ್ರೆ, ಪುಟ ೬೨

೬. ಎಚ್.ಟಿ. ಪೋತೆ(ಸಂ.), ಜ.ಹೊ. ನಾರಾಯಣಸ್ವಾಮಿ(ಲೇ.), 'ಬ್ರಾಹ್ಮಣ್ಯದ ತಂತ್ರಗಳು, ಅದರ ಭಾಷೆ, ನುಡಿಕಟ್ಟು ಇತ್ಯಾದಿ, ವಿಚಾರ ಸಾಹಿತ್ಯ ೨೦೦೬ ಪುಟ ೪೬, ೪೭

೭. ಸಿದ್ಧಲಿಂಗಯ್ಯ, ದಲಿತರ ಬ್ರಾಹ್ಮಣೀಕರಣ ಅಪಾಯಕರ, ಉರಿಕಂಡಾಯ, ಪುಟ ೨೦೩

* * *

ಅಧ್ಯಾಯ: ಮೂರು

ವೈದಿಕ ವಿರೋಧಿ ಪ್ರಜ್ಞೆ: ತಾತ್ವಿಕ ಚರ್ಚೆ

ಅಧ್ಯಾಯ: ಮೂರು

ವೈದಿಕ ವಿರೋಧಿ ಪ್ರಜ್ಞೆ: ಪರಿಕಲ್ಪನೆಯ ತಾತ್ವಿಕ ಚರ್ಚೆ

ವೈದಿಕ ವಿರೋಧಿ ಪ್ರಜ್ಞೆ ಎಂಬುದು ಈ ಅಧ್ಯಯನದ ಪರಿಕಲ್ಪನೆಯಾಗಿದೆ. ಸಂಶೋಧನಾ ಬರವಣಿಗೆಯ ಸ್ವರೂಪದ ಪ್ರಕಾರ, ಅಧ್ಯಯನದ ಪ್ರಸ್ತಾವನೆಯ ನಂತರದ ಅಧ್ಯಾಯದಲ್ಲಿ ಇದರ ಪರಿಕಲ್ಪನೆಯನ್ನು ಕುರಿತು ಚರ್ಚೆ ಮಾಡಬೇಕು. ಈ ದೃಷ್ಟಿಯಿಂದ ಈ ಅಧ್ಯಾಯದಲ್ಲಿ ವೈದಿಕ ವಿರೋಧಿ ಪ್ರಜ್ಞೆಯ ಪರಿಕಲ್ಪನೆಯನ್ನು ಚರ್ಚಿಸಲಾಗುವುದು. ವೈದಿಕ ವಿರೋಧಿ ಪ್ರಜ್ಞೆಯ ಸ್ವರೂಪದ ಚರ್ಚೆಗೆ ಹಿನ್ನೆಲೆಯಾಗಿ ವೈದಿಕ ಪ್ರಜ್ಞೆಯ ಸಾಮಾನ್ಯ ಸ್ವರೂಪದ ಬಗೆಗೆ ಕೆಲವು ವಿಚಾರಗಳನ್ನು ನಿರೂಪಿಸಿ, ನಂತರದ ಭಾಗದಲ್ಲಿ ನಿರ್ದಿಷ್ಟವಾಗಿ ವೈದಿಕ ವಿರೋಧಿ ಚಿಂತನೆಗಳನ್ನು ಚರ್ಚಿಸಲಾಗುವುದು. ವೈದಿಕ ವಿರೋಧಿ ಚಿಂತನೆಗಳ ತಾತ್ವಿಕತೆಯು ಬಹಳ ಸಂಕೀರ್ಣವಾದುದು, ಜೊತೆಗೆ ಅದು ಒಂದು ಕಡೆ ಪುರಾತನವಾದುದು; ಇನ್ನೊಂದು ಕಡೆ ಅದು ವರ್ತಮಾನದ ವಸ್ತುಸ್ಥಿತಿಯೂ ಕೂಡಾ ಹೌದು. ಹಾಗಾಗಿಯೇ ಅದನ್ನು ಒಂದು ಚೌಕಟ್ಟಿನಲ್ಲಿ ಹಿಡಿಯುವುದು ಬಹಳ ಕಷ್ಟಕರ ಸಂಗತಿ. ವೈದಿಕ ವಿರೋಧಿ ಚಿಂತನೆಗಳು ಭಾರತೀಯ ತತ್ವಶಾಸ್ತ್ರದ ಪರಂಪರೆಯಲ್ಲಿ ವಿವಿಧ ಶಾಖೆಗಳಲ್ಲಿ ನಮಗೆ ದೊರೆಯುತ್ತವೆ. ಅವುಗಳ ಕೇಂದ್ರಸಾರವನ್ನು ಹಿಡಿಯುವ ಮೂಲಕ ವೈದಿಕ ವಿರೋಧಿ ಚಿಂತನೆಗಳ ಒಂದು ಸಾಮಾನ್ಯ ರೂಪವನ್ನು ಕಟ್ಟಿಕೊಳ್ಳಬಹುದು. ಈ ದೃಷ್ಟಿಯಿಂದ ವೈದಿಕ ವಿರೋಧಿ ಚಿಂತನೆಗಳನ್ನು ಒಂದು ಅಖಂಡ ಚಿಂತನೆ ಎಂದು ನೋಡುವ ಬದಲು ಅದನ್ನು ಚಾರ್ವಾಕ, ಜೈನ, ಬೌದ್ಧ ಚಿಂತನೆಗಳ ಮತ್ತು ಆಧುನಿಕ ಸಂದರ್ಭದ ತಾತ್ವಿಕ ತಳಹದಿಯಲ್ಲಿ ಗ್ರಹಿಸಿಕೊಳ್ಳಲು ಸಾಧ್ಯವಿದೆ. ಹಾಗಾಗಿ ಪ್ರಸ್ತುತ ಅಧ್ಯಾಯದಲ್ಲಿ ಈ ವಿಧಾನವನ್ನು ಅನುಸರಿಸಲಾಗಿದೆ.

೩.೧. ವೈದಿಕ ವಿರೋಧಿ ಪ್ರಜ್ಞೆ ಎಂದರೇನು?

೩.೨. ಪ್ರಾಚೀನ ಭಾರತದಲ್ಲಿ ವೈದಿಕ ವಿರೋಧಿ ನೆಲೆಗಳು

೩.೨.೧. ಚಾರ್ವಾಕ ಚಿಂತನೆಗಳು

೩.೨.೨. ಜೈನ ಚಿಂತನೆಗಳು

೩.೨.೨. ಬೌದ್ಧ ಚಿಂತನೆಗಳು

೩.೩. ಆಧುನಿಕ ಸಂದರ್ಭ: ವೈದಿಕ ವಿರೋಧಿ ಪ್ರಜ್ಞೆ

ಪ್ರಸ್ತುತ ಅಧ್ಯಯನದ ಶೀರ್ಷಿಕೆಯ ಪ್ರಕಾರ ಈ ಅಧ್ಯಾಯದಲ್ಲಿ, ವೈದಿಕ ವಿರೋಧಿ ಪ್ರಜ್ಞೆ ಎಂಬುದರ ಪರಿಕಲ್ಪನೆಯನ್ನು ವಿವರಿಸಿಕೊಳ್ಳಬೇಕು. ಈ ವೈದಿಕ ವಿರೋಧಿ ಪ್ರಜ್ಞೆಯ ಸ್ವರೂಪವನ್ನು ವಿವರಿಸಿಕೊಳ್ಳುವ ಮೊದಲು ವೈದಿಕ ಪ್ರಜ್ಞೆಯ ಸ್ವರೂಪವನ್ನು ವಿವರಿಸಿಕೊಳ್ಳುವ ಅಗತ್ಯವಿದೆ. ಈ ದೃಷ್ಟಿಯಿಂದ ವೈದಿಕ ಪ್ರಜ್ಞೆಯ ಸ್ವರೂಪದ ಬಗೆಗೆ ಕೆಲವು ಮುಖ್ಯ ವಿಚಾರಗಳನ್ನು ಸಾರಸಂಗ್ರಹದ ರೂಪದಲ್ಲಿ ಮಂಡಿಸಬಹುದು. ವೈದಿಕ ಪ್ರಜ್ಞೆಯ ಸ್ವರೂಪದ ಬಗೆಗೆ ಭಾರತದ ಎಡವಾದಿ ಚಿಂತಕರು ತಮ್ಮ ತಾತ್ವಿಕ ವಿಚಾರಗಳನ್ನು ಮಂಡಿಸುತ್ತಲೇ ಬಂದಿದ್ದಾರೆ ಅಥವಾ ಇದನ್ನು ಹೀಗೂ ಹೇಳಬಹುದು. ವೈದಿಕ ಪ್ರಜ್ಞೆಯ ನೇತ್ಯಾತ್ಮಕ ವಿಚಾರಗಳನ್ನು ಭಾರತದ ಮಟ್ಟಿಗೆ ಎಡವಾದಿ ಚಿಂತನೆಗಳು ಎಂದು ಕರೆಯಲಾಗಿದೆ. ಹಾಗಾಗಿ ಭಾರತದಲ್ಲಿ ಅನಾದಿ ಕಾಲದಿಂದಲೂ ವೈದಿಕ ಪ್ರಜ್ಞೆಯ ನೇತ್ಯಾತ್ಮಕ ವಿಚಾರಗಳನ್ನು ಮಂಡಿಸುತ್ತಲೇ ಬಂದಿರುವುದನ್ನು ನಾವು ಕಾಣುತ್ತೇವೆ. ಇದು ಚಾರ್ವಾಕರಿಂದಲೇ ಆರಂಭವಾಗಿದೆ. ತದನಂತರದಲ್ಲಿ ಜೈನ ಚಿಂತನೆಗಳು, ಬೌದ್ಧ ಚಿಂತನೆಗಳು ಇದನ್ನು ಇನ್ನಷ್ಟು ಗಟ್ಟಿಯಾಗಿ ಮಂಡಿಸಿದವು. ಮನುಧರ್ಮಶಾಸ್ತ್ರ, ಭಗವದ್ಗೀತೆ ಮುಂತಾದ ಪಠ್ಯಗಳು ಸಮಾಜದ ಅಸಮಾನತೆಯನ್ನು, ಶ್ರೇಷ್ಠ-ಕನಿಷ್ಠವನ್ನು ಪ್ರತಿಪಾದನೆ ಮಾಡುತ್ತವೆ ಹಾಗೂ ಅವನ್ನು ಮುಂದುವರಿಸಲು ನೈತಿಕ ದಾರಿಗಳನ್ನು ನಿರ್ಮಾಣ ಮಾಡುತ್ತವೆ. ಈ ಪಠ್ಯಗಳ ಅಪಾಯಕಾರಿ ಗುಣಗಳನ್ನು ಆಧುನಿಕ ಕಾಲದಲ್ಲಿಯೂ ಅನೇಕ ಸಿದ್ಧಾಂತಿಗಳು ತಮ್ಮ ಚಿಂತನೆಗಳಲ್ಲಿ ಪ್ರತಿಪಾದನೆ ಮಾಡುತ್ತಲೇ ಬಂದಿದ್ದಾರೆ. ಹಾಗಿದ್ದರೆ ವೈದಿಕ ಪ್ರಜ್ಞೆಯ ಮೂಲ ಗುಣಸ್ವಭಾವ ಯಾವುದು ಎಂಬುದರ ಮುಖ್ಯ ಅರಿವು ನಮಗಿರಬೇಕಾಗುತ್ತದೆ.

"ವೈದಿಕ ಪ್ರಜ್ಞೆಯ ಮುಖ್ಯ ಗುಣಗಳನ್ನು ಮುಂದಿನ ಮಾತುಗಳಲ್ಲಿ ವಿವರಿಸಿಕೊಳ್ಳಬಹುದು. ಇಡೀ ಪ್ರಪಂಚವನ್ನು ದೇವರು ಸೃಷ್ಟಿ ಮಾಡಿದ್ದಾನೆ, ಸೃಷ್ಟಿಕರ್ತ ಸೃಷ್ಟಿ ಮಾಡಿದ್ದಾನೆ. ಇಡೀ ಪ್ರಪಂಚದ ಅರುರೇಣುತೃಣಕಾಷ್ಠಗಳೆಲ್ಲವೂ ಪರಮಾತ್ಮನ ಸೃಷ್ಟಿ. ಮನುಷ್ಯ ಲೋಕಕ್ಕೆ ಬರಬಾರದ ಆಪತ್ತುಗಳು ಬಂದಾಗ ಪರಮಾತ್ಮ ಬೇರೆ ಬೇರೆ ಅವತಾರಗಳಲ್ಲಿ ಬಂದು, ಸಂಕಟಗಳನ್ನು ಪರಿಹಾರ ಮಾಡುತ್ತಾನೆ. ಮನುಷ್ಯ ಸಮಾಜದಲ್ಲಿ ಸುಖಿಗಳೂ, ದುಃಖಿಗಳೂ ಇದ್ದಾರೆ. ಸುಖಿಗಳು ಸುಖಿಗಳಾಗಿರಲು ಅವರ ಪೂರ್ವಜನ್ಮದ ಪುಣ್ಯದ ಫಲವೇ ಕಾರಣ. ದುಃಖಿಗಳು ದುಃಖಿಗಳಾಗಿರಲು ಕಾರಣ ಅವರ ಪೂರ್ವಜನ್ಮದ ಪಾಪದ ಫಲವೇ ಕಾರಣ. ತರತಮ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಶುದ್ಧ-ಅಶುದ್ಧ, ಪವಿತ್ರ-ಅಪವಿತ್ರ, ಮುಖ್ಯ-ಅಮುಖ್ಯ ಮುಂತಾದ ಮೌಲ್ಯಗಳು ಮನುಷ್ಯ ಸಮಾಜಕ್ಕೆ ಅಗತ್ಯವಾಗಿ ಬೇಕು. ಯಾಕೆಂದರೆ ಇವೆಲ್ಲವೂ ಕೂಡಾ ನಿಸರ್ಗದತ್ತ ಅಂಶಗಳು. ಹಾಗಾಗಿ ಮಾನವ ಸಮಾಜಕ್ಕೆ ಇವು ಬಹಳ ಅಗತ್ಯ. ಹಿಂದಿನ ಜನ್ಮದಲ್ಲಿ ಪಾಪ ಮಾಡಿದವರು ಈ ಜನ್ಮದಲ್ಲಿ ಸಂಕಟ ಪಡುತ್ತಿದ್ದಾರೆ. ಇವರು ಸತ್ತ ನಂತರ ನರಕಕ್ಕೆ ಹೋಗುತ್ತಾರೆ. ಪುಣ್ಯವಂತರು ಸತ್ತ ನಂತರ ಸ್ವರ್ಗಕ್ಕೆ ಹೋಗುತ್ತಾರೆ. ಹುಟ್ಟುವಾಗಲೇ ಕೆಲವರು ಪುಣ್ಯವಂತರಾಗಿ ಮತ್ತೆ ಕೆಲವರು ಪಾಪಿಷ್ಠರಾಗಿ ಹುಟ್ಟುತ್ತಾರೆ. ಹಾಗಾಗಿ ಈ ಜನ್ಮದಲ್ಲಿ ಇವರು ಇವನ್ನು ಕಡ್ಡಾಯವಾಗಿ

ಅನುಭವಿಸಲೇಬೇಕು. ಇವನ್ನು ಬದಲಾಯಿಸಲು ಅಥವಾ ತೊಲಗಿಸಲು ಸಾಧ್ಯವಿಲ್ಲ; ಅದು ಸಾಧುವೂ ಅಲ್ಲ."[೧]

ಡಾ. ಬಿ.ಆರ್. ಅಂಬೇಡ್ಕರ್‌ರ ವ್ಯಾಖ್ಯಾನದ ಪ್ರಕಾರ, ಎಲ್ಲಾ ಅಸಮಾನತೆಯ ಮೌಲ್ಯಗಳನ್ನು, ನಂಬಿಕೆಗಳನ್ನು ದೇವರು ಹಾಗೂ ಧರ್ಮದ ಹೆಸರಿನಲ್ಲಿ ಸಮರ್ಥನೆ ಮಾಡುವುದು. ದೇವರು ಹಾಗೂ ಧರ್ಮವನ್ನು ಒಪ್ಪುವುದಾದರೆ, ಮಾನವ ಸಮಾಜದಲ್ಲಿ ತರತಮ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಮುಖ್ಯ-ಅಮುಖ್ಯ ಎಂಬ ಶ್ರೇಣೀಕರಣಗಳಲ್ಲಿ ಕಡ್ಡಾಯವಾಗಿ ಬದುಕಬೇಕು ಎಂದು ಜೀವನಕ್ರಮವನ್ನು ನಿರ್ದೇಶನ ಮಾಡುವುದು. ಇವನ್ನು ದಾಟಿದರೆ ಸತ್ತ ನಂತರ ನರಕಕ್ಕೆ ಹೋಗುತ್ತೀರಿ, ಇವನ್ನು ಪಾಲಿಸಿದರೆ ಪಾಲಿಸುವವರ ಪಾಲಿಗೆ ಯಾವಾಗಲೂ ಸ್ವರ್ಗ ಎಂಬ ಭ್ರಮೆಯನ್ನು ಬಿತ್ತುವುದು. ಅಂದರೆ ಸ್ವರ್ಗ-ನರಕ, ದೇವರು-ಧರ್ಮ ಇವುಗಳ ಕಪಿಮುಷ್ಟಿಯಲ್ಲಿ ಬದುಕಬೇಕು. ಕನಿಷ್ಠ ಜಾತಿಯವರು ಶ್ರೇಷ್ಠ ಜಾತಿಯವರಿಗೆ ಎಲ್ಲಾ ಸೇವೆ ಮಾಡಿಕೊಂಡಿರಬೇಕು ಎಂಬ ನಿರ್ಬಂಧವನ್ನು ಹೇರುವುದು. ಈ ಹೇರಿಕೆಯ ನಿರ್ಬಂಧವನ್ನು ನಿರ್ಬಂಧ ಎಂದು ಭಾವಿಸದಂತೆ ಮಾಡುವುದು. ಇಂತಹ ನಿರ್ಬಂಧಗಳಿಗೆ ಸಂಪೂರ್ಣ ಒಗ್ಗಿಕೊಂಡು, ಹೊಂದಿಕೊಂಡು ಹೋಗುವಂತೆ ಸಾಮಾಜಿಕ ಪ್ರಜ್ಞೆಯನ್ನು ರೂಪಿಸುವುದು. ಇದನ್ನು ಜೀವನ ಮೌಲ್ಯ ಎಂದು, ಇದನ್ನು ಸಂಸ್ಕೃತಿಯ ಮೌಲ್ಯ ಎಂದು, ಇದನ್ನೇ ಧರ್ಮ ಎಂದು ಒಪ್ಪಿಸುವುದು. ಇದನ್ನು ಪ್ರಶ್ನೆ ಮಾಡಿದವರನ್ನು ದಂಡಿಸುವುದು; ಶಿಕ್ಷಿಸುವುದು. ಇದು ವೈದಿಕ ಪ್ರಜ್ಞೆಯ ಸಾಮಾನ್ಯ ಸಾರಸಂಗ್ರಹ.

ವೈದಿಕ ಪ್ರಜ್ಞೆಯು ಕೇವಲ ಇಲ್ಲಿಗೇ ನಿಲ್ಲುವುದಿಲ್ಲ. ಯಾಕೆಂದರೆ ಇದು ಹುಟ್ಟಿದ್ದು ಪುರಾತನ ಕಾಲದಲ್ಲಿ ಇರಬಹುದು; ಆದರೆ ಇದು ಬದುಕಿರುವುದು ನಮ್ಮ ಆಧುನಿಕ ಕಾಲದಲ್ಲಿ. ಇದು ಪ್ರತಿಯೊಂದು ಯುಗದಲ್ಲೂ, ಪ್ರತಿಯೊಂದು ಕಾಲದಲ್ಲೂ ಮಾನವ ಸಮಾಜದಲ್ಲಿ ಶ್ರೇಷ್ಠ-ಕನಿಷ್ಠ ಎಂಬ ಭೇದ ಮಾಡಿಕೊಂಡು ಬರುತ್ತಿದೆ. ಇದು ವರ್ಣದ ನೆಲೆ ಇರಬಹುದು, ಧರ್ಮದ ನೆಲೆ ಇರಬಹುದು, ಜಾತಿಯ ನೆಲೆ ಇರಬಹುದು, ವೃತ್ತಿಗಳ ನೆಲೆ ಇರಬಹುದು, ಇಲ್ಲವೆ ಹೆಣ್ಣು ಗಂಡು ಎಂಬ ಲಿಂಗ ಭೇದವೇ ಇರಬಹುದು. ಈ ಭೇದಗಳನ್ನು ನಿರಂತರವಾಗಿ ಮುಂದುವರಿಸಿಕೊಂಡು ಬರುವುದು, ಜೊತೆಗೆ ಇವನ್ನು ಪ್ರಶ್ನಾತೀತ ಮೌಲ್ಯಗಳು ಎಂದು ನಂಬಿಸುವುದು ನಡೆದೇ ಇದೆ. ಹಾಗಾಗಿ ಆಧುನಿಕ ಕಾಲದಲ್ಲಿ ಕುಟುಂಬ, ಶಿಕ್ಷಣ, ಸಂಸ್ಕೃತಿ, ಅಧಿಕಾರ, ಆಡಳಿತ ಮುಂತಾದ ವಲಯಗಳಲ್ಲಿ ಇದರ ಪರಿಣಾಮಗಳನ್ನು ಕಾಣುತ್ತಿದ್ದೇವೆ. ವೈದಿಕ ಪ್ರಜ್ಞೆಯು ವೈದಿಕಶಾಹಿಯಿಂದ ಹೇರಿರುವ ಅಮೂರ್ತ ಮೌಲ್ಯಗಳು ಮಹಿಳೆಯರು ಹಾಗೂ ಕೆಳಜಾತಿಗಳು ತಮ್ಮದಲ್ಲದ ವೈದಿಕ ಪ್ರಜ್ಞೆಯನ್ನು ತಮ್ಮದೆಂದೇ ಭಾವಿಸುವಂತೆ ಮಾಡಲಾಗಿದೆ. ಈ ಕೆಲಸವನ್ನು ವೈದಿಕ ಪ್ರಜ್ಞೆಯು ಆಧುನಿಕ ಕಾಲದಲ್ಲಿ ಪ್ರಭುತ್ವ, ಧರ್ಮ, ಸಂಸ್ಕೃತಿ, ಶಿಕ್ಷಣ ಹಾಗೂ ವಿಶಾಲವಾದ ಮಾಧ್ಯಮಗಳ ಮೂಲಕ ಮಾಡುತ್ತಿದೆ. ಇವುಗಳ ಮೂಲಕ ಬರುವ ವೈದಿಕ ಪ್ರಜ್ಞೆಯನ್ನು ಅಪಮಾನಿತರು, ಶೋಷಿತರು ತಮ್ಮ ನಂಬಿಕೆಯ ಭಾಗವನ್ನಾಗಿ ಮಾಡಿಕೊಂಡಿದ್ದಾರೆ. ತಮಗೆ ಅರಿವು ಇದ್ದೋ,

ಇಲ್ಲದೆಯೋ ವೈದಿಕ ಪ್ರಜ್ಞೆಯ ಭಾಗವಾಗಿದ್ದಾರೆ. ಅದರ ಭಾಗವಾಗುವುದರ ಮೂಲಕ ಅದನ್ನು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮುಂದುವರಿಸುತ್ತಿದ್ದಾರೆ.

ಬೌದ್ಧಿಕ ಚಟುವಟಿಕೆಯ ಮೂಲಕ ಹೊಸ ಸಿದ್ಧಾಂತವನ್ನು ಕಟ್ಟುವ ಕೆಲಸವನ್ನು ಸಂಶೋಧನೆ ಮಾಡುತ್ತದೆ. ಆದರೆ ತಾತ್ವಿಕತೆಯು ಮನುಷ್ಯ ಮತ್ತು ಸಮಾಜದ ನಡುವಣ ಸಂಬಂಧದಲ್ಲಿ ವ್ಯಕ್ತವಾಗುತ್ತದೆ. ಮನುಷ್ಯನ ಸುಪ್ತಪ್ರಜ್ಞೆಯ ಮೇಲೆ ತನ್ನ ಪ್ರಭಾವ ಬೀರುತ್ತದೆ. ತಾತ್ವಿಕತೆಯನ್ನು ಅನ್ವಯ ಮಾಡಿಕೊಳ್ಳುವುದರಿಂದ ಮತ್ತು ಸಾಮಾಜಿಕ ಕಾರಣಗಳಿಂದ ಭಿನ್ನವಾಗಿ ಕಾಣುತ್ತದೆ. ತಾತ್ವಿಕತೆಯು ಒಂದು ಚೌಕಟ್ಟಿಗೆ ಸಂಬಂಧಪಟ್ಟಂತೆ ಪರಿಪೂರ್ಣವಾಗಿರುತ್ತದೆ. ಅಂದರೆ ಆಕರ, ಅದರ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮಾಡಿ ಒಂದು ತತ್ವವನ್ನು ಶೋಧಿಸಲು ಯತ್ನಿಸುವುದು. ದೈವ, ಆತ್ಮ, ಕರ್ಮ, ಪುನರ್ಜನ್ಮ, ಯಾಜಮಾನ್ಯ, ಜಾತಿಪದ್ಧತಿ, ಅಸ್ಪೃಶ್ಯತೆ ಇತ್ಯಾದಿ ತಾತ್ವಿಕತೆಯ ವಿರೋಧಿ ನಿಲುವುಗಳಾಗಿವೆ. ಈ ಮೂಲಕ ಕನ್ನಡ ಚಿಂತನೆ ಮತ್ತು ಸಂಶೋಧನೆಗೆ ಒಂದು ತಾತ್ವಿಕ ಶಕ್ತಿಯನ್ನು ಕೊಟ್ಟಿದೆ.

ಡಾರ್ವಿನ್ ಹೇಳುವ ವಿಕಾಸ ಸಿದ್ಧಾಂತದ ಪ್ರಕಾರ ಮಾನವರು ಭೂಮಿಯ ಮೇಲೆ ಹುಟ್ಟಿದರು. ತಮ್ಮ ಅಗತ್ಯಗಳಿಗೆ ಪ್ರಕೃತಿಯು ಒದಗಿಸುವ ಸಾಮಗ್ರಿಗಳನ್ನು ಸಂಪತ್ತನ್ನಾಗಿ ಮಾರ್ಪಡಿಸಿಕೊಂಡು ಬೆಳೆದರು. ಪ್ರಕೃತಿಯ ವೈಚಿತ್ರ್ಯಗಳನ್ನು ಅರ್ಥ ಮಾಡಿಕೊಳ್ಳಲು ಒಂದು ವ್ಯವಸ್ಥಿತ ತರ್ಕಬದ್ಧ ಆಲೋಚನೆಗಳನ್ನು ತಮ್ಮ ಅಗತ್ಯತೆಗಳಿಗೆ ತಕ್ಕಂತೆ ಸಿದ್ಧಾಂತಗಳನ್ನಾಗಿ ರೂಪಿಸಿಕೊಂಡರು. "ಹೀಗೆ ವಿಕಾಸಹೊಂದುತ್ತಿದ್ದ ಮಾನವ, ಸಸ್ಯಪ್ರಪಂಚದಿಂದ ಮುಂದೆ ಮುಂದೆ ಹೋಗುತ್ತಿದಂತೆ ಕೇವಲ ಪ್ರಾಣಿಗಳಿಗಿಂತ ಮೇಲೇರುತ್ತಾ ಹೋದ. ಮಾಂಸಾಹಾರದೊಂದಿಗೆ ಸಸ್ಯಾಹಾರವನ್ನೂ ಉಣತೊಡಗಿದ. ಕಾಡುಬೆಕ್ಕು ಮತ್ತು ನಾಯಿ ಹೇಗೆ ಮಾನವ ಸೇವೆಗೆ ಅಣಿಯಾದವೋ ಹಾಗೆಯೇ ಸಸ್ಯಾಹಾರಿಯಾಗಿದ್ದ ಮಾನವ ಮಾಂಸಾಹಾರಿಯೂ ಆದಾಗ ಅವನಿಗೆ ದೈಹಿಕ ಶಕ್ತಿ ಹೆಚ್ಚಿತು ಮತ್ತು ಸ್ವತಂತ್ರವಾಗಿ ವಿಕಾಸ ಹೊಂದಲು ಹೆಚ್ಚು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಮಾಂಸಾಹಾರದ ಪ್ರಭಾವ ಬಹಳವಾಗಿ ಆದದ್ದು ಮೆದುಳಿನ ಮೇಲೆ; ಅದರ ಪಾಲನೆ ಮತ್ತು ಬೆಳವಣಿಗೆಗಳಿಗೆ ಬೇಕಾದ ಹೆಚ್ಚಿನ ಸತ್ವ ಇದರಿಂದ ದೊರೆಯಿತು. ಅದರಿಂದಾಗಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹೆಚ್ಚು ಶೀಘ್ರವಾಗಿ ಹಾಗೂ ಹೆಚ್ಚು ಪರಿಷ್ಕೃತ ರೂಪದಲ್ಲಿ ಮಾನವ ವೃದ್ಧಿ ಹೊಂದಲು ಸಾಧ್ಯವಾಯಿತು."[೨] ಮಾನವ ತನ್ನ ಮೆದುಳಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ತನ್ನ ಆಲೋಚನೆ ಮತ್ತು ಅನುಭವಗಳಿಂದ "ಮುಂದಿನ ಹಂತದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳ ಉಗಮವಾಯಿತು; ಅದರೊಟ್ಟಿಗೆ ಕಲೆ ಮತ್ತು ವಿಜ್ಞಾನಗಳ ಆವಿರ್ಭಾವ. ಬುಡಕಟ್ಟಿನ ಜನಾಂಗಗಳು ರಾಷ್ಟ್ರೀಯ ಜನಾಂಗಗಳಾಗಿ ಮತ್ತು ರಾಷ್ಟ್ರಗಳಾಗಿ ಬೆಳೆದುನಿಂತವು. ಕಾನೂನು ಮತ್ತು ರಾಜ್ಯಶಾಸ್ತ್ರಗಳು ಅದರ ಹಿಂದೆಯೇ ಉದ್ಭವಿಸಿದವು; ಇವುಗಳೊಟ್ಟಿಗೆ ಜನಿಸಿದ್ದು ಮಾನವನ ಆಗುಹೋಗುಗಳನ್ನು ಮಾನವನ ಪ್ರಜ್ಞೆಯಲ್ಲಿ ವಿಲಕ್ಷಣವಾಗಿ ಪ್ರತಿಫಲಿಸುವ ಮತಧರ್ಮ ಎಂಬುದು. ಪ್ರಾರಂಭದಲ್ಲಿ ಇವೆಲ್ಲಾ ಮಾನವನ ಮನಸ್ಸಿನಲ್ಲಿ ಹುಟ್ಟಿ ಮಾನವ

ಸಮಾಜಗಳನ್ನು ಆಳಿದುವು ಎಂಬಂತೆ ತೋರಿತು.”[೩] ಇದರ ಪರಿಣಾಮವಾಗಿ, ಸಮಾಜವನ್ನು ಆಳಲು ಒಂದು ವರ್ಗವು ಸೃಷ್ಟಿ ಆಯಿತು. ಆದಿಮ ಕಾಲದಲ್ಲಿ ಪ್ರಪಂಚದ ಬೇರೆ ಬೇರೆ ಬುಡಕಟ್ಟು ಸಮುದಾಯಗಳಲ್ಲಿ ಎಲ್ಲರೂ ಕೂಡಿ ದುಡಿಯುತ್ತಿದ್ದರು; ಮತ್ತು ಕೂಡಿ ಉಣ್ಣುತ್ತಿದ್ದರು. ಇಂತಹ ಸಾಮೂಹಿಕ ಬದುಕಿನಲ್ಲಿ ಅಗತ್ಯಕ್ಕಿಂತ ಉತ್ಪಾದನೆ ಜಾಸ್ತಿಯಾದಾಗ, ಹಾಗೆ ಜಾಸ್ತಿಯಾದುದನ್ನು ಕೂಡಿಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಅಗತ್ಯ ಬಳಕೆಗಿಂತ ಹೆಚ್ಚುವರಿ ಉತ್ಪಾದನೆಯನ್ನು ಸಂಗ್ರಹ ಮಾಡಿಟ್ಟುಕೊಂಡವರು ಒಂದು ವರ್ಗ ಆದರು; ಇದನ್ನು ಕೂಡಿ ಇಡದವರು ಮತ್ತೊಂದು ವರ್ಗ ಆದರು. ಮೂಲದಿನ ವರ್ಗ ಶೋಷಕ ವರ್ಗ ಆಯಿತು; ಎರಡನೆಯ ವರ್ಗ ದುಡಿಯುವ ವರ್ಗ ಆಯಿತು. ಈ ಶೋಷಕ ವರ್ಗವು ತನ್ನ ರಕ್ಷಣೆಗೆ ದೇವರು, ಧರ್ಮ ಮುಂತಾದುವುಗಳನ್ನು ಸೃಷ್ಟಿ ಮಾಡಿಕೊಂಡಿತು. ಇವುಗಳ ಮೂಲಕ ಶೋಷಣೆಯನ್ನು ಮುಂದುವರಿಸಿಕೊಂಡು ಬಂದಿತು. ಅಂದರೆ ಅಸಮಾನತೆ ಹಾಗೂ ಶೋಷಣೆಯನ್ನು ಅದು ದೈವೀಕರಿಸಿತು. ಇದರ ಪರಿಣಾಮವಾಗಿ ಅಪಮಾನ ಹಾಗೂ ಶೋಷಣೆ ಅನುಭವಿಸುವುದು ತಮ್ಮ ಪೂರ್ವಜನ್ಮದ ಪಾಪದ ಫಲವೆಂದೂ, ಸುಖ ಅನುಭವಿಸುವುದು ತಮ್ಮ ಪೂರ್ವಜನ್ಮದ ಪುಣ್ಯದ ಫಲವೆಂದು ನಂಬಿಸಿದರು. ಪಾಪ ಹಾಗೂ ಪುಣ್ಯ ಎಂಬುವು ಸಮಾಜದಲ್ಲಿ ಕೇವಲ ನಂಬಿಕೆಗಳಾಗಿರದೆ, ಕೇವಲ ಮೌಲ್ಯಗಳಾಗಿರದೆ, ಅವು ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ಹಾಗೂ ಶೋಷಣೆಗಳನ್ನು ಸಮರ್ಥನೆ ಮಾಡಿಕೊಂಡು ಬಂದವು. ಇವನ್ನು ಪ್ರಶ್ನೆ ಮಾಡುವುದು ಎಂದರೆ, ನಂಬಿದ ದೈವವನ್ನು ಪ್ರಶ್ನೆ ಮಾಡಿದಂತೆ ಎಂಬ ಭಯವನ್ನು ಹುಟ್ಟಿಸಿದರು. ಹಾಗಾಗಿ ಇವನ್ನು ಪ್ರಶ್ನೆ ಮಾಡದೆ ಪಶು ಪ್ರಾಣಿಗಳ ಹಾಗೆ ಒಪ್ಪಿಕೊಂಡು, ನಂಬಿಕೊಂಡು ಬರುವಂತಹ ಅಸಹಾಯಕ ಸಮಾಜವು ನಿರ್ಮಾಣವಾಗಿ ತನ್ನ ಪಾಡಿಗೆ ತಾನು ಸಾಗುವಂತೆ ಆಯಿತು.

೩.೧. ವೈದಿಕ ವಿರೋಧಿ ಪ್ರಜ್ಞೆ ಎಂದರೇನು?

ವೈದಿಕ ವಿರೋಧಿ ಪ್ರಜ್ಞೆ ಎಂದರೇನು ಎಂಬ ಪ್ರಶ್ನೆ ತಾತ್ವಿಕ ಕ್ರಮವನ್ನನುಸರಿಸಿಯೇ ಹುಟ್ಟುತ್ತದೆ. ತಾತ್ವಿಕತೆಯ ಕ್ರಮವನ್ನು ಬಿಟ್ಟು 'ವೈದಿಕ ವಿರೋಧಿ ಪ್ರಜ್ಞೆ' ಎಂಬ ಪರಿಕಲ್ಪನೆಯನ್ನು ನೋಡದೆ ಬಿಟ್ಟುಬಿಡುವಂತಿಲ್ಲ. ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ವೈದಿಕ ವಿರೋಧಿ ಪ್ರಜ್ಞೆಯ ಗುರಿ, ಉದ್ದೇಶ ಮತ್ತು ಸ್ವರೂಪವು ಮುಖ್ಯವಾಗುತ್ತದೆ. ಆದರೆ ಈ ಎಲ್ಲಾ ತಿಳುವಳಿಕೆಯ ಮೊದಲು ವೈದಿಕ ವಿರೋಧಿ ಪ್ರಜ್ಞೆ ಪರಿಭಾಷೆಯನ್ನು ಖಚಿತಪಡಿಸಿಕೊಳ್ಳಬೇಕು. ವೈದಿಕ ವಿರೋಧಿ ಲಕ್ಷಣವೇನು ಎಂಬ ಈ ಪ್ರಶ್ನೆಗೆ ಉತ್ತರ ಹುಡುಕಬೇಕಾದರೆ ಮೊದಲು ವೈದಿಕ ವಿರೋಧದ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವುದು ಅಗತ್ಯವೆನಿಸುತ್ತದೆ.

ವೈದಿಕ ಪ್ರಜ್ಞೆಯು ಮೂಲಭೂತವಾಗಿ ಪ್ರಶ್ನೆ ಮಾಡುವುದನ್ನು ದಮನ ಮಾಡುತ್ತದೆ. ಎಲ್ಲವನ್ನೂ ಪ್ರಶ್ನೆ ಮಾಡದೆ ಒಪ್ಪಿಕೊಳ್ಳಬೇಕು; ಎಲ್ಲವನ್ನೂ ಪ್ರಶ್ನೆ ಮಾಡದೆ ಅನುಸರಿಸಬೇಕು ಎಂದು ಒತ್ತಾಯ ಹೇರುತ್ತದೆ. ಜೊತೆಗೆ ಇದನ್ನು ದೈವೀಕರಿಸುತ್ತದೆ ಹಾಗೂ ಪಾಪ-ಪುಣ್ಯಗಳ ಜೊತೆಗೆ ಸೇರಿಸುತ್ತದೆ. ಪ್ರಶ್ನೆ ಮಾಡುವುದೂ ಕೂಡ ವೈದಿಕ ಪ್ರಜ್ಞೆಯ ಪ್ರಕಾರ ಪಾಪ. ಪಾಪ ಮಾಡದೇ ಇರಬೇಕೆಂದರೆ

ಯಾವುದನ್ನೂ, ಅಂದರೆ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಇವನ್ನು ಪ್ರಶ್ನೆ ಮಾಡಬಾರದು ಎನ್ನುತ್ತದೆ. ಹಾಗಾಗಿ ಭಾರತದ ಪರಂಪರೆಯಲ್ಲಿ ತನಗೆ ಒಲ್ಲದುದರ ಬಗೆಗೆ ಪ್ರಶ್ನೆಗಳೇ ಕಡಿಮೆ. ತನಗೆ ಒಲ್ಲದುದರ ಬಗೆಗೂ, ಅದಕ್ಕೆ ಹೊಂದಿಕೊಂಡು, ಅದಕ್ಕೆ ಒಗ್ಗಿಕೊಂಡು ಹೋಗುವುದು ಇಲ್ಲಿ ಜಾಯಮಾನವಾಗಿದೆ.

ವೈದಿಕ ಮತ್ತು ವಿರೋಧಿ ಎಂಬ ಎರಡು ಪದಗಳು ಸೇರಿ ಈ ಪರಿಕಲ್ಪನೆ ಹುಟ್ಟಿದೆ. ವೈದಿಕ ಎಂದರೆ ವೇದಗಳನ್ನು ಬಲ್ಲವನು, ಬ್ರಾಹ್ಮಣ, ಆಚಾರವಂತ, ಶ್ರಾದ್ಧ, ವೇದಗಳಿಗೆ ಸಂಬಂಧಿಸಿದ, ವೇದಪಾರಂಗತನಾದ, ಸನಾತನ ಧರ್ಮ ಮತ್ತು ಸಂಕುಚಿತ ಅರ್ಥದಲ್ಲಿ ಹಿಂದೂಧರ್ಮ ಎಂಬ ಅರ್ಥವಿದೆ. ವಿರೋಧಿ ಎಂದರೆ ಪ್ರತಿಭಟಿಸುವ, ಎದುರಿಸುವ ಎಂಬ ಅರ್ಥವನ್ನು ಕೊಡುತ್ತದೆ ಹಾಗೂ ವಿರೋಧಿಸುವುದು ಒಂದು ಸಂಪ್ರದಾಯ ಎಂದು ಗ್ರಹಿಸಬಹುದಾಗಿದೆ. ಈ ಎರಡು ಪದಗಳು ಸೇರಿ ವೈದಿಕ ವಿರೋಧಿ ಎಂಬ ಪರಿಕಲ್ಪನೆ ಭಾಷಿಕವಾಗಿ ಹುಟ್ಟಿಕೊಂಡಿದೆ. ಪುರೋಹಿತಶಾಹಿ, ವರ್ಣಾಶ್ರಮ, ಜಾತೀಯತೆ, ಅಸ್ಪೃಶ್ಯತೆ, ಆಸ್ತಿಕವಾದ ಮತ್ತು ವೈದಿಕ ಮೂಲಭೂತವಾದ ಮತ್ತು ಉಚ್ಚ ಜಾತಿಗಳ ಚಿಂತನೆಗಳನ್ನು ವಿರೋಧಿಸುವುದೇ ವೈದಿಕ ವಿರೋಧಿ ಪ್ರಜ್ಞೆಯ ಪರಿಕಲ್ಪನೆಯ ಮುಖ್ಯ ಆಶಯವಾಗಿದೆ.

ದರ್ಶನಶಾಸ್ತ್ರದ ಪರಿಭಾಷೆಯಾಗಿ, ವೇದಗಳಲ್ಲಿ ಬಳಕೆಯಾದ ಶಬ್ದದ ಮೂಲರೂಪವಾಗಿ 'ವೈದಿಕ' ಮತ್ತು 'ಅವೈದಿಕ' ಎಂಬ ಶಬ್ದಗಳು ಹುಟ್ಟಿದವು. ಆದರೆ ಬ್ರಾಹ್ಮಣ-ಬ್ರಾಹ್ಮಣೇತರ, ಆಸ್ತಿಕವಾದ-ನಾಸ್ತಿಕವಾದ, ಸನಾತನವಾದಿ-ಸನಾತನವಾದಿಯಲ್ಲದ, ರೂಢಿನಿಷ್ಠ-ರೂಢಿವಿರೋಧಿ, ಬಲಪಂಥಿ-ಎಡಪಂಥಿ ಎಂಬ ಪರಸ್ಪರ ಎದುರಾಳಿ ಪರಿಭಾಷೆಗಳಾದವು. ವೈದಿಕರನ್ನು ಮೂಲಭೂತವಾದಿಗಳು ಎಂದು; ಅಂದರೆ, ಉಪನಿಷತ್ತು, ವೇದಗಳು, ಮನುಸ್ಮೃತಿ, ರಾಮಾಯಣ, ಮಹಾಭಾರತ ಇವುಗಳ ಹಿನ್ನೆಲೆಯಲ್ಲಿ ವೈದಿಕ ಸಂಸ್ಕೃತಿಯನ್ನು ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಅವೈದಿಕವನ್ನು ವೇದವಿರೋಧಿ, ಶೂದ್ರ, ದಲಿತ ಚಿಂತನೆ, ಜೈನ, ಬೌದ್ಧ, ವೀರಶೈವ, ಚಾರ್ವಾಕ, ನಾಸ್ತಿಕವಾದಿ ಭೌತವಾದಿ ದರ್ಶನಗಳಲ್ಲಿ ಅವೈದಿಕ ಪರಿಭಾಷೆಯನ್ನು ಬಳಸಲಾಗಿದೆ.

ವೈದಿಕ-ವಿರೋಧಿ-ಪ್ರಜ್ಞೆ ಈ ಪದಗಳಿಗೆ ಒಂದಕ್ಕೊಂದು ಪೂರಕವಾದ ಸಂಬಂಧವಿದೆ. ಈ ಸಂಬಂಧವನ್ನು ಹೀಗೆ ಗ್ರಹಿಸಬಹುದು. ವೇದಗಳ ಸತ್ವವನ್ನು ಹೇಳುವುದು, ಆಸ್ತಿಕವಾದಿ ಚಿಂತನೆಗಳನ್ನು ಬೆಳೆಸುವುದು, ಹಿಂದೂ ಸಮಾಜದ ಶ್ರೇಣೀಕರಣದ ಸ್ವರೂಪ ಮತ್ತು ಹಿಂದೂ ಮೂಲಭೂತವಾದದ ಚಿಹ್ನೆಯನ್ನು ಗುರುತಿಸುವುದು 'ವೈದಿಕ'ವಾಗಿದೆ. ಈ ವಿಷಯದಲ್ಲಿ ಇರುವ ಅಸಮಾನತೆ, ಮೌಢ್ಯತೆ, ದಬ್ಬಾಳಿಕೆ, ಶೋಷಣೆ, ಅಮಾನವೀಯ ನೆಲೆಗಳು, ತಾರತಮ್ಯ ಮತ್ತು ಸನಾತನ ಹಿಂದೂ ಧರ್ಮದ ಕುರಿತ ಚಿಂತನೆಗಳನ್ನು ಒಪ್ಪದಿರುವುದು, ಪ್ರತಿಭಟನೆ ಮಾಡುವುದೇ 'ವಿರೋಧಿ' ಆಗುತ್ತದೆ. ಅಲ್ಲದೆ ವಿರೋಧಿ ಎಂಬ ಪದವನ್ನು 'ವಿರೋಧ', 'ವಿರೋಧ ಪಕ್ಷ', 'ವಿರೋಧಾಭಾಸ' ಎಂದು ವಿಶಾಲ ಅರ್ಥದಲ್ಲಿ ಬಳಸಲಾಗಿದೆ. ಈ ವಿಷಯಗಳನ್ನು ಒಂದು ತಾತ್ವಿಕವಾಗಿ, ವಿಮರ್ಶಾತ್ಮಕವಾಗಿ

ಮತ್ತು ಒಂದು ಅರಿವಾಗಿ ತಿಳಿದುಕೊಳ್ಳುವುದು ಮತ್ತು ಎಚ್ಚರಿಸುವುದು 'ಪ್ರಜ್ಞೆ'ಯಾಗಿದೆ. ಈ ಮೇಲಿನ ಪದಗಳು ಒಂದಕ್ಕೊಂದು ಪೂರಕವಾಗಿ ಇರುವುದನ್ನು ಗಮನಿಸಬಹುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯ: ವೈದಿಕ ವಿರೋಧಿ ಪ್ರಜ್ಞೆ ಎಂಬ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ 'ವೈದಿಕ' ಎಂದರೆ ವೇದಗಳನ್ನು ಬಲ್ಲವನು, ಬ್ರಾಹ್ಮಣ, ಆಚಾರವಂತ, ಶ್ರಾದ್ಧ, ವೇದಗಳಿಗೆ ಸಂಬಂಧಿಸಿದ, ವೇದಪಾರಂಗತನಾದವನು ಎಂಬ ಅರ್ಥಗಳಿವೆ. ಈ ವೈದಿಕ ಆಚರಣೆಗಳನ್ನು ಪುರೋಹಿತರು ಅಧಿಕಾರದ ಮೂಲಕ ಕೇಂದ್ರೀಕರಣ ಮಾಡಿಕೊಂಡಿದ್ದಾರೆ. ಪುರೋಹಿತಶಾಹಿ ಎಂಬ ಪರಿಕಲ್ಪನೆಯೇ ಸಾಮಾಜಿಕವಾಗಿ ವಿರೋಧಾತ್ಮಕವಾದ ಮತ್ತು ಅಪಾಯಕಾರಿಯಾದ ಪರಿಭಾಷೆ ಆಗಿದೆ. ಸಮಾಜದಲ್ಲಿರುವ ಸಾಮಾನ್ಯ ಜನರನ್ನು ತಮ್ಮ ಕಪಿಮುಷ್ಟೀಯಲ್ಲಿ ಇಟ್ಟುಕೊಂಡು, ತಮ್ಮದೇ ಹಿಡಿತವನ್ನು ಸಾಧಿಸುವ ಮನೋಧರ್ಮ ಪುರೋಹಿತಶಾಹಿಯದು. ವೈದಿಕ ವಿಧಿವಿಧಾನಗಳನ್ನು ನಂಬುವ ಮತ್ತು ಆಚರಿಸುವ ನಾವು ಮಾತ್ರ ಶ್ರೇಷ್ಠ ಎಂದು ಹೇಳಿಕೊಂಡು, ಉಳಿದವರೆಲ್ಲ ಕನಿಷ್ಠ ಎಂದು ಹೇಳುವ ದೃಷ್ಟಿಯಲ್ಲಿ ಹಾಗೂ ದೇವರು ಮತ್ತು ಮಾನವರ ನಡುವಿನ ಮಧ್ಯವರ್ತಿಗಳಾಗಿ ಧರ್ಮದ ಏಕಸ್ವಾಮ್ಯವನ್ನು ಹೊಂದಿ, ಆಳ್ವಿಕೆಯನ್ನು ಮಾಡುತ್ತಿರುವವರನ್ನು ಪುರೋಹಿತಶಾಹಿ ಎಂದು ಕರೆಯಲಾಗಿದೆ. ಪುರೋಹಿತಶಾಹಿ ಎಂಬ ಪರಿಕಲ್ಪನೆ ಯಾಜಮಾನ್ಯ ಸಂಸ್ಕೃತಿಯ ಒಂದು ರೂಪಕ. ಆದರೆ ಕುವೆಂಪು ಈ ಪುರೋಹಿತಶಾಹಿಯ ಪರಿಕಲ್ಪನೆಯನ್ನು ಭಿನ್ನವಾಗಿ ಗ್ರಹಿಸಿದ್ದಾರೆ. "ನಮ್ಮ ದೇಶದಲ್ಲಿ ಪುರೋಹಿತಶಾಹಿ, ಪುರೋಹಿತವರ್ಗ ಎಂದರೆ ಸಾಮಾನ್ಯವಾಗಿ ಬ್ರಾಹ್ಮಣವರ್ಗ ಅಂತ. ಆದರೆ ವಾಸ್ತವವಾಗಿ ಪುರೋಹಿತಶಾಹಿ, ಪುರೋಹಿತವರ್ಗ ಎಂದರೆ ಬರೀ ಬ್ರಾಹ್ಮಣವರ್ಗವಲ್ಲ. ಹಿಂದೂಗಳಲ್ಲಿ ಬ್ರಾಹ್ಮಣವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿ ಇದೆ. ಅಲ್ಲಿ ಅದನ್ನು ಯಾವ ಜಾತಿ ಎಂದು ಕರೆಯುವುದು? ಮುಸ್ಲಿಮರಲ್ಲೂ ಪುರೋಹಿತಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿ ಇದ್ದೇ ಇದೆ."[೪] ಸಮಾಜದಲ್ಲಿ ಇವರು ಜಾತಿ ವ್ಯವಸ್ಥೆ, ದೇವಸ್ಥಾನ ಮಠ, ಯಜ್ಞ, ಬಲಿ, ಪೂಜೆ, ಮೂಢನಂಬಿಕೆ ಇತ್ಯಾದಿ ಮೌಢ್ಯಗಳ ಆಚರಣೆ ಮಾಡಿ ಜನಸಾಮಾನ್ಯರನ್ನು ಮೌಢ್ಯರನ್ನಾಗಿ ಮಾಡಿಸುವ ಮತ್ತು ಸಮಾಜದಲ್ಲಿ ಪ್ರಾಬಲ್ಯವನ್ನು ಪಡೆದುಕೊಂಡಿರುವ ವರ್ಗವನ್ನು ಕುವೆಂಪು ಅವರು ಖಚಿತವಾಗಿ ಪುರೋಹಿತಶಾಹಿ ಎಂದು ಕರೆದಿದ್ದಾರೆ.

ಕುವೆಂಪು ಅವರು ಪುರೋಹಿತಶಾಹಿಯನ್ನು ವಿಶಾಲ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಯಾವುದೇ ಧರ್ಮ, ಮತ, ವರ್ಗಕ್ಕೆ ಸೀಮಿತವಾಗದೆ ಸಮಷ್ಟಿ ದೃಷ್ಟಿಯಲ್ಲಿ ನೋಡಿದ್ದಾರೆ. ಪುರೋಹಿತಶಾಹಿ ಎಂಬ ಪರಿಕಲ್ಪನೆಯನ್ನು ಒಂದು ಜಾತಿಗೆ ಮಾತ್ರ ಸೀಮಿತಮಾಡಬಾರದು. ಪುರೋಹಿತಶಾಹಿ ಬರೀ ಬ್ರಾಹ್ಮಣ ವರ್ಗವಲ್ಲ, ಇದು ಮುಸ್ಲಿಮರಲ್ಲೂ, ಕ್ರೈಸ್ತರಲ್ಲೂ, ಬೌದ್ಧರಲ್ಲೂ ಇದೆ. ಈ ಪುರೋಹಿತಶಾಹಿಯ ತಾತ್ವಿಕತೆ ಒಂದೇ ಎಂಬುದು ಕುವೆಂಪು ಅವರ ಮುಖ್ಯ ಗ್ರಹಿಕೆ.

ವೈದಿಕ ಪ್ರಜ್ಞೆಯು ಕನ್ನಡ ಸಾಹಿತ್ಯವನ್ನು ಆವರಿಸಿರುವ ಸ್ವರೂಪವನ್ನು ತೇಜಸ್ವಿ ಅವರು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ ಮತ್ತು ವಿಮರ್ಶೆ ಮಾಡಿದ್ದಾರೆ. ಪ್ರಾಚೀನ ಕನ್ನಡ

ಸಾಹಿತ್ಯವು ಸಂಸ್ಕೃತ ಸಾಹಿತ್ಯದಿಂದ ಪ್ರಭಾವ, ಪ್ರೇರಣೆ ಪಡೆದದ್ದು ಬೇರೆ. ಆದರೆ ಕನ್ನಡ ಸಾಹಿತ್ಯದಲ್ಲಿ ವೈದಿಕ ಪ್ರಜ್ಞೆ ಯಜಮಾನಿಕೆ ನಡೆಸುವುದು ಬೇರೆ. ಇದನ್ನು ತೇಜಸ್ವಿ ಅವರು ಅತ್ಯಂತ ಗಂಭೀರವಾಗಿ ಚರ್ಚಿಸಿದ್ದಾರೆ. "ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಾದ್ಯಂತವಾಗಿ ನಾವು ಅವಲೋಕಿಸಿದರೆ, ವೈದಿಕ ಧರ್ಮ ವಿರೋಧಿ ಪ್ರಜ್ಞೆಯೊಂದು ಅಂತರ್ಯಾಮಿ ಸ್ಫೂರ್ತಿಯಾಗಿ ಒಳಗೇ ಕೆಲಸ ಮಾಡಿರುವುದು ನಮಗೆ ಗೋಚರವಾಗುತ್ತದೆ. ಆದರೆ ಇವರಿಗೆ ಇಲ್ಲಿ ಗೊತ್ತಿಲ್ಲದಿರುವ ಒಂದಂಶವೆಂದರೆ, ಕನ್ನಡ ಸಾಹಿತ್ಯದ ಆದಿಯಿಂದ ಹಿಡಿದು ಇಂದಿನವರೆಗೂ, ಪಂಪನಿಂದ ಹಿಡಿದು ಕುವೆಂಪುವರೆಗೂ ಎಲ್ಲ ನವೋದಯಗಳಿಗೂ ಚೈತನ್ಯಶಕ್ತಿಯಾಗಿ ಕೆಲಸ ಮಾಡಿದೆ. ಆ ಹೊಗೆಯಾಡುತ್ತಿರುವ ರೋಷ ಎಂಬುದು ಕನ್ನಡದ ಅನೇಕ ಶ್ರೇಷ್ಠ ಕವಿಗಳೂ, ಸಾಹಿತಿಗಳೂ, ಈ ರೀತಿ ಬ್ರಾಹ್ಮಣವಿರೋಧಿ ನಿಲುವನ್ನು ತಳೆದಿರುವುದು ತೀವ್ರ ಶೋಧನೆಯ ವಸ್ತುವಾಗಬೇಕಾಗಿದೆ. ನಮ್ಮ ಲೇಖಕರಲ್ಲಿ ಬಹುಜನ ಉದ್ಯೋಗಸ್ಥರಿರುವುದರಿಂದ ಮತ್ತು ಇವರೆಲ್ಲಾ ತಮ್ಮ ಹುದ್ದೆ, ಬಡ್ತಿ ಮುಂತಾದವಕ್ಕೆ ತಮ್ಮ ಜಾತಿ, ನಂಟಸ್ತಿಕೆ, ಸಂಬಂಧಗಳನ್ನು ಸಮಯೋಚಿತವಾಗಿ ಉಪಯೋಗಿಸಿಕೊಳ್ಳುವುದರಿಂದ ಅನೇಕರಿಗೆ ಈ ವಿಷಯವನ್ನು ಅವಲೋಕಿಸಲು ಬೇಕಾದ ವಸ್ತುನಿಷ್ಠತೆ ಇಲ್ಲ ಮತ್ತು ಅಳುಕೂ ಅಸಾಮರ್ಥ್ಯವೂ ಇದೆ."[೫] ತೇಜಸ್ವಿಯವರು ಗುರುತಿಸಿರುವಂತೆ ಪ್ರಾಚೀನ ಕನ್ನಡ ಸಾಹಿತ್ಯದಿಂದ ಇಂದಿನ ಸಾಹಿತ್ಯದವರೆಗೆ ವೈದಿಕ ವಿರೋಧಿ ಪ್ರಜ್ಞೆಯು ಅಂತರ್‌ವಾಹಿನಿಯಾಗಿ ಕ್ರಿಯಾಶೀಲವಾಗಿದೆ. ಆದಿ ಮಹಾಕವಿ ಪಂಪನಿಂದಲೇ ಈ ವೈದಿಕ ವಿರೋಧಿ ಪ್ರಜ್ಞೆ ಮೊದಲಾಗುತ್ತದೆ. ಅವನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಕರ್ಣನ ಪಾತ್ರವನ್ನು ಕೊಂಡಾಡಿರುವುದು ಇದಕ್ಕೆ ಒಂದು ಸಣ್ಣ ಸೂಚನೆ ಅಷ್ಟೆ. ಅವನು ತನ್ನ ಕಾವ್ಯದಲ್ಲಿ ಬ್ರಾಹ್ಮಣ ಪಾತ್ರದ ಎದುರು ಕರ್ಣನನ್ನು ನಿಲ್ಲಿಸುತ್ತಾನೆ. ಕರ್ಣನ ಬಾಯಲ್ಲಿ ಬ್ರಾಹ್ಮಣ ಪಾತ್ರಗಳನ್ನು ಹೀಗಳೆಯಿಸುತ್ತಾನೆ. ಇನ್ನು ೧೨ನೇ ಶತಮಾನದ ವಚನ ಸಾಹಿತ್ಯವಂತೂ ಬಹುತೇಕ ವೈದಿಕ ಮೌಲ್ಯಗಳನ್ನು ವಿರೋಧ ಮಾಡುತ್ತಲೇ ಬಂದಿರುವುದನ್ನು ನಾವು ಕಾಣುತ್ತೇವೆ. ಆಧುನಿಕ ಸಂದರ್ಭದಲ್ಲಿ ವೈದಿಕ ಧರ್ಮದೊಳಗಿನ ತಾತ್ವಿಕ ಅಸಂಬದ್ಧತೆಗಳನ್ನು ಅನೇಕ ಸಾಹಿತಿ–ಚಿಂತಕರು ನೇರವಾಗಿಯೇ ಪ್ರಶ್ನಿಸಿದ್ದಾರೆ.

ವೈದಿಕ ಧರ್ಮವು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಲು ಹಲವು ಅಮಾನವೀಯ ಚಿಂತನೆಗಳನ್ನು ಮಾಡಿದವು. ಸ್ವಾಮಿ ಧರ್ಮತೀರ್ಥ ಅವರು ಈ ವೈದಿಕ ವಿರೊಧಿ ಪ್ರಜ್ಞೆಯನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಜಾತಿ, ಪೌರೋಹಿತ್ಯ ಮತ್ತು ಹುಸಿತತ್ವದ ಆಧಾರದ ಮೇಲೆ ಹಿಂದೂಗಳನ್ನು ದಮನ ಮಾಡಿ ಶೋಷಿಸುವ ಸಮಾಜೋ–ಧಾರ್ಮಿಕ ವ್ಯವಸ್ಥೆಯೆಂದು ಅದನ್ನು ವ್ಯಾಖ್ಯಾನಿಸಬಹುದು: ಜಾತಿ ದಮನಕಾರಿ ತಂತ್ರಕ್ಕೆ ಪ್ರತಿನಿಧಿಯಾಗಿದೆ; ಪೌರೋಹಿತ್ಯ ಶೋಷಣೆಯ ಸಾಧನವಾಗಿದೆ; ಹುಸಿತತ್ವ ಇವೆರಡರ ಸಮರ್ಥನೆಯಾಗಿದೆ. ಅದು ಬ್ರಾಹ್ಮಣ ಪುರೋಹಿತರಿಂದ ಪ್ರಾರಂಭವಾಯಿತು. ಅನೇಕ ಶತಮಾನಗಳ ಅವಧಿಯಲ್ಲಿ ನಾನಾ ದಿಸೆಯಲ್ಲಿ ಶಾಖೋಪಶಾಖೆಗಳಾಗಿ ಅವರೇ ಅದನ್ನು ಬೆಳೆಸಿದರು. ವಿದೇಶಿ ಆಳ್ವಿಕೆಯಲ್ಲಿ ಅದೇ ಹಿಂದೂಗಳ ಸಾಮಾನ್ಯ ಸಂಸ್ಕೃತಿಯಾಯಿತು."[೬] ಹಲವಾರು ಶತಶತಮಾನಗಳಿಂದ

ಸಮಾಜದಲ್ಲಿ ತನ್ನ ಪ್ರಾಬಲ್ಯವನ್ನು ಪಡೆಯಲು ನಡೆಸಿದ ಕುತಂತ್ರಗಳನ್ನು ಸೂಕ್ಷ್ಮವಾಗಿ ನೋಡಿದಾಗ ವೈದಿಕ ಧರ್ಮದಲ್ಲಿ ಕಾಣಬಹುದಾಗಿದೆ. ಹಾಗೂ ಕಾಲ ಕಾಲಕ್ಕೆ ತಕ್ಕಂತೆ 'ಹಿಂದೂ ಸಂಸ್ಕೃತಿಯ' ಸ್ವರೂಪವನ್ನು ಬದಲಾಯಿಸಿಕೊಂಡು ಬೆಳೆಸುತ್ತ ಬಂದಿರುವ ಪುರೋಹಿತಶಾಹಿಯ ಹುನ್ನಾರಗಳನ್ನು ವೈದಿಕ ವಿರೋಧಿ ಪ್ರಜ್ಞೆ ಪರಿಕಲ್ಪನೆಯಲ್ಲಿ ನೋಡಬಹುದಾಗಿದೆ.

ಪೆರಿಯಾರ್ ಅವರು ವೈದಿಕ ಧರ್ಮ ಎಂದರೆ ಏನು ಎಂಬುದರ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ವೈದಿಕ ಧರ್ಮ ಸಮಾಜದಲ್ಲಿ ಮಾಡುತ್ತಿರುವ ಧರ್ಮ ರಾಜಕಾರಣವನ್ನು ಖಂಡಿಸಿದ್ದಾರೆ. ಸಮಾಜದ ಸಾಮಾನ್ಯ ಜನರು ವೈದಿಕ ಧರ್ಮದ ಹುನ್ನಾರಗಳನ್ನು ಅರಿತು ನಾವು ಜಾಗೃತರಾಗಬೇಕು. "ನಾನೀಗ ನಿರ್ಮೂಲಗೊಳಿಸಬಕೆಂದು ಹೇಳತ್ತಿರುವುದು ವೈದಿಕ ಧರ್ಮ ಹಾಗೂ ದೇವರುಗಳ ಧರ್ಮ ಎಂಬದನ್ನು ನೀವು ತಿಳಿಯಬೇಕು. ವೈದಿಕ ಧರ್ಮ ದೇವರ ಧರ್ಮಗಳೇ, ಇವತ್ತಿನ ಬಹುಪಾಲು ದ್ರಾವಿಡ ಜನಗಳಲ್ಲಿರುವ ಧರ್ಮ ಆಗಿದೆ. ವೈದಿಕ ಧರ್ಮವೆಂದರೆ, ವೇದಗಳನ್ನು ಒಪ್ಪಿಕೊಂಡು, ವೇದಗಳು ವಿಧಿಸಿದಂತೆ ನಡೆದುಕೊಳ್ಳಬೇಕು ಎಂದಾಗುತ್ತದೆ. ದೇವತಾಧರ್ಮವೆಂದರೆ ಸರ್ವಶಕ್ತನಾದ ದೇವರು ಎಂಬುದಾಗಿ ಎಂದೇನೂ ಇಲ್ಲ, ದೇವರುಗಳು ಎಂಬುದಾಗಿ ಹಲವು ದೈವಗಳುಂಟು. ಅವುಗಳನ್ನು ಜನಗಳು ವಂದಿಸುವಂತೆ ಮಾಡಬೇಕು ಎಂದಾಗುತ್ತದೆ."[೭] ಅಧಿಕಾರದಿಂದ ಪ್ರಾಬಲ್ಯವಾದ ವೈದಿಕ ಸಂಸ್ಕೃತಿ ಇನ್ನೊಂದು ಉಪಸಂಸ್ಕೃತಿಯ ಮೇಲೆ ತನ್ನ ಅಧಿಕಾರವನ್ನು ಅಮಾನವೀಯವಾಗಿ ಚಲಾಯಿಸಿದೆ. ಮೂಢನಂಬಿಕೆಗಳಿಂದ ಜನರನ್ನು ವಂಚನೆ ಮಾಡಿ ತನ್ನ ಧರ್ಮವನ್ನು ಶ್ರೇಷ್ಠ ಎಂದು ನಂಬಿಸಲಾಗಿದೆ ಮತ್ತು ಒಪ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕಾಲಘಟ್ಟದ ಕನ್ನಡ ಸಾಹಿತ್ಯದಲ್ಲಿ ವೈದಿಕ ಧರ್ಮದ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ.

ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ವೈದಿಕ ವಿರೋಧಿ ಪ್ರಜ್ಞೆಯನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಇಂದು ನಮ್ಮ ದೇಶದಲ್ಲಿ ವೇದದ ಅಧಿಕಾರವನ್ನೊಪ್ಪದ ಅನೇಕ ವೇದಾಧಾರಿತವಲ್ಲದ ದೃಷ್ಟಿಕೋನಗಳು ಅಸ್ತಿತ್ವದಲ್ಲಿವೆ. ಅವುಗಳನ್ನು ಬೇರೆ ಯಾವುದೇ ಒಂದು ಹೆಸರಿನಿಂದ ಕರೆಯುವುದಕ್ಕಾಗದೆ, ಎಸ್. ಬಿ. ದಾಸ್‌ಗುಪ್ತ ಅವರು ಅವುಗಳನ್ನು 'ಅಸ್ಪಷ್ಟವಾದ ಮತೀಯ ಗುಂಪುಗಳು' ಎಂದು ಕರೆದಿದ್ದಾರೆ. ಅವು ವೇದದ ಅಧಿಕಾರವನ್ನು ಹಾಸ್ಯ ಮಾಡುವ, ಸ್ವರ್ಗ ಮತ್ತು ನರಕಗಳು ಭ್ರಮೆಗಳೆಂದು ಹೇಳುವ, ದೇಹದ ಪ್ರಾಧಾನ್ಯಕ್ಕಿಂತ ಮಿಗಿಲಾದ ಆತ್ಮ ಇದೆಯೆಂಬುದನ್ನು ಅಲ್ಲಗಳೆಯುವ ಹಾಡುಗಳನ್ನು ಹಾಡುತ್ತವೆ. ಅವುಗಳ ದೃಷ್ಟಿಯಲ್ಲಿ ಬೇರೆ ಯಾವುದೂ ದೇಹಕ್ಕಿಂತ ಮುಖ್ಯವಲ್ಲ; ಪ್ರತ್ಯಕ್ಷ ಇಂದ್ರಿಯಾನುಭವದಿಂದ ಹುಟ್ಟುವ ಜ್ಞಾನಕ್ಕಿಂತ ಮಿಗಿಲಾದ ಬೇರೆ ಜ್ಞಾನ ಯಾವುದೂ ಇಲ್ಲ. ನಮ್ಮ ಪ್ರದೇಶದಲ್ಲಿ ಅವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಅವುಗಳಲ್ಲಿ ಬಹಳ ಸರ್ವಸಾಮಾನ್ಯವಾದ ಹೆಸರು 'ಸಹಜೀಯ' ಎಂಬುದು."[೮] ವೈದಿಕ ಧರ್ಮ ಮತ್ತು ವೇದಗಳು ಅಸ್ಪಷ್ಟವಾಗಿ ಕಾಣುತ್ತವೆ. ಆದ್ದರಿಂದ ಇಂದ್ರಿಯಾನುಭವದಿಂದ ಪಡೆಯುವ ಜ್ಞಾನವೇ ಮುಖ್ಯ ಎಂದು ಹೇಳಲಾಗಿದೆ.

ವೈದಿಕ ಧರ್ಮ ಪ್ರತಿಪಾದಿಸಿದ ಆಚರಣೆಗಳನ್ನು ನಮ್ಮ ಸಂಸ್ಕೃತಿ ಎಂದು ಸಮಾಜದಲ್ಲಿ ಪ್ರತಿಬಿಂಬಿಸಲಾಗಿದೆ. ಹಲವಾರು ಮೂಢನಂಬಿಕೆಗಳನ್ನು ಜನಸಮಾನ್ಯರಲ್ಲಿ ಸೃಷ್ಟಿಸಿ ಅಸಮಾನತೆ, ಅಸ್ಪೃಶ್ಯತೆಯನ್ನು ಹುಟ್ಟುಹಾಕಲಾಗಿದೆ. ಸಮಾಜದಲ್ಲಿ ವೈದಿಕ ಧರ್ಮ ಎಂಬುದು ಏಕಸಂಸ್ಕೃತಿ ಇದೆ ಎಂದು ಹೇಳುವ ಹಾಗೂ ಅದನ್ನು ನಾನಾ ವಿಧದಲ್ಲಿ ಒಪ್ಪಿಸುವ ಕೆಲಸವನ್ನು ಬ್ರಾಹ್ಮಣ ಧರ್ಮ ಮಾಡುತ್ತಿದೆ. ಈ ವೈದಿಕ ಧರ್ಮವನ್ನು ಪೋಷಿಸುವ ಪುರೋಹಿತಶಾಹಿ ಮೌಢ್ಯಗಳನ್ನು ಮತ್ತು ಆಚರಣೆಗಳನ್ನೇ ನಮ್ಮ ಧರ್ಮ ಮತ್ತು ಸಂಸ್ಕೃತಿ ಎಂದು ಸವರ್ಣೀಯರಿಗೆ ಮತ್ತು ದಲಿತರಿಗೆ ನಂಬಿಸಲಾಗಿದೆ. ಈ ಮೌಢ್ಯಗಳಿಂದ ಸಮಾಜದಲ್ಲಿ ಹಿಂದುಳಿದವರಿಗೆ ಅನ್ಯಾಯವಾಗುತ್ತಿದೆ ಎಂದು ದೇವನೂರು ಮಹಾದೇವ ಅವರು ಬ್ರಾಹ್ಮಣಧರ್ಮವನ್ನು ವಿರೋಧಿಸುತ್ತಾ ಈ ರೀತಿ ಹೇಳಿದ್ದಾರೆ. "ಬ್ರಾಹ್ಮಣರು ನಾನೇ ಶುದ್ಧ ಉಳಿದವರೆಲ್ಲಾ ಅಶುದ್ಧ' ಎಂಬುದು ಮೃಗೀಯ ರಾಕ್ಷಸೀಧರ್ಮ. ಹಿಂದೆ ವಿದ್ಯಾವಂತರೆನ್ನಿಸಿಕೊಂಡವರು ಆಚರಣೆಗಳನ್ನೇ ಧರ್ಮ ಸಂಸ್ಕೃತಿಯನ್ನು ಮಾಡಿಕೊಂಡು ನೀರನ್ನು ಎಡಗೈಯಿಂದ ಕುಡಿಯುವುದೋ ಅಥವಾ ಬಲಗೈಯಿಂದ ಕುಡಿಯುವುದೋ? ಅದನ್ನು ಮೂರು ಸಲ ತೊಳೆಯುವುದೋ ಅಥವಾ ನಾಲ್ಕು ಸಲ ತೊಳೆಯುವುದೋ? ಬಾಯನ್ನು ಐದು ಸಲ ಮುಕ್ಕುಳಿಸುವುದೊ ಅಥವಾ ಆರು ಸಲ ಮುಕ್ಕುಳಿಸುವುದೊ ಎಂಬುದನ್ನು ಚರ್ಚಿಸುತ್ತಾ ಕಾಲ ಕಳೆದರು' ಇದನ್ನು ನೋಡಿದಾಗ ಹೇಗನ್ನಿಸುತ್ತದೆ? ಇದೇನು ಸಂಸ್ಕೃತಿಯೇ? ನಾವು ಇದಾಗಬೇಕೆ? ಇದಕ್ಕಾಗಿ ಯಾಕೆ ಸ್ಪರ್ಧೆ, ಯಾಕಾಗಿ ದ್ವೇಷ, ಅಸೂಯೆ, ಕೀಳರಿಮೆ, ಮೇಲರಿಮೆ? ಅಂತ ಬೆಚ್ಚಬೇಕಾಗುತ್ತದೆ. ಹೊರನೋಟಕ್ಕೆ ಸಂಸ್ಕೃತಿಯಂತೆ ಕಂಡುಬಂದುದು ಒಳಗಣ್ಣಿಗೆ ಸಾಂಸ್ಕೃತಿಕ ಅಧಃಪತನವಾಗಿ ಕಾಣತೊಡಗುತ್ತದೆ. ಮೇಲರಿಮೆಯ ರೋಗದ ಸವರ್ಣೀಯರು ಸಮಾಜವನ್ನು ಸುಡುತ್ತಿದ್ದರೆ, ಕೀಳರಿಮೆ ರೋಗದ ದಲಿತರು ತಮ್ಮನ್ನೇ ತಾವು ಸುಟ್ಟುಕೊಳ್ಳುತ್ತಿರುವುದು ಕಾಣುತ್ತದೆ. ಐಕ್ಯತೆಯ ಮನಸ್ಸಿಲ್ಲದೆ ಯಾರು ಯಾವುದನ್ನು ಮುಟ್ಟಿದರೂ ಅದು ಧ್ವಂಸವಾಗಿಬಿಡುತ್ತದೆ."[೫] ವೈದಿಕ ಪ್ರಜ್ಞೆಯು ತನ್ನ ಅಂತರಾಳದಲ್ಲಿ ಸೃಷ್ಟಿ ಮಾಡಿದ್ದ ಮೇಲು-ಕೀಳು ಎಂಬುವನ್ನು ತನ್ನ ಶ್ರೇಷ್ಠ ಮೌಲ್ಯಗಳು ಎಂದು ಭ್ರಮಿಸುವಂತೆ ಮಾಡಿತ್ತು. ಆ ಮೌಲ್ಯಗಳನ್ನು ದೇವನೂರು ಅವರು ರೋಗ ಎಂದು ಕರೆಯುತ್ತಿದ್ದಾರೆ. ಅದು ಕೇವಲ ಒಂದು ಕಡೆಯ ರೋಗ ಅಲ್ಲ; ಅದು ಒಂದು ಕಡೆ ಮೇಲು ಎಂಬ ರೋಗ; ಮತ್ತೊಂದು ಕಡೆ ಅದು ಕೀಳು ಎಂಬ ರೋಗ. ಅಂದರೆ ಒಂದು ಕಾಲಕ್ಕೆ ಯಾವುದು ಮೌಲ್ಯವೋ ಅದು ಮತ್ತೊಂದು ಕಾಲಕ್ಕೆ ರೋಗವಾಗುತ್ತದೆ. ಅಥವಾ ಒಂದು ವರ್ಗಕ್ಕೆ (ವೈದಿಕ ವರ್ಗಕ್ಕೆ) ಮೌಲ್ಯ ಆಗಿದ್ದು ಮತ್ತೊಂದು ವರ್ಗಕ್ಕೆ(ದಲಿತವರ್ಗಕ್ಕೆ) ರೋಗ ಆಗುತ್ತದೆ. ಈ ಅಂಶದಲ್ಲೆ ವೈದಿಕ ಪ್ರಜ್ಞೆಯ ಸೂಕ್ಷ್ಮ ಸ್ವರೂಪವೂ; ಜೊತೆಗೆ ವೈದಿಕ ವಿರೋಧಿ ಪ್ರಜ್ಞೆಯ ಸೂಕ್ಷ್ಮವೂ ಒಟ್ಟೊಟ್ಟಿಗೇ ಬೆರೆತಿದೆ.

ಸ್ವಾಮಿ ವಿವೇಕಾನಂದ ಅವರು ಪುರೋಹಿತಶಾಹಿಯನ್ನು ಈ ರೀತಿ ವಿರೋಧಿಸುತ್ತಾರೆ. "ನೀಚರೂ, ಕುತಂತ್ರಿಗಳೂ ಆದ ಪುರೋಹಿತರು ಎಲ್ಲಾ ವಿಧದ ಮೂಢನಂಬಿಕೆಗಳನ್ನು ವೇದ

ಮತ್ತು ಹಿಂದೂಧರ್ಮದ ಸಾರ ಎಂದು ಬೋಧಿಸುತ್ತಾರೆ. ಈ ಠಕ್ಕುಗಾರರಾದ ಪುರೋಹಿತರಾಗಲೀ ಅಥವಾ ಅವರ ತಾತ ಮುತ್ತಾತಂದಿರಾಗಲೀ ಕಳೆದ ೪೦೦ ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನೂ ನೋಡಿಲ್ಲ. ಮೂಢಾಚಾರಗಳನ್ನು ಅನುಸರಿಸಿ ಹೀನಸ್ಥಿತಿಗೆ ಬರುತ್ತಾರೆ. ಕಲಿಯುಗದಲ್ಲಿ ಬ್ರಾಹ್ಮಣ ವೇಷದಲ್ಲಿರುವ ಈ ರಾಕ್ಷಸರಿಂದ ಮುಗ್ಧಜನರನ್ನು ಆ ದೇವರೇ ಕಾಪಾಡಬೇಕು"[೧೦] ಪುರೋಹಿತರನ್ನು ಸ್ವಾಮಿ ವಿವೇಕಾನಂದರು ನೀಚರು, ಕುತಂತ್ರಿಗಳು ಮತ್ತು ಠಕ್ಕರು ಎಂದು ಉಗ್ರವಾಗಿಯೇ ವಿರೋಧಿಸಿದ್ದಾರೆ. ಜೊತೆಗೆ ಅವರ್‍ಯಾರೂ ಕೂಡಾ ವೇದದ ಒಂದು ಭಾಗವನ್ನೂ ಕೂಡಾ ಓದಿಲ್ಲ ಎಂದು ಕೋಪದಿಂದ ಹೇಳಿದ್ದಾರೆ. ವಿವೇಕಾನಂದರ ಈ ಮಾತುಗಳಲ್ಲಿ ವೈದಿಕ ಪ್ರಜ್ಞೆಯ ವಿರೋಧವು ಅತ್ಯಂತ ಆಕ್ರೋಶಭರಿತವಾಗಿದೆ ಎಂಬುದು ನಮಗಿಲ್ಲಿ ಮುಖ್ಯ. ತಾವೇ ಸ್ವತಃ ಒಬ್ಬ ಸಂತರಾಗಿ ವೈದಿಕ ಪ್ರಜ್ಞೆಯ ಮೇಲೆ ಇಂತಹ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ ಎಂದರೆ ಇನ್ನು ವೈದಿಕ ಪ್ರಜ್ಞೆಯ ದುಷ್ಪರಿಣಾಮ ಹೇಗಿರಬಹುದು ಎಂಬುದನ್ನು ಇದರಿಂದ ಊಹಿಸಬಹುದಾಗಿದೆ.

೩.೨. ಪ್ರಾಚೀನ ಭಾರತದಲ್ಲಿ ವೈದಿಕ ವಿರೋಧಿ ನೆಲೆಗಳು

ಪ್ರಾಚೀನ ಭಾರತೀಯ ಚಿಂತನೆಗಳು ಬಹುತೇಕ ಅಧ್ಯಾತ್ಮ ಕೇಂದ್ರಿತವಾಗಿವೆ. ಇದರ ಬಗೆಗೆ ಅಧ್ಯಯನ ನಡೆಸಿರುವ ವಿದ್ವಾಂಸರು ಹೀಗೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ಇಡಿಯಾಗಿ ಪ್ರಾಚೀನ ಭಾರತೀಯ ಚಿಂತನೆಗಳೆಲ್ಲವೂ ಆಧ್ಯಾತ್ಮಿಕವಾಗಿದ್ದವು ಎಂದು ಸರಳೀಕರಿಸಲು ಸಾಧ್ಯವಿಲ್ಲ ಎಂಬ ವಾದವನ್ನು ಕೆಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಯುರೋಪಿನ ಗ್ರೀಕ್ ಚಿಂತನೆಗಳಂತೆ ಪ್ರಾಚೀನ ಭಾರತೀಯ ಚಿಂತನಾಮಾರ್ಗಗಳು ಇಲ್ಲ ಎಂಬ ಅಭಿಪ್ರಾಯವೂ ಕೆಲವು ವಿದ್ವಾಂಸರಲ್ಲಿ ಇದೆ. ಆದರೆ ಭಾರತದ ವಿಶಾಲವಾದ ಖಂಡದಲ್ಲಿ ವೈದಿಕ ಧರ್ಮದ ಚಿಂತನೆಗಳನ್ನು ಬಹಳ ವ್ಯಾಪಕವಾಗಿ ಹರಡಲಾಗಿದೆ ಹಾಗೂ ಹೇರಲಾಗಿದೆ ಎಂಬ ಅಭಿಪ್ರಾಯವೂ ಇದೆ. ವೈದಿಕ ಚಿಂತನೆಗಳನ್ನು ಎಲ್ಲರೂ ತಮ್ಮ ಆಯ್ಕೆ ಎಂಬಂತೆ ಸಹಜವಾಗಿ ಸ್ವೀಕರಿಸುವುದಿಲ್ಲ ಮತ್ತು ಒಪ್ಪಿಕೊಳ್ಳುವುದಿಲ್ಲ. ಕಾಲದಿಂದ ಕಾಲಕ್ಕೆ ಇದನ್ನು ಒಲ್ಲದ ಜನರು ಇದನ್ನು ಒಪ್ಪಿಕೊಂಡಿಲ್ಲ ಹಾಗೂ ಚಾಚೂ ತಪ್ಪದೆ ಪಾಲಿಸಿಲ್ಲ. ಇದು ಅಂದಿನ ವಾಸ್ತವವೂ ಹೌದು; ಜೊತೆಗೆ ಇಂದಿನ ವಾಸ್ತವ ಕೂಡಾ ಹೌದು. ಹಾಗಾಗಿ ಯಾರು ವೈದಿಕ ಚಿಂತನೆಗಳನ್ನು ಪಾಲಿಸಿಲ್ಲವೋ, ಅವರ ಜೀವನಕ್ರಮಗಳನ್ನು ಕುರಿತ ಅಧ್ಯಯನಗಳು, ಅವರ ಆಲೋಚನೆಗಳನ್ನು ಕುರಿತ ಅಧ್ಯಯನಗಳು ಭಾರತದಲ್ಲಿ ನಡೆದಿವೆ. ಅಂತಹ ಅಧ್ಯಯನಗಳ ಮುಖ್ಯ ಫಲಿತಗಳು ನಮಗೆ ವೈದಿಕ ವಿರೋಧಿ ಚಿಂತನೆಯ ಎಳೆಗಳನ್ನು ತೋರಿಸುತ್ತವೆ. ಇದು ಭಾರತೀಯ ಪ್ರಾಚೀನ ಚಿಂತನೆಗಳ ಅತ್ಯಂತ ಆಸಕ್ತಿದಾಯಕ ಸಂಗತಿ ಎನ್ನಬಹುದು.

ಇಡೀ ಭಾರತದಲ್ಲಿ ವೈದಿಕ ಧರ್ಮ ಒಂದೇ ಎಂದೆಂದೂ ಎಲ್ಲರ ಅನುಸರಣೆಗೂ ಪಾತ್ರವಾಗಿ ನಡೆದಿಲ್ಲ. ಭಾರತದಲ್ಲಿ ವೈದಿಕ ಧರ್ಮವನ್ನು ಹೊರತುಪಡಿಸಿದ ಇತರೆ ಜನಪದ ಧರ್ಮಗಳೂ ಇದ್ದವು. ಹಾಗಾಗಿ ಪ್ರಾಚೀನ ಭಾರತದಲ್ಲಿ ಧರ್ಮ-ಧರ್ಮಗಳ ನಡುವೆ ತಾತ್ವಿಕ ಸಂಘರ್ಷ

ನಡೆದಿದೆ. ಆದರೆ ಪ್ರಾಚೀನ ಭಾರತದಲ್ಲಿ ವೈದಿಕ ಧರ್ಮದ ರಾಮಾಯಣ, ಮಹಾಭಾರತ, ವೇದಗಳು, ಉಪನಿಷತ್ತುಗಳು, ಸ್ಮೃತಿಗಳು, ಪುರಾಣಗಳು, ಉಪವೇದಗಳು, ಮಹಾಕಾವ್ಯಗಳು, ಮನುಸ್ಮೃತಿ ಮತ್ತು ಭಗವದ್ಗೀತೆ ಮುಂತಾದ ಗ್ರಂಥಗಳಲ್ಲಿ ಹಲವಾರು ತಾತ್ವಿಕ ಚಿಂತನೆಗಳು, ಮೌಖಿಕವಾಗಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹರಿದು ಬಂದಿವೆ. ಕಾಲಾಂತರದಲ್ಲಿ ಈ ಸಾಹಿತ್ಯ ಗ್ರಾಂಥಿಕ ರೂಪವನ್ನು ಪಡೆದುಕೊಂಡಿತು. ಈ ವೈದಿಕ ಧರ್ಮದ ಮೇಲ್ವರ್ಗದವರು ಮತ್ತು ಪುರೋಹಿತಶಾಹಿ ಈ ಗ್ರಂಥಗಳಲ್ಲಿ ಇರುವ ಅಮೂಲ್ಯವಾದ ತಾತ್ವಿಕ ಚಿಂತನೆಗಳನ್ನು ಗೌಣ ಮಾಡಿ, ತಮ್ಮ ಪ್ರತಿಷ್ಠೆಯ ವಿಚಾರಗಳನ್ನು ಬೆಳಸಲು ಮುಂದಾಗಿದ್ದನ್ನು ಪ್ರಾಚೀನ ಭಾರತದಲ್ಲಿ ಕಾಣಬಹುದಾಗಿದೆ. ಪ್ರಾಚೀನ ಭಾರತದಲ್ಲಿ ವೈದಿಕ ಧರ್ಮದ ಕೃತ್ಯಗಳನ್ನು ಈ ರೀತಿ ಗುರುತಿಸಬಹುದು. ಬ್ರಾಹ್ಮಣರು ಪ್ರಭುತ್ವದ ಮೇಲೆ ಹಕ್ಕನ್ನು ಸಾಧಿಸಿದ್ದು, ಸಮಾಜದಲ್ಲಿ ವಿವಿಧ ಜಾತಿಗಳ ನಡುವೆ ಘರ್ಷಣೆ ಮತ್ತು ವಿರೋಧಿ ಭಾವನೆ ಹುಟ್ಟುಹಾಕಿದ್ದು, ಶ್ರೇಣೀಕೃತ ಅಸಮಾನತೆಯನ್ನು ತಂದು ಮಹಿಳೆಯರನ್ನು ಮತ್ತು ಶೂದ್ರರನ್ನು ವಂಚಿಸಿದ್ದು, ಬ್ರಾಹ್ಮಣ ಧರ್ಮವನ್ನು ಸಮಾಜದಲ್ಲಿ ಬೇಕಾದ ಶ್ರೇಷ್ಠ ವರ್ಗವಾಗಿ ಮಾಡಿಕೊಂಡಿದ್ದು. ಸಮಾಜದಲ್ಲಿ ರೂಢಿಗತವಾದ ಮತ್ತು ಕಾನೂಬದ್ಧವಾದ ನಿಯಮಗಳನ್ನು ತಂದ ಅಂಶಗಳು ಪ್ರಾಚೀನ ಭಾರತದಲ್ಲಿ ವೈದಿಕ ವಿರೋಧಿ ಚಿಂತನೆಗಳಿಗೆ ನಾಂದಿ ಆಯಿತು. ಮನುಸ್ಮೃತಿ ಪ್ರತಿಪಾದಿಸುವ ಜಾತಿ ಶ್ರೇಣೀಕರಣದಿಂದ ಪ್ರಾಚೀನ ಭಾರತದಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆ ಬೆಳೆಯಲಿಲ್ಲ. ಏಕೆಂದರೆ ಕೆಳವರ್ಗದಲ್ಲಿ ಇದ್ದ ಕುಶಲ ಕರ್ಮಿಗಳು, ತಂತ್ರಜ್ಞರು ಮತ್ತು ದೈಹಿಕ ಶ್ರಮದ ಕೆಲಸಗಾರನ್ನು ಸಾಮಾಜಿಕ ಅಂತಸ್ತಿನಿಂದ ಕೆಳಗೆ ಇಳಿಸಲಾಗಿತ್ತು. ಆದ್ದರಿಂದ ಹೊಸ ಹೊಸ ವೈಜ್ಞಾನಿಕ ಚಿಂತನೆಗಳನ್ನು ಬೆಳೆಸಲು ಪುರೋಹಿತಶಾಹಿ ಬಿಡಲಿಲ್ಲ. ಮನುಸ್ಮೃತಿಯನ್ನು ಕಾನೂನು ಸಂಹಿತೆಯಾಗಿ ಮಾಡಿದ್ದು, ಮನುಸ್ಮೃತಿ ದೈವಿಕ ಮೂಲದ್ದು ಎನ್ನಲಾಗಿದ್ದು, ವೈದಿಕ ಧರ್ಮದಲ್ಲಿ ಇದ್ದ ಹಲವಾರು ಅತಿರೇಕದ ಆಚರಣೆಗಳಾದ ಯಜ್ಞ, ಪೂಜೆ, ಬಲಿ, ಹೋಮ, ನಿಯಮಗಳು, ಆಸ್ತಿಕತೆ, ದೇವರು, ಧರ್ಮ, ಕಾನೂನುಗಳು, ಜಾತಿತಾರತಮ್ಯ, ಅಸಮಾನತೆ, ದಬ್ಬಾಳಿಕೆ, ಶೋಷಣೆ, ಯಾಜಮಾನ್ಯ, ಪ್ರಭುತ್ವದ ಪ್ರಾಬಲ್ಯ ಮುಂತಾದ ಅಂಶಗಳು ಜನರನ್ನು ಮೌಢ್ಯರನ್ನಾಗಿಸಿದವು. ಪ್ರಾಚೀನ ಭಾರತದ ಜನರು ವೈದಿಕ ಧರ್ಮದ ವಿರುದ್ಧ ದಂಗೆ ಎದ್ದಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಭಾರತದಲ್ಲಿ ಆರ್ಯರಿಂದ ವೈದಿಕ ಚಿಂತನೆಗಳು ಪ್ರಸಾರವಾಗಿವೆ. ಈ ವೈದಿಕ ಧರ್ಮದ ಚಿಂತನೆಗಳು ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದಗಳಲ್ಲಿ ಬಿಂಬಿತವಾಗಿವೆ. "ಅತ್ಯಂತ ಪುರಾತನವಾದ ಈ ಮೌಖಿಕ ರಚನೆಗಳನ್ನು ಸಾಂಪ್ರದಾಯಿಕವಾಗಿ ಮಂತ್ರಗಳೆಂದು ಕರೆಯಲಾಗುತ್ತದೆ. ಮಂತ್ರಗಳು ವೇದದ ಒಂದು ದೊಡ್ಡ ಭಾಗ; ಮತ್ತೊಂದು ಭಾಗವನ್ನು ಬ್ರಾಹ್ಮಣಗಳು ಎಂದು ಕರೆಯುತ್ತಾರೆ. ಈ ಬ್ರಾಹ್ಮಣಗಳು ಗದ್ಯ ರೂಪದಲ್ಲಿವೆ ಹಾಗೂ ಅವುಗಳು ಮಂತ್ರಗಳಿಗಿಂತ ಬಹಳ ನಂತರದವುಗಳಾಗಿವೆ. ಈ ಮಂತ್ರಗಳು ಸಂಹಿತೆಗಳೆಂಬ ನಾಲ್ಕು ಸಂಕಲನಗಳಲ್ಲಿ ನಮಗೆ ಬಂದಿವೆ. ಈ ಸಂಕಲನಗಳನ್ನು ಋಗ್ವೇದ

ಸಂಹಿತೆ, ಸಾಮವೇದ ಸಂಹಿತೆ, ಅಥರ್ವಣವೇದ ಸಂಹಿತೆ ಮತ್ತು ಯಜುರ್ವೇದ ಸಂಹಿತೆ ಎಂದು ಕರೆಯುತ್ತಾರೆ. ಇವುಗಳನ್ನು ಹೆಚ್ಚಾಗಿ ಋಗ್ವೇದ, ಸಾಮವೇದ ಇತ್ಯಾದಿಯಾಗಿ ಮಾತ್ರ ಕರೆಯುವುದಿದೆ. ಇವುಗಳ ಪೈಕಿ ಋಗ್ವೇದವು ಉಳಿದವುಗಳಿಗಿಂತ ಪುರಾತನವಾದುದು. ಅದು ವೈದಿಕ ಸಾಹಿತ್ಯದ ತಳಹದಿಯೆಂದು ಆ ಸಾಹಿತ್ಯದಿಂದಲೇ ಪರಿಗಣಿಸಲ್ಪಡುತ್ತದೆ."[೧೧] ಋಗ್ವೇದವು ಶ್ಲೋಕಗಳಿಂದ ರಚಿತವಾಗಿದ್ದು, ಹಿಂದೂಧರ್ಮ ಪಠಿಸುವ ಗಾಯತ್ರಿ ಮಂತ್ರವು ಈ ವೇದದಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ಸ್ಥಳೀಯರೊಂದಿಗೆ ಬೆರೆತರೆ ತಮ್ಮ ಕುಲ ಕೆಡುವುದೆಂದು ಭಾವಿಸಿ 'ವರ್ಣವ್ಯವಸ್ಥೆ'ಯನ್ನು ರೂಪಿಸಿರುವುದು ಈ ವೇದದಲ್ಲಿ ಕಾಣಬಹುದಾಗಿದೆ. ಯಜುರ್ವೇದವು ಯಜ್ಞ-ಯಾಗಾದಿಗಳಿಗೆ ಸಂಬಂಧಿಸಿದ ವೇದವಾಗಿದೆ. ಈ ವೇದವು ಅಶ್ವಮೇಧಯಾಗದ ಬಗ್ಗೆ ತಿಳಿಸುತ್ತದೆ. ಸಾಮವೇದವು ಸಂಗೀತಕ್ಕೆ ಸಂಬಂಧಿಸಿದ ವೇದವಾಗಿದ್ದು, ಬ್ರಾಹ್ಮಣರು ಯಜ್ಞಗಳ ಸಮಯದಲ್ಲಿ ಮಧುರವಾಗಿ ಹಾಡುತ್ತಿದ್ದ ಅನೇಕ ಶ್ಲೋಕಗಳನ್ನು ಒಳಗೊಂಡಿದೆ. ಮಾಟ ಮಂತ್ರಗಳಿಗೆ ಹೆಚ್ಚು ಒತ್ತು ನೀಡಿರುವುದು ಅಥರ್ವಣವೇದದಲ್ಲಿ ಇದೆ.

ಮನುಸ್ಮೃತಿ ದೈವಿಕ ಮೂಲದ್ದು ಎಂದು ನಂಬಿಸಲಾದ ವೈದಿಕ ತತ್ವಜ್ಞಾನ, ಮನುಸ್ಮೃತಿಯನ್ನು ಕಾನೂನು ಸಂಹಿತೆಯಾಗಿ ಮಾಡಿತು. ಮನು ಸಮಾಜದಲ್ಲಿ ಬ್ರಾಹ್ಮಣರಿಗೆ ಮತ್ತು ಪುರೋಹಿತಶಾಹಿಗಳಿಗೆ ಪ್ರತ್ಯಕವಾದ ಸ್ಥಾನಮಾನ ಕೊಟ್ಟಿರುವುದನ್ನು, ಅಂಬೇಡ್ಕರ್ ಅವರು ಮನುಸ್ಮೃತಿಯ ಸೂತ್ರಗಳನ್ನು ಹೀಗೆ ಗುರುತಿಸುತ್ತಾರೆ. "೧. ಬ್ರಾಹ್ಮಣನು (ಬ್ರಹ್ಮನ) ಮುಖದಿಂದ ಬಂದವನಾದ್ದರಿಂದ, ಜ್ಯೇಷ್ಠನಾದ್ದರಿಂದ ಮತ್ತು ವೇದವನ್ನು ಹೊಂದಿದವನಾದ್ದರಿಂದ ಬ್ರಾಹ್ಮಣನೇ ಈ ಸೃಷ್ಟಿಯ ಪ್ರಭು. ೨. ಸರ್ವಭೂತಗಳಲ್ಲಿ ಪ್ರಾಣಿಗಳು ಶ್ರೇಷ್ಠ. ಪ್ರಾಣಿಗಳಲ್ಲಿ ಬುದ್ಧಿವಂತ (ಪ್ರಾಣಿಗಳು) ಶ್ರೇಷ್ಠ, ಅದರಲ್ಲೂ ಮನುಷ್ಯರು ಶ್ರೇಷ್ಠ. ಮನುಷ್ಯರಲ್ಲಿ ಬ್ರಾಹ್ಮಣರೇ ಶ್ರೇಷ್ಠ. ೩. ಈ ಜಗತ್ತಿನಲ್ಲಿರುವುದೆಲ್ಲ ಬ್ರಾಹ್ಮಣನ ಸ್ವತ್ತು. ತನ್ನ ಶ್ರೇಷ್ಠ ಜನ್ಮದಿಂದಲೇ ಬ್ರಾಹ್ಮಣನು ಎಲ್ಲ (ವಸ್ತುಗಳಿಗೂ) ಅರ್ಹತೆ ಪಡೆದಿದ್ದಾನೆ. ೪. ಬ್ರಾಹ್ಮಣನು ತನ್ನ ಊಟವನ್ನೇ ಉಣ್ಣುತ್ತಾನೆ. ತನ್ನ ವಸ್ತುವನ್ನೇ ಉಡುತ್ತಾನೆ. ತನ್ನ ದಾನವನ್ನೇ ಮಾಡುತ್ತಾನೆ. ಇತರರು ಬ್ರಾಹ್ಮಣನ ಔದಾರ್ಯದಲ್ಲಿ ಬದುಕುತ್ತಾರೆ. ೫. ತನ್ನ ಸಂಸ್ಕಾರ, ನಿಯಮ ಮತ್ತು ಪ್ರಕೃತಿ ವಿಶೇಷಗಳಿಂದ ಸಕಲ ವರ್ಣಗಳಿಗೂ ಬ್ರಾಹ್ಮಣನೇ ಪ್ರಭು. ೬. ಬ್ರಾಹ್ಮಣನೇ (ಈ ಜಗತ್ತಿನ) ವಿಧಾನ, ಶಾಸನಕಾರ, ಅಧ್ಯಾಪಕ. ಆದ್ದರಿಂದ (ಎಲ್ಲ ಜೀವಿಗಳ ಮಿತ್ರ. ಆ ಬ್ರಾಹ್ಮಣನಿಗೆ ಯಾರೂ ಅಕುಶಲವಾದ ಅಥವಾ ಶುಷ್ಕವಾದ ಮಾತುಗಳನ್ನಾಡದಿರಲಿ. ರಾಜನೂ ಕೂಡಾ ಬ್ರಾಹ್ಮಣರನ್ನು ಅಸಂತುಷ್ಟಗೊಳಿಸಬಾರದೆಂದು ಮನು ಈ ಕೆಳಗಿನಂತೆ ವಿಧಿಸುತ್ತಾನೆ. ೭. ಬ್ರಾಹ್ಮಣನು ಎಂತಹ ಕಷ್ಟಕ್ಕೆ ಸಿಲುಕಿದ ಸಮಯದಲ್ಲೂ (ರಾಜನು) ಅವನನ್ನು ಕುಪಿತಗೊಳಿಸಬಾರದು. ಹಾಗೆ (ಬ್ರಾಹ್ಮಣನು) ಕೋಪಗೊಂಡರೆ ರಾಜನ ಸೈನ್ಯ ವಾಹನಗಳೆಲ್ಲವನ್ನೂ ತಕ್ಷಣವೇ ನಾಶ ಮಾಡಬಲ್ಲ. ೮. ಧರ್ಮವನ್ನು ಸ್ವತಃ ತಿಳಿದ ಬ್ರಾಹ್ಮಣನು (ತನಗೆ) ಯಾರಾದರೂ ಹಾನಿ ಮಾಡಿದರೆ ಅದನ್ನು ರಾಜನ ಗಮನಕ್ಕೆ ತರಬೇಕಾಗಿಲ್ಲ. ಬ್ರಾಹ್ಮಣನು ತನಗೆ ಹಾನಿ ಮಾಡಿದವರನ್ನು ತನ್ನ ಬಲದಿಂದಲೇ ಶಿಕ್ಷೆಗೆ ಗುರಿಪಡಿಸಬಹುದು. ೯.

(ಬ್ರಾಹ್ಮಣನ) ಸ್ವಂತ ಬಲವು ರಾಜಬಲಕ್ಕಿಂತ ಬಲವತ್ತರವಾದುದು. ಆ ಬಲದಿಂದಲೇ ದ್ವಿಜರು (ಶತ್ರುಗಳನ್ನು) ನಿಗ್ರಹಿಸಬಲ್ಲರು."೧೨ ಈ ರೀತಿಯಾಗಿ ಮನು ಬ್ರಾಹ್ಮಣರಿಗೆ ಸಮಾಜದಲ್ಲಿ ಮುಖ್ಯವಾದ ಸ್ಥಾನಮಾನ ಕೊಡಬೇಕು ಮತ್ತು ಅವರನ್ನು ಎಲ್ಲರಿಗಿಂತ ಶ್ರೇಷ್ಠ ಭಾವನೆಯಿಂದ ನೋಡಬೇಕು ಎಂಬುದನ್ನು ಹೇಳುತ್ತಾನೆ. ಈ ರೀತಿಯ ಹೇಳಿಕೆಗಳು ಸಮಾಜದಲ್ಲಿ ಅಸಮಾನತೆಗೆ ಕಾರಣವಾಗಿವೆ ಹಾಗೂ ಜಾತಿ ಶ್ರೇಣೀಕರಣ ಹುಟ್ಟಿಗೆ ಕಾರಣವಾಗಿದೆ. ಹಾಗೂ ಮನುಸ್ಮೃತಿಯಲ್ಲಿ ಮನು ಸಮಾಜದಲ್ಲಿ ಉಳಿದ ಜನರಿಗಿಂತ ಬ್ರಾಹ್ಮಣರೇ ಮುಖ್ಯ ಎಂದು ಹೇಳುವುದರ ಮೂಲಕ ಉಳಿದ ಜನರಿಗೆ ವಂಚನೆ ಮಾಡಿದ್ದಾನೆ. ಆದ್ದರಿಂದ ಪ್ರಾಚೀನ ಭಾರತದಲ್ಲಿ ವೈದಿಕ ವಿರೋಧಿ ನಿಲುವುಗಳ ಹುಟ್ಟಿಗೆ ಕಾರಣವಾಗಿರುವುದು ಕಾಣಬಹುದಾಗಿದೆ.

ಒಟ್ಟಿನಲ್ಲಿ ಪ್ರಾಚೀನ ಭಾರತದ ವೈದಿಕ ಧರ್ಮದ ತಾತ್ವಿಕ ಚಿಂತನೆಗಳು ಪ್ರಶ್ನಾರ್ಹ ಚಿಂತನೆಗಳಾಗಿವೆ. ಈ ವೈದಿಕ ಧರ್ಮದ ತಾತ್ವಿಕ ಚಿಂತನೆಗಳನ್ನು ಈ ರೀತಿ ಗುರುತಿಸಬಹುದಾಗಿದೆ. ದೇವರ ಅಸ್ತಿತ್ವ, ಸಮಾಜದ ಮೇಲೆ ದೈವಿಕ ಪ್ರಭುತ್ವ, ವಿಶ್ವದ ಸೃಷ್ಟಿಯ ಕಲ್ಪನೆ, ಋಷಿ ಮುನಿಗಳ ಅಧ್ಯಾತ್ಮದ ಚಿಂತನೆಗಳು, ಆತ್ಮ, ಕರ್ಮ ಮತ್ತು ಪುನರ್ಜನ್ಮದ ಕಲ್ಪನೆಗಳು, ಆಸ್ತಿಕವಾದ, ಅಸಮಾನತೆ, ಧಾರ್ಮಿಕ ಆಚರಣೆಗಳು, ಪುರೋಹಿತರ ಸ್ಥಾನಮಾನಗಳು, ವರ್ಣಾಶ್ರಮ, ಯಜ್ಞ ಯಾಗಾದಿ ಕ್ರಿಯೆಗಳು, ಮಂತ್ರ-ತಂತ್ರಗಳು ಮತ್ತು ಮಂತ್ರೋಚ್ಚಾರಣೆಯಲ್ಲಿ ಇರುವ ಶಕ್ತಿಯ ಪ್ರಾಧ್ಯಾನತೆ, ಧಾರ್ಮಿಕ ಕಾನೂನು ಇತ್ಯಾದಿ ತಾತ್ವಿಕ ಅಂಶಗಳನ್ನು ಕಾಣಬಹುದಾಗಿದೆ. ಈ ತಾತ್ವಿಕ ಚಿಂತನೆಗಳು ಅಸಮಾನತೆಯಿಂದ ಕೂಡಿರುವುದರಿಂದ ಮತ್ತು ಸಮಾಜದಲ್ಲಿನ ಅಸಮಾನತೆಯನ್ನು ಸಮರ್ಥಿಸುತ್ತಿರುವುದರಿಂದ, ನಾಸ್ತಿಕವಾದಿ ಪಂಥಗಳು ಇದನ್ನು ವಿರೋಧಿಸಲು ಮುಂದಾದವು. ಇದರ ಕಾರಣವಾಗಿ ವೈದಿಕ ಚಿಂತನೆಗೆ ಪರ್ಯಾಯವಾಗಿ ತಾತ್ವಿಕ ಚಿಂತನೆಗಳು ಹುಟ್ಟುಹಾಕಿದವು.

ಪ್ರಾಚೀನ ಭಾರತದ ವೈದಿಕ ಚಿಂತನೆಗಳನ್ನು ವಿರೋಧಿಸಲು ಕ್ರಿ.ಪೂ. ಆರನೆಯ ಶತಮಾನದ ನಂತರ ಅವೈದಿಕ ಪಂಥಗಳು ಹುಟ್ಟಿಕೊಂಡವು. ಈ ಪಂಥಗಳು ಕಠಿಣವಾದ ತಪಸ್ಸಿನ ಮೂಲಕ ಸೃಷ್ಟಿಯ ರಹಸ್ಯಗಳನ್ನು ಅರಿಯಲು ಮುಂದಾದವು. ಈ ಪಂಥಗಳು ವೇದಗಳ ಪ್ರಾಮುಖ್ಯತೆ ಮತ್ತು ಅಧ್ಯಾತ್ಮವನ್ನು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಈ ಪ್ರಾಚೀನ ಭಾರತದ ಪಂಥಗಳನ್ನು ಭೌತವಾದಿಗಳು, ನಿರೀಶ್ವರವಾದಿಗಳು, ಅನಾತ್ಮವಾದಿಗಳು ಎಂದು ಕರೆಯಲಾಗಿದೆ. ಆದ್ದರಿಂದ ಈ ಪಂಥಗಳು ಸೃಷ್ಟಿಸಿದ ಪ್ರಾಚೀನ ಭಾರತದ ವೈದಿಕ ವಿರೋಧಿ ಚಿಂತನೆಗಳನ್ನು ಈ ಕೆಳಗಿನಂತೆ ವಿಭಾಗೀಕರಿಸಲಾಗುತ್ತದೆ.

೩.೨.೧. ಚಾರ್ವಾಕ ಚಿಂತನೆಗಳು

ಚಾರ್ವಾಕ ಚಿಂತನೆಗಳನ್ನು ಸಾಮಾನ್ಯವಾಗಿ ಚಾರ್ವಾಕ ದರ್ಶನ, ಲೋಕಾಯತ ಎಂದು ಕರೆಯುವ ಪದ್ಧತಿ ಇದೆ. ವೈದಿಕ ವಿರೋಧಿ ಚಿಂತನೆಗಳ ಪರಿಕಲ್ಪನೆಯನ್ನು ವಿವರಿಸಿಕೊಳ್ಳುವ ಈ ಉಪ ಅಧ್ಯಾಯದಲ್ಲಿ ಈ ಭಾಗದ ಶೀರ್ಷಿಕೆಯನ್ನು ಚಾರ್ವಾಕ ಚಿಂತನೆಗಳು ಎಂದು

ಇಟ್ಟುಕೊಳ್ಳಲಾಗಿದೆ. ಈ ಭಾಗದಲ್ಲಿ ಚಾರ್ವಾಕ ಚಿಂತನೆಗಳ ಮೂಲ ಎಳೆಗಳು, ಅವುಗಳ ಸ್ವರೂಪ ಹಾಗೂ ಅವು ಹೇಗೆ ವೈದಿಕ ಪ್ರಜ್ಞೆಗೆ ವಿರೋಧ ಹಾಗೂ ಪರ್ಯಾಯ ಆಗಿದ್ದವು ಎಂದು ಚರ್ಚೆ ಮಾಡಲಾಗುವುದು. ಜೊತೆಗೆ ಆ ಮೂಲಕ ಅವು ಹೇಗೆ ವೈದಿಕ ವಿರೋಧಿ ಪ್ರಜ್ಞೆಯ ಭಾಗವಾಗಿದ್ದವು ಎಂಬುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು.

ವೈದಿಕ ಪ್ರಜ್ಞೆಯು ಮೂಲಭೂತವಾಗಿ ದೇಹ ಬೇರೆ ಮತ್ತು ಆತ್ಮ ಬೇರೆ ಎಂಬ ವಾದವನ್ನು ಮಂಡಿಸಿದೆ. ಜೊತೆಗೆ ಇಡೀ ಪ್ರಪಂಚ ಹಾಗೂ ಅದರಲ್ಲಿರುವ ಪ್ರತಿಯೊಂದು ವಸ್ತುವೂ ಕೂಡಾ ಸೃಷ್ಟಿಕರ್ತನಿಂದ ಸೃಷ್ಟಿಯಾಗಿದೆ ಎಂದು ನಂಬಿದೆ ಹಾಗೂ ಹಾಗೆಂದು ನಂಬಿಸಿದೆ. ಪ್ರಾಚೀನ ಭಾರತೀಯ ತತ್ವಜ್ಞಾನದಲ್ಲಿ ದೇಹ ಮತ್ತು ಆತ್ಮಗಳನ್ನು ಕುರಿತ ಚರ್ಚೆ ಹಾಗೂ ಸೃಷ್ಟಿಕರ್ತನನ್ನು ಕುರಿತ ಚರ್ಚೆ ಬಹಳ ಮುಖ್ಯವಾದುದು. ಇದನ್ನು ಆಧರಿಸಿಯೇ ವೈದಿಕ ಚಿಂತನೆಗಳು ಯಾವುವು ಮತ್ತು ಅವೈದಿಕ ಚಿಂತನೆಗಳು ಯಾವುವು ಎಂಬ ವಿಭಾಗವನ್ನೂ ಕೂಡ ರಚಿಸಲಾಗಿದೆ. ಈ ಭಾಗದ ಚರ್ಚೆಯನ್ನು ಇದನ್ನು ಆಧರಿಸಿಯೇ ಮಾಡಲಾಗುವುದು.

ಚಾರ್ವಾಕ ಚಿಂತನೆಗಳ ಪ್ರಕಾರ ದೇಹ ಮತ್ತು ಆತ್ಮ ಬೇರೆ ಬೇರೆ ಅಲ್ಲ. ಅವು ಎರಡು ಒಂದೇ. ಅದನ್ನು ದಾರ್ಶನಿಕ ಪರಿಭಾಷೆಯಲ್ಲಿ 'ದೇಹಾತ್ಮವಾದ' ಎನ್ನುತ್ತಾರೆ. ಇವೆರಡು ಕೂಡ ಭೂಮಿ, ನೀರು, ಬೆಂಕಿ ಮತ್ತು ಗಾಳಿಯಿಂದ ಸೃಷ್ಟಿಯಾಗಿವೆ ಎಂಬುದು ಚಾರ್ವಾಕ ಚಿಂತನೆಗಳ ಮೂಲ ಬೇರು. ದೇಹ, ಆತ್ಮ ಎರಡು ಒಂದೇ ಆಗಿರುವುದರಿಂದ ಪರಲೋಕದ ಕಲ್ಪನೆ ಇಲ್ಲಿ ಬರುವುದಿಲ್ಲ. ಹಾಗಾಗಿ ಸ್ವರ್ಗ ನರಕಗಳ ಕಲ್ಪನೆ ಇಲ್ಲ. "ಆತ್ಮ ಎಂದು ಕರೆಯಲಾಗುವ ಯಾವುದೂ ಇಲ್ಲವೆಂದು ಲೋಕಾಯತರು ಹೇಳುತ್ತಾರೆ. ಆತ್ಮವೆಂದರೆ ಕೇವಲ ದೇಹವೆಂದು ಅವರು ತಿಳಿಯುತ್ತಾರೆ. ದೇಹರಚನೆಯಲ್ಲಿ ಸೇರ್ಪಡೆಗೊಂಡಿರುವ ಭೂಮಿ ಮೊದಲಾದ ನಾಲ್ಕು ರೂಪಗಳ ಭೌತ ವಸ್ತುವಿಗೆ – ಭೂಮಿಯಂತಹ ಪ್ರತ್ಯೇಕ ರೂಪದಲ್ಲಾಗಲೀ ಒಂದೇ ಕಡೆಯಲ್ಲಿ ಜೊತೆಯಾಗಿ ಇಡಲಾಗಿರುವ ಭೌತ ವಸ್ತುವಿನ ನಾಲ್ಕು ರೂಪಗಳ ಸಮಷ್ಟಿಯಲ್ಲಾಗಲೀ – ಪ್ರಜ್ಞೆಯೆಂಬುದು ಇರುವುದಿಲ್ಲವೆಂದು ಅವರು ಒಪ್ಪುತ್ತಾರೆ. ಆದರೆ ಅದೇ ನಾಲ್ಕು ರೂಪಗಳ ಭೌತವಸ್ತುವು (ಭೂಮಿ, ನೀರು, ಬೆಂಕಿ ಮತ್ತು ಗಾಳಿ) ಒಂದು ವಿಶೇಷ ಪರಿವರ್ತನೆಯನ್ನು ಹೊಂದಿ ದೇಹ ಉಂಟಾಗುವಾಗ, ಅದರೊಳಗೆ ಪ್ರಜ್ಞೆ ಹುಟ್ಟುವುದು ಕಂಡುಬರುತ್ತದೆ"[೧೩] ವೈದಿಕ ಚಿಂತನೆಯು ಆತ್ಮವು ಭೌತವಸ್ತುಗಳಿಂದ ಆಗಿದೆ ಎಂಬುದನ್ನು ಒಪ್ಪುವುದಿಲ್ಲ. ಆದರೆ ಚಾರ್ವಾಕ ಚಿಂತನೆಯು ಇದನ್ನು ಗಟ್ಟಿಯಾಗಿ ಸಮರ್ಥಿಸುತ್ತದೆ.

ದೇಹವೇ ಬೇರೆ ಮತ್ತು ಆತ್ಮವೇ ಬೇರೆ ಎಂದು ಹೇಳುವ ವೈದಿಕ ಚಿಂತನೆಯು ಜೀವ, ಪ್ರಜ್ಞೆ, ಸ್ಮರಣೆ ಮೊದಲಾದುವುಗಳೆಲ್ಲ ಆತ್ಮದ ಗುಣಗಳು ಎಂದು ಸಾಧಿಸುತ್ತದೆ. ಆದರೆ ಚಾರ್ವಾಕ ಚಿಂತನೆಯು ಇದನ್ನು ಒಪ್ಪುವುದಿಲ್ಲ. ಇದನ್ನು ಈ ಮುಂದಿನ ಮಾತುಗಳಲ್ಲಿ ಗಮನಿಸಬಹುದು. "ಜೀವ, ಪ್ರಜ್ಞೆ, ಸ್ಮರಣೆ ಮೊದಲಾದ ಎಲ್ಲಾ ಗುಣಗಳೂ ದೇಹ ಇರುವಾಗ ಮಾತ್ರ ಕಂಡುಬರುತ್ತವೆ; ದೇಹ ಇಲ್ಲದಿರುವಾಗ ಈ ಗುಣಗಳಲ್ಲಿ ಯಾವುದೊಂದು ಕೂಡ ಕಂಡುಬರುವುದಿಲ್ಲ. ಪ್ರಜ್ಞೆ

ಮೊದಲಾದ ಗುಣಗಳು ದೇಹ ಇರುವಾಗ ಮಾತ್ರ ಕಾಣಿಸಿಕೊಳ್ಳುವುದರಿಂದಲೂ, ದೇಹ ಇಲ್ಲದಿರುವಾಗ ಅವು ಸರ್ವಥಾ ಕಾಣಿಸಿಕೊಳ್ಳದಿರುವುದರಿಂದಲೂ ಈ ಗುಣಗಳು ಸ್ವತಃ ದೇಹದ ಗುಣಗಳೇ ಆಗಿವೆ. ದೇಹಕ್ಕಿಂತ ಭಿನ್ನವಾದ ಮತ್ತು ಪ್ರತ್ಯೇಕವಾದ ಆತ್ಮ ಇದೆಯೆಂದು ಭಾವಿಸುವುದಕ್ಕೆ ಯಾವ ಆಧಾರವಿಲ್ಲ. ಈ ಅರ್ಥದಲ್ಲಿ ಆತ್ಮವೆಂದು ಯಾವುದನ್ನು ಕರೆಯಲಾಗುತ್ತದೋ ಅದು ನಿಜವಾಗಿ ದೇಹವೇ ಹೊರತು ಬೇರೆ ಏನೂ ಅಲ್ಲ; ಆತ್ಮ ಮತ್ತು ದೇಹ ಒಂದೇ ಅಲ್ಲದೆ ಬೇರೆ ಬೇರೆ ಅಲ್ಲ."[೧೪]

ದೇಹ ಬೇರೆ ಮತ್ತು ಆತ್ಮ ಬೇರೆ ಎಂಬ ಚಿಂತನೆಗೂ ಹಾಗೂ ದೇಹ ಮತ್ತು ಆತ್ಮ ಒಂದೇ ಎಂಬ ಚಿಂತನೆಗೂ ಮೂಲಭೂತವಾದ ವ್ಯತ್ಯಾಸ ಎಲ್ಲಿ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಮೊದಲನೆಯ ವಾದವು ಕಣ್ಣಿಗೆ ಕಾಣದಿರುವ ಆತ್ಮವನ್ನು ಸಮರ್ಥಿಸುತ್ತದೆ. ಎರಡನೆಯ ವಾದವು ಆತ್ಮದ ಬಗೆಗೆ ಚಿಂತನೆ ಮಾಡಿದರೂ ಕೂಡ ಅದು ಕಣ್ಣಿಗೆ ಕಾಣುವ ಭೌತವಸ್ತುಗಳಿಂದಲೇ ಸೃಷ್ಟಿಯಾಗಿದೆ ಎಂಬುದನ್ನು ಸಮರ್ಥಿಸುತ್ತದೆ. ಮೊದಲನೆಯ ವಾದವು ಸ್ವರ್ಗ ನರಕದ ಕಲ್ಪನೆಗಳನ್ನು ಒಪ್ಪುತ್ತದೆ. ಎರಡನೆಯ ವಾದವು ಇದನ್ನು ಒಪ್ಪುವುದಿಲ್ಲ. ಇದು ಇವೆರಡಕ್ಕೂ ಇರುವ ಮೂಲಭೂತವಾದ ಮುಖ್ಯ ವ್ಯತ್ಯಾಸ.

ಪ್ರಪಂಚದಲ್ಲಿ ಇರುವ ಪ್ರತಿಯೊಂದು ವಸ್ತುವಿಗೂ ಬೇರೆ ಬೇರೆಯಾದ ಗುಣಗಳಿರುತ್ತವೆ. ಉದಾಹರಣೆಗೆ ಗಾಳಿಗೆ ಬೀಸುವ ಗುಣ, ನೀರಿಗೆ ಹರಿಯುವ ಗುಣ, ಬೆಂಕಿಗೆ ಸುಡುವ ಗುಣ. ವೈದಿಕ ಚಿಂತನೆಗಳ ಪ್ರಕಾರ ವಸ್ತುಗಳಿಗೆ ಇರುವ ಈ ಗುಣವು ದೇವರ ಸೃಷ್ಟಿ. ಆದರೆ ಚಾರ್ವಾಕ ಚಿಂತನೆಗಳ ಪ್ರಕಾರ ವಸ್ತುಗಳಿಗೆ ಇರುವ ಈ ಗುಣಗಳು ದೇವರ ಸೃಷ್ಟಿ ಅಲ್ಲ; ಬದಲಾಗಿ ಆ ವಸ್ತುಗಳಲ್ಲೇ ಅಂತರ್ಗತವಾಗಿರುವ ಸಹಜ ಸ್ವಭಾವ ಗುಣ. ಹಾಗಾಗಿ ವೈದಿಕ ಚಿಂತನೆಯು ವಸ್ತುಗಳ ಸೃಷ್ಟಿಗೆ ಮತ್ತು ಇಡೀ ಜಗತ್ತಿನ ಸೃಷ್ಟಿಗೆ ಒಬ್ಬ ಸೃಷ್ಟಿಕರ್ತ ಇದ್ದಾನೆ ಎಂದು ಹೇಳುತ್ತದೆ. ಆದರೆ ಚಾರ್ವಾಕ ಚಿಂತನೆ ಇದನ್ನು ನಂಬುವುದಿಲ್ಲ ಮತ್ತು ಒಪ್ಪುವುದಿಲ್ಲ. ಯಾಕೆಂದರೆ, "ವಸ್ತುಗಳು ತಾವಾಗಿ (ಎಂದರೆ ತಮ್ಮ ಸ್ವಂತ ಆಂತರಿಕ ಪ್ರಕೃತಿಯ ಕಾರಣದಿಂದಲೆ) ಪರಿವರ್ತನೆ ಹೊಂದುವುದಕ್ಕೆ ಸ್ವಭಾವ ಎನ್ನುತ್ತೇವೆ. ಅಸ್ತಿತ್ವದಲ್ಲಿ ಇರುವ ಪ್ರತಿಯೊಂದು ಸ್ವಭಾವದ ಕ್ರಿಯಾಶೀಲತೆಯಿಂದಾಗಿ ಉಂಟಾಗುತ್ತವೆ. ಉದಾಹರಣೆಗೆ, ಮಣ್ಣು ಮಡಕೆಯಾಗಿ ಬದಲಾವಣೆ ಹೊಂದುತ್ತದೆಯೇ ಹೊರತು ಬಟ್ಟೆಯಾಗಿ ಅಥವಾ ಬೇರೆ ಇನ್ಯಾವುದೇ ವಸ್ತುವಾಗಿ ಬದಲಾವಣೆ ಆಗುವುದಿಲ್ಲ. ಹಾಗೆಯೇ ನೂಲು ಬಟ್ಟೆಯಾಗಿ ಬದಲಾವಣೆ ಹೊಂದುತ್ತದೆಯೇ ಹೊರತು ಬೇರೆ ವಸ್ತುವಾಗಿ ಅದು ಬದಲಾವಣೆ ಹೊಂದುವುದಿಲ್ಲ. ವಸ್ತುಗಳ ಈ ಬದಲಾವಣೆಗೆ, ಈ ಪರಿವರ್ತನೆಗೆ ವಸ್ತುಗಳ ಒಳಗೇ ಅಂತರ್ಗತವಾಗಿರುವ ಸ್ವಭಾವವೇ ಕಾರಣವೇ ಹೊರತು; ಇದಕ್ಕೆ ಸೃಷ್ಟಿಕರ್ತನ ಆಶೀರ್ವಾದ ಅಥವಾ ಕೃಪೆಯ ಅಗತ್ಯವಿಲ್ಲ. ಹಾಗಾಗಿ ಒಂದು ವಸ್ತುವು ಮತ್ತೊಂದು ವಸ್ತುವಾಗಿ ರೂಪಾಂತರ ಹೊಂದುವ ಅಥವಾ ಪರಿವರ್ತನೆಯಾಗುವ ಈ ಪ್ರಕ್ರಿಯೆ ನಮಗೆ ಮುಖ್ಯವಾಗುತ್ತದೆ. 'ಗಿಡಗಳಲ್ಲಿರುವ ಮುಳ್ಳಿಗೆ ಚೂಪು ಮೊನೆಯನ್ನು ಯಾರು ಮಾಡುತ್ತಾರೆ? ಮೃಗಗಳನ್ನೂ, ಪಕ್ಷಿಗಳನ್ನೂ ವಿಭಿನ್ನ

ವಿಭಿನ್ನವಾಗಿ ಯಾರು ಮಾಡುತ್ತಾರೆ? ಇವೆಲ್ಲವೂ ಅವುಗಳ ಒಳಗೇ ಇರುವ ಅಂತರ್ಗತ ಸ್ವಭಾವದಿಂದ ಉಂಟಾಗುತ್ತವೆ."[೧೫]

ಮೇಲಿನ ಚರ್ಚೆಯಿಂದ ನಮಗೆ ತಿಳಿದುಬರುವುದು ಏನೆಂದರೆ, ಚಾರ್ವಾಕ ಚಿಂತನೆಗಳು ಪ್ರಪಂಚದ ಸೃಷ್ಟಿಗೆ ಸೃಷ್ಟಿಕರ್ತ ಇದ್ದಾನೆ, ದೇವರು ಇದ್ದಾನೆ ಎಂದು ತಿಳಿಯುವುದಿಲ್ಲ ಹಾಗೂ ಅದನ್ನು ಒಪ್ಪುವುದಿಲ್ಲ. ಸ್ವರ್ಗ-ನರಕಗಳ ಕಲ್ಪನೆಯನ್ನು ಒಪ್ಪುವುದಿಲ್ಲ ಹಾಗೂ ನಂಬುವುದಿಲ್ಲ. ಪ್ರಪಂಚದ ಎಲ್ಲಾ ವಸ್ತುಗಳೂ ಕೂಡ ತಮ್ಮೊಳಗೇ ತಾವು ನಿರಂತರವಾಗಿ ಬದಲಾಗುವ, ರೂಪಾಂತರ ಹೊಂದುವ, ಪರಿವರ್ತನೆಯಾಗುವ ಸ್ವಭಾವಗಳನ್ನು ಹೊಂದಿರುತ್ತವೆ. ಈ ದೃಷ್ಟಿಯಲ್ಲಿ ಇದು ವೈದಿಕ ವಿರೋಧಿ ಪರಿಕಲ್ಪನೆಯನ್ನು ಮಂಡಿಸಿದೆ.

೩.೨.೨. ಜೈನ ಚಿಂತನೆಗಳು

ಜೈನ ಚಿಂತನೆಗಳು ಇಡೀ ಪ್ರಪಂಚವನ್ನು ಎರಡು ಭಾಗವಾಗಿ ವಿಭಾಗಿಸುತ್ತವೆ. ಒಂದು: ಜೀವ. ಮತ್ತೊಂದು ಅಜೀವ. ಜೀವ ಎಂದರೆ ಪ್ರಜ್ಞೆ ಇರುವ ವಸ್ತುಗಳು. ಅಜೀವ ಎಂದರೆ ಪ್ರಜ್ಞೆ ಇಲ್ಲದಿರುವ ವಸ್ತುಗಳು. ಜೀವ ಇರುವ ವಸ್ತುಗಳನ್ನು ಚೇತನ ಎಂದು ಮತ್ತು ಜೀವ ಇಲ್ಲದಿರುವ ವಸ್ತುಗಳನ್ನು ಅಚೇತನ ಎಂದು ಕರೆಯುತ್ತಾರೆ. ಮೊದಲನೆಯ ಭಾಗದ ವಸ್ತುಗಳಿಗೆ ಪ್ರಾಣತತ್ವ ಇರುತ್ತದೆ. ಆದರೆ ಆತ್ಮ ಇರುವುದಿಲ್ಲ. ಇಲ್ಲಿ ಆತ್ಮ ಎಂದರೆ ಪ್ರಾಣ ಅಷ್ಟೇ ಅಥವಾ ಆತ್ಮ ಪ್ರಾಣ ಎರಡೂ ಒಂದೇ. ಪ್ರಪಂಚದಲ್ಲಿ ಅಸಂಖ್ಯಾತ ವಸ್ತುಗಳು ಇವೆ. ಅವೆಲ್ಲವು ಕ್ರಿಯಾಶೀಲವಾಗಿರುತ್ತವೆ. ಜೊತೆಗೆ ತಮ್ಮೊಳಗೆ ತಾವು ಬದಲಾಗುತ್ತಿರುತ್ತವೆ.

ಅಜೀವ ವಸ್ತುಗಳು ಜಡ ವಸ್ತುಗಳು. ಜೀವಕ್ಕಿಂತ ಇವು ಭಿನ್ನವಾಗಿರುತ್ತವೆ. ಇವುಗಳನ್ನು ಪುದ್ಗಲ ಎಂದು ಕರೆಯುತ್ತಾರೆ. ಜೈನ ಚಿಂತನೆಯ ಪ್ರಕಾರ ಪ್ರತಿಯೊಂದು ವಸ್ತುವನ್ನು ವಿಭಜನೆ ಮಾಡಬಹುದು. ಅಂದರೆ ಪ್ರತಿಯೊಂದು ವಸ್ತುಗಳು ಅನೇಕ ಕಣಗಳಿಂದ ರಚನೆಯಾಗಿರುತ್ತವೆ. ಈ ಕಣಗಳನ್ನು ಪರಮಾಣು ಎಂದು ಕರೆಯುತ್ತಾರೆ. ಈ ಪರಮಾಣುಗಳಿಗೆ ಸೂಕ್ಷ್ಮವಾದ ಚಲನೆಯ ಗುಣ ಇರುತ್ತದೆ. ಇದರಿಂದಲ್ಲೇ ವಸ್ತುಗಳು ತಮ್ಮ ರೂಪ ಮತ್ತು ಸ್ವಭಾವವನ್ನು ಬದಲಾಯಿಸಿಕೊಳ್ಳುತ್ತವೆ. ಇದನ್ನು ಆಧರಿಸಿಯೇ ವಸ್ತುಗಳು ಮತ್ತು ಇಡಿಯಾಗಿ ಪ್ರಪಂಚ ನಿರಂತರವಾಗಿ ಬದಲಾಗುತ್ತಾ ಇರುತ್ತದೆ. ಹಾಗಾಗಿ ಪ್ರಪಂಚದಲ್ಲಿ ಬದಲಾಗದೆ ಇರುವ ಯಾವ ವಸ್ತುವು ಇರುವುದಿಲ್ಲ. ವಸ್ತುಗಳ ಈ ಸ್ವಭಾವಕ್ಕೆ ವಸ್ತುಗಳ ಒಳಗೆ ಇರುವ ಗುಣವೇ ಕಾರಣ. ಇದಕ್ಕೆ ಹೊರಗಿನ ಶಕ್ತಿ ಕಾರಣವಲ್ಲ. ವಸ್ತುಗಳು ಮತ್ತು ಪ್ರಪಂಚ ಬದಲಾಗುವ ಸ್ವರೂಪವನ್ನು ಜೈನ ಚಿಂತನೆಯು ಸತ್ಯ ಎಂದು ಕರೆಯುತ್ತದೆ. ಈ ಸತ್ಯದ ಸ್ವರೂಪ ಕೂಡ ಜಡವಲ್ಲ. ಅದು ನಿರಂತರ ಬದಲಾಗುತ್ತಿರುತ್ತದೆ. ಇದನ್ನು ಜೈನ ಚಿಂತನೆಯು ಹೀಗೆ ನಿರೂಪಿಸಿದೆ. "ಸತ್ಯದ ಸ್ವರೂಪವನ್ನು ಏಳು ಹಂತಗಳಲ್ಲಿ ನಿರೂಪಿಸುತ್ತಾರೆ. ಅದನ್ನು ಸಪ್ತಭಂಗೀ ಎಂದು ವರ್ಣಿಸಲಾಗಿದೆ. ಅವು: ೧. ಇರಬಹುದು(ಸ್ಯಾತ್ ಅಸ್ತಿ). ೨. ಇಲ್ಲದಿರಬಹುದು(ಸ್ಯಾತ್ ನಾಸ್ತಿ). ೩. ಇರಲೂಬಹುದು

ಇಲ್ಲದಿರಲೂಬಹುದು ಸ್ಯಾತ್ ಅಸ್ತಿ ನಾಸ್ತಿ). ೪. ಅದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು(ಸ್ಯಾತ್ ಅವಕ್ತವ್ಯಃ). ೫. ಅದು ಇರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು(ಸ್ಯಾತ್ ಅಸ್ತಿ ಚ ಅವಕ್ತವ್ಯಃ). ೬. ಅದು ಇಲ್ಲದಿರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು(ಸ್ಯಾತ್ ನಾಸ್ತಿ ಚ ಅವಕ್ತವ್ಯಃ). ೭. ಇರಬಹುದು ಇಲ್ಲದಿರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು(ಸ್ಯಾತ್ ಅಸ್ತಿ ಚ ನಾಸ್ತಿ ಚ ಅವಕ್ತವ್ಯಃ)."[೧೬] ಮೇಲಿನ ಉಲ್ಲೇಖದ ಭಾಗ ಮೊದಲ ನೋಟಕ್ಕೆ ಸಂಕೀರ್ಣ ಮತ್ತು ಅಮೂರ್ತ ಎನಿಸುವಂತಿದೆ. ಅಷ್ಟು ವಿವರಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದು ಬಹಳ ಮುಖ್ಯವಾಗಿ ಮೂರ್ತ ಮತ್ತು ಅಮೂರ್ತಗಳನ್ನು ಒಟ್ಟಿಗೆ ಗ್ರಹಿಸುತ್ತದೆ. ಜೊತೆಗೆ ಜಡತೆ ಮತ್ತು ಚಲನಶೀಲತೆಯನ್ನು ಒಟ್ಟಿಗೆ ಗ್ರಹಿಸುತ್ತದೆ. ಈ ಮೂಲಕ ದೇಹ ಮತ್ತು ಆತ್ಮವನ್ನು, ದೇಹ ಮತ್ತು ಪ್ರಾಣವನ್ನು ಒಟ್ಟಿಗೆ ಗ್ರಹಿಸುತ್ತದೆ. ಇವುಗಳ ಹಿಂದೆ ಯಾವುದೇ ದೈವಿಕ ಶಕ್ತಿ ಇದೆ ಎಂಬುದನ್ನು ಜೈನ ಚಿಂತನೆ ಒಪ್ಪುವುದಿಲ್ಲ. ವೈದಿಕ ಚಿಂತನೆ ತನ್ನ ಅಂತರಂಗದಲ್ಲಿ ಇಟ್ಟುಕೊಂಡಿರುವ ಸೃಷ್ಟಿಕರ್ತನ ನಂಬಿಕೆಯನ್ನು ಜೈನ ಚಿಂತನೆಯು ತನ್ನ ಆಳದಲ್ಲಿ ನಿರಾಕರಿಸುತ್ತದೆ. ಈ ಮೂಲಕ ಇದು ವೈದಿಕ ವಿರೋಧಿ ಚಿಂತನೆಯ ತಾತ್ವಿಕ ಬೀಜವನ್ನು ಹೊಂದಿದೆ.

೩.೨.೩. ಬೌದ್ಧ ಚಿಂತನೆಗಳು

ಪ್ರಾಚೀನ ಭಾರತದ ತತ್ವಜ್ಞಾನದಲ್ಲಿ ಬುದ್ಧನ ಚಿಂತನೆಗಳಿಗೆ ವಿಶೇಷ ಮಹತ್ವ ಇದೆ. ಮೂಲತಃ ತ್ರಿಪಿಟಕಗಳಲ್ಲಿ ಬುದ್ಧನ ಚಿಂತನೆಗಳು ಅಡಗಿವೆ. ಈ ತ್ರಿಪಿಟಕಗಳನ್ನು ಅಧ್ಯಯನ ಮಾಡಿ, ಆ ಅಧ್ಯಯನಗಳ ಫಲಿತಗಳ ಮೂಲಕ ಬುದ್ಧನ ಚಿಂತನೆಗಳನ್ನು ಕಟ್ಟಲಾಗಿದೆ. ತ್ರಿಪಿಟಕಗಳನ್ನು ಭಿನ್ನ ಭಿನ್ನ ವಿಚಾರಧಾರೆಯವರು ಅಧ್ಯಯನ ಮಾಡಿ ಬುದ್ಧನ ಚಿಂತನೆಗಳನ್ನು ರೂಪಿಸಿದ್ದಾರೆ. ಭಾರತಿಯ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರಜ್ಞರು ಈ ಕೆಲಸವನ್ನು ಮಾಡಿದ್ದಾರೆ. ಅಧ್ಯಯನಕಾರರ ಹಿತಾಸಕ್ತಿ ಮತ್ತು ದೃಷ್ಟಿಕೋನವನ್ನು ಅವಲಂಬಿಸಿ ಬುದ್ಧನ ಚಿಂತನೆಗಳು ರೂಪುಗೊಳ್ಳುತ್ತಾ ಬಂದಿವೆ. ಹೀಗೆ ಹಲವು ಧೋರಣೆಗಳ ಅಧ್ಯಯನಗಳು ಹಲವು ದೃಷ್ಟಿಕೋನಗಳ ಮೂಲಕ ಬುದ್ಧನ ಚಿಂತನೆಗಳನ್ನು ರಚಿಸಿವೆ. ಅನೇಕ ಸಲ ಒಬ್ಬರ ಗ್ರಹಿಕೆಗಳು ಮತ್ತೊಬ್ಬರ ಗ್ರಹಿಕೆಯೊಂದಿಗೆ ತಾಳ ಮೇಳವಿಲ್ಲದೆ ಬೇರೆ ಬೇರೆಯಾಗಿ ಕಾಣುತ್ತವೆ. ಹಾಗಾಗಿ ಇವು ಬುದ್ಧನ ಚಿಂತನೆಗಳ ವೈಚಾರಿಕ ವಿರೋಧಗಳಂತೆ ಕಂಡರೂ ಆಶ್ಚರ್ಯ ಪಡಬೇಕಿಲ್ಲ. ಹಾಗಾಗಿ ಅವೈದಿಕ ಚಿಂತನೆಗಳ ಚರ್ಚೆಯ ಈ ಭಾಗದ ಪ್ರಸ್ತುತ ಉಪಶೀರ್ಷಿಕೆಯಲ್ಲಿ ಬುದ್ಧನ ಚಿಂತನೆಗಳನ್ನು ಕುರಿತು ಚರ್ಚಿಸಲಾಗುವುದು. ಇದಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರು ಬುದ್ಧನ ಚಿಂತನೆಗಳನ್ನು ಗ್ರಹಿಸಿರುವ ತಾತ್ವಿಕ ಚಿಂತನೆಗಳನ್ನು ಅವಲಂಬಿಸಲಾಗಿದೆ.

ಬೌದ್ಧ ಚಿಂತನೆಗಳ ಪ್ರಕಾರ ಈ ಪ್ರಪಂಚವನ್ನು ದೇವರು ಸೃಷ್ಟಿ ಮಾಡಲಿಲ್ಲ ಅಥವಾ ಈ ಪ್ರಪಂಚದ ಸೃಷ್ಟಿಗೆ ಸೃಷ್ಟಿಕರ್ತ ಇಲ್ಲ. ಸತ್ಯವು ಯಾವಾಗಲೂ ಆಧಾರವನ್ನು ಅವಲಂಬಿಸಿರಬೇಕು. ಆಧಾರವಿಲ್ಲದ ಸತ್ಯಕ್ಕೆ ಅಸ್ತಿತ್ವವಿಲ್ಲ. ಈ ಜಗತ್ತಿನಲ್ಲಿ ದುಃಖ ತುಂಬಿದೆ. ದುಃಖಕ್ಕೆ ಬಡತನ ಮತ್ತು

ಹಸಿವು ಕಾರಣವಾಗಿದೆ. ದುಃಖವನ್ನು ನಿವಾರಿಸಲು ಒಂದು ಮಾರ್ಗವಿದೆ. ಅದೇ ರೀತಿಯಲ್ಲಿ ದುಃಖಕ್ಕೆ ಕಾರಣವಾಗಿರುವ ಬಡತನ ಮತ್ತು ಹಸಿವುಗಳನ್ನು ನಿವಾರಿಸಲು ಒಂದು ಮಾರ್ಗವಿದೆ. ಅದು ಧಮ್ಮ ಮಾರ್ಗ.

"ಧರ್ಮದ ಕೆಲಸ ಪ್ರಪಂಚವನ್ನು ಪುನರ್ ರಚನೆ ಮಾಡುವುದು ಮತ್ತು ಎಲ್ಲರಿಗೂ ಸುಖ ಸಂವರ್ಧನೆ ಮಾಡುವುದು. ಪ್ರಪಂಚವು ಹೇಗೆ ಸೃಷ್ಟಿಯಾಯಿತು ಮತ್ತು ಅದು ಹೇಗೆ ಅಂತ್ಯವಾಗುತ್ತದೆ ಎಂಬುದನ್ನು ವಿವರಿಸುವುದು ಧರ್ಮದ ಕೆಲಸ ಅಲ್ಲ. ಆಸ್ತಿಯ ಖಾಸಗಿ ಒಡೆತನದಿಂದ ಒಂದು ವರ್ಗಕ್ಕೆ ಅಧಿಕಾರವು ಇನ್ನೊಂದು ವರ್ಗಕ್ಕೆ ದುಃಖವು ಉಂಟಾಗುತ್ತದೆ. ಈ ದುಃಖವನ್ನು ಹೋಗಲಾಡಿಸಬೇಕಾದರೆ ಅದರ ಕಾರಣವನ್ನು ಹೋಗಲಾಡಿಸಬೇಕು. ಎಲ್ಲಾ ಮಾನವರೂ ಎಲ್ಲಾ ಮಾನವರ ಮುಂದೆ ಸಮಾನರು. ಪ್ರತಿಯೊಬ್ಬ ಮನುಷ್ಯರನ್ನು ಅವರ ಯೋಗ್ಯತೆಯ ಮೇಲೆ ಅಳೆಯಬೇಕೇ ಹೊರತು ಅವರ ಹುಟ್ಟಿನಿಂದ ಅಲ್ಲ. ಯಾವುದೂ ಸನಾತನವಲ್ಲ ಅಥವಾ ಯಾವುದೂ ಶಾಶ್ವತವಲ್ಲ. ಎಲ್ಲವೂ ಪರಿವರ್ತನಶೀಲ ಮತ್ತು ಇರುವಿಕೆ ಎಂದರೆ ಸದಾ ಆಗುವಿಕೆ. ಸತ್ಯ ಮತ್ತು ನ್ಯಾಯಗಳನ್ನು ಹೊರತುಪಡಿಸಿ ಯುದ್ಧ ಕೆಟ್ಟದ್ದು. ದೇವರನ್ನು ಧರ್ಮದ ಕೇಂದ್ರವನ್ನಾಗಿ ಮಾಡುವುದು ತಪ್ಪು."[೧೭]

"ವಿಧಿವಾದವು ಒಂದು ಹುರುಳಿಲ್ಲದ ಸಿದ್ಧಾಂತ ಯಾವುದೋ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ದುಃಖವನ್ನು ಉಂಟುಮಾಡುವ ಶಕ್ತಿಯಿದೆ, ಅವು ಈಗಿನ ಪ್ರಯತ್ನಗಳನ್ನು ನಿಷ್ಫಲಗೊಳಿಸುತ್ತವೆ ಎಂಬುದು ಹುರುಳಿಲ್ಲದ ಸಿದ್ಧಾಂತ. ಇಡೀ ಪ್ರಪಂಚದಲ್ಲಿ ಪ್ರತಿಯೊಂದಕ್ಕೂ ಮನಸ್ಸೇ ಕೇಂದ್ರ. ಮನಸ್ಸು ವಸ್ತುಗಳಿಂತ ಮೊದಲು. ಅದೇ ಅವುಗಳನ್ನು ಆಳುತ್ತದೆ ಹಾಗೂ ಸೃಷ್ಟಿಸುತ್ತದೆ. ಮನಸ್ಸನ್ನು ತಿಳಿದುಕೊಂಡರೆ ಎಲ್ಲ ವಸ್ತುಗಳನ್ನೂ ತಿಳಿದುಕೊಂಡಂತೆ. ಎಲ್ಲ ಸಾಮರ್ಥ್ಯಗಳಿಗೂ ಮನಸ್ಸೇ ನಾಯಕ, ಅದೇ ಮುಖ್ಯವಾದುದು. ತನ್ನೆಲ್ಲ ಸಾಮರ್ಥ್ಯಗಳಿಂದ ಮಾಡಲ್ಪಟ್ಟದ್ದೇ ಮನಸ್ಸು. ಹಾಗಾಗಿ ನಾವು ಮೊದಲು ಗಮನ ಕೊಡಬೇಕಾದುದು ಮನಸ್ಸಿನ ಸಂಸ್ಕರಣಕ್ಕೆ. ದೇವರು ಮತ್ತು ಸೃಷ್ಟಿಕರ್ತನಿಗೆ ಅಲ್ಲ. ನಮ್ಮ ಒಳಗಿನಿಂದ ಹುಟ್ಟುವ ಎಲ್ಲ ಶುಭ ಮತ್ತು ಅಶುಭಗಳಿಗೂ ಮತ್ತು ಹೊರಗಿನಿಂದ ಎರಗುವ ಎಲ್ಲ ತೊಂದರೆಗಳಿಗೂ ಮನಸ್ಸೇ ಚಿಲುಮೆ. ಮನಸ್ಸು ಎಂಬುದು, ಅದಕ್ಕೆ ಸಂಬಂಧಿಸಿದುದೇನಿದೆ, ಅದಕ್ಕೆ ಸೇರಿದುದು ಏನಿದೆ ಇವೆಲ್ಲವೂ ಕೂಡ ಮನಸ್ಸಿನಲ್ಲೆ ಹುಟ್ಟುತ್ತವೆ. ಅದೇ ರೀತಿಯಲ್ಲಿ ಒಳ್ಳೆಯದು ಮತ್ತು ಕೆಟ್ಟದು ಎಂಬುದು ಕೂಡ ಮನಸ್ಸಿನಲ್ಲೆ ಹುಟ್ಟುತ್ತದೆ. ಹಾಗಾಗಿ ಮನಸ್ಸಿನ ಶುದ್ಧೀಕರಣವೇ ಧರ್ಮದ ಸಾರ. ನಿಜವಾದ ಧರ್ಮವು ಧಾರ್ಮಿಕ ತತ್ತ್ವಗಳ ಆಚರಣೆಯಲ್ಲಿದೆಯೇ ಹೊರತು ಧಾರ್ಮಿಕ ಗ್ರಂಥಗಳಲ್ಲಿ ಇಲ್ಲ."[೧೮]

"ಮನುಷ್ಯ ಸಮಾಜದಲ್ಲಿ ಅಸಮಾನತೆ ಇರುವುದರಿಂದ, ಖಾಸಗಿ ಒಡೆತನ ಇರುವುದರಿಂದ, ಕೆಲವರಿಗೆ ಯಜಮಾನಿಕೆಯೂ; ಉಳಿದವರಿಗೆ ಗುಲಾಮಗಿರಿಯೂ ನಿರ್ಮಾಣವಾಗಿದೆ. ಇದರಿಂದ ಮನುಷ್ಯರ ಸಮಾಜದಲ್ಲಿ ಅನೇಕ ರೀತಿಯ ಮಲಿನತೆಗಳು ನಿರ್ಮಾಣವಾಗಿವೆ. ಈ ಮಲಿನತೆಗಳನ್ನು

ಉಪಶಮನ ಮಾಡುವುದು ಸರಿಯಲ್ಲ; ಇವನ್ನು ಮನುಷ್ಯ ಸಮಾಜದಿಂದ ಸಂಪೂರ್ಣವಾಗಿ ವಿಸರ್ಜನೆ ಮಾಡಬೇಕು. ಹಾಗೆ ವಿಸರ್ಜನೆ ಮಾಡುವ ಮೂಲಕ ಮತ್ತೆ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಬಹುದು. ಇದನ್ನು ಧರ್ಮ, ಧಾರ್ಮಿಕ ಗ್ರಂಥಗಳು ಹಾಗೂ ಸೃಷ್ಟಿಕರ್ತ ಮಾಡುವುದಿಲ್ಲ. ಇದನ್ನು ಮನುಷ್ಯರು ತಮ್ಮ ಮನೋಬಲದಿಂದಲೇ ಮಾಡಬೇಕು; ಮಾಡಬಹುದು. ಯಾಕೆಂದರೆ ಇಡೀ ಪ್ರಪಂಚವೇ ನಿತ್ಯ ಪರಿವರ್ತನಾಶೀಲವಾದುದು; ಜೊತೆಗೆ ಪ್ರಪಂಚದ ಪ್ರತಿಯೊಂದು ವಸ್ತುಗಳೂ ಕೂಡಾ ನಿತ್ಯ ಪರಿವರ್ತನಾಶೀಲವಾದವು. ವಸ್ತುಗಳಿಗೆ ಹಾಗೂ ಮನುಷ್ಯರ ಮನಸ್ಸಿಗೆ ಇರುವ ಈ ನಿತ್ಯ ಪರಿವರ್ತನಾಶೀಲ ಗುಣವೇ ಅವನ್ನು ಬದಲಾಯಿಸಲು ಮೂಲಭೂತವಾಗಿ ಸಹಾಯ ಮಾಡುತ್ತದೆ."[೧೯]

ವೈದಿಕ ಪ್ರಜ್ಞೆಯು ಒಂದು ಚಿಂತನಾಧಾರೆ ಜೊತೆಗೆ ಅದೊಂದು ಜೀವನಕ್ರಮ. ಅದೇ ರೀತಿಯಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ಒಂದು ಚಿಂತನಾಧಾರೆ ಹಾಗೂ ಹಲವು ಜೀವನಕ್ರಮ. ವೈದಿಕ ವಿರೋಧಿ ಚಿಂತನೆಯು ದೇವರಿಂದ ಪ್ರಪಂಚದ ಸೃಷ್ಟಿ, ದೇವರಿಂದಲೇ ಇಡೀ ಪ್ರಪಂಚ ನಡೆಯುತ್ತಿದೆ ಎಂಬುದನ್ನು ಒಪ್ಪುವುದಿಲ್ಲ. ಇದರ ಬದಲಿಗೆ ಇದು ದೇವರು ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಸಮಾನತೆ, ಅನ್ಯಾಯ ಹಾಗೂ ಶೋಷಣೆಗಳನ್ನು ವಿರೋಧಿಸುತ್ತದೆ. ಎಲ್ಲಾ ಬಗೆಯ ಅಸಮಾನತೆಗಳನ್ನು ಇದು ವಿರೋಧಿಸುತ್ತದೆ. ಮೂಢನಂಬಿಕೆಗಳನ್ನು, ಗುಲಾಮಗಿರಿಯನ್ನು, ಜಾತಿಪದ್ಧತಿಯನ್ನು, ಅಸ್ಪೃಶ್ಯತೆಯನ್ನು, ಲಿಂಗ ಅಸಮಾನತೆಯನ್ನು ವಿರೋಧಿಸುತ್ತದೆ. ಎಲ್ಲಾ ಬಗೆಯ ಸಾಮಾಜಿಕ ನ್ಯಾಯವನ್ನು ಅಪೇಕ್ಷಿಸುತ್ತದೆ ಹಾಗೂ ಒತ್ತಾಯಿಸುತ್ತದೆ. ಈ ಮೂಲಕ ವೈದಿಕ ವಿರೋಧಿ ಪ್ರಜ್ಞೆಯು ಸಮಾನತೆಯನ್ನು, ಸಮಾನತೆಗೆ ಬೇಕಾದ ಆಂತರಿಕ ಹಾಗೂ ಬಾಹ್ಯ ಪರಿವರ್ತನೆಗಳನ್ನು ಬಯಸುತ್ತದೆ.

ವೈದಿಕ ವಿರೋಧಿ ಪ್ರಜ್ಞೆಗೆ ಗಂಡಿನ ಜಾಗದಲ್ಲಿ ಹೆಣ್ಣು ಮುಖ್ಯವಾಗುತ್ತದೆ; ಮೇಲು ಜಾತಿಯ ಜಾಗದಲ್ಲಿ ಕೆಳಜಾತಿ, ಅಸ್ಪೃಶ್ಯ ಜಾತಿ ಮುಖ್ಯವಾಗುತ್ತದೆ; ಭಾಷಿಕವಾಗಿ ಸಂಸ್ಕೃತದ ಜಾಗದಲ್ಲಿ ಕನ್ನಡ ಮುಖ್ಯವಾಗುತ್ತದೆ; ಪ್ರಾದೇಶಿಕವಾಗಿ ರಾಷ್ಟ್ರ ಇಲ್ಲವೇ ದೇಶದ ಜಾಗದಲ್ಲಿ ನಾಡು/ ಸ್ಥಳೀಯತೆ ಮುಖ್ಯವಾಗುತ್ತದೆ; ಒಡೆಯರ ಜಾಗದಲ್ಲಿ ಆಳುಗಳು ಮುಖ್ಯರಾಗುತ್ತಾರೆ; ವೈದಿಕ ಶಿಕ್ಷಣದ ಜಾಗದಲ್ಲಿ ಆಧುನಿಕ ಶಿಕ್ಷಣ ಮುಖ್ಯವಾಗುತ್ತದೆ; ಯಜಮಾನ ಸಂಸ್ಕೃತಿಯ ಜಾಗದಲ್ಲಿ ಜನತೆಯ ಸಂಸ್ಕೃತಿ ಮುಖ್ಯವಾಗುತ್ತದೆ; ಜಡತೆಯ ಜಾಗದಲ್ಲಿ ಚಲನಶೀಲತೆ ಹಾಗೂ ಪರಿವರ್ತನಾಶೀಲತೆ ಮುಖ್ಯವಾಗುತ್ತದೆ; ಪುರೋಹಿತಶಾಹಿಯ ಜಾಗದಲ್ಲಿ ವೈಚಾರಿಕತೆ ಮುಖ್ಯವಾಗುತ್ತದೆ; ಅಸಮಾನತೆಯ ಜಾಗದಲ್ಲಿ ಸಮಾನತೆ ಮುಖ್ಯವಾಗುತ್ತದೆ; ಕೇಂದ್ರೀಕರಣದ ಜಾಗದಲ್ಲಿ ವಿಕೇಂದ್ರೀಕರಣ ಮುಖ್ಯವಾಗುತ್ತದೆ; ಬ್ರಾಹ್ಮಣಶಾಹಿಯ ಜಾಗದಲ್ಲಿ ಶೂದ್ರಶಾಹಿ ಮುಖ್ಯವಾಗುತ್ತದೆ; ಮೌಢ್ಯತೆಯ ಜಾಗದಲ್ಲಿ ವಿಜ್ಞಾನದೃಷ್ಟಿ ಮುಖ್ಯವಾಗುತ್ತದೆ.

೩.೩. ಆಧುನಿಕ ಸಂದರ್ಭ: ವೈದಿಕ ವಿರೋಧಿ ಪ್ರಜ್ಞೆ

ಪಾಶ್ಚಿಮಾತ್ಯ ಚಿಂತನೆಗಳು ಆಧುನಿಕ ಭಾರತದ ಮೇಲೆ ಪ್ರಭಾವ ಮತ್ತು ಪ್ರೇರಣೆ ಬೀರಿದವು. ೧೮ನೇ ಶತಮಾನದ ಕೊನೆಯ ಮತ್ತು ೧೯ನೇಯ ಶತಮಾನದ ಆದಿಯಲ್ಲಿ 'ಆಧುನೀಕರಣ'

ಪ್ರಕ್ರಿಯೆಯಲ್ಲಿ ಆಸಕ್ತಿಯನ್ನು ತೋರಿದ್ದು ಕಾಣಬಹುದಾಗಿದೆ. ಹಾಗಾಗಿ ಭಾರತದಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆಗಳ ಹುಟ್ಟಿಗೆ ಕಾರಣವಾಯಿತು. ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆದ ಭಾರತೀಯ ಯುವಕರು ಹಿಂದೂಧರ್ಮದಲ್ಲಿ ಇದ್ದ ಸನಾತನ ಮೂಢನಂಬಿಕೆಗಳನ್ನು ವಿರೋಧಿಸಿದರು ಹಾಗೂ ಹಿಂದೂಧರ್ಮದ ತಾತ್ವಿಕತೆಯನ್ನು ಆಧುನಿಕ ಯುಗಕ್ಕೆ ಒಗ್ಗುವಂತೆ ಪುನಃಸೃಷ್ಟಿಸಿದರು. ಹಾಗಾಗಿ ಭಾರತದಲ್ಲಿ ಸುಧಾರಣವಾದಿಗಳು ಹುಟ್ಟಿಕೊಂಡರು. ಈ ಸುಧಾರಣಾವಾದವು ವೈದಿಕ ಧರ್ಮದಲ್ಲಿ ಇದ್ದ ಅಸಮಾನತೆ, ಅಸ್ಪೃಶ್ಯತೆ, ಜಾತೀಯತೆ, ಮೂಢನಂಬಿಕೆಗಳು ಮತ್ತು ಸನಾತನ ಮೂಲಭೂತವಾದವನ್ನು ವಿರೋಧಿಸಿತು. ಹಿಂದೂಧರ್ಮವನ್ನು ಪಾಶ್ಚಿಮಾತ್ಯ ವೈಚಾರಿಕತೆಗನುಗುಣವಾಗಿ ವ್ಯಾಖ್ಯಾನಿಸಲಾಯಿತು. ೧೯ನೇ ಶತಮಾನದಲ್ಲಿ ಸಾಮಾಜಿಕ ಸಂಸ್ಥೆಗಳಾದ ಬ್ರಹ್ಮಸಮಾಜ, ಥಿಯೋಸೋಫಿಕಲ್ ಸೋಸೈಟಿ, ಆರ್ಯಸಮಾಜಗಳು ಭಾರತೀಯ ವಿದ್ಯಾವಂತ ವರ್ಗಗಳಿಂದ ಸ್ಥಾಪಿತವಾದವು. ಈ ಸಂಸ್ಥೆಗಳ ತಾತ್ವಿಕತೆಯು ವೈದಿಕ ವಿರೋಧಿ ಪ್ರಜ್ಞೆ, ಚಿಂತನೆಗಳನ್ನು ವ್ಯಕ್ತಪಡಿಸಿರುವುದನ್ನು ಗುರುತಿಬಹುದಾಗಿದೆ.

ರಾಜಾರಾಮ್ ಮೋಹನರಾಯ್ ಅವರು ವೈದಿಕ ಧರ್ಮದಲ್ಲಿ ಇದ್ದ ಸಾಮಾಜಿಕ ಮತ್ತು ಧಾರ್ಮಿಕ ಮೂಢನಂಬಿಕೆಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದವರು. ವೈದಿಕ ತಾತ್ವಿಕತೆಯನ್ನು ಪಾಶ್ಚಿಮಾತ್ಯ ವೈಚಾರಿಕತೆಯೊಂದಿಗೆ ವ್ಯಾಖ್ಯಾನಿಸಿದರು. ಸನಾತನ ಹಿಂದೂ ಧರ್ಮದ ತಾತ್ವಿಕತೆಯನ್ನು ಆಧುನಿಕ ಯುಗಕ್ಕೆ ಒಗ್ಗುವಂತೆ ಸುಧಾರಿಸಿದರು. ವೈದಿಕ ಧರ್ಮದಲ್ಲಿ ಇದ್ದ ಸಾಮಾಜಿಕ ಪದ್ಧತಿಗಳಾದ ಸತಿಪದ್ಧತಿ, ಮೂರ್ತಿಪೂಜೆ, ಹಿಂದೂ ಸಂಪ್ರದಾಯಗಳನ್ನು ವಿರೋಧಿಸಿದರು. 'ಬ್ರಹ್ಮಸಮಾಜ'ವನ್ನು ಸ್ಥಾಪಿಸುವುದರ ಮೂಲಕ ವೈದಿಕ ವಿರೋಧಿ ತಾತ್ವಿಕ ಚಿಂತನೆಗಳನ್ನು ಹುಟ್ಟುಹಾಕಿದರು. ದೇವರು, ಪ್ರಕೃತಿ, ಮುಕ್ತಿ, ಪಾಪ, ಪೂಜೆ ಇವುಗಳ ಬಗ್ಗೆ ತನ್ನದೇ ಆದ ವ್ಯಾಖ್ಯೆಗಳನ್ನು ನೀಡಿತು. ಬ್ರಹ್ಮಸಮಾಜದಲ್ಲಿ ದೇವರನ್ನು ಬಿಟ್ಟರೆ ಮಾನವನಿಗೆ ಪ್ರಧಾನ ಪ್ರಾಮುಖ್ಯತೆಯನ್ನು ಕೊಟ್ಟಿತು. ದೇವರ ಇರುವಿಕೆಯಲ್ಲಿ ಎಷ್ಟು ನಂಬಿಕೆ ಇದೆಯೋ ಅಷ್ಟೇ ನಂಬಿಕೆಯನ್ನು ಮಾನವನ ಆತ್ಮದ ಸತ್ಯತೆಯಲ್ಲಿ ಇದೆ ಎಂದು ಹೇಳಿತು. ಮಾನವ ಮತ್ತು ದೇವರ ನಡುವೆ ಇರುವ ಪುರೋಹಿತರನ್ನು ವಿರೋಧಿಸಿತು. ಸತ್ಯವೊಂದೇ ಶಾಶ್ವತ ಧರ್ಮಗ್ರಂಥ ಎಂದು ಹೇಳಲಾಯಿತು. ಎಲ್ಲ ಧರ್ಮಗಳ ಶಾಸ್ತ್ರಗ್ರಂಥಗಳನ್ನು ಬ್ರಹ್ಮಸಮಾಜವು ಸಮಾನವಾಗಿ ಗೌರವಿಸಿತು. ಸ್ತ್ರೀ ಶಿಕ್ಷಣ, ಜಾತಿಪದ್ಧತಿಯ ವಿರೋಧ, ಏಕ ದೇವತಾರಾಧನೆ, ಆಧುನಿಕ ಶಿಕ್ಷಣ, ಬಾಲ್ಯವಿವಾಹ ಮತ್ತು ವಿಧವಾ ಪುನರ್ವಿವಾಹಗಳನ್ನು ಪ್ರೋತ್ಸಾಹಿಸುವುದರ ಮೂಲಕ ವೈದಿಕ ತಾತ್ವಿಕ ಚಿಂತನೆಗಳಿಗೆ ವಿರೋಧವನ್ನು ವ್ಯಕ್ತಪಡಿಸಲಾಯಿತು.

ವೈದಿಕ ಧರ್ಮವನ್ನು ರಕ್ಷಣೆ ಮತ್ತು ಪ್ರಚಾರ ಮಾಡಲು ದಯಾನಂದ ಸರಸ್ವತಿ ಶ್ರಮಿಸಿದರು. ಆದರೆ ಶತಶತಮಾನಗಳಿಂದ ವೈದಿಕ ಧರ್ಮದಲ್ಲಿ ಇದ್ದ ಮೂರ್ತಿಪೂಜೆ, ಮೂಢನಂಬಿಕೆಗಳು, ಮೂರ್ತಿ ಆರಾಧನೆ, ಧಾರ್ಮಿಕ ಕ್ರಿಯೆಗಳನ್ನು ನಿರಾಕರಿಸಿ ವೈದಿಕ ಸಿದ್ಧಾಂತಗಳನ್ನು ಶುದ್ಧೀಕರಿಸಲು ದಯಾನಂದ ಸರಸ್ವತಿ ಅವರು ಮುಂದಾದರು. ಪಾಶ್ಚಿಮಾತ್ಯ ವೈಚಾರಿಕತೆಯಿಂದ ಪ್ರಭಾವಿತರಾದ

ಸರಸ್ವತಿ ಅವರು ವೈದಿಕ ಸಿದ್ಧಾಂತಗಳನ್ನು ಪುನರುಜ್ಜೀವನಗೊಳಿಸುವ ದಿಕ್ಕಿನಲ್ಲಿ ಕೆಲಸ ಮಾಡಿದವರು. ವೇದಗಳ ಬಗ್ಗೆ ವಿಶೇಷವಾದ ಅಧ್ಯಯನವನ್ನು ದಯಾನಂದ ಸರಸ್ವತಿ ಅವರು ಮಾಡಿ 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯನ್ನು ರಚಿಸಿದರು. 'ವೇದಗಳಿಗೆ ಹಿಂತಿರುಗಿ' ಎಂಬ ಘೋಷಣೆಯನ್ನು ಮಾಡಿದರು. 'ಆರ್ಯಸಮಾಜ'ವನ್ನು ಸ್ಥಾಪಿಸುವುದರ ಮೂಲಕ ಸನಾತನ ವೈದಿಕ ಧರ್ಮದಲ್ಲಿ ಇದ್ದ ವಿಗ್ರಹಪೂಜೆ, ಪ್ರಾಣಿಗಳ ಬಲಿ, ಪುರೋಹಿತವ್ಯವಸ್ಥೆ, ದೇವಾಲಯಗಳಲ್ಲಿ ಇದ್ದ ಮೂಢನಂಬಿಕೆಗಳು, ಬಾಲ್ಯವಿವಾಹ, ಜಾತೀಯತೆ, ಸ್ತ್ರೀ ತಾರತಮ್ಯಗಳನ್ನು ವಿರೋಧಿಸಲಾಯಿತು. ಹೀಗೆ ವೈದಿಕ ವಿರೋಧಿ ತಾತ್ವಿಕತೆಗಳು ಆರ್ಯ ಸಮಾಜದಲ್ಲಿಯೂ ಹುಟ್ಟಿಕೊಂಡಿವೆ. ವೈದಿಕ ಧರ್ಮ ಪ್ರತಿಪಾದಿಸುವ ಚಾತುರ್ವರ್ಣ ವ್ಯವಸ್ಥೆ ವೇದಗಳಲ್ಲಿ ಕಾಣುವುದಿಲ್ಲ. ಇವುಗಳೆಲ್ಲವೂ ಅನಂತರ ಬಂದ ಮಾನವ ಕಲ್ಪನೆಗಳು, ಪಂಚಮ, ಅಸ್ಪೃಶ್ಯರೆಂದು ಕರೆಯುವ ಪದ್ಧತಿಗಳನ್ನು ತೊಡೆದುಹಾಕಬೇಕು ಎಂದು ದಯಾನಂದ ಸರಸ್ವತಿ ಅವರು ವಾದಿಸಿದರು. ಆತ್ಮಕ್ಕೆ ಯಾವ ಲಿಂಗಭೇದವಿಲ್ಲ ಹಾಗಾಗಿ ಸ್ತ್ರೀ ಪುರುಷರು ಸಮಾನರು, ಸ್ತ್ರೀಯರಿಗೂ ಶಿಕ್ಷಣವನ್ನು ಪಡೆಯುವ ಅವಕಾಶ, ವೇದಗಳನ್ನು ಅಧ್ಯಯನ ಮಾಡುವ ಅವಕಾಶ, ವಿಧವೆಯರಿಗೆ ಪುನರ್ವಿವಾಹವನ್ನು ಆರ್ಯ ಸಮಾಜದ ಮೂಲಕ ಪ್ರೋತ್ಸಾಹಿಸಲಾಯಿತು. ಹೀಗೆ ವೈದಿಕ ಚಿಂತನಗೆಳನ್ನು ಪುನಃಸೃಷ್ಟಿಸುವುದರ ಮೂಲಕ ಹೊಸ ಸುಧಾರಣಾವಾದಕ್ಕೆ ಕಾರಣವಾಯಿತು.

ಪಾಶ್ಚಾತ್ಯ ಶಿಕ್ಷಣವನ್ನು ಪಡೆದ ಸುಧಾರಕ ಪಂಥಗಳು ವೈದಿಕ ಚಿಂತನೆಗಳಿಗೆ ವಿರೋಧವನ್ನು ವ್ಯಕ್ತಪಡಿಸುವ ಹಿನ್ನೆಲೆಯಲ್ಲಿ ಆತ್ಮಾರಾಮ್ ಪಾಂಡುರಂಗ ಅವರು ಸ್ಥಾಪಿಸಿದ ಪ್ರಾರ್ಥನಾ ಸಮಾಜ, ಸ್ವಾಮಿ ವಿವೇಕಾನಂದ ಅವರು ಸ್ಥಾಪಿಸಿದ ರಾಮಕೃಷ್ಣ ಮಿಷನ್, ಅನಿಬೆಸೆಂಟ್ ಅವರು ಸ್ಥಾಪಿಸಿದ ಥಿಯೊಸಾಫಿಕಲ್ ಸೊಸೈಟಿ, ಜ್ಯೋತಿರಾವ್ ಫುಲೆ ಅವರು ಸ್ಥಾಪಿಸಿದ ಸತ್ಯಶೋಧಕ ಸಮಾಜಗಳು ಆಧುನಿಕ ಸಂದರ್ಭದಲ್ಲಿ ಹುಟ್ಟಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಸುಧಾರಣಾವಾದಿ ಪಂಥಗಳು ಧಾರ್ಮಿಕ ಮತ್ತು ಸಾಮಾಜಿಕವಾಗಿ ವೈದಿಕ ಧರ್ಮದಲ್ಲಿ ಇದ್ದ ಮೂಢನಂಬಿಕೆ, ಜಾತೀಯತೆ, ಅಸ್ಪೃಶ್ಯತೆ, ಚಾತುರ್ವರ್ಣ ಪದ್ಧತಿ, ಆತ್ಮ, ಕರ್ಮ, ಮೋಕ್ಷ ಸಿದ್ಧಾಂತಗಳನ್ನು ವಿರೋಧಿಸಿತು ಹಾಗೂ ವೈದಿಕ ಚಿಂತನೆಗಳನ್ನು ಪುನರುಜ್ಜೀವನಗೊಳಿಸಲು ಮುಂದಾಯಿತು. ಹೀಗೆ ಆಧುನಿಕ ಸಂದರ್ಭದ ಆದಿಯಲ್ಲಿ ವೈದಿಕ ವಿರೋಧಿ ತಾತ್ವಿಕ ಚಿಂತನೆಗಳು ಹುಟ್ಟಿಗೆ ಕಾರಣವಾಗಿರುವುದನ್ನು ಗುರುತಿಸಬಹುದಾಗಿದೆ.

ವೈದಿಕ ಧರ್ಮದ ತಾತ್ವಿಕತೆಗಳನ್ನು ಪೆರಿಯಾರ್ ಅವರು ಕಟುವಾಗಿ ವಿಮರ್ಶೆ ಮಾಡಿದ ಆಧುನಿಕ ಸಾಮಾಜಿಕ ಕ್ರಾಂತಿಕಾರಕರಾಗಿದ್ದಾರೆ. ವೈದಿಕ ಧರ್ಮ ಪೋಷಿಸುವ ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಸ್ತ್ರೀ ಶೋಷಣೆ, ವೈದಿಕ ಪುರಾಣ ಕಲ್ಪನೆ, ದೇಹ ಮತ್ತು ಆತ್ಮದ ಪರಿಕಲ್ಪನೆಯನ್ನು ವಿರೋಧಿಸುವ ಚಿಂತನೆಗಳನ್ನು ಸಾಮಾಜಿಕವಾಗಿ ಹುಟ್ಟುಹಾಕಿದರು. 'ಜಾತಿಯಿಂದ ಮನುಷ್ಯ ಅವಮಾನಿತನಾಗುತ್ತಾನೆ ಹಾಗೂ ಧರ್ಮದಿಂದ ಜಾತಿ ಅವಮಾನಿತವಾಗುತ್ತದೆ. ನಾವು ಒಂದನ್ನು ಜೀವಂತ ಉಳಿಸಿಕೊಂಡು ಮತ್ತೊಂದನ್ನು ನಾಶಪಡಿಸುವುದಾದರೂ ಹೇಗೆ', 'ಅಧ್ಯಾತ್ಮ

ಮತ್ತು ಭಾವನಾತ್ಮಕಗಳ ಮೂಲಕ ಮುಕ್ತಿ ಪ್ರಾಪ್ತಿಗಾಗಿ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಮಾಡಿದ ವಿಫಲ ಪ್ರಯತ್ನಗಳನ್ನು ಪಕ್ಕಕ್ಕಿಟ್ಟು, ಇತಿಹಾಸದ ಉದ್ದಕ್ಕೂ ಮಾನವ ತನ್ನ ವಿಮರ್ಶಾತ್ಮಕ ಬುದ್ಧಿಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡಿದ್ದರೆ, ಮಾನವ ಸಮಾಜದ ಪ್ರಗತಿ ಅನೇಕಪಟ್ಟು ಹೆಚ್ಚಾಗಿ, ವೇಗವಾಗಿ ಮತ್ತು ಉನ್ನತ ಮಟ್ಟದ್ದಾಗಿ ಇರುತ್ತಿತ್ತು'. ಹೀಗೆ ಪೆರಿಯಾರ್ ಅವರ ವೈಚಾರಿಕ ಚಿಂತನೆಗಳಲ್ಲಿ ವೈದಿಕ ವಿರೋಧಿ ಚಿಂತನೆಗಳನ್ನು ಕಾಣಬಹುದಾಗಿದೆ. ಅವರು ಬ್ರಾಹ್ಮಣರ ಬೌದ್ಧಿಕ, ಆರ್ಥಿಕ, ರಾಜಕೀಯ ದಬ್ಬಾಳಿಕೆಯ ವಿರುದ್ಧ ಹೋರಾಡಿ ಜಯ ಗಳಿಸಿದವರು. ವೈದಿಕ ಧರ್ಮದ ನಂಬಿಕೆಗಳನ್ನು ಪ್ರಶ್ನೆ ಮಾಡುವುದರ ಮೂಲಕ ವೈದಿಕ ತಾತ್ವಿಕತೆಗಳನ್ನು ವಿರೋಧಿಸಿದರು. ವೈಕಂ ಸತ್ಯಾಗ್ರಹ, ಬ್ರಾಹ್ಮಣೇತರ ಚಳುವಳಿ, ದ್ರಾವಿಡ ಚಳುವಳಿಗಳ ಮೂಲಕ ಬ್ರಾಹ್ಮಣರ ತಾತ್ವಿಕತೆಗಳನ್ನು ವಿರೋಧಿಸಲಾಯಿತು. ಹೀಗೆ ಪೆರಿಯಾರ್ ಹುಟ್ಟುಹಾಕಿದ ಬ್ರಾಹ್ಮಣ ವಿರೋಧಿ ಚಿಂತನೆಗಳು ಆಧುನಿಕ ವೈದಿಕ ವಿರೋಧಿ ತಾತ್ವಿಕತೆ ಹುಟ್ಟಿಗೆ ಕಾರಣವಾಗಿದೆ.

ಸಾಮಾಜಿಕ ಸಮಾನತೆ ಮತ್ತು ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಬಿ.ಆರ್. ಅಂಬೇಡ್ಕರ್ ಅವರು 'ಬಹಿಷ್ಕೃತ ಹಿತವರ್ಷಿಣಿ ಸಭೆ'ಯನ್ನು ಸ್ಥಾಪಿಸುವುದರ ಮೂಲಕ ಕಾಲಾರಾಂ ದೇವಾಲಯ ಪ್ರವೇಶ ಚಳುವಳಿ, ಮನುಸ್ಮೃತಿಯನ್ನು ಸುಡುವುದು, ಚೌಡಾರ್ ಕೆರೆಯ ಚಳುವಳಿ ಮತ್ತು ಮಹಾದ್ ವಾಟರ್ ಟ್ಯಾಂಕ್ ಸತ್ಯಾಗ್ರಹಗಳಿಂದ ವೈದಿಕ ತಾತ್ವಿಕತೆಗಳನ್ನು ವಿರೋಧಿಸಿದರು. ಹಾಗೂ ಇವರ ಸಂಶೋಧನಾತ್ಮಕ ಬರವಣಿಗೆಗಳಲ್ಲಿ ವೈದಿಕ ಧರ್ಮವನ್ನು ಕಟುವಿಮರ್ಶೆ ಮಾಡಲಾಗಿದೆ. 'ಹಿಂದೂ ಧರ್ಮದ ತತ್ವಜ್ಞಾನ' ಎಂಬ ಕೃತಿಯಲ್ಲಿ ವೈದಿಕ ಧರ್ಮದ ತಾತ್ವಿಕ ಅಂಶಗಳನ್ನು ವಿರೋಧಿಸಿರುವುದನ್ನು ಕಾಣಬಹುದಾಗಿದೆ. "ಸಂಕ್ಷಿಪ್ತವಾಗಿ ಹೇಳುವುದಾದರೆ, ಹಿಂದೂಧರ್ಮದ ತತ್ವಜ್ಞಾನವನ್ನು ಮಾನವತಾ ಧರ್ಮವೆಂದು ಕರೆಯಲು ಸಾಧ್ಯವೇ ಇಲ್ಲ. ಆದುದರಿಂದಲೇ, ಬೆಲ್ ಪೋರ್ ಅವರ ಮಾತಿನಲ್ಲಿಯೇ ಹೇಳುವುದಾದರೆ, ಹಿಂದೂಧರ್ಮವು ಸಾಮಾನ್ಯ ಮಾನವಕೋಟಿಯನ್ನು ಒಳಹೊಕ್ಕು ಪಾರದರ್ಶಕವಾಗಿ ಕಾಣಿಸಲಾರದು. ಹಾಗೇನಾದರೂ ಕಾಣಿಸಿದರೆ ಅದನ್ನು ನಿಸ್ಸತ್ತ್ವಗೊಳಿಸುತ್ತದೆ. ಹಿಂದೂಧರ್ಮದಲ್ಲಿ ಸಾಮಾನ್ಯ ಮಾನವನ ಜೀವನಕ್ಕೆ ಯಾವುದೇ ಪುಷ್ಟಿಯಿಲ್ಲ. ಸಾಮಾನ್ಯನ ದುಃಖಕ್ಕೆ ಯಾವುದೇ ಸಾಂತ್ವನವಿಲ್ಲ. ಮನುಷ್ಯನ ಬಲಹೀನತೆಗೆ ಯಾವ ನೆರವೂ ಇಲ್ಲ. ಅದು ಮನುಷ್ಯನನ್ನು ಅಂಧಕಾರದಲ್ಲಿ ನಿಸರ್ಗದಲ್ಲಿ ಅಚಿಂತ್ಯ ಶಕ್ತಿಗಳಿಗೆ ಮುಖಾಮುಖಿಯಾಗಿ ನಿಲ್ಲಿಸುತ್ತದೆ. ನಿಷ್ಫಲವಾದ ಕೆಲವು ಹೋರಾಟಗಳ ಬಳಿಕ ಅವರು ಸೋತುಹೋಗುತ್ತಾರೆ. ಅತ್ಯಂತ ಬರ್ಬರ ಧರ್ಮಕ್ಕಿಂತ ಕಡಿಮೆಯಿಲ್ಲದ ಕ್ರೌರ್ಯದಿಂದ ದೇವರೊಂದಿಗೆ ಯಾವುದೇ ಸಂಸರ್ಗವಾಗದಂತೆ ಅದು ಮನುಷ್ಯರನ್ನು ವಿಚ್ಛೇದಗೊಳಿಸುತ್ತದೆ. ಹೀಗಿದೆ, ಹಿಂದೂ ಧರ್ಮದ ತತ್ವಜ್ಞಾನ. ಅದು ಅತಿ ಮಾನವನಿಗೆ ಸ್ವರ್ಗವಾದರೆ, ಸಾಮಾನ್ಯ ಮನುಷ್ಯನಿಗೆ ನರಕವಾಗಿದೆ."[೨೦] ಹೀಗೆ ಅಂಬೇಡ್ಕರ್ ಅವರು ವೈದಿಕ ಪ್ರಜ್ಞೆಯನ್ನು ವಿರೋಧಿಸುತ್ತಾ ತಮ್ಮದೇಯಾದ ವೈದಿಕ ವಿರೋಧಿ ತಾತ್ವಿಕತೆಯನ್ನು ಹುಟ್ಟುಹಾಕಿದರು.

ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್ ಸಿದ್ಧಾಂತಗಳು ಆಧುನಿಕ ಸಂದರ್ಭದಲ್ಲಿ ಹೆಚ್ಚು ಪ್ರಭಾವಿತವಾಗಿವೆ. ೧೮೪೮ರಲ್ಲಿ ಪ್ರಕಟವಾದ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ' ಪ್ರಣಾಳಿಕೆಯಲ್ಲಿ ಇದ್ದ ಸಮಾಜದ ತತ್ವಗಳು ಹೊಸ ದೃಷ್ಟಿಕೋನವನ್ನು ಕೊಟ್ಟವು. ವರ್ಗ ಹೋರಾಟಗಳ ಬಗ್ಗೆ ಭಿನ್ನ ಆಲೋಚನೆಗಳನ್ನು ಸೃಷ್ಟಿಸಿತು. ಸಮಾಜವಾದ, ಮಾರ್ಕ್ಸ್‌ವಾದ, ಕಮ್ಯೂನಿಸಮ್ ಚಿಂತನೆಗಳು ಆಧುನಿಕ ಭಾರತದ ಚಿಂತಕರ ಮೇಲೆ ಪ್ರಭಾವಿಸಿದವು. ಹೀಗೆ ಮಾರ್ಕ್ಸ್ ಮತ್ತು ಏಂಗಲ್ಸ್ ಮಂಡಿಸಿದ ತಾತ್ವಿಕ ಚಿಂತನೆಗಳು ವೈದಿಕ ವಿರೋಧಿ ತಾತ್ವಿಕ ಚಿಂತನೆಗಳ ಹುಟ್ಟಿಗೆ ಕಾರಣವಾಗಿದೆ. ಕನ್ನಡ ನವೋದಯ, ಪ್ರಗತಿಶೀಲ, ದಲಿತ ಬಂಡಾಯ ಸಾಹಿತ್ಯವು ಮಾರ್ಕ್ಸ್‌ವಾದದಿಂದ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪ್ರಭಾವ ಪಡೆದು ಸಮಾಜವಾದವನ್ನು ಹಬ್ಬಿಸಲಾಯಿತು. ಸಮಾಜವಾದದ ತಾತ್ವಿಕತೆಯು ವೈದಿಕ ಪ್ರಜ್ಞೆಯನ್ನು ವಿರೋಧಿಸುತ್ತದೆ. ವರ್ಗ ಪರಿಕಲ್ಪನೆಯಲ್ಲಿ ಮೇಲಿನ ಸ್ತರದಲ್ಲಿ ಇರುವ ಪುರೋಹಿತಶಾಹಿ, ಬ್ರಾಹ್ಮಣಶಾಹಿಯ ದಬ್ಬಾಳಿಕೆ ಮತ್ತು ಕೌರ್ಯವನ್ನು ವಿರೋಧಿಸುವ ತಾತ್ವಿಕತೆಯನ್ನು ಮಾರ್ಕ್ಸ್‌ವಾದದಿಂದ ಪಡೆಯಬಹುದಾಗಿದೆ.

ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದ ಆಧುನಿಕ ಭಾರತದಲ್ಲಿ ಹೊಸ ಹೊಸ ಬದಲಾವಣೆಗಳು ಹುಟ್ಟಿಕೊಂಡವು. ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಹೊಸ ಸಿದ್ಧಾಂತಗಳು ಹುಟ್ಟಿಕೊಂಡವು. ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವವನ್ನು ರೂಢಿಸಿಕೊಳ್ಳಲಾಯಿತು. ಸನಾತನವಾದಿ ವೈದಿಕ ಚಿಂತನೆಗಳಿಗೆ ಹೊಸ ತಾತ್ವಿಕತೆಗಳನ್ನು ಸುಧಾರಣಾವಾದಿಗಳು ಹುಟ್ಟುಹಾಕಿದರು. ಪಾಶ್ಚಿಮಾತ್ಯ ಚಿಂತಕರಿಂದ ಪ್ರಭಾವಿತವಾದ ಭಾರತೀಯ ಚಿಂತಕರು ವೈದಿಕ ಪ್ರಜ್ಞೆಯನ್ನು ವಿಭಿನ್ನವಾಗಿ ನೋಡುವ, ವಿಮರ್ಶಿಸುವ ಮತ್ತು ವಿರೋಧಿಸುವ ಚಿಂತನೆಗಳನ್ನು ಸೃಷ್ಟಿಸಿದರು. ಹೀಗೆ ಆಧುನಿಕ ಸಂದರ್ಭಕ್ಕೆ ತಕ್ಕಂತೆ ವೈದಿಕ ವಿರೋಧಿ ತಾತ್ವಿಕ ಚಿಂತನೆಗಳು ಹುಟ್ಟಿಕೊಂಡಿವೆ.

ಅಧ್ಯಯನದ ಪರಿಕಲ್ಪನೆಯನ್ನು ಕುರಿತ ಚರ್ಚೆಯ ಈ ಅಧ್ಯಾಯದಲ್ಲಿ, ತಾತ್ವಿಕ ತಳಹದಿಯ ನೆರವಿಗಾಗಿ, ಚಾರ್ವಾಕ ಚಿಂತನೆಗಳು, ಜೈನ ಚಿಂತನೆಗಳು ಬೌದ್ಧ ಚಿಂತನೆಗಳು ಹಾಗೂ ಆಧುನಿಕ ಚಿಂತನೆಗಳು ಮುಖ್ಯ ತಿರುಳನ್ನು ಕುರಿತು ಚರ್ಚಿಸಲಾಗಿದೆ. ಈ ಮೂರೂ ತಾತ್ವಿಕ ಚಿಂತನೆಗಳು ವೈದಿಕ ವಿರೋಧಿ ವೈಚಾರಿಕತೆಗೆ ಗಟ್ಟಿಯಾದ ಬುನಾದಿಯನ್ನು ಹಾಕಿವೆ. ಅವುಗಳಿಂದ ತಾತ್ವಿಕವಾಗಿ ಹಾಗೂ ವೈಚಾರಿಕವಾಗಿ ಸ್ಫೂರ್ತಿ ಪಡೆಯುವ ಕಾರಣಕ್ಕೆ ಅವನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ರಾಜಶೇಖರಯ್ಯ ಎ. ಎಂ. (ಸಂ.), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೩, ಪುಟ ೩೨

೨. ರಾಮಕೃಷ್ಣ ಜಿ.(ಅನು), ವಾನರನಿಂದ ಮಾನವನವರೆಗೆ, ಪುಟ ೧೩

೩. ಅದೇ, ಪುಟ ೧೫

೪. ಕುವೆಂಪು, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ವಿಚಾರ ಕ್ರಾಂತಿಗೆ ಆಹ್ವಾನ, ಸಮಗ್ರ ಗದ್ಯ ಪುಟ ೪೭೯

೫. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶೆ, ಪುಟ ೨೭

೬. ಸ್ವಾಮಿ ಧರ್ಮತೀರ್ಥ(ಮೂಲ), ಭಗವಾನ್(ಅನು), ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಪುಟ ೨೬

೭. ವೇಮಣ್ಣ (ಅನು.), ಪೆರಿಯಾರರ ವಿಚಾರಶೀಲ ಲೇಖನಗಳು, ಪುಟ, ೧೮ರಲ್ಲಿ

೮. ದೇವಿಪ್ರಸಾದ ಚಟ್ಟೋಪಾಧ್ಯಾಯ(ಮೂಲ), ಕಕ್ಕಿಲ್ಲಾಯ ಬಿ. ವಿ.(ಕನ್ನಡಕ್ಕೆ), ಪ್ರಾಚೀನ ಭಾರತದಲ್ಲಿ ಭೌತಿಕವಾದ, ಪುಟ ೧೮

೯. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೧೯, ೨೦

೧೦. ಜ.ಹೊ.ನಾರಾಯಣಸ್ವಾಮಿ (ಸಂ.), ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು, ಪುಟ ೨೭

೧೧. ದೇಬಿಪ್ರಸಾದ ಚಟ್ಟೋಪಾಧ್ಯಾಯ, ಭಾರತೀಯ ದರ್ಶನಗಳು, ಪುಟ ೫೬

೧೨. ರಾಜಶೇಖರಯ್ಯ ಎ. ಎಂ. (ಸಂ.), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೩, ಪುಟ ೨೯೩.

೧೩. ದೇವಿಪ್ರಸಾದ ಚಟ್ಟೋಪಾಧ್ಯಾಯ(ಮೂಲ), ಕಕ್ಕಿಲ್ಲಾಯ ಬಿ. ವಿ.(ಕನ್ನಡಕ್ಕೆ), ಪ್ರಾಚೀನ ಭಾರತದಲ್ಲಿ ಭೌತಿಕವಾದ, ಪುಟ ೧೦೫

೧೪. ಅದೇ, ಪುಟ ೧೦೭

೧೫. ಅದೇ, ಪುಟ ೧೪೩

೧೬. ಪ್ರಭುಶಂಕರ (ಅನು.), ಹಿರಿಯಣ್ಣ ಎಂ. (ಮೂಲ), ಭಾರತೀಯ ತತ್ವಶಾಸ್ತ್ರದ ರೂಪುರೇಖೆಗಳು, ಪುಟ ೧೬೨, ೧೬೩

೧೭. ರಾಜಶೇಖರಯ್ಯ ಎ. ಎಂ. (ಸಂ.), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೩, ಪುಟ ೪೬೪

೧೮. ಅದೇ, ಪುಟ ೯೬, ೯೭

೧೯. ಅದೇ, ಪುಟ ೧೦೩, ೧೦೬

೨೦. ರಾಜಶೇಖರಯ್ಯ ಎ. ಎಂ. (ಸಂ.), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೩, ಪುಟ ೮೨

* * *

ಅಧ್ಯಾಯ: ನಾಲ್ಕು

ಭಾಷಿಕ ನೆಲೆಗಳು

ಅಧ್ಯಾಯ: ನಾಲ್ಕು

ಭಾಷಿಕ ನೆಲೆಗಳು

ಭಾಷೆ ಸಾಮಾಜಿಕ ಪ್ರಕ್ರಿಯೆ. ಹಾಗಾಗಿ ಸಮಾಜದಲ್ಲಿ ಆಗುವ ಹಲವು ಪರಿವರ್ತನೆಗಳು ಭಾಷೆಯ ಮೇಲೆ ಪರಿಣಾಮ ಬೀರುತ್ತವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಗಗಳು ಸಮಾಜದಲ್ಲಿ ಸಂವಹನಕ್ಕೆ ಒಂದೇ ಭಾಷೆಯನ್ನು ಬಳಸುತ್ತವೆ. ಆದರೆ ಈ ಮೇಲಿನ ವರ್ಗಗಳು ಭಾಷೆಯನ್ನು ಬಳಸುವ ಕ್ರಮದಲ್ಲಿ ಭಿನ್ನ ಭಿನ್ನ ಸ್ವರೂಪವನ್ನು ಕಾಣುತ್ತೇವೆ. ಏಕೆಂದರೆ ಒಂದೇ ಭಾಷೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಬೌದ್ಧಿಕವಾಗಿ ಬಳಸುವುದರಿಂದ ಭಿನ್ನವಾಗಿ ಕಾಣಲು ಕಾರಣವಾಗಿದೆ. ಮೇಲುವರ್ಗದವರು ಪ್ರಭುತ್ವದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಭಾಷೆಯ ಮೇಲೆ ಹಿಡಿತವನ್ನು ಸಾಧಿಸುತ್ತಾರೆ. ಹೀಗಾಗಿ ಭಾಷೆಯ ಮೂಲಕ ಒಂದು ಸಂಸ್ಕೃತಿಯನ್ನು, ವ್ಯಕ್ತಿಗಳನ್ನು, ಸಮಾಜವನ್ನು ಮತ್ತು ವರ್ಗಗಳನ್ನು ನಿಯಂತ್ರಿಸಲು ಭಾಷೆಯನ್ನು ಬಳಸಲಾಗಿದೆ. ಹೀಗೆ ವೈದಿಕರು ಸಂಸ್ಕೃತ ಭಾಷೆಯನ್ನು ದೇವ ಭಾಷೆ ಎಂದು ಸಮಾಜದಲ್ಲಿ ಪರಿಗಣಿಸಿದ್ದರಿಂದ ಭಾಷೆಗೆ ಪಾವಿತ್ರ್ಯವನ್ನು ಕೊಡಲಾಯಿತು. ಸಂಸ್ಕೃತ ಭಾಷೆಯಿಂದ ಎಲ್ಲಾ ಭಾಷೆಗಳು ಹುಟ್ಟಿದವು ಎಂಬ ಹುಸಿ ಕಲ್ಪನೆಯನ್ನು ಸೃಷ್ಟಿಸಲಾಯಿತು. ಸಂಸ್ಕೃತ ಭಾಷೆಯನ್ನು ಇತರ ಭಾಷೆಯ ಮೇಲೆ ಹೇರಿಕೆ ಮಾಡಲಾಯಿತು. ಹೀಗಾಗಿ ಭಾಷೆಯ ಮೂಲಕ ಸಮಾಜದಲ್ಲಿ ಅಸಮಾನತೆ ಹುಟ್ಟಲು ಕಾರಣವಾಯಿತು.

ವೈದಿಕರು ಸಂಸ್ಕೃತ ಭಾಷೆಯನ್ನು ದೇವಭಾಷೆ ಎಂದು ಪರಿಗಣಿಸಿದ್ದರಿಂದ, ರಾಜಪ್ರಭುತ್ವದಲ್ಲಿ ಸಂಸ್ಕೃತ ಭಾಷೆಗೆ ವಿಶೇಷ ಸ್ಥಾನ ಸಿಕ್ಕಿತು. ಪುರೋಹಿತರು ಪೌರೋಹಿತ್ಯದಲ್ಲಿ ಸಂಸ್ಕೃತ ಭಾಷೆಯನ್ನು ಬಳಸುತ್ತಿದ್ದರಿಂದ ಸಂಸ್ಕೃತ ಭಾಷೆಯ ಮೇಲೆ ಹಿಡಿತವನ್ನು ಸಾಧಿಸಿದ್ದರು. ಹಾಗಾಗಿ ವೈದಿಕ ಧರ್ಮದ ಮೂಲಭೂತವಾದಗಳನ್ನು ಸಂಸ್ಕೃತ ಭಾಷೆಯ ಮೂಲಕ ಸಮಾಜದಲ್ಲಿ ಹೇರುವ ಕೆಲಸವನ್ನು ಮಾಡಲಾಯಿತು. ಹೀಗೆ ಭಾರತದ ಸ್ಥಳೀಯ ಭಾಷೆಗಳ ಮೇಲೆ ಸಂಸ್ಕೃತ ಹಿಡಿತವನ್ನು ಸಾಧಿಸಿತು. ಪ್ರಭುತ್ವದಲ್ಲಿ ಸಂಸ್ಕೃತವು ಅಧಿಕಾರದ ಭಾಷೆಯಾಗಿ ರೂಪುಗೊಂಡಿದ್ದರಿಂದ ಸಂಸ್ಕೃತವು ಸ್ಥಳೀಯ ಭಾಷೆಗಳನ್ನು ಕೀಳಾಗಿ ನೋಡಿತು. ಹೀಗೆ ಅಧಿಕಾರ ಭಾಷೆಯಾದ ಸಂಸ್ಕೃತವು

ಸಮಾಜದಲ್ಲಿ ವರ್ಗತಾರತಮ್ಯ, ಜಾತೀಯತೆ, ಅಸ್ಪೃಶ್ಯತೆ, ಲಿಂಗತಾರತಮ್ಯ ಮತ್ತು ವರ್ಣ ತಾರತಮ್ಯಗಳ ಸೃಷ್ಟಿಗೆ ಸಂವಹನ ಭಾಷೆಯಾಯಿತು. ಸಮಾಜದಲ್ಲಿ ಅಸಮಾನತೆ ಸೃಷ್ಟಿಗೆ ಕಾರಣವಾದ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಗಳು ಕನ್ನಡ ಸಾಹಿತ್ಯದಲ್ಲಿ ಹುಟ್ಟಿಕೊಂಡವು. ಪ್ರಾಚೀನ ಕಾಲದಿಂದಲೂ ಸಂಸ್ಕೃತ ಭಾಷೆಯ ಹೇರಿಕೆಯಿಂದ ಕನ್ನಡ ಭಾಷೆಯ ಮೇಲೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಆಗುತ್ತಿರುವ ಅಸಮಾನತೆಯನ್ನು ವಿರೋಧಿಸಿರುವುದನ್ನು ಗುರುತಿಸಬಹುದಾಗಿದೆ. ಬಹುತೇಕ ಸಂದರ್ಭದಲ್ಲಿ ಮನುಷ್ಯರ ಮೇಲೆ ದಾಳಿ ಶುರುವಾಗುವುದೇ ಭಾಷೆಯ ಮೂಲಕ. ಹಾಗಾಗಿ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಹೇರಿಕೆಯಿಂದ ಬಿಡುಗಡೆಯನ್ನು ಪಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಆಧುನಿಕ ಸಂದರ್ಭದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಶಿಷ್ಟ ಭಾಷೆ, ದೈವ ಭಾಷೆ, ಪವಿತ್ರವಾದ ಭಾಷೆಯನ್ನು ಬಳಸುವ ಬದಲು ಪ್ರಾದೇಶಿಕ ಭಾಷಾ ಪ್ರಯೋಗಗಳನ್ನು ಸಾಹಿತ್ಯ ಕೃತಿಯಲ್ಲಿ ಮಾಡಿರುವುದನ್ನು ಗುರುತಿಸಬಹುದಾಗಿದೆ.

ಪ್ರಭುತ್ವದಲ್ಲಿ ದೈನಿಕ ಸಂವಹದಲ್ಲಿ ಬಳಕೆಯಾಗುವ ಪ್ರಭುತ್ವದ ಭಾಷೆ ತನ್ನ ಧ್ವನಿಶಕ್ತಿಯನ್ನು ಕಳೆದುಕೊಂಡಿರುತ್ತದೆ. ಹಾಗಾಗಿ ಒಬ್ಬ ಲೇಖಕ ಅಥವಾ ಸಾಹಿತಿ ಭಾಷೆಯ ಧ್ವನಿಶಕ್ತಿಯನ್ನು ಹೆಚ್ಚಿಸಲು, ಅಸಮಾನತೆ ಅನ್ಯಾಯಗಳನ್ನು ವಿರೋಧಿಸಲು ಮತ್ತು ಶೋಷಣೆಯನ್ನು ವಿರೋಧಿಸಲು ಪ್ರಭುತ್ವದ ಭಾಷೆಯ ಬದಲು ಪ್ರಾದೇಶಿಕ ಭಾಷೆಯನ್ನು ಸಾಹಿತ್ಯ ಕೃತಿಗಳಲ್ಲಿ ಬಳಸುತ್ತಾನೆ. ಹೀಗೆ ಬಳಸುವ ಭಾಷೆಯು ಒಂದು ವರ್ಗವನ್ನು ಪ್ರತಿನಿಧಿಸಿರಬಹುದು, ವಿಷಯಾಧಾರಿತವಾಗಿರಬಹುದು, ಭಾಷೆ ಹೇರಿಕೆಯನ್ನು ವಿರೋಧಿಸುತ್ತಿರಲೂಬಹುದು, ಶಿಷ್ಟ(ಸಂಸ್ಕೃತ) ಭಾಷೆಯಿಂದ ಬಿಡುಗಡೆಯನ್ನು ಪಡೆಯುತ್ತಿರಲೂಬಹುದು. ಹೀಗೆ ಬಳಸುವ ಭಾಷೆಯು ಒಂದು ಬಗೆಯ ಮೌಲ್ಯ ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಪ್ರಭುತ್ವದ ಭಾಷೆ ಸಂಕೇತಿಸುವ ಯಜಮಾನ ವರ್ಗದ ಮೌಲ್ಯಗಳನ್ನು ಮತ್ತು ವೈದಿಕ ಪ್ರಜ್ಞೆಯ ಸಾಮಾಜಿಕ ನೈತಿಕ ಮೌಲ್ಯಗಳನ್ನು ತಿರಸ್ಕರಿಸುವುದಾಗಿದೆ. ಈ ರೀತಿ ಭಾಷೆ ಬಳಸುವುದರಿಂದ ಓದುಗರು ಸಮಾಜವನ್ನು ನೋಡುವ ದೃಷ್ಟಿಕೋನವು ಬದಲಾಗಲೂಬಹುದು. ಹಾಗಾಗಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಪ್ರಾದೇಶಿಕ ಭಾಷೆಯ ಬಳಕೆ ಸಾಹಿತ್ಯದಲ್ಲಿ ಆಗಿರುವುದನ್ನು ಕಾಣಬಹುದಾಗಿದೆ.

ಈ ಅಧ್ಯಾಯದಲ್ಲಿ ಸಂಸ್ಕೃತ, ಕನ್ನಡ ಮತ್ತು ಸಾಮಾಜಿಕ ಸಂವಹನ: ವೈದಿಕ ವಿರೋಧದ ನೆಲೆಗಳು ಎಂಬ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಚರ್ಚಿಸಲಾಗಿದೆ. ಭಾಷಿಕ ನೆಲೆಯಲ್ಲಿ ವೈದಿಕ ವಿರೋಧಿ ಪ್ರಜ್ಞೆ ಯಾವ ರೀತಿ ವ್ಯಕ್ತವಾಗಿದೆ ಎಂಬುದನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು ಮತ್ತು ಗ್ರಹಿಸುವುದು.

೪.೧. ಸಂಸ್ಕೃತ ಮತ್ತು ಕನ್ನಡ

ವಿವಾದಾತ್ಮಕವಾದ ನೆಲೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಸಂಬಂಧ ಬೆಳೆದುಬಂದಿದೆ. ಜನಾಂಗೀಯವಾಗಿ ಮತ್ತು ಭಾಷಿಕವಾಗಿ ವಿರುದ್ಧವಾಗಿ ಕಾಣುತ್ತವೆ. ಕನ್ನಡ ದ್ರಾವಿಡ ಭಾಷಾ

ಕುಟುಂಬಕ್ಕೆ ಸೇರಿದೆ. ಸಂಸ್ಕೃತ ಇಂಡೋ-ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದೆ. ಹೀಗಾಗಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳು ಭಿನ್ನವಾಗಿ ಕಾಣುತ್ತವೆ. ಕನ್ನಡವು ಸಂಸ್ಕೃತದಿಂದ ಹುಟ್ಟಿದೆ ಎಂಬ ಆಳವಾದ ನಂಬಿಕೆಯನ್ನು ವೈದಿಕ ಚಿಂತನೆಗಳು ಹುಟ್ಟುಹಾಕಿವೆ. ವೈದಿಕ ಯಜಮಾನಿಕೆಯ ಪ್ರಭಾವದಿಂದ ಕನ್ನಡದ ಸಂಸ್ಕೃತ ಪಂಡಿತರು ಸಂಸ್ಕೃತ ವ್ಯಾಕರಣ, ಕಾವ್ಯಮೀಮಾಂಸೆ ಮತ್ತು ಛಂದಸ್ಸುಗಳನ್ನು ಕನ್ನಡ ಭಾಷೆಯ ಮೇಲೆ ಹೇರಿಕೆಯನ್ನು ಮಾಡಿದರು. ಹಾಗಾಗಿ ಕನ್ನಡ ಶಬ್ದಕೋಶದಲ್ಲಿ ಸಂಸ್ಕೃತ ಪದಗಳನ್ನು ತುಂಬುವ ಹುನ್ನಾರಗಳು ನಡೆದವು. ಹೀಗೆ ಕನ್ನಡ ಭಾಷೆಯ ಮೇಲೆ ಆಗುತ್ತಿರುವ ಸಂಸ್ಕೃತದ ಪ್ರಭಾವವನ್ನು ಕನ್ನಡದ ಕವಿಗಳು ಮತ್ತು ಲೇಖಕರು ವಿರೋಧಿಸುತ್ತಲೇ ಬಂದಿರುವುದನ್ನು ನೋಡಬಹುದಾಗಿದೆ. ಸಂಸ್ಕೃತ ಭಾಷೆಯ ಹಿಡಿತದಿಂದ ಬಿಡುಗಡೆಯನ್ನು ಪಡೆಯಲು ಶ್ರಮಿಸಿರುವುದನ್ನು ಕಾಣಬಹುದಾಗಿದೆ.

ಕವಿರಾಜಮಾರ್ಗಕಾರನು ಸಂಸ್ಕೃತ ಪದಗಳನ್ನು ಕನ್ನಡ ಪದಕೋಶದಲ್ಲಿ ಸೇರಿಸುವಾಗ ಎಚ್ಚರ ವಹಿಸಬೇಕು ಎಂದು ಹೇಳುತ್ತಾನೆ. ಸಂಸ್ಕೃತ ಪದಗಳನ್ನು ಕನ್ನಡ ಪದಕೋಶಕ್ಕೆ ಸೇರಿಸುವಾಗ 'ಸಮಸಂಸ್ಕೃತ' ಪದಗಳಾಗಿ ಮಾಡಿ ಬಳಸಬೇಕು. ಸಂಸ್ಕೃತದಲ್ಲಿ ಇದ್ದಂತೆ ಕನ್ನಡದಲ್ಲಿ ಪದಗಳನ್ನು ಬಳಸಬಾರದು ಎಂದು ಈ ರೀತಿ ಹೇಳುತ್ತಾನೆ.

ಸಮಸಂಸ್ಕೃತಂಗಳೊಳ್ ಸ
ಯ್ತಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ
ಗಮಕೋವಿದ ನಿಗದಿತ ಮಾ
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ॥೫೧॥[1]

ಶ್ರೀವಿಜಯನು ಸಂಸ್ಕೃತ ಭಾಷೆಯ ಹೇರಿಕೆಯ ಪ್ರಭಾವವನ್ನು ತಡೆಯಲು ಮುಂದಾಗಿರುವುದನ್ನು ನೋಡಬಹುದು. ಸಂಸ್ಕೃತ ಪದಗಳು ಮತ್ತು ಸಂಸ್ಕೃತದ ಅವ್ಯಯಗಳಿಗೆ ಕನ್ನಡ ವಿಭಕ್ತಿಗಳನ್ನು ಜೋಡಿಸಬಾರದು ಎಂದು ಶ್ರೀವಿಜಯ ಹೇಳುತ್ತಾನೆ. ಸಂಸ್ಕೃತ ಅವ್ಯಯಗಳನ್ನು ಬಳಸಿ ಕನ್ನಡ ಕಾವ್ಯವನ್ನು ರಚಿಸಿದರೆ ಕಾವ್ಯ ಚೆಲುವು ಕಳೆದುಕೊಳ್ಳುತ್ತದೆ ಎಂದು ಕೂಡ ಶ್ರೀವಿಜಯ ಹೇಳುತ್ತಾನೆ.

ತಱಿಸಂದಾ ಸಕ್ಕದಮುಮ
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುಱಿತು ಬೆರಸಿದೊಡೆ ವಿರಸಂ
ಮುಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ ॥೫೪॥[2]

ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಒಂದೇ ಸಮಾಸದಲ್ಲಿ ಸೇರಿಸಿದರೆ ಕುದಿಯುತ್ತಿರುವ ಹಾಲಿನಲ್ಲಿ ಮಜ್ಜಿಗೆಯ ಹನಿಗಳನ್ನು ಬೆರೆಸಿದಂತೆ ಎಂದು ಶ್ರೀವಿಜಯ ಹೇಳುತ್ತಾನೆ. ಈ ರೀತಿ ಸಂಸ್ಕೃತ ಮತ್ತು ಕನ್ನಡ ಭಾಷೆಯ ಪದಗಳ ಹೊಂದಾಣಿಕೆ ಆಗುವುದರಿಂದ ಹಾಲು ಒಡೆದುಹೋಗುವಂತೆ ಭಾಷೆಯು ಒಡೆದುಹೋಗುತ್ತದೆ ಎಂದು ಹೇಳುತ್ತಾನೆ. ಕವಿರಾಜಮಾರ್ಗ

ಕೃತಿಯಲ್ಲಿ ಕನ್ನಡ ಪದ ಪ್ರಯೋಗ, ಬಳಕೆ, ಶಬ್ದೋತ್ಪತ್ತಿ ಮೊದಲಾದ ಲಕ್ಷಣಗಳ ಬಗ್ಗೆ ಹೇಳಲಾಗಿದೆ. ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆ ಮಾಡುವಾಗ ಆಗುವ ಅಪಾರ್ಥಗಳು, ಅನರ್ಥಗಳನ್ನು ಉದಾಹರಣೆಗಳ ಮೂಲಕ ವಿವರಿಸಲಾಗಿದೆ. ಹೀಗೆ ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆ ಕಾಯ್ದುಕೊಳ್ಳಬೇಕಾದ ಅಂತರದ ಬಗ್ಗೆ ತಿಳಿಸುತ್ತಾನೆ. ಈ ಮೂಲಕ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಯನ್ನು ಕಾಣಬುಹುದು.

ಪಂಪ ಕವಿಯು ಆರಂಭದಲ್ಲಿ ಕನ್ನಡ ಮಹಾಕಾವ್ಯಗಳನ್ನು ರಚಿಸುವಾಗ ಕನ್ನಡ ಭಾಷೆಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಕಾಣಬಹುದು. ಪಂಪ ಮಾರ್ಗ(ಸಂಸ್ಕೃತ) ಮತ್ತು ದೇಸಿಯ(ಕನ್ನಡ) ಬಗ್ಗೆ ಕಾವ್ಯದಲ್ಲಿ ಈ ರೀತಿ ಉಲ್ಲೇಖಿಸುತ್ತಾನೆ.

ಬಗೆ ಪೊಸತಪ್ಪುದಾಗಿ ಮೃದುಬಂದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊ(ಕ್ಕು) ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಣಿಯಿಂ ಬುಟಿಲ್ದು ತುಂ
ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್[೩]

ಈ ಮೇಲಿನ ಪದ್ಯದಲ್ಲಿ ಕನ್ನಡದ ಕಾವ್ಯ ರಚನೆಯ ಬಗ್ಗೆ ಹೇಳುತ್ತಾನೆ. ಕಾವ್ಯದ ಶಬ್ದಗಳ ಜೋಡಣೆಯು ಮೃದುವಾಗಿರಬೇಕು. ಅಚ್ಚಗನ್ನಡ ಶೈಲಿಯಿಂದ ಕೂಡಿರಬೇಕು. ಸಂಸ್ಕೃತ ಕಾವ್ಯದ ಶೈಲಿಗೆ ಹೊಂದಿಕೊಂಡಿರುವಂತಿರಬೇಕು. ಹೀಗೆ ಪಂಪ ಕವಿ ಮಾರ್ಗ ಮತ್ತು ದೇಸಿಗಳ ಬಳಕೆಯ ಬಗ್ಗೆ ಪ್ರತಿಕ್ರಿಯಿಸುತ್ತಾನೆ. ಹೀಗೆ ಪ್ರತಿಕ್ರಿಯಿಸುವಾಗ ಪಂಪ ಕವಿ ಪ್ರಬಲವಾಗಿದ್ದ ಸಂಸ್ಕೃತ ಕಾವ್ಯ ಶೈಲಿಗೆ ಕನ್ನಡ ಕಾವ್ಯ ಶೈಲಿಯನ್ನು ಮುಖಾಮುಖಿಯಾಗಿಸಿ ನಿಲ್ಲಿಸುತ್ತಾನೆ. ಈ ಮೂಲಕ ಪಂಪ ಕವಿ ವೈದಿಕ ವಿರೋಧವನ್ನು ಭಾಷೆಯ ಮೂಲಕ ವ್ಯಕ್ತಪಡಿಸುತ್ತಾನೆ.

"ಸಕ್ಕದಮಂ ಪೇಟ್ದೊಡೆ ನೆಟೆ
ಸಕ್ಕದಮಂ ಪೇಟ್ಗೆ ಸುದ್ದಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ"[೪]

ಮೇಲಿನ ಪದ್ಯದಲ್ಲಿ ನಯಸೇನ ಕವಿಯು ಸಂಸ್ಕೃತವನ್ನು ವಿರೋಧಿಸುತ್ತಾನೆ. ಕನ್ನಡದಲ್ಲಿ ಸಂಸ್ಕೃತವನ್ನು ಬೆರೆಸಬಾರದು ಎಂದು ಹೇಳುತ್ತಾನೆ. ಏನಾದರೂ ಬೆರೆಸಿದರೆ ತುಪ್ಪದಲ್ಲಿ ಎಣ್ಣೆಯನ್ನು ಮಿಶ್ರಣ ಮಾಡಿದಂತೆ ಆಗುತ್ತದೆ ಎಂದು ಹೇಳುತ್ತಾನೆ. ಹೀಗೆ ಕನ್ನಡ ಭಾಷೆಯ ಜೊತೆ ಸಂಸ್ಕೃತ ಭಾಷೆಯ ಪದಗಳನ್ನು ಮಿಶ್ರಣ ಮಾಡಿ ಕಾವ್ಯ ರಚಿಸಬಾರದು ಎಂಬ ನಿಲುವನ್ನು ನಯಸೇನ ತಾಳುತ್ತಾನೆ. "ಸಂಸ್ಕೃತ ಸವಾರಿಗೆ ತೀವ್ರ ಪ್ರತಿಕ್ರಿಯೆ ವ್ಯಕ್ತವಾದದ್ದು ಹನ್ನೆರಡನೇ ಶತಮಾನದ ಮೊದಲ ಭಾಗದಲ್ಲಿದ್ದ ನಯಸೇನನಿಂದ, ಸಂಸ್ಕೃತ ಸವಾರಿಗೆ ತೀವ್ರ ಪ್ರತಿರೋಧ ತೋರಿಸುತ್ತ

ಸಂಸ್ಕೃತದಲ್ಲಿ ಬರೆಯುವವರು ಅದರಲ್ಲೂ ಬರೆಯಲಿ. ಕನ್ನಡದಲ್ಲಿ ಬರೆಯುವವರು ಪೂರ್ತಿ ಕನ್ನಡದಲ್ಲಿ ಬರೆಯಲಿ. 'ಬೆರೆಸಲ್ಕೆ ತಕ್ಕುದೆ ಘೃತಮುಮಂ ತೈಲಮುಮಂ' ಎಂದು ಪ್ರಶ್ನಿಸುವ ಮೂಲಕ ಪ್ರತಿಭಟನೆಯನ್ನು ದಾಖಲಿಸಿದ".[೫] ಹೀಗೆ ನಯಸೇನ ಕವಿಯು ಕನ್ನಡದಲ್ಲಿ ಸಂಸ್ಕೃತವನ್ನು ಬೆರೆಸಿ ಬರೆಯುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಾನೆ.

ಆಂಡಯ್ಯ ಕವಿ 'ಕಬ್ಬಿಗರ ಕಾವ'ದಲ್ಲಿ ಸಂಸ್ಕೃತವನ್ನು ವಿರೋಧಿಸಿ ಕನ್ನಡವನ್ನು ಬೆಳೆಸಲು ಮುಂದಾಗುತ್ತಾನೆ. ಸಂಸ್ಕೃತದಿಂದ ಕನ್ನಡವನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸುತ್ತಾನೆ. ಸಂಸ್ಕೃತ ಪದಗಳನ್ನು ಬಳಸದೆ ಅಚ್ಚಕನ್ನಡದಲ್ಲಿ ಕಾವ್ಯವನ್ನು ರಚನೆ ಮಾಡುತ್ತೇನೆ ಎಂದು ಈ ರೀತಿ ಹೇಳುತ್ತಾನೆ.

> ಕನ್ನಡದೊಳ್ಪಿನ ನುಡಿಯಂ
>
> ಮುನ್ನಿನದರೊಳೆ ನೋಡಿ ತಿಳಿದುಕೊಳ್ವುದು ಚದುರಂ
>
> ರನ್ನದ ಕನ್ನಡಿಯಂ ನಲ
>
> ವಿನ್ನೋಡಿದವಂತೆ ಕುಂದೇನಾದಾಪುದೇ[೬]

ಹೀಗೆ ಸಂಸ್ಕೃತ ಪದಗಳಿಗೆ ಬದಲಾಗಿ ಕಬ್ಬ, ಸಕ್ಕದ, ಸೊತಂತಿರ, ಗರುವಿಕೆ, ನೆಗಳ್ಚು, ಸಕ್ಕದ, ನಾಳ್ಕೊಳು, ದೋಸ, ಬಾಸಣ, ಪುರುಳುಂ, ಲಕ್ಕಣಮುಂ, ಅತ್ತಳವೆನಿಪು, ತಳ್ತೆಸೆವ, ದಿಮ್ಮಿದರ ಎಂಬ ಕನ್ನಡ ಪದಗಳನ್ನು ಸೃಷ್ಟಿಸುತ್ತಾನೆ. "ಸುಮಾರು ಕ್ರಿ.ಶ. ೧೨೨೫ರಲ್ಲಿದ್ದ ಆಂಡಯ್ಯ ಕವಿ ಸಂಸ್ಕೃತದ ಯಜಮಾನಿಕೆಯ ವಿರುದ್ಧ ವಿಶಿಷ್ಟ ಪ್ರತಿಕ್ರಿಯೆ ತೋರಿಸಿದ. ಸಂಸ್ಕೃತ ಪದಗಳನ್ನು ಬಳಸದೆ ಕಾವ್ಯ ಬರೆಯುವುದಾಗಿ ಪಣ ತೊಟ್ಟು, ಸಂಸ್ಕೃತ ಪದಗಳಿಗೆ ಬದಲಾಗಿ ತದ್ಭವರೂಪಗಳನ್ನು ಬಳಸಿ 'ಕಬ್ಬಿಗರ ಕಾವ್ಯ' ರಚಿಸಿದ. ಬರೀ ತದ್ಭವಗಳ ಬಳಕೆಯು ಒಂದು ಅತಿರೇಕ ಎನ್ನಬಹುದಾದರೂ ಕನ್ನಡ ಭಾಷೆಯ ಪರವಾಗಿ ಸಿಡಿದೆದ್ದು ಬಂದ ಉಗ್ರ ಪ್ರತಿಕ್ರಿಯೆಯಾಗಿ, ವಿಶಿಷ್ಟ ಪ್ರತಿಭಟನೆಯಾಗಿ ಇದು ಮಹತ್ವದಾಗಿದೆ"[೭] ಸಂಸ್ಕೃತ ಎನ್ನುವ ಪದಕ್ಕೆ ಸಕ್ಕದ ಎಂದು ಕನ್ನಡ ಪದವನ್ನು ಸೃಷ್ಟಿಸಿ ಸಂಸ್ಕೃತವನ್ನು ವಿರೋಧಿಸುವುದನ್ನು ಆಂಡಯ್ಯನ 'ಕಬ್ಬಿಗರ ಕಾವ' ಕಾವ್ಯದಲ್ಲಿ ಗಮನಿಸಬಹುದಾಗಿದೆ.

೧೨ನೇ ಶತಮಾನದ ವಚನ ಕಾಲಘಟ್ಟದಲ್ಲಿ ಸಂಸ್ಕೃತ ಭಾಷೆಯನ್ನು ವಿರೋಧಿಸಿ ಕನ್ನಡದಲ್ಲಿ ವಚನಗಳನ್ನು ರಚಿಸಲಾಯಿತು. ವಚನಕಾರರು ಜನಸಾಮಾನ್ಯರ ಭಾಷೆಯಾದ ಕನ್ನಡವನ್ನು ಹೆಚ್ಚು ಹೆಚ್ಚು ಬಳಸಲು ಮುಂದಾದರು. ವೈದಿಕಶಾಹಿಯ ಯಜಮಾನಿಕೆ ಭಾಷೆಯಾದ ಸಂಸ್ಕೃತವನ್ನು ವಿರೋಧಿಸಿ ಕನ್ನಡದಲ್ಲಿ ವಚನಗಳನ್ನು ಬರೆದರು. ಸಂಸ್ಕೃತದ ಕಾವ್ಯದ ವಸ್ತು, ಪ್ರಕಾರ, ಛಂದಸ್ಸು ಮತ್ತು ಆಶಯಗಳನ್ನು ವಿರೋಧಿಸಿ ಹೊಸದಾಗಿ ಕನ್ನಡದಲ್ಲಿ ವಚನಗಳನ್ನು ಕಟ್ಟುವ ಪ್ರಯತ್ನ ನಡೆಸಿದರು. 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ...' ಎಂಬ ವಚನಗಳನ್ನು ವಚನಕಾರರು ತಿಳಿಗನ್ನಡದಲ್ಲಿ ರಚಿಸಿದರು.

ಹೀಗೆ ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಮಧ್ಯಕಾಲೀನ ಸಾಹಿತ್ಯದಲ್ಲಿ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಗಳನ್ನು ಗುರುತಿಸಬಹುದಾಗಿದೆ. ಕವಿರಾಜಮಾರ್ಗ, ಪಂಪ, ಆಂಡಯ್ಯ,

ನಯಸೇನ, ಹರಿಹರ ಮತ್ತು ವಚನಕಾರರು ಕನ್ನಡ ಭಾಷೆಯನ್ನು ಸಂಸ್ಕೃತ ಭಾಷೆಯ ಹೇರಿಕೆಯಿಂದ ಕನ್ನಡ ಭಾಷೆಯನ್ನು ಬಿಡುಗಡೆ ಮಾಡಲು ಮುಂದಾಗಿರುವುದನ್ನು ನೋಡಬಹುದಾಗಿದೆ. ಆಧುನಿಕ ಕನ್ನಡದ ಸಂದರ್ಭದಲ್ಲೂ ಕೂಡ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಗಳು ನಡೆದಿರುವುದನ್ನು ಗಮನಿಸಬಹುದು. ಡಿ.ಎನ್. ಶಂಕರ ಭಟ್ಟ ಅವರು 'ಭಾಷೆಯ ಬಗೆಗೆ ನೀವೇನು ಬಲ್ಲಿರಿ?', 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ', 'ಕನ್ನಡ ವ್ಯಾಕರಣ ಪರಂಪರೆ', 'ಕನ್ನಡ ಬರಹವನ್ನು ಸರಿಪಡಿಸೋಣ', 'ಕನ್ನಡ ಶಬ್ದರಚನೆ', 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ', ಕನ್ನಡ ಸರ್ವನಾಮಗಳು', 'ಕನ್ನಡ ನುಡಿ ನಡೆದು ಬಂದ ದಾರಿ' ಎಂಬ ಕೃತಿಗಳನ್ನು ರಚಿದ್ದಾರೆ. ಸಂಸ್ಕೃತ ಭಾಷೆ ಇಂಡೋ-ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದೆ. ಕನ್ನಡ ಭಾಷೆಯು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿರುವುದರಿಂದ ಸಂಸ್ಕೃತಕ್ಕಿಂತ ಕನ್ನಡ ಭಿನ್ನ. ಹಾಗಾಗಿ ಈ ಎರಡು ಭಾಷೆಗಳ ವ್ಯಾಕರಣದಲ್ಲಿ ವ್ಯತ್ಯಾಸಗಳಿವೆ ಎಂದು ಹೇಳುತ್ತಾರೆ. ಸಂಸ್ಕೃತದ ಭಾಷಾ ನಿಯಮಗಳನ್ನು ಕನ್ನಡ ಭಾಷೆಯ ಮೇಲೆ ಹೇರಿರುವುದನ್ನು ವಿರೋಧಿಸುತ್ತಾರೆ. ಸಂಸ್ಕೃತದಿಂದ ಬಂದ ವರ್ಣಮಾಲೆಗಳನ್ನು ಕೈಬಿಟ್ಟು ಕನ್ನಡದ ಅಲ್ಪಪ್ರಾಣ ವರ್ಣಮಾಲೆಗಳ ಬಳಕೆಯ ಬಗ್ಗೆ ತಿಳಿಸಿಕೊಡುತ್ತಾರೆ. ಸಂಸ್ಕೃತದ ಮಹಾಪ್ರಾಣ ಅಕ್ಷರಗಳನ್ನು ಕೈ ಬಿಡುತ್ತಾರೆ. ಹೀಗೆ ಸಂಸ್ಕೃತ ಭಾಷೆಯ ಹೇರಿಕೆಯನ್ನು ತಾತ್ವಿಕವಾಗಿ ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ.

ಕೆ.ವಿ. ನಾರಾಯಣ ಅವರು ಕೂಡ 'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು' ಕೃತಿಯ ಪ್ರಸ್ತಾವನೆಯಲ್ಲಿ ಈ ರೀತಿ ಹೇಳುತ್ತಾರೆ. "ಸಂಸ್ಕೃತ ಪದಗಳನ್ನು ಸೇರಿಸಿಕೊಂಡ ಕನ್ನಡ ಒಳ್ಳೆಯ ಕನ್ನಡ ಹಾಗೂ ಕನ್ನಡ ಪದಗಳನ್ನೇ ಬಳಸಿ ಬರೆಯುವ ಕನ್ನಡ ಪೆಡಸು ಎಂದು ತಿಳಿಯುವುದು ತಪ್ಪು. ನೂರಾರು ವರುಶಗಳಿಂದ ಕನ್ನಡ ಬರವಣಿಗೆಯಲ್ಲಿ ಸಂಸ್ಕೃತ ಪದಗಳನ್ನು ಸೇರಿಸಿಕೊಂಡು ಬರೆಯುವುದು ಬಳಕೆಯಲ್ಲಿದೆ. ಈಗ ಅದನ್ನು ಸರಿಯಲ್ಲ ಎಂದು ಹೇಳಿದರೆ ಹೇಗೆ ಎಂದು ಮೊಂಡು ಮಾತಾಡಿದರೆ ಆಗ ಅಂತವರಿಗೆ ಉತ್ತರ ಕೊಡುವುದು ಕಷ್ಟ. ಏಕೆಂದರೆ ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬರೆಯುವ ಬಗೆಗೆ ಹಿಂದಿನಿಂದಲೂ ತಿಕ್ಕಾಟ ಮುಂದುವರಿಯುತ್ತಲೇ ಬಂದಿದೆ ಎಂಬುದನ್ನು ಅವರು ಮರೆಯುತ್ತಾರೆ. ಈ ಬಗೆಗೆ ಕೊಂಚ ತಲೆ ಕೆಡಿಸಿಕೊಳ್ಳಲೇಬೇಕಿದೆ."[೮] ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಬಳಕೆ ಮಾಡುವುದರ ಬಗ್ಗೆ ಮಾತನಾಡುತ್ತಾರೆ. ಸಂಸ್ಕೃತ ಭಾಷೆಯನ್ನು ವಿರೋಧಿಸುವ ನೆಲೆಯಲ್ಲಿ ನಡೆದಿರುವ ಚರ್ಚೆಗಳನ್ನು ಗುರುತಿಸಬಹುದಾಗಿದೆ. ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಭಾಷೆಯ ಮೂಲಕ ವೈದಿಕ ವಿರೋಧ ವ್ಯಕ್ತಪಡಿಸುವ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ರೂಪಿಸುವ ಮತ್ತು ಕಟ್ಟುವ ಕೆಲಸಗಳು ನಡೆದವು. ಹಾಗಾಗಿ ಕನ್ನಡ ಭಾಷೆಯನ್ನು ಸಂಸ್ಕೃತ ಭಾಷೆಯಿಂದ ಬಿಡುಗಡೆ ಮಾಡಿಸುವ ನಿಟ್ಟಿನಲ್ಲಿ ಚಿಂತನೆಗಳು ನಡೆದವು. ಹೀಗಾಗಿ ಬಿ.ಎಂ.ಶ್ರೀ. ಅವರು ಕನ್ನಡ ಮಾತು ತಲೆಯೆತ್ತುವ ಬಗೆ ಎಂಬ ಲೇಖನದಲ್ಲಿ ಈ ರೀತಿ ಹೇಳುತ್ತಾರೆ. "ಭಾಷೆಯ ವಿಚಾರದಲ್ಲಿ ಹೊಸಗನ್ನಡವನ್ನೇ ಬರೆಯಬೇಕು. ಸದ್ಯಕ್ಕೆ ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ

ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು. ಅದಕ್ಕೆ ಹಳಗನ್ನಡದ ಬೆರಕೆಯಾಗಲಿ, ಜನರ ಬಾಯಲ್ಲಿ ಬಳಕೆಗೆ ಬಂದಿರುವಷ್ಟು ಮಟ್ಟಿಗಲ್ಲದ ಹೆಚ್ಚಿನ ಪುಸ್ತಕದ ಸಂಸ್ಕೃತವಾಗಲಿ ತದ್ಭವವಾಗಲಿ ಸೇರಕೂಡದು. ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥಭಾಷೆಯಾಗಿ ತಿರುಗಿಸಿಬಿಟ್ಟರೆ, ಅಚ್ಚು ಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತದೆ. ಮುಂದಿನ ಗ್ರಂಥಗಳಿಗೆಲ್ಲಾ ಒಂದೇ ಸಮನಾದ ಭಾಷೆ ಸಿಕ್ಕುತ್ತದೆ."[೯] ಈ ಮೇಲಿನ ಉಲ್ಲೇಖದಲ್ಲಿ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಯನ್ನು ನೋಡಬಹುದಾಗಿದೆ. ಕನ್ನಡ ಭಾಷೆಯಲ್ಲಿ ಸಂಸ್ಕೃತ ಭಾಷೆಯನ್ನು ಸೇರಿಸಬಾರದು ಎಂಬ ನಿಲುವುಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಗುರುತಿಸಬಹುದು.

ಶೂದ್ರರು ಸಂಸ್ಕೃತ ಭಾಷೆಯನ್ನು ಬಳಸಬಾರದು ಎಂಬ ಮನುಸ್ಮೃತಿಯ ನಿಯಮವನ್ನು ಕುವೆಂಪು ವಿರೋಧಿಸಿ ಸಂಸ್ಕೃತ ಪದಗಳನ್ನು ತಮ್ಮ ಸಾಹಿತ್ಯದಲ್ಲಿ ಬಳಸುತ್ತಾರೆ. ಕುವೆಂಪು ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸಲು ಕಾರಣ ಆ ಕಾಲದ ಬ್ರಾಹ್ಮಣಶಾಹಿ ಭಾಷೆ ಮತ್ತು ಭಾಷಾಶೈಲಿಯಲ್ಲಿ ಹುದುಗಿರುವ ಜ್ಞಾನ ಮತ್ತು ಪ್ರಗತಿಪರ ಚಿಂತನೆಗಳನ್ನು ಪುನರ್‌ಸೃಷ್ಟಿಸಿ, ಸಂಸ್ಕೃತ ಭಾಷೆಯಿಂದಲೇ ವೈದಿಕಶಾಹಿಯನ್ನು ವಿರೋಧಿಸುವ ಭಾಷಾಶೈಲಿಯನ್ನು ಕಾಣಬಹುದಾಗಿದೆ. ವೈದಿಕ ಸನಾತನವಾದಕ್ಕೆ ಸವಾಲಾಗಿ, ಯುದ್ಧತಂತ್ರವಾಗಿ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುತ್ತಾರೆ. ಹೀಗೆ ಸಂಸ್ಕೃತ ಪದಗಳನ್ನು ಬಳಸುವುದು ಕೂಡ ವೈದಿಕ ವಿರೋಧದ ಒಂದು ತಂತ್ರವಾಗಿ ಕುವೆಂಪು ಅವರು ಬಳಸಿದ ಭಾಷೆಯನ್ನು ಗುರುತಿಸಬಹುದಾಗಿದೆ. ಕುವೆಂಪು ಅವರ ಭಾಷಾ ಗ್ರಹಿಕೆಯನ್ನು ವಿಶಾಲ ದೃಷ್ಟಿಕೋನದಲ್ಲಿ ನೋಡಿದರೆ ಸಂಸ್ಕೃತದ ಅವಲಂಬನೆಯಿಂದ ಹೊರಬರಬೇಕು ಎನ್ನುವ ಧ್ವನಿಯನ್ನು ಗ್ರಹಿಸಬಹುದಾಗಿದೆ. ಕುವೆಂಪು ಅವರಿಗೆ ಕನ್ನಡ ಭಾಷೆಯ ಬಗ್ಗೆ ಅಪಾರವಾದ ಅಭಿಮಾನವಿದೆ. ಇದಕ್ಕೆ ಸಾಕ್ಷಿಯಾಗಿ ಇವರು ಕನ್ನಡ ಭಾಷೆಯನ್ನು ವಸ್ತುವಾಗಿ ಮಾಡಿಕೊಂಡು ಬರೆದಿರುವ ಕವಿತೆಗಳು ಮತ್ತು ಲೇಖನಗಳಿವೆ. ಶಿಕ್ಷಣದಲ್ಲಿ ಕನ್ನಡ ಭಾಷೆ ಪ್ರಥಮ ಭಾಷೆಯಾಗಿ ಬೋಧನೆಯಾಗಬೇಕು. ಕನ್ನಡ ಭಾಷೆ ಶಿಕ್ಷಣದ ಮಾಧ್ಯಮವಾಗಬೇಕು ಎಂಬ ನಿಲುವು ಸಂಸ್ಕೃತವನ್ನು ತಿರಸ್ಕರಿಸುವ ನಿಟ್ಟಿನಲ್ಲಿ ಗ್ರಹಿಸಬಹುದಾಗಿದೆ.

ಸಂಸ್ಕೃತ ಛಂದಸ್ಸನ್ನು ಕನ್ನಡದ ಕವಿಗಳು ಕೈ ಬಿಡುತ್ತಿರುವ ಬಗ್ಗೆ ಕುವೆಂಪು ಈ ರೀತಿ ಹೇಳುತ್ತಾರೆ. "ನಮ್ಮ ಕನ್ನಡಕ್ಕೆ ಹೆಚ್ಚು ಹೊಂದಿಕೊಳ್ಳದಿರುವ, 'ವೃತ್ತ'ಗಳೆಂದು ನಾವು ಕರೆಯುವ, ಸಂಸ್ಕೃತ ಛಂದಸ್ಸು ಮಾತ್ರ ಬಿದ್ದುಹೋಗುತ್ತಿದೆ. ಏಕೆಂದರೆ ಅಕ್ಷರ ಛಂದಸ್ಸು ನಮ್ಮ ನುಡಿಗೆ ಎರವು ತಂದ ವೇಷ. ಮಾತ್ರಾ ಛಂದಸ್ಸೇ ನಮಗೆ ಸಹಜವಾದುದು. ನಮ್ಮ ಪೂರ್ವಿಕರಾದ ಹರಿಹರ ರಾಘವಾಂಕರು ಇದನ್ನು ಅರಿತೆ ರಗಳೆಗಳನ್ನೂ ಷಟ್ಪದಿಗಳನ್ನೂ ರಚಿಸಿದರು. ಅವರ ತರುವಾಯ ಬಂದವರು ಯಾರಾರು ಜನಸಾಮಾನ್ಯಕ್ಕೆ ಜೀವನ ಜ್ಯೋತಿಯನ್ನು ದಯಪಾಲಿಸಬೇಕೆಂದು ಬಯಸಿದರೋ ಅವರೆಲ್ಲರೂ ಮಾತ್ರಾ ಛಂದಸ್ಸಿನಲ್ಲಿಯೇ ಕಾವ್ಯಗಳನ್ನು ಬರೆದಿದ್ದಾರೆ."[೧೦] ಈ

ಮೇಲಿನ ಉದ್ಧರಣೆಯು ಸಂಸ್ಕೃತ ವ್ಯಾಕರಣವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬಹುದಾಗಿದೆ. ಕುವೆಂಪು ಕೂಡ ಮಹಾಛಂದಸಿನಲ್ಲಿ ಕಾವ್ಯವನ್ನು ರಚಿಸುತ್ತಾರೆ. ಹೀಗೆ ಕುವೆಂಪು ಅವರ ಸಾಹಿತ್ಯದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ವೈರುಧ್ಯಗಳನ್ನು ಗುರುತಿಸಬಹುದಾಗಿದೆ.

ಪೂರ್ಣಚಂದ್ರ ತೇಜಸ್ವಿ ಅವರು ಸಂಸ್ಕೃತ ಭಾಷೆಯನ್ನು ತಿರಸ್ಕರಿಸುತ್ತಾರೆ. ಭಾರತದಲ್ಲಿ ಸಂಸ್ಕೃತ ಭಾಷೆ ಸತ್ತ ಭಾಷೆ ಎಂದು ಪರಿಗಣಿಸಲಾಗಿದೆ. ಹಾಗಾಗಿ ಈ ಭಾಷೆಯಿಂದ ಯಾವುದೇ ಪ್ರಯೋಜನವಿಲ್ಲ ಎಂಬ ನಿಲುವನ್ನು ಕಾಣಬಹುದಾಗಿದೆ. "ಭಾರತೀಯರ ಬುದ್ಧಿವಾಹಕವಾಗಿ ಎಂದೋ ಸತ್ತು ಮುರುಟಿ ಹೋದ ಈ ಭಾಷೆಯಿಂದ ಕೇವಲ ಸಾಹಿತ್ಯ ವಿದ್ಯಾರ್ಥಿಗಳ ಹಲವರು ಕಾವ್ಯ ಮೀಮಾಂಸೆ ಇತ್ಯಾದಿ ಕೆಲವು ವಿಷಯಗಳಿಗೆ ಓದಬೇಕೇ ಹೊರತು ಅದನ್ನುಳಿದು ಇನ್ನು ಒಂದೇ ಒಂದು ದಮ್ಮಡಿ ಪ್ರಯೋಜನವೂ ಇದರಿಂದ ಯಾರಿಗೂ ಇಲ್ಲ. ಯಾಗ, ಹೋಮ, ವ್ರತ ಇತ್ಯಾದಿ ಕೆಲಸಕ್ಕೆ ಬಾರದ ಕೆಲವು ಸನಾತನ ಸ್ಫೂರ್ತಿ ಸಂಕೇತಗಳಲ್ಲಿ ಇದು ಬದುಕಿದೆ. ಅಷ್ಟೇ ಹೊರತು ವೇದ ಮಂತ್ರಗಳಿಂದ ಯಾವ ನವೀನ ಯಂತ್ರವೂ ನಡೆಯುವುದಿಲ್ಲ. ಭಾಷಾಂತರದಿಂದಲೂ ಬೆಳೆಯುವುದಿಲ್ಲ. ಕನ್ನಡವನ್ನು ಬೋಧನ ಮಾಧ್ಯಮವನ್ನಾಗಿ ಮಾಡುವುದರಿಂದ ಕನ್ನಡ ಬೆಳೆಯುವುದಿಲ್ಲ. ಕನ್ನಡಕ್ಕೆ ಸಂಸ್ಕೃತದಿಂದ ಹೊಸ ಶಬ್ದಗಳನ್ನು ಸೃಷ್ಟಿಸಿಕೊಂಡರೆ ಕನ್ನಡ ಬೆಳೆಯುವುದಿಲ್ಲ."[೧೧] ಹೀಗೆ ತೇಜಸ್ವಿ ಅವರು ಸಂಸ್ಕೃತ ಭಾಷೆಯನ್ನು ವಿರೋಧಿಸುತ್ತಾರೆ. ಸಂಸ್ಕೃತ ಭಾಷೆಯನ್ನು ಕನ್ನಡದಲ್ಲಿ ಬಳಸುವುದರಿಂದ ಮತ್ತು ಪದಗಳನ್ನು ಸೃಷ್ಟಿಸುವುದರಿಂದ ಕನ್ನಡ ಬೆಳವಣಿಗೆ ಆಗುವುದಿಲ್ಲ ಎಂದು ಹೇಳುತ್ತಾರೆ. ತೇಜಸ್ವಿ ಅವರು ತಮ್ಮ ಕಥೆ, ಕಾದಂಬರಿಯಲ್ಲಿ ಮಲೆನಾಡಿನ ಭಾಗದ ಸ್ಥಳೀಯ ಭಾಷೆಯನ್ನು ಬಳಸುತ್ತಾರೆ. ಸರಳವಾದ ಜನ ಮಾತನಾಡುವ ಭಾಷೆಯನ್ನು ನಿರೂಪಣೆಯಲ್ಲಿ ಬಳಸುವ ಮೂಲಕ ಸಂಸ್ಕೃತ ಭಾಷೆಯನ್ನು ನಿರಕರಣೆ ಮಾಡುವುದನ್ನು ಗುರುತಿಸಬಹುದಾಗಿದೆ.

ಕನ್ನಡ ಭಾಷೆಯ ಬೆಳವಣಿಗೆ ಕುಂಠಿತವಾಗಲು ಕಾರಣ ಬ್ರಾಹ್ಮಣ ಸಾಹಿತಿಗಳಾಗಿದ್ದಾರೆ ಎಂದು ತೇಜಸ್ವಿ ಅವರು ಹೇಳುತ್ತಾರೆ. ಕನ್ನಡ ಚಳುವಳಿಯ ಚುಕ್ಕಾಣಿ ಹಿಡಿದವರು ಕೂಡ ಬ್ರಾಹ್ಮಣರಾಗಿದ್ದರು. ಹಾಗಾಗಿ "ಕರ್ನಾಟಕದ ಈಚಿನ ಕನ್ನಡ ಚಳುವಳಿಗಳೂ ಕೂಡ ವ್ಯಾಪಕ ಹಾಗೂ ವಿಸ್ತೃತ ರೂಪ ತಾಳದೆ, ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನಗಳ ಸ್ವರೂಪಕ್ಕೆ ತಿರುಗದೆ ಹೋದುದಕ್ಕೆ ಕಾರಣವೇನು? ಇದಕ್ಕೆ ನನಗೆ ಹೊಳೆಯುವ ಮುಖ್ಯ ಕಾರಣ ಬಿ.ಎಂ.ಶ್ರೀ., ಅನಕೃ, ರಾಮಮೂರ್ತಿ ಮುಂತಾದ ಬ್ರಾಹ್ಮಣರು ಇದರ ನೇತೃತ್ವ ವಹಿಸಿದ್ದು. ಏಕೆಂದರೆ ಬ್ರಾಹ್ಮಣನಿಂದ ಸ್ಫೂರ್ತಿಗೊಳ್ಳುವ ದೇಶಭಾಷಾ ಚಳುವಳಿಗಳು ಕೇವಲ ಅವನ ಆಲೋಚನೆಗೆ ಅಭಿವ್ಯಕ್ತಿ ಸಿದ್ಧಿಯನ್ನು ಒದಗಿಸುವ ಸಾಹಿತ್ಯ ಕ್ರಾಂತಿಗೆ ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ಕ್ರಾಂತಿ ಗುರಿಯಾಗಬೇಕೆಂದು ಹಾತೊರೆದ ಅಡಿಗರು ಸಾಮಾಜಿಕವಾಗಿ ಸಂಪ್ರದಾಯನಿಷ್ಠರಾಗಿ, ವರ್ಣಾಶ್ರಮ ಧರ್ಮ ಪ್ರತಿಪಾದಿಸಿದ್ದು. ಆಡುಭಾಷೆಯಲ್ಲೇ ಕಾವ್ಯ

ಬರೆಯಬೇಕೆಂದ ಅವರು ದೇಶ ಭಾಷಾ ಮಾಧ್ಯಮದಲ್ಲಿ ಪಾಠ ಹೇಳುವುದನ್ನು ವಿರೋಧಿಸಿದ್ದು ಇತ್ಯಾದಿಗಳನ್ನು ಉದಾಹರಿಸಬಹುದು. ಕನ್ನಡ ಚಳುವಳಿ ತಮಿಳು ಚಳುವಳಿಯಂತೆ ಶೂದ್ರ ಆಂದೋಲನದ ಸ್ವರೂಪ ತಳೆಯದೆ ಹೋಯಿತು. ತಮಿಳು ಆಂದೋಲನವಾದರೂ ಆರ್ಯರ ವಿರುದ್ಧ ದ್ರಾವಿಡ ಆಂದೋಲನವಾಗಿ, ಹಿಂದಿಯ ವಿರುದ್ಧ ತಮಿಳು ಆಂದೋಲನವಾಗಿ, ವೈದಿಕ ಧರ್ಮ ಮತ್ತು ಜಾತಿಪದ್ಧತಿಗಳ ವಿರುದ್ಧ ಬ್ರಾಹ್ಮಣ ವಿರೋಧಿ ಆಂದೋಲನವಾಗಿ, ಕೊನೆಗೆ ಅಖಂಡ ಭಾರತದ ವಿರುದ್ಧ ಸ್ವಾಯತ್ತ ತಮಿಳುನಾಡಿನ ಆಂದೋಲನದ ವಿಸ್ತೃತ ಹಾಗೂ ವ್ಯಾಪಕ ಸ್ವರೂಪ ಪಡೆಯಿತು. ಆದರೆ ಕನ್ನಡ ಚಳುವಳಿ ಹಾಗಾಗಲು ಇದ್ದ ಬಹು ಮುಖ್ಯ ತೊಡಕು ಎಂದರೆ ಅದರ ಚುಕ್ಕಾಣಿ ಹಿಡಿದಿದ್ದವರು ಬ್ರಾಹ್ಮಣರು."[೧೨] ಈ ಮೇಲಿನ ಉದ್ಧರಣೆಯಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಬ್ರಾಹ್ಮಣ ಸಾಹಿತಿಗಳು ಕನ್ನಡ ಭಾಷೆಯ ಮೇಲೆ ತಾಳಿರುವ ನಿಲುವಿನ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಭಾಷೆ ಹೇಗೆ ಉಳ್ಳವರ ಸ್ವತ್ತಾಗಿದೆ. ಮೇಲುವರ್ಗದ ಜನರ ಭಾಷೆಯ ಆಲೋಚನೆ ಮತ್ತು ಅಭಿವ್ಯಕ್ತಿ ಮೋಸಗಾರಿಕೆಯಿಂದ ಕೂಡಿದೆ. ಹಾಗಾಗಿ ಉಳ್ಳವರು ಭಾಷೆಯ ಮೂಲಕ ಕೆಳವರ್ಗದ ಜನರನ್ನು ವಂಚಿಸಲಾಗುತ್ತಿದೆ. ತೇಜಸ್ವಿ ಅವರ ಅಬಚೂರಿನ ಪೋಸ್ಟಾಫೀಸು ಪುಸ್ತಕದ ಮುನ್ನುಡಿಯ 'ಹೊಸ ದಿಗಂತದೆಡೆಗೆ'ಯಲ್ಲಿ ಕೂಡ ಈ ಮೇಲಿನ ಮಾತುಗಳನ್ನು ಹೇಳಿರುವುದನ್ನು ಗಮನಿಸಬಹುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯಿಂದಲೇ ಹುಟ್ಟಿಕೊಂಡಿದೆ. ಮನುಸ್ಮೃತಿಯು ಸೃಷ್ಟಿಸಿದ ವರ್ಣಾಶ್ರಮ ಪದ್ಧತಿಯ ಆಧಾರದ ಮೇಲೆ ನಿರ್ಮಿತಗೊಂಡ ಜಾತೀಯತೆ, ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾದ ಕೆಳವರ್ಗದವರ ಬೆಂಬಲವಾಗಿ ದಲಿತ ಸಾಹಿತ್ಯ ಹುಟ್ಟಿಕೊಂಡಿತು. ಶೋಷಣೆ, ಅಪಮಾನ, ದಬ್ಬಾಳಿಕೆ ಮತ್ತು ಅನ್ಯಾಯಗಳನ್ನು ಸಮಾಜದಲ್ಲಿ ವ್ಯಕ್ತಪಡಿಸಲು ದಲಿತ ಭಾಷೆ ಹುಟ್ಟಿಕೊಂಡಿತು. ಹಾಗಾಗಿ ದಲಿತ ಭಾಷೆಯು ವೈದಿಕ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲೇ ಸೃಷ್ಟಿಯಾಗಿರುವುದನ್ನು ಗ್ರಹಿಸಬಹುದಾಗಿದೆ. ಆದ್ದರಿಂದ ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ದಲಿತ ಭಾಷೆಯು ವೈದಿಕ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರಚನೆಯಾಗಿದೆ. 'ಕುಸುಮಬಾಲೆ' ಕಾದಂಬರಿಯಲ್ಲಿ ಬಳೆಯಾಗಿರುವ ಪ್ರಾದೇಶಿಕ ಭಾಷೆ ಉದಾಹರಣೆಯಾಗಿದೆ. "ಮಹಾದೇವ ಸಾಹಿತ್ಯದಲ್ಲಿ ಬಳಕೆಸಿರುವ ಭಾಷೆ ನನಗೆ ಶಿಷ್ಟಾಚಾರದ ಉಲ್ಲಂಘನೆ ಮತ್ತು ಪ್ರತಿಭಟನೆಯಾಗಿ ಕಾಣುತ್ತದೆ. ಯಾವ ಸಮಾಜವನ್ನು ಭಯಮೂಲದಿಂದ ಅನುಭವಿಸುತ್ತೇವೆಯೋ ಅಲ್ಲಿನ ನಡಾವಳಿಕೆಗಳು, ಗ್ರಹಿಕೆಗಳು, ಭಾಷೆ, ಸಾಹಿತ್ಯ ಮುಂತಾದ ಎಲ್ಲ ವಿಷಯಗಳ ಬಗೆಗೆ ಒಂದು ರೀತಿಯ ತಿರಸ್ಕಾರ ಮೂಡುವುದು ಸಹಜ. ತಾನೇ ತಾನಾಗಿ ಶೋಷಿತ ವರ್ಗ ಆಳುವ ವರ್ಗದ ಭಾಷೆಯನ್ನು ಅನುಕರಿಸುವ ಮೂಲಕ ಅದಕ್ಕೆ ವಿರುದ್ಧವಾದ ನೆಲೆಯಿಂದ ಆ ಅವಮಾನ, ಅನುಮಾನಗಳನ್ನು ವ್ಯಕ್ತಪಡಿಸುತ್ತಿರುತ್ತದೆ. ಭಾರತದಂತಹ ಹಲವಾರು ಜಾತಿ, ವರ್ಗ, ಧರ್ಮಗಳ ಸಂಕೀರ್ಣ ಸಮಾಜದಲ್ಲಿ ಭಾಷೆ ಎಂಬುದು ಕೂಡ ಶೋಷಣೆಯ ಪ್ರಬಲ ಅಸ್ತ್ರವಾಗುತ್ತದೆ.

ಎಷ್ಟೋ ಸಂದರ್ಭಗಳಲ್ಲಿ ಭಾಷೆಯ ಬಳಕೆ ಮತ್ತು ನುಡಿಗಟ್ಟುಗಳ ಆಧಾರದ ಮೇಲೆ ಆತನ ಜಾತಿಯನ್ನು ನಿರ್ಣಯಿಸುವ ಹಂತಕ್ಕೆ ಅದು ಹೋಗಿಬಿಡುತ್ತದೆ. ಉದಾ: 'ಸ'ಕಾರ ಮತ್ತು 'ಶ'ಕಾರಗಳ ಹಾಗೂ ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ಪ್ರಯೋಗಗಳು ಕನ್ನಡದಲ್ಲಿ(ದ್ರಾವಿಡಮೂಲ) ಇಲ್ಲವೇ ಇರಲಿಲ್ಲ. ಇವೆಲ್ಲಾ ಬಂದಿರುವುದು ಸಂಸ್ಕೃತದ ಪ್ರಭಾವದಿಂದಾಗಿ, ಭಾಷೆಯನ್ನು ಶ್ರೇಣೀಕರಿಸಿಕೊಳ್ಳುವ ಸಲುವಾಗಿ. ಒಂದು ಹಂತದಲ್ಲಿ ಇದು ಕೀಳರಿಮೆ ಮತ್ತು ಮೇಲರಿಮೆಗಳನ್ನು ತರುವುದಷ್ಟೇ ಅಲ್ಲ, ಹೇಳುವುದನ್ನೆಲ್ಲಾ ಕೇಳಲೇಬೇಕೆನ್ನುವ ಮನೋಧರ್ಮದ ಮೂಲಕ ಸಾಂಸ್ಕೃತಿಕ/ಬೌದ್ಧಿಕ ಗುಲಾಮಗಿರಿಯನ್ನು ಹೇರುವ ಅಸ್ತ್ರವಾಗಿಯೂ ಬಳಸಲ್ಪಡುತ್ತದೆ. ಹಾಗೆ ನೋಡಿದರೆ ದಲಿತರು ಸಂಸ್ಕೃತವನ್ನು ನಿರಾಕರಿಸುವುದು ಕೇವಲ ನೆನಪಿನಿಂದ ಮಾತ್ರ. ಅನೇಕ ಕಡೆ ಅದನ್ನು ಬಳಸುವುದು ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳಲು. ಅಂತಹ ಸಂದರ್ಭಗಳಲ್ಲಿ ಇಂಗ್ಲಿಷ್ ಪ್ರೇಮವನ್ನು ಕಾಣುತ್ತೇವೆ. ಇವತ್ತು ದಲಿತರಿಗೇಕೆ, ಸಂಸ್ಕೃತ ಯಾರಿಗೂ ಬೇಕಿಲ್ಲ."[೧೩] ಹೀಗೆ ಸಿದ್ಧಲಿಂಗಯ್ಯ ಅವರು ದೇವನೂರ ಮಹಾದೇವ ಅವರ ಭಾಷೆ ರೂಢಿಯಲ್ಲಿ ಇರುವ ಶಿಷ್ಟಾಚಾರದ ಭಾಷೆಯನ್ನು ನಿರಾಕರಿಸಿ ತನ್ನ ಸಮುದಾಯದ ಭಾಷೆಯನ್ನು ಬಳಸುವುದರ ಮೂಲಕ ಸಂಸ್ಕೃತ ಭಾಷೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ.

ವಚನ ಸಾಹಿತ್ಯವು ವೈದಿಕ ಭಾಷೆಯನ್ನು ವಿರೋಧಿಸಿತು. ಜನಸಾಮಾನ್ಯರು ಮಾತನಾಡುವ ಸರಳ ಕನ್ನಡವನ್ನು ಸಂವಹನ ಭಾಷೆಯಾಗಿ ಬಳಸಿಕೊಂಡಿತು. ಆದರೆ ಹಿಂದೂ ಮೂಲಭೂತವಾದಗಳು ಕನ್ನಡ ಭಾಷೆಯ ಮೇಲೆ ಸಂಸ್ಕೃತ ಭಾಷೆಯನ್ನು ಹೇರುವ ಹುನ್ನಾರಗಳನ್ನು ಮಾಡಿತು. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯವು ಸಂಸ್ಕೃತದ ನೆರಳಲ್ಲಿ ನಡೆದಿರುವುದನ್ನು ದೇವನೂರು ಮಹಾದೇವ ಅವರು ಈ ರೀತಿ ಹೇಳುತ್ತಾರೆ. "ವಚನಯುಗ ಮುಗಿದ ಮೇಲೆ ಮತ್ತದೇ ಹಳೆ ಕಥೆಯಾಯ್ತು. ಅದಿರಲಿ, ಇಲ್ಲಿ ಜನತೆ ತಿಳಿಯದ ಭಾಷೆಯಾದ ಸಂಸ್ಕೃತದಲ್ಲಿ ಸೃಷ್ಟಿಯಾದುದರ ನೆರಳಂತೆ ಕನ್ನಡ ಸಾಹಿತ್ಯ ತನ್ನನ್ನು ರೂಪಿಸಿಕೊಂಡು ಅದರೊಳಗೆ ಆತ್ಮ, ಕರ್ಮ, ವರ್ಣ, ಜಾತಿ ಕಟ್ಟುಪಾಡು, ಸತ್ಯಕ್ಕೆ ಬಂದರೂ ಅದರೊಳಗೂ ಪಾರಮಾರ್ಥಿಕ ಸತ್ಯ, ಲೌಕಿಕ ಸತ್ಯ ಎಂದು ಸತ್ಯವನ್ನೂ ಇಬ್ಬಂದಿ ಮಾಡಿ ಒಡಲು ಪಡೆದ ಕೃತಿಗಳೇ ಇಲ್ಲ ಹೆಚ್ಚಾಗಿ ಸಮಾಜದ ಛಿದ್ರತೆಗೆ ಇವುಗಳ ಕಾಣಿಕೆಯೂ ಇದೆ."[೧೪] ಕನ್ನಡ ಸಾಹಿತ್ಯದಲ್ಲಿ ವೈದಿಕ ಮೂಲಭೂತವಾದಗಳು ಭಾಷೆಯ ಮೂಲಕ ಬಂದು ಸೇರಿಕೊಂಡು ರಚಿತವಾದ ಸಾಹಿತ್ಯ ಸಮಾಜವನ್ನು ಛಿದ್ರಗೊಳಿಸಲು ಮುಂದಾಗಿದೆ. ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಲು ಭಾಷೆಯೇ ಕಾರಣವಾಗಿದೆ ಎಂಬ ನಿಲುವುಗಳು ಸಂಸ್ಕೃತ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲೇ ಧ್ವನಿಸುತ್ತಿರುವುದನ್ನು ಕಾಣಬಹುದಾಗಿದೆ.

ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕಾದಂಬರಿಯಲ್ಲಿ ಬಳಕೆಯಾಗಿರುವ ಭಾಷೆ ಕನ್ನಡದ ಒಂದು ಪ್ರಾದೇಶಿಕ ಭಾಷೆಯಾಗಿದೆ. ಈ ಭಾಷೆಯ ಬಳಕೆಯು ಶಿಷ್ಟ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರಚಿತವಾಗಿರುವುದನ್ನು ಕಾಣಬಹುದಾಗಿದೆ. ಮದ್ವಾಚಾರ್ಯ ಮತ್ತು

ಚನ್ನನ ನಡುವೆ ನಡೆಯುವ ಸಂಭಾಷಣೆಯನ್ನು ಗಮನಿಸಿದರೆ, ಆಚಾರ್ಯರ ಸಂಭಾಷಣೆಯಲ್ಲಿ ಶಿಷ್ಟ ಭಾಷೆ ಅಥವಾ ಗ್ರಾಂಥಿಕ ಭಾಷೆಯನ್ನು ಬಳಸುವುದನ್ನು ಕಾಣಬಹುದಾಗಿದೆ. ಆದರೆ ಚನ್ನನ ಮಾತುಗಳಲ್ಲಿ ಪ್ರಾದೇಶಿಕ ಭಾಷೆಯ ಬಳಕೆಯನ್ನು ಗಮನಿಸಬಹುದು.

"ಏನಯ್ಯಾ ಚನ್ನ: ಹೇಗೆ ನಡೆಯ್ಯುತ್ತಾ ಇವೆ ಕೆಲ್ಸಕಾರ್ಯ, ಕ್ಷೇಮವೋ?"

"ಕ್ಷೇಮ ಸಾ."

"ಅಲ್ಲಪ್ಪಾ ಚನ್ನ: ಈ ಬಸ್‌ಗೆ ಬಂದಿರುವಂಥಃ ಕೇಡನ್ನಾರು ನೋಡು, ನಾನು ಬಂದೇ ಗಂಟೆ ಮೀರಿತಲ್ಲಯ್ಯಾ!"

"..........."

"ಹಾಗೆ ಇನ್ನೊಂದು ಮಾತು ಚನ್ನ: ಆ ಕಂಡಕ್ಟರನು ಇದ್ದಾನಲ್ಲಾ ಅವನಿಗೆ ಹೇಳೂ... ಏನೇಂದರೆ ನಾನು ಪಿಂಚಣಿ ತಗೊಂಡು ಪುನಃ ಹಿಂತಿರುಗುವಾಗ ಆ ಕಡೆ ಚಾರ್ಜನ್ನೂ ಕೊಟ್ಟು ಹಾಗೆಯೇ ಈ ಕಡೇದು ಚಾರ್ಜುನ್ನೂ ಉಪಾದ್ಯಾಯರು ಆಗಲೇ ಕೊಡುತ್ತಾರೆ ಅಂತಃ ಇದು ಆಗಬಹುದಲ್ಲ:?"

"ಈ ಕಡೆದ ನಾನೇ ಹಾಕತ್ತೀನಿ ಬುಡಿಸಾ..."

"ಅಯ್ಯಯ್ಯೋ ಉಂಟೇನಯ್ಯ ಚೆನ್ನಃ ಪುನಃ ನೀನು ಸಿಗುವುದು ಅಮಾವಾಸ್ಯೆಗೊ ಅಥವಾ ಪೂರ್ಣಿಮೆಗೋ. ಋಣಭಾರ ಏಕಪ್ಪಾಃ? ಈ ದೇಹ ಋಣಭಾರ ತಡೆಯಲಾರದಪ್ಪಾಃ"

"ಪರವಾಗಿಲ್ಲ ಸಾ."

"ಅಂದ ಹಾಗೆ ಚೆನ್ನಃ ಆ ನಮ್ಮ ಪಕ್ಕದ ಮನೆಯ ಶಾಸ್ತ್ರಿಗಳ ಮಗಳು ಸಾವಿತ್ರಿಃ ಮೈಸೂರು ಪಟ್ಟಣದಲ್ಲಿ ಇದ್ದಾಳಲ್ಲಃ ಅವಳ ಬಗ್ಗೆ ಕೇಳಬಾರದ್ದ ಕೇಳಿದೆನಯ್ಯಃ ನಿಜವೇನಪ್ಪಃ?"

"ನಿಜಸಾ. ನಮ್ ಜಾತ್ಯವರ ಮದ್ವಾಗಿ ಮಡಿಕಂಡು ಈಗೊಂದು ಕೂಸು..."

"ನಿಲ್ಲಪ್ಪಃ ಚನ್ನಃ ನಿಲ್ಸಯ್ಯ ಚನ್ನಃ ಆಗೇ ಬಿಟ್ಟಿತ್ಯೆಃ? ರಾಮರಾಮಾಃ ಕೇಳುವುದು ಉಂಟ್ಯೆ? ನಾನು ನನ್ನ ಈ ಕಿವಿಗಳಿಂದ ಕೇಳಲಾರೆನಪ್ಪಃ ಉಂಟ್ಯೆ? ಈ ಲೋಕ ನಡೆಯುತ್ಯೆ"

"ಉಣ್ಣಾ ಸಾ."

"ಇಲ್ಲಾ ಚನ್ನಃ ನನಗ್ಯಾಕೋ ಡೌಟಪ್ಪಃ ಅಂದ ಹಾಗೆ ಚೆನ್ನಃ ನಾನು ನಿನಗೆ ಚೆನ್ನಾಗಿ ಗೊತ್ತಲ್ಲಃ ನೀನು ಕಂಡ ಹಾಗೆ ನನಗಂತು ಜಾತಿಬೇದವು ಇಲಲ್ಲಪ್ಪಃ ನಾನು ನಿನ್ನನ್ನು ಮುಟ್ಟಿಸಿಕೊಳ್ಳಬಾರದು ಅಂತೇನಿಲ್ಲವೋ. ಆದರೆ ನನಗೆ ವಯಸ್ಸಾಯ್ತು ನೋಡು, ಯಥಾರ್ಥ ಈ ಇಳಿವಯಸ್ಸಲ್ಲಿ ಪದೇ ಪದೇ ತಣ್ಣೀರು ಸ್ನಾನವು ಆರೋಗ್ಯಕ್ಕೆ ವ್ಯತಿರಿಕ್ತ ಅಲ್ಲವೇನಪ್ಪಃ?"[೧೫]

ಈ ಮೇಲಿನ ಭಾಷೆಯ ಬಳಕೆಯಲ್ಲಿ ಮದ್ವಾಚಾರ್ಯ ಪರಂಪರಾಗತವಾಗಿ ಬಂದಿರುವ ವೈದಿಕ ಪ್ರಜ್ಞೆಯ ಅಮಾನವೀಯತೆಯ ಮೌಲ್ಯಗಳು ಮತ್ತು ಮೂಢನಂಬಿಕೆಗಳನ್ನು ಪ್ರತಿನಿಧಿಸುವ ಶಿಷ್ಟ(ಸಂಸ್ಕೃತ) ಭಾಷೆ ಬಳಕೆಯನ್ನು ಕನ್ನಡ ಭಾಷೆ ಪ್ರತಿನಿಧಿಸುತ್ತಿರುವುದನ್ನು ಕಾಣಬಹುದು. ಹೀಗೆ ಬಳಸುವ ಭಾಷೆಯು ಒಂದು ಬಗೆಯ ಮೌಲ್ಯ ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಪ್ರಭುತ್ವದ ಭಾಷೆ ಸಂಕೇತಿಸುವ ಯಜಮಾನ ವರ್ಗದ ಮೌಲ್ಯಗಳನ್ನು ಮತ್ತು ವೈದಿಕ ಪ್ರಜ್ಞೆಯ ಸಾಮಾಜಿಕ ನೈತಿಕ ಮೌಲ್ಯಗಳನ್ನು ತಿರಸ್ಕರಿಸುವುದಕ್ಕೆ ಪ್ರಾದೇಶಿಕ ಭಾಷೆಯ ಬಳಕೆಯವು ಶಿಷ್ಟ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರಚಿಸಿರುವುದನ್ನು ಕಾಣಬಹುದಾಗಿದೆ. "ಈ ಸಂದರ್ಭದಲ್ಲಿ ಲೇಖಕರ ಭಾಷಾಸೂಕ್ಷ್ಮತೆಯನ್ನು ಗಮನಿಸಬೇಕು. ಆಚಾರ್ಯರು 'ಋತುಮತಿ' ಶಬ್ದವನ್ನುಪಯೋಗಿಸಿದರೆ, ಕೃತಿಯ ನಿರೂಪಕ 'ಮುಟ್ಟು' ಎಂಬ ಅಚ್ಚ ಆಡುಮಾತನ್ನು ಉಪಯೋಗಿಸುತ್ತಾನೆ. 'ತಂದೆ ಮಾತಿನಂತೆ ಋತುಮತಿಯಾಗದ ಆ ಹಿಂದೂ ಧರ್ಮ ಸ್ವರೂಪಿಣೀ ಭಗವತಿಯು ಭಗದ ಆ ಧರ್ಮಕ್ಕನುಗುಣವಾಗಿ ಮುಟ್ಟಾಗಿ...' ಈ ವಾಕ್ಯದಲ್ಲಿ ಭಾಷಾಪ್ರಭೇದಗಳು ಅದ್ಭುತವಾಗಿ ಭಿನ್ನ ಮೌಲ್ಯಗಳನ್ನು ಸಂಕೇತಿಸುತ್ತವೆ: ಸಂಸ್ಕೃತಭೂಯಿಷ್ಠವಾದ ಆಚಾರ್ಯರ ಕನ್ನಡ ವಾಸ್ತವ ಸತ್ಯಕ್ಕೆ ಕುರುಡಾದ, ಡಾಂಬಿಕ ಹಾಗೂ ಪಾರಂಪರಿಕ ಮೌಲ್ಯಗಳನ್ನು ಸಂಕೇತಿಸಿದರೆ, ನಿರೂಪಕನ ದಲಿತ ಕನ್ನಡ ಪ್ರಭೇದ ವಾಸ್ತವ ಪ್ರಜ್ಞೆಯನ್ನು ಹಾಗೂ ಮಾನವೀಯತೆಯನ್ನು ಸಂಕೇತಿಸುತ್ತದೆ. ಕೃತಿಯಲ್ಲಿ ಬರುವ 'ನಾಯಕ್ಸಾನಿ ಸಂಸ್ಕೃತ' ಎಂಬ ಶಬ್ದಗಳ ಅರ್ಥ ಈ ಸಂದರ್ಭದಲ್ಲಿ(ಎಂದರೆ ಭಾಷೆಯು) ಪ್ರತಿನಿಧಿಸುವ/ ಸಂಕೇತಿಸುವ ಮೌಲ್ಯಗಳ ಸಂದರ್ಭದಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ."[೧೬] ಲೇಖಕರು ಬಳಸುವ ಪ್ರಾದೇಶಿಕ ಭಾಷಾಪ್ರಭೇದವು ವಾಸ್ತವ ಪ್ರಜ್ಞೆಯ ಮೂಲಕ ಮಾನವೀಯತೆಯನ್ನು ಸಂಕೇತಿಸುವುದರ ಮೂಲಕ ವೈದಿಕ ಪ್ರಜ್ಞೆಯ ಮೂಲಭೂತವಾದಿತನ ಮತ್ತು ವೈದಿಕ ಪಾರಂಪರಿಕ ಮೌಲ್ಯಗಳನ್ನು ವಿರೋಧಿಸುತ್ತಿದೆ. ಹೀಗೆ ದೇವನೂರ ಮಹಾದೇವ ಅವರು 'ಕುಸುಮಬಾಲೆ' ಕಾದಂಬರಿಯಲ್ಲಿ ಬಳಸುವ ಭಾಷಾ ಪ್ರಭೇದವು ವೈದಿಕ ಪ್ರಜ್ಞೆಯನ್ನು ಪ್ರತಿನಿಧಿಸುವ ಶಿಷ್ಟ ಕನ್ನಡ ಭಾಷೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ.

ಕನ್ನಡದ ಪ್ರಾಚೀನ ಕವಿಗಳು ಸಂಸ್ಕೃತ ಭಾಷೆಯ ಹೇರಿಕೆಗೆ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲೂ ಕೂಡ ಸಂಸ್ಕೃತ ಭಾಷೆಯ ಹಿನ್ನೆಲೆಯಲ್ಲಿ ವ್ಯಕ್ತವಾದ ಚಿಂತನೆಗಳನ್ನು ವಿರೋಧಿಸಿರುವುದನ್ನು ಗುರುತಿಸಬಹುದಾಗಿದೆ. ಶೂದ್ರರು ಸಂಸ್ಕೃತ ಭಾಷೆಯನ್ನು ಬಳಸಬಾರದು ಎಂಬ ಮನುಸ್ಮೃತಿಯ ನಿಯಮವನ್ನು ಕುವೆಂಪು ವಿರೋಧಿಸಿ ಸಂಸ್ಕೃತ ಪದಗಳನ್ನು ತಮ್ಮ ಸಾಹಿತ್ಯದಲ್ಲಿ ಬಳಸುತ್ತಾರೆ. ಕುವೆಂಪು ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸಲು ಕಾರಣ ಆ ಕಾಲದ ಬ್ರಾಹ್ಮಣಶಾಹಿ ಭಾಷೆ ಮತ್ತು ಭಾಷಾಶೈಲಿಯಲ್ಲಿ ಹುದುಗಿರುವ ಜ್ಞಾನ ಮತ್ತು ಪ್ರಗತಿಪರ ಚಿಂತನೆಗಳನ್ನು ಪುನರ್‌ಸೃಷ್ಟಿಸಿ, ಸಂಸ್ಕೃತ ಭಾಷೆಯಿಂದಲೇ ವೈದಿಕಶಾಹಿಯನ್ನು ವಿರೋಧಿಸುವ ಭಾಷಾಶೈಲಿಯನ್ನು ಕಾಣಬಹುದಾಗಿದೆ. ಕನ್ನಡ ಭಾಷೆ ಹಿಂದೆ ಉಳಿಯಲು ಕನ್ನಡದ ಬ್ರಾಹ್ಮಣ ಲೇಖಕರೇ ಕಾರಣ ಎಂಬ ಅಭಿಪ್ರಾಯವನ್ನು ಪೂರ್ಣಚಂದ್ರ ತೇಜಸ್ವಿ ಅವರು ವ್ಯಕ್ತಪಡಿಸುತ್ತಾರೆ.

ದೇವನೂರ ಮಹಾದೇವ ಅವರು ಭಾಷೆಯ ಮೂಲಕ ಹಿಂದೂ ಮೂಲಭೂತವಾದದ ಹೇರಿಕೆಗೆ ವಿರೋಧ ವ್ಯಕ್ತಪಡಿಸುತ್ತಾರೆ. ಭಾಷೆ ರೂಢಿಯಲ್ಲಿ ಇರುವ ಶಿಷ್ಟಾಚಾರದ ಭಾಷೆಯನ್ನು ನಿರಾಕರಿಸಿ ತನ್ನ ಸಮುದಾಯದ ಭಾಷೆಯನ್ನು ಬಳಸುವುದರ ಮೂಲಕ ಸಂಸ್ಕೃತ ಭಾಷೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ ಸಾಹಿತ್ಯದಲ್ಲಿ ಮಲೆನಾಡಿನ ಪ್ರಾದೇಶಿಕ ಭಾಷೆಯನ್ನು ಬಳಸುವುದರ ಮೂಲಕ ಶಿಷ್ಟ(ಸಂಸ್ಕೃತ) ಭಾಷೆಯನ್ನು ತಿರಸ್ಕರಿಸುತ್ತಾರೆ. ದೇವನೂರ ಮಹಾದೇವ ಅವರು ಕೂಡ ಪ್ರಾದೇಶಿಕ ಭಾಷೆಯನ್ನು ಬಳಸುವುದನ್ನು ಗಮನಿಸಬಹುದಾಗಿದೆ.

೪.೨. ಸಾಮಾಜಿಕ ಸಂವಹನ: ವೈದಿಕ ವಿರೋಧ

ಭಾಷೆ ಎಂಬ ಸಂವಹನದ ಮೂಲಕ ಮಾನವ ತನ್ನ ಭಾವನೆಗಳನ್ನು ಅಭಿವ್ಯಕ್ತಿಪಡಿಸುತ್ತಾನೆ. ಹೀಗೆ ಸಂವಹನದ ಮೂಲಕ ಮಾನವರು ಸಾಂಸ್ಕೃತಿಕ ಅಂಶಗಳನ್ನು ಕೊಡು ಕೊಳ್ಳುವಿಕೆಯಿಂದ ರವಾನೆಮಾಡುತ್ತಾರೆ. ಭಾಷೆಯನ್ನು ಬಳಸುವಾಗ ಒಂದು ಐಡಿಯಾಲಜಿ ಇರುತ್ತದೆ. ಯಾವುದೇ ಸಮುದಾಯವನ್ನು ನೋಡಿದರೆ ಅಲ್ಲಿ ಆ ಸಮುದಾಯದ ಸಂಪ್ರದಾಯಗಳ ಆಚರಣೆಯ ವಿಧಿ ವಿಧಾನಗಳು, ನಿಷೇಧಗಳು, ಸಂಸ್ಕೃತಿ ಸಂಗತಿಗಳು ಭಾಷಿಕವಾಗಿ ಅಡಗಿಸಿಟ್ಟುಕೊಂಡಿರುತ್ತದೆ. ಹಾಗಾಗಿ ಮನುಷ್ಯ ಮನುಷ್ಯರ ನಡುವಿನ ಸಾಮಾಜಿಕ ವೈವಿಧ್ಯಗಳನ್ನು ಅರಿಯಲು ಸಾಧ್ಯವಾಗುವುದು. ವ್ಯಕ್ತಿ ವ್ಯಕ್ತಿಗಳ ನಡುವೆ ಭೇದ-ಭಾವಗಳು, ತಾರತಮ್ಯದ ನೆಲೆಗಳನ್ನು ಭಾಷಿಕ ಸ್ವರೂಪದಿಂದ ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಸಮುದಾಯಗಳಲ್ಲಿ ವೈದಿಕಶಾಹಿಯಿಂದ ಸೃಷ್ಟಿಯಾದ ಸಾಮಾಜಿಕ ಕಟ್ಟುಪಾಡುಗಳಾದ ವರ್ಗಭೇದ, ಜಾತಿಭೇದ, ಲಿಂಗಭೇದ ಮತ್ತು ವರ್ಣಭೇದ ರೂಪಗಳು ಭಾಷೆಯ ಮೂಲಕ ತೋರುತ್ತವೆ. ಹೀಗೆ ಭಾಷೆಯ ಮೂಲಕ ಅಭಿವ್ಯಕ್ತವಾದ ಸಾಮಾಜಿಕ ಕಟ್ಟುಪಾಡುಗಳಿಗೆ ವಿರೋಧ ವ್ಯಕ್ತವಾಗಿರುವುದಾಗಿದೆ.

ವೈದಿಕಶಾಹಿ ಪ್ರತಿಪಾದಿಸುವ ಮನುಸ್ಮೃತಿಯ ನಿಯಮದಂತೆ ಸೃಷ್ಟಿಸಿದ ಜಾತಿ ಏಣಿಶ್ರೇಣಿ ವ್ಯವಸ್ಥೆಯಿಂದ ರೂಪಗೊಂಡ ಮಡಿ, ಮೈಲಿಗೆ, ಸಾಮಾಜಿಕ ನಿಷೇಧಗಳು, ಕೊಡು ಕೊಳ್ಳುವಿಕೆಯಲ್ಲಿನ ನಿರ್ಬಂಧ, ಯಾಜಮಾನಿಕೆ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ನಿಷೇಧಗಳನ್ನು ವಿರೋಧಿಸುವುದನ್ನು ಭಾಷಿಕ ಸ್ವರೂಪ ತೆರೆದು ತೋರಿಸುತ್ತದೆ. ಮೇಲು, ಕೀಳು, ವರ್ಗ, ವರ್ಣ ಮತ್ತು ಜಾತಿಬೇಧದ ಮಧ್ಯೆ ಜೈವಿಕ ಭಿನ್ನತೆ ಇದೆ. ಹಾಗೆ ಭಾಷಿಕ ಸಂವಹನದ ಧ್ವನಿ ಉಚ್ಚಾರದಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ. ಆದ್ದರಿಂದ ಸಾಮಾಜಿಕ ಸಂವಹನದ ಸಂದರ್ಭದಲ್ಲಿ ಬಳಸುವ ಭಾಷಾಕೃತಿಗಳಲ್ಲಿ ವೈದಿಕ ವಿರೋಧವನ್ನು ಗುರುತಿಸಬಹುದಾಗಿದೆ.

ಈ ಉಪ ಅಧ್ಯಾಯದಲ್ಲಿ ನಂಬಿಕೆ, ಸಂಬಂಧ ವಾಚಕ, ಸಂಬೋಧನೆ ರೂಪಕ, ವ್ಯಂಗ್ಯ, ಬೈಗುಳಗಳು ಎಂಬ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಚರ್ಚಿಸಲಾಗಿದೆ. ಸಾಮಾಜಿಕ ಸಂವಹನದಲ್ಲಿ ವೈದಿಕ ವಿರೋಧಿ ಪ್ರಜ್ಞೆ ಯಾವ ರೀತಿ ವ್ಯಕ್ತವಾಗಿದೆ ಎಂಬುದನ್ನು ಕುವೆಂಪು,

ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು ಮತ್ತು ಗ್ರಹಿಸುವುದು ಈ ಅಧ್ಯಾಯದ ಉದ್ದೇಶವಾಗಿದೆ.

೪.೨.೧. ನಂಬಿಕೆ

ಪಂಚೇಂದ್ರಿಯಗಳಿಗೆ ಆದ ಅನುಭವದ ನೆಲೆಗಟ್ಟಿನ ಮೇಲೆ ನಂಬಿಕೆಗಳು ನಿಂತಿರುತ್ತವೆ. ಕೆಲವು ನಂಬಿಕೆಗಳು ನಮ್ಮ ಹಿರಿಯರಿಂದ ಬಂದಿರುತ್ತವೆ. ನಮ್ಮ ಸುತ್ತಲಿನ ಪರಿಸರದ ಪ್ರಭಾವದಿಂದಲೂ ನಂಬಿಕೆಗಳು ಬರುತ್ತವೆ ಹಾಗೂ ಮೇಲುವರ್ಗದ ಧಾರ್ಮಿಕ ನಿಯಮಗಳಿಂದ ನಂಬಿಕೆಗಳನ್ನು ಸೃಷ್ಟಿಸಲಾಗುತ್ತದೆ ಮತ್ತು ಕೆಳವರ್ಗದ ಜನರ ಮೇಲೆ ನಂಬಿಕೆಗಳನ್ನು ಹೇರಲಾಗುತ್ತದೆ. ಹೀಗೆ ವೈದಿಕ ಧರ್ಮವು ಧರ್ಮಗ್ರಂಥಗಳ ಮೂಲಕ ಸಮಾಜದಲ್ಲಿ ನಂಬಿಕೆಗಳನ್ನು ಸೃಷ್ಟಿಸಿ ಹೇರಿಕೆಯನ್ನು ಮಾಡಲಾಯಿತು. ಹಾಗಾಗಿ ಸಮಾಜದಲ್ಲಿ ಕಟ್ಟುಪಾಡುಗಳು, ನಿಯಮಗಳ ಹುಟ್ಟಿಗೆ ಕಾರಣವಾಯಿತು. "ಒಬ್ಬ ಶೂದ್ರನು ಉದ್ದೇಶಪೂರ್ವಕವಾಗಿ–ಅದನ್ನು ಬಳಿಕ ನೆನಪಿಸಿಕೊಳ್ಳುವ ಸಲುವಾಗಿ ವೇದವನ್ನು ಕೇಳಿಸಿಕೊಂಡರೆ, ಅವನ ಕಿವಿಯಲ್ಲಿ ಕಾದ ಸೀಸವನ್ನು ಮತ್ತು ಅರಗನ್ನು ತುಂಬಬೇಕು; ವೇದವನ್ನೇನಾದರೂ ಅವನು ಉಚ್ಚರಿಸಿದರೆ ನಾಲಗೆಯನ್ನು ಕತ್ತರಿಸಬೇಕು; ಅವನು ವೇದದಲ್ಲಿ ಪರಿಣತಿಯನ್ನು ಸಂಪಾದಿಸಿದರೆ ಅವನ ದೇಹವನ್ನೇ ತುಂಡುತುಂಡಾಗಿ ಕತ್ತರಿಸಿ ಹಾಕಬೇಕು"[೧೭] ಹೀಗೆ ಸಂಸ್ಕೃತ ಭಾಷೆಯಲ್ಲಿ ರಚಿತವಾದ ವೈದಿಕ ಮಂತ್ರಗಳನ್ನು ಶೂದ್ರರು ಉಚ್ಚರಿಸಿದರೆ ಶಿಕ್ಷೆಯನ್ನು ಕೊಡಬೇಕು ಎಂಬ ನಂಬಿಕೆಗಳು ಧರ್ಮದ ಮೂಲಕ ಹುಟ್ಟಿಕೊಂಡವು. ಶೂದ್ರರು ಶಿಷ್ಟ ಭಾಷೆಯನ್ನು ಮಾತನಾಡುವಂತಿಲ್ಲ ಎಂಬ ನಂಬಿಕೆಗಳನ್ನು ಹೇರಲಾಗಿತ್ತು. ಹಾಗಾಗಿ ವೈದಿಕ ನಂಬಿಕೆಗಳಿಗೆ ವಿರೋಧ ವ್ಯಕ್ತವಾಗಿರುವುದನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ.

ಮನು ಸೃಷ್ಟಿಸಿದ ನಾಲ್ಕು ವರ್ಣದ ವಿಂಗಡಣೆಯಿಂದಾಗಿ ಬ್ರಾಹ್ಮಣರು ವಿದ್ಯೆಯನ್ನು ಕಲಿಯಬೇಕು ಎಂಬ ನಿಯಮವನ್ನು ಮಾಡಲಾಗಿತ್ತು. ಹಾಗಾಗಿ ಮನುಧರ್ಮ ಶಾಸ್ತ್ರವನ್ನು ನಂಬಿಕೆಯ ಭಾಗವಾಗಿ ಮಾಡಲಾಗಿತ್ತು. ಕೆಳವರ್ಗದ ಜನರು ಶಿಕ್ಷಣವನ್ನು ಕಲಿಯುವಂತಿಲ್ಲ ಮತ್ತು ಸಂಸ್ಕೃತ ಭಾಷೆಯ ಶ್ಲೋಕವನ್ನು ಉಚ್ಚರಿಸುವಂತಿಲ್ಲ ಎಂಬ ನಿಯಮ, ನಂಬಿಕೆಗಳನ್ನು ಮಾಡಲಾಗಿತ್ತು. ಈ ರೀತಿಯ ಅಮಾನವೀಯವಾದ ನಂಬಿಕೆಯನ್ನು ಕುವೆಂಪು ಅವರು ವಿರೋಧಿಸುತ್ತಾರೆ. ಹಾಗಾಗಿ ಶೂದ್ರ ಹಿನ್ನೆಲೆಯಿಂದ ಬಂದ ಕುವೆಂಪು ಅವರು 'ನೆನಪಿನ ದೋಣಿ'ಯಲ್ಲಿ ಸಂಸ್ಕೃತ ಭಾಷೆಯನ್ನು ಕಲಿಯಲು ಮುಂದಾಗುವುದರ ಬಗ್ಗೆ ಈ ರೀತಿ ಹೇಳುತ್ತಾರೆ. "ನಿಮ್ಮಲ್ಲಿ ಯಾರೂ ಸಂಸ್ಕೃತ ತೆಗೆದುಕೊಳ್ಳುವವರು? ಯಾರೂ ಕನ್ನಡ ತೆಗೆದುಕೊಳ್ಳವವರು? ಸಂಸ್ಕೃತ ತೆಗೆದುಕೊಳ್ಳಲು ಇಚ್ಚಿಸುವವರೆಲ್ಲ ಎದ್ದು ನಿಲ್ಲಿ! ಎಂದರು. ಅನೇಕರು ಎದ್ದು ನಿಂತರು. ನಾನೂ ಎದ್ದು ನಿಂತೆ. ಅಷ್ಟೊಂದು ಮಂದಿ ಎದ್ದು ನಿಲ್ಲುವಾಗ ನಾನೇಕೆ ಕೂತಿರಬೇಕು? ನಾನೇನು ಕಡಿಮೆ? "ಸಂಸ್ಕೃತದ ವಿದ್ಯಾರ್ಥಿಗಳೆಲ್ಲ ಮತ್ತೊಂದು ಕೊಠಡಿಗೆ ಹೋಗಿ" ಎಂದರು ಮೇಷ್ಟರು. ತುಂಬ ಹೆಮ್ಮೆಯಿಂದ ನಾನೂ ಇತರರೊಡನೆ ಹೋಗಿ ಬೇರೆ ಕೊಠಡಿಯಲ್ಲಿ ಕುಳಿತೆ. ನನ್ನ ಕೆಲವು ಬ್ರಾಹ್ಮಣೇತರ ಮಿತ್ರರು, ಕನ್ನಡ ತರಗತಿಯಲ್ಲಿಯೇ

ಉಳಿದವರು "ಸಂಸ್ಕೃತ ಕಷ್ಟ ಕಣೋ. ಅದು ಬ್ರಾಹ್ಮಣರಿಗೆ ಮಾತ್ರ" ಎಂದು ಬುದ್ಧಿವಾದ ಹೇಳಿದರು. ಬ್ರಾಹ್ಮಣ ಸಹಪಾಠಿಗಳು "ನೀನ್ಯಾಕೆ ಬಂದೆಯೊ ನಮ್ಮ ಜೊತೆಗೆ? ಶೂದ್ರರಿಗೆ ಯಾಕೊ ಸಂಸ್ಕೃತ? ನೀನೇನು ಮಂತ್ರಗಿಂತ್ರ ಹೇಳಿ ಪೌರೋಹಿತ್ಯ ಮಾಡ್ತೀಯೆನೊ? ಸಂಸ್ಕೃತ ನಿನಗೆ ಉಚ್ಚಾರ ಮಾಡೋಕೆ ಆಗೋದಿಲ್ಲ. ನೀನು ಅದನ್ನು ಕಲ್ತು ಬರೆದು ಪಾಸುಮಾಡುವುದು ಹೌದೇನೋ?" ಎಂದು ಅರೆ ಅಣಕದ ಎಚ್ಚರಿಕೆಯ ಮಾತಾನಾಡಿದರು. "ಓಹೋ ಅದೇನು ಮಹಾ! ಬ್ರಾಹ್ಮಣರಿಗೆ ಮಾತ್ರ ಮೀಸಲೇನೊ?" ಎಂದು ನಾನು ಉಡಾಫೆ ಮಾಡಿ, ಸಂಸ್ಕೃತದ ಕ್ಲಾಸಿನಲ್ಲಿಯೆ ಕುಳಿತೆ. ರಿಜಿಸ್ಟರಿನಲ್ಲಿ ಹುಡುಗರ ಹೆಸರನ್ನೆಲ್ಲ ಬರೆದುಕೊಳ್ಳುತ್ತಿದ್ದ ಮೂರುನಾಮದ ಪಂಡಿತರು ನನ್ನ ಸರದಿ ಬರಲು, ನಾನು ಹೇಳಿದ ನನ್ನ ಹೆಸರನ್ನು ಕೇಳಿ ಬೆರಗಾಗಿ, ಮೆಟ್ಟಬಾರದ್ದನ್ನು ಮೆಟ್ಟಿದವರಂತೆ, ಜುಗುಪ್ಸೆ ವಿಸ್ಮಯ ಅಸಮಾಧಾನಗಳ ಭಂಗಿಯಿಂದ ತಲೆಯೆತ್ತಿ ನನ್ನ ಕಡೆ ದುರುದುರನೆ ಸ್ವಲ್ಪ ಹೊತ್ತು ನೋಡಿ, ಏನನ್ನೋ ನಿಶ್ಚಯಿಸಿ, ಮತ್ತೆ ತಲೆ ತಗ್ಗಿಸಿ ಹುಡುಗರ ಹೆಸರು ಬರೆದುಕೊಳ್ಳುವ ತಮ್ಮ ಕರ್ತವ್ಯದಲ್ಲಿ ನಿರತರಾದರು."[೧೮]

ಈ ಮೇಲಿನ ಉಲ್ಲೇಖದಲ್ಲಿ ಇರುವ 'ಸಂಸ್ಕೃತ ಕಷ್ಟ ಕಣೋ. ಅದು ಬ್ರಾಹ್ಮಣರಿಗೆ ಮಾತ್ರ', 'ಬ್ರಾಹ್ಮಣ ಸಹಪಾಠಿಗಳು ನೀನ್ಯಾಕೆ ಬಂದೆಯೊ ನಮ್ಮ ಜೊತೆಗೆ? ಶೂದ್ರರಿಗೆ ಯಾಕೋ ಸಂಸ್ಕೃತ?', 'ಸಂಸ್ಕೃತ ನಿನಗೆ ಉಚ್ಚಾರ ಮಾಡೋಕೆ ಆಗೋದಿಲ್ಲ' ಎಂಬ ನಂಬಿಕೆಗಳನ್ನು ಕುವೆಂಪು ಅವರು ವಿರೋಧಿಸಿ ಬ್ರಾಹ್ಮಣರಿಗೆ ಮಾತ್ರ ಮೀಸಲೇನು? ಎಂದು ಪ್ರಶ್ನಿಸಿ ಸಂಸ್ಕೃತ ಭಾಷೆಯನ್ನು ಕಲಿಯಲು ಮುಂದಾಗುವುದನ್ನು ಗುರುತಿಸಬಹುದಾಗಿದೆ. ಹೀಗೆ ಭಾಷಾ ಸಂವಹನದ ಮೂಲಕ ಸ್ಥಾಪಿತವಾದ ವೈದಿಕ ಮೌಲ್ಯಗಳನ್ನು ಅಮಾನವೀಯ ನಂಬಿಕೆಗಳನ್ನು ಕುವೆಂಪು ಅವರು ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ.

ವೈದಿಕಶಾಹಿಯು ಯಜಮಾನಿಕೆ, ದರ್ಪದ ಕಾರಣಗಳಿಂದ ಕೆಳವರ್ಗದ ಜನರ ಜೊತೆ ಸಂವಾದವನ್ನು ಮಾಡುವಾಗ ಏಕವಚನದಿಂದಲೆ ಮಾತನಾಡಿಸುತ್ತಿದ್ದರು. ಹೀಗೆ ಮಾತನಾಡಿಸಲು ಕಾರಣ ಜಾತಿ ತಾರತಮ್ಯವಾಗಿತ್ತು. ಸಮಾಜದಲ್ಲಿ ಬ್ರಾಹ್ಮಣರು ಕೆಳವರ್ಗದ ಜನರನ್ನು ಏಕವಚನದಿಂದಲೆ ಸಂಬೋಧಿಸುವುದು ನಂಬಿಕೆಯ ಭಾಗವಾಗುವಂತೆ ವೈದಿಕರು ಮಾಡಿದ ಹುನ್ನಾರವಾಗಿದೆ. ಹಾಗಾಗಿ ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬ್ರಾಹ್ಮಣರು ಏಕವಚನದ ಭಾಷೆಯನ್ನು ಬಳಸುತ್ತಿದ್ದರು ಎಂಬುದರ ಬಗ್ಗೆ ವಿವರಿಸುತ್ತಾರೆ. "ಗೌಡರು ಜೋಯಿಸರಿಗಿಂತಲೂ ಹದಿನೈದು ಇಪ್ಪತ್ತು ವರ್ಷಗಳು ಹೆಚ್ಚು ವಯಸ್ಸಿನವರಾಗಿದ್ದರೂ, ಬ್ರಾಹ್ಮಣನು ಶೂದ್ರನನ್ನು ಬಹುವಚನದಲ್ಲಿ ಮಾತಾಡಿಸುವುದು ಶಾಪಕ್ಕೆ ಸಮಾನವೆಂದೂ, ಏಕವಚನದಲ್ಲಿ ಮಾತಾಡಿಸುವುದು ಅನುಗ್ರಹಕ್ಕೆ ಸಮಾನವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮ ರಾ ಶ್ರೀಗಳನ್ನು 'ಅವನು' 'ನೀನು' ಎಂದೇ ಸಂಬೋಧಿಸುತ್ತಿದ್ದುದು ಆ ನಾಡಿನ ವಾಡಿಕೆಯಾಗಿತ್ತು."[೧೯] ಹೀಗೆ ವೈದಿಕರು ಕೆಳವರ್ಗದ ಜನರನ್ನು ಬಹುವಚನ ಮತ್ತು ಗೌರವದಿಂದ ಕೆಳವರ್ಗದ ಜನರನ್ನು ಮಾತನಾಡಿಸಿದರೆ ಶಾಪಕ್ಕೆ ಸಮಾನವೆಂದುದು ಎಂದು ಸಮಾಜದಲ್ಲಿ ನಂಬಿಸಲಾಗಿತ್ತು.

ಹಾಗಾಗಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ದ್ಯಾವಣ್ಣ ಮತ್ತು ಮಂಜಭಟ್ಟರ ನಡುವೆ ನಡೆಯುವ ಭಾಷಾ ಸಂವಹನದಲ್ಲಿ ವೈದಿಕಶಾಹಿಯಲ್ಲಿ ಇದ್ದ ಭಾಷಾ ನಂಬಿಕೆಗೆ ವಿರೋಧ ವ್ಯಕ್ತವಾಗುವುದನ್ನು ಗುರುತಿಸಬಹುದಾಗಿದೆ. "ಅದನ್ನು ಚೆನ್ನಾಗಿ ಗಮನಿಸಿದ ಮಂಜಭಟ್ಟರು ತಮ್ಮ ಅಸಮಾಧಾನವನ್ನು ಒಂದಿನಿತೂ ಹೊರಗೆಡಹದೆ ಹುಸಿನಗು ನಗುತ್ತಾ ಮೂದಲಿಕೆಯ ದನಿಯಿಂದ "ಓಹೋಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲ!..... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೇ?" ಎಂದರು.

ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ, ತಮ್ಮ ಮೇಲುತನವನ್ನೂ ಹೆಚ್ಚುಗಾರಿಕೆಯನ್ನೂ ತಿಕ್ಕಿ ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೆ ಕೀಳುಜನರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದುದನ್ನೂ, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿತರಾಗಿದ್ದು ಹೆಚ್ಚು ಕಡಮೆ ಅವರಷ್ಟೆ ವಯಸ್ಕರಾಗಿದ್ದು ತನ್ನ ತಂದೆಯನ್ನೂ ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡರು; 'ಹುಷಾರಾಗಿದ್ದಾರೆಯೆ? ಎನ್ನದೆ 'ಕಲ್ಲಯ್ಯ' 'ಹುಷಾರಾಗಿದ್ದಾನೆ'? ಎಂದು ಏಕವಚನದಿಂದಲೆ ಮಾತನಾಡಿಸಿದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆತು ನಿಂತು, 'ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವನಿಗೆ ಸರಿಯಾಗಿಯೆ ಉತ್ತರ ಹೇಳುತ್ತೇನೆ' ಎಂದು ನಿಶ್ಚಯಿಸಿ ಲಘುವಾಗಿ ನಗುತ್ತಾ ಹೇಳಿದ್ದು "ಯಾರು? ಹಳೇಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು!"

"ಅಲ್ಲ, ಮಾರಾಯಾ; 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ?" ಅಂತ ಕೇಳಿದ್ದು... ಏನೋ ನಾವು ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದೂ ಪರಿಚಯ; ಏಕವಚನದಲೇ ಮಾತಾಡಿಸೋದು ರೂಢಿಯಾಗಿ ಬಿಟ್ಟಿದೆ. ಈಗಿನ ಹುಡುಗರಿಗೆ ಅದೆಲ್ಲಾ ಹಿಡಿಸೋದಿಲ್ಲ, ಅರ್ಥವಾಗೋದಿಲ್ಲಾ. ಅವಮಾನವಾಯ್ತು ಅಂತಾ ತಿಳಿಕೋತಾರೆ..." ಸ್ವಲ್ಪ ಅಪ್ರತಿಭರಾದ ಮಂಜಭಟ್ಟರು ಕ್ಷಮಾ ಯಾಚನೆಯ ಭಂಗಿಯಲ್ಲಿ ಹೇಳಿದ್ದರೂ ದೇವಯ್ಯ ತನ್ನ ಮುನ್ನಿನ ಸಂಕಲ್ಪವನ್ನು ಕೈಬಿಡದೆ ಮುಂದುವರೆದನು:

"ಅಪ್ಪಯ್ಯನಾ? ...ನಾನು ಏನೋ ಅಂತಿದ್ದೆ!.. ತಪ್ಪಾಯ್ತು!... ಅವರೂ ಮೇಗರೊಳ್ಳಿ ಮಿಷನ್ ಸ್ಕೂಲಿಗೆ ಹೋದರು. ರೆವರೆಂಡ್ ಲೇಕ್‌ಹಿಲ್ ದೊಡ್ಡ ಪಾದ್ರಿ ಬರ್ತಾರಂತೆ, ಉಪದೇಶಿ ಜೀವರತ್ನಯ್ಯ ಹೇಳಿದ್ದರು. 'ಬ್ರಾಹ್ಮಣ ಕೂಣಿಯಲ್ಲಿ ಶೂದ್ರಮೀನು' ಅಂತಾ ಹರಿಕಥೆ ಮಾಡ್ತಾರಂತೆ..." ಅಷ್ಟರಲ್ಲಿ ...

ಗಂಟೆ ಜಾಗಟೆ ಸದ್ದಾಗಿ ಪೂಜೆ ಪ್ರಾರಂಭವಾಗುವ ಸೂಚನೆಯೆ ತಮಗೊಂದು ಸದವಕಾಶ ನೆವವಾಯಿತೆಂಬಂತೆ ಮಂಜಭಟ್ಟರು ನಿರ್ದಾಕ್ಷಿಣ್ಯವಾಗಿ ಸಟಕ್ಕನೆ ತಿರುಗಿ ಬ್ರಾಹ್ಮಣ ಸಮುದಾಯದತ್ತ ನಡೆದು ಗರ್ಭಗುಡಿ ಪ್ರವೇಶ ಮಾಡಿದರು."[೨೦]

ಈ ಮೇಲಿನ ಉದ್ಧರಣೆಯ ಭಾಗದಲ್ಲಿ ಕಂಡುಬರುವ ಬ್ರಾಹ್ಮಣರಾದ ಮಂಜಭಟ್ಟರು ಮಾತನಾಡುವ ಏಕವಚನದ ಮಾತುಗಳು "ಮೂದಲಿಕೆಯ ದನಿಯಿಂದ ಓಹೋಹೋ! ಏನು

ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲ!..... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೇ?" ಈ ಮಾತುಗಳಲ್ಲಿ ಅಭಿವ್ಯಕ್ತಿಯಾಗಿರುವ ವೈದಿಕ ದರ್ಪದ ಭಾಷೆಯನ್ನು ದೇವಯ್ಯ ಲಘುವಾಗಿ ಪ್ರತಿ ಉತ್ತರವನ್ನು ಮಂಜಭಟ್ಟರಿಗೆ ಉತ್ತರಿಸುವ ಮೂಲಕ ವಿರೋಧ ವ್ಯಕ್ತಪಡಿಸುತ್ತಾನೆ. ಬ್ರಾಹ್ಮಣರ ಏಕವಚನ ಭಾಷಾ ಶೈಲಿಯನ್ನು ವಿರೋಧಿಸುವ ಪ್ರಜ್ಞೆ ದೇವಯ್ಯನ ಭಾಷೆಯಲ್ಲಿ ಅಭಿವ್ಯಕ್ತವಾಗಿರುವುದನ್ನು ಗುರುತಿಸಬಹುದು. 'ಬ್ರಾಹ್ಮಣ ಕೂಣಿಯಲ್ಲಿ ಶೂದ್ರಮೀನು' ಎನ್ನುವ ಮಾತಿನ ಹಿನ್ನೆಲೆಯ ಧ್ವನಿ ವೈದಿಕ ವಿರೋಧವನ್ನು ವ್ಯಕ್ತಪಡಿಸುತ್ತಿದೆ.

ಶೂದ್ರರು ಶಿಷ್ಟ ಭಾಷೆಯನ್ನು ಮಾತನಾಡುವಂತಿಲ್ಲ ಎಂಬ ನಂಬಿಕೆಗಳನ್ನು ವೈದಿಕರು ಸಮಾಜದಲ್ಲಿ ಹೇರಿದ್ದರು. ಹಾಗಾಗಿ ದೇವನೂರ ಮಹಾದೇವ ಅವರು ಪ್ರಾದೇಶಿಕ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸುವುದರ ಮೂಲಕ ಶಿಷ್ಟ ಭಾಷೆಯನ್ನು ಉಲ್ಲಂಘನೆ ಮತ್ತು ಪ್ರತಿಭಟನೆಯ ನೆಲೆಯಲ್ಲಿ ಭಾಷಾ ನಂಬಿಕೆಯನ್ನು ತಿರಸ್ಕರಿಸುತ್ತಾರೆ. 'ಕುಸಮಬಾಲೆ' ಕಾದಂಬರಿಯು ಮಡಿ-ಮೈಲಿಗೆ, ಶಿಷ್ಟ-ಅಶ್ಲೀಲ ಮತ್ತು ಪವಿತ್ರ-ಅಪವಿತ್ರವೆಂಬ ನಂಬಿಕೆಗಳನ್ನು ಮೀರುತ್ತದೆ. ಕನ್ನಡದ ಒಂದು ಉಪಭಾಷೆಯನ್ನು ಸಾಹಿತ್ಯದ ಭಾಷೆಯಾಗಿ ಬಳಸುವುದರ ಮೂಲಕ ಶಿಷ್ಟ ಭಾಷೆಯನ್ನು ವಿರೋಧಿಸುತ್ತದೆ.

ವೈದಿಕ ಧರ್ಮವು ಸಮಾಜದಲ್ಲಿ ಭಾಷೆಯ ಮೂಲಕ ಸ್ಥಾಪಿಸಿದ ನಂಬಿಕೆಯ ಮೌಲ್ಯಗಳನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಉಲ್ಲಂಘನೆ ಮಾಡಲಾಗಿದೆ. ಕುವೆಂಪು ಸಂಸ್ಕೃತ ಭಾಷೆಯನ್ನು ಬಳಸುವುದು ಮತ್ತು ಓದಲು ಮುಂದಾಗುವುದನ್ನು ಕಾಣಬಹುದಾಗಿದೆ. ಬ್ರಾಹ್ಮಣರಿಗೆ ಏಕವಚನದಲ್ಲಿ ಮಾತನಾಡಿಸುವುದನ್ನು ಗುರುತಿಸಬಹುದು ಹಾಗೂ ಶಿಷ್ಟ ಭಾಷೆಗೆ ವಿರುದ್ಧವಾಗಿ ಪ್ರಾದೇಶಿಕ ಭಾಷೆಯನ್ನು ಸಾಹಿತ್ಯದಲ್ಲಿ ಬಳಸಲಾಗಿದೆ. ಹೀಗೆ ಸ್ಥಾಪಿತವಾದ ವೈದಿಕರು ಸೃಷ್ಟಿಸಿದ ಭಾಷಾ ನಂಬಿಕೆಗಳನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರು ಮಹಾದೇವ ಅವರು ವಿರೋಧಿಸುತ್ತಾರೆ.

೪.೨.೨. ಸಂಬಂಧವಾಚಕ

ಭಾಷಾ ಸಮುದಾಯದಲ್ಲಿ ಸಾಮಾಜಿಕ ಸ್ತರವಿನ್ಯಾಸಗಳನ್ನು ಕಾಣಬಹುದಾಗಿದೆ. ಹಾಗಾಗಿ ಒಬ್ಬ ಭಾಷಿಕ ಇನ್ನೊಬ್ಬ ಭಾಷಿಕನಿಗಿಂತ ಭಿನ್ನವಾಗಿ ಸ್ಥಾನಮಾನಗಳನ್ನು ಹೊಂದಿರುತ್ತಾನೆ. ಹೀಗೆ ಭಿನ್ನ ಭಿನ್ನವಾದ ಸ್ಥಾನಮಾನಗಳಿಂದ ಸಾಮಾಜಿಕ ರಚನೆಯಲ್ಲಿ ವೈವಿಧ್ಯಮಯವಾದ ರಚನೆಯನ್ನು ಕಾಣಬಹುದಾಗಿದೆ. ಸಮುದಾಯದ ಭಾಷೆಯು ಹಲವು ಬಗೆಯ ಸಾಮಾಜಿಕ ಸಂಬಂಧಗಳಿಂದ ಕೂಡಿರುತ್ತದೆ. ಸಂಬಂಧಗಳು ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳಿಂದ ರಚಿತವಾಗಿದೆ. ಹೀಗಾಗಿ "ಸಂಬಂಧವಾಚಕಗಳು ಭಾಷಿಕ ರಚನೆಗಳು. ಸಾಮಾಜಿಕ ಭಾಷಾಶಾಸ್ತ್ರಜ್ಞರು ಹೆಸರುಗಳನ್ನು ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳೆಂದು ವಿಂಗಡಿಸುತ್ತಾರೆ. ವ್ಯಕ್ತಿನಾಮಗಳನ್ನು ವ್ಯಕ್ತಿನಾಮ, ಕುಲನಾಮ ಮತ್ತು ಸಂಬಂಧ ವಾಚಕಗಳೆಂದು ವರ್ಗೀಕರಿಸುತ್ತಾರೆ. ವ್ಯಕ್ತಿನಾಮಗಳ ಕಕ್ಷೆಯಲ್ಲಿ ಬರುವ ಸಂಬಂಧವಾಚಕಗಳು ಸಂಖ್ಯೆ ಸೀಮಿತವಾಗಿದ್ದರೂ ಅವುಗಳ ಸಾಮಾಜಿಕ

ಅರ್ಥಛಾಯೆ ವೈವಿಧ್ಯಮಯವಾಗಿವೆ. ಬಂಧುವಾಚಕಗಳ ಬಳಕೆಯಲ್ಲಿ ಭಾಷಿಕರ ಬಳಕೆ, ಹಾರೈಕೆಗಳೂ ಹಾಗೂ ಅವರ ಕೌಟುಂಬಿಕ ಪರಂಪರೆ ಅಡಗಿರುತ್ತದೆ. ಹೀಗಾಗಿ ಬಂಧುವಾಚಕಗಳು ಸಂಸ್ಕೃತಿ ಅಧ್ಯಯನಕ್ಕೆ ಮೌಲಿಕ ಆಕರಗಳಾಗಿರುತ್ತವೆ."[೨೧] ಸಂಬಂಧ ವಾಚಕಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದಾಗಿದೆ. ಕೌಟುಂಬಿಕ ಸಂಬಂಧವನ್ನು ಒಳಗೊಂಡಿರುವ ರಕ್ತಸಂಬಂಧಗಳು, ಕೌಟುಂಬಿಕೇತರವಾಗಿ ಹೊಂದಿರುವ ಸ್ನೇಹ ಸಂಬಂಧ, ಗುರು ಶಿಷ್ಯರ ಸಂಬಂಧ, ವೃತ್ತಿ ಸಂಬಂಧಗಳು, ಇತ್ಯಾದಿ. ಹೀಗೆ ಸಂಬಂಧವಾಚಕಗಳು ಸಾಮಾಜಿಕವಾಗಿ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ.

ಭಾಷಾ ಸಮುದಾಯದಲ್ಲಿ ಪ್ರತಿಯೊಬ್ಬ ಭಾಷಿಕನಿಗೂ ನಿರ್ದಿಷ್ಟವಾದ ಸ್ಥಾನವಿರುತ್ತದೆ. ಕನ್ನಡ ಸಂಬಂಧವಾಚಕಗಳ ವ್ಯವಸ್ಥೆಯು ದ್ರಾವಿಡ ಸಂಬಂಧವಾಚಕ ವ್ಯವಸ್ಥೆಯ ತತ್ವಗಳ ಮೇಲೆಯೇ ಅವಲಂಬಿಸಿದೆ. ಹಾಗಾಗಿ ದ್ರಾವಿಡ ಭಾಷಿಕರಲ್ಲಿ ತನಗಿಂತ ಕಿರಿಯರನ್ನು ಸಂಬೋಧಿಸುವಾಗ ಸಂಬಂಧವಾಚಕಗಳನ್ನು ಸಾಮಾನ್ಯವಾಗಿ ಬಳಸುವುದಿಲ್ಲ. ಅವರ ಹೆಸರಿಂದಲೆ ಸಂಬೋಧಿಸುತ್ತಾರೆ. ತನಗಿಂತ ಹಿರಿಯರನ್ನು ಸಂಬೋಧಿಸುವಾಗ ಸಂಬಂಧವಾಚಕಗಳನ್ನು ಬಳಸುತ್ತಾರೆ. ಆದ್ದರಿಂದ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬ್ರಾಹ್ಮಣ ವರ್ಗಕ್ಕೆ ಸೇರಿದ ಮಂಜಭಟ್ಟರು ಕೆಳವರ್ಗದ ದೇವಯ್ಯನ ತಂದೆಯನ್ನು ಏಕವಚನದಿಂದ ಸಂಬೋಧಿಸಿ ಮಾತನಾಡುವುದನ್ನು ಕಾಣಬಹುದಾಗಿದೆ ಹಾಗೂ ಕೆಳವರ್ಗದವರು ಬಳಸುವ ಸಂಬಂಧವಾಚಕವನ್ನು ಬಳಸಿ ಸಂಬೋಧಿಸುವುದನ್ನು ಗುರುತಿಸಬಹುದಾಗಿದೆ.

"ಅದನ್ನು ಚೆನ್ನಾಗಿ ಗಮನಿಸಿದ ಮಂಜಭಟ್ಟರು ತಮ್ಮ ಅಸಮಾಧಾನವನ್ನು ಒಂದಿನಿತೂ ಹೊರಗೆಡಹದೆ ಹುಸಿನಗು ನಗುತ್ತಾ ಮೂದಲಿಕೆಯ ದನಿಯಿಂದ "ಓಹೋಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಲ್ಲ!..... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೇ?" ಎಂದರು.

ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ, ತಮ್ಮ ಮೇಲುತನವನ್ನೂ ಹೆಚ್ಚುಗಾರಿಕೆಯನ್ನೂ ತಿಕ್ಕಿ ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೆ ಕೀಳುಜನರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದುದನ್ನೂ, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿತರಾಗಿದ್ದು ಹೆಚ್ಚು ಕಡಿಮೆ ಅವರಷ್ಟೆ ವಯಸ್ಕರಾಗಿದ್ದು ತನ್ನ ತಂದೆಯನ್ನೂ ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡರು; 'ಹುಷಾರಾಗಿದ್ದಾರೆಯೆ? ಎನ್ನದೆ 'ಕಲ್ಲಯ್ಯ' 'ಹುಷಾರಾಗಿದ್ದಾನೆ'? ಎಂದು ಏಕವಚನದಿಂದಲೆ ಮಾತನಾಡಿಸಿದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆದು ನಿಂತು, 'ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವನಿಗೆ ಸರಿಯಾಗಿಯೆ ಉತ್ತರ ಹೇಳುತ್ತೇನೆ' ಎಂದು ನಿಶ್ಚಯಿಸಿ ಲಘುವಾಗಿ ನಗುತ್ತಾ ಹೇಳಿದ್ದು: "ಯಾರು? ಹಳೇಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು!"

"ಅಲ್ಲ, ಮಾರಾಯಾ; 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ?" ಅಂತ ಕೇಳಿದ್ದು...ಏನೋ ನಾವು ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದೂ ಪರಿಚಯ; ಏಕವಚನದಲೇ

ಮಾತಾಡಿಸೋದು ರೂಢಿಯಾಗಿ ಬಿಟ್ಟಿದೆ. ಈಗಿನ ಹುಡುಗರಿಗೆ ಅದೆಲ್ಲಾ ಹಿಡಿಸೋದಿಲ್ಲ, ಅರ್ಥವಾಗೋದಿಲ್ಲಾ. ಅವಮಾನವಾಯ್ತು ಅಂತಾ ತಿಳಿಕೋತಾರೆ..." ಸ್ವಲ್ಪ ಅಪ್ರತಿಭರಾದ ಮಂಜಭಟ್ಟರು ಕ್ಷಮಾ ಯಾಚನೆಯ ಭಂಗಿಯಲ್ಲಿ ಹೇಳಿದ್ದರೂ ದೇವಯ್ಯ ತನ್ನ ಮುನ್ನಿನ ಸಂಕಲ್ಪವನ್ನು ಕೈಬಿಡದೆ ಮುಂದುವರೆದನು:

"ಅಪ್ಪಯ್ಯನಾ? ...ನಾನು ಏನೋ ಅಂತಿದ್ದೆ!.. ತಪ್ಪಯ್ತು!... ಅವರೂ ಮೇಗರೊಳ್ಳಿ ಮಿಷನ್ ಸ್ಕೂಲಿಗೆ ಹೋದರು."[೨೨]

ಮೇಲಿನ ಉದ್ಧರಣೆಯಲ್ಲಿ ಇರುವ ಸಂಭಾಷಣೆಯಲ್ಲಿ ವ್ಯಕ್ತವಾಗಿರುವಾಗಿರುವ 'ಅಪ್ಪಯ್ಯ' ಎಂಬುದು ಕನ್ನಡ ಸಂಬಂಧವಾಚಕವಾಗಿದೆ. ಕನ್ನಡ ಭಾಷೆಯ ರಚನೆಯಲ್ಲಿ ಸಂಬಂಧವಾಚಕಗಳನ್ನು ಸಂಬೋಧಿಸುವಾಗ ತನಗಿಂತ ಹಿರಿಯರಿದ್ದರೆ ಸಂಬಂಧವಾಚಕವನ್ನು ಬಳಸಿ ಸಂಬೋಧಿಸಲಾಗುತ್ತದೆ. ಹಾಗಾಗಿ ದೇವಯ್ಯನ ತಂದೆಯಾದ ಕಲ್ಲಯ್ಯಗೌಡರನ್ನು ಏಕವಚನದಿಂದ 'ಕಲ್ಲಯ್ಯ ಬಂದಿಲ್ಲೇನೋ' ಎಂದು ಸಂಬೋಧಿಸಿದಾಗ ದೇವಯ್ಯ ಮಂಜಭಟ್ಟರ ಭಾಷಾ ಸಂಬೋಧನೆಗೆ ವಿರೋಧ ವ್ಯಕ್ತಪಡಿಸಿದ ನಂತರ ಬ್ರಾಹ್ಮಣರಾದ ಮಂಜಭಟ್ಟರು 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ' ಎಂದು ಹೇಳುವುದರ ಮೂಲಕ ಅಪ್ಪಯ್ಯ ಎಂಬ ಸಂಬಂಧವಾಚಕವನ್ನು ಬಳಸಿ ಸಂಬೋಧಿಸುವುದನ್ನು ಗುರುತಿಸಬಹುದಾಗಿದೆ. ಹೀಗೆ ಬ್ರಾಹ್ಮಣರಾದ ಮಂಜಭಟ್ಟರ ಭಾಷಾ ಸಂಬೋಧನೆಯಲ್ಲಿ ಪ್ರಾದೇಶಿಕ ಭಾಷೆಯನ್ನು ಬಳಸುವುದನ್ನು ಕಾಣಬಹುದಾಗಿದೆ.

ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯ ಕೃತಿಗಳಲ್ಲಿ ಬಳಸಿರುವ ಪ್ರಾದೇಶಿಕ ಭಾಷೆಯಲ್ಲಿ ಪ್ರಾದೇಶಿಕ ಸಂಬಂಧ ವಾಚಕಗಳಾದ 'ಅವ್ವ', 'ಅಪ್ಪಯ್ಯ', ಎಂದು ಬಳಸಿರುವುದುನ್ನು ಕಾಣಬಹುದಾಗಿದೆ. ಹೀಗೆ ಬಳಸುವುದರ ಮೂಲಕ ವೈದಿಕ ಭಾಷಾ ರಚನೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ.

೪.೨.೩. ಸಂಬೋಧನೆಸೂಚಕ

ಭಾಷೆಯನ್ನು ಬಳಸುವಾಗ ಭಿನ್ನತೆಯನ್ನು ಕಾಣಬಹುದಾಗಿದೆ. ವರ್ಗ, ಲಿಂಗ, ಜಾತಿ, ವಯಸ್ಸುಗಳನ್ನು ಆಧರಿಸಿ ಸಂಬೋಧನೆ ಬಳಕೆಯನ್ನು ಮಾಡಲಾಗುತ್ತದೆ. ಭಾಷೆಯ ಘಟಕಗಳಲ್ಲಿ ಸಂಬೋಧನೆ ಒಂದು. ವ್ಯಕ್ತಿಗಳನ್ನು ಕರೆಯುವಾಗ ಇಲ್ಲವೆ ಕೂಗುವಾಗ ಉಪಯೋಗಿಸುವ ಪದಗಳನ್ನು ಸಂಬೋಧನಾ ಸೂಚಕಗಳು ಎಂದು ಕರೆಯಬಹುದಾಗಿದೆ. ಸಮಾಜದಲ್ಲಿ ವ್ಯಕ್ತಿಗಳ ನಡುವಿನ ಅಂತರ, ಸಾಮೀಪ್ಯವನ್ನು ಗುರುತಿಸಲು ಮತ್ತು ಪರಸ್ಪರ ಮಾತನಾಡಲು ಇರುವ ಮುಖ್ಯ ಭಾಷಾ ಸಾಮಗ್ರಿ ಎಂದರೆ ಸಂಬೋಧನಾ ಸೂಚಕಗಳಾಗಿವೆ. ಸಂಬೋಧನಾ ಸೂಚಕಗಳು ಸಾಮಾಜಿಕ ನೆಲೆಗಳಿಂದಲೇ ನಿರ್ದೇಶಿತವಾಗುತ್ತಿರುತ್ತವೆ ಮತ್ತು ನಿಯಂತ್ರಿತವಾಗಿರುತ್ತವೆ. ಹಾಗಾಗಿ ಪ್ರಸ್ತುತ ಉಪ ಅಧ್ಯಾಯದಲ್ಲಿ ಭಾಷಾ ಸಂಬೋಧನೆಯಲ್ಲಿ ವೈದಿಕ ವಿರೋಧ ಪ್ರಜ್ಞೆ ವ್ಯಕ್ತವಾಗಿರುವುದನ್ನು ಗುರುತಿಸುವುದಾಗಿದೆ.

ವೈದಿಕಶಾಹಿಯಿಂದ ಹುಟ್ಟಿದ ಸಾಮಾಜಿಕ ಏಣಿಶ್ರೇಣಿಯಿಂದ ಭಾಷಾ ಬಳಕೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಹಾಗಾಗಿ ಜಾತಿಯ ಕಾರಣದಿಂದ ಮೇಲುವರ್ಗದ ವ್ಯಕ್ತಿಗಳು ಕೆಳವರ್ಗದ ವ್ಯಕ್ತಿಗಳನ್ನು ಸಂಬೋಧಿಸುವಾಗ ಏಕವಚನದಿಂದಲೇ ಸಂಬೋಧಿಸುತ್ತಾರೆ. ಕೆಳವರ್ಗದ ವ್ಯಕ್ತಿಯು ವಯಸ್ಸಿನಯಲ್ಲಿ ದೊಡ್ಡವರಾಗಿದ್ದರೂ ಕೂಡ ಮೇಲುವರ್ಗದವರು ಕೆಳವರ್ಗದವರನ್ನು ಏಕವಚನದಲ್ಲಿ ಸಂಬೋಧಿಸುವುದನ್ನು ಕಾಣಬಹುದಾಗಿದೆ. ಸಂಬೋಧನೆ ತಾರತಮ್ಯವನ್ನು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬ್ರಾಹ್ಮಣರು ಏಕವಚನ ಸಂಬೋಧನೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಶೂದ್ರವರ್ಗಕ್ಕೆ ಸೇರಿದ ದ್ಯಾವಯ್ಯ ಮತ್ತು ಬ್ರಾಹ್ಮಣ ವರ್ಗಕ್ಕೆ ಸೇರಿದ ಮಂಜಭಟ್ಟರ ನಡುವೆ ನಡೆಯುವ ಸಂಬೋಧನೆಯಲ್ಲಿ ದ್ಯಾವಯ್ಯ ಮೇಲುವರ್ಗದ ವ್ಯಕ್ತಿಗಳ ಏಕವಚನ ಸಂಬೋಧನೆಯನ್ನು ವಿರೋಧಿಸುವುದನ್ನು ಗುರುತಿಸಬಹುದಾಗಿದೆ.

"ಅದನ್ನು ಚೆನ್ನಾಗಿ ಗಮನಿಸಿದ ಮಂಜಭಟ್ಟರು ತಮ್ಮ ಅಸಮಾಧಾನವನ್ನು ಒಂದಿನಿತೂ ಹೊರಗೆಡಹದೆ ಹುಸಿನಗು ನಗುತ್ತಾ ಮೂದಲಿಕೆಯ ದನಿಯಿಂದ "ಓಹೋಹೋ! ಏನು ದ್ಯಾವಣ್ಣನ ಸವಾರಿ ದೇವಸ್ಥಾನದವರೆಗೂ ಚಿತ್ತೈಸಿದೆಯಾಲ್ಲ!..... ಕಲ್ಲಯ್ಯ ಬಂದಿಲ್ಲೇನೋ? ಹುಷಾರಾಗಿದ್ದಾನಷ್ಟೇ?" ಎಂದರು.

ಬ್ರಾಹ್ಮಣರಾದ ಅವರು ಶೂದ್ರನಾದ ತನ್ನನ್ನು 'ದೇವಯ್ಯ' ಎಂದು ಸಂಬೋಧಿಸುವುದಕ್ಕೆ ಬದಲಾಗಿ, ತಮ್ಮ ಮೇಲುತನವನ್ನೂ ಹೆಚ್ಚುಗಾರಿಕೆಯನ್ನೂ ತಿಕ್ಕಿ ಉಜ್ಜಿ ತನ್ನ ಮನಸ್ಸಿಗೆ ತರುವ ಉದ್ದೇಶದಿಂದಲೆ ಕೀಳುಜನರನ್ನು ಕರೆಯುವ ರೀತಿಯಲ್ಲಿ 'ದ್ಯಾವಣ್ಣ' ಎಂದುದನ್ನೂ, ಆ ಪ್ರಾಂತದಲ್ಲೆಲ್ಲ ದೊಡ್ಡ ಮನುಷ್ಯರೆಂದು ಸಂಭಾವಿಸತರಾಗಿದ್ದು ಹೆಚ್ಚು ಕಡಿಮೆ ಅವರಷ್ಟೆ ವಯಸ್ಕರಾಗಿದ್ದು ತನ್ನ ತಂದೆಯನ್ನೂ ಗೌರವಸೂಚಕ ಬಹುವಚನದಿಂದ 'ಕಲ್ಲಯ್ಯಗೌಡರು; 'ಹುಷಾರಾಗಿದ್ದಾರೆಯೆ? ಎನ್ನದೆ 'ಕಲ್ಲಯ್ಯ' 'ಹುಷಾರಾಗಿದ್ದಾನೆ'? ಎಂದು ಏಕವಚನದಿಂದಲೆ ಮಾತನಾಡಿಸಿದುದನ್ನೂ ಗಮನಿಸಿದ ದೇವಯ್ಯನ ಆತ್ಮಗೌರವ ಸೆಟೆತು ನಿಂತು, 'ಸುಳ್ಳಾದರೂ ಚಿಂತೆಯಿಲ್ಲ ಈ ಹಾರುವನಿಗೆ ಸರಿಯಾಗಿಯೆ ಉತ್ತರ ಹೇಳುತ್ತೇನೆ' ಎಂದು ನಿಶ್ಚಯಿಸಿ ಲಘುವಾಗಿ ನಗುತ್ತಾ ಹೇಳಿದು: "ಯಾರು? ಹಳೇಪೈಕದ ಕಲ್ಲನಾ? ಅಂವ ಕಳ್ಳಬಗನಿ ಕಳ್ಳು ಇಳಿಸಾಕೆ ಕಾಡಿಗೆ ಹೋಗಿರಬೇಕು!"

"ಅಲ್ಲ, ಮಾರಾಯಾ; 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ?" ಅಂತ ಕೇಳಿದ್ದು... ಏನೋ ನಾವು ಹುಡುಗರಾಗಿದ್ದಾಗಿನಿಂದ ನಮ್ಮಿಬ್ಬರದ್ದೂ ಪರಿಚಯ; ಏಕವಚನದಲೇ ಮಾತಾಡಿಸೋದು ರೂಢಿಯಾಗಿ ಬಿಟ್ಟಿದೆ. ಈಗಿನ ಹುಡುಗರಿಗೆ ಅದೆಲ್ಲಾ ಹಿಡಿಸೋದಿಲ್ಲ, ಅರ್ಥವಾಗೋದಿಲ್ಲಾ. ಅವಮಾನವಾಯ್ತು ಅಂತಾ ತಿಳಿಕೋತಾರೆ..." ಸ್ವಲ್ಪ ಅಪ್ರತಿಭರಾದ ಮಂಜಭಟ್ಟರು ಕ್ಷಮಾ ಯಾಚನೆಯ ಭಂಗಿಯಲ್ಲಿ ಹೇಳಿದ್ದರೂ ದೇವಯ್ಯ ತನ್ನ ಮುನ್ನಿನ ಸಂಕಲ್ಪವನ್ನು ಕೈಬಿಡದೆ ಮುಂದುವರೆದನು:

"ಅಪ್ಪಯ್ಯನಾ? ...ನಾನು ಏನೋ ಅಂತಿದ್ದೆ!.. ತಪ್ಪಯ್ತು!... ಅವರೂ ಮೇಗರೊಳ್ಳಿ ಮಿಷನ್ ಸ್ಕೂಲಿಗೆ ಹೋದರು."

ಮೇಲಿನ ಉದಾಹರಣೆಯಲ್ಲಿ ಮಂಜಭಟ್ಟರು ಕೆಳವರ್ಗದ ಕಲ್ಲಯ್ಯಗೌಡರನ್ನು 'ಕಲ್ಲಯ್ಯ ಬಂದಿಲ್ಲೇನೋ?' ಎಂದು ಏಕವಚನದಿಂದ ಸಂಬೋಧಿಸುತ್ತಾರೆ. ನಂತರ 'ನಿನ್ನ ಅಪ್ಪಯ್ಯ ಕಲ್ಲಯ್ಯಗೌಡರು ಹುಷಾರಾಗಿದ್ದಾರೆಯೇ' ಎಂದು ಬಹುವಚನದಿಂದ ಸಂಬೋಧಿಸುವುದನ್ನು ಕಾಣಬಹುದಾಗಿದೆ. ಹೀಗೆ ಭಾಷಾ ಸಂಬೋಧನೆಯಲ್ಲಿ ಬ್ರಾಹ್ಮಣರು ಕೆಳವರ್ಗದ ಜನರ ಮೇಲೆ ಬಳಸುತ್ತಿದ್ದ ಏಕವಚನ ಸಂಬೋಧನೆಯನ್ನು ವಿರೋಧಿಸುವುದನ್ನು ಗುರುತಿಸಬಹುದಾಗಿದೆ.[೨೩]

ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಬರುವ ಬ್ರಾಹ್ಮಣನಾದ ಆಚಾರಿಯನ್ನು ಕೆಳವರ್ಗದ ಜನರು ಬಹುವಚನದಿಂದ ಕರೆಯುತ್ತಿದ್ದರು ಮತ್ತು ಬಹುವಚನದಲ್ಲಿ ಸಂಬೋಧಿಸಿ ಮಾತನಾಡುತ್ತಿದ್ದರು. "ಆಚಾರಿಯದು ಮಹಾಪ್ರಳಯಾಂತಕ ತಲೆ. ಅವನನ್ನು ತಲೆಬಿಸಿ ಆಚಾರಿ ಎಂದೇ ಎಲ್ಲಾ ಕರೆಯುತ್ತಿದ್ದರು. ಆಚಾರಿಯ ಕುತಂತ್ರ ಬುದ್ಧಿಗಾಗಿ ಹೆದರಿಯೇ ಬಹುವಚನದಲ್ಲಿ ಅವನನ್ನು ಮಾತಾಡಿಸುತ್ತಿದ್ದರು."[೨೪] ಹೀಗೆ ಮೇಲುವರ್ಗದ ಬ್ರಾಹ್ಮಣರನ್ನು ಕೆಳವರ್ಗದವರು ಬಹುವಚನದಲ್ಲಿ ಮಾತನಾಡಿಸುತ್ತಿದ್ದಾರೆ. ಆದರೆ ಕೆಳವರ್ಗದ ಪಾತ್ರವಾದ ಕೃಷ್ಣೇಗೌಡ ಬ್ರಾಹ್ಮಣನಾದ ಆಚಾರಿಯನ್ನು ಏಕವಚನದಲ್ಲಿ "ಏನಯ್ಯಾ ಆಚಾರಿ?"[೨೫] ಎಂದು ಮಾತನಾಡಿಸುತ್ತಾನೆ. ಈ ಕಾದಂಬರಿಯಲ್ಲಿ ಆಚಾರಿಯನ್ನು ಏಕವಚನದಲ್ಲಿಯೇ ಸಂಬೋಧಿಸಿರುವುದನ್ನು ಗುರುತಿಸಬಹುದಾಗಿದೆ. 'ತಲೆಬಿಸಿ ಆಚಾರಿ' ಎಂದು ಸಂಬೋಧಿಸಿರುವುದನ್ನು ಕಾಣಬಹುದಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕೆಳವರ್ಗದ ಹುಡುಗರಾದ ತಿಮ್ಮು ಮತ್ತು ಧರ್ಮು ಇವರ ನಡುವೆ ನಡೆಯುವ ಭಾಷಾ ಸಂಭಾಷಣೆಯಲ್ಲಿ ಬ್ರಾಹ್ಮಣರ ಹೆಂಗಸನ್ನು ಬೋಳಮ್ಮ, ಬೋಳು ಮುಂಡೆ ಎಂದು ಸಂಬೋಧಿಸುವುದನ್ನು ಕಾಣಬಹುದಾಗಿದೆ.

"ತಿಮ್ಮು ಮೆಲ್ಲಗೆ "ಯಾರೋ ಅದೂ? ಗಂಡಸೋ? ಹೆಂಗಸೋ?"

"ಹೆಂಗಸು ಕಣೋ! ಬೋಳುಹಾರ್ತಿ!...ಅವಳ ಕಡೇನೇ ನೋಡಬ್ಯಾಡೋ, ಬಯ್ತಾಳಂತೆ" ಎಂದು ಕಾಡು, ಆದಷ್ಟು ಮೆಲ್ಲಗೆ.

ಆದರೆ ಸಮೀಪಿಸಿದ್ದ ಆ ಬ್ರಾಹ್ಮಣ ವಿಧವೆಗೆ ಅದು ಕೇಳಿಸಿತೆಂದು ತೋರುತ್ತದೆ, ಇವರ ಕಡೆ ದುರುದುರುದುರು ಕಣ್ಣುಬಿಟ್ಟು, ಬಾಯಲ್ಲಿ ಏನೋ ಶಾಪ ಹಾಕುತ್ತಾ, ಏದುತ್ತಾ ಮೇಲಕ್ಕೆ ಏರಿ ಮೆಟ್ಟಿಲು ಹತ್ತಿ ಹೋದಳು.

"ಹಾಂಗಂದ್ರೆ?' ತಿಮ್ಮು ಮತ್ತೆ ಪ್ರಶ್ನಿಸಿದನು, ಅವಳು ದೂರ ಹೋದಮೇಲೆ.

"ಬೋಳಮ್ಮ ಕಣೋ....ಬೋಳು ಮುಂಡೆ!"[೨೬]

ಮೇಲಿನ ಉದಾಹರಣೆಯಲ್ಲಿ ವ್ಯಕ್ತವಾಗಿರುವ ಭಾಷಾ ಸಂಬೋಧನೆಯಲ್ಲಿ ವೈದಿಕ ಧರ್ಮದ ಅನಿಷ್ಟ ಪದ್ಧತಿಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಹಾಗೂ ಬ್ರಾಹ್ಮಣ ವಿಧವೆಯನ್ನು ಕೆಳವರ್ಗದ ಜನರು ಸಂಬೋಧಿಸುವಾಗ ಬೋಳಮ್ಮ, ಬೋಳು ಮುಂಡೆ ಎಂದು ಸಂಬೋಧಿಸುವುದನ್ನು ಕಾಣಬಹುದಾಗಿದೆ.

ವರ್ಗ ಮತ್ತು ಜಾತಿಯ ತಾರತಮ್ಯದಿಂದ ಕೆಳವರ್ಗದ ಜನರಿಗೆ ಬ್ರಾಹ್ಮಣರು ಬಳಸುತ್ತಿದ್ದ ಏಕವಚನ ಸಂಬೋಧನೆ ಭಾಷೆಯನ್ನು ಕೆಳವರ್ಗದ ಜನರು ವಿರೋಧಿಸುವುದನ್ನು ಕಾಣಬಹುದಾಗಿದೆ. ಹಾಗೆಯೇ ಬ್ರಾಹ್ಮಣರನ್ನು ಕೆಳವರ್ಗದ ಜನರು ಏಕವಚನದಿಂದ ಸಂಬೋಧಿಸುವುದನ್ನು ಕಾಣಬಹುದು. ಭಾಷಾ ಸಂಬೋಧನೆಯಲ್ಲಿ 'ಬೋಳಮ್ಮ', 'ಬೋಳು ಮುಂಡೆ', 'ಹರಕಲು ಕಚ್ಚೆ ಆಚಾರಿ' ಎಂದು ಬೈಗುಳ ರೂಪದಲ್ಲಿ ಸಂಬೋಧಿಸಿರುವುದನ್ನು ಕಾಣಬಹುದಾಗಿದೆ. ಹೀಗೆ ಭಾಷಾ ಸಂಬೋಧನೆಯ ಮೂಲಕ ವೈದಿಕ ವಿರೋಧವನ್ನು ವ್ಯಕ್ತಪಡಿಸಿರುವುದನ್ನು ಗುರುತಿಸಬಹುದಾಗಿದೆ.

೪.೨.೪. ಬೈಗುಳಗಳು

ಮನುಷ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಒಂದು ಮಾಧ್ಯಮವಾಗಿ ಮಾಡಿಕೊಂಡರು. ಹಾಗಾಗಿ ಭಾಷೆಯನ್ನು ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಜಾತಿ ಶ್ರೇಣೀಕರಣ, ಲಿಂಗತಾರತಮ್ಯ, ಮಡಿ ಮೈಲಿಗೆ, ಭಾಷಾಭಿನ್ನತೆ ಮತ್ತು ಪ್ರಾದೇಶಿಕತೆಗಳು ಹುದುಗಿಸಿಕೊಂಡಿದೆ. ಹಾಗೆಯೇ ಬೈಗುಳಗಳು ಕೂಡ ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ. ಬೈಗುಳಗಳು ಮಾತಿನ ಶೈಲಿಯ ಒಂದು ಭಾಗವಾಗಿವೆದೆ. ಸಮಾಜದಲ್ಲಿ ಯಾವುದೇ ವರ್ಗಕ್ಕೆ ಸೇರಿದ ವ್ಯಕ್ತಿಗಳು ತಮ್ಮ ಜೀವನದ ಅನೇಕ ಸಂದರ್ಭಗಳಲ್ಲಿ ಹಲವಾರು ಬಗೆಯ ಬೈಗುಳಗಳನ್ನು ಬಳಸಿರುತ್ತಾರೆ, ಬೈಗುಳಗಳನ್ನು ಕೇಳಿಸಿಕೊಂಡಿರುತ್ತಾರೆ ಅಥವಾ ಬೈಗುಳಗಳಿಗೆ ಒಳಗಾಗುತ್ತಾರೆ. ಬೈಗುಳಗಳನ್ನು ಆಡುವ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳು, ಕಟ್ಟುಪಾಡುಗಳು ಮತ್ತು ನಡವಳಿಕೆಗಳು ಅವರ ಬದುಕಿನ ಮೌಲ್ಯಗಳನ್ನು ತಿಳಿಸುತ್ತವೆ.

ಬೈಗುಳಗಳನ್ನು ಜರಿಯುವಿಕೆ, ನಿಂದನೆ, ತೆಗಳಿಕೆ ಎಂಬ ಅರ್ಥಗಳಲ್ಲಿ ಗುರುತಿಸಲಾಗಿದೆ. ಬೈಗುಳಗಳು ಸಮಾಜದಲ್ಲಿ ಅತ್ಯಂತ ಹರಿತವಾದ ಪರಿಣಾಮವನ್ನುಂಟು ಮಾಡುತ್ತವೆ. ಮಾತ್ಸರ್ಯ, ರೋಷ, ಅಸೂಯೆ, ಸಂಕಟ, ಭೀತಿ, ವ್ಯಂಗ್ಯಗಳ ಹಿನ್ನೆಲೆಯಲ್ಲಿ ಬೈಗುಳಗಳು ಹುಟ್ಟಿಕೊಳ್ಳುತ್ತವೆ. ಹಾಗೂ ಆಕ್ರಮಣಶೀಲತೆಯಿಂದ ಕೂಡಿರುತ್ತವೆ. ಬೈಗುಳಗಳು ಅತ್ಯಂತ ತೀಕ್ಷ್ಣವಾದ ಪರಿಣಾಮವನ್ನುಂಟು ಮಾಡುವಂತಹ ಶಕ್ತಿಯನ್ನು ಹೊಂದಿರುತ್ತವೆ. ವಸ್ತುಗಳನ್ನು ಮತ್ತು ವ್ಯಕ್ತಿಗಳನ್ನು ತೆಗಳುವುದಕ್ಕಾಗಿ, ಮೂದಲಿಸುವುದಕ್ಕಾಗಿ, ಶಪಿಸುವುದಕ್ಕಾಗಿ ಮತ್ತು ನೋಯಿಸುವುದಕ್ಕಾಗಿ ಆಡುನುಡಿಯಲ್ಲಿ ವ್ಯಕ್ತವಾಗುವ ಭಾಷೆಯನ್ನು ಬೈಗುಳಗಳು ಎಂದು ಕರೆಯುತ್ತಾರೆ. ಉದಾಹರಣೆಗೆ ನನ್ನ ಸವತಿ, ನೀಚಲೌಡಿಮಗ, ಮುಂಡೆಮಗ, ಲೋಫರ್ ನನ್ನ ಮಗ. ಹೀಗೆ ಜನರ ಮನಸ್ಸಿನಿಂದ ನೇರವಾಗಿ ಹೊರಬೀಳುವ ನುಡಿಗಳಾಗಿವೆ.

ಈ ಉಪ ಅಧ್ಯಾಯದಲ್ಲಿ ಬೈಗುಳಗಳನ್ನು ವೈದಿಕ ವಿರೋಧಿ ಹಿನ್ನೆಲೆಯಲ್ಲಿ ನೋಡಲಾಗಿದೆ. ಬ್ರಾಹ್ಮಣರ ಆಚಾರ, ಸಂಪ್ರದಾಯ ಮತ್ತು ನಂಬಿಕೆಗಳನ್ನು ಒಳಗೊಂಡು ಹುಟ್ಟಿಕೊಂಡ ಪರಿಕಲ್ಪನೆಗಳನ್ನು ಬಳಸಿ ಕೆಳವರ್ಗದ ಜನರು ಬೈಯುತ್ತಾರೆ. ಉದಾಹರಣೆಗೆ ಮುಂಡೆಮಗ, ಬೋಳೀಮಗನೆ, ಬೋಳೀಮಕ್ಕಳ, ಮುಂಡೆಗಂಡ್ರು, ಹರಕಲು ಕಚ್ಚೆ ಆಚಾರಿ, ಪಾಪಿ ಮುಂಡೆ, ತುತ್ ಬ್ರಾಮರಂತೆ. ನರಿಗಳು, ಕಲ್ಮಂಡೆಮಕ್ಕಳು,

'ಮುಂಡೆ' ಎಂಬ ಪದವು ಸಂಸ್ಕೃತ ಪದವಾಗಿದೆ. ಬ್ರಾಹ್ಮಣರ ಆಚರಣೆಯ ಹಿನ್ನೆಲೆಯಲ್ಲಿ ಬಂದಿದೆ. ಬ್ರಾಹ್ಮಣ ಸಮುದಾಯದಲ್ಲಿ ಗಂಡನನ್ನು ಕಳೆದುಕೊಂಡವಳು ಅಥವಾ ವಿಧವೆಯನ್ನು ಕರೆಯುವ ಹೆಸರಾಗಿದೆ. ಹಾಗಾಗಿ ವೈದಿಕ ಧರ್ಮದಲ್ಲಿ ನಂಬಿಕೆ ಮತ್ತು ಆಚರಣೆಯ ಭಾಗವಾಗಿ ಬಳಸುವ ಮುಂಡೆ ಎಂಬ ಪದವನ್ನು ಬೈಗುಳದ ರೂಪದಲ್ಲಿ ಬಳಸಲಾಗಿದೆ. ಬ್ರಾಹ್ಮಣರ ಸಮುದಾಯದಲ್ಲಿ ಗಂಡ ಸತ್ತ ಮಹಿಳೆಯರಿಗೆ ತಲೆ ಕೂದಲು ತೆಗೆಯಲಾಗುವುದು. ಹಾಗೂ ಹೆಣ್ಣು ಯಾವುದೇ ಸೌಂದರ್ಯಕ್ಕೆ ಸಂಬಂಧಿಸಿದ ವಸ್ತುಗಳನ್ನು ಬಳಸುವಂತಿಲ್ಲ. ಯಾವುದೇ ಶುಭಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಹೀಗೆ ಬ್ರಾಹ್ಮಣರ ಸಮುದಾಯದಲ್ಲಿ ವಿಧವೆ ಪದ್ಧತಿಯು ಅನಿಷ್ಟ ಪದ್ಧತಿಯಾಗಿ ಉಳಿದುಕೊಂಡಿದೆ. ಹಾಗಾಗಿ ಈ ಪದ್ಧತಿಯು ಕೆಳವರ್ಗದ ಜನರ ಸಮುದಾಯದಲ್ಲಿ ಇಲ್ಲ. ಹಾಗಾಗಿ ಈ ಅನಿಷ್ಟ ಪದ್ಧತಿಯನ್ನು ಭಾಷಾ ಸಂಬೋಧನೆಯಲ್ಲಿ ಬೈಗುಳದ ರೂಪದಲ್ಲಿ ಬಳಸುವುದರ ಮೂಲಕ ವೈದಿಕ ವಿರೋಧವನ್ನು ವ್ಯಕ್ತಪಡಿಸುವುದನ್ನು ಗುರುತಿಸಬಹುದಾಗಿದೆ. ಲೇಖಕರು ಕಥೆ, ಕಾದಂಬರಿ ನಿರೂಪಣೆಯಲ್ಲಿ ಬೈಗುಳಗಳನ್ನು ಬಳಸಿದ್ದಾರೆ. ಈ ಕೆಳಗಿನ ಉಲ್ಲೇಖದಲ್ಲಿ ಕಾಣಬಹುದು.

ಕುವೆಂಪು ಕಾದಂಬರಿಯಲ್ಲಿ ಬಳಕೆಯಾಗಿರುವ ಬೈಗುಳಗಳು:

"ತಿಮ್ಮು ಮೆಲ್ಲಗೆ "ಯಾರೋ ಅದೂ? ಗಂಡಸೋ? ಹೆಂಗಸೋ?"

"ಹೆಂಗಸು ಕಣೋ! ಬೋಳುಹಾರ್ತಿ!...ಅವಳ ಕಡೇನೇ ನೋಡಬ್ಯಾಡೋ, ಬಯ್ತಾಳಂತೆ" ಎಂದು ಕಾಡು, ಆದಷ್ಟು ಮೆಲ್ಲಗೆ.

ಆದರೆ ಸಮೀಪಿಸಿದ್ದ ಆ ಬ್ರಾಹ್ಮಣ ವಿಧವೆಗೆ ಅದು ಕೇಳಿಸಿತೆಂದು ತೋರುತ್ತದೆ, ಇವರ ಕಡೆ ದುರುದುರುದುರು ಕಣ್ಣುಬಿಟ್ಟು, ಬಾಯಲ್ಲಿ ಏನೋ ಶಾಪ ಹಾಕುತ್ತಾ, ಏದುತ್ತಾ ಮೇಲಕ್ಕೆ ಏರಿ ಮೆಟ್ಟಲು ಹತ್ತಿ ಹೋದಳು.

"ಹಾಂಗಂದ್ರೆ?' ತಿಮ್ಮು ಮತ್ತೆ ಪ್ರಶ್ನಿಸಿದನು, ಅವಳು ದೂರ ಹೋದಮೇಲೆ.

"ಬೋಳಮ್ಮ ಕಣೋ....ಬೋಳು ಮುಂಡೆ!"

"ಛೇ! ಯಾಕೋ ಬಯ್ತೀಯಾ?"

"ಏೀ, ಬಯ್ಯದಲ್ಲ ಕನೋ; ಬ್ರಾಂಬ್ರಲ್ಲಿ ಗಂಡ ಸತ್ತ ಮುಂಡೇರಿಗೆ ಮಂಡೆ ಬೋಳಿಸ್ತಾರೆ, ಅದ್ಕೇ 'ಬೋಳುಮುಂಡೆ' ಅನ್ನಾದು!" ಮಾತಾಡುತ್ತಲೆ ಎಲ್ಲರ ಜೊತೆ ಇವರು ಹೊಳೆಗೆ ಇಳಿದರು.

ಧರ್ಮು ಏನೊಂದನ್ನೂ ಮಾತನಾಡದೆ ಚಿಂತಾಗ್ರಸ್ತನಾಗಿ ಮೆಲ್ಲಗೆ ಮೆಟ್ಟಲು ಇಳಿಯುತ್ತಿದ್ದನು. ಕಾಡು 'ಬೋಳುಹಾರ್ತಿ' ಎನ್ನುವುದಕ್ಕೆ ಕೊಟ್ಟ ವಿವರಣೆಯನ್ನು ಕೇಳಿ ಅವನಿಗೆ ಗುಂಡು ತನ್ನೆದೆಗೇ ತಗುಲಿದಂತೆ ಆಗಿತ್ತು. ತಿರುಪತಿಗೆ ಹೋಗಿದ್ದ ತನ್ನ ಅಪ್ಪಯ್ಯ ಸತ್ತಿದ್ದರೆ ಅಥವಾ ಸತ್ತರೆ, ತನ್ನ ಅವ್ವನೂ ಹೀಗೆಯೆ ಮಂಡೆ ಬೋಳಿಸಿಕೊಂಡು ಕೆಂಪು ಸೀರೆ ಉಟ್ಟುಕೊಂಡು ವಿಕಾರವಾಗುತ್ತಾಳೆಯೊ

ಏನೊ ಎಂಬೊಂದು ಮಹಾ ಸಂಕಟಕರ ಭೀತಿ ಅವನ ಹೃದಯದಲ್ಲಿ ಸಂಚರಿಸತೊಡಗಿತ್ತು. ಮುಂದೆ ಹೆಂಗಸರ ಜೊತೆ ತಂಗಿಯ ಮಗು ಚೆಲುವಯ್ಯನನ್ನು ಎತ್ತಿಕೊಂಡು ಮೆಟ್ಟಿಲಿಳಿಯುತ್ತಿದ್ದ ತನ್ನ ಮಾತೃಮೂರ್ತಿಯನ್ನು ನೋಡಿದನು. ಅವನಿಗೆ ಎದೆ ಕರಗಿದಂತಾಯ್ತು.

ಹೆದರಿ ಹೆದರಿ ಪ್ರಶ್ನಿಸಿದನು "ಕಾಡಣ್ಣಯ್ಯ, ನಮ್ಮಲ್ಲಿಯೂ ಹೀಂಗೆ ಮಾಡ್ತಾರೇನೋ, ಗಂಡ ಸತ್ತೆ?"

"ಥೂಥೂಥೂ! ಎಂಥಾ ಮಾತಾಡ್ತೀಯೊ? ನಮ್ಮಲ್ಲಿ ಯಾರಿಗೂ ಹೀಂಗೆ ಮಾಡದಿಲ್ಲೊ! ಬ್ರಾಂಬ್ರಾ ಜಾತೀಲಿ ಮಾತ್ರ ಹಂಗೆ ಮಾಡಾದು."[೨೭] ಹೀಗೆ ಬ್ರಾಹ್ಮಣರ ಅನಿಷ್ಟ ಪದ್ಧತಿಯನ್ನು ಕೆಳವರ್ಗದ ಜನರು ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ಬ್ರಾಹ್ಮಣರ ಸಂಪ್ರದಾಯದಲ್ಲಿ ಇರುವ ಆಚರಣೆ ಬೈಗುಳ ಸ್ವರೂಪ ಪಡೆದಿರುವುದನ್ನು ಕಾಣಬಹುದು. ತಿಮ್ಮು ಮತ್ತು ಕಾಡು ಮಕ್ಕಳ ಸಂಭಾಷಣೆಯಲ್ಲಿ 'ಬೋಳಮ್ಮ ಕಣೋ.. ಬೋಳು ಮುಂಡೇ!' ' ಛೇ! ಯಾಕೋ ಬಯ್ತೀಯಾ?' ಎಂಬ ಮಾತುಗಳನ್ನು ಗಮನಿಸಿದಾಗ ಬ್ರಾಹ್ಮಣರ ಸಂಪ್ರದಾಯಗಳು ಬೈಗುಳ ಸ್ವರೂಪ ಪಡೆದಿರುವುದನ್ನು ಗುರುತಿಸಬಹುದಾಗಿದೆ.

"ಇನ್ನೊಂದು ಗಂಟೇನೆ ಬೇಕು ಅಂತ ಕಾಣ್ತದೆ ಎಲ್ಲಾ ತೆಗೆದು ಪೂರೈಸಾಕೆ! ಹ್ಹಹ್ಹ! ಹೊಲೆ ಮುಂಡೇಗಂಡ!"[೨೮]

"ದೂರದಲ್ಲಿ ಹೋಗುತ್ತಿದ್ದ ಬೈರನನ್ನು ಕಂಡು "ಕರೆಯೋ ಅವನ್ನ, ಆ ಬೈರನ್ನ. ಹೊರಟನಲ್ಲ, ದುಣ್ಣಮುಂಡೆಗಂಡ, ಎಲ್ಲಿಗೊ ಹಡಬೆ ತಿರುಗಕೆ!"[೨೯]

"ಹೆಡ್ತಿ ತಿಂದುಕೊಂಡ ಲೌಡೀಮಗನೆ, ಕಂಡೋರ ಹೆಂಡಿರನ್ನೆಲ್ಲ ಕೆಡಿಸಿ, ಬಾಯಿಗೆ ಬಂದಹಾಂಗೆ ಮಾತಾಡ್ತೀಯಾ? ದವಡೇಲಿ ಹಲ್ಲೊಂದು ಇಲ್ಲದ್ಹಾಂಗೆ ಮಾಡೇನು? ಹುಸಾರ್, ಷಂಡಮುಂಡೇಗಂಡ!"[೩೦]

"ಮೂವರೂ ಮತ್ತೆ ಮುಂದುವರಿದರು. ಹೆಬ್ಬಾಗಿಲು ಬಳಿಗೆ ಬರಲು ಒಳಗಿನಿಂದ "ಅಯ್ಯೋ ದೇವರೆ, ನಿನ್ನ ಗುಡಿ ಹಾಳಾಗ!......ನಾನೇನು ಮಾಡಿದ್ದೇನೋ ನಿನಗೆ?.... ಅವರನ್ನು ತಿಂದುಕೊಂಡಿದ್ದೂ ಸಾಲದೆ, ಇದ್ದೊಬ್ಬ ಮಗನ ಬೆನ್ನು ಮುರಿದೇನೋ!... ನಿನ್ನ ಗುಡಿ ಹಾಳಾಗ!" ಎಂದು ಮೊದಲಾಗಿ ಬೈಗುಳವೂ ಆರ್ತನಾದವೂ ಭಯಂಕರವಾಗಿ ಕೇಳಿಸಿತು.[೩೧]

"ಆಕಾಶವೆ ತಲೆಯ ಮೇಲೆ ಜರಿದು ಬಿದ್ದಹಾಗಾಯಿತು. ಅಯ್ಯೋ ಎಂದು ಹಣೆ ಹಣೆ ಬಡಿದುಕೊಂಡು ಶಾಪ ಹಾಕತೊಡಗಿದನು. ದುಃಖ ಕೋಪ ನಿರಾಶೆಗಳಿಂದ ಹಲ್ಲುಹಲ್ಲು ಕಡಿಯುತ್ತ 'ಅಯ್ಯೋ ಯಾವ ಮುಂಡೇಮಕ್ಳೊ ನನ್ನ.... ತಿಂದೋರು? ನಿಮ್ಮ ಗುಡಿ ಹಾಳಾಗ! ನಿಮ್ಮ ಹೆಂಡಿರು ಮುಂಡೇರಾಗಿ ಹೋಗ !... ನಿಮ್ಮ ಬಾಯಿಗೆ ಮಣ್ಣಾಗ! ನಿಮ್ಮ ಗುದ್ದಿಗೆ ತುಂಬಿಹೋಗ!' ಎಂದು ಕಾಡೆಲ್ಲ ಮೊಳಗುವಂತೆ ಒರಲುತ್ತಾ ಬೈಯುತ್ತಾ ಮನೆಗೆ ಬರುತ್ತಿದನು."[೩೨]

ಈ ಮೇಲಿನ ಉದ್ಧರಣೆಯಲ್ಲಿ ಇರುವ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಮುಂಡೇಗಂಡ, ದುಣ್ಣಮುಂಡೆಗಂಡ, ಷಂಡಮುಂಡೇಗಂಡ, ಮುಂಡೇಮಕ್ಳೋ, ಮುಂಡೇರಾಗಿ ಹೋಗ ಎಂಬ ಬೈಗುಳಗಳು ವೈದಿಕ ಆಚರಣೆಯನ್ನು ಉದ್ದೇಶಿಸಿ ಬೈಯಲಾಗಿದೆ. ಗುಡಿ ಹಾಳಾಗ ಎಂಬ ಬೈಗುಳವು ವೈದಿಕರ ಗುಡಿಸಂಸ್ಕೃತಿಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಬಳಕೆಯಾಗಿದೆ.

ಪೂರ್ಣಚಂದ್ರ ತೇಜಸ್ವಿ ಅವರು ಕಥಾ ನಿರೂಪಣೆಯಲ್ಲಿ ಬಳಸಿರುವ ಬೈಗುಳಗಳು:

"ಏ ಹೋಗೋ ಹೋಗೋ. ಈ ಪೋಲಿ ಮುಂಡೆಗಂಡ್ರು ಶಾಲೆ ಮಕ್ಕಳನ್ನ ಹಿಡಿಯಾಕಾಗ್ದೆ ಈಡು ಉಡಾಸಿ ಬಿಡ್ತಾನಂತೆ?"[೩೩]

"ಥೂ ಪೋಲಿಸ್ನೋರುಂಟು ಅವರುಂಟು. ನಮಗ್ಯಾಕೆ ಈ ದುಷ್ಟಮುಂಡೇಗಂಡ್ರ ಸಾವಾಸ"[೩೪]

"ಆ ಸೂಳೆಮಗ ಹರಕಲು ಕಚ್ಚೆ ಆಚಾರಿ ಎದುರಾಳಿಯಾಗಿರೋವರೆಗೆ ನಾವು ತೀರಾ ಹುಷಾರಾಗಿರಬೇಕು!"[೩೫]

"ಪ್ರಾಣಕ್ಕೆ ಪ್ರಾಣ, ಬೋಳಿಮಗನೆ ನಾನಿದೀನಿ ಬಾ! ದೆವ್ವ ನಿನ್ನ ಸಾಯಿಸೋದಕ್ಕೆ ಮೊದಲು ನನ್ನ ಸಾಯಿಸಬೇಕು"[೩೬]

"ಪಾಪಿ ಮುಂಡೆ! ಏನಾದರೂ ಸಾಯ್ಲಿ."[೩೭]

"ಜನಗಳೂ ಸಹ ಅವರ ಮೇಲೆ ಕೊಂಚವೂ ಸಹನುಭೂತಿ ತೋರಿಸೆ "ಆ ಮುಂಡೇಗಂಡ್ರಿಗೆ ಹಾಗೇ ಆಗಬೇಕು."[೩೮]

"ಅದು ಹ್ಯಾಗೆ ಸಾರ್. ಆ ಕಳ್ಮುಂಡೆಮಕ್ಕಳು ಸ್ಕೂಲು ಹುಡುಗರದೇ ಆ ಕಿತಾಪತಿ!"[೩೯]

"ನಮ್ಮ ಮನೇಲಿ ನೋಡಿದರೆ ನನ್ನ ತಾಯಿ ವಂಶ ಬೆಳೀಲಿಲ್ಲ ಈ ಮುಂಡೇಮಗನಿಂದ ಅಂತ ಹೀನಾಮಾನ ಬಯ್ತಾಳೆ."[೪೦]

"ಮಹಾರಾಯ ಮಾತಾಡಿದ್ದಕ್ಕೆ ಈಗ ಕೈಹಾಕಿ ಆಗಿದೆ. ಆ ಮುಂಡೇಗಂಡನಿಗೆ ಮದುವೇಂತ ಒಂದು ಸಾರಿ ಮಾಡಿ ಮುಗಿಸಿ ಬಿಡಿರಿ"[೪೧]

"ಆದರೆ ಈಗ ಈ ಮುಂಡಾನ ಸರಿಯಾಗಿ ಮುಂಡ ಮೋಚಿದ್ದ"[೪೨]

ಮೇಲೆ ಉಲ್ಲೇಖಿಸಿದ ಉದ್ಧರಣೆಯು ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಮುಂಡೆ ಎಂಬ ಬೈಗುಳ ಬಳಕೆಯಾಗಿರುವುದನ್ನು ಗುರುತಿಸಬಹುದಾಗಿದೆ. ನಾಮಪದಗಳು ಸೇರಿಸಿ ಬೈಗುಳಗಳು ರೂಪಗೊಂಡಿರುವುದನ್ನು ಕಾಣಬಹುದಾಗಿದೆ.

ದೇವನೂರ ಮಹಾದೇವ ಅವರು ಕಥಾ ನಿರೂಪಣೆಯಲ್ಲಿ ಬಳಸಿರುವ ಬೈಗುಳಗಳು:

"ಭೂಮಗ ತನ್ನ ದಾರದ ಎಳೆಗಳನು ಇಳಿಬುಡ್ತಾ ಹಾಗೂ ಪಸು ಪ್ರಾಣಾದಿಗಳೂ ಬಾರದಿರಲು

ದಿಗಲುಳ್ಳವರಾಗಿ ಗೌಡಳೂ ಗೌಡತೀರೂ ಗಂಡ್ಸತ್ತ ಮುಂಡರಾದಿಯಾಗಿ ಜಮಾಯಿಸಿ ಧೂಳು ಕಾಣಲು ತವುಕವಾಗಿರಲು"[೪೩]

"ಅತ್ತೆಮ್ಮೊ ನೀವು ಹಿಂಗೇ ಅಂತಾ ಇರಿ. ನಾನು ಹುಚ್ಚತ್ತಿದ್ದರೆ ಹುಚ್ಚುಮುಂಡೆ"[೪೪]

ಈ ಮೇಲಿನ ಉದ್ಧರಣೆಯಲ್ಲಿ ಬಳಕೆಯಾಗಿರುವ ಗಂಡ್ಸತ್ತ ಮುಂಡರಾದಿಯಾಗಿ ಮತ್ತು ಹುಚ್ಚುಮುಂಡೆ ಎಂಬ ಬೈಗುಳಗಳು ವೈದಿಕ ಆಚರಣೆಯ ಹಿನ್ನೆಲೆಯಲ್ಲಿ ಬಂದಿದೆ. ಈ ಆಚರಣೆಯು ಕೆಳವರ್ಗದ ಜನರ ಆಚರಣೆಯಲ್ಲಿ ಇಲ್ಲದೇ ಇರುವುದನ್ನು ಕಾಣಬಹುದಾಗಿದೆ. ಹೀಗೆ ಸಂಕೇತಿಸುವ ಭಾಷಾ ಸಂವಹನವು ವೈದಿಕ ಆಚರಣೆಯನ್ನು ತಿರಸ್ಕರಿಸುವ ಹಿನ್ನೆಲೆಯಲ್ಲಿ ಅಭಿವ್ಯಕ್ತವಾಗುವುದನ್ನು ಕಾಣಬಹುದು.

ಸಮಾಜದಲ್ಲಿ ವೈದಿಕರ ಅನಿಷ್ಟ ಪದ್ಧತಿಗಳು ಮತ್ತು ಆಚರಣೆಗಳಿಗೆ ವಿರೋಧ ವ್ಯಕ್ತವಾಗುತ್ತಲೆ ಬಂದಿದೆ. ಈ ಹಿನ್ನೆಲೆಯಲ್ಲಿ ವೈದಿಕರ ಸಂಪ್ರದಾಯಗಳನ್ನು ಬೈಗುಳ ರೂಪದಲ್ಲಿ ಬಳಸಿ ಭಾಷಿಕ ಸಂವಹನದ ಮೂಲಕ ವ್ಯಕ್ತಿಗಳನ್ನು ನಿಂದಿಸುವುದು, ಹೀಯಾಳಿಸುವುದು ಕಾಣಬಹುದಾಗಿದೆ. ಹೀಗೆ ಬೈಗುಳಗಳಲ್ಲಿ ವೈದಿಕ ವಿರೋಧ ವ್ಯಕ್ತವಾಗಿರುವುದನ್ನು ಗುರುತಿಸಬಹುದಾಗಿದೆ. ವೈದಿಕ ಪ್ರಜ್ಞೆಯ ಡಾಂಬಿಕ ಮತ್ತು ಪಾರಂಪರಿಕ ನಂಬಿಕೆ ಮೌಲ್ಯಗಳು, ಅಮಾನವೀಯತೆಯ ಮೌಲ್ಯಗಳನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಭಾಷಿಕ ನೆಲೆಗಳು ಹುಟ್ಟಿಕೊಳ್ಳುತ್ತವೆ.

೪.೨.೫. ವ್ಯಂಗ್ಯ

ಭಾಷಾ ಅಭಿವ್ಯಕ್ತಿಯಲ್ಲಿ ವ್ಯಂಗ್ಯವು ಒಂದು ಸಂವಹನ. ವ್ಯಂಗ್ಯವು ಆಲಂಕಾರಿಕ ಸಾಧನವಾಗಿದೆ. ಶಾಬ್ದಿಕ ವ್ಯಂಗ್ಯ, ನಾಟಕಿಯ ವ್ಯಂಗ್ಯ ಮತ್ತು ಸಾಂದರ್ಭಿಕ ವ್ಯಂಗ್ಯ ಎಂಬ ಪ್ರಕಾರಗಳಾಗಿ ವಿಂಗಡಿಸಬಹುದು. "ವ್ಯಂಗ್ಯ ಖಡಿಅಟಿಥಿ ಐರನಿ ಎಂಬ ಪದ ಹಳೆಯದಾದರೂ, ಅದು ಪರಿಕಲ್ಪನೆಯಾಗಿ ಬೆಳೆದು ಐರನಿಯ ಪ್ರಕ್ರಿಯೆಗೆ ಅನ್ವಯವಾಗತೊಡಗಿದ್ದು ಇತ್ತೀಚೆಗೆ. ಐರೋನಿಯಾ ಎಂಬ ಪದ ಒಂದು ಅಲಂಕಾರದ ಹೆಸರಾಗಿ, 'ಸೋಗಿನಿಂದ ಕೂಡಿದ ಭಾಷೆಯ ಬಳಕೆ' ಎಂಬ ಅರ್ಥದಲ್ಲಿ ಗ್ರೀಕ್‌ನಲ್ಲಿ ಬಳಕೆಯಲ್ಲಿತ್ತು. ಚರ್ಚೆಯ ಎದುರಾಳಿಯನ್ನು ಕುರಿತ ಧೋರಣೆ, ಇಡೀ ವಾದದ ವಿನ್ಯಾಸದ ತಂತ್ರ ಎಂಬ ಅರ್ಥದಲ್ಲಿ ರೋಮನ್ ಭಾಷೆಯ ಐರೊನಿಯ ಭಾಷೆಯ ಐರೊನಿಯ ಪದ ಕಾಣಿಸಿಕೊಳ್ಳುತ್ತದೆ. ಇದು ಐರನಿಯಾಗಿ ಇಂಗ್ಲಿಶ್‌ನಲ್ಲಿ ಬಳಕೆಗೆ ಬಂದದ್ದು ೧೮ನೇ ಶ.ದ ನಂತರ. ಈ ಮೊದಲ ಇನ್ನೂರು ವರ್ಷಗಳಲ್ಲಿ 'ವ್ಯಂಗ್ಯ'(ಐರನಿ) ಅಲಂಕಾರವೊಂದರ ಹೆಸರಾಗಿತ್ತು. 'ಮನಸ್ಸಿನೊಳಗಿರುವ ಅರ್ಥಕ್ಕೆ ವಿರುದ್ಧವಾಗಿ ಮಾತನಾಡುವುದು', 'ಹೊಗಳುವುದಕ್ಕಾಗಿ ಬೈಯುವುದು ಬೈಯುವುದಕ್ಕಾಗಿ ಹೊಗಳುವುದು', ನಟನೆ, ಸೋಗು, ತೋರಿಕೆ ಎಂಬ ಅರ್ಥಗಳೂ ಇದ್ದವು."[೪೫] ವ್ಯಂಗ್ಯವು ಭಾಷೆಯಲ್ಲಿ ಹಾಸ್ಯ, ನಕಲಿ, ಗೇಲಿ, ಲೇವಡಿ, ಕೊಂಕುನುಡಿ, ಮೂದಲಿಕೆ, ವಿಕಟ ಹಾಸ್ಯ, ಜಾಣ್ನುಡಿಗಳು, ಅಪಹಾಸ್ಯದ ಮೂಲಕ ಅಭಿವ್ಯಕ್ತವಾಗುತ್ತವೆ. ವ್ಯಕ್ತಿ, ವಸ್ತು, ಆಚರಣೆ, ಸಂಪ್ರದಾಯ, ನಂಬಿಕೆ ಮತ್ತು ಸಿದ್ಧಾಂತಗಳನ್ನು ವಿರೋಧಿಸುವಾಗ ಭಾಷಾ ಶೈಲಿಯಾದ

ವ್ಯಂಗ್ಯವನ್ನು ಬಳಸಲಾಗುತ್ತದೆ. ಹಾಗಾಗಿ ಸಮಾಜದ ರೋಗರುಜಿನಗಳನ್ನು ಸರಿಪಡಿಸಲು, ಲೋಕದ ತಪ್ಪುಗಳನ್ನು ತಿದ್ದಲು ಸಾಹಿತ್ಯ ಕೃತಿಗಳಲ್ಲಿ ವ್ಯಂಗ್ಯವನ್ನು ಬಳಸಲಾಗಿದೆ. ಸಾಹಿತ್ಯ ಕೃತಿಗಳ ಮೂಲಕ ತಮ್ಮ ಉದ್ದೇಶ ಸಾಧನೆಗಾಗಿ ವ್ಯಂಗ್ಯವನ್ನು ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ಹೀಗೆ ವೈದಿಕ ಚಿಂತನೆಗಳನ್ನು ವಿರೋಧಿಸುವಾಗ ಕುವೆಂಪು, ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಕಥೆ, ಕವನ, ಕಾದಂಬರಿ ಮತ್ತು ವಿಮರ್ಶೆ ಲೇಖನಗಳ ನಿರೂಪಣೆ ಮತ್ತು ಸಂಭಾಷಣೆಯಲ್ಲಿ ವ್ಯಂಗ್ಯವನ್ನು ಬಳಸಿದ್ದಾರೆ.

ಪುರೋಹಿತಶಾಹಿ ಸಮಾಜದಲ್ಲಿ ತನ್ನ ಅವೈಜ್ಞಾನಿಕ ವಿಧಾನಗಳು, ಕಂದಾಚಾರಗಳು, ಮೋಸ-ವಂಚನೆ ಮತ್ತು ಅವರ ಪೂಜಾ ವಿಧಾನವನ್ನು ಕುವೆಂಪು "ಧ್ರಾಂ ಧ್ರೀಂ ಧ್ರೂಂ" ಕವಿತೆಯಲ್ಲಿ ವ್ಯಂಗ್ಯ ಮಾಡಿದ್ದಾರೆ. ಘಜನಿಯ ಮಹಮೂದನು ದಂಡೆತ್ತಿ ಬಂದಾಗ ಈ ಪುರೋಹಿತಶಾಹಿಯು ಬೆಚ್ಚಿತು ಬೆದರಿತು ವೈದಿಕ ಕ್ರಿಯಾವಿಧಿಗಳ ಮೂಲಕ ಘಜನಿಯನ್ನು ಎದರಿಸಲು ಮುಂದಾಗಿದ್ದು. ಪುರೋಹಿತಶಾಹಿಯು ಈ ಘಜನಿಯ ಮಹಮದ್‌ನ್ನು ಕತ್ತಿ ಗುರಾಣಿಗಳಿಂದ ಹೆದರಿಸದೆ ವೈದಿಕ ಮಂತ್ರಗಳ ಮೂಲಕ ಎದುರಿಸಲು ಮುಂದಾದ ಪುರೋಹಿತಶಾಹಿಯ ಬೌದ್ಧಿಕ ಅವನತಿಗೆ ಭರತಖಂಡ ದಾಸ್ಯವಾಯಿತು.

ಘಜನಿಯ ಮಹಮೂದನು ದಂಡೆತ್ತಿ
ಬಂದನು ಪ್ರತಿಸಲವೂ ಮುಂದೊತ್ತಿ,
ಹಣದ ಪಿಶಾಚಿಯು ರಣದ ಪಿಶಾಚಿಗೆ
ಘಜನಿಯ ದೊರೆಯಲಿ ಹಿಡಿದಿತ್ತು;
ಅವನೆದೆಯಲಿ ಮುಸ್ಲಿಮು ಮರುಭೂಮಿಯು
ಕಾಫರ ರಕ್ತವ ಕುಡಿದಿತ್ತು!
ರಾಜಾಸ್ಥಾನದ ರಾಜ್ಯಗಳೆಲ್ಲಾ
ಬಿದ್ದುವು ಪುಡಿಯಾಗುತ ನೆಲಕೆ;
ಗುಡಿಗಳು ಬಿದ್ದು ಮಸೀದಿಗಳೆದ್ದುವು;
ಪಳಿವಾಯಿತು ಕ್ಷತ್ರಿಯ ಕುಲಕೆ.
ಬೆಚ್ಚಿತು ಬೆದರಿತು ವೈದಿಕ ಶಾಂತಿ;
ಕೊಚ್ಚಿತು ನಾಡನು ಮ್ಲೇಚ್ಛಕ್ರಾಂತಿ!...
.....
ಗುಡಿ ಹಾಳಾದರೆ ಏನಂತೆ?

ವೈದಿಕ ಧರ್ಮಕೆ ಅದೆ ಚಿಂತೆ?
ನಶ್ವರ ಕಾಂಚನ ಹೋದರೆ ಹೋಯಿತು!
ಮಂತ್ರದ ಸಾಮರ್ಥ್ಯವು ಸ್ಥಿರವಾಗಯಿತು!
ಎಂತೆನೆ, - ಮಂತ್ರಕೆ ಕರಂದೆಲ್ಲಿ?
ಆ ಖಿಲ ಮ್ಲೇಚ್ಚರು ಸತ್ತೇ ಸತ್ತರು!
ಬಹು ಕಾಲಾನಂತರದಲ್ಲಿ![೪೬]

ಈ ಮೇಲಿನ ಕಾವ್ಯದಲ್ಲಿ ಕುವೆಂಪು ಸೋಮಾರಿಗಳ ವಂಶವಾದ ಪುರೋಹಿತಶಾಹಿಯನ್ನು ವ್ಯಂಗ್ಯ ಮಾಡುತ್ತಾ, ಅಜ್ಞಾನ, ಮೌಢ್ಯ, ದಾರಿದ್ರ್ಯಗಳನ್ನು ತೋರಿಸುತ್ತಾರೆ. ಘಜನಿ ಮಹಮ್ಮದನನ್ನು ಶಸ್ತ್ರಾಸ್ತ್ರಗಳಿಂದ ಎದುರಿಸದೆ ವೈದಿಕ ಮಂತ್ರ ತಂತ್ರಗಳ ಮೂಲಕ ಎದುರಿಸಲು ಮುಂದಾಗುತ್ತಾರೆ ಹಾಗೂ ಯಾರಿಗೂ ಅರ್ಥವಾಗದ ಮಂತ್ರಗಳನ್ನು ಹೇಳಿಕೊಂಡು ಜನಸಾಮಾನ್ಯರಿಗೆ ವಂಚನೆಯನ್ನು ಮಾಡುತ್ತಿರುವುದು ಈ ಪದ್ಯದಲ್ಲಿ ವ್ಯಕ್ತವಾಗಿದೆ. ರಾಜರ ಜೊತೆ ಕೈ ಜೋಡಿಸಿ ತನ್ನ ರಾಜಕೀಯ ಪ್ರಾಬಲ್ಯವನ್ನು ಮುಂದುವರಿಸಿ ರಾಜರನ್ನು ತನ್ನ ದಾಸ್ಯಕ್ಕೆ ಒಳಗುಮಾಡಿಕೊಂಡಿವೆ. ಕುವೆಂಪು ಪುರೋಹಿತಶಾಹಿಯನ್ನು ಪೂಜಾರಿಗಳ 'ಡೊಳ್ಳು ಹೊಟ್ಟೆ ಕಂಪಿಸುತ್ತದೆ;' 'ಶಾಸ್ತ್ರವನ್ನೆಲ್ಲಾ ಕೇರೀ ತೂರೀ ಬಹುಸಂಶೋಧನೆ ಮಾಡಿ' 'ಧ್ರಾಂ ಧ್ರೀಂ ಧ್ರೂಂ' ಎಂಬ ಅಜ್ಞಾನಿಗಳ ಡಂಬಾಚಾರವನ್ನು ವ್ಯಂಗ್ಯವಾಗಿ ಕುವೆಂಪು ಚಿತ್ರಿಸಿದ್ದಾರೆ. ಸಂಸ್ಕೃತ ಭಾಷೆಯ ಮಂತ್ರಗಳನ್ನು ಧ್ರಾಂ ಧ್ರೀಂ ಧ್ರೂಂ!, ಧ್ರಾಂ ಧ್ರೀಂ ಧ್ರೂಂ! ಎಂದು ವ್ಯಂಗ್ಯ ಮಾಡುವುದರ ಮೂಲಕ ವಿರೋಧಿರುತ್ತಾರೆ. ಹೀಗೆ ಪುರೋಹಿತಶಾಹಿಯ ಸಂಸ್ಕೃತಿಯಿಂದ ದೇಶದ ಪ್ರಗತಿಗೆ ತೊಡಕಾಗಿರುವ ವೈದಿಕ ಧರ್ಮ, ಮಂತ್ರ ಶಕ್ತಿ, ಪೂಜಾರಿಗಳ ವರ್ಗವನ್ನು ಕುವೆಂಪು ತಮ್ಮ ಹಲವಾರು ಕಾವ್ಯಗಳಲ್ಲಿ ವ್ಯಂಗ್ಯವಾಗಿ ನಿರೂಪಿಸಿದ್ದಾರೆ.

ವರ್ಣಪದ್ಧತಿಯನ್ನು ಪ್ರತಿಪಾದಿಸುವ ಬ್ರಾಹ್ಮಣ್ಯವನ್ನು, ಅಸ್ಪೃಶ್ಯತೆ, ಜಾತೀಯತೆಯನ್ನು ಕುವೆಂಪು ವಿರೋಧಿಸುತ್ತಾರೆ. ಹಾಗಾಗಿ 'ಬ್ರಾಹ್ಮಣನಾಯಿ-ಶೂದ್ರಕೋಳಿ' ಎಂಬ ಕವನದಲ್ಲಿ ಬ್ರಾಹ್ಮಣರನ್ನು ವ್ಯಂಗ್ಯ ಮಾಡಲಾಗಿದೆ.

ಶೂದ್ರಕೋಳಿ ಮೇಯುತ್ತಿತ್ತು
ಗಲ್ಲಿಯಲ್ಲಿ;
ಬ್ರಾಹ್ಮನಾಯಿ ಹೊಂಚುತಿತ್ತು
ಅಲ್ಲಿ ಇಲ್ಲಿ.
ಶೂದ್ರಕೋಳಿಗೇನು ಗೊತ್ತು,

ಪಾಪ, ನಾಯಿ ಬ್ರಾಹ್ಮ ಎಂದು?
ತಮ್ಮ ಮನೆಯ ನಾಯಿಯಂತೆ
ಎಂದು ಸುಮ್ಮ ಮೇಯುತ್ತಿತ್ತು.[೪೭]

ಈ ಮೇಲಿನ ಪದ್ಯದಲ್ಲಿ ಬ್ರಾಹ್ಮಣರ ವಂಚನೆಯ ಬುದ್ಧಿಯನ್ನು ವಿವರಿಸಲಾಗಿದೆ. ಶೂದ್ರಕೋಳಿಗೆ ಇರುವ ಸೋದರ ಬಾಂಧವ್ಯ, ಕರುಣೆ ಬ್ರಾಹ್ಮಣನಾಯಿಗಿಲ್ಲ. ಹೀಗೆ ವಂಚನೆಯ ಬುದ್ಧಿಯಿಂದ ಬ್ರಾಹ್ಮಣರು ಶೂದ್ರರನ್ನು ದಾಸ್ಯರನ್ನಾಗಿ ಮಾಡಿಕೊಂಡಿದ್ದಾರೆ.

ಬ್ರಾಹ್ಮನಾಯಿ ಅಪ್ಪಟ ಕಂತ್ರಿ,
ಆದರೇನು? ಕಪಟ ಕುತಂತ್ರಿ!
ಕೊರಳಿನಲ್ಲಿ ಜನ್ನ ಪಟ್ಟಿ;
ಒಡಲಿನಲ್ಲಿ ಖಾಲಿಹೊಟ್ಟೆ!
ಮೆಲ್ಲ ಮೆಲ್ಲ ಸುಳಿದು ಸುತ್ತಿ
ಹೆತ್ತ ಬಂತು;
ಸಾಧು ಎಂದು ಶೂದ್ರಕೋಳಿ
ನೋಡೆ ನಿಂತು,
ಹಾರಿ ನೆಗೆದು ಹಿಡಿದುಕೊಂಡು
ಓಡಿ ಹೋಯ್ತು!
ಪಾರ್ವವೀಡಿನೊಂದು ಗೋಡೆ
ರಕ್ಷೆಯಾಯ್ತು:
ಪಾರ್ವನಾಯ್ಗೆ ಶೂದ್ರಕೋಳಿ
ಭಕ್ಷ್ಯವಾಯ್ತು![೪೮]

ಈ ಕವನದಲ್ಲಿ ಬಳಸಿರುವ ಅಪ್ಪಟ ಕಂತ್ರಿ, ಕಪಟ ಕುತಂತ್ರಿ, ಜನ್ನ ಪಟ್ಟಿ, ಖಾಲಿಹೊಟ್ಟೆ, ಎಂಬ ಪದಗುಚ್ಛಗಳು ಬ್ರಾಹ್ಮಣ್ಯವನ್ನು ವ್ಯಂಗ್ಯ ಮಾಡುತ್ತಿವೆ. ವೈದಿಕಶಾಹಿಯ ನೈತಿಕ ಮೌಲ್ಯವನ್ನು ವ್ಯಂಗ್ಯ ಮಾಡಲಾಗಿದೆ. ಈ ಕವನದಲ್ಲಿ ಬಳಕೆಯಾಗಿರುವ ಭಾಷೆ ವ್ಯಂಗ್ಯದಿಂದ ಕೂಡಿದೆ.

ವೈದಿಕ ಸಂಸ್ಕೃತಿಯನ್ನು ಬಿಂಬಿಸುವ ವೈದಿಕ ಊಟೋಪಾಚರ ಮತ್ತು ವೈದಿಕ ಉಡುಗೆತೊಡುಗೆಗಳು ಕೂಡ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ವೈದಿಕ ಸಂಸ್ಕೃತಿಯು ಸಾಮಾಜಿಕವಾಗಿ ಅಸಮಾನತೆಯನ್ನು ಸೃಷ್ಟಿಸಿದೆ. ಹಾಗಾಗಿ ವೈದಿಕ ಸಂಸ್ಕೃತಿಯ ಭಾಗವಾಗಿರುವ

ವೈದಿಕ ಊಟೋಪಚಾರ ಮತ್ತು ವೈದಿಕ ಉಡುಗೆ ತೊಡುಗೆಗಳನ್ನು ವಿರೋಧಿಸುವುದನ್ನು ಕಾಣಬಹುದು. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಮಕ್ಕಳಾದ ಕಾಡು ಮತ್ತು ತಿಮ್ಮು ಮಾತನಾಡುವಾಗ ಬ್ರಾಹ್ಮಣರ ಉಡುಗೆಯನ್ನು ನೋಡಿ ವ್ಯಂಗ್ಯ ಮಾಡುತ್ತಾರೆ. "ತನ್ನ ತಾಯಿ ಮುಂತಾದವ ಗೊಬ್ಬೆ ಸೆರಗಿನ ಮಲೆನಾಡಿನ ಉಡುಗೆಯನ್ನೇ ನೋಡಿ ಅಭ್ಯಾಸವಾಗಿದ್ದ ತಿಮ್ಮುಗೆ ಹಾರುವರ ಹೆಂಗಸರ ಉಡುಗೆಯ ರೀತಿ ವಿನೋದಕರವಾಗಿತ್ತು. ಅದರಲ್ಲಿಯೂ ಕಚ್ಚೆ ಹಾಕಿದಂತೆ ಸೀರೆ ಉಟ್ಟಿದ್ದವರನ್ನು ನೋಡಿ ಅವನಿಗೆ ನಗೆ ತಡೆಯಲಾಗಲಿಲ್ಲ: "ಏನೋ, ಕಾಡಣ್ಣಯ್ಯ, ಗಂಡಸರ ಹಾಂಗೆ ಕಚ್ಚೆ ಹಾಕಿದ್ದಾರಲ್ಲೋ ಥೂ!" ಎಂದು ಪಿಸುಗುಟ್ಟಿದ್ದನು. ಅದೊಂದು ತರದ ಬಿರಾಂಬರ ಉಡಿಗೆ ಕಣೋ!" ಎಂದು ವಿವರಿಸಿದ್ದನು ಕಾಡು. ತಿಮ್ಮುಗೆ ಉಡಿಗೆ ತೊಡಿಗೆಯಲ್ಲಾಗಲಿ ರೂಪದಲ್ಲಾಗಲಿ ಬಣ್ಣದಲ್ಲಾಗಲಿ ತನ್ನ ಹಳೆಮನೆ ಅತ್ತೆಮ್ಮ ಬೆಟ್ಟಳ್ಳಿ ಅತ್ತೆಮ್ಮ ಮುಂತಾದವರ ಮುಂದೆ ಯಾವ 'ಹಾರ್ತಿ'ಯೂ 'ಚೆಂದ' ಕಾಣಿಸಲಿಲ್ಲ."[೬೯] ಶೂದ್ರ ಸಂಸ್ಕೃತಿಯನ್ನು ಅನುಸರಿಸದ ವೈದಿಕ ಸಂಸ್ಕೃತಿಯನ್ನು ವ್ಯಂಗ್ಯವಾಗಿ ಟೀಕಿಸುವುದನ್ನು ಈ ಉದ್ಧರಣೆಯಲ್ಲಿ ಗಮನಿಸಬಹುದಾಗಿದೆ. ಬ್ರಾಹ್ಮಣರ ಹೆಂಗಸರು ಪುರುಷರಂತೆ ಕಚ್ಚೆ ಹಾಕಿ ಸೀರೆಯನ್ನು ಉಟ್ಟುಕೊಳ್ಳುತ್ತಾರೆ. ಈ ಉಡಿಗೆ ಕ್ರಮವನ್ನು ಕೆಳವರ್ಗದ ಮಕ್ಕಳು "ಏನೋ, ಕಾಡಣ್ಣಯ್ಯ, ಗಂಡಸರ ಹಾಂಗೆ ಕಚ್ಚೆ ಹಾಕಿದ್ದಾರಲ್ಲೋ ಥೂ!" ಎಂದು ವ್ಯಂಗ್ಯದ ಮಾತುಗಳನ್ನು ಆಡುವುದರ ಮೂಲಕ ಬ್ರಾಹ್ಮಣರ ಉಡುಗೆಯ ಕ್ರಮವನ್ನು ವ್ಯಂಗ್ಯಮಾಡುವುದನ್ನು ಗುರುತಿಸಬಹುದಾಗಿದೆ.

ಆಹಾರಸಂಸ್ಕೃತಿಯು ಪ್ರಾದೇಶಿಕತೆಗೆ ಹೊಂದಿಕೊಂಡಿರುತ್ತದೆ. ಪ್ರಕೃತಿಯ ಸ್ವಭಾವಕ್ಕೆ ಅನುಗುಣವಾಗಿ ಆಹಾರಸಂಸ್ಕೃತಿಯು ಹುಟ್ಟಿಕೊಂಡಿರುತ್ತದೆ. ಆದರೆ ವೈದಿಕ ಪ್ರಜ್ಞೆಯು ಆಹಾರ ಸಂಸ್ಕೃತಿಗೆ ದೈವಿಕ ಸ್ವರೂಪವನ್ನು ಕೊಟ್ಟು ಪ್ರಭುತ್ವವನ್ನು ನಿಯಂತ್ರಿಸಲು ಮುಂದಾಗುತ್ತದೆ. ಹಾಗಾಗಿ ಮಾಂಸಾಹಾರವನ್ನು ಸೇವಿಸಬಾರದು ಎಂಬ ನಿರ್ಬಂಧಗಳನ್ನು ಸಾಮಾಜಿಕವಾಗಿ ಹೇರಲ್ಪಟ್ಟಿದೆ. ಆದ್ದರಿಂದ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬ್ರಾಹ್ಮಣರ ಊಟೋಪಚಾರವನ್ನು ದೇವಯ್ಯ ವ್ಯಂಗ್ಯವಾಗಿ ವಿರೋಧಿಸುತ್ತಾನೆ. "ನಮಗೇನು ಆ ಹಾರುವರ ಸೀ ಊಟ ಬೇಕಾಗಿಲ್ಲ. ನಾವು ಹಂದಿ ಉಪ್ಪು ತುಂಡು ಸಮ್‌ನಾಗಿ ಹೊಟ್ಟೆಮಿರಿ ಹೊಡಕೊಂಡೇ ಬಂದೀವಿ!" ತೋಟಾಕೋವಿಯನ್ನು ಗಾಡಿಯೊಳಗಿಡಲು ಬಚ್ಚನಿಗೆ ಕೊಡುತ್ತಾ ಮೂದಲಿಸಿದನು ದೇವಯ್ಯ, "ನನಗೆ ಗೊತ್ತೇಯಿತ್ತು. ಜೋಯಿಸರ ಅಜ್ಜಿಕಥೆ ಎಲ್ಲಾ ಮುಗಿದು, ಆ ಹಾರುವರಿಗೆಲ್ಲಾ ಮೊದಲು ಸಂತರ್ಪಣೆ ಮಾಡಿಸಿ, ಅಮೇಲೆ ಉಳಿದಿದ್ದ ಅವರ ಎಂಜಲು ಪಂಜಲು ಎಲ್ಲಾ ನಮಗೆ ಹಾಕಬೇಕಾದ್ರೆ ಇವತ್ತು ನಾಲ್ಕು ಗಂಟೇನೆ ಆಗ್ತದೆಯೋ? ಐದಾದ್ರೂ ಆಯ್ತೇ!... ಅಷ್ಟು ಹೊತ್ತಿನ ತನಕಾ ನಿಮ್ಮ ಹೊಟ್ಟೇಹುಳ ಎಲ್ಲಾನಿಗರಬಡ್ಡೆ ಕಂಡಿರ್ತವೆ!"[೭೦] ಪುರೋಹಿತಶಾಹಿಯ ಪುರಾಣ ಮತ್ತು ಮಂತ್ರಗಳನ್ನು ಅಜ್ಜಿಕಥೆ ಎಂದು ವ್ಯಂಗ್ಯವಾಗಿ ದೇವಯ್ಯ ಮೂದಲಿಸುತ್ತಾನೆ. ವೈದಿಕಶಾಹಿಯ ಆಹಾರಸಂಸ್ಕೃತಿಯು ಅಸಮಾನತೆಯಿಂದು ಕೂಡಿದೆ. ಊಟದ ವಿಚಾರದಲ್ಲಿ ಶ್ರೇಣೀಕರಣ ವ್ಯವಸ್ಥೆಯನ್ನು ಪಾಲಿಸುವ ವೈದಿಕ ಪ್ರಜ್ಞೆಯನ್ನು ವ್ಯಂಗ್ಯವಾಗಿ ಟೀಕಿಸುವುದು ಈ ಮೇಲಿನ ಉದ್ಧರಣೆಯಲ್ಲಿ ಕಾಣಬಹುದಾಗಿದೆ.

ವೈದಿಕ ಚಿಂತನೆಗಳು ಹೇರಿಕೆಯಿಂದ ಸಮಾಜದಲ್ಲಿ ಅಪ್ರಜ್ಞಾಪೂರ್ವಕವಾಗಿ ಬಳಕೆಯಾಗುತ್ತಿರುತ್ತವೆ. ಹೀಗೆ ಹೇರಿಕೆಯಾದ ವೈದಿಕ ಚಿಂತನೆಗಳನ್ನು ವಿರೋಧಿಸಲು ಲೇಖಕರು ಸಾಹಿತ್ಯ ಕೃತಿಗಳಲ್ಲಿ ಕಥನ ತಂತ್ರಗಾರಿಕೆಗಳನ್ನು ಬಳಸುತ್ತಾರೆ. 'ಕರ್ವಾಲೊ' ಕಾದಂಬರಿಯಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಕಥೆ ನಿರೂಪಣೆಯಲ್ಲಿ ಪುರೋಹಿತಶಾಹಿಯನ್ನು ವ್ಯಂಗ್ಯ ಮಾಡುತ್ತಾರೆ. "ಕೆಲವರು ಸಾಲಾಗಿ ನಿಂತಿದ್ದರು. ಹಲವರು ಕುಳಿತ್ತಿದ್ದರು. ಯಾರೋ ಧ್ವನಿವರ್ಧಕದಲ್ಲಿ "ಏಳಿ ಏಳಿ ಧ್ವಜಾರೋಹಣ" ಎಂದು ಕೂಗಿದರು. ಮಂತ್ರಿಗಳು ಯಾಗ ಪುರೋಹಿತರ ಥರ ಮೂತಿ ಹಾಕಿಕೊಂಡು ಅತ್ತಿತ್ತ ಒಮ್ಮೆ ನೋಡಿ ಅನಂತರ ಮುದುರಿ ಕಟ್ಟಿದ್ದ ಧ್ವಜವನ್ನೇ ನೋಡುತ್ತಾ ಹಗ್ಗ ಎಳೆದರು. ಧ್ವಜ ಭುಗ್ಗನೆ ಬಿಚ್ಚಿಕೊಂಡು ಗಾಳಿಗೆ ಗಂಭೀರವಾಗಿ ಹಾರಾಡತೊಡಗಿತು. ಅದರೊಳಗೆ ಇಟ್ಟು ಕಟ್ಟಿದ್ದ ಸಾವಿರಾರು ಗುಲಾಬಿ ಹೂವಿನ ಪಕಳೆಗಳು ಹಾರಿ ತೇಲಿ ಸಭಿಕರ ಮೇಲೆ ಇಳಿದವು"[೫೧] ಈ ಮೇಲಿನ ಉಲ್ಲೇಖದಲ್ಲಿ ಪುರೋಹಿತಶಾಹಿಯು ಯಜ್ಞಾಯಾಗಾದಿಯಲ್ಲಿ ಮಾಡುವ ವರ್ತನೆಯನ್ನು ನಾಟಕೀಯ ವ್ಯಂಗ್ಯವಾಗಿ ಲೇಖಕರು ಕಥೆಯ ನಿರೂಪಣೆಯಲ್ಲಿ ಬಳಸುತ್ತಾರೆ. ಹೀಗೆ ಬಳಸುವ ಭಾಷಾ ಸಂವಹನವು ವೈದಿಕ ಧರ್ಮದ ಧಾರ್ಮಿಕ ವಿಧಿ ವಿಧಾನಗಳನ್ನು ವ್ಯಂಗ್ಯವಾಗಿ ನೋಡುವುದನ್ನು ಕಾಣಬಹುದು.

ಪ್ರಭುತ್ವ ಮತ್ತು ಸಂಪತ್ತುನ್ನು ತನ್ನ ನಿಯಂತ್ರಣದಲ್ಲಿ ಇರಬೇಕು ಎಂದು ವೈದಿಕ ಪ್ರಜ್ಞೆ ಬಯಸುತ್ತದೆ. ಯಾಕೆಂದರೆ ಸಾಮಾಜಿಕ ಸ್ಥಾನಮಾನದಲ್ಲಿ ಮೇಲುವರ್ಗವನ್ನು ಪ್ರತಿನಿಧಿಸುತ್ತದೆ. ಸಮಾಜದಲ್ಲಿ ಯಜಮಾನಿಕೆಯನ್ನು ಸಂಸ್ಕೃತಿಯನ್ನು ಸ್ಥಾಪಿಸಲು ವೈದಿಕ ಪ್ರಜ್ಞೆ ಕುತಂತ್ರ ಬುದ್ಧಿಯ ಯೋಚನೆಗಳನ್ನು ಮಾಡುತ್ತಿರುತ್ತದೆ. ಹಾಗಾಗಿ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು ಬ್ರಾಹ್ಮಣನಾದ ಆಚಾರಿಯ ಬಗ್ಗೆ ಹೇಳುವಾಗ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. "ಆಚಾರಿಯದು ಮಹಾಪ್ರಳಯಾಂತಕ ತಲೆ. ಅವನನ್ನು ತಲೆಬಿಸಿ ಆಚಾರಿ ಎಂದೇ ಎಲ್ಲಾ ಕರೆಯುತ್ತಿದ್ದರು. ಆಚಾರಿಯ ಕುತಂತ್ರ ಬುದ್ಧಿಗಾಗಿ ಹೆದರಿಯೇ ಬಹುವಚನದಲ್ಲಿ ಅವನನ್ನು ಮಾತಾಡಿಸುತ್ತಿದ್ದರು. ಆಚಾರಿಗೆ ಕಚ್ಚೆ ಹರಕು ಬುದ್ಧಿ ಇಲ್ಲದಿದ್ದರೆ ಅವನು ಈ ವೇಳೆಗಾಗಲೇ ಸುಲೇಮಾನ್ ಬೇರಿಯನ್ನು ಮೀರಿಸುವಂತ ಕುಳವಾಗಿರುತ್ತಿದ್ದ."[೫೨] ಪುರೋಹಿಶಾಹಿಯ ಕುತಂತ್ರ ಬುದ್ಧಿಯನ್ನು 'ಕಚ್ಚೆ ಹರಕು ಬುದ್ಧಿ' ಎಂದು ವ್ಯಂಗ್ಯ ಮಾಡುತ್ತಾರೆ. ಈ ರೀತಿಯ ವ್ಯಂಗ್ಯವು ವೈದಿಕ ಪ್ರಜ್ಞೆಯ ನೈತಿಕ ಮೌಲ್ಯಗಳನ್ನು ವಿರೋಧಿಸುತ್ತದೆ.

ವೈದಿಕ ಧರ್ಮವು ಸ್ವರ್ಗ ಮತ್ತು ನರಕ ಎಂಬ ತಾತ್ವಿಕ ಚಿಂತನೆಯನ್ನು ಹುಟ್ಟುಹಾಕಿದೆ. ಹಾಗಾಗಿ ಈ ಸ್ವರ್ಗ ನರಕದ ಪರಿಕಲ್ಪನೆಯು ಸತ್ಯಕ್ಕೆ ದೂರವಾದ ಚಿಂತನೆಯಾಗಿದೆ ಮತ್ತು ಯಾವುದೇ ತಾರ್ಕಿಕ ಸತ್ಯವು ಈ ಪರಿಕಲ್ಪನೆಯಿಂದ ಕಂಡುಬರುವುದಿಲ್ಲ. ಸ್ವರ್ಗ ಮತ್ತು ನರಕವು ಮನುಷ್ಯನ ಕಲ್ಪನೆಯಿಂದ ಹುಟ್ಟಿಕೊಂಡವೆ ಹೊರತು ಅನುಭವದಿಂದ ಹುಟ್ಟಿಕೊಂಡಿಲ್ಲ. ಆದ್ದರಿಂದ ಹುಲಿಯೂರಿನ ಸರಹದ್ದು ಕಥೆಯಲ್ಲಿ ಬ್ರಾಹ್ಮಣರು ಸೃಷ್ಟಿ ಮಾಡಿದ ಸ್ವರ್ಗ ಮತ್ತು ನರಕ ಕಲ್ಪನೆಯನ್ನು ವಿರೋಧಿಸುವುದು ಕಾಣಬಹುದಾಗಿದೆ. "ಹೋಗೋ, ಹೋಗೋ, ಅದೆಲ್ಲ ಬ್ರಾಂಬ್ರ

ಬೊಗಳೆ ಅಲ್ಲೇನೋ ಅವರ ಕುಲ ನಾಶವಾಗ, ಸ್ವರ್ಗ ಅಂತೆ, ನರಕ ಅಂತೆ, ಶುದ್ದ ಬೊಗಳೆ ಥತ್ತೇರಿ"[೫೩] ಈ ಮಾತುಗಳಲ್ಲಿ ಬ್ರಾಹ್ಮಣರ ನಂಬಿಕೆಗಳನ್ನು ವ್ಯಂಗ್ಯವಾಗಿ ಟೀಕಿಸುತ್ತಿರುವುದನ್ನು ಗುರುತಿಸಬಹುದಾಗಿದೆ. ಸ್ವರ್ಗ ಮತ್ತು ನರಕದ ಕಲ್ಪನೆಗಳು ಸತ್ಯಕ್ಕೆ ದೂರವಾದವು. ಈ ನಂಬಿಕೆಯಲ್ಲಿ ಯಾವುದೇ ಹುರುಳಿಲ್ಲ. ಹಾಗಾಗಿ ಪೂರ್ಣಚಂದ್ರ ತೇಜಸ್ವಿ ಅವರು ಬ್ರಾಹ್ಮಣರ ನಂಬಿಕೆಯನ್ನು ವಿರೋಧಿಸುತ್ತಾರೆ. ಕಥೆಯ ನಿರೂಪಣೆಯಲ್ಲಿ ವ್ಯಂಗ್ಯವಾಗಿ ವೈದಿಕ ತಾತ್ವಿಕ ಚಿಂತನೆಯನ್ನು ಟೀಕಿಸಿರುವದನ್ನು ಕಾಣಬಹುದು.

ವೈದಿಕ ಧರ್ಮವನ್ನು ಪ್ರತಿಪಾದಿಸುವ ಬ್ರಾಹ್ಮಣರು ದಿನನಿತ್ಯ ಆಚರಿಸುವ ಆಚರಣೆಗಳು ಅವೈಜ್ಞಾನಿಕವಾಗಿ ಕೂಡಿವೆ. ಪುರೋಹಿತಶಾಹಿ ಧರ್ಮದ ಹೆಸರಿನಲ್ಲಿ ಹಲವಾರು ಅಂಧ ಆಚರಣೆಗಳನ್ನು ಸೃಷ್ಟಿಸಿದೆ. ಈ ಅಂಧ ಆಚರಣೆಗಳನ್ನು ಪಾಲಿಸಿಕೊಂಡು ಬರುತ್ತಿರುವ ವಿದ್ಯಾವಂತ ಲೇಖಕರನ್ನು ವ್ಯಂಗ್ಯವಾಗಿ ಟೀಕಿಸುತ್ತಾರೆ. "ಬ್ರಾಹ್ಮಣರು 'ನಾನೇ ಶುದ್ಧ ಉಳಿದವರೆಲ್ಲಾ ಅಸುದ್ಧ' ಎಂಬುದು ಮೃಗೀಯ ರಾಕ್ಷಸೀಧರ್ಮ. ಹಿಂದೆ ವಿದ್ಯಾವಂತರೆನ್ನಿಸಿಕೊಂಡವರು ಆಚರಣೆಗಳನ್ನೇ ಧರ್ಮ ಸಂಸ್ಕೃತಿಯನ್ನು ಮಾಡಿಕೊಂಡು ನೀರನ್ನು ಎಡಗೈಯಿಂದ ಕುಡಿಯುವುದೋ ಅಥವಾ ಬಲಗೈಯಿಂದ ಕುಡಿಯುವುದೋ? ಅದನ್ನು ಮೂರು ಸಲ ತೊಳೆಯುವುದೋ ಅಥವಾ ನಾಲ್ಕು ಸಲ ತೊಳೆಯುವುದೋ? ಬಾಯನ್ನು ಐದು ಸಲ ಮುಕ್ಕುಳಿಸುವುದೊ ಅಥವಾ ಆರು ಸಲ ಮುಕ್ಕುಳಿಸುವುದೊ ಎಂಬುದನ್ನು ಚರ್ಚಿಸುತ್ತಾ ಕಾಲ ಕಳೆದರು"[೫೪] ಈ ಮೇಲಿನ ಉಲ್ಲೇಖದಲ್ಲಿ ದೇವನೂರ ಮಹಾದೇವ ಅವರು ನಾಟಕೀಯ ವ್ಯಂಗ್ಯದ ಮೂಲಕ ಬ್ರಾಹ್ಮಣರು ಮಾಡುವ ಸಂಧ್ಯಾವಂದನೆ ಆಚರಣೆಯನ್ನು ಟೀಕಿಸುತ್ತಾರೆ.

ವೈದಿಕ ಪ್ರಜ್ಞೆಯು ಸಮಾಜದಲ್ಲಿ ಅಸಮಾನತೆಯನ್ನು ಹುಟ್ಟುಹಾಕಿದೆ ಈ ಅಸಮಾನತೆಗೆ ವೈದಿಕ ಪ್ರಜ್ಞೆ ಹುಟ್ಟುಹಾಕಿರುವ ವರ್ಣತಾರತಮ್ಯ, ಜಾತೀಯತೆ, ಅಸ್ಪೃಶ್ಯತೆ, ಮೇಲು-ಕೀಳು, ವರ್ಗತಾರತಮ್ಯಗಳಾಗಿವೆ. ಹೀಗೆ ಅಸಮಾನತೆಯನ್ನು ಹುಟ್ಟುಹಾಕುವ ವೈದಿಕ ಪ್ರಜ್ಞೆಯು ಸಮಾಜದಲ್ಲಿ ಅಸಮಾನತೆಯನ್ನು ವಿರೋಧಿಸುವ ನಂಬಿಕೆಯನ್ನು ಹುಟ್ಟುಹಾಕಬಹುದಲ್ಲ. ಈ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸುವರು ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುತ್ತಾರೆ ಎಂಬ ನಂಬಿಕೆಯನ್ನು ಹುಟ್ಟುಹಾಕಲಿ ಎಂದು ದೇವನೂರ ಮಹಾದೇವ ಅವರು ಈ ರೀತಿ ಹೇಳುತ್ತಾರೆ. "ಭಾರತವು ಏನೇನೋ ಹುಟ್ಟುಹಾಕಿದೆ. ಹುಟ್ಟಿಸುವುದರಲ್ಲಿ ನಾವು ನಿಸ್ಸೀಮರು. ಚಾತುರ್ವರ್ಣ ಜಾತಿಭೇದದ ತಾರತಮ್ಯದ ಕಾನೂನು ಕಟ್ಟಳೆಗಳನ್ನು ಧರ್ಮವಾಗಿಸಲು ದೇವರುಗಳನ್ನೇ ರೌಡಿಗಳನ್ನಾಗಿಸಿದ ದೇಶ ಇದು. ಇತ್ತೀಚೆಗೆ ಆ್ಯಕ್ಸಿಡೆಂಟ್ ಗಣೇಶನನ್ನೂ ಹುಟ್ಟುಹಾಕಿದೆ. ಈಗ ಒಂದು ಹೊಸ ಹುಟ್ಟಿಗಾಗಿ ಪೇಜಾವರ ಶ್ರೀಗಳ ಮುಂದೆ ಸಲಹೆಯೊಂದನ್ನಿಡುವೆ. ನಮ್ಮದು ಜನ್ಮಾಂತರಗಳನ್ನು ನಂಬುವ ದೇಶ. ಈ ಜನ್ಮದ ತರ್ಕಕ್ಕೆ 'ಕಳೆದ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸಿದವರೇ ಈ ಜನ್ಮದಲ್ಲಿ ಅದನ್ನು ಅನುಭವಿಸಲು ಅಸ್ಪೃಶ್ಯರಾಗಿ ಹುಟ್ಟಿದ್ದಾರೆ. ಈ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸುವವರು ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುವರು' ಎಂದು ಜನಜನಿತ ಮಾಡಿದರೆ ನಮ್ಮ ಜಡ ಸಮಾಜವು ಸ್ವಲ್ಪವಾದರೂ

ಚಲಿಸಬಹುದಲ್ಲವೇ? ಜನ್ಮ ನಿಜವಿದ್ದರೆ ಆ ಜನ್ಮಾಂತರದ ಕರ್ಮಫಲವನ್ನು ಉಣ್ಣಬೇಕಾದ್ದೂ ನಿಜವಿರಬಹುದಲ್ಲವೇ?"[೫೫] ಹೀಗೆ ವೈದಿಕ ಚಿಂತನೆಗಳು ಸಮಾಜದಲ್ಲಿ ಅಸಮಾನತೆಗಳನ್ನು ಹುಟ್ಟುಹಾಕುವ ಚಿಂತನೆಗಳಾಗಿವೆ ಎಂದು ವ್ಯಂಗ್ಯವಾಗಿ ದೇವನೂರ ಮಹಾದೇವರು ಟೀಕಿಸಿದ್ದಾರೆ. ಅರ್ಥವಿಲ್ಲದ ಆಚರಣೆಗಳನ್ನು ಸೃಷ್ಟಿ ಮಾಡುವ ಬದಲು ಸಮಾಜದಲ್ಲಿ ಇರುವ ಜಾತಿಪದ್ಧತಿ, ಅಸ್ಪೃಶ್ಯತೆ, ವರ್ಣತಾರತಮ್ಯ ಮತ್ತು ಮೇಲು-ಕೀಳನ್ನು ಹೋಗಲಾಡಿಸುವ ನಂಬಿಕೆ ಆಚರಣೆಗಳನ್ನು ಸೃಷ್ಟಿ ಮಾಡಬೇಕಾಗಿದೆ.

ಕುವೆಂಪು ಅವರು ವೈದಿಕ ಪುರೋಹಿತಶಾಹಿಯನ್ನು ವ್ಯಂಗ್ಯವಾಗಿ ಟೀಕಿಸುವುದರ ಮೂಲಕ ವೈದಿಕ ಧರ್ಮದ ಡಾಂಬಿಕ ನಂಬಿಕೆಗಳನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ವೈದಿಕರು ಯಜ್ಞ-ಯಾಗಾದಿಗಳಲ್ಲಿ ಬಳಸುವ ಮಂತ್ರವನ್ನು ಧ್ರಾಂ ಧ್ರೀಂ ಧ್ರೂಂ!, ಧ್ರಾಂ ಧ್ರೀಂ ಧ್ರೂಂ! ಎಂದು ವ್ಯಂಗ್ಯವಾಗಿ ಹೀಯಾಳಿಸಿರುವುದನ್ನು ಕಾಣಬಹುದಾಗಿದೆ. ಹಾಗೂ ವೈದಿಕ ಭಾಷೆಯನ್ನು ವ್ಯಂಗ್ಯವಾಗಿ ಟೀಕಿಸುತ್ತಾರೆ. ಪೂರ್ಣಚಂದ್ರ ತೇಜಸ್ವಿ ಅವರು ವೈದಿಕ ಪ್ರಜ್ಞೆಯ ನೈತಿಕ ಮೌಲ್ಯಗಳನ್ನು ವ್ಯಂಗ್ಯವಾಗಿ ಹೇಳುವುದರ ಮೂಲಕ ವಿರೋಧ ವ್ಯಕ್ತಪಡಿಸುವುದನ್ನು ಗುರುತಿಸಬಹುದಾಗಿದೆ. ವೈದಿಕ ಚಿಂತನೆಗಳು ಸಮಾಜದಲ್ಲಿ ಅಸಮಾನತೆಗಳನ್ನು ಹುಟ್ಟುಹಾಕುವ ಚಿಂತನೆಗಳಾಗಿವೆ ಎಂದು ವ್ಯಂಗ್ಯವಾಗಿ ದೇವನೂರ ಮಹಾದೇವರು ಟೀಕಿಸಿದ್ದಾರೆ. ಹೀಗೆ ಬಳಸುವ ವ್ಯಂಗ್ಯ ಭಾಷಾ ಸಂವಹನವು ವೈದಿಕ ಧರ್ಮದ ಧಾರ್ಮಿಕ ವಿಧಿ ವಿಧಾನಗಳನ್ನು ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದು.

ಕೊನೆ ಟಿಪ್ಪಣಿ

೧. ಸೀತಾರಾಮಯ್ಯ(ಸಂ.), ಕವಿರಾಜಮಾರ್ಗಂ, ಪುಟ ೧೧೩

೨. ಅದೇ, ಪುಟ ೧೧೪

೩. ಪಂಪಭಾರತ ಪುಟ

೪. ಮಹೀಶವಾಡಿ ಬಿ.ಬಿ.(ಸಂ.), ನಯಸೇನನ ಧರ್ಮಾಮೃತ, ಪುಟ ೬, ೭

೫. ಬರಗೂರು ರಾಮಚಂದ್ರಪ್ಪ, ಕನ್ನಡ-ಸಂಸ್ಕೃತ ಸಂಬಂಧ ಸ್ಥಾನಮಾನ, ಸಿಹಿಗಾಳಿ ಮಾಸಿಕ, ಫೆಬ್ರವರಿ, ಸಂಪುಟ ೩, ಸಂಚಿಕೆ ೪, ಪುಟ ೬

೬. ಕುಲಕರ್ಣಿ ಆರ್.ವಿ., ಕಬ್ಬಿಗರ ಕಾವಂ. ಗದ್ಯಾನುವಾದ, ಪುಟ ೧೨

೭. ಬರಗೂರು ರಾಮಚಂದ್ರಪ್ಪ, ಕನ್ನಡ-ಸಂಸ್ಕೃತ ಸಂಬಂಧ ಸ್ಥಾನಮಾನ, ಸಿಹಿಗಾಳಿ ಮಾಸಿಕ, ಫೆಬ್ರವರಿ, ಸಂಪುಟ ೩, ಸಂಚಿಕೆ ೪, ಪುಟ ೬

೮. ನಾರಾಯಣ ಕೆ.ವಿ., ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು, ಮುನ್ನುಡಿಯಲ್ಲಿ

೯. ಬಿ.ಎಂ.ಶ್ರೀ., ಕನ್ನಡ ಮಾತು ತಲೆಯೆತ್ತುವ ಬಗೆ, ಶ್ರೀಸಾಹಿತ್ಯ, ಪುಟ ೨೫೪

೧೦. ಕುವೆಂಪು. ಸಮಗ್ರ ಗದ್ಯ, ೨, ಪುಟ ೧೭

೧೧. ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ ೧೯೬

೧೨. ಅದೇ, ಪುಟ ೩೩, ೩೪

೧೩. ಸಿದ್ಧಲಿಂಗಯ್ಯ(ಲೇ.), ಚಂದ್ರಿಕಾ ಪಿ.(ಸಂ.), ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ ೫೪

೧೪. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೨೫೩

೧೫. ದೇವನೂರ ಮಹಾದೇವ, ದೇವನೂರ ಮಹಾದೇವ ಅವರ ಕೃತಿಗಳು, ಕುಸುಮಬಾಲೆ, ಪುಟ ೧೪೪

೧೬. ರಾಮಚಂದ್ರನ್ ಸಿ.ಎನ್., ಕುಸುಮಬಾಲೆ: ಅಖಂಡಗತಿಯ ಕಥನ, ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ ೨೧೫

೧೭. ರಾಜಶೇಖರಯ್ಯ ಎ.ಎಂ.,(ಸಂ) ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ ೩), ಪುಟ ೪೫, ೪೬

೧೮. ಕುವೆಂಪು, ನೆನಪಿನ ದೋಣಿಯಲ್ಲಿ, ಪುಟ ೬೯, ೭೦

೧೯. ಕುವೆಂಪು, ಕಾನೂರು ಹೆಗ್ಗಡಿತಿ ಪುಟ ೬೬

೨೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೪೩೨

೨೧. ಅಂಗಡಿ ಎಸ್.ಎಸ್., ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪುಟ ೫

೨೨. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೪೩೨

೨೩. ಅದೇ, ಪುಟ ೪೩೨

೨೪. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ ೧೧೪

೨೫. ಅದೇ, ಪುಟ ೧೧೪

೨೬. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೪೨೬, ೪೨೭

೨೭. ಅದೇ, ಪುಟ ೪೨೬, ೪೨೭

೨೮. ಅದೇ, ಪುಟ ೧೬

೨೯. ಅದೇ, ಪುಟ ೧೦೦

೩೦. ಅದೇ, ಪುಟ ೫೮೨

೩೧. ಕುವೆಂಪು, ಕಾನೂರು ಹೆಗ್ಗಡಿತಿ, ಪುಟ ೧೦೨

೩೨. ಅದೇ, ಪುಟ ೩೨೫

೩೪. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ ೬೩

೩೫. ಅದೇ, ಪುಟ ೯೭

೩೬. ಅದೇ, ಪುಟ ೧೩೬

೩೭. ಅದೇ, ಪುಟ ೧೮೬

೩೮. ಅದೇ, ಪುಟ ೨೧೨

೩೯. ಪೂರ್ಣಚಂದ್ರ ತೇಜಸ್ವಿ, ಕರ್ವಾಲೊ, ಪುಟ ೧೮

೪೦. ಅದೇ, ಪುಟ ೨೪

೪೧. ಅದೇ, ಪುಟ ೩೯

೪೨. ಅದೇ, ಪುಟ ೪೭

೪೩. ಅದೇ, ಪುಟ ೬೪

೪೪. ದೇವನೂರ ಮಹಾದೇವ, ದೇವನೂರ ಮಹಾದೇವ ಅವರ ಕೃತಿಗಳು, ಕುಸುಮಬಾಲೆ, ಪುಟ ೧೧೭

೪೫. ಅದೇ, ಒಡಲಾಳ, ಪುಟ ೬೧

೪೬. ನಾಗಭೂಷಣ ಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಪುಟ ೩೫೪, ೩೫೫

೪೭. ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ ೧೯

೪೮. ಕುವೆಂಪು, ಬ್ರಾಹ್ಮಣನಾಯಿ–ಶೂದ್ರಕೋಳಿ, ಸಮಗ್ರ ಕಾವ್ಯ ಸಂಪುಟ ೨, ಪು, ೪೦೦

೪೯. ಅದೇ, ಪುಟ ೪೦೦

೫೦. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೪೨೯

೫೧. ಅದೇ, ಪುಟ ೪೩೫೦

೫೨. ಪೂರ್ಣಚಂದ್ರ ತೇಜಸ್ವಿ, ಕರ್ವಾಲೊ, ಪುಟ ೧೬

೫೩. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ ೧೧೪

೫೪. ಪೂರ್ಣಚಂದ್ರ ತೇಜಸ್ವಿ, ಹುಲಿಯೂರಿನ ಸರಹದ್ದು, ಪುಟ ೪೪

೫೫. ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೧೯

೫೬. ಅದೇ, ಪುಟ, ೧೧೪

* * *

ಅಧ್ಯಾಯ: ಐದು

ಶಿಕ್ಷಣ

ಅಧ್ಯಾಯ: ಐದು

ಶಿಕ್ಷಣ

ಶಿಕ್ಷಣ ಎಂಬುದು ವಿಶಾಲವಾದ ಅರ್ಥ ಮತ್ತು ವ್ಯಾಪ್ತಿಯನ್ನು ಹೊಂದಿದೆ. ಶಿಕ್ಷಣ ಮಾನವರ ವ್ಯಕ್ತಿತ್ವ ಬೆಳವಣಿಗೆಯನ್ನು ಮಾಡುತ್ತದೆ ಹಾಗೂ ಸಮಾಜವನ್ನು ವಿಕಾಸ ಮಾಡುತ್ತದೆ. ಶಿಕ್ಷಣ ಸಮಾಜದ ಪ್ರಗತಿಯ ಅಳತೆಗೋಲು. ಆದರೆ ಭಾರತದ ಶಿಕ್ಷಣವ್ಯವಸ್ಥೆಯು ವೈದಿಕ ಶಿಕ್ಷಣ ಪದ್ಧತಿಯ ಆಧಾರದಿಂದ ರಚಿತವಾಗಿದೆ. ಹಾಗಾಗಿ ಶಿಕ್ಷಣವು ಶತಶತಮಾನಗಳಿಂದ ಮೇಲು ವರ್ಗದ ಜನರ ಹಿಡಿತದಲ್ಲಿ ಇದೆ. ವೈದಿಕ ಧರ್ಮದ ವರ್ಣಪದ್ಧತಿಯಿಂದ ಕೆಳವರ್ಗದ ಜನರು ಶಿಕ್ಷಣ ಪಡೆಯುವಂತಿಲ್ಲ ಎಂದು ಕಾನೂನು ಮಾಡಿದ್ದರಿಂದ ಕೆಳವರ್ಗದ ಜನರನ್ನು ಶಿಕ್ಷಣದಿಂದ ವಂಚಿಸುವ ಕೆಲಸವನ್ನು ಪುರೋಹಿತಶಾಹಿ ಮಾಡಿದೆ. ಕೆಳವರ್ಗದ ಜನರು ಶಿಕ್ಷಣವನ್ನು ಪಡೆದರೆ ಕ್ರೂರವಾದ ಶಿಕ್ಷೆಯನ್ನು ಕೊಡಲಾಗುತ್ತಿತ್ತು. ಒಟ್ಟಿನಲ್ಲಿ ಶಿಕ್ಷಣವು ವೈದಿಕರ ಕಪಿಮುಷ್ಟಿಯಲ್ಲಿ ಇತ್ತು. ಸಮಾಜದಲ್ಲಿ ಶಿಕ್ಷಣವು ಪ್ರತಿಯೊಬ್ಬ ಮನುಷ್ಯನ ಬದುಕಿನ ಅವಿಭಾಜ್ಯ ಅಂಗ ಎನ್ನುವ ವಾಸ್ತವಾಂಶವನ್ನು ಉದ್ದೇಶಪೂರ್ವಕವಾಗಿ ಸಮಾಜದಲ್ಲಿ ಮರೆಮಾಚಲಾಗಿತ್ತು. ಸಮಾಜದಲ್ಲಿ ಎಲ್ಲರಿಗೂ ಶಿಕ್ಷಣದ ಅವಕಾಶದ ಹಕ್ಕನ್ನು ಕಿತ್ತುಕೊಳ್ಳಲಾಗಿತ್ತು. ಹಾಗಾಗಿ ಶತಶತಮಾನಗಳಿಂದ ಶಿಕ್ಷಣದ ವಿಚಾರದಲ್ಲಿ ಜನಸಮಾನ್ಯರನ್ನು ವೈದಿಕರು ಶೋಷಿಸಿರುವ ಬಗ್ಗೆ ಕನ್ನಡ ಸಾಹಿತ್ಯ ಪ್ರಶ್ನಿಸಿದೆ ಮತ್ತು ವಿರೋಧವನ್ನು ವ್ಯಕ್ತಪಡಿಸಿದೆ.

ಪ್ರಾಚೀನ ಶಿಕ್ಷಣ ಪದ್ಧತಿಯು ಎಲ್ಲರ ಸೊತ್ತು ಎಂದು ಭಾವಿಸಲು ಆಗುವುದಿಲ್ಲ. ಕೇವಲ ವೈದಿಕರ ಸೊತ್ತು ಎಂದು ಭಾವಿಸಲಾಗಿತ್ತು ಹಾಗೂ ಸ್ವಂತ ಆಸ್ತಿ ಎಂದು ಪರಿಗಣಿಸಲಾಗಿತ್ತು. ಹಾಗಾಗಿ ಶಿಕ್ಷಣವನ್ನು ವೈದಿಕ ಹಿನ್ನೆಲೆಯಿಂದ ವ್ಯಾಖ್ಯಾನಗೊಂಡಿತ್ತು. ಶಿಕ್ಷಣವು ಸಮಾಜದಲ್ಲಿ ವಿಶಾಲಾರ್ಥದಲ್ಲಿ ಇರಲಿಲ್ಲ. ಶಿಕ್ಷಣವು ಸಂಕುಚಿತಾರ್ಥದಲ್ಲಿ ಪರಿಭಾವಿಸಲಾಗಿತ್ತು. ಶಿಕ್ಷಣವನ್ನು ಕೊಡುವ ಗುರು ಮತ್ತು ಶಿಕ್ಷಣವನ್ನು ಪಡೆಯುವ ಶಿಷ್ಯರು ಸೀಮಿತ ವರ್ಗವಾದ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿರುತ್ತಿದ್ದರು. ಅಗ್ರಹಾರಗಳು, ಮಠಗಳು, ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು ಮತ್ತು ದೇವಾಲಯಗಳು ವೈದಿಕರ ಶಿಕ್ಷಣ ಕೇಂದ್ರಗಳಾಗಿದ್ದವು. ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಂದು

ಜಾತಿಗೂ ವೃತ್ತಿಯನ್ನು ನಿಗದಿಪಡಿಸಲಾಗಿತ್ತು. ಹಾಗಾಗಿ ಶಿಕ್ಷಣ ಬೋಧಿಸುವುದು ಮತ್ತು ಕಲಿಯುವುದು ಬ್ರಾಹ್ಮಣರ ವೃತ್ತಿಯಾಗಿತ್ತು. ಅಧ್ಯಯನ ಮತ್ತು ಅಧ್ಯಾಪನ ಮಾಡುವವರು ಬ್ರಾಹ್ಮಣರು ಎಂದು ಸಾಮಾಜಿಕವಾಗಿ ಅಂಗೀಕಾರವನ್ನು ಪಡೆದಿದ್ದರು. ಬ್ರಾಹ್ಮಣರು ಧಾರ್ಮಿಕ ಕಾರ್ಯಗಳನ್ನು ನಡೆಸುವವರಾಗಿದ್ದರಿಂದ ಶಿಕ್ಷಣವು ಬ್ರಾಹ್ಮಣರಿಗೆ ಮಾತ್ರ ಎಂದು ಸಮಾಜದಲ್ಲಿ ನಂಬಿಸಲಾಗಿತ್ತು. ಹಾಗಾಗಿ ವೈದಿಕ ಶಿಕ್ಷಣವ್ಯವಸ್ಥೆ ಸಮಾಜದಲ್ಲಿ ಖಾಸಗಿಯಾಗಿತ್ತೇ ವಿನಾ ಸಾರ್ವಜನಿಕವಾಗಿ ಇರಲಿಲ್ಲ.

ವೈದಿಕ ಶಿಕ್ಷಣಪದ್ಧತಿಯು ಧರ್ಮವನ್ನು ಆಧರಿಸಿ ಶಿಕ್ಷಣವನ್ನು ಕೊಡುತ್ತಿತ್ತು. ಪ್ರಾಚೀನ ಭಾರತದಲ್ಲಿ ಶಿಕ್ಷಣ ಈ ರೀತಿ ಉಗಮವಾಯಿತು; "ಯಜ್ಞ ಯಾಗಾದಿಗಳನ್ನು ಕೇಂದ್ರವಾಗಿಟ್ಟುಕೊಂಡು ವೈದಿಕ ಹಾಗೂ ಧಾರ್ಮಿಕ ಆಚರಣೆಗಳು ಚಾಲ್ತಿಗೆ ಬಂದವು. ಈ ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದ, ವೈದಿಕರು ಸತತವಾದ ಪುನರಾವರ್ತನೆಯ ಮೂಲಕ ತಮ್ಮ ಜ್ಞಾನವನ್ನು ಮಕ್ಕಳು, ಸೋದರ ಸಂಬಂಧಿಕರು ಹಾಗೂ ಇತರ ಬಂಧುಗಳಿಗೆ ಧಾರೆ ಎರೆಯುತ್ತಿದ್ದರು. ಇವರು ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ವೈದಿಕ ವರ್ಗದವರು ತಮ್ಮ ಮನೆಗಳಲ್ಲಿ ಶ್ಲೋಕಗಳನ್ನು, ಮಂತ್ರಗಳನ್ನು ಬಾಯ್ದೆರೆಯಾಗಿ ಕಿರಿಯರಿಗೆ ದಾಟಿಸುತ್ತಿದ್ದರು. ಈ ಪ್ರಕ್ರಿಯೆಯೇ ಪ್ರಾಚೀನ ಭಾರತದ ಶಿಕ್ಷಣದ ಆರಂಭವೆನ್ನಬಹುದು. ಶತಮಾನಗಳ ಕಾಲ ಮನೆಯೇ ವಿದ್ಯಾಕೇಂದ್ರವಾಗಿತ್ತು. ಕಾಲ ಸರಿದಂತೆ, ನಿರ್ದಿಷ್ಟ ಕ್ರಮನಿಯಮಗಳು ಹಾಗೂ ಆಚರಣೆಗಳ ಮುಖೇನ ವ್ಯವಸ್ಥೆಯೊಂದು ರೂಪುಗೊಂಡಿತು; ಶಿಕ್ಷಣವು ಸಾಮಾಜಿಕ ಮನ್ನಣೆಯ ಗಂಭೀರ ಚಟುವಟಿಕೆಯಾಗಿ ಮಾರ್ಪಟ್ಟಿತು. ಶಿಕ್ಷಣದ ವಿವಿಧ ಹಂತಗಳು ಉದ್ಭವಿಸಿದವು. ಪ್ರತಿಯೊಂದು ಹಂತದಲ್ಲೂ ನಿರ್ದಿಷ್ಟ ಪ್ರವೇಶ ಪ್ರಕ್ರಿಯೆಗಳು, ಖಚಿತ ಉದ್ದೇಶಗಳು, ಅಧ್ಯಯನ ವಿಷಯಗಳು, ಗುರುಗಳು ಹಾಗೂ ಶಿಷ್ಯರಿಗೆ ನೀತಿಸಂಹಿತೆ ಮೊದಲಾದವುಗಳು ಸಾಕಾರಗೊಂಡವು."[೧] ಹೀಗೆ ವೈದಿಕರು ತಮ್ಮ ಜ್ಞಾನವನ್ನು ತಮ್ಮ ಮಕ್ಕಳು ಮತ್ತು ಸಂಬಂಧಿಕರಿಗೆ ಧಾರೆ ಎರೆಯುವುದರ ಮೂಲಕ ಶಿಕ್ಷಣವನ್ನು ಕೊಟ್ಟರು ಹಾಗೂ ಶಿಕ್ಷಣವನ್ನು ಬೋಧಿಸುವ ಮತ್ತು ನಿಯಂತ್ರಿಸುವ ಹಕ್ಕನ್ನು ಪ್ರಭುತ್ವದಲ್ಲಿ ಪಡೆದುಕೊಂಡರು.

ವೈದಿಕ ಶಿಕ್ಷಣವು ಸಮಾಜದಲ್ಲಿ ಅಸಮಾನತೆಯಿಂದ ಕೂಡಿದೆ. ವೈದಿಕ ಶಿಕ್ಷಣಪದ್ಧತಿಯು ಈ ಕೆಳಗಿನಂತೆ ಉದ್ದೇಶಗಳನ್ನು ಒಳಗೊಂಡಿದೆ. ಶಿಕ್ಷಣವು ದೇವಸ್ವರೂಪಿಯಾದುದು, ಪವಿತ್ರವಾದುದ್ದು ಎಂದು ಪರಿಗಣಿಸಲಾಗಿತ್ತು. ಶಿಕ್ಷಣವನ್ನು ಅಪಾರವಾದ ಶ್ರದ್ಧೆಯಿಂದ ಪಡೆಯಬೇಕು ಮತ್ತು ವೈದಿಕ ಧರ್ಮದ ತಾತ್ವಿಕತೆಯ ಮೂಲಕ ಆತ್ಮ ಸಾಕ್ಷಾತ್ಕಾರವನ್ನು ವಿದ್ಯಾರ್ಥಿಗಳು ಕಂಡುಕೊಳ್ಳುವಂತೆ ಮಾಡುವುದು ಶಿಕ್ಷಣದ ಉದ್ದೇಶವಾಗಿತ್ತು. ವೈದಿಕ ಧಾರ್ಮಿಕ ಪಠ್ಯಗಳು ಮಾತ್ರ ನಿಜವಾದ ಜ್ಞಾನದ ಮೂಲವೆಂದು ಪರಿಗಣಿಸಿ, ಧಾರ್ಮಿಕ ಸಾಹಿತ್ಯವನ್ನು ಕಲಿಸುವುದೇ ಗುರಿಯಾಗಿತ್ತು. ಧಾರ್ಮಿಕ ಗ್ರಂಥಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಧರ್ಮಕೇಂದ್ರಿತವಾದ ಪಠ್ಯಗಳನ್ನು ರಚಿಸಲಾಗಿತ್ತು. ಹಿಂದೂ ಧರ್ಮದ ಪ್ರಾಚೀನ ಧರ್ಮಗ್ರಂಥಗಳಾದ ವೇದಗಳು ಪ್ರಧಾನ ಅಧ್ಯಯನದ

ವಿಷಯವಾಗಿದ್ದವು. ಯಜ್ಞಯಾಗಾದಿಗಳೇ ಜ್ಞಾನದ ಗಣಿಗಳು ಎಂದು ಪರಿಗಣಿಸಿ ಶಿಕ್ಷಣವನ್ನು ಕೊಡುತ್ತಿದ್ದರು. ಧಾರ್ಮಿಕ ಹಿತಾಸಕ್ತಿಗಳನ್ನು ಪೋಷಿಸುವುದು ಮತ್ತು ಮೋಕ್ಷ ಸಂಪಾದನೆ ಮಾಡುವುದೇ ಶಿಕ್ಷಣದ ಮುಖ್ಯ ಗುರಿಯಾಗಿತ್ತು. ವಿದ್ಯಾರ್ಥಿಗಳನ್ನು ಪೌರತ್ಯ ಮಾಡುವ ಪುರೋಹಿತರನ್ನಾಗಿ ಮಾಡುವುದೇ ಶಿಕ್ಷಣದ ಉದ್ದೇಶವಾಗಿತ್ತು. ಪೌರತ್ಯಕ್ಕೆ ಬೇಕಾಗಿರುವ ಮಂತ್ರಗಳನ್ನು ಮೌಖಿಕವಾಗಿ ಕಲಿಸುತ್ತಿದ್ದರು. ವೈದಿಕ ಶಿಕ್ಷಣವನ್ನು ಪಾಮರರು ಕಲಿಯಲು ಅವಕಾಶ ಇರಲಿಲ್ಲ. ಏಕೆಂದರೇ, ವೇದಗಳ ಭಾಷೆ ಸಂಸ್ಕೃತವಾಗಿತ್ತು. ಹಾಗಾಗಿ ಸಂಸ್ಕೃತ ಶೂದ್ರರ ಭಾಷೆ ಅಲ್ಲ ಎಂದು ಮತ್ತು ಸಂಸ್ಕೃತ ಉಚ್ಚರಿಸಲು ಬರುವುದಿಲ್ಲ ಎಂದು ವೈದಿಕರು ಪರಿಗಣಿಸಿದ್ದರು. ಜಾತಿಯ ಕಾರಣದಿಂದ ಶೂದ್ರರಿಗೆ ಶಿಕ್ಷಣ ಕೊಡಬಾರದು ಎಂದು ನಿರ್ಧರಿಸಿದ್ದರು. ಪುರೋಹಿತರಿಗೆ ಮತ್ತು ವೈದಿಕರಿಗೆ ಮಾತ್ರ ವಿದ್ಯಾಭ್ಯಾಸದ ಅವಕಾಶವನ್ನು ಕೊಡಬೇಕು ಎಂದು ವೈದಿಕ ಶಿಕ್ಷಣಪದ್ಧತಿ ನಿರ್ಧರಿಸಿತ್ತು. ಹಾಗಾಗಿ ವೈದಿಕ ಧರ್ಮದ 'ಉಪನಯನ'ದ ಮೂಲಕ ಶಿಕ್ಷಣವನ್ನು ಪ್ರಾರಂಭಿಸಲಾಗುತಿತ್ತು. ಕಲಿಯವುದು ಪವಿತ್ರ ಕಾರ್ಯ ಎಂದು ಪರಿಗಣಿಸಿದ್ದರು. ವೇದವನ್ನು ಅಧ್ಯಯನ ಮಾಡುವುದರಿಂದ ದೇವರಿಗೆ ಹತ್ತಿರವಾಗುತ್ತವೆ ಎಂಬ ನಂಬಿಕೆಯನ್ನು ಸೃಷ್ಟಿಸಲಾಗಿತ್ತು ಹಾಗೂ ವಿದ್ಯಾರ್ಥಿಗಳಿಗೆ ಛಂದಸ್ಸು ಮತ್ತು ವ್ಯಾಕರಣಗಳನ್ನು ಕಲಿಸಲಾಗುತ್ತಿತ್ತು. ವೇದಗಳ ಬೋಧನೆಯೇ ಪ್ರಧಾನವಾಗಿತ್ತು. ಬ್ರಾಹ್ಮಣರಿಗೆ ಮಾತ್ರ ಉನ್ನತ ಮಟ್ಟದ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಕ್ಷತ್ರಿಯರಿಗೆ ಮತ್ತು ವೈಶ್ಯರಿಗೆ ಪ್ರಾರ್ಥನಾ ಮಂತ್ರಗಳನ್ನು ಮಾತ್ರ ಉಚ್ಚರಿಸುವಷ್ಟು ಶಿಕ್ಷಣವನ್ನು ಕೊಡುವುದು ಉದ್ದೇಶವಾಗಿತ್ತು. ಔಪಚಾರಿಕ ಶಿಕ್ಷಣದಿಂದ ಕೆಳವರ್ಗದ ಜನರನ್ನು ದೂರ ಇಡಲಾಗಿತ್ತು. ಗುರುಕುಲಗಳಲ್ಲಿ ವಿದ್ಯಾರ್ಥಿಗಳು ಗುರುಗಳ ಸೇವೆಯನ್ನು ಮಾಡಿ ಶಿಕ್ಷಣವನ್ನು ಪಡೆಯುತ್ತಿದ್ದರು. ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯಬೇಕಾದರೇ ದೇಹದಂಡನೆಯನ್ನು ಮಾಡಬೇಕಾಗಿತ್ತು.

ವೈದಿಕ ಶಿಕ್ಷಣಪದ್ಧತಿಯಲ್ಲಿ ಗುರುಗಳ ಪಾತ್ರವನ್ನು ಬ್ರಾಹ್ಮಣರು ವಹಿಸಿಕೊಂಡಿದ್ದರು. ಶಿಕ್ಷಣದ ತತ್ತ್ವಗಳು ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಆಚರಣೆಗಳನ್ನು ಗುರುಗಳೇ ನಿರ್ಧರಿಸಬೇಕಾಗಿತ್ತು. ಶಿಕ್ಷಣಕ್ಕೆ ಸಂಬಂಧಿಸಿದ ಪಠ್ಯಕ್ರಮ, ಬೋಧನೆ ವಿಧಾನಗಳು, ಶಿಸ್ತು ಮತ್ತು ವಿದ್ಯಾರ್ಥಿಗಳ ಮೌಲ್ಯಮಾಪನಗಳು ಹೇಗಿರಬೇಕು ಎಂದು ಗುರುಗಳೇ ನಿರ್ಧರಿಸುತ್ತಿದ್ದರು. ಸಮಾಜದಲ್ಲಿ ಬದುಕಲು ಬೇಕಾದ ನೈತಿಕ ಮೌಲ್ಯಗಳು ಯಾವುವು? ಜ್ಞಾನ ಯಾವುದು? ಎಂಬುದನ್ನು ಗುರುಗಳೇ ನಿರ್ಧರಿಸುತ್ತಿದ್ದರು. ಗುರುಗಳಿಗೆ ಸಮಾಜದಲ್ಲಿ ಅತ್ಯುನ್ನತವಾದ ಸ್ಥಾನಮಾನವನ್ನು ಕಲ್ಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ವೈದಿಕ ಶಿಕ್ಷಣಪದ್ಧತಿಯ ಮೇಲೆ ವೈದಿಕ ಧರ್ಮವು ಗಾಢವಾದ ಪ್ರಭಾವ ಬೀರಿದೆ. ಶಿಕ್ಷಣದ ಉದ್ದೇಶ, ಪಠ್ಯವಸ್ತು, ಬೋಧನ ವಿಧಾನಗಳು ಹಾಗೂ ಶಿಕ್ಷಣದಿಂದ ಪಡೆಯುವ ಪ್ರತಿಫಲಗಳನ್ನು ವೈದಿಕರ ಮಾರ್ಗದರ್ಶನ ಹಾಗೂ ಬೆಂಬಲದಿಂದ ಮಾತ್ರವೇ ಶಿಕ್ಷಣವ್ಯವಸ್ಥೆಯು ನಿಂತಿದೆ. ಹಾಗಾಗಿ ಯಾವುದೇ ಬಾಹ್ಯ ಹಸ್ತಕ್ಷೇಪ ಅಥವಾ ನಿಯಂತ್ರಣವಿಲ್ಲದೆ ಗುರುವಿನ ಸರ್ವಾಧಿಕಾರಿ ಧೋರಣೆಯಲ್ಲಿ ಶಿಕ್ಷಣವನ್ನು ಕೊಡಲಾಗುತ್ತಿತ್ತು.

ವೈದಿಕ ಧರ್ಮದಲ್ಲಿ ಮಹಿಳೆಯರಿಗೆ ಶಿಕ್ಷಣ ಕೊಡುವುದು ಕಡ್ಡಾಯವಾಗಿರಲಿಲ್ಲ. ವೈದಿಕಪೂರ್ವ ಯುಗದಲ್ಲಿ ಸ್ತ್ರೀಯರು ಪತಿಯೊಂದಿಗೆ ವೈದಿಕ ಯಜ್ಞಯಾಗಾದಿಗಳಲ್ಲಿ ಮತ್ತು ಧಾರ್ಮಿಕ ವಿಧಿಗಳಲ್ಲಿ ಸ್ತ್ರೀಯರು ಕೂಡ ಕೆಲವೊಂದು ಮಂತ್ರಗಳನ್ನು ಪಠನ ಮಾಡಬೇಕಾಗಿತ್ತು. ಈ ಮಂತ್ರಗಳನ್ನು ಸರಿಯಾಗಿ ಉಚ್ಚರಿಸಲು ಸ್ವಲ್ಪ ಪ್ರಮಾಣದ ಔಪಚಾರಿಕ ಶಿಕ್ಷಣವನ್ನು ಮಹಿಳೆಯರಿಗೆ ಕೊಡಲಾಗುತ್ತಿತ್ತು. ಈ ಶಿಕ್ಷಣ ಮೇಲುವರ್ಗದ ಮಹಿಳೆಯರಿಗೆ ಮಾತ್ರ ಸೀಮಿತವಾಗಿತ್ತು. ವೈದಿಕೋತ್ತರ ಕಾಲದಲ್ಲಿ ಮಹಿಳೆ ಬಯಸಿದರೆ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶವಿತ್ತು. ಇಲ್ಲಿ ಕೂಡ ಮೇಲ್ಜಾತಿ ವರ್ಗದ ಮಹಿಳೆಯರಿಗೆ ಮಾತ್ರ ಕೆಲವು ನಿಬಂಧನೆಗಳನ್ನು ವಿಧಿಸಿ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಆದರೆ ಮಹಿಳೆಯರು ಶಿಕ್ಷಣವನ್ನು ಗುರುಕುಲದಲ್ಲಿ ಪಡೆಯುವಂತಿರಲಿಲ್ಲ. ಅವರ ಮನೆಯಲ್ಲಿ ಹಿರಿಯರ ಮುಖೇನ ವಿದ್ಯೆಯನ್ನು ಪಡೆಯಬಹುದಾಗಿತ್ತು. ಈ ಕಾಲದಲ್ಲಿ ವೈದಿಕ ನಿರ್ಬಂಧಗಳನ್ನು ಮೀರಿ 'ಗಾರ್ಗಿ', 'ಮೈತ್ರೇಯಿ' ಅವರು ಶಿಕ್ಷಣ ಸಂಪಾದಿಸಿರುವುದನ್ನು ಕಾಣಬಹುದಾಗಿದೆ. ವೈದಿಕೋತ್ತರ ಕಾಲದ ಕೊನೆಯಲ್ಲಿ ಮನು ಸೃಷ್ಟಿಸಿದ 'ಮನುಸ್ಮೃತಿ'ಯ ಕಾನೂನಿನ ಪ್ರಕಾರ ಮಹಿಳೆಯರು ಶಿಕ್ಷಣವನ್ನು ಪಡಿಯುವಂತಿಲ್ಲ ಎಂದು ಕಾನೂನು ಮಾಡಲಾಯಿತು. ಹೆಣ್ಣುಮಕ್ಕಳಿಗೆ ಬಾಲ್ಯದಲ್ಲೇ ಮದುವೆ ಮಾಡಬೇಕು ಎಂದು ಕಾನೂನು ತರಲಾಯಿತು. ಆದ್ದರಿಂದ ಮದುವೆಯಾದ ಮೇಲೆ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅವಕಾಶ ನೀಡುತ್ತಿರಲಿಲ್ಲ. ಹೆಣ್ಣುಮಕ್ಕಳು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಂತಿರಲಿಲ್ಲ. ಮಂತ್ರಗಳನ್ನು ಉಚ್ಚರಿಸಲು ಅರ್ಹತೆಯಿಲ್ಲ ಎಂದು ಮನು ಕಾನೂನು ಮಾಡಿದ್ದನು. ಒಟ್ಟಿನಲ್ಲಿ ಸಾಮಾಜಿಕವಾಗಿ ಮಹಿಳೆಯರನ್ನು ಕೀಳಾಗಿ ನೋಡುವ ಪದ್ಧತಿ ಜಾರಿಗೆ ಬಂದಿತ್ತು. ಹೀಗೆ ಸ್ತ್ರೀಯರ ಬಗೆಗೆ ತಾರತಮ್ಯ ಧೋರಣೆಗಯನ್ನು ವೈದಿಕ ಶಿಕ್ಷಣಪದ್ಧತಿ ಮಾಡಿದೆ.

ವೈದಿಕ ಶಿಕ್ಷಣಪದ್ಧತಿಯು ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿರುವ ಬಗ್ಗೆ ಬಿ.ಅರ್. ಅಂಬೇಡ್ಕರ್ ಅವರು ಹೀಗೆ ಹೇಳುತ್ತಾರೆ. "ಹಿಂದೂ ಧರ್ಮದಲ್ಲಿ ಸಾಂಪ್ರದಾಯಿಕ ಶಿಕ್ಷಣದ ಪರಿಕಲ್ಪನೆಯೆಂಬುದು ತೀರಾ ಸೀಮಿತ ಅರ್ಥದಲ್ಲಿದೆ. ಕೇವಲ ವೇದಾಧ್ಯಯನಕ್ಕೆ ಸಾಂಪ್ರದಾಯಿಕ ಶಿಕ್ಷಣವನ್ನು ಪರಿಮಿತಗೊಳಿಸಲಾಗಿದೆ. ಇದು ಸಹಜವೇ ಆಗಿದೆ. ವೇದಗಳ ಹೊರಗೆ ಜ್ಞಾನವೆಂಬುದೇ ಇಲ್ಲವೆಂಬುದು ಹಿಂದೂಗಳ ನಂಬಿಕೆ. ಆದುದರಿಂದ ಸಾಂಪ್ರದಾಯಿಕ ಶಿಕ್ಷಣವನ್ನು ವೇದಾಧ್ಯಯನಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಇದರ ಮತ್ತೊಂದು ಪರಿಣಾಮವೆಂದರೆ ವೇದಾಧ್ಯಯನಕ್ಕೆ ಸ್ಥಾಪಿಸಿದ ಶಾಲೆಗಳಲ್ಲಿಯೇ ಕಲಿಯಬೇಕೆನ್ನುವ ಕಡ್ಡಾಯ ಹಿಂದೂಧರ್ಮದಲ್ಲಿದೆ. ಈ ಶಾಲೆಗಳ ಪ್ರಯೋಜನ ಕೇವಲ ಬ್ರಾಹ್ಮಣರಿಗೆ ಮಾತ್ರ. ವರ್ತಕರು ಮತ್ತು ಕುಶಲಕರ್ಮಿಗಳ ತರಬೇತಿಗಾಗಿ, ವಿಜ್ಞಾನ ಮತ್ತು ಕಲೆಗಳನ್ನು ಅಧ್ಯಯನ ಮಾಡುವುದಕ್ಕಾಗಿ ಶಾಲೆಗಳನ್ನು ತೆರೆಯಬೇಕಾದ್ದು ತನ್ನ ಹೊಣೆಗಾರಿಕೆ ಎಂದು ರಾಜ್ಯವು ಭಾವಿಸಲಿಲ್ಲ. ರಾಜ್ಯಾಧಿಕಾರವು ಅವರನ್ನು ಕಡೆಗಣಿಸಿದ್ದರಿಂದ ತಮ್ಮ ಪಾಡನ್ನು ತಾವು ನೋಡಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು."[೨] ಹೀಗಾಗಿ ವೈದಿಕ ಶಿಕ್ಷಣಪದ್ಧತಿ ಬ್ರಾಹ್ಮಣರ ಹಿಡಿತದಲ್ಲಿ ಇತ್ತು. ಶಿಕ್ಷಣವು ಸಮಾಜದಲ್ಲಿ ಇರುವ ಪ್ರತಿಯೊಬ್ಬ ವ್ಯಕ್ತಿಯ ಸರ್ವಾಂಗೀಣ

ವಿಕಾಸವನ್ನು ವೈದಿಕ ಶಿಕ್ಷಣ ಪದ್ಧತಿಯು ತಡೆಯಿತು. ಔಪಚಾರಿಕ ಶಿಕ್ಷಣದಮೂಲಕ ಪಡೆದ ಶಿಕ್ಷಣವೇ ಶಿಕ್ಷಣ ಎಂದು ವೈದಿಕ ಶಿಕ್ಷಣಪದ್ಧತಿಯು ಪರಿಗಣಿಸಿತ್ತು. ಅನೌಪಚಾರಿಕ ಶಿಕ್ಷಣವನ್ನು ಸಮಾಜದಲ್ಲಿ ಪರಿಗಣಿಸಲಿಲ್ಲ. ವೈದಿಕರ ದೇವಾಲಯಗಳಲ್ಲಿ ಶಿಕ್ಷಣ ಕೇಂದ್ರಗಳು ಪ್ರಾರಂಭವಾದದ್ದರಿಂದ ಪುರೋಹಿತಶಾಹಿಗಳು ಶಿಕ್ಷಣದ ಮೂಲಕ ಸಮಾಜವನ್ನು ನಿಯಂತ್ರಿಸಿದರು. ಇದರಿಂದ ಸಾಮಾಜಿಕವಾಗಿ ಅಸಮಾನತೆ ಹುಟ್ಟಿಕೊಂಡಿತು. ಶಿಕ್ಷಣವು ದೈವ ಸಮಾನವಾದುದ್ದು ಎಂದು ಬಿಂಬಿಸಿದ್ದರಿಂದ ಕೆಳವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಜಾತಿ ಮತ್ತು ಲಿಂಗತಾರತಮ್ಯದಿಂದಾಗಿ ಶಿಕ್ಷಣ ಕೊಡುವುದನ್ನು ನಿರಾಕರಿಸಿದರು. ಈ ಅಮಾನವೀಯ ಚಿಂತನೆಗಳು ಶತಶತಮಾನದಿಂದ ಮುಂದುವರಿದುಕೊಂಡು ಬರಲು ಹಿಂದೂ ಮೂಲಭೂತವಾದಗಳು ಕಾರಣವಾಗಿವೆ. ಆದ್ದರಿಂದ ಆಧುನಿಕ ಕನ್ನಡ ಸಾಹಿತ್ಯವು ಶಿಕ್ಷಣದ ವಿಚಾರದಲ್ಲಿ ವೈದಿಕ ಹಿಂದೂ ಮೂಲಭೂತವಾದಿಗಳು ಮಾಡುತ್ತಿರುವ ಹುನ್ನಾರಗಳನ್ನು ಟೀಕಿಸಲಾಗಿದೆ. ಹಾಗೂ ವೈದಿಕ ಶಿಕ್ಷಣ ಪದ್ಧತಿಯನ್ನು ತಮ್ಮ ಸಾಹಿತ್ಯದಲ್ಲಿ ವಿವರಿಸಿದ್ದಾರೆ, ವಿಶ್ಲೇಷಣೆ ಮಾಡಿದ್ದಾರೆ ಮತ್ತು ವಿಮರ್ಶೆ ಮಾಡುವುದರ ಮೂಲಕ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸಿರುವುದನ್ನು ಗುರುತಿಸಬಹುದಾಗಿದೆ. ಹಾಗಾಗಿ ಆಧುನಿಕ ಲೇಖಕರಾದ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವೈದಿಕ ಶಿಕ್ಷಣದ ಚಿಂತನೆಗಳನ್ನು ವಿರೋಧಿಸಿರುವ ನೆಲೆಗಳನ್ನು ಗುರುತಿಸಬಹುದಾಗಿದೆ.

ಈ ಅಧ್ಯಾಯದಲ್ಲಿ ವೈದಿಕ ಶಿಕ್ಷಣ: ವಿರೋಧ ಪ್ರಜ್ಞೆ, ಆಧುನಿಕ ಶಿಕ್ಷಣ: ವೈದಿಕ ವಿರೋಧ, ಅನೌಪಚಾರಿಕ ಶಿಕ್ಷಣ, ಕೇಸರೀಕರಣ ಎಂಬ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಚರ್ಚಿಸಲಾಗಿದೆ. ವೈದಿಕ ಪ್ರಜ್ಞೆ ಶಿಕ್ಷಣವನ್ನು ಹೇಗೆ ಗ್ರಹಿಸಿದೆ ಮತ್ತು ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸಿರುವುದನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೫.೧. ವೈದಿಕ ಶಿಕ್ಷಣ: ವಿರೋಧ ಪ್ರಜ್ಞೆ

ವೈದಿಕ ಶಿಕ್ಷಣವ್ಯವಸ್ಥೆ ವೈದಿಕ ಧರ್ಮವನ್ನು ಆಧರಿಸಿ ಹುಟ್ಟಿಕೊಂಡಿದೆ. ಧಾರ್ಮಿಕ ವಿಧಿವಿಧಾನಗಳನ್ನು ಕಲಿಯುವುದು ಶಿಕ್ಷಣದ ಬಹುಮುಖ್ಯ ಗುರಿಯಾಗಿತ್ತು. ಹೀಗಾಗಿ ವೈದಿಕ ಶಿಕ್ಷಣವ್ಯವಸ್ಥೆ ಹಿಂದೂ ಮೂಲಭೂತವಾದವನ್ನು ಪ್ರತಿಪಾದಿಸುತ್ತದೆ. ಹಾಗಾಗಿ ವೈದಿಕ ಮನಸ್ಥಿತಿ ರಾಮಾಯಣ, ಮಹಾಭಾರತ ಕೃತಿಗಳಿಂದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅನೇಕ ಸಂಕುಚಿತ ತಂತ್ರಗಳನ್ನು ಹುಟ್ಟುಹಾಕಿತು. ಸಾಂಪ್ರದಾಯಿಕ ಶಿಕ್ಷಣವ್ಯವಸ್ಥೆಯ ಕ್ರೌರ್ಯದಿಂದ ಕೆಳವರ್ಗದ ಶಂಭೂಕ, ಏಕಲವ್ಯ, ಕರ್ಣರನ್ನು ಸಾಮಾಜಿಕ ಅವಕಾಶಗಳಿಂದ ವಂಚಿಸಿತು. ವೈದಿಕರು ವರ್ಣವ್ಯವಸ್ಥೆಯಿಂದ ಮಾಡಿದ ಅಮಾನವೀಯತೆಯಿಂದ ಸಮಾಜದಲ್ಲಿ ಒಡಕುಗಳಾದವು. ಹಾಗಾಗಿ ವೈದಿಕರ ಅಮಾನವೀಯ ಕಾರ್ಯತಂತ್ರಗಳಿಗೆ ಪ್ರತಿರೋಧಗಳು ಎದುರಾದವು. ಆದ್ದರಿಂದ ಕುವೆಂಪು ಅವರು 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು', 'ನೆನಪಿನ ದೋಣಿಯಲ್ಲಿ', 'ಶೂದ್ರ ತಪಸ್ವಿ' ಮತ್ತು 'ಬೆರಳ್‌ಗೆ ಕೊರಳ್' ಕೃತಿಗಳಲ್ಲಿ ವೈದಿಕರ ಸಾಂಪ್ರದಾಯಿಕ ಶಿಕ್ಷಣವ್ಯವಸ್ಥೆಯನ್ನು ವಿರೋಧಿಸುತ್ತಾರೆ.

ಶೂದ್ರರು ಶಿಕ್ಷಣವನ್ನು ಪಡೆದರೆ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ಕೊಡಬೇಕು ಎಂದು ಮನುಧರ್ಮ ಶಾಸ್ತ್ರ ಕಾನೂನು ಮಾಡಿತು. ಹಾಗಾಗಿ ಪುರೋಹಿತಶಾಹಿ ಪ್ರಭುತ್ವದಲ್ಲಿ ಶೂದ್ರರಿಗೆ ಶಿಕ್ಷಣವನ್ನು ಕೊಡಲು ನಿರಾಕರಣೆ ಮಾಡಲಾಯಿತು. ಆದ್ದರಿಂದ ಕುವೆಂಪು ವೈದಿಕರ ಶಿಕ್ಷಣವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ. ಹಾಗೂ ವೈದಿಕರು ಪುರಾಣದ ಮೂಲಕ ಸೃಷ್ಟಿ ಮಾಡಿದ ಸಂಕುಚಿತ ಮನಸ್ಥಿತಿಯನ್ನು ವಿರೋಧಿಸಿ ಪುರಾಣ ಕೃತಿಗಳನ್ನು ಮರುಸೃಷ್ಟಿ ಮಾಡುತ್ತಾರೆ. "ಭಾರತದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲಿ ದಾಖಲಾದ ಅಮಾನವೀಯ ನೆಲೆಗಳನ್ನು ಕುವೆಂಪು ಸಂವೇದನೆ ಮರುಸೃಷ್ಟಿಗೆ ಒಡ್ಡುತ್ತದೆ. ಇಲ್ಲಿ ಶ್ರೇಣೀಕೃತ ವ್ಯವಸ್ಥೆಯ ಕೆಳಸ್ತರದ ಸಾಂಕೇತಿಕ ಪಾತ್ರಗಳಾದ ಏಕಲವ್ಯ ಮತ್ತು ಶಂಭೂಕ ಇವರ ದುರಂತ ಕಥನಗಳು ಸಾಂಪ್ರದಾಯಿಕ ಶಿಕ್ಷಣದ ಅಮಾನವೀಯ ಧೋರಣೆಗಳನ್ನು ಪ್ರಕಟಿಸುವಂಥವಾಗಿವೆ. ಶಿಕ್ಷಣವನ್ನು ಪಡೆದದ್ದರಿಂದ ಸಾಮ್ರಾಜ್ಯಶಾಹಿ ಮತ್ತು ಪುರೋಹಿತಶಾಹಿಯ ಕ್ರೌರ್ಯಕ್ಕೆ ಸಿಕ್ಕಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡ ಅಸಂಖ್ಯ ಕೆಳಸ್ತರದವರನ್ನು ಈ ಪಾತ್ರಗಳು ಪ್ರತಿನಿಧಿಸುತ್ತವೆ. ಶೂದ್ರ ಮತ್ತು ಶೂದ್ರೇತರರು ವಿದ್ಯೆಯನ್ನು ಪಡೆಯುವುದು ಅಪರಾಧವೆಂದು ಭಾವಿಸಿದ ಮೂಲಭೂತವಾದಿ ಮತ್ತು ಪ್ರಭುತ್ವಶಕ್ತಿಗಳು ಏಕಲವ್ಯನ ಬೆರಳನ್ನು ಬಲಿ ತೆಗೆದುಕೊಂಡರೆ, ಶಂಭೂಕನ ಪ್ರಾಣವನ್ನೇ ಅವು ಬೇಡುತ್ತವೆ. ಕುವೆಂಪು ಸಂವೇದನೆ ಇಂಥ ಪುರಾಣ ಕಥನಗಳ ಸೃಷ್ಟಿಯ ಹಿಂದಿರುವ ಮನೋಧರ್ಮದ ಬಗೆಗೆ ಚಿಂತಿಸುವಂತೆ ಮಾಡುತ್ತದೆ."[೩] ವರ್ಣತಾರತಮ್ಯದಿಂದ ಶೂದ್ರರು ಮತ್ತು ಶೂದ್ರೇತರರಿಗೆ ಶಿಕ್ಷಣವನ್ನು ಕೊಡಬಾರದು ಎಂಬ ಪುರೋಹಿತಶಾಹಿಯ ಮನಸ್ಥಿತಿ ಕ್ರೂರವಾದುದು. ಹಾಗಾಗಿ ಕುವೆಂಪು ಅವರು ಪುರಾಣ ಕೃತಿಗಳನ್ನು ಮರುಸೃಷ್ಟಿಗೆ ಮುಂದಾದರು. ಈ ಮರುಸೃಷ್ಟಿಯ ತಂತ್ರವು ವೈದಿಕ ವಿರೋಧಿ ಪ್ರಜ್ಞೆಯನ್ನು ಧ್ವನಿಸುತ್ತದೆ.

ಕುವೆಂಪು ಅವರು ರಚಿಸಿದ 'ಬೆರಳ್‌ಗೆ ಕೊರಳ್' ಪೌರಾಣಿಕ ನಾಟಕವಾಗಿದೆ. ಈ ನಾಟಕದಲ್ಲಿ ಗುರು, ಕರ್ಮ ಮತ್ತು ಯಜ್ಞ ಎಂಬ ಮೂರು ದೃಶ್ಯಗಳಿವೆ. ಪುರಾಣ ವ್ಯಕ್ತಿಯಾದ ಏಕಲವ್ಯನ ಕಥೆಯನ್ನಾಧರಿಸಿ ರಚಿತವಾಗಿದೆ. ಶೂದ್ರನಾದ ಏಕಲವ್ಯ ಶಿಕ್ಷಣ ಪಡೆಯಲು ಬಯಸುವ ನಾಟಕವಾಗಿದೆ. ಏಕಲವ್ಯ ಪಡೆದ ಶಿಕ್ಷಣಕ್ಕೆ ದ್ರೋಣನು ಏಕಲವ್ಯನ ಹೆಬ್ಬೆರಳನ್ನು ಗುರುಭಕ್ತಿಯಾಗಿ ಪಡೆಯುತ್ತಾನೆ. ಅದಕ್ಕೆ ಪ್ರತಿಯಾಗಿ ದ್ರೋಣನು ಮಹಾಭಾರತ ಯುದ್ಧದಲ್ಲಿ ಏಕಲವ್ಯನ ತಾಯಿಯ ಶಾಪದಿಂದ ತನ್ನ ಕೊರಳನ್ನೆ ಬಲಿ ಕೊಡಬೇಕಾಗುತ್ತದೆ. ಇಷ್ಟು ನಾಟಕದ ಕಥಾವಸ್ತು.

ವ್ಯಾಸ ಮಹಾಭಾರತದ ಆದಿಪರ್ವದಲ್ಲಿ ಬರುವ ಮೂಲ ಏಕಲವ್ಯನ ಕಥೆಯಲ್ಲಿ ಏಕಲವ್ಯ ದ್ರೋಣನ ಕೀರ್ತಿಯನ್ನು ಕೇಳಿ ದ್ರೋಣನ ಹತ್ತಿರ ವಿದ್ಯೆ ಕಲಿಯಲೆಂದು ಹಸ್ತಿನಾವತಿಗೆ ಬರುತ್ತಾನೆ. ಆದರೆ ಏಕಲವ್ಯ ಕೆಳವರ್ಗದ ಬೇಡ ಜಾತಿಗೆ ಸೇರಿರುವುದರಿಂದ ದ್ರೋಣ ಏಕಲವ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸುವುದಿಲ್ಲ. ಆದರೆ ಏಕಲವ್ಯ ನಿರಾಶನಾಗದೆ ಕಾಡಿಗೆ ಬಂದು ದ್ರೋಣನ ಪ್ರತಿಮೆಯನ್ನು ಮಾಡಿ ಪ್ರತಿಮೆಯ ಮುಂದೆ ಶ್ರದ್ಧಾಭಕ್ತಿಯಿಂದ ಬಿಲ್ವಿದ್ಯೆ ಕಲಿಯುತ್ತಾನೆ. ಆದರೆ ಕುವೆಂಪು ಅವರ 'ಬೆರಳ್‌ಗೆ ಕೊರಳ್' ನಾಟಕದಲ್ಲಿ ದ್ರೋಣ ಏಕಲವ್ಯನಿಗೆ ವಿದ್ಯೆಯನ್ನು ಕಲಿಸಲು

ಒಪ್ಪಿಕೊಳ್ಳುವುದನ್ನು ಚಿತ್ರಿಸಿದ್ದಾರೆ. ಏಕಲವ್ಯ ಶೂದ್ರನೆಂದು ತಿರಸ್ಕರಿಸದೆ ದ್ರೋಣನು ಒಪ್ಪಿಕೊಳ್ಳುತ್ತಾನೆ.

ನಾನ್ ಶೂದ್ರನೆಂಬುದನರಿತೊಡಂ
ನಮ್ಮನಾ ಪಾರ್ವರ್ ಶೂದ್ರರೆಂದಾಡುವರ್

ಪೂಜ್ಯನ್ ತಿರಸ್ಕರಿಸಲಿಲ್ಲ.
ಮುಡಿಯಿಂದಮಡಿವರೆಗೆ ನನ್ನಂ ನೋಡಿ
ಮಗನ ಕಡೆ ತಿರುಗಿ ಪೇಳ್ದನ್;
"ಅಶ್ವತ್ಥಾಮ, ನಮ್ಮ ಚಟ್ಟರೊಳಿವನುಮೊರ್ವನ್;
ನಿನ್ನ ನೇರ್ಗಿರಿಯನೆಂದೀತನನ್ ಕಾಣ್."

ಈ ರೀತಿ ದ್ರೋಣನು ಬ್ರಾಹ್ಮಣನಾಗಿದ್ದರೂ ಏಕಲವ್ಯನನ್ನು ಶೂದ್ರನೆಂದು ತಿರಸ್ಕರಿಸುವುದಿಲ್ಲ. ತನ್ನ ಮಗನಾದ ಅಶ್ವತ್ಥಾಮನನ್ನು ಕರೆದು ಪರಿಚಯ ಮಾಡಿಕೊಡುತ್ತಾನೆ. ಆದರೆ ಅರಸು ಮಕ್ಕಳಾದ ಅರ್ಜುನ ಏಕಲವ್ಯನ ಬಿಲ್ಲುವಿದ್ಯೆಯನ್ನು ಕಂಡು ಅಸೂಯೆ ಪಟ್ಟು ಶೂದ್ರನಾದ ಏಕಲವ್ಯನ ಜೊತೆ ನಾವು ವಿದ್ಯೆ ಕಲಿಯುವುದಿಲ್ಲ ಎನ್ನುತ್ತಾನೆ. ಆದರೆ ಏಕಲವ್ಯ ಶೂದ್ರನಾದರೇನು, ಇವನು ವಿದ್ಯೆ ಕಲಿಯಲು ಸಮರ್ಥನಾಗಿದ್ದಾನೆ. ವಿದ್ಯೆಯನ್ನು ಕಲಿತ ಮೇಲೆ ನಿಮ್ಮ ಸೇವೆಗೆ ಸಲ್ಲುತ್ತಾನೆ ಎಂದು ದ್ರೋಣಾಚಾರ್ಯ ಹೇಳುತ್ತಾನೆ. ಆದರೆ ಅರಸು ಮಕ್ಕಳು ದ್ರೋಣಾಚಾರ್ಯನ ಮಾತುಗಳಿಗೆ ಬೆಲೆ ಕೊಡುವುದಿಲ್ಲ. ಏಕಲವ್ಯವನ್ನು ಹೊರಗಟ್ಟಿದಾಗ ದ್ರೋಣಚಾರ್ಯರು ಮರುಗಿ ತನ್ನ ಮನೆಯಲ್ಲಿ ಇರಿಸಿ ವಿದ್ಯೆಯನ್ನು ಕಲಿಸುವುದನ್ನು ಕುವೆಂಪು ಚಿತ್ರಿಸಿದ್ದಾರೆ.

"ಏಕಲವ್ಯ, ಅಳಲದಿರ್
ಆಸೆಗೆಡದಿರ್, ನೀನೆಮ್ಮ ಮನೆಯೊಳಾಳಾಗಿರು.
ಈ ಗರುಡಿಗೆನ್ನ ಸೇವೆಗೈತರುತೆ
ದೂರದಿಂ ಕಂಡು ಕಲಿ, ಕಲ್ವಿನಿತಂ.
ಮತ್ತುಳಿದುದಂ ಮನೆಯೊಳೆಯೆ ಕಲಿಯುವನಿತಂ
ಕಲಿಪೆನಶ್ವತ್ಥಾಮನೊಡನೆ."[೪]

ಕುವೆಂಪು ಅವರು ವೈದಿಕ ಶಿಕ್ಷಣಪದ್ಧತಿಯ ಪ್ರಕಾರ ಶೂದ್ರರು ಶಿಕ್ಷಣವನ್ನು ಪಡೆಯುವಂತಿಲ್ಲ ಎಂಬುದನ್ನು ವಿರೋಧಿಸುತ್ತಾರೆ. ಅಶ್ವತ್ಥಾಮ ಮತ್ತು ದ್ರೋಣ ಇವರಿಬ್ಬರ ಪಾತ್ರಗಳನ್ನು ಮೂಲ ಪುರಾಣಗಳಿಗಿಂತ ಭಿನ್ನವಾಗಿ ಚಿತ್ರಿಸಿವುದರ ಮೂಲಕ ವೈದಿಕ ಗುರುಪರಂಪರೆಯನ್ನು ವಿರೋಧಿಸಿದ್ದಾರೆ. ಹಾಗಾಗಿ ಈ ನಾಟಕದಲ್ಲಿ ಅಕ್ಷರವಿದ್ಯೆ ಹಾಗೂ ಬಿಲ್ವಿದ್ಯೆಗಳು ಸಮಾಜದಲ್ಲಿ ಇರುವ

ಮೇಲುವರ್ಗದವರಿಗೆ ಮಾತ್ರ ಮೀಸಲು ವಿದ್ಯೆಯನ್ನು ಶೂದ್ರರು ಪಡೆಯಬಾರದು ಎಂಬ ನಿಲುವು ಈ ನಾಟಕದಲ್ಲಿ ವ್ಯಕ್ತವಾಗಿದೆ. ಹಾಗಾಗಿ ಶಿಕ್ಷಣ ಮೇಲುವರ್ಗಕ್ಕೆ ಮಾತ್ರ ಮೀಸಲಾಗಿರುವ ವ್ಯವಸ್ಥೆಯನ್ನು ಕುವೆಂಪು ಪ್ರಬಲವಾಗಿ ವಿರೋಧಿಸುತ್ತಾರೆ.

'ಶೂದ್ರತಪಸ್ವಿ' ಕಥೆ ವಾಲ್ಮೀಕಿಯ ಉತ್ತರ ಕಾಂಡದಲ್ಲಿ ಬರುವ ಶಂಬೂಕ ಪ್ರಸಂಗ. ಈ ಕಥೆಯ ಆಶಯದಲ್ಲಿ ಶೂದ್ರ ಸಮುದಾಯಕ್ಕೆ ವಿದ್ಯೆಯನ್ನು ಪಡೆಯುವ ಹಕ್ಕಿಲ್ಲವೆಂಬ ರೂಢಿಯ ನಿಲುವನ್ನೇ ಪ್ರತಿಪಾದಿಸುತ್ತದೆ. ಆದರೆ ಕುವೆಂಪು 'ಶೂದ್ರತಪಸ್ವಿ' ನಾಟಕದಲ್ಲಿ ಶೂದ್ರನೊಬ್ಬ ತಪಸ್ಸು ಮಾಡುವುದು ವರ್ಣಾಶ್ರಮ ಧರ್ಮ ಉಲ್ಲಂಘನೆಯಾಗುತ್ತದೆ ಎಂದು ವೈದಿಕ ಧರ್ಮದ ನಂಬಿಕೆಯನ್ನು ಈ ನಾಟಕದಲ್ಲಿ ಪ್ರಶ್ನಿಸುತ್ತಾರೆ.

ಅಲ್ತಲ್ತು, ರಾಮಚಂದ್ರ
ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ
ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ
ನಿನ್ನ ಬಾಲಪ್ರಜೆಯೊರ್ವನ್ ಬಲಿಯಾದನ್[೫]

ಎಂದು ಬ್ರಾಹ್ಮಣನ ಮಾತುಗಳೇ ಶೂದ್ರನು ಶಿಕ್ಷಣ ಪಡೆಯಬಾರದು ಎಂಬುದನ್ನು ಸೂಚಿಸುತ್ತದೆ. ಆದರೆ ಕುವೆಂಪು ಅವರು 'ಶೂದ್ರತಪಸ್ವಿ' ನಾಟಕದಲ್ಲಿ ತಪಸ್ಸು ಮಾಡುವುದಕ್ಕೆ ಯಾವುದೇ ಜಾತಿ ಮತದ ಸೋಂಕಿಲ್ಲ. ಅದು ಯಾರಲ್ಲಿದ್ದರೂ ಪೂಜನೀಯ ಎಂದು ಹೇಳುವುದರ ಮೂಲಕ ಶೂದ್ರರು ವಿದ್ಯೆಯನ್ನು ಕಲಿಯಲು ಹಕ್ಕು ಇದೆ. ಎಂದು ಈ ನಾಟಕದ ಮೂಲಕ ಪ್ರತಿಪಾದಿಸುತ್ತಾರೆ. ಈ ನಾಟಕದಲ್ಲಿ ಬರುವ ಶಾಸ್ತ್ರಿ ಮೂರ್ಖ ಬ್ರಾಹ್ಮಣನಿಗೆ ಬುದ್ಧಿ ಕಲಿಸಿ ರಾಮನು ಬ್ರಾಹ್ಮಣನ ಮನವನ್ನು ಪರಿವರ್ತಿಸುತ್ತಾರೆ. ಈ ರೀತಿ ವೈದಿಕ ಶಿಕ್ಷಣ ವಿರೋಧಿ ಪ್ರಜ್ಞೆಯನ್ನು ಈ ನಾಟಕದಲ್ಲಿ ಧ್ವನಿಸುವಂತೆ ಕುವೆಂಪು ರಚಿಸಿದ್ದಾರೆ.

ಕುವೆಂಪು ಅವರು ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸುವುದನ್ನು ದೇವನೂರ ಮಹಾದೇವ ಅವರು ಸಹಮತವನ್ನು ಈ ರೀತಿ ಸೂಚಿಸುತ್ತಾರೆ. "ಶ್ರೀ ಕುವೆಂಪು ಅವರ ಹಿಂದೂಧರ್ಮವನ್ನು ಅನಿಷ್ಟವೋ ಕನಿಷ್ಟವೋ ಅಂದುದಕ್ಕೆ ಅಷ್ಟಕ್ಕೆ ಈ ಬ್ರಾಹ್ಮಣರು ತಮ್ಮ ಅಸ್ತಿತ್ವದ ಬುಡಕ್ಕೆ ಕೊಡಲಿಪೆಟ್ಟು ಬಿದ್ದಂತೆ ನರಳುತ್ತಿದ್ದರು. ಶ್ರೀ ಕುವೆಂಪು ನುಡಿಯ ಆಳದ ನೋವು ಹಾಗೂ ಆಶಯ ಅಲ್ಲಿನ ಯಾರಿಗೂ ಒಂದು ಕೂದಲಿನಷ್ಟೂ ತಾಕಿರಲಿಲ್ಲ. ಶ್ರೀ ಕುವೆಂಪು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಹೇಳಿದ್ದರು 'ಹಿಂದಿನವರು ಏನು ಮಾಡಿದರು? ವೇದ ಕೇಳಿದ ಶೂದ್ರನ ಕಿವಿಗೆ ಕಾದ ಸೀಸ ಸುರಿಯಬೇಕು, ವೇದ ಪಠನ ಮಾಡಿದ ಶೂದ್ರನ ನಾಲಿಗೆ ಕತ್ತರಿಸಬೇಕು ಎಂದು ಹೇಳುತ್ತಾ ಶಿಕ್ಷಣವಿರೋಧಿ ಪ್ರವೃತ್ತಿಯನ್ನು ಬೆಳೆಸಿದ್ದರು. ಈ ದೃಷ್ಟಿಯಿಂದ ಹಿಂದೂಧರ್ಮದಂತಹ ಅನಿಷ್ಟ ಧರ್ಮ ಬೇರೊಂದಿಲ್ಲ'. ಯಾರೇ ಆಗಲಿ, ಈ ನುಡಿಯಲ್ಲಿ ನೋಯಬೇಕಿದ್ದು ಏನಿತ್ತು? ಶ್ರೀ ಕುವೆಂಪು ಅವರು ಯಾವ ದೃಷ್ಟಿಯಿಂದ ಹೇಳಿದ್ದರೋ ಆ ದೃಷ್ಟಿಯತ್ತ ನೋಡಿದ್ದರೆ, ಕೇವಲ

ನೋಡಿದ್ದರೆ, ಅಂಥ ಒಂದು ಧರ್ಮದಲ್ಲಿ ಹುಟ್ಟಿದ್ದಕ್ಕೆ ಕುಗ್ಗಿ ತಲೆತಗ್ಗಿಸಬೇಕೇ ಹೊರತು, ಆದರೆ, ಆ ಸಭೆಯು ಕಣ್ಣು ಕಳೆದುಕೊಂಡಿತ್ತು."[೬] ಮೇಲೆ ಲೇಖಕರು ಹೇಳಿರುವಂತೆ ಹಿಂದೂ ಧರ್ಮದಲ್ಲಿ ಸೃಷ್ಟಿಸಿದ ವರ್ಣವ್ಯವಸ್ಥೆಯಿಂದ ಶೂದ್ರರು, ಮಹಿಳೆಯರು ಮತ್ತು ಶೂದ್ರೇತರರಿಗೆ ಶಿಕ್ಷಣ ಕೊಡುವುದನ್ನು ನಿರಾಕರಿಸಲಾಗಿತ್ತು. ಈ ಕೆಳವರ್ಗದವರು ಶಿಕ್ಷಣವನ್ನು ಪಡೆದರೆ ಅವರಿಗೆ ಕಠಿಣವಾದ ಶಿಕ್ಷೆಯನ್ನು ಕೊಡುವ ಪದ್ಧತಿಯನ್ನು ಮೇಲ್ವರ್ಗದವರು ಜಾರಿ ಮಾಡಿದ್ದರು. ಹಾಗಾಗಿ ಹಿಂದೂಧರ್ಮ ಕೊಡುವ ಶಿಕ್ಷಣವ್ಯವಸ್ಥೆ ಅಸಮಾನತೆಯಿಂದ ಕೂಡಿತ್ತು.

ಬ್ರಾಹ್ಮಣರು ಪ್ರಭುತ್ವದಲ್ಲಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಕೆಳವರ್ಗದ ಜನರಿಗೆ ಶಿಕ್ಷಣವನ್ನು ಕೊಟ್ಟಿದ್ದೇವೆ ಎಂದು ಹೇಳುವ ವಂಚನೆಯ ಮಾತುಗಳನ್ನಾಡಿರುವುದನ್ನು ದೇವನೂರು ಮಹಾದೇವ ಅವರು ಈ ರೀತಿ ಉಲ್ಲೇಖಿಸುತ್ತಾ ವೈದಿಕ ವಿರೋಧವನ್ನು ವ್ಯಕ್ತಪಡಿಸುತ್ತಾರೆ. "ವಾಲ್ಮೀಕಿ ಕಾಳಿದಾಸರು ಬ್ರಾಹ್ಮಣರೇ? ಇವರನ್ನು ಬ್ರಾಹ್ಮಣರು ಗೌರವಿಸುವುದಿಲ್ಲವೇ? ಕ್ಷತ್ರಿಯ ರಾಮ, ಗೊಲ್ಲ ಕೃಷ್ಣ ಬ್ರಾಹ್ಮಣರೇ? ಇವರನ್ನು ಬ್ರಾಹ್ಮಣರು ಪೂಜಿಸುವುದಿಲ್ಲವೇ? ಬ್ರಾಹ್ಮಣರಿಗೆ ಜಾತಿ ಎಲ್ಲಿದೆ? ಇತ್ಯಾದಿ. ಭಾರತದಲ್ಲಿ ಅಕ್ಷರವೂ ಸೆರೆಯಾದ ಮೇಲೆ ಅನೇಕಾನೇಕ ವ್ಯಾಸ ವಾಲ್ಮೀಕಿ ಕಾಳಿದಾಸರು ಹುಟ್ಟುವುದು ನಿಂತು ಭಾರತಮಾತೆಯೇ ಬಂಜೆಯಾದಳು, ಹುಳುಗಳ ಹೆತ್ತಳು ಎಂಬುದು ಯಾಕೆ ಕಾಣದು? ಅಥವಾ ಕಂಡೂ ಪೆದ್ದ ಹಾದರಗಿತ್ತಿತನವೇ? ವ್ಯಾಸ ವಾಲ್ಮೀಕಿ ಕಾಳಿದಾಸರ ಪ್ರತಿಭೆಯನ್ನು ಉಚ್ಚರಿಸುವ ಇವರು ಯಾಕೆ ಮೀಸಲಾತಿ ವಿರೋಧಿಗಳಾಗಿದ್ದಾರೆ? ಭಾರತದ ಪ್ರತಿಭೆಯ ಭ್ರೂಣವನ್ನು ಹತ್ಯೆ ಮಾಡಿದ ಪಾಪಿಷ್ಠರು ತಮ್ಮ ಹಿರಿಯರು ಎಂದು ಯಾಕೆ ಇವರೇ ಅರಿತು ತಿದ್ದಿಕೊಳ್ಳಲಾರರು?"[೭] ವೈದಿಕ ಶಿಕ್ಷಣಪದ್ಧತಿ ಕೆಳವರ್ಗದಲ್ಲಿ ಇರುವ ಪ್ರತಿಭಾವಂತರನ್ನು ಗುರುತಿಸಲಿಲ್ಲ. ಜಾತಿಯ ಕಾರಣದಿಂದ ಅವರನ್ನು ಶಿಕ್ಷಣದಿಂದ ದೂರ ಇಡಲಾಯಿತು. ಹಾಗಾಗಿ ಭಾರತವು ಶೈಕ್ಷಣಿಕವಾಗಿ ಹಿಂದೆ ಉಳಿಯಲು ಈ ವೈದಿಕ ಶಿಕ್ಷಣಪದ್ಧತಿಯೇ ಕಾರಣ ಎಂದು ಆರೋಪ ವ್ಯಕ್ತಪಡಿಸುತ್ತಾರೆ.

ಪುರಾಣ ಕಥೆಗಳ ಮೂಲಕ ವೈದಿಕರು ಸಮಾಜದಲ್ಲಿ ಮೂಲಭೂತವಾದವನ್ನು ಪ್ರತಿಪಾದಿಸಿತು. ಆದರೆ ಆಧುನಿಕ ಕನ್ನಡ ಸಾಹಿತ್ಯ ವರ್ತಮಾನದ ಹಲವು ಸಂದಿಗ್ಧಗಳಿಗೆ ಭೂತಕಾಲದ ಚಿಂತನೆಗಳ ಮೂಲಕ ಉತ್ತರವನ್ನು ನೀಡುವುದನ್ನು ಕಾಣಬಹುದಾಗಿದೆ. ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳಲ್ಲಿನ ಅನೇಕ ತಪ್ಪುಗಳನ್ನು ಸರಿಪಡಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಆಶಯಗಳಿಗೆ ತಕ್ಕಂತೆ ವೈದಿಕ ಪುರಾಣ ಮೌಲ್ಯಗಳನ್ನು ಪುನರ್ ಮೌಲ್ಯೀಕರಿಸುವುದನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಹಾಗಾಗಿ ಜೀವವಿರೋಧಿಯಾದ ಸಂಗತಿಗಳನ್ನು ತಿದ್ದುವ ಕೆಲಸವನ್ನು ಸಾಹಿತ್ಯ ಮಾಡಿದೆ. ಈ ನಿಟ್ಟಿನಲ್ಲಿ ವೈದಿಕ ಶಿಕ್ಷಣ ಪದ್ಧತಿಯ ಅಸಮಾನತೆಯನ್ನು ವಿರೋಧಿಸಿ ಸಮಾನತೆಯ ತತ್ವಗಳನ್ನು ಪ್ರತಿಪಾದಿಸಲು ಕುವೆಂಪು ಅವರು ಪುರಾಣ ಕಥನಗಳನ್ನು ಪುನರ್ ಸೃಷ್ಟಿ ಮಾಡಿದರು. ಈ ಮೂಲಕ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸಿದರು. ಜಾತಿ ಮತ್ತು ವರ್ಗವ್ಯವಸ್ಥೆಯಲ್ಲಿ ಸಿಕ್ಕಿಕೊಂಡಿರುವ ಭಾತರದ ಸಮಾಜ ಬಿಡುಗಡೆಗೆ ಶಿಕ್ಷಣದಿಂದ ಸಾಧ್ಯ

ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯವು ಮೂಲಭೂತವಾದಿ ಶಿಕ್ಷಣವನ್ನು ಸರಿಪಡಿಸುವ ನಿಟ್ಟಿನಲ್ಲಿ ಸಾಹಿತ್ಯವನ್ನು ರಚಿಸಲಾಗಿದೆ.

೫.೨. ಆಧುನಿಕ ಶಿಕ್ಷಣ: ವಿರೋಧಿಪ್ರಜ್ಞೆ

ಪಾಶ್ಚಿಮಾತ್ಯರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದವರು ಸ್ಥಳೀಯ ಪ್ರಭುತ್ವಗಳ ಜೊತೆ ಸೇರಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಹಾಗಾಗಿ ಭಾರತವನ್ನು ಬ್ರಿಟಿಷರು ತಮ್ಮ ವಶಕ್ಕೆ ಪಡೆದುಕೊಂಡು ಆಳ್ವಿಕೆಯನ್ನು ಮಾಡಿದರು. ವಾಣಿಜ್ಯ ಉದ್ದೇಶಕ್ಕೆ ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿದರು. ಭಾರತಲ್ಲಿ ಬ್ರಿಟಿಷರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಒಡೆದು ಹಾಳುವ ನೀತಿಯನ್ನು ಜಾರಿ ಮಾಡಿದರು. ಇದರಿಂದ ಅಸಮಾಧಾನಗೊಂಡ ಭಾರತೀಯರು ೧೮೫೭ರಲ್ಲಿ ಸಿಪಾಯಿದಂಗೆ ಮಾಡಿದರು. ಈ ದಂಗೆಯ ನಂತರ ಭಾರತವು ಇಂಗ್ಲೆಂಡಿನ ರಾಣಿಯ ಆಡಳಿತಕ್ಕೆ ಒಳಗಾಯಿತು. ಇದರ ಪರಿಣಾಮವಾಗಿ ಭಾರತದಲ್ಲಿ ಮತಭೇದವೆಣಿಸದೆ ಸರ್ವರಿಗೂ ಸಮಾನವಾದ ಅವಕಾಶಗಳನ್ನು ಕೊಡಲಾಯಿತು. ಹೀಗಾಗಿ ಭಾರತಕ್ಕೆ ಕ್ರೈಸ್ತ ಪಾದ್ರಿಗಳು ಕ್ರೈಸ್ತಧರ್ಮವನ್ನು ಪ್ರಚಾರ ಮಾಡಲು ಬಂದರು. ಹಾಗಾಗಿ ಭಾರತದಲ್ಲಿ ಮಿಷನರಿಗಳ ಶಾಲೆ, ಕಾಲೇಜು ಮತ್ತು ವಿದ್ಯಾಲಯಗಳನ್ನು ತೆರೆದು, ಎಲ್ಲರಿಗೂ ಶಿಕ್ಷಣವನ್ನು ಕೊಡಲು ಮುಂದಾದರು.

ಭಾರತದಲ್ಲಿ ಚಾಲ್ತಿಯಲ್ಲಿದ್ದ ವೈದಿಕ ಶಿಕ್ಷಣಪದ್ಧತಿಯು ಮೇಲುವರ್ಗದ ಜನರಿಗೆ ಮಾತ್ರ ಮೀಸಲಾಗಿತ್ತು. ಶೂದ್ರರು ಮತ್ತು ತಳಸಮುದಾಯದವರನ್ನು ಅಕ್ಷರ ಕಲಿಕೆಯಿಂದ ಹೊರಗಿಡಲಾಗಿತ್ತು ಹಾಗೂ ವೈದಿಕ ಶಿಕ್ಷಣ ವ್ಯವಸ್ಥೆಯು ತರತಮಗಳಿಂದ ಕೂಡಿತ್ತು. ಹಾಗಾಗಿ ವೈದಿಕ ಶಿಕ್ಷಣ ಪದ್ಧತಿಯನ್ನು ವಿರೋಧಿಸಿ, ಭಾರತದಲ್ಲಿ ಮಿಷನರಿಗಳು ಶೂದ್ರರಿಗೂ ಮತ್ತು ತಳಸಮುದಾಯದವರಿಗೂ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ ಶಾಲೆಗಳನ್ನು ಆರಂಭಿಸಿದರು. ಬ್ರಿಟಿಷರ ಆಡಳಿತಕ್ಕೆ ಒಳಗಾದ ಜನರು ನೈತಿಕ ಮತ್ತು ಜ್ಞಾನದ ಬೆಳವಣಿಗೆಯನ್ನು ವೃದ್ಧಿಸಿಕೊಳ್ಳಲು ಶಿಕ್ಷಣವನ್ನು ಕೊಡಲು ಮುಂದಾದರು. ಹಾಗಾಗಿ ಸ್ಥಳೀಯ ಶಿಕ್ಷಣಕ್ಕಾಗಿ ಬ್ರಿಟಿಷ್ ಸರ್ಕಾರ ಹಣವನ್ನು ಮೀಸಲಿಟ್ಟಿತು. ಮೆಕಾಲೆಯ ವರದಿಯಿಂದ ಭಾರತದಲ್ಲಿ ಇಂಗ್ಲಿಷ್ ಶಿಕ್ಷಣ ಜಾರಿಗೆ ಬಂದಿತು. ಹೀಗಾಗಿ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಇಂಗ್ಲಿಷ್ ಶಿಕ್ಷಣ ಬದಲಾವಣೆಯನ್ನು ತಂದಿತು. ಈ ಶಿಕ್ಷಣನೀತಿಯಿಂದ ಕೆಲವೇ ಸಮುದಾಯಗಳ ಸ್ವತ್ತಾಗಿದ್ದ ಶಿಕ್ಷಣವನ್ನು ಸಮಾಜದಲ್ಲಿ ಎಲ್ಲ ವರ್ಗದವರ ಹಕ್ಕಾಗಿ ಮಾರ್ಪಟ್ಟಿತು. ಪಾಶ್ಯಾತ್ಯ ಶಿಕ್ಷಣದಿಂದ ಕೆಳವರ್ಗದ ಯುವಕರು ಪಾಶ್ಚಾತ್ಯ ವಿಜ್ಞಾನ ಮತ್ತು ಜ್ಞಾನದಿಂದ ಪ್ರಭಾವಿತರಾಗಿ ವೈದಿಕರ ಮೌಢ್ಯಗಳನ್ನು ವಿರೋಧಿಸಿದರು ಮತ್ತು ವೈಚಾರಿಕ ಮನೋಭಾವವನ್ನು ಬೆಳೆಸಿಕೊಂಡು ಅಳವಡಿಸಿಕೊಂಡರು.

ಸಾಮಾಜಿಕ ಸುಧಾರಕರು ಭಾತದಲ್ಲಿ ಶಾಲೆ-ಕಾಲೇಜುಗಳನ್ನು ತೆರೆದು ಎಲ್ಲಾ ವರ್ಗದವರಿಗೂ ಶಿಕ್ಷಣವನ್ನು ಕೊಟ್ಟರು. ಮಹಿಳೆಯರಿಗೂ ಶಿಕ್ಷಣವನ್ನು ಕೊಡಲು ಪ್ರತ್ಯೇಕವಾದ ಮಹಿಳಾ ಶಾಲೆ ಕಾಲೇಜುಗಳನ್ನು ತೆರೆಯಲಾಯಿತು. ಶಿಕ್ಷಣದ ಪ್ರಭಾವದಿಂದ ಭಾರತದ ಸಮಾಜದಲ್ಲಿ ವೈದಿಕ

ಮೂಲಭೂತವಾದ ಸೃಷ್ಟಿಸಿದ ಅಮಾನವೀಯ ಆಚರಣೆಗಳನ್ನು ವಿರೋಧಿಸಲಾಯಿತು. ಇದರಿಂದಾಗಿ ಬ್ರಾಹ್ಮಣೇತರ ಚಳುವಳಿಗಳು ಹುಟ್ಟಿಕೊಂಡವು. ಈ ಚಳುವಳಿಯ ಮೂಲಕ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸಲಾಯಿತು. ಸ್ವಾತಂತ್ರ್ಯದ ನಂತರ ಶಿಕ್ಷಣ ಆಯೋಗಗಳು ಕೆಳಗವರ್ಗದ ಜನರಿಗೆ ಶಿಕ್ಷಣವನ್ನು ಕೊಡಲು ಮೀಸಲಾತಿಯನ್ನು ಜಾರಿಗೆ ತರಲಾಯಿತು. ಹೀಗಾಗಿ ಆಧುನಿಕ ಕನ್ನಡ ಸಾಹಿತ್ಯ ಪಾಶ್ಚಾತ್ಯ ಶಿಕ್ಷಣದಿಂದ ಪ್ರಭಾವಿತವಾಗಿ ವೈದಿಕರ ಪಾರಂಪರಿಕ ಶಿಕ್ಷಣವನ್ನು ವಿರೋಧಿಸಿತು. ಸಾಹಿತ್ಯ ಕೃತಿಗಳಲ್ಲಿ ಶೂದ್ರರು ಶಿಕ್ಷಣವನ್ನು ಪಡೆದ ಬಗ್ಗೆ ವಿಮರ್ಶೆ ಮತ್ತು ವಿಶ್ಲೇಷಣೆಗಳು ನಡೆದವು. ಈ ನಿಟ್ಟಿನಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವೈದಿಕ ಪಾರಂಪರಿಕ ಶಿಕ್ಷಣಪದ್ಧತಿ ಮತ್ತು ಶಿಕ್ಷಣದಲ್ಲಿ ಸೇರಿಕೊಂಡಿರುವ ವೈದಿಕ ಮೂಲಭೂತವಾದಗಳನ್ನು ವಿರೋಧಿಸಿದ್ದಾರೆ.

ಪಶ್ಚಿಮದ ಕ್ರೈಸ್ತ ಪಾದ್ರಿಗಳು ಭಾತದಲ್ಲಿ ಕ್ರೈಸ್ತಧರ್ಮವನ್ನು ಪ್ರಚಾರ ಮಾಡುವುದಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಭಾರತದಲ್ಲಿ ಇದ್ದ ಚಾತುರ್ವರ್ಣ ಪದ್ಧತಿ, ಜಾತಿವ್ಯವಸ್ಥೆ, ಅಂಧಕಾರ ಮತ್ತು ಮೌಢ್ಯಗಳನ್ನು ನೋಡಿದರು. ಕೆಳವರ್ಗದ ಜನರಿಗೆ ಮಾಡುತ್ತಿದ್ದ ಸಾಮಾಜಿಕ ಶೋಷಣೆಗಳನ್ನು ಅರಿತು ಕೆಳವರ್ಗದವರಿಗೆ ಶಿಕ್ಷಣದ ಮೂಲಕ ಜ್ಞಾನವನ್ನು ಕೊಡಲು ಮುಂದಾಗಿರುವುದನ್ನು ಕುವೆಂಪು ಅವರು ಈ ರೀತಿ ವಿವರಿಸುತ್ತಾರೆ. "ಹಿಂದೂಗಳಾಗಿ ಇದ್ದೂ ಬ್ರಾಹ್ಮಣರಿಂದ ಶೂದ್ರರೆಂದು ತಿರಸ್ಕೃತರಾಗಿ ಮೌಢ್ಯ, ಅಜ್ಞಾನಗಳ ಅಂಧಕಾರದಲ್ಲಿದ್ದವರಿಗೆ ಬೆಳಕು ತೋರಿಸುತ್ತೇವೆ. ನಿಮ್ಮನ್ನು ಬ್ರಾಹ್ಮಣರ ದಾಸ್ಯದಿಂದ ಪಾರುಮಾಡುತ್ತೇವೆ ಎಂದು ಮನದಟ್ಟುವಂತೆ ಬೋಧಿಸಿದರು. ಶೂದ್ರ ಮಕ್ಕಳಿಗೆ ನವೀನ ವಿದ್ಯಾಭ್ಯಾಸ ಮಾಡಿಸಲು ಅವರನ್ನು ಮೈಸೂರು ಬೆಂಗಳೂರುಗಳ ಕ್ರೈಸ್ತ ವಿದ್ಯಾಸಂಸ್ಥೆಗಳಿಗೆ ಕರೆದೊಯ್ದು, ಊಟ, ಬಟ್ಟೆ ವಸತಿಗಳನ್ನು ಪುಕ್ಕಟೆಯಾಗಿಯೆ ನೀಡಿ ಅವರ ತಂದೆ ತಾಯಿ ಬಂಧುಗಳ ಗೌರವ ಕೃತಜ್ಞತೆಗಳನ್ನು ಸೂರೆಹೊಯ್ದರು. ಆ ಎಲ್ಲ ಸ್ನೇಹ ಸೌಹಾರ್ದ ಸಂಪರ್ಕಗಳ ಪರಿಣಾಮವಾಗಿಯೇ ಕ್ರೈಸ್ತ ಪಾದ್ರಿಗಳು ನಮ್ಮ ಮನೆ ಕುಪ್ಪಳಿಯ ಉಪ್ಪರಿಗೆಯ ವಿದ್ಯಾಸಂಸ್ಥೆಗೂ ಒಬ್ಬ ಇಂಗ್ಲಿಷ್ ಬಲ್ಲ ಕ್ರೈಸ್ತ ತರುಣನನ್ನು ನಮಗೆ ಮೇಷ್ಟರನ್ನಾಗಿ ಕಳಿಸುವ ಕೃಪೆ ಮಾಡಿದರು"[೮] ಆಧುನಿಕತೆಯ ಪ್ರಭಾವದಿಂದ ಶೂದ್ರರು ಶಿಕ್ಷಣವನ್ನು ಪಡೆಯಲು ಮುಂದಾದ್ದು ಒಂದು ಕ್ರಾಂತಿಕಾರಕವಾದ ಬದಲಾವಣೆಯಾಗಿದೆ. ಹಾಗೂ ಕ್ರೈಸ್ತ ಪಾದ್ರಿಗಳು ತೆಗೆದುಕೊಂಡ ನಿರ್ಧಾರಗಳು ವೈದಿಕ ಶಿಕ್ಷಣವ್ಯವಸ್ಥೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ನಾವು ಗ್ರಹಿಸಬಹುದಾಗಿದೆ.

ಕುವೆಂಪು ರಚಿಸಿದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಆಧುನಿಕ ಶಿಕ್ಷಣ ಯಾವ ರೀತಿ ಪ್ರವೇಶವನ್ನು ಪಡೆದುಕೊಂಡಿತು ಎಂಬುದರ ಬಗ್ಗೆ ಉಲ್ಲೇಖಿಸಿರುವುದು ಕಾಣಬಹುದು. ಬ್ರಿಟಿಷರು ತಮ್ಮ ರಾಜಕೀಯ ಅಧಿಕಾರದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆಧುನಿಕ ಶಿಕ್ಷಣ ಕೊಡಲು ಮುಂದಾದರು. ಆಧುನಿಕ ಸುಧಾರಣಾವಾದಿ ಚಿಂತನೆಗಳಿಗೆ ಕೈಹಾಕಿದರು. ಸ್ಥಳೀಯ ಜನರನ್ನು ತಮ್ಮ ವಿಶ್ವಾಸಕ್ಕೆ ತಂದುಕೊಂಡರು. ಹಾಗಾಗಿ ಮಿಷನರಿ ಶಾಲೆಗಳನ್ನು ಸ್ಥಾಪಿಸಿದರು.

"ಮೇಗರವಳ್ಳಿಯಲ್ಲಿ, ಅಂತಕ್ಕ ಸೆಡ್ತಿಯ ಮನೆಯಿಂದ ಮೇಲೆ ಸುಮಾರು ಎರಡು ಮೂರು ಫರ್ಲಾಂಗು ದೂರದಲ್ಲಿ, ಒಂದು ಎತ್ತರವಾದ ದಿಬ್ಬದ ಮೇಲೆ ಮಿಶನ್ ಇಸ್ಕೂಲ್ ಕಟ್ಟಡ ತಯಾರಾಗುತ್ತಿತ್ತು. ಕಟ್ಟಡ ದೊಡ್ಡದೇನೂ ಅಲ್ಲ; ಮೂರು ಅಂಕಣದ್ದು. ಎದರು ಬದುರಾಗಿ ಎರಡು ಕಿಟಕಿ, ಒಂದೇ ಬಾಗಿಲು. ಮಣ್ಣಿನ ಗೋಡೆ ಎಬ್ಬಿಸಿ, ಕೈಹೆಂಚು ಹೊದಿಸಿದ್ದರು. ಆಗತಾನೆ ಹಳೆಯ ತರಹದ ಕೂಲಿಮಠಗಳ ಕಾಲವೂ ಹಳೆಯ ವಿದ್ಯಾಭ್ಯಾಸ ಪದ್ಧತಿಯೂ ಮುಕ್ತಾಯಗೊಂಡು, ಆಂಗ್ಲೇಯರ ಆಡಳಿತದ ರೀತಿಯೂ ಇಂಗ್ಲೀಷಿನ ಪ್ರಭಾವವೂ ಮೊಳೆದೋರುತ್ತಿದ್ದ ಸಂಧಿಸಮಯ. ಮಲೆನಾಡಿಗೆ ಆ ಹೊಸ ಪ್ರಭಾವದ ಮುಂಬೆಳಕನ್ನು ಮೊತ್ತಮೊದಲು ತರುವುದರಲ್ಲಿ ಕ್ರೈಸ್ತಪಾದ್ರಿಗಳ ಕಾರ್ಯ ಗಣನಿಯವಾಗಿತ್ತು, ಶ್ಲಾಘನೀಯವಾಗಿತ್ತು."[*] ವೈದಿಕರು ನಡೆಸುತ್ತಿದ್ದ ಶಿಕ್ಷಣ ಪದ್ಧತಿಯಿಂದ ವಸಾಹತು ಶಿಕ್ಷಣಕ್ರಮಕ್ಕೆ ಬದಲಾಗುತ್ತಿರುವುದನ್ನು ನಾವು ಕಾಣಬಹುದಾಗಿದೆ. ವೈದಿಕ ಶಿಕ್ಷಣಪದ್ಧತಿಯಲ್ಲಿ ಕೊಡುತ್ತಿದ್ದ ಶಿಕ್ಷಣಕ್ಕಿಂತ ಭಿನ್ನವಾಗಿ ಶಿಕ್ಷಣವನ್ನು ಕೊಡಲು ಮಿಶನರಿಗಳು ಶಾಲೆಗಳನ್ನು ಕಟ್ಟಿಸುತ್ತಿದ್ದನ್ನು ಕಾಣಬಹುದಾಗಿದೆ. ಹಾಗಾಗಿ ವೈದಿಕ ಧರ್ಮ ಪ್ರತಿಪಾದಿಸುತ್ತಿದ್ದ ವರ್ಣಾಶ್ರಮವನ್ನು ಪಾದ್ರಿಗಳು ಜನಸಾಮಾನ್ಯರಿಗೆ ವಿವರಿಸಿದರು ಮತ್ತು ಹಿಂದೂಧರ್ಮದಲ್ಲಿ ಇದ್ದ ಅಮಾನವೀಯ ಆಚರಣೆಗಳು, ಮೂಢನಂಬಿಕೆಗಳ ಬಗ್ಗೆ ಬೆಳಕು ಚೆಲ್ಲಿದರು. ಶೂದ್ರರು ಶಿಕ್ಷಣವನ್ನು ಪಡೆಯುವಂತಿಲ್ಲ ಎಂಬ ನಂಬಿಕೆಯನ್ನು ಮುರಿದು ಶೂದ್ರರಿಗೆ ಶಿಕ್ಷಣವನ್ನು ಕೊಡಲು ಮುಂದಾದರು. ಈ ಮೂಲಕ ಶೂದ್ರ ಜನರು ಮಕ್ಕಳನ್ನು ಶಾಲೆಗಳಿಗೆ ಕರೆತಂದು ಶಿಕ್ಷಣ ಕೊಡಿಸಲು ಮುಂದಾದರು.

ಆಧುನಿಕ ಶಿಕ್ಷಣದ ಪ್ರಭಾವದಿಂದ ಶೂದ್ರರಿಗೂ ಶಿಕ್ಷಣದ ಅವಕಾಶ ಸಿಕ್ಕರೂ, ವೈದಿಕ ಬ್ರಾಹ್ಮಣತ್ವದಿಂದ ಶಾಲೆಯಲ್ಲಿ ಶೂದ್ರರನ್ನು ಕೀಳಾಗಿ ನೋಡಲಾಗುತ್ತಿತ್ತು. ಬ್ರಾಹ್ಮಣ ಜಾತಿಯ ಶಿಕ್ಷಕರು ಶೂದ್ರ ಹುಡುಗರನ್ನು ಪ್ರತ್ಯೇಕವಾಗಿ ಕೂರಿಸಿ ಬೋಧನೆಯನ್ನು ಮಾಡುತ್ತಿದ್ದರು. ಜಾತಿಯ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿಂಗಡಿಸುವುದು ಮತ್ತು ಶೈಕ್ಷಣಿಕ ಮೌಲ್ಯಮಾಪನವನ್ನು ಜಾತಿ ಆಧಾರದ ಮೇಲೆ ನಡೆಸುತ್ತಿದ್ದರು. ಆದರೆ ಕುವೆಂಪು ಅವರು ತಮ್ಮ ಬಾಲ್ಯದಲ್ಲಿ ಶಿಕ್ಷಣ ಪಡೆಯುವಾಗ ಜಾತಿಯಿಂದ ವಿದ್ಯಾರ್ಥಿಗಳನ್ನು ಗುರುತಿಸುವ ಶಿಕ್ಷಕರನ್ನು ವಿರೋಧಿಸುತ್ತಾರೆ. ಹಾಗೂ ವ್ಯಂಗ್ಯದಿಂದ ಅವರನ್ನು ಕಾಣುವುದನ್ನು ನೋಡಬಹುದು. "ನಮ್ಮ ಉಪಾಧ್ಯಾಯರುಗಳಲ್ಲಿ ಒಬ್ಬರು ರಾಮರಾಯರು. ಅವರು ಇಂಗ್ಲಿಷ್ ಪಾಠಕ್ಕೆ ಬರುತ್ತಿದ್ದರು. ಬಿಳಿಯ ಪೇಟ, ಕೋಟು, ಕಚ್ಚೆ ಹಾಕಿ ನೀಟಾಗಿರುತ್ತಿದ್ದರು. ಇತರ ಕೆಲವರಂತೆ ಅವರು ಹೊಡೆಯುತ್ತಲೂ ಇರಲಿಲ್ಲ; ಹೆದರಿಸುತ್ತಿದ್ದರೂ ತುಂಬ ಹೆಚ್ಚು ಗೌರವ, ವಿಶ್ವಾಸ ಅವರದ್ದು ಒಂದು. ಹಟ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜಾತಿಯ ಲಲಾಟಚಿಹ್ನೆಯನ್ನು, ಅವರು ಹೇಳುತ್ತಿದ್ದಂತೆ 'ಕ್ಯಾಸ್ಟ್‌ಮಾರ್ಕ್' ಅನ್ನು, ಇಟ್ಟುಕೊಂಡೇ ಕ್ಲಾಸಿಗೆ ಬರಬೇಕು. ನಾನು, ಹೆಸರಿಗೆ ನಾಮಧಾರಿ. ಒಕ್ಕಲಿಗ ಜಾತಿಗೆ ಸೇರಿದ್ದರೂ, ಲಾಂಛನಗಳ ವಿಚಾರದಲ್ಲಿ ಅಷ್ಟೇನೂ ಆಸಕ್ತನಾಗಿರಲಿಲ್ಲ. ಮನೆಯಲ್ಲಿ ಇನ್ನೂ ಚಿಕ್ಕವನಾಗಿದ್ದಾಗ, ನಾಮದ ಪೆಟ್ಟಿಗೆಯ ಮುಂದೆ ಕುಳಿತು ಅಪ್ಪಯ್ಯ ಅಜ್ಜಯ್ಯ ಯಾರಾದರೂ ಹಿರಿಯರು ನಾಮ ಧರಿಸಿಕೊಳ್ಳುತ್ತಿದ್ದಾಗ, ನಾನೂ ಮುಖ ಚಾಚಿ ನಾಮ ಇಡಿಸಿಕೊಳ್ಳುತ್ತಿದ್ದೆ.

ತೀರ್ಥಹಳ್ಳಿಯಲ್ಲಂತೂ ನಾಮ ಇಟ್ಟುಕೊಳ್ಳುವುದೆಲ್ಲಿ ಬಂತು? ಆದರೆ ರಾಮರಾಯರ ಪೀಡೆ ತಡೆಯಲಾರದೆ ಒಂದು ಉಪಾಯ ಹೂಡಿದ್ದೆ. ಅವರ ಕ್ಲಾಸು ಇರುವಾಗ, ಯಾರಾದರೂ ಹಣೆಗೆ ನಾಮ ಇಟ್ಟುಕೊಂಡು ಬಂದ ಗೆಳೆಯನನ್ನು ಹಿಡಿದು, ಅವನ ಹಣೆಗೆ ನೇರವಾಗಿ ನನ್ನ ಹಣೆಯನ್ನು ಒತ್ತಿ, ಬಲವಾಗಿ ಒತ್ತಿ, ನನ್ನ ಹಣೆಗೂ ನಾಮದ ಗುರುತು ಬೀಳುವಂತೆ ಮಾಡಿಕೊಂಡು ರಾಮರಾಯರ ತರಗತಿಗೆ ಧೈರ್ಯವಾಗಿ ಹೋಗುತ್ತಿದ್ದೆ. ಒಮ್ಮೊಮ್ಮೆ, ಒಂದೇ ನಾಮ ಇಟ್ಟುಕೊಂಡ ಗೆಳೆಯ ಸಿಕ್ಕದಿದ್ದರೆ, ಮೂರು ನಾಮದ ಐಯ್ಯಂಗಾರ್ ಗೆಳೆಯನನ್ನೇ ಹಿಡಿದು, ಅವನ ಹಣೆಗೆ ನನ್ನ ಹಣೆ ಡಿಕ್ಕಿ ಹೊಡೆಸುತ್ತಿದ್ದೆ. ಆದರೆ ಒಕ್ಕಲಿಗರ ಹುಡುಗ ಎರಡು ಬಿಳಿನಾಮಗಳ ನಡುವೆ ಒಂದು ಕೆಂಪುನಾಮ ಇಟ್ಟುಕೊಳ್ಳುತ್ತಿದ್ದುದು ಅಪೂರ್ವ, ರಾಮರಾಯರು ಇದೇನು ಐಯ್ಯಂಗಾರ್ ನಾಮ ಹಾಕಿಕೊಂಡಿದ್ದೀಯಾ ಎಂದು ಕೇಳಿದರೆ, ಒಮ್ಮೊಮ್ಮೆ ವಿಶೇಷ ದಿನಗಳಲ್ಲಿ ಗೌಡರೂ ಮೂರುನಾಮ ಹಾಕಿಕೊಳ್ಳುತ್ತಾರೆ, ದಾಸಯ್ಯಗಳಂತೆ, ಎಂದು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಆದರೆ ಒಮ್ಮೆ ಇಂತಹ ಘಟನೆ ಸಂಭವಿಸಿದ ತರುವಾಯ, ಸ್ನೇಹಿತನ ಹಣೆಯ ಮೂರು ನಾಮ ನನ್ನ ಹಣೆಗೆ ಬಂದಿದ್ದರೂ, ಅವನ ಕೈಯಿಂದಲೆ ಅಕ್ಕಪಕ್ಕದ ಎರಡು ಬಿಳಿನಾಮಗಳನ್ನು ಎಚ್ಚರಿಕೆಯಿಂದ ಒರಸಿಹಾಕುವಂತೆ ಮಾಡುತ್ತಿದ್ದೆ."[೧೦] ಈ ರೀತಿ ಶಾಲೆಗಳಲ್ಲಿ ನಡೆಯುತ್ತಿದ್ದ ವೈದಿಕ ಮೂಲಭೂತವಾದಗಳನ್ನು ಕುವೆಂಪು ವಿರೋಧಿಸುತ್ತಾರೆ. ಬ್ರಾಹ್ಮಣ ಜಾತಿಯ ಶಿಕ್ಷಕರು ಶೂದ್ರ ಹುಡುಗರನ್ನು ಪ್ರತ್ಯೇಕವಾಗಿ ಕೂರಿಸಿ ಬೋಧನೆಯನ್ನು ಮಾಡುವ ತಾರತಮ್ಯವನ್ನು ಕುವೆಂಪು ಖಂಡಿಸುತ್ತಾರೆ. ಆಧುನಿಕ ಬ್ರಿಟಿಷರ ಶಿಕ್ಷಣಪದ್ಧತಿಯಿಂದ ಎಲ್ಲರಿಗೂ ಶಿಕ್ಷಣದ ಅವಕಾಶ ಸಿಕ್ಕರೂ, ಶೂದ್ರರಿಗೆ ಶಾಲೆಗಳಲ್ಲಿ ನಡೆಯುತ್ತಿದ್ದ ಅಪಮಾನಗಳು ಅಮಾನವೀಯತೆಯಿಂದ ಕೂಡಿದ್ದವು.

ಶೂದ್ರನು ಸಂಸ್ಕೃತವನ್ನು ಕಲಿಯುವಂತಿಲ್ಲ. ಶೂದ್ರನಿಗೆ ಸಂಸ್ಕೃತ ಪದವನ್ನು ಉಚ್ಚರಿಸಲು ಬರುವುದಿಲ್ಲ. ಸಂಸ್ಕೃತವನ್ನು ಕಲಿತರೆ ಶೂದ್ರನ ನಾಲಿಗೆಗೆ ಬರೆಯನ್ನು ಹಾಕಲಾಗುವುದು ಎಂಬ ನಿಯಮಗಳನ್ನು ಮನುಸ್ಮೃತಿಯಲ್ಲಿ ನಾವು ಕಾಣಬಹುದು. ಆದರೆ ಆಧುನಿಕ ಸಂದರ್ಭದಲ್ಲಿ ವೈದಿಕ ಬ್ರಾಹ್ಮಣರು ಮನು ಹೇಳಿದ ಕಾನೂನನ್ನೇ ಪಾಲಿಸಿಕೊಂಡು ಬಂದಿದ್ದರೆ ಕುವೆಂಪು ಮನು ಹೇಳಿದ ಕಾನೂನನ್ನು ವಿರೋಧಿಸಿ, ಸಂಸ್ಕೃತವನ್ನು ಕಲಿಯಲು ಮುಂದಾಗುವುದನ್ನು 'ನೆನಪಿನ ದೋಣಿ'ಯಲ್ಲಿ ಈ ರೀತಿ ಹೇಳಿದ್ದಾರೆ. "ನಿಮ್ಮಲ್ಲಿ ಯಾರೂ ಸಂಸ್ಕೃತ ತೆಗೆದುಕೊಳ್ಳುವವರು? ಯಾರೂ ಕನ್ನಡ ತೆಗೆದುಕೊಳ್ಳವವರು? ಸಂಸ್ಕೃತ ತೆಗೆದುಕೊಳ್ಳಲು ಇಚ್ಛಿಸುವರೆಲ್ಲ ಎದ್ದು ನಿಲ್ಲಿ! ಎಂದರು. ಅನೇಕರು ಎದ್ದು ನಿಂತರು. ನಾನೂ ಎದ್ದು ನಿಂತೆ. ಅಷ್ಟೊಂದು ಮಂದಿ ಎದ್ದು ನಿಲ್ಲುವಾಗ ನಾನೇಕೆ ಕೂತಿರಬೇಕು? ನಾನೇನು ಕಡಮೆ? "ಸಂಸ್ಕೃತದ ವಿದ್ಯಾರ್ಥಿಗಳೆಲ್ಲ ಮತ್ತೊಂದು ಕೊಠಡಿಗೆ ಹೋಗಿ" ಎಂದರು ಮೇಷ್ಟರು. ತುಂಬ ಹೆಮ್ಮೆಯಿಂದ ನಾನೂ ಇತರರೊಡನೆ ಹೋಗಿ ಬೇರೆ ಕೊಠಡಿಯಲ್ಲಿ ಕುಳಿತೆ. ನನ್ನ ಕೆಲವು ಬ್ರಾಹ್ಮಣೇತರ ಮಿತ್ರರು, ಕನ್ನಡ ತರಗತಿಯಲ್ಲಿಯೇ ಉಳಿದವರು "ಸಂಸ್ಕೃತ ಕಷ್ಟ ಕಣೋ. ಅದು ಬ್ರಾಹ್ಮಣರಿಗೆ ಮಾತ್ರ" ಎಂದು ಬುದ್ಧಿವಾದ ಹೇಳಿದರು. ಬ್ರಾಹ್ಮಣ ಸಹಪಾಠಿಗಳು "ನೀನ್ಯಾಕೆ ಬಂದೆಯೊ ನಮ್ಮ ಜೊತೆಗೆ? ಶೂದ್ರರಿಗೆ ಯಾಕೊ ಸಂಸ್ಕೃತ? ನೀನೇನು ಮಂತ್ರಗಿಂತ್ರ

ಹೇಳಿ ಪೌರೋಹಿತ್ಯ ಮಾಡ್ತಿಯೆನೊ? ಸಂಸ್ಕೃತ ನಿನಗೆ ಉಚ್ಚಾರ ಮಾಡೋಕೆ ಆಗೋದಿಲ್ಲ. ನೀನು ಅದನ್ನು ಕಲ್ತು ಬರೆದು ಪಾಸುಮಾಡುವುದು ಹೌದೇನೋ?" ಎಂದು ಅರೆ ಅಣಕದ ಎಚ್ಚರಿಕೆಯ ಮಾತನಾಡಿದರು. "ಓಹೋ ಅದೇನು ಮಹಾ! ಬ್ರಾಹ್ಮಣರಿಗೆ ಮಾತ್ರ ಮೀಸಲೇನೊ?" ಎಂದು ನಾನು ಉಡಾಫೆ ಮಾಡಿ, ಸಂಸ್ಕೃತದ ಕ್ಲಾಸಿನಲ್ಲಿಯೇ ಕುಳಿತೆ. ರಿಜಿಸ್ಟರಿನಲ್ಲಿ ಹುಡುಗರ ಹೆಸರನ್ನೆಲ್ಲ ಬರೆದುಕೊಳ್ಳುತ್ತಿದ್ದ ಮೂರುನಾಮದ ಪಂಡಿತರು ನನ್ನ ಸರದಿ ಬರಲು, ನಾನು ಹೇಳಿದ ನನ್ನ ಹೆಸರನ್ನು ಕೇಳಿ ಬೆರಗಾಗಿ, ಮೆಟ್ಟಬಾರದ್ದನ್ನು ಮೆಟ್ಟಿದವರಂತೆ, ಜುಗುಪ್ಸೆ ವಿಸ್ಮಯ ಅಸಮಾಧಾನಗಳ ಭಂಗಿಯಿಂದ ತಲೆಯೆತ್ತಿ ನನ್ನ ಕಡೆ ದುರುದುರನೆ ಸ್ವಲ್ಪ ಹೊತ್ತು ನೋಡಿ, ಏನನ್ನೋ ನಿಶ್ಚಯಿಸಿ, ಮತ್ತೆ ತಲೆತಗ್ಗಿಸಿ ಹುಡುಗರ ಹೆಸರು ಬರೆದುಕೊಳ್ಳುವ ತಮ್ಮ ಕರ್ತವ್ಯದಲ್ಲಿ ನಿರತರಾದರು."[೧೧] ಶೂದ್ರರಿಗೆ ಸಂಸ್ಕೃತವನ್ನು ಕಲಿಸುವ ಆಸಕ್ತಿಗಳು ಬ್ರಾಹ್ಮಣ ಶಿಕ್ಷಕರಲ್ಲಿ ಇಲ್ಲದೇ ಇರುವುದನ್ನು ಕಾಣಬಹುದು. ಏಕೆಂದರೆ ವೈದಿಕ ಧರ್ಮವು ಪ್ರತಿಪಾದಿಸುವ ವರ್ಣಾಶ್ರಮ ಪದ್ಧತಿಯಿಂದ ಮತ್ತು ಜಾತಿಯ ಕಾರಣಗಳಿಂದ ಸಂಸ್ಕೃತವನ್ನು ಕಲಿಯಲು ಬಂದ ಶೂದ್ರ ವಿದ್ಯಾರ್ಥಿಗಳಿಗೆ ಸಂಸ್ಕೃತ ತುಂಬ ಕಷ್ಟ. ಇದನ್ನು ಶೂದ್ರರು ಕಲಿತರೆ ಉಪಯೋಗವಿಲ್ಲ ಎಂಬ ಭಾವನೆಗಳಿಂದಲೇ ವಿದ್ಯಾರ್ಥಿಗಳಲ್ಲಿ ಭಯವನ್ನು ವೈದಿಕ ಶಿಕ್ಷಕರು ಸೃಷ್ಟಿ ಮಾಡುತ್ತಿದ್ದರು. ಹಾಗಾಗಿ ಶಿಕ್ಷಣ ಕೇವಲ ಬ್ರಾಹ್ಮಣರ ಸ್ವತ್ತಲ್ಲ ಎಲ್ಲರೂ ಕಲಿಯಬಹುದು ಎಂಬ ಆಶಯವನ್ನು ಕುವೆಂಪು ಅವರ ಮಾತುಗಳಲ್ಲಿ ಕಾಣಬಹುದಾಗಿದೆ.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ವೈದಿಕ ಶಿಕ್ಷಣಪದ್ಧತಿ ಮತ್ತು ವೈದಿಕ ತಾತ್ವಿಕತೆಯನ್ನು ವಿಮರ್ಶೆ ಮತ್ತು ವಿಶ್ಲೇಷಣೆ ಮಾಡಿರುವುದನ್ನು ಗುರುತಿಸಬಹುದು. ಆಧುನಿಕ ಶಿಕ್ಷಣವನ್ನು ಪಡೆದು ಬಂದ ಹೂವಯ್ಯ ಮತ್ತು ರಾಮಯ್ಯರು ವೈಚಾರಿಕವಾಗಿ ಚಿಂತನೆ ಮಾಡುವುದನ್ನು ಗಮನಿಸಬಹುದಾಗಿದೆ. ಕಾದಂಬರಿ ಉದ್ದಕ್ಕೂ ಹೂವಯ್ಯ ವೈದಿಕ ಪುರೋಹಿತಶಾಹಿ ವ್ಯವಸ್ಥೆಯನ್ನು ವಿರೋಧಿಸುವುದನ್ನು ಕಾಣಬಹುದು. ಆಧುನಿಕ ಶಿಕ್ಷಣದ ಪ್ರಭಾವದಿಂದ ಹೂವಯ್ಯ ಮಲೆನಾಡಿಗೆ ಬರುವಾಗ ಪುಸ್ತಕಗಳ ಜೊತೆಯಲ್ಲಿ ಬರುತ್ತಾನೆ. ಹೀಗೆ ಆಧುನಿಕತೆಯಿಂದ ಹಳ್ಳಿಗಳಿಗೆ ಪುಸ್ತಕ ಪ್ರವೇಶವಾಗುವುದರ ಮೂಲಕ ಹಳ್ಳಿಗಳಲ್ಲಿ ವೈದಿಕ ಪುರೋಹಿತಶಾಹಿ ಮಾಡುತ್ತಿದ್ದ ಮೌಢ್ಯಗಳನ್ನು ವಿರೋಧಿಸುವ ಕೆಲಸವನ್ನು ಆಧುನಿಕ ಶಿಕ್ಷಣ ಮಾಡುತ್ತದೆ. ವೈದಿಕರು ಶೂದ್ರರಿಗೆ ಅಕ್ಷರ ಜ್ಞಾನವನ್ನು ಕೊಡದೆ ವಂಚಿಸಿದ್ದರು. ಆಧುನಿಕತೆಯಿಂದ ಶೂದ್ರರಿಗೆ ಅಕ್ಷರದ ಆಗಮನವೇ ಹೊಸ ಕ್ರಾಂತಿಯ ಸಂಕೇತವಾಗಿದೆ. ಈ ಕಾದಂಬರಿಯಲ್ಲಿ ಹೂವಯ್ಯನ ಪಾತ್ರವನ್ನು ಆಧುನಿಕ ವಿದ್ಯಾವಂತರ ಪ್ರತಿನಿಧಿಯಾಗಿ ಕುವೆಂಪು ರಚಿಸಿದ್ದಾರೆ. ಹೀಗಾಗಿ ಹೂವಯ್ಯ ವೆಂಕಪ್ಪಜೋಯಿಸರ ವೈದಿಕ ಆಚರಣೆಗಳನ್ನು ವಿರೋಧಿಸುವುದರಿಂದ, ಹೂವಯ್ಯನ ವೈಚಾರಿಕತೆಯನ್ನು ಸಹಿಸಲಾರದೆ ಜೋಯಿಸರು ಮಾಡುವ ಹುನ್ನಾರಗಳನ್ನು ಕುವೆಂಪು ಈ ರೀತಿ ಚಿತ್ರಿಸಿದ್ದಾರೆ.

"ಏನು ಮಾಡೋದು ಹೇಳಿ. ನಮ್ಮ ಹೂವಯ್ಯ ಹೋದ ರಜಾದಲ್ಲಿ ಬಂದವನು ಏನೇನೋ ಬೋಧಿಸಿ ಹೋಗಿದ್ದ. ಅವನ ಮಾತು ಕೇಳಿ ತಾಯಿತಿ ಕಿತ್ತು ಬಿಸಾಡಿ ಬಿಟ್ಟಿದ್ದಾನೆ."

"ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿಬಿಡುತ್ತದೆ ಎಂದು! ದೇವರು ದಿಂಡರು ಭಕ್ತಿ ಗಿಕ್ತಿ ಎಲ್ಲ ನಿರ್ನಾಮ! ಜೊತೆಗೆ ನೂರಾರು ಹವ್ಯಾಸಗಳನ್ನು ಬೇರೆ ಕಲಿತುಬಿಡುತ್ತಾರೆ. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ, ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು. ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ."

"ಹಾಂಗೆ ಮಾಡೋದೆ ಸೈ ಅಂತ ಕಾಣ್ತದೆ–ಈಗ ನೋಡಿ; ಆ ಹೂವಯ್ಯ, ಅವನ ದೆಸಿಯಿಂದ ರಾಮಯ್ಯ, ಇಬ್ಬರೂ ಸೇರಿ ದೆಯ್ಯ ದ್ಯಾವರು ಭೂತ ಗೀತ ಜಕಣಿ ಗಿಕಣಿ ಒಂದೂ ಬ್ಯಾಡ ಅಂತ ಬೋದ್ನೋಕೆ ಸುರುಮಾಡಿದ್ದಾರೆ. ಆ ಹೂವಯ್ಯನಂತೂ ಅದೆಂತಂತದೊ–ಭಗವದ್ಗೀತೆಯಂತೆ ಉಪ್ನಿಷತ್ತಂತೆ –ಓದಿ ತಲೆ ಕೆಡಿಸಿಕೊಳ್ಳುತ್ತಿದ್ದಾನೆ... ಮನೆಗೆ ಬಂದವನು ಒಂದು ಆಳು ಕಾಳಿನ ಕೆಲಸ ಕೂಡ ನೋಡೋದಿಲ್ಲ. ಉಪ್ಪರಿಗೆ ಮೇಲೆ ಓದುತ್ತ ಕುಳಿತುಬಿಡ್ತಾನೆ."

"ಹೌದು, ದುಡಿದು ಹಾಕುವವರು ಒಬ್ಬರಿದ್ದರೆ ಮತ್ತೇನು ಮಾಡುತ್ತಾನೆ? ಅವನ ಪಾಲು ಅವನಿಗೆ ಕೊಟ್ಟು ಬೇರೆ ಹಾಕು! ಆಗೆಲ್ಲ ಸರಿಹೋಗುತ್ತದೆ. ಈ ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೆ? ನಮಗೆ ಗೊತ್ತಾಗುವುದಿಲ್ಲ....

ಗೌಡರು ನಗುತ್ತ "ನಿಮಗೆ ಗೊತ್ತಾಗದೆ ಏನು?" ಎಂದರು.

"ಹಾಗಲ್ಲ, ಚಂದ್ರಯ್ಯ, ನಿನಗೆ ಗೊತ್ತಿಲ್ಲ. ಎಂತೆಂಥ ಆಚಾರ್ಯರೇ ಅವುಗಳಿಗೆ ವ್ಯಾಖ್ಯಾನ ಬರೆಯಲು ತಿಣಿಕಿಬಿಟ್ಟಿದ್ದಾರೆ. ಅವರಲ್ಲಿಯೇ ಏಕಮತವಿಲ್ಲ... ಈ ಶೂದ್ರಮಕ್ಕಳಿಗೆಲ್ಲ ಗೊತ್ತಾಗುತ್ತದಯೇ... ಅದನ್ನೆಲ್ಲ ಓದಿ ಮನೆ ಹಾಳುಮಾಡಿ ಕೊಳ್ಳುತ್ತಾರೆ; ಅಷ್ಟೇ!..."[೧೨] ಹೀಗೆ ಹೂವಯ್ಯ ಆಧುನಿಕ ಶಿಕ್ಷಣವನ್ನು ಪಡೆದಿದ್ದರಿಂದ ಪುರೋಹಿತಶಾಹಿಗಳ ಮೌಢ್ಯವನ್ನು ವಿರೋಧಿಸುತ್ತಾನೆ. ಶೂದ್ರರು ವೇದಗಳನ್ನು, ಭಗವದ್ಗೀತೆ ಮತ್ತು ಉಪನಿಷತ್ತುಗಳನ್ನು ಓದಬಾರದು ಎಂಬ ನಿಯಮ ಮಾಡಿದ ವೈದಿಕರನ್ನು ವಿರೋಧಿಸಿ ಹೂವಯ್ಯ ಓದುತ್ತಾನೆ. ವೈದಿಕ ವರ್ಗದ ಚಾಣಾಕ್ಷತೆಯನ್ನು ಹೂವಯ್ಯ ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿ ಪ್ರಶ್ನಿಸುತ್ತಾನೆ. ಇವುಗಳನ್ನು ಸಹಿಸದ ವೆಂಕಪ್ಪ ಜೋಯಿಸರು ಹೂವಯ್ಯನ ಮೇಲೆ ಹುನ್ನಾರಗಳನ್ನು ಮಾಡುವುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಆಧುನಿಕ ಶಿಕ್ಷಣದ ಪ್ರಬವದಿಂದ ಮಲೆನಾಡಿನ ಮನುಷ್ಯ ಮನುಷ್ಯರ ನಡುವೆ ಇದ್ದ ಜಾತಿ ತಾರತಮ್ಯ ಮತ್ತು ಮೌಢ್ಯತೆಗಳು ದೂರವಾಗುತ್ತವೆ. ವೈದಿಕ ಮತ್ತು ಅವೈದಿಕರ ನಡುವೆ ಇರುವ ಅಂತರಗಳು ಕೂಡ ದೂರವಾಗುವುದನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ.

ಆಧುನಿಕತೆಯ ಪ್ರಭಾವದಿಂದ ಮಹಿಳೆಯರು ಶಿಕ್ಷಣವನ್ನು ಪಡೆಯಲು ಸಾಧ್ಯವಾಯಿತು. ಮಹಿಳೆಯರು ಶಿಕ್ಷಣವನ್ನು ಪಡೆಯುವುದರಿಂದ ಯಾವುದೇ ಉಪಯೋಗ ಇಲ್ಲ ಎಂಬ ವೈದಿಕ ಪ್ರಜ್ಞೆಯ ಮನಸ್ಥಿತಿಗಳು ಸಮಾಜದಲ್ಲಿ ಇದ್ದವು. ಹಾಗಾಗಿ ಮಹಿಳೆಯರು ಶಿಕ್ಷಣ ಪಡೆಯುವಂತಿಲ್ಲ ಎಂಬ ವೈದಿಕ ಧರ್ಮದ ನಿಲುವುಗಳನ್ನು ಕುವೆಂಪು ಕಾದಂಬರಿಯಲ್ಲಿ ಈ ರೀತಿ ವಿವರಿಸುತ್ತಾರೆ. "ಹೂವಳ್ಳಿಗೆ ಒಂದೆರಡು ಮೈಲಿಗಳೊಳಗೇ ಇರುವ ಕೋಣೂರಿನ ಮನೆಯಲ್ಲಿಯೆ ಒಂದು ಐಗಳ

ಮಠ ಇದ್ದು, ಹಳೆಮನೆ ಬೆಟ್ಟದಳ್ಳಿ ಕಡೆಯ ಸಮೀಪದ ಊರು ಮನೆಯ ಕೆಲವೇ ಮಕ್ಕಳು 'ಬರಾವು' ಕಲಿಯುತ್ತಿದ್ದರಾದರೂ, ಗಂಡು ಮಕ್ಕಳಿಗೇ ಅಪೂರ್ವವೂ ಅಸಾಧ್ಯವೂ ಅತಿ ವಿರಳವೂ ಆಗಿದ್ದ ಓದುಬರಹವನ್ನು 'ಹೆಣ್ಣುಹೆಂಗಸರಿಗೆ' ಕಲಿಸಲು ಯಾರೂ ಒಪ್ಪುತ್ತಿರಲಿಲ್ಲ. ಹೆಂಗಸರು ಓದುವುದನ್ನು ಕಂಡೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ಹೆಂಗಸರು ಓದು ಕಲಿಯುವುದು ಗಂಡಸರು ಸೀರೆಯುಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು. ಒಮ್ಮೆ ಕೋಣೂರಿನ ಹುಡುಗ ಮುಕುಂದಯ್ಯ 'ವೆಂಕ್ಟಮಾವ'ನಿಗೆ 'ಚಿನ್ನೀನ ನಮ್ಮ ಮನೆಗೆ ಬರೆಯೋಕೆ ಕಳ್ಸಿ' ಎಂದು ಯಾವುದೋ ಮಾತಿನ ಸಂದರ್ಭದಲ್ಲಿ ಹೇಳಿದಾಗ, ಹೂವಳ್ಳಿ ವೆಂಕಟಣ್ಣ ನಕ್ಕು 'ಗೌಡ್ರು ಕಣ್ರೋ ಅವಳಿನ್ನು ಬರಾವು ಕಲ್ತು ಮಣೆಗಾರಿಕೆ ಮಾಡೋದೊಂದು ಬಾಕಿ!' ಎಂದು ಲೇವಡಿ ಮಾಡಿದ್ದನು."[೧೩] ಆಧುನಿಕತೆಗೆ ಒಳಗಾದ ಮುಕುಂದಯ್ಯ ಚಿನ್ನಮ್ಮನನ್ನು ಓದಿಸಬೇಕು ಎನ್ನುವ ನಿರ್ಧಾರದಲ್ಲಿ ವೈದಿಕ ಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಮೇಲುವರ್ಗದ ಮಹಿಳೆಯರಿಗೆ ಮಾತ್ರ ಶಿಕ್ಷಣವನ್ನು ಕೊಟ್ಟಿರುವ ಬಗ್ಗೆ ವೇದಗಳು ನಮಗೆ ತಿಳಿಸುತ್ತವೆ. ಆದರೆ ಶೂದ್ರ ಮಹಿಳೆಯರಿಗೆ ಶಿಕ್ಷಣವನ್ನು ಕೊಟ್ಟಿರುವ ಬಗ್ಗೆ ತಿಳಿಸುವುದಿಲ್ಲ. ಮಹಿಳೆಯರು ಶಿಕ್ಷಣ ಪಡೆಯುವುದು ಹಾಸ್ಯಾಸ್ಪದವಾಗಿತ್ತು. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮುಕುಂದಯ್ಯ ಚಿನ್ನಮ್ಮನಿಗೆ ಶಿಕ್ಷಣವನ್ನು ಕೊಡಿಸುವುದರ ಬಗ್ಗೆ ಚಿಂತಿಸುವುದು ಕಾಣಬಹುದಾಗಿದೆ.

ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಆಧುನಿಕ ಶಿಕ್ಷಣವನ್ನು ಪಡೆದವರು ಹಿಂದೂ ಮೂಲಭೂತವಾದವನ್ನು ಪ್ರತಿಪಾದಿಸುವುದನ್ನು ವಿರೋಧಿಸುತ್ತಾರೆ. ಪಾಶ್ಚಾತ್ಯರ ಪ್ರಭಾವದಿಂದ ಶೂದ್ರರು ಶಿಕ್ಷಣವನ್ನು ಪಡೆಯಲು ಅವಕಾಶವಾಯಿತು. ಆದರೆ ಆಧುನಿಕ ಬ್ರಾಹ್ಮಣರು ಹಿಂದುತ್ವವನ್ನು ಆಧುನಿಕ ಶಿಕ್ಷಣದಲ್ಲಿ ಸೇರಿಸುವ ಹುನ್ನಾರವನ್ನು ಮಾಡಿದರು. ಹಾಗಾಗಿ ಆಧುನಿಕ ಸಂದರ್ಭದಲ್ಲಿ ಶಿಕ್ಷಣವು ಉಚ್ಚವರ್ಗ ಜನರ ಸ್ವತ್ತಾಗಿರುವುದನ್ನು ತೇಜಸ್ವಿ ಅವರು ವಿರೋಧಿಸುತ್ತಾರೆ. "ನಮ್ಮ ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಚವರ್ಗ ಮತ್ತು ಜಾತಿಗಳೂ, ಮಿಕ್ಕಿದ್ದನ್ನು ಮಧ್ಯಂತರ ವರ್ಗ ಮತ್ತು ಜಾತಿಗಳೂ ತಿಂದುಹಾಕುತ್ತಿರುವುದರಿಂದ ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರಣದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟ್ಟೊತ್ತುವ ನಿರಕ್ಷರ ಕುಕ್ಷಿಗಳ ಸಮುದಾಯ ಒಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಸಾಹಿತ್ಯ ಸಂಸ್ಕೃತಿಗಳು ಕೇವಲ ಮೇಲು ಜಾತಿಯವರ ಸೊತ್ತಾಗಿಯೇ ಉಳಿಸುವ ಯತ್ನ ನಮ್ಮ ವಿದ್ಯಾಭ್ಯಾಸ ಯೋಜನೆಗಳು ಮತ್ತು ವಿದ್ಯಾಭ್ಯಾಸ ಕ್ರಮ ಇವೆಲ್ಲ. ಭಾಷೆ ಮತ್ತು ಸಾಹಿತ್ಯ ಇಂದು ಹೇಗೆ ಉಳ್ಳವರ ಸ್ವತ್ತಾಗತೊಡಗಿದೆಯೆಂದರೆ ಇನ್ನು ಭಾಷೆಯಲ್ಲಿ ಆಲೋಚನೆ ಮತ್ತು ಅಭಿವ್ಯಕ್ತಿ ಬಯಸುವುದೇ ಮೋಸಗಾರಿಕೆ ಎನ್ನುವಂತೆ ಭಾಸವಾಗತೊಡಗಿದೆ. ಅಂಥದರಲ್ಲಿ ಸಾಹಿತ್ಯದಲ್ಲೂ ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡು ಸಹೃದಯ ಸ್ತೋಮವನ್ನು ಅದಷ್ಟು ಸೀಮಿತಗೊಳಿಸುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ತ ಸಮಾಜವೆಂದಷ್ಟೇ ಹೇಳಬಹುದು."[೧೪] ಆಧುನಿಕ ಶಿಕ್ಷಣ ಸನಾತನ ಧರ್ಮದ ಗೊಡ್ಡು ಆಚರಣೆಗಳನ್ನು ಜಾರಿಗೆ ಮಾಡುವಂತೆ ಮೇಲುವರ್ಗದ

ಶಿಕ್ಷಿತರು ಮಾಡಿದರು. ಹಾಗಾಗಿ ಶೂದ್ರರು ಮತ್ತು ಕೆಳವರ್ಗದವರು ಶಿಕ್ಷಣದಿಂದ ವಂಚಿತರಾಗಿ ಅನಕ್ಷರತೆ ಹೆಚ್ಚಾಯಿತು. ಶಿಕ್ಷಣದಿಂದ ಜಾತಿ ಪದ್ಧತಿ ವ್ಯವಸ್ಥೆ ಹೋಗಬೇಕಾಗಿತ್ತು. ಆದರೆ ಆಧುನಿಕ ಶಿಕ್ಷಣದಿಂದ ಜಾತಿಪದ್ಧತಿ ಹೆಚ್ಚಾಗತೊಡಗಿತು ಹಾಗೂ ಆಧುನಿಕ ಸಂದರ್ಭದಲ್ಲಿ ಶಿಕ್ಷಣ ಉಳ್ಳವರ ಸೊತ್ತಾಯಿತು.

ಹಿಂದುತ್ವ, ಬ್ರಾಹ್ಮಣತ್ವಗಳು ಶಿಕ್ಷಣದಲ್ಲಿ ಸೇರಿಕೊಂಡದ್ದರಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಪ್ರಜ್ಞೆಯ ಹುಟ್ಟಿಗೆ ಕಾರಣವಾಗಿತ್ತು. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ನವ್ಯ ಮತ್ತು ನವ್ಯೇತರ ಗುಂಪು ಹುಟ್ಟಿಗೆ ಕಾರಣವಾಯಿತು. ಬಹುಪಾಲು ನವ್ಯ ಸಾಹಿತಿಗಳು ಬ್ರಾಹ್ಮಣ ಜಾತಿಯವರಾಗಿದ್ದರಿಂದ ವೈದಿಕ ಮೂಲಭೂತವನ್ನು ಸಾಹಿತ್ಯದ ಮೂಲಕ ಪಸರಿಸಲು ಮುಂದಾದರು. ಹಾಗಾಗಿ ಕನ್ನಡವನ್ನು ವಿರೋಧಿಸಿ ಇಂಗ್ಲಿಷ್ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಲು ಮುಂದಾದರು. ಕನ್ನಡದ ಅವನತಿಗೆ ಬ್ರಾಹ್ಮಣರೇ ಕಾರಣ ಎಂಬ ಪೂರ್ಣಚಂದ್ರ ತೇಜಸ್ವಿ ಅವರ ನಿಲುವನ್ನು ಕಾಣಬಹುದು. "ಆಗ ನವ್ಯ ಮತ್ತು ನವ್ಯೇತರ ಗುಂಪು ಹೇಗೆ ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಎಂದು ಧ್ರುವೀಕರಣವಾಗತೊಡಗಿತ್ತೋ ಹಾಗೆಯೇ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯ ವಿಭಾಗಗಳ ನಡುವೆ ಧ್ರುವೀಕರಣ ಆಗತೊಡಗಿತ್ತು. ಆಗಲೇ ನನಗೆ ಕನ್ನಡ ಅಧ್ಯಯನ ಸಂಸ್ಥೆಯ ಪಠ್ಯಕ್ರಮ, ಅಲ್ಲಿ ಅಧ್ಯಯನಕ್ಕೆ ಇಟ್ಟಿರುವ ವಿಷಯಗಳು ಇವೆಲ್ಲವುಗಳ ಮೇಲೆ ತೀವ್ರವಾದ ಅಸಂತೃಪ್ತಿ ಶುರುವಾಗಿತ್ತು. ತೀನಂಶ್ರೀ, ಡಿ.ಎಲ್.ನರಸಿಂಹಾಚಾರ್, ಮೊದಲಾದ ಮಹಾ ಪಂಡಿತರು ನಮಗೆ ಗುರುಗಳಾಗಿದ್ದರೂ ಅವರ ಪ್ರತಿಭೆಯೆಲ್ಲಾ ವ್ಯಾಕರಣ ಭಾಷಾಶಾಸ್ತ್ರಗಳಿಗೆ ಸೀಮಿತವಾಗಿ ಕನ್ನಡ ಆನರ್ಸ್, ಮತ್ತು ಎಂ.ಎ.,ಗಳು ಅವನತಿಯ ಹಾದಿ ಹಿಡಿದಿದ್ದುವು."[೧೫] ವೈದಿಕ ಮೂಲಭೂತವಾದದಿಂದ ಸ್ಥಳೀಯ ಶಿಕ್ಷಣವ್ಯವಸ್ಥೆ ಅವನತಿಯ ಹಾದಿಯನ್ನು ಹಿಡಿಯುವುದಕ್ಕೆ ಕಾರಣವಾಯಿತು. ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಬರುವ ಆಧುನಿಕ ಶಿಕ್ಷಣವನ್ನು ಪಡೆದ ಯುವಕರು ವೈದಿಕ ಧರ್ಮ ಪ್ರತಿಪಾದಿಸುವ ಜಾತಿಪದ್ಧತಿ, ಕಂದಾಚಾರಗಳು ಮತ್ತು ಮೌಢ್ಯಗಳ ಬಗ್ಗೆ ಕ್ರಾಂತಿ ಮಾಡಲು ಮುಂದಾಗುವುದನ್ನು ಗಮನಿಸಬಹುದು. ಸ್ವರೂಪ ಕಥೆಯಲ್ಲಿ 'ಕನ್ನಡ ಸಾಹಿತ್ಯದ ಪ್ರತಿಯೊಂದು ನವೋದಯವೂ ಪಂಪನಿಂದ ಹರಿಹರನವರೆಗೆ ಬ್ರಾಹ್ಮಣರ ವಿರುದ್ಧ ಬಂಡಾಯವಾಗಿದೆ.' 'ಕನ್ನಡ ಸಾಹಿತಿಯಾಗಬೇಕಾದವನು ಮೊದಲು ಬ್ರಾಹ್ಮಣ ದ್ವೇಷಿಯಾಗಬೇಕಾಗುವುದು ಅನಿವಾರ್ಯ ಹಾಗೂ ನ್ಯಾಯ' ಎಂದು ಶ್ರೀನಿವಾಸ ಆಧುನಿಕ ಶಿಕ್ಷಣದ ಪ್ರಭಾವದಿಂದಲೇ ಈ ಮೇಲಿನ ಮಾತುಗಳನ್ನು ಆಡುವುದನ್ನು ಕಥೆಯಲ್ಲಿ ಕಾಣಬಹುದಾಗಿದೆ. ತೇಜಸ್ವಿ ಅವರ ಕಥನದಲ್ಲಿ ಬರುವ ಪಾತ್ರಗಳು ವೈದಿಕ ಧರ್ಮವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ಸೃಜನಶೀಲ ಕೃತಿಯಲ್ಲಿ ತೇಜಸ್ವಿ ಅವರು ವೈಚಾರಿಕವಾದ ಮತ್ತು ಬೌದ್ಧಿಕವಾದ ಚರ್ಚೆಗಳನ್ನು ಮಾಡುವುದರ ಮೂಲಕ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸುವ ಚಿಂತನೆಗಳನ್ನು ನಿರೂಪಿಸಿದ್ದಾರೆ.

ದಲಿತರ ಮೇಲೆ ಆಗುತ್ತಿರುವ ಅಸ್ಪೃಶ್ಯತೆ, ಶೋಷಣೆ, ಜಾತೀಯತೆ, ಆರ್ಥಿಕ ವಂಚನೆ, ಅಪಮಾನಗಳಿಂದ ಬಿಡುಗಡೆ ಆಗಲು ಆಧುನಿಕ ಶಿಕ್ಷಣದ ಪ್ರಭಾವೇ ಆಗಿದೆ. ಈ ನಿಟ್ಟಿನಲ್ಲಿ

ದೇವನೂರ ಮಹಾದೇವ ಅವರ 'ಒಡಲಾಳ' ಮತ್ತು 'ಕುಸುಮಬಾಲೆ' ಕಾದಂಬರಿಯನ್ನು ನೋಡಬಹುದಾಗಿದೆ. ದಲಿತರು ಸಾಮಾಜಿಕವಾಗಿ ಮೇಲೆ ಬರಲು ಆಧುನಿಕ ವಿದ್ಯಾಭ್ಯಾಸ ಅನಿವಾರ್ಯ ಎಂಬ ನಿಲವುಗಳು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. 'ಡಾಂಬರು ಬಂದುದು' ಕಥೆಯಲ್ಲಿನ ದಲಿತ ಹುಡುಗರಾದ ರಾಜು, ಲಕುಮ, ಶಂಭು ಮತ್ತು ಮಾದು ಇವರುಗಳು ಎಸ್.ಎಸ್.ಎಲ್.ಸಿ.ವರೆಗೆ ಓದಿದವರು. ಇವರು ಸಮಾಜದಲ್ಲಿ ಮೇಲುವರ್ಗದವರು ಮಾಡುತ್ತಿರುವ ಅನ್ಯಾಯಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದರು. ಊರಿನ ಪಟೇಲರು ರಸ್ತೆ ಮಾಡಲು ಬಂದ ಹಣದಿಂದ ದೇವಸ್ಥಾನ ಕಟ್ಟಿಸಲು ಮುಂದಾಗುತ್ತಾರೆ. ಇದನ್ನು ಅರಿತ ಈ ದಲಿತ ಹುಡುಗರು 'ಸರ್ಕಾರಿ ಹಣದ ದುರುಪಯೋಗ' ಎಂದು ಪೇಪರಿನಲ್ಲಿ ಬರೋವಂತೆ ಮಾಡಿಸುತ್ತಾರೆ. ಮೇಲುವರ್ಗದವರು ಅನಕ್ಷರಸ್ಥರಿಗೆ ಅನ್ಯಾಯ ಮಾಡುವುದನ್ನು ವಿರೋಧಿಸುತ್ತಾರೆ. ಯಾವುದೋ ಹಣಾನಾ ಯಾವುದಕ್ಕೊ ಹಾಕಿದ್ರೆ ಇನ್ನೇನು ಆಗೋದು? ಎಂದು ಪಟೇಲರಿಗೆ ನ್ಯಾಯಯುತವಾಗಿ ಪ್ರಶ್ನಿಸುವಷ್ಟು ಜ್ಞಾನವನ್ನು ಆಧುನಿಕ ಶಿಕ್ಷಣದ ಪ್ರಭಾವದಿಂದ ಆಗುವುದನ್ನು ಕಾಣಬಹುದಾಗಿದೆ.

ಬ್ರಾಹ್ಮಣೇತರರು ಶಿಕ್ಷಣವನ್ನು ಪಡೆಯುವಂತಿಲ್ಲ ಎಂಬ ಬ್ರಾಹ್ಮಣರ ತಾತ್ವಿಕ ಚಿಂತನೆಯ ಪ್ರಜ್ಞೆಯನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವಿರೋಧಿಸುವುದನ್ನು ಕಾಣಬಹುದು. ಕುವೆಂಪು ಅವರು ವೈದಿಕರ ಶಿಕ್ಷಣಪದ್ಧತಿಯನ್ನು ವಿರೋಧಿಸುತ್ತಾರೆ. ಶೂದ್ರರು ಶಿಕ್ಷಣವನ್ನು ಪಡೆಯುವಂತಿಲ್ಲ ಎಂದು ಹೇಳಿದ ಮನುವಿನ ಚಿಂತನೆಗಳನ್ನು ಮರು ಸೃಷ್ಟಿಮಾಡುವುದರ ಮೂಲಕ ಶೂದ್ರರು ಶಿಕ್ಷಣವನ್ನು ಪಡೆಯುವ ಅವಕಾಶ ಇದೆ ಎಂದು ಕುವೆಂಪು ಅವರ ನಿಲುವುಗಳನ್ನು ಕಾಣಬಹುದು. ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಆಧುನಿಕ ಶಿಕ್ಷಣದ ಪ್ರಭಾವದಿಂದ ಬ್ರಾಹ್ಮಣತ್ವ, ಹಿಂದುತ್ವ ಮತ್ತು ಮೂಲಭೂತವಾದಗಳು ಶಿಕ್ಷಣದಲ್ಲಿ ಸೇರಿಕೊಂಡು ಶೂದ್ರರಿಗೆ ಮಾಡುತ್ತಿರುವ ಅನ್ಯಾಯಗಳನ್ನು ವಿರೋಧಿಸುತ್ತಾರೆ. ಆಧುನಿಕ ಶಿಕ್ಷಣವನ್ನು ಪಡೆದ ಬ್ರಾಹ್ಮಣವರ್ಗ ತನ್ನ ಮೂಲಭೂತವಾದವನ್ನು ಸಮಾಜದಲ್ಲಿ ಯಾವ ರೀತಿ ಬೆಳೆಸಲು ಮುಂದಾಗಿದೆ ಎಂಬುದರ ಬಗ್ಗೆ ವಿಮರ್ಶೆ, ವಿಶ್ಲೇಷಣೆ ಮಾಡುತ್ತಾರೆ. ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಆಧುನಿಕ ಶಿಕ್ಷಣವನ್ನು ಪಡೆದ ದಲಿತರು ಮೇಲುವರ್ಗದ ಜನರ ಅಸ್ಪೃಶ್ಯತೆ, ಅಸಮಾನತೆ, ಅನ್ಯಾಯಗಳು ಮತ್ತು ದಬ್ಬಾಳಿಕೆ ದೌರ್ಜನ್ಯಗಳನ್ನು ವಿರೋಧಿಸಲು ಮುಂದಾಗುವುದನ್ನು ನೋಡಬಹುದಾಗಿದೆ. ದಲಿತರಿಗೆ ಶಿಕ್ಷಣದಿಂದ ಸಮಾಜದಲ್ಲಿ ಪ್ರಶ್ನಿಸುವ ಹಕ್ಕು ಸಿಗುತ್ತದೆ. ಈ ಮೂಲಕ ವೈದಿಕ ಪ್ರಜ್ಞೆಯನ್ನು ಶೂದ್ರರು ವಿರೋಧಿಸುವುದನ್ನು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

೫.೬. ಅನೌಪಚಾರಿಕ ಶಿಕ್ಷಣ

ಶಿಕ್ಷಣ ಎಂದರೆ ನಾಲ್ಕು ಗೋಡೆಗಳ ನಡುಗೆ ಗುರು ಮತ್ತು ಶಿಷ್ಯರ ನಡುವಿನ ಕಲಿಕಾ ಪ್ರಕ್ರಿಯೆಯೇ ಶಿಕ್ಷಣ ಅಥವಾ ಜ್ಞಾನ ಎಂದು ವೈದಿಕ ಶಿಕ್ಷಣಪ್ರಜ್ಞೆ ಪರಿಗಣಿಸುತ್ತದೆ. ವೇದಾಧ್ಯಯನ,

ಮಂತ್ರ ಪಠನ ಮತ್ತು ಧಾರ್ಮಿಕ ವಿದ್ಯೆಯನ್ನು ಕಲಿಯುವುದೇ ಶಿಕ್ಷಣ ಎಂದು ಪರಿಗಣಿಸುತ್ತದೆ. ಹಿಂದೂ ಧರ್ಮದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಶಿಕ್ಷಣ ಎಂದು ಪರಿಗಣಿಸುತ್ತದೆ. ಆದರೆ ಬ್ರಾಹ್ಮಣೇತರ ಅನೌಪಚಾರಿಕ ಜ್ಞಾನವಾದ ಕೃಷಿ, ಗುಡಿ ಕೈಗಾರಿಕೆ, ಕರಕುಶಲತೆ, ಪ್ರಕೃತಿ ಜ್ಞಾನ, ಜನಪದ ಹಾಡು, ನೃತ್ಯ, ನಾಟಕ, ಸಂಗೀತ, ಚಿತ್ರಕಲೆ ಮತ್ತು ಶ್ರಮ ಕೆಲಸಗಳನ್ನು ಶಿಕ್ಷಣ ಅಥವಾ ಜ್ಞಾನ ಎಂದು ವೈದಿಕ ಶಿಕ್ಷಣಪದ್ಧತಿ ಪರಿಗಣಿಸುವುದಿಲ್ಲ. ಹಾಗಾಗಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಬ್ರಾಹ್ಮಣೇತರರ ಅನೌಪಚಾರಿಕ ಶಿಕ್ಷಣದ ಜ್ಞಾನಗಳನ್ನು ಉಲ್ಲೇಖಿಸುತ್ತಾರೆ. ಈ ಮೂಲಕ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸುವುದನ್ನು ಗುರುತಿಸಹುದಾಗಿದೆ.

ವೈದಿಕರು ಚಾತುರ್ವರ್ಣ ಪದ್ಧತಿಯಿಂದ ಮತ್ತು ಜಾತಿಯ ಕಾರಣದಿಂದ ಕೆಳವರ್ಗದ ಜನರಿಗೆ ಶಿಕ್ಷಣವನ್ನು ಕೊಡಬಾರದು ಎಂದು ನಿರ್ಧರಿಸಿದ್ದರು. ಹಾಗಾಗಿ ಕೆಳವರ್ಗದ ಜನರ ಜ್ಞಾನವನ್ನು ಶಿಕ್ಷಣ ಎಂದು ಪರಿಗಣಿಸಲಿಲ್ಲ. ಪ್ರಕೃತಿಯಿಂದ ಮತ್ತು ಅನುಭವದಿಂದ ಪಡೆಯುವ ಜ್ಞಾನ ಶಿಕ್ಷಣವಾಗಿರಲಿಲ್ಲ. ಪ್ರಾಚೀನ ಕಾಲದಿಂದಲೂ ವೇದಗಳನ್ನು ಅಧ್ಯಯನ ಮಾಡುವುದೇ ಶಿಕ್ಷಣ ಎಂದು ಪರಿಗಣಿಸಲಾಗಿತ್ತು. ಕೆಳವರ್ಗದ ಜನರು ಮಾಡುವ ಕುಶಲತೆಯ ಕೆಲಸವಾಗಿದ್ದ ಪುಟ್ಟಿ ಹೆಣೆಯುವುದು, ಚಪ್ಪಲಿ ತಯಾರಿಕೆ, ಮಡಕೆ ತಯಾರಿಕೆ, ಕೃಷಿ ಚಟುವಟಿಕೆಗಳು, ಬೇಟೆಯಾಡುವುದು ಮುಂತಾದ ಪಾರಂಪರಿಕ ಜ್ಞಾನವನ್ನು ವೈದಿಕರು ಕೀಳಾಗಿ ಕಾಣುತ್ತಿದ್ದರು. ಮನುಷ್ಯನ ಜೀವನ ನಡೆಸಲು ಬೇಕಾದ ಜ್ಞಾನವು ಕೆಳವರ್ಗದ ಜನರಲ್ಲಿ ಇತ್ತು. ಹಾಗಾಗಿ 'ಜ್ಞಾನ' ಎನ್ನುವುದು ಅನುಭವದಿಂದ ಬರುವುದು. ಮನುಷ್ಯನ ಮನಸ್ಸು ಮಾಡುವ ಒಂದು ಪ್ರಕ್ರಿಯೆ ಎಂಬುದನ್ನು ವೈದಿಕ ಶಿಕ್ಷಣ ಅರಿತಿರಲಿಲ್ಲ. ಹೀಗೆ ಸಮಾಜದಲ್ಲಿ ಜ್ಞಾನದಲ್ಲೂ ತಾರತಮ್ಯಗಳು ಹುಟ್ಟಿಕೊಂಡವು. ಜ್ಞಾನವು ಮೇಲುವರ್ಗದ ಪುರೋಹಿತಶಾಹಿ ಮತ್ತು ಬ್ರಾಹ್ಮಣರ ಹಿಡಿತದಲ್ಲಿ ಇತ್ತು. ಈ ಮೂಲಕ ಪ್ರಭುತ್ವದಲ್ಲಿ ಅವೈಜ್ಞಾನಿಕ ಚಿಂತನೆಗಳು, ಮೂಢನಂಬಿಕೆಗಳು, ಕಂದಾಚಾರಗಳು ಮತ್ತು ಹಿಂದೂ ಮೂಲಭೂತ ನಂಬಿಕೆಗಳನ್ನು ಜ್ಞಾನ ಎಂದು ಸಮಾಜದಲ್ಲಿ ಹೇರುವ ಕೆಲಸವನ್ನು ವೈದಿಕಶಾಹಿ ಮಾಡಿತು. ಸಂಕುಚಿತ ಮನೋಭಾವದಿಂದ ಕೆಳವರ್ಗದ ಶಿಕ್ಷಣಕ್ರಮವನ್ನು ನಿರಾಕರಿಸಲು ಹುನ್ನಾರಗಳನ್ನು ಮಾಡಿತು. ಹೀಗಾಗಿ ಜ್ಞಾನದಲ್ಲಿ ಉಂಟಾದ ಅಸಮಾನತೆಗಳನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಮರ್ಶಿಸುವ ಮತ್ತು ವಿಶ್ಲೇಷಿಸುವ ಕೆಲಸಗಳು ನಡೆದವು. ವೈದಿಕ ಶಿಕ್ಷಣದಿಂದ ಪಡೆದ ಜ್ಞಾನವನ್ನು ನಿರಾಕರಿಸುವ ಚಿಂತನೆಗಳು ಹುಟ್ಟಿಕೊಂಡವು.

ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಭೂಮಿಯನ್ನು ಉಳುಮೆ ಮಾಡುವ ಜ್ಞಾನವನ್ನು ಚಿತ್ರಿಸಿರುವುದನ್ನು ಗುರುತಿಸಬಹುದಾಗಿದೆ. ಬೈರ ಹೂವಯ್ಯನಿಗೆ ನೇಗಿಲು ಹೊಡೆಯುವ ವಿದ್ಯೆಯನ್ನು ಹೇಳಿಕೊಡುತ್ತಾನೆ. ಹೂವಯ್ಯ ಪಾರಂಪರಿಕ ಜ್ಞಾನವನ್ನು ಬೈರನಿಂದ ಕಲಿಯಲು ಮುಂದಾಗುವುದನ್ನು ಈ ಕಾದಂಬರಿಯಲ್ಲಿ ನೋಡಬಹುದು. "ಬೈರ ಕಬ್ಬಿಣದ ನೇಗಿಲು ಹಿಡಿದಿದ್ದನು. ಸಿದ್ದನದು ಮರದಿಂದ ಮಾಡಿದ್ದ ನಾಡು ನೇಗಿಲಾಗಿತ್ತು: "ಹುಮಾ, ಚಿಗಾ, ಹಮ್ ಮ್ ಮ್,

ಚಿಗ ಚಿಗ ಚಿಗಾ" ಮೊದಲಾದ ಸಂಕೇತ ಪದಗಳಿಗೆ ಎತ್ತುಗಳು ಚಲಿಸಿದಂತೆಲ್ಲ ಕುಳವು ನೆಲವನ್ನು ಸೀಳಿ ಮಣ್ಣನ್ನು ಇಕ್ಕೆಲಗಳಿಗೂ ಹಾಕುತ್ತಿತ್ತು. ನೇಗಿಲ ಗೆರೆಯ ಸಾಲು ಹಿಂದೆ ಹಿಂದೆ ಹರಿಯುತ್ತಿತು...

...ಹೂವಯ್ಯ ಪಂಚೆ ಎತ್ತಿಕಟ್ಟಿಕೊಂಡು, ಅಂಚಿನಿಂದ ಕೆಳಗಿಳಿದನು. ಬೈರ ತಾನು ಹಿಡಿದಿದ್ದ ನೆಕ್ಕಿಯ ಕೋಲನ್ನು ಹೂವಯ್ಯನಿಗೆ ಕೊಟ್ಟು ನೇಗಿಲಿಂದ ದೂರ ನಿಂತನು. ರಾಮಯ್ಯನೂ ಸಿದ್ದ ಉಳುತ್ತಿದ್ದ ನೇಗಿಲನ್ನು ಹಿಡಿದು ನಿಂತನು. ಬೈರ ಉಳುವ ವಿದ್ಯೆಯ ವಿಚಾರವಾಗಿ ನಾಲ್ಕು ಉಪದೇಶದ ಮಾತು ಹೇಳಿ, 'ಹುಮು' 'ಚಿಗ' ರಹಸ್ಯವನ್ನು ತಿಳಿಸಿದನು:

"ನೇಗಿಲು ಬಹಳ ಒತ್ತಬ್ಯಾಡಿ. ಕುಳ ಎತ್ತಿನ ಕೊಳಗಿಗೆ ಹೊಡೀದಿದ್ದಾಂಗೆ ನೋಡಿಕೊಳ್ಳಿ. ಎತ್ತು ಬಲಕ್ಕೆ ಒತ್ತಬೇಕಾದ್ರೆ 'ಚಿಗ, ಚಿಗ, ಚಿಗ, ಅಂತಾ ಹೇಳ್ತಾ ನೆಕ್ಕಿ ಬಲ್ಲಾಗೆ ಎಡಕ್ಕೆ ತಟ್ಟಿ, ಎಡಕ್ಕೆ ಒತ್ತಬೇಕಾದ್ರೆ 'ಹುಮ, ಹುಮ, ಹುಮ,' ಅಂತ ಹೇಳ್ತಾ ಬಲಕ್ಕೆ ತಟ್ಟಿ..." ಎಂದು ಬೈರ ಹೇಳುತ್ತಿದ್ದಂತೆ ಸಿದ್ದ "ನೋಡಿದಿರಾ, ಆಗಲೆ ಕಣ್ಣು ಮಳುಸ್ತದೆ ಪುಟ್ರಾಮ!" ಎಂದು ಬೆದರುಗಣ್ಣಿನಿಂದ ಹೂವಯ್ಯನ ಬಿಳಿ ಬಟ್ಟೆಯ ಕಡೆಗೆ ನೋಡುತ್ತಿದ್ದ ಪುಟ್ಟರಾಮ ಎಂಬ ಎತ್ತನ್ನು ಗದರಿಸಿದನು. ಅದನ್ನು ನೋಡಿ ರಾಮಯ್ಯನೂ "ಹೌದು ಕಣೋ, ಅಣ್ಣಯ್ಯ. ನಿನ್ನ ಎತ್ತು ಯಾಕೋ ಕಣ್ಣು ಕೆಂಪಗೆ ಮಾಡಿಕೊಂಡಿದೆ. ಸ್ವಲ್ಪ ಹುಷಾರಾಗಿರು!" ಎಂದನು.

ಅದಕ್ಕೆ ಹೂವಯ್ಯ "ಹಾಗೇನಾದರೂ ಜೋರು ಮಾಡಿದರೆ ನೇಗಿಲು ಬಲವಾಗಿ ಒತ್ತಿ ಹಿಡಿದರೆ ಸರಿ. ಆಟ ನಿಂತುಹೋಗ್ತದೆ!" ಎಂದನು."[೧೬] ಈ ಉಲ್ಲೇಖದಲ್ಲಿ ಕೆಳವರ್ಗದ ಬೈರ ತನ್ನ ಅನುಭವದಿಂದ ಪಡೆದ ಉಳುಮೆಯ ಜ್ಞಾನವನ್ನು ಮೇಲುಜಾತಿಯ ಹೂವಯ್ಯನಿಗೆ ಹೇಳಿಕೊಡುವುದನ್ನು ಗಮನಿಸಬಹುದಾಗಿದೆ. ತಿಮ್ಮ 'ಕಳ್ಳು' ಇಳಿಸುವ ಜ್ಞಾನ ಮತ್ತು ಪುಟ್ಟಣ್ಣನ 'ಶಿಕಾರಿ' ವಿದ್ಯೆ, ಪ್ರಕೃತಿಯ ಔಷಧಿ ವಿದ್ಯೆ, ಮಲೆನಾಡಿನ ಅಡಕೆಯ ಕೊಯಿಲು, ಅಡಕೆಯನ್ನು ಬೇಯಿಸುವುದು, ಕತ್ತರಿಸುವುದು ಮುಂತಾದ ಕೆಳವರ್ಗದ ಜನರ ವಿದ್ಯೆಗಳನ್ನು ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಚಿತ್ರಿಸುತ್ತಾರೆ. ಹೀಗೆ ಕೆಳವರ್ಗದ ಜನರು ಜ್ಞಾನದ ಮೇಲೆ ಮೇಲುವರ್ಗದ ಜನರು ಬದುಕುತ್ತಿರುವ ಚಿತ್ರಣಗಳನ್ನು ಕುವೆಂಪು ಚಿತ್ರಿಸುತ್ತಾರೆ. ಹೀಗಾಗಿ ಈ ಎಲ್ಲಾ ಜ್ಞಾನಶಿಸ್ತುಗಳು ವೈದಿಕ ಜ್ಞಾನಶಿಸ್ತುಗಳಿಗೆ ವಿರೋಧಿಯಾಗಿ ನಿಲ್ಲುತ್ತವೆ.

ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಅಲಕ್ಷಿತ ವರ್ಗದ ಜನರ ಜ್ಞಾನವನ್ನು ವಿವರಿಸುತ್ತಾರೆ. ನಿಸರ್ಗದ ಮೂಲಕ ತಮ್ಮ ಒಡನಾಟದಿಂದ ಜ್ಞಾನವನ್ನು ವಿಸ್ತರಿಸಿಕೊಂಡಿರುವ ಸಮೂಹವನ್ನು ಗುರುತಿಸುತ್ತಾರೆ. ಆದರೆ ಅಲಕ್ಷಿತ ವರ್ಗದ ಶಿಕ್ಷಣವನ್ನು ಸಮಾಜದಲ್ಲಿ ವೈದಿಕ ಶಿಕ್ಷಣಪದ್ಧತಿಯು ವಿಶೇಷವಾಗಿ ಗೌರವಗಳಿಲ್ಲ. ಜಾತಿ, ವರ್ಗ ಮತ್ತು ವರ್ಣದಿಂದ ಇವರನ್ನು ನಿರ್ಲಕ್ಷಿಸಲಾಗಿದೆ. "ಜಾತಿ ಮತ್ತು ವರ್ಗಗಳು ಜಡವಾಗಿ ಈ ನಮ್ಮ ಸಮಾಜದಲ್ಲಿ ಓದು ಬರಹ ಬರುವ ಬ್ರಾಹ್ಮಣ ಹಾಗೂ ನವೀನ ಬ್ರಾಹ್ಮಣರಾದ ವಿದ್ಯಾವಂತ ವರ್ಗಗಳಲ್ಲಿ ಈ ಮಣ್ಣಿನ

ವಾಸನೆಗೆ ಮೂಲಧಾತುವಾದ ಅನುಭವಗಳು ಹಾಗೂ ಚರಿತ್ರೆ ಸಂಭವಿಸುತ್ತಲೇ ಇಲ್ಲ."[೧೭] ಹೀಗೆ ಮೇಲುವರ್ಗದವರು ಪಡೆದಿರುವ ಶಿಕ್ಷಣ ಅನುಭವಗಳಿಂದ ಕೂಡಿಲ್ಲ ಎಂದು ತೇಜಸ್ವಿ ಟೀಕಿಸುತ್ತಾರೆ. ಹಾಗಾಗಿ ಅಲಕ್ಷಿತ ವರ್ಗದ ಜನರು ಪಡೆಯುವ ಜ್ಞಾನವು ಅನುಭವಗಳಿಂದ ಕೂಡಿದೆ ಎಂಬುವ ನಿಲುವನ್ನು ಕಾಣಬಹುದಾಗಿದೆ. ವಿಜ್ಞಾನ, ಮಾನವಶಾಸ್ತ್ರ ಕ್ಷೇತ್ರಗಳಿಂದ ಜ್ಞಾನವನ್ನು ಕನ್ನಡಕ್ಕೆ ತರುವ ಕೆಲಸವನ್ನು ತೇಜಸ್ವಿ ಮಾಡಿದ್ದಾರೆ.

ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಮೀನು ಹಿಡಿಯುವುದು ಅಮೋಘ ಕುಶಲ ಕಲೆಯನ್ನಾಗಿ ರೂಪಿಸಿದ್ದಾರೆ. ಮೀನು ಹಿಡಿಯುವುದು ಒಂದು ಜ್ಞಾನ ಎಂದು ಪರಿಗಣಿಸಲಾಗಿದೆ ಹಾಗೂ ಮೀನು ಹಿಡಿಯುವ ಸ್ಪರ್ಧೆಯನ್ನು ನಡೆಸುತ್ತಾರೆ. ಆದರೆ ಭಾರತದಲ್ಲಿ ಮೀನು ಹಿಡಿಯುವುದು ಮತ್ತು ಮೀನು ಹಿಡಿಯುವವರನ್ನು ಕೀಳಾಗಿ ನೋಡಲಾಗುತ್ತದೆ ಎಂದು ತೇಜಸ್ವಿ ಈ ರೀತಿ ಹೇಳುತ್ತಾರೆ. "ಮೀನು ಹಿಡಿಯುವ ಹವ್ಯಾಸ ಇಲ್ಲಿ ವಿಕಾಸವಾಗದುದಕ್ಕೆ ಮೂಲ ಕಾರಣ ನಮ್ಮ ಜಾತಿಪದ್ಧತಿ. ಮೀನು ಹಿಡಿಯುವುದು ಅತ್ಯಂತ ಕೀಳುಜಾತಿಯ ಸಿಳ್ಳೆಕ್ಯಾತರ ಕುಲಕಸುಬಾದ್ದರಿಂದ ಮೀನು ಹಿಡಿಯಲು ಹೊಳೆದಂಡೆಗೆ ಹೋಗುವುದು ಹಿಂದೂಧರ್ಮಕ್ಕೆ ಹೊಲಗೇರಿಯೊಳಗೆ ಹೋಗುವುದಕ್ಕಿಂತಲೂ ಕೀಳು ಕೆಲಸ! ಹಾಗಿದ್ದರೆ ಸಿಳ್ಳೆಕ್ಯಾತರ ಅನುಭವಗಳಿಂದಲೇ ರೂಪುಗೊಂಡ ಕಲಾಕೃತಿಯೊಂದು ಯಾರನ್ನು ಉದ್ದೇಶಿಸಿ ಮಾತನಾಡುತ್ತದೆ? ಒಂದು ಕಡೆ ಓದು ಬರಹ ಗೊತ್ತಿಲ್ಲದ, ಗೊತ್ತಿದ್ದರೂ ಪುಸ್ತಕ ಓದುವ ಅಭ್ಯಾಸವಿಲ್ಲದ, ತಮ್ಮ ಅನುಭವಗಳ ಗುರುತ್ವಾಕರ್ಷಣೆಯಲ್ಲಿ ಮುಳುಗಿಹೋಗಿರುವ ಸಿಳ್ಳೆಕ್ಯಾತರು. ಇನ್ನೊಂದು ಕಡೆ ಜಾತಿಪದ್ಧತಿಯ ದೆಸೆಯಿಂದ ಈ ಅನುಭವ ವಿಶ್ವಕ್ಕೆ ಸ್ಪಂದನವನ್ನೇ ಕಳೆದುಕೊಂಡು ಅಪರಿಚಿತನಾಗಿರುವ ವಿದ್ಯಾವಂತ ಮೇಲ್ವರ್ಗ. ಇವೆರಡರ ನಡುವೆ ಉದ್ಭವಿಸುವ ಸಾಹಿತ್ಯ ಕೃತಿಗೆ ಈ ಎರಡು ಗುಂಪುಗಳ ಅನುಭವ ವಿಶ್ವದ ನಡುವಿನ ಸಮಾನಾಂಶ ಕ್ಷೀಣಿಸಿದಷ್ಟೂ ಸಂವಹನ ಸಾಧ್ಯತೆಗಳು ದೂರಾಗುತ್ತವೆ. ಜಾತಿಪದ್ಧತಿಯ ದೆಸೆಯಿಂದ ಉಂಟಾಗಿರುವ ಇಂಥ ಸಾಂಸ್ಕೃತಿಕ ಕಂದರ ನಮ್ಮೆಲ್ಲರಿಗೂ ಬಹುದೊಡ್ಡ ಸವಾಲು."[೧೮] ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ಕೆಳವರ್ಗದ ಅಲಕ್ಷಿತ ಜನರ ಜ್ಞಾನವನ್ನು ಸಮಾಜದಲ್ಲಿ ಪರಿಗಣಿಸದೆ ಇರುವುದನ್ನು ನೋಡಬಹುದಾಗಿದೆ. ಭಾರತದಲ್ಲಿ ಅಲಕ್ಷಿತ ವರ್ಗದವರ ಜ್ಞಾನ ಮತ್ತು ಅನುಭವಗಳು ಸಮಾಜದಲ್ಲಿ ಬಳಕೆಯಾಗದೆ ದೂರ ಇರುವುದಕ್ಕೆ ಕಾರಣ ಹಿಂದೂಧರ್ಮದ ವರ್ಣಾಶ್ರಮ ಪದ್ಧತಿಯಾಗಿದೆ.

ವೈದಿಕ ಪ್ರಜ್ಞೆಯನ್ನು ಅನುಸರಿಸಿ ಆಧುನಿಕ ಶಿಕ್ಷಣವನ್ನು ಕೊಡಲಾಗುತ್ತಿದೆ. ಮೇಲುವರ್ಗಗಳ ನಿಯಂತ್ರಣದಲ್ಲಿ ಶಿಕ್ಷಣ ಇದೆ. ಹಾಗಾಗಿ ಈ ಶಿಕ್ಷಣಪದ್ಧತಿಯಿಂದ ಏನೂ ಕಲಿಯಲು ಆಗುವುದಿಲ್ಲ. ಆಸಕ್ತಿ, ಕುತೂಹಲ ಎಲ್ಲಿ ಇರುತ್ತದೆಯೋ ಅಲ್ಲಿ ಸುಲಭವಾಗಿ ಕಲಿಯಬಹುದು ಎಂದು ಪೂರ್ಣಚಂದ್ರ ತೇಜಸ್ವಿ ಅವರು ಹೇಳುತ್ತಾರೆ. "ನಾನು ಕಣ್ಣಿಗೆ ಕಂಡಿದ್ದನ್ನೆಲ್ಲಾ ಆಸಕ್ತಿಯಿಂದ ಕುತೂಹಲದಿಂದ ನೋಡುತ್ತಾ ತಿಳಿಯುತ್ತಾ ಹೋಗುತ್ತಾನೆ. ಜ್ಞಾನಾರ್ಜನೆಯ ಪ್ರಚಂಡ ಸಂತೋಷ ಇರುವುದು ಇಲ್ಲೇ. ಕಾಲೇಜಿನಲ್ಲಿ ಏನು ಮಾಡಿದರೂ ಕಲಿಯಲು ಸಾಧ್ಯವಾಗದಿದ್ದ ಅತಿ ಜಟಿಲ ವಿಷಯಗಳನ್ನೆಲ್ಲಾ

ನೀರು ಕುಡಿದಷ್ಟು ಸುಲಭವಾಗಿ ಜೀವನದಲ್ಲಿ ಕಲಿಯುತ್ತಾ ಹೋಗಬಹುದು. ನಮ್ಮ ವಿದ್ಯಾಭ್ಯಾಸ ಕ್ರಮವೇ ಸಂಪೂರ್ಣ ತಪ್ಪಾಗಿದ್ದೆಂದು ನನಗನ್ನಿಸುತ್ತದೆ. ಬದುಕುತ್ತಾ ಬದುಕಿಗೆ ಅಗತ್ಯವಾದ್ದನ್ನೆಲ್ಲಾ ತಿಳಿದುಕೊಳ್ಳುತ್ತಾ ಹೋಗುವ ಹೊಸಬಗೆಯ ವಿದ್ಯಾರ್ಜನೆಯ ಮಾರ್ಗಗಳನ್ನು ನಾವು ಅನ್ವೇಷಿಸಬೇಕು. ಬದುಕಿನ ಅಗತ್ಯಗಳಿಗೆ ತಕ್ಕಂತೆ ಗಳಿಸಿಕೊಳ್ಳುತ್ತಾ ಹೋಗುವ ವಿದ್ಯೆ ನಿಜಕ್ಕೂ ಚೇತೋಹಾರಿಯಾದದ್ದು."[೧೯] ಅಜ್ಞಾನ, ಅವೈಚಾರಿತೆಯನ್ನು ಸೃಷ್ಟಿ ಮಾಡುವ ವೈದಿಕ ಶಿಕ್ಷಣವು ಸಮಾಜದಲ್ಲಿ ಮನುಷ್ಯನಿಗೆ ಬದುಕಲು ಬೇಕಾದ ಜ್ಞಾನವನ್ನು ಕೊಡುವುದಿಲ್ಲ. ಕೆಳವರ್ಗದ ಜನರ ಶ್ರಮದಿಂದ ಬರುವ ವಿದ್ಯೆ ಮನುಷ್ಯನನ್ನು ಬದುಕಿಸುತ್ತದೆ. ಹೀಗಾಗಿ ತೇಜಸ್ವಿ ಅವರು ಅನೌಪಚಾರಿಕ ಶಿಕ್ಷಣದ ಬಗ್ಗೆ ಹೆಚ್ಚು ಒತ್ತುಕೊಡುತ್ತಾರೆ. ಹಾಗಾಗಿ ತೇಜಸ್ವಿ ಅವರು ಸಾಹಿತ್ಯದಲ್ಲಿ ಕೆಳವರ್ಗದ ಜನರ ಪ್ರಕೃತಿಯ ಜ್ಞಾನ ಮತ್ತು ಅನುಭವಗಳ ಜ್ಞಾನವನ್ನು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. 'ಕರ್ವಾಲೊ' ಕಾದಂಬರಿಯಲ್ಲಿ ಬರುವ ಕೆಳವರ್ಗದ ಮಂದಣ್ಣ, ಎಂಗ್ಟ, ಬಿರಿಯಾನಿ ಕರಿಯಪ್ಪ ಇವರು ಪರಿಸರದ ಬಗ್ಗೆ ಇರುವ ಜ್ಞಾನವನ್ನು ಅರಿತ ಕರ್ವಾಲೋ ತನ್ನ ಸಂಶೋಧನೆಗೆ ಇವರೇ ಆಸರೆಯಾಗಿ ಇರುವುದನ್ನು ಕಾಣಬಹುದಾಗಿದೆ. ಮಂದಣ್ಣನು ಪಡೆದುಕೊಂಡಿರುವ ಪರಿಸರದ ಜ್ಞಾನ ಔಪಚಾರಿಕ ಶಿಕ್ಷಣದಿಂದ ಪಡೆದ ಜ್ಞಾನಕ್ಕಿಂತ ಹೆಚ್ಚು ಮಿಗಿಲಾಗಿರುವುದನ್ನು ಕಾಣಬಹುದಾಗಿದೆ. ಹೀಗೆ ತೇಜಸ್ವಿ ಅವರು ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಮಾಯಾಲೋಕ, ಕೃಷ್ಣೇಗೌಡನ ಆನೆ, ಕಿರಗೂರಿನ ಗಯ್ಯಾಳಿಗಳು ಮತ್ತು ಅಬಚೂರಿನ ಪೋಸ್ಟಾಫೀಸು ಕೃತಿಗಳಲ್ಲಿ ತಳಸಮುದಾಯದ ಜನರು ಮತ್ತು ಅಲಕ್ಷಿತ ವರ್ಗದ ಜನರ ಜ್ಞಾನದ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತಾರೆ. ಈ ಮೂಲಕ ವೈದಿಕ ಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸುವ ಚಿಂತನೆಯನ್ನು ನೋಡಬಹುದು.

ವೈದಿಕರು ಸೃಷ್ಟಿಸಿದ ಚಾತುರ್ವರ್ಣ ವ್ಯವಸ್ಥೆ ಮತ್ತು ಜಾತಿವ್ಯವಸ್ಥೆಯಿಂದ ತಳಸಮುದಾಯದ ಜನರು ಶಿಕ್ಷಣದಿಂದ ವಂಚಿತರಾದರು. ವೈದಿಕರು ನಾಲ್ಕು ಗೋಡೆಗಳ ಮೂಲಕ ಕೊಡುವ ಶಿಕ್ಷಣವನ್ನು ಶಿಕ್ಷಣ ಎಂದು ಪರಿಗಣಿಸಿದರು. ಹಾಗಾಗಿ ಕೆಳವರ್ಗದ ಜನರು ಅನುಭವದಿಂದ ಪಡೆದಿರುವ ಶಿಕ್ಷಣವನ್ನು ಕಡೆಗಣಿಸಲಾಗಿದೆ. ಕೆಳವರ್ಗದ ಪಾರಂಪರಿಕ ಜ್ಞಾನದಿಂದ ಮೇಲು ವರ್ಗದ ಜನರು ಬದುಕುತ್ತಿದ್ದಾರೆ. ಹಾಗಾಗಿ ಇವರ ಜ್ಞಾನವೇ ಒಂದು ಸಂಪತ್ತು ಎಂದು ದೇವನೂರ ಮಹಾದೇವ ಅವರು ಈ ರೀತಿ ಹೇಳುತ್ತಾರೆ. "ಭಾರತದ ನೂರೆಂಟು ತಳಜಾತಿ ಸಮುದಾಯಗಳು ಚಾತುರ್ವರ್ಣದ ಮೇಲು-ಕೀಳು ಅಂಟುರೋಗಕ್ಕೆ ತುತ್ತಾಗಿ ಅವು ಘನತೆ ಇಲ್ಲದ ಹುಳುಗಳಂತೆ ಒದ್ದಾಡುತ್ತಿವೆ, ನಿಜ. ಹೀಗಿದ್ದೂ ಇದರೊಳಗೇನೆ, ಈ ಜಾತಿ ಸಮೂಹಗಳು ತಲೆತಲಾಂತರದ ವೈವಿಧ್ಯಮಯ ಅನುಭವಗಳ ಗಣಿಗಳಾಗಿ ಈ ಅಪಾರ ಅನುಭವಗಳು ರೆಕ್ಕೆ ಇಲ್ಲದೆ ಬಿದ್ದಿವೆ. ರೆಕ್ಕೆ ಬಂದರೆ ಇದೇ ಸಂಪತ್ತಾಗುತ್ತದೆ. ಉದಾ: ಮಾಟವಿದ್ಯೆಯ ಹಿನ್ನೆಲೆಯ ಪ್ರತಿಭಾನ್ವಿತನೊಬ್ಬ ಮನಃಶಾಸ್ತ್ರದ ಉನ್ನತ ವ್ಯಾಸಂಗ ಮಾಡಿದರೆ, ಮನಶ್ಯಾಸ್ತ್ರದ ಉದ್ದ ಅಗಲವೇ ವಿಸ್ತರಿಸಬಹುದಾದ ಸಾಧ್ಯತೆ ಹೆಚ್ಚಿರುತ್ತದೆ. ಈ ಹಿನ್ನೆಲೆ ಇಲ್ಲದ ಬುದ್ಧಿವಂತನೊಬ್ಬ ಇರುವ ಶಾಸ್ತ್ರವನ್ನು ಅರೆದು ನುಂಗಿ ಒಪ್ಪಿಸುವುದನ್ನು ಮಾಡಿದರೆ, ಅದೇ ದೇಸಿ ಜ್ಞಾನ ಹಿನ್ನೆಲೆಯ

ಪ್ರತಿಭಾನ್ವಿತನೊಬ್ಬ ಆ ಶಾಸ್ತ್ರದ ಸಾಧ್ಯತೆಗಳನ್ನು ಹೆಚ್ಚಿಸಬಹುದು."..... "ದೇಸಿಜ್ಞಾನ ಸಂಪತ್ತುಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಈ ತಳಜಾತಿ ಸಮುದಾಯಗಳು ಮೇಲು-ಕೀಳು ರೋಗದಿಂದ ತಪ್ಪಿಸಿಕೊಂಡರೆ, ಅವು ಸಾಂಸ್ಕೃತಿಕ ವೈವಿಧ್ಯಮಯ ಸಮುದಾಯವಾಗಿ ರೂಪಾಂತರ ಪಡೆಯುತ್ತವೆ."[೨೦] ಹೀಗೆ ಕೆಳವರ್ಗದ ಜ್ಞಾನವನ್ನು ಸರಿಯಾದ ಕ್ರಮದಲ್ಲಿ ಬಳಸಿಕೊಂಡರೆ ದೊಡ್ಡ ಜ್ಞಾನದ ಗಣಿಯಾಗುತ್ತದೆ. ವೈದಿಕ ಶಿಕ್ಷಣದ ಜ್ಞಾನಕ್ಕಿಂತ ಕೆಳವರ್ಗದ ಜ್ಞಾನದಲ್ಲಿ ಇರುವ ಮೌಲ್ಯಗಳು ಹೆಚ್ಚು ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ಕೆಳವರ್ಗದ ಪಾರಂಪರಿಕ ಜ್ಞಾನದಿಂದ ಮೇಲುವರ್ಗದ ಜೀವನಕ್ರಮಗಳು ನಡೆಯುತ್ತಿರುವುದನ್ನು ಕಾಣಬಹುದು. ಔಪಚಾರಿಕ ಶಿಕ್ಷಣ ಜ್ಞಾನಗಳು ಕೆಳವರ್ಗದ ಜ್ಞಾನದ ಮೇಲೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ ಎಂದು ದೇವನೂರ ಮಹಾದೇವ ಅವರು ಹೇಳುವುದನ್ನು ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ ವೈದಿಕ ಶಿಕ್ಷಣಪದ್ಧತಿ ಕೆಳವರ್ಗದ ಜನರು ಅನುಭವದಿಂದ ಪಡೆದ ಪಾರಂಪರಿಕ ಜ್ಞಾನವನ್ನು ಶಿಕ್ಷಣ ಎಂದು ಪರಿಗಣಿಸಲಿಲ್ಲ. ಹಾಗಾಗಿ ಕೆಳವರ್ಗದ ಜನರ ವಿದ್ಯೆಗಳನ್ನು ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಚಿತ್ರಿಸುತ್ತಾರೆ. ಕೆಳವರ್ಗದ ಜನರ ಜ್ಞಾನದ ಮೇಲೆ ಮೇಲುವರ್ಗದ ಜನರು ಬದುಕುತ್ತಿರುವ ಚಿತ್ರಣಗಳನ್ನು ಕುವೆಂಪು ಅವರ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರು ಮೇಲುವರ್ಗದವರು ಪಡೆದಿರುವ ಶಿಕ್ಷಣ ಅನುಭವಗಳಿಂದ ಕೂಡಿಲ್ಲ ಎಂದು ಟೀಕಿಸುತ್ತಾರೆ. ಆದರೆ ಅಲಕ್ಷಿತ ವರ್ಗದ ಜನರು ಪಡೆಯುವ ಜ್ಞಾನವು ಅನುಭವಗಳಿಂದ ಕೂಡಿದೆ ಎಂಬ ನಿಲುವನ್ನು ಕಾಣಬಹುದಾಗಿದೆ. ಅಜ್ಞಾನ, ಅವೈಚಾರಿತೆಯನ್ನು ಸೃಷ್ಟಿ ಮಾಡುವ ವೈದಿಕ ಶಿಕ್ಷಣವು ಸಮಾಜದಲ್ಲಿ ಮನುಷ್ಯನಿಗೆ ಬದುಕಲು ಬೇಕಾದ ಜ್ಞಾನವನ್ನು ಕೊಡುವುದಿಲ್ಲ. ಕೆಳವರ್ಗದ ಜನರು ಶ್ರಮದಿಂದ ಬರುವ ವಿದ್ಯೆ ಮನುಷ್ಯನನ್ನು ಬದುಕಿಸುತ್ತದೆ. ದೇವನೂರ ಮಹಾದೇವ ಅವರು ಈ ರೀತಿ ಗ್ರಹಿಸಿದ್ದಾರೆ. ಕೆಳವರ್ಗದ ಜ್ಞಾನವನ್ನು ಸರಿಯಾದ ಕ್ರಮದಲ್ಲಿ ಬಳಸಿಕೊಂಡರೆ ದೊಡ್ಡ ಜ್ಞಾನದ ಗಣಿಯಾಗುತ್ತದೆ. ವೈದಿಕ ಶಿಕ್ಷಣದ ಜ್ಞಾನಕ್ಕಿಂತ ಕೆಳವರ್ಗದ ಜ್ಞಾನದಲ್ಲಿ ಇರುವ ಮೌಲ್ಯಗಳು ಹೆಚ್ಚು ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ಕೆಳವರ್ಗದ ಪಾರಂಪರಿಕ ಜ್ಞಾನದಿಂದ ಮೇಲುವರ್ಗದ ಜೀವನಕ್ರಮಗಳು ನಡೆಯುತ್ತಿರುವುದನ್ನು ಕಾಣಬಹುದು.

೫.೪. ಕೇಸರೀಕರಣ

ಕೇಸರೀಕರಣ ಎಂಬ ಪರಿಕಲ್ಪನೆ ಹಿಂದುತ್ವದಿಂದ ಹುಟ್ಟಿಕೊಂಡಿದೆ. ಶಿಕ್ಷಣದಲ್ಲಿ ಹಿಂದೂ ಮೂಲಭೂತವಾದವನ್ನು ಸೇರಿಸುವುದೇ ಕೇಸರೀಕರಣ ಎಂದು ಕರೆಯಲಾಗುತ್ತಿದೆ. ಶಿಕ್ಷಣದ ಮೂಲಕ ವಿದ್ಯಾರ್ಥಿಗಳಿಗೆ ವೈಜ್ಞಾನಿಕವಾಗಿ, ಜಾತ್ಯತೀತ ಮತ್ತು ಪ್ರಗತಿಪರವಾದ ಚಿಂತನೆಗಳ ಬಗ್ಗೆ ಅರಿವು ಮೂಡಿಸುವ ಬದಲು ಹಿಂದೂಧರ್ಮದ ಅಂಧಕಾರಕ್ಕೆ ತಳ್ಳುವುದೇ ಕೇಸರೀಕರಣವಾಗಿದೆ. ಆಧುನಿಕ ಶಿಕ್ಷಣದಿಂದ ಭಾರತದಲ್ಲಿ ಎಲ್ಲರಿಗೂ ಶಿಕ್ಷಣ ಪಡೆಯುವ ಅವಕಾಶಗಳು ಸಿಕ್ಕವು. ಆದರೆ ಹಿಂದೂ ಧರ್ಮವನ್ನು ಪೋಷಿಸುವ ಆರ್.ಎಸ್.ಎಸ್. ಸಂಘಟನೆಯು ಭಾರತದಲ್ಲಿ ಇರುವ ಬ್ರಿಟೀಷರ

ಶಿಕ್ಷಣಪದ್ಧತಿಯು ಯುವಕರನ್ನು ದಾರಿ ತಪ್ಪಿಸುತ್ತಿದೆ. ಆಧುನಿಕ ಶಿಕ್ಷಣವನ್ನು ಪಡೆಯುವುದರಿಂದ ವಿದ್ಯಾರ್ಥಿಗಳು ಹಿಂದೂಧರ್ಮದ ಸನಾತನ ಸಂಸ್ಕೃತಿಯಿಂದ ವಿಮುಖರಾಗುತ್ತಿದ್ದಾರೆ. ಹಿಂದೂ ಸಂಸ್ಕೃತಿಯನ್ನು ಅಪಮೌಲ್ಯಗೊಳಿಸುತ್ತಿದೆ ಎಂದು ಆರೋಪಗಳನ್ನು ಮಾಡಿದರು. ಹಾಗಾಗಿ ಶಿಕ್ಷಣ ವಲಯವನ್ನು ಸನಾತನವಾದ ಮತ್ತು ಸಾಂಪ್ರದಾಯಿಕ ಗೊಡ್ಡು ಚಿಂತನೆಗಳನ್ನಾಗಿ ಪರಿವರ್ತಿಸಲು ಹಿಂದೂ ಮೂಲಭೂತವಾದಿಗಳು ಮುಂದಾಗುತ್ತಿದ್ದಾರೆ.

ಭಾರತೀಯ ಶಿಕ್ಷಣವ್ಯವಸ್ಥೆಯನ್ನು 'ಭಾರತೀಕರಣ' ಮಾಡಬೇಕು ಎಂಬ ಹಿಂದಿನ ಉದ್ದೇಶ ಹೀಗೆ ಇದೆ. ಭಾರತದಲ್ಲಿ ಶತಶತಮಾನಗಳಿಂದ ಪಾಲಿಸಿಕೊಂಡು ಬರುತ್ತಿರುವ ಜಾತಿಪದ್ಧತಿ, ಶ್ರೇಣೀಕರಣ ವ್ಯವಸ್ಥೆ, ವೈದಿಕ ಸಂಪ್ರದಾಯಗಳು, ಧಾರ್ಮಿಕ ವಿಧಿವಿಧಾನಗಳು ಮತ್ತು ಪುರೋಹಿತಶಾಹಿಯ ವ್ಯವಸ್ಥೆಯ ಐಡಿಯಾಲಜಿಗಳನ್ನು ಶಿಕ್ಷಣದ ಪಠ್ಯಪಸ್ತಕದಲ್ಲಿ ಸೇರಿಸಿ ಬೋಧಿಸುವುದು ಹಾಗೂ ಪಶ್ಚಿಮದಿಂದ ಬಂದ ಶಿಕ್ಷಣ ಮೌಲ್ಯಗಳು ಭಾರತೀಯ ಸಂಸ್ಕೃತಿಯನ್ನು ನಾಶ ಮಾಡಿದೆ ಎಂದು ಭಾರತೀಕರಣದ ಶಿಕ್ಷಣ ಬೋಧಿಸುತ್ತದೆ. ರಾಮಾಯಣ, ಮಹಾಭಾರತ, ಭಗವದ್ಗೀತೆ ಮತ್ತು ಹಿಂದೂ ಧಾರ್ಮಿಕ ಪುರಾಣಗಳನ್ನು ಪಠ್ಯಕ್ರಮನ್ನಾಗಿಯೂ ಅಳವಡಿಸಲಾಯಿತು. ಹೀಗೆ ಹಿಂದೂಧರ್ಮದ ಶಾಲೆಗಳಲ್ಲಿ ಈ ರೀತಿಯಾದ ಅಮಾನವೀಯತೆ ಮತ್ತು ಅವೈಜ್ಞಾನಿಕತೆಯಿಂದ ಕೂಡಿದ ಶಿಕ್ಷಣವನ್ನು ಕೊಡಲಾಗುತ್ತಿದೆ.

ಶಿಕ್ಷಣದಲ್ಲಿ ನಡೆಯುತ್ತಿರುವ ಕೇಸರೀಕರಣವನ್ನು ಈ ರೀತಿ ನಾವು ಗುರುತಿಸಬಹುದಾಗಿದೆ. 'ಕೇಸರೀಕರಣ' ಮತ್ತು 'ಭಾರತೀಕರಣ'ದಿಂದ ಭಾರತೀಯ ರಾಷ್ಟ್ರೀಯತೆಯನ್ನು ಹಿಂದುತ್ವದ ಮತೀಯವಾದದೊಂದಿಗೆ ಸಮೀಕರಿಸಿ ಏಕರೂಪಿ ಸಂಸ್ಕೃತಿ, ಒಂದೇ ಧರ್ಮ ಹಾಗೂ ಅಖಂಡ ಹಿಂದುತ್ವವಾದವನ್ನು ಶಾಲೆಯಲ್ಲಿ ಬೋಧಿಸುವುದು, ಹಿಂದೂ ಸಂಸ್ಕೃತಿಯನ್ನು ಬಿಂಬಿಸುವ ಜ್ಞಾನವನ್ನು ಪಠ್ಯಪುಸ್ತಕದಲ್ಲಿ ಬರುವಂತೆ ಸೇರಿಸುವುದು, ವೈದಿಕ ಕಾರ್ಯವಿಧಾನಗಳನ್ನು ಶಾಲೆಗಳಲ್ಲಿ ನಡೆಸುವಂತೆ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣದಲ್ಲಿ ಬೋಧನೆಯ ಭಾಷೆಯಾಗಿ ಸಂಸ್ಕೃತ ಮತ್ತು ಹಿಂದಿಯನ್ನು ಪರಿಗಣಿಸುವುದು, ಸಂಕುಚಿತ ಚಿಂತನೆಗಳನ್ನು ಒಳಗೊಂಡ ಏಕರೂಪಿ ಸಂಸ್ಕೃತಿಯನ್ನು ಬಿಂಬಿಸುವ ಚರಿತ್ರೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವುದು, ಭಾರತದಲ್ಲಿ ಇರುವ ಹಿಂದೂಗಳ ಹೊರತಾಗಿ ಉಳಿದವರೆಲ್ಲ ವಿದೇಶಿಯರು ಎಂದು ಪರಿಗಣಿಸುವುದು, ಮೂಢನಂಬಿಕೆಗಳನ್ನು ಬಿಂಬಿಸುವ ಸರಸ್ವತಿ ವಂದನ, ವೇದ ಪಾಠಗಳು, ಜ್ಯೋತಿಷ್ಯಾಸ್ತ್ರ, ವೇದ ಗಣಿತ ಶಾಸ್ತ್ರ ಮತ್ತು ಪುರೋಹಿತ ಕಾರ್ಯಗಳನ್ನು ಶಾಲೆ ಮತ್ತು ಕಾಲೇಜು ಪಠ್ಯಗಳಲ್ಲಿ ಸೇರಿಸುವುದು, ಮೂಲ ಇತಿಹಾಸವನ್ನು ತಿರುಚಿ, ಧಾರ್ಮಿಕ ಮತೀಯವಾದವನ್ನು ಸೃಷ್ಟಿಸುವ ಸುಳ್ಳು ವಿಷಯಗಳನ್ನು ಪಠ್ಯದಲ್ಲಿ ದಾಖಲಿಸುವುದು, ಹೀಗೆ ವರ್ಣಾಶ್ರಮ ಆಧಾರಿತ ವೈದಿಕ ಸಿದ್ಧಾಂತಕ್ಕೆ ಅನುಗುಣವಾಗಿ ಕೋಮುವಾದಿ ಪಠ್ಯಪುಸ್ತಕಗಳನ್ನು ರಚಿಸಲಾಗಿದೆ. ಆಧುನಿಕ ಸಂದರ್ಭದ ಶಿಕ್ಷಣದಲ್ಲಿ ನಡೆಯುತ್ತಿರುವ ಕೇಸರೀಕರಣವನ್ನು ಎಡಪಂಥೀಯರು ಮತ್ತು ಶಿಕ್ಷಣತಜ್ಞರು ವಿರೋಧ ವ್ಯಕ್ತಪಡಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕೂಡ ಕೇಸರೀಕರಣವನ್ನು ವಿರೋಧಿಸಲಾಗಿದೆ. ಭಾವೈಕ್ಯತೆ, ಸಮಾನತೆ

ಮತ್ತು ಧರ್ಮನಿರಪೇಕ್ಷತೆ ಇಲ್ಲದ ವೈದಿಕ ಶಿಕ್ಷಣವ್ಯವಸ್ಥೆಯನ್ನು ವಿರೋಧಿಸಿರುವುದನ್ನು ಗುರುತಿಸಬಹುದಾಗಿದೆ. ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವೈದಿಕ ಮೂಲಭೂತವಾದಗಳು ಶಿಕ್ಷಣಕ್ಷೇತ್ರದಲ್ಲಿ ಮಾಡುತ್ತಿರುವ ಹುನ್ನಾರಗಳನ್ನು ಸಾಹಿತ್ಯದ ಮೂಲಕ ವಿರೋಧ ವ್ಯಕ್ತಪಡಿಸಿದ್ದಾರೆ.

ವೈದಿಕ ಪ್ರಜ್ಞೆಯಿಂದ ವಿದ್ಯಾರ್ಥಿಗಳನ್ನು ಸಂಪ್ರದಾಯವಾದಿಗಳನ್ನಾಗಿ ಮತ್ತು ಮೂಲಭೂತವಾದಿಗಳನ್ನಾಗಿ ಮಾಡುತ್ತಿರುವುದರ ಬಗ್ಗೆ ಕುವೆಂಪು ವಿರೋಧಿಸುತ್ತಾರೆ. 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಮತ್ತು 'ವಿಚಾರ ಕ್ರಾಂತಿಗೆ ಆಹ್ವಾನ' ಕೃತಿಗಳಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕುವೆಂಪು ಮಾತನಾಡಿದ್ದಾರೆ. ಶಿಕ್ಷಣವನ್ನು ಕೇಸರೀಕರಣ ಮಾಡುತ್ತಿರುವ ಬಗ್ಗೆ ವಿರೋಧಗಳನ್ನು ಈ ಕೃತಿಗಳಲ್ಲಿ ಕಾಣಬಹುದಾಗಿದೆ. ಶಾಲೆಯಲ್ಲಿ ಶಿಕ್ಷಣವನ್ನು ಬೋಧಿಸುವ ಗುರುಗಳು ಮಾಡುತ್ತಿರುವ ಅವೈಜ್ಞಾನಿಕ ಬೋಧನೆ ಮತ್ತು ಹಿಂದೂ ಸಂಸ್ಕೃತಿಯ ವರ್ಣಾಶ್ರಮ, ಜಾತಿಪದ್ಧತಿ, ಅಸ್ಪೃಶ್ಯತೆಯನ್ನು ಸಮರ್ಥಿಸಿಕೊಂಡು ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವ ಶಿಕ್ಷಕರನ್ನು ಕುವೆಂಪು ವಿರೋಧಿಸುತ್ತಾರೆ. 'ವಿಚಾರವಾದ' ಮತ್ತು 'ವೈಜ್ಞಾನಿಕ ದೃಷ್ಟಿ'ಯ ಮೂಲಕ ಶಿಕ್ಷಣವನ್ನು ಕೊಡಬೇಕಾಗಿದೆ. ಆದರೆ ಶಿಕ್ಷಣ ಕೊಡುವ ಸಂಸ್ಥೆಗಳು ಮತ್ತು ಶಿಕ್ಷಕರು ವೈದಿಕ ಸಂಕುಚಿತ ಮನೋಭಾವಕ್ಕೆ ಒಳಗಾಗಿ ಕೇಸರೀಕರಣವನ್ನು ಬೆಳೆಸುತ್ತಿರುವ ಬಗ್ಗೆ ಕುವೆಂಪು ಈ ರೀತಿ ವಿರೋಧ ವ್ಯಕ್ತಪಡಿಸುತ್ತಾರೆ. "ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿಗಳನ್ನು ಬೋಧಿಸಿ, ಪ್ರಚೋದಿಸಿ, ಸಾಧಿಸುವ ಕಾರ್ಯ ಯಾವ ಸಂಸ್ಥೆಗಳಿಗೆ ಮೀಸಲಾಗಿರಬೇಕೊ ಆ ಸಂಸ್ಥೆಗಳಲ್ಲಿಯೇ ಅದು ಅವಮಾನಿತವಾಗುತ್ತಿರುವುದು ಅತ್ಯಂತ ನಿರಾಶಾಜನಕವಾಗಿದೆ. ವಿಜ್ಞಾನದ ಪಾಠ ಹೇಳಿಕೊಡುವ ಅಧ್ಯಾಪಕನೇ ತನ್ನ ಸ್ವಂತ ಬದುಕಿನಲ್ಲಿ ರಾಹುಕಾಲ ಪಂಚಾಗ ವಾರಭವಿಷ್ಯ ಇತ್ಯಾದಿ ಮೂಢನಂಬಿಕೆಗಳಿಂದ ಮೂರು ಹೊತ್ತೂ ಮತ ಮೂರ್ಖನಾಗಿದ್ದರೆ ವಿದ್ಯಾರ್ಥಿಗಳಿಗೆ ಹೇಗೆ ತಾನೆ ಸಿದ್ಧಿಸೀತು ವಿಚಾರದೃಷ್ಟಿ?"[೨೧] ಶಾಲಾ ಪಠ್ಯದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ಸೇರಿಸಿ ಕೇಸರೀಕರಣವನ್ನು ಮಾಡಲು ಮುಂದಾಗುತ್ತಿರುವುದರ ಬಗ್ಗೆ ಕುವೆಂಪು ಪ್ರಶ್ನೆ ಮಾಡುತ್ತಾರೆ. ಅವೈಜ್ಞಾನಿಕತೆಯಿಂದ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುತ್ತಿರುವ ಹಿಂದೂ ಮತೀಯವಾದವನ್ನು ವಿರೋಧಿಸಬೇಕಾಗಿದೆ. ವಿದ್ಯಾರ್ಥಿಗಳು ಲೋಕದ ಕಲ್ಯಾಣಕ್ಕಾಗಿ ವೈಜ್ಞಾನಿಕ ದೃಷ್ಟಿ ಸಂಪನ್ನನಾಗಬೇಕು ಎಂದು ಕುವೆಂಪು ಕರೆ ಕೊಡುತ್ತಾರೆ.

ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವ ಶಿಕ್ಷಕರು ವೈದಿಕ ಪ್ರಜ್ಞೆಗೆ ಒಳಗಾಗಿ ಬೋಧನೆ ಮಾಡುವುದನ್ನು ತೇಜಸ್ವಿ ಅವರು 'ಅಣ್ಣನ ನೆನಪು' ಕೃತಿಯಲ್ಲಿ ಉಲ್ಲೇಖಿಸುತ್ತಾರೆ. "ಮೇಷ್ಟರೊಬ್ಬರೂ ಕುವೆಂಪು ಬರೆದ ಕುಮಾರವ್ಯಾಸ ಪದ್ಯ ಪಾಠ ಮಾಡುತ್ತಾ ಅಣ್ಣ ಕಾವ್ಯ ರಚನೆ ಮಾಡುತ್ತಾ ಮಾಂಸಾಹಾರವನ್ನು ಸಂಪೂರ್ಣ ವರ್ಜಿಸಿರುತ್ತಾರೆಂದೂ, ಮಡಿ ಜೀವನ ನಡೆಸುತ್ತಾ ಅವರು ಬರೆಯುವುದೆಂದೂ ಬೊಗಳೆ ಹೊಡೆದರು." ಈ ರೀತಿಯಾಗಿ ಕಾವ್ಯ ರಚಿಸುವವರು ವೈದಿಕ ಧರ್ಮದ ಪ್ರಜ್ಞೆಗೆ ಒಳಗಾಗಿ ಕಾವ್ಯ ರಚನೆ ಮಾಡುತ್ತಾರೆ ಎಂದು ಮಕ್ಕಳಿಗೆ ಬೋಧಿಸುತ್ತಾರೆ. ಕೇಸರೀಕರಣದಿಂದ ಕೂಡಿದ ಬೋಧನಕ್ರಮವನ್ನು ಕುವೆಂಪು ಅವರು ವಿರೋಧಿಸಿ ಈ ರೀತಿ

ಹೇಳುತ್ತಾರೆ. "ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೆನ್ನುವುದು, ರಾಮಾಯಣ ಬರೆದ ವಾಲ್ಮೀಕಿ ಶಿಕಾರಿ ಮಾಡುತ್ತಿದ್ದ ವ್ಯಾಧನಾಗಿದ್ದನೆನ್ನುವುದು ಆ ಮುಠ್ಠಾಳ ಮೇಷ್ಟರಿಗೆ ಗೊತ್ತಿಲ್ಲ. ಈ ಮಡಿ ಹೆಂಗಸರಂಥ ಮೇಷ್ಟರುಗಳು ನಿಮಗೆ ಹೇಳಿಕೊಡುವುದಾದರೂ ಏನು? ಅವರಿಂದ ನೀವು ಕಲಿಯುವುದಾದರೂ ಏನು? ಅವಿವೇಕಿಗಳು! ಪದ್ಯ ಬರೆಯುವವರು ಪದ್ಯದಲ್ಲಿರಬೇಕು ಎನ್ನುವ ಕಂದಾಚಾರಗಳನ್ನೆಲ್ಲಾ ನಂಬಿಕೊಂಡಿದ್ದಾರಲ್ಲಾ. ಹಿಂದೂಧರ್ಮಕ್ಕೆ ಇದಕ್ಕಿಂತ ಇನ್ನೊಂದು ದುರ್ಗತಿ ಇದೆಯೆ?"[೨೨] ಹೀಗೆ ಮೂಢನಂಬಿಕೆಯಿಂದ ಮತ್ತು ಅವೈಜ್ಞಾನಿಕವಾದ ಚಿಂತನೆಗಳಿಂದ ಹಿಂದೂಧರ್ಮ ಕೂಡಿದೆ. ಈ ಮೂಲಕ ಶಾಲೆಗಳಲ್ಲಿ ಹಿಂದೂಧರ್ಮದ ಉದ್ದೇಶಗಳನ್ನು ಮಕ್ಕಳಿಗೆ ಕಲಿಸುವ ಹುನ್ನಾರಗಳಾಗಿದೆ. ಶಾಲೆಯಲ್ಲಿ ಕೇಸರೀಕರಣ ಮತ್ತು ಭಾರತೀಕರಣ ಹೆಸರಿನಲ್ಲಿ ವೈದಿಕ ಪ್ರಜ್ಞೆಯನ್ನು ಮಕ್ಕಳ ಮೇಲೆ ಹೇರುತ್ತಿರುವುದನ್ನು ಕಾಣಬಹುದಾಗಿದೆ.

ಶಾಲಾ ಪಠ್ಯಪುಸ್ತಕಗಳಲ್ಲಿ ಭಾರತದ ಸಂಸ್ಕೃತಿ ಏಕಸಂಸ್ಕೃತಿ ಮತ್ತು ಹಿಂದೂಸಂಸ್ಕೃತಿ ಎಂದು ಬಿಂಬಿಸಲಾಗುತ್ತಿದೆ. ಈ ಮೂಲಕ ಭಗವದ್ಗೀತೆಯನ್ನು ಪಠ್ಯಪುಸ್ತಕಗಳಲ್ಲಿ ಸೇರಿಸುವ ಅನೇಕ ಕುತಂತ್ರಗಳನ್ನು ಯೋಜಿಸಲಾಗುತ್ತಿದೆ. ಪುರೋಹಿತಶಾಹಿಗಳಿಂದ ಧಾರ್ಮಿಕ ಪಠನವನ್ನು ಮಾಡಿಸಿ, ವಿದ್ಯಾರ್ಥಿಗಳನ್ನು ದಾರಿ ತಪ್ಪಿಸಲಾಗುತ್ತಿದೆ. ಪಠ್ಯಪಸ್ತಕಗಳ ಮುಖಾಂತರ ವರ್ಣಾಶ್ರಮದ ಮೂಢ ವಿಚಾರಗಳನ್ನು ತುಂಬಲಾಗುತ್ತಿದೆ. ವೈದಿಕ ಸನಾತನವಾದದ ಮೂಲಕ ಭಾರತವನ್ನು ಹಿಂದೂ ರಾಷ್ಟ್ರವಾಗಿ ಮಾಡಲು ಮುಂದಾಗುತ್ತಿರುವುದನ್ನು ನೋಡಬಹುದಾಗಿದೆ. ಹಾಗಾಗಿ ವೈದಿಕ ಮೂಲಭೂತವಾದಗಳು ಶಾಲಾ ಪಠ್ಯಪುಸ್ತಕದ ಮೂಲಕ ಮಾಡುತ್ತಿರುವ ಹುನ್ನಾರಗಳನ್ನು ತೇಜಸ್ವಿ ವಿರೋಧಿಸುತ್ತಾರೆ. ವೈದಿಕರು ಭಾರತೀಯರಲ್ಲ. ಇವರು ವಲಸೆಯ ಪ್ರವೃತ್ತಿಯನ್ನು ಹೊಂದಿರುವವರು ಎಂದು ಹೇಳುತ್ತಾರೆ. "ವೈದಿಕ ಸಂಸ್ಕೃತಿಗೆ ತನ್ನದೇ ಆದ ಪ್ರಾದೇಶಿಕತೆ ಇಲ್ಲ. ತನ್ನ ಅಸ್ತಿತ್ವಕ್ಕೆ ಅದು ಸಂಕುಚಿತ ಮನೋವೃತ್ತಿ, ಸಂಪ್ರದಾಯವಾದ ಮುಂತಾದ ನೇತ್ಯಾತ್ಮಕ ಮಾರ್ಗ ಹಿಡಿದಿದೆ. ಇತಿಹಾಸೋತ್ತರ ಕಾಲದಿಂದಲೂ ಇದು ಹೀಗೇ ಇತ್ತು ಎಂಬುದನ್ನು ನಾವು ಪತ್ತೆ ಮಾಡಬೇಕಾಗಿದೆ. "ತನ್ನ ಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ವೈಭವಗಳಿಂದ ಆಗ್ನೇಯ ಏಷಿಯಾ ಮುಂತಾದ ಕಡೆಗಳಲ್ಲಿ ಭಾರತದ ಸಂಸ್ಕೃತಿ ಹರಡಿದಾಗ ಭಾರತದಲ್ಲಿದ್ದುದು ಬೌದ್ಧಧರ್ಮ ಎಂಬುದು ಅತ್ಯಂತ ಗಮನಾರ್ಹ." ಮುಂದುವರಿದು ತೇಜಸ್ವಿಯವರು ಏನು ಹೇಳುತ್ತಾರೆ ಎಂದರೆ, "ಒಟ್ಟಿನಲ್ಲಿ ವೈದಿಕ ಸಂಸ್ಕೃತಿ, ಭಾರತಕ್ಕೆ ಹತ್ತಿಕೊಂಡ, ಸದಾ ಅವನತಿಯ ಮತ್ತು ಸೃಷ್ಟಿ ವಿರೋಧಿಯಾದ ಒಂದು ಮುದಿ ಬಂದಳಿಕೆ. ಕಾಶೀ, ರಾಮೇಶ್ವರ, ಪ್ರಯಾಗ ಮುಂತಾದವುಗಳೊಂದಿಗೆ ಸಂಬಂಧಿಸಿಕೊಳ್ಳುತ್ತಾ, ಯಾವುದೋ ಒಂದು ಅಮೂರ್ತ ಭಾರತದಲ್ಲಿ ಬದುಕುತ್ತಾ ಹೋಗುವ ಪ್ರವಾಸೋದ್ಯಮಿ ಜೀವನವು ಯಾವುದೇ ಧರ್ಮದಲ್ಲಿ ಹುಟ್ಟಿದ ಸಾಹಿತ್ಯಿಕ ಚೇತನಗಳಿಗೆ ಅಸಹ್ಯವಾಗುವುದರಲ್ಲಿ ಸಂದೇಹವಿಲ್ಲ. ಈ ಬ್ರಾಹ್ಮಣರ ಅಲೆಮಾರಿ ಪ್ರವೃತ್ತಿಯೂ ಹೊಸ ಅನುಭವಗಳನ್ನೊಳಗೊಳ್ಳುವ ಮಹತ್ವಾಕಾಂಕ್ಷಿ ಸಾಹಸ ಪ್ರವೃತ್ತಿಯಾಗದೆ, ಅಥವಾ ಕುಕ್, ಕೊಲಂಬಸ್‌ನಂತಹ ಅನ್ವೇಷಕ ಪ್ರವೃತ್ತಿಯಾಗದೆ, ಕೇವಲ ವ್ಯವಸಾಯ ಮುಂತಾದ ಶೂದ್ರೋದ್ಯಮಗಳಿಂದ ತಪ್ಪಿಸಿಕೊಳ್ಳುವ ಸೋಮಾರಿತನ

ಮಾತ್ರವಾಗಿದೆ. ಬ್ರಾಹ್ಮಣ ಅಥವಾ ವೈದಿಕ ಸಂಸ್ಕೃತಿ ಹೀಗಿರುವುದರಿಂದಲೇ ಅನೇಕ ತತ್ವವೇತ್ತರರೂ, ಚಿಂತನಶೀಲರೂ ಇದರಲ್ಲಿ ಹುಟ್ಟಿದವರು ಯಾವುದೋ ಒಂದು ಸಾಮಾಜಿಕ ಬದಲಾವಣೆಯನ್ನು ಮಾಡದೆ, ವೇದೋಪನಿಷತ್ತುಗಳಿಗೆ ಹೊಸ ಹೊಸ ವ್ಯಾಖ್ಯಾನ ಮಾಡಿಹೋದರು."[೨೩] ಕೇವಲ ವೇದ ಮತ್ತು ಉಪನಿಷತ್ತುಗಳಿಗೆ ವ್ಯಾಖ್ಯಾನ ಬರೆದರೇ ಹೊರತು ಸಮಾಜದಲ್ಲಿ ಯಾವುದೇ ಮೂಲಭೂತ ಬದಲಾವಣೆಗಳನ್ನು ಇವರು ಮಾಡಲಿಲ್ಲ. ಯಾಕೆ ಮಾಡಲಿಲ್ಲ ಎಂದರೆ ಸಾಮಾಜಿಕ ಬದಲಾವಣೆ ಸ್ವತಃ ಇವರಿಗೆ ಬೇಡವಾಗಿತ್ತು. ಯಾಕೆಂದರೆ ಒಂದು ವೇಳೆ ಸಾಮಾಜಿಕ ಬದಲಾವಣೆ ಮಾಡಿದ್ದೇ ಆದರೆ ಶೂದ್ರರನ್ನು ಅಥವಾ ಶೂದ್ರಾತಿಶೂದ್ರರನ್ನು ಇವರು ಪುರಸ್ಕರಿಸಬೇಕಾಗುತ್ತದೆ. ಆಗ ಸಾಮಾಜಿಕ ಚಲನಶೀಲತೆ ಉಂಟಾಗುತ್ತದೆ. ಹಾಗಾಗಿ ಶೂದ್ರರಿಗೆ ಶಿಕ್ಷಣವನ್ನು ಕೊಡಲು ನಿರಕರಿಸಿದರು. ಶಾಲಾ ಪಠ್ಯದಲ್ಲಿ ವರ್ಣಾಶ್ರಮದ ಬಗ್ಗೆ ಬೋಧನೆ ಮಾಡಲು ಮುಂದಾಗುವುದು. ಹಿಂದೂ ಮೂಲಭೂತವಾದಗಳನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುಂಬಿ ವಿದ್ಯಾರ್ಥಿಗಳ ಮಿದುಳು ಮತ್ತು ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸುವ ಕುತಂತ್ರವನ್ನು ವೈದಿಕಸಂಸ್ಕೃತಿ ಮಾಡುತ್ತಿದೆ.

ವೈದಿಕ ಮೂಲಭೂತವಾದವು ಭಾರತೀಯ ಶಿಕ್ಷಣಪದ್ಧತಿಯನ್ನು 'ಭಾರತೀಕರಣ' ಮಾಡಲು ಮುಂದಾಗಿರುವ ಬಗ್ಗೆ ಪೂರ್ಣಚಂದ್ರ ತೇಜಸ್ವಿ ಅವರು ವಿರೋಧವನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾರೆ. ಭಾರತದಲ್ಲಿ ಹಲವು ಸಂಸ್ಕೃತಿಗಳಿವೆ; ಭಿನ್ನ ಸಂಸ್ಕೃತಿಗಳಿವೆ. ಇವುಗಳಿಗೆ ಸ್ವತಂತ್ರ ಅಸ್ತಿತ್ವ ಇದೆ. ಜೊತೆಗೆ ಒಂದು ಸಂಸ್ಕೃತಿಗೂ ಮತ್ತೊಂದು ಸಂಸ್ಕೃತಿಗೂ ಕೊಳು-ಕೊಡೆ ಸಂಬಂಧಗಳೂ ಇವೆ. ಹಾಗಾಗಿ ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಅಥವಾ ಏಕ ಸಂಸ್ಕೃತಿ ಇದೆ, ಇತ್ತು ಮತ್ತು ಇರಬೇಕು ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಆದರೆ ಭಾರತದಲ್ಲಿ ಏಕ ಸಂಸ್ಕೃತಿ ಇದೆ ಎಂದು ಹೇಳುವ ಹಾಗೂ ಅದನ್ನು ನಾನಾ ವಿಧದಲ್ಲಿ ಒಪ್ಪಿಸುವ ಕೆಲಸ ಮಾಡಲಾಗುತ್ತಿದೆ. ಇದರ ಬಗ್ಗೆ ಪೂರ್ಣಚಂದ್ರ ತೇಜಸ್ವಿ ಅವರಿಗೆ ಸ್ಪಷ್ಟವಾದ ವಿರೋಧವಿದೆ. ಅವರ ಆ ವಿರೋಧಕ್ಕೆ ಕಾರಣಗಳೂ ಇವೆ. ಇದನ್ನು ಅವರ ಮಾತುಗಳಲ್ಲೇ ಉಲ್ಲೇಖಿಸಬಹುದು. "ಭಾರತದ ಸಂಸ್ಕೃತಿಗಳನ್ನು ಅಖಂಡ ಸಂಸ್ಕೃತಿ ಎಂದು ಪರಿಭಾವಿಸಿ ಹೊರಟರೆ ನಮಗೆ ಆಗ ಪ್ರಾತಿನಿಧಿಕವಾಗಿ ದೊರೆಯುವುದು ಬ್ರಾಹ್ಮಣಧರ್ಮ ಮತ್ತು ವೈದಿಕಸಂಸ್ಕೃತಿ ಮಾತ್ರವೇ ಎಂಬುದನ್ನು ಬ್ರಾಹ್ಮಣರು ಅರಿತಿದ್ದಾರೆ. ಅಖಂಡ ಭಾರತದ ವ್ಯಾಪ್ತಿಯ ಏನನ್ನು ಮಾಡ ಹೊರಟರೂ ಬ್ರಾಹ್ಮಣರೆ ಅಲ್ಲಿ ಉಪಸ್ಥಿತರಿರುತ್ತಾರೆ ಎಂಬುದನ್ನು ನಾವು ಭಾರತದ ರಾಜಕಾರಣ, ಆಡಳಿತ ಪದ್ಧತಿ ಮುಂತಾದವುಗಳನ್ನು ನೋಡಿದರೆ ತಿಳಿಯಬಹುದು. ಪ್ರಾಂತೀಯ ಮಟ್ಟದಲ್ಲಿ ಬಲಿಷ್ಠ ಹೋರಾಟವನ್ನು ಸಂಘಟಿಸಬಲ್ಲ ಶೂದ್ರ ಸಮುದಾಯವೆಲ್ಲ ರಾಷ್ಟ್ರೀಯ ಮಟ್ಟದಲ್ಲಿ ಸೋಲುವುದು ಈ ಕಾರಣಕ್ಕಾಗಿಯೇ. ನಾವು ಭಾರತೀಯ ಎಂದು ಉಲ್ಲೇಖಿಸಲು ಅಖಿಲ ಭಾರತ ಮಟ್ಟವನ್ನು ಮನಸ್ಸಿನಲ್ಲಿಟ್ಟುಕೊಂಡು ಹೊರಟರೆ ಸದ್ಯಕ್ಕೆ ನಮಗೆ ದೊರೆಯುವುದು ಆರ್ಯ ಅಥವಾ ವೈದಿಕ ಮತ್ತು ಮಹಮದೀಯ ಹಾಗೂ ಕ್ರೈಸ್ತ ಸಂಸ್ಕೃತಿಗಳು. ಈ ಮೂರು ಸಂಸ್ಕೃತಿಗಳು ಕೂಡ ಭಾರತದ ಮೇಲೆ ಹೊರಗಿನಿಂದ ದಂಡೆತ್ತಿ ಬಂದವು."[೨೪] ಶಾಲೆ ಪಠ್ಯಗಳ ಮೂಲಕ ಮಕ್ಕಳಿಗೆ ಆರ್ಯರು ಭಾರತದ ಮೂಲನಿವಾಸಿಗಳು

ಎಂದು ಹೇಳಿಕೊಡುವ ಹಿಂದೂ ಮೂಲಭೂತವಾದವನ್ನು ತೇಜಸ್ವಿ ಅವರು ವಿರೋಧಿಸುತ್ತಾರೆ. ಆರ್ಯ ಅಥವಾ ವೈದಿಕ ಸಂಸ್ಕೃತಿಗಳು ಹೊರಗಿನಿಂದ ಭಾರತಕ್ಕೆ ಬಂದವು ಎಂದು ಹೇಳುತ್ತಾರೆ.

ವೈದಿಕರು 'ಭಾರತೀಕರಣ' ಹೆಸರಿನಲ್ಲಿ ಶಾಲಾಪಠ್ಯಗಳಲ್ಲಿ ಆರ್ಯರು ಮೂಲನಿವಾಸಿಗಳು ಎಂದು ಸುಳ್ಳು ಸೇರಿ ಮತಾಂಧತೆಯನ್ನು ಸೃಷ್ಟಿ ಮಾಡಲಾಗುತ್ತಿದೆ ಎಂದು ದೇವನೂರ ಮಹಾದೇವ ಅವರು ಈ ರೀತಿ ಹೇಳುತ್ತಾರೆ. "ತಾವು ಆರ್ಯರ ಪಳೆಯುಳಿಕೆ ಎಂಬ ಪರಕೀಯ ಭೀತಿಯಿಂದ ನರಳತ್ತಿರುವ ಕೆಲವರು ಅದನ್ನು ಮುಚ್ಚಿಹಾಕಲು ಮುಸ್ಲಿಮರು ಪರಕೀಯರೆಂಬ ಭೀತಿಯನ್ನು ಎತ್ತಿ ಕಟ್ಟುತ್ತಿರಬಹುದೆ? ಒಂದನ್ನು ಎತ್ತಿಕಟ್ಟಿ ಅಂಥದೇ ಇನ್ನೊಂದನ್ನು ಮರೆಸಲು ಪ್ರಯತ್ನಿಸಿದರೆ ಏನಾಗುತ್ತದೆ? ಮರೆಯವುದರ ಬದಲು ಮರೆಯದಿರುವುದು ತಾನೇ ಆಗುವುದು? ಉತ್ತರ ಪ್ರದೇಶ ಆರ್.ಎಸ್.ಎಸ್. ಶಾಲಾ ಪಠ್ಯಪುಸ್ತಕಗಳಲ್ಲಿ 'ಆರ್ಯರು ಭಾರತದ ಮೂಲನಿವಾಸಿಗಳು' ಎಂದು ಸೇರಿಸಿರುವುದಕ್ಕೂ ಈ ಭೀತಿಯೇ ಕಾರಣವಲ್ಲವೆ? ಇದೆಲ್ಲ ಎಲ್ಲಿಗೆ ತಂದು ನಿಲ್ಲಿಸುತ್ತದೆ? ಇಬ್ಬರೂ ಪರಕೀಯರು ಎಂಬಲ್ಲಿಗೆ ತಾನೆ, ಇದು ಬೇಕಾಗಿರಲಿಲ್ಲ. ಇಂಥ ದೊಂಬರಾಟದ ಬದಲು ಐಕ್ಯತೆಗಾಗಿ ತುಡಿದರೆ ಈ ಪರಕೀಯ ಭಾವನೆಯೇ ಲಯವಾಗುವುದಿಲ್ಲವೆ? ಇಂದು ಇದು ಬೇಕಾಗಿದೆ."[೨೫] ಈ ರೀತಿಯಾಗಿ ವೈದಿಕರು ಶಾಲಾಪಠ್ಯದಲ್ಲಿ ಕೇಸರೀಕರಣ ಮಾಡುವುದನ್ನು ದೇವನೂರ ಮಹಾದೇವ ಅವರು ವಿರೋಧಿಸುತ್ತಾರೆ ಹಾಗೂ ಐಕ್ಯತೆಗಾಗಿ ದುಡಿಯಬೇಕಾಗಿದೆ ಎಂದು ಹೇಳುತ್ತಾರೆ. ವೈದಿಕ ಮೂಲಭೂತವಾದದಿಂದ ಹಿಂದೂಧರ್ಮದ ಮೇಲೆ ಅತಿಯಾದ ನಂಬಿಕೆ ಇಡುವಂತೆ ಮಾಡಿ, ಬೇರೆ ಧರ್ಮದ ಮೇಲೆ ದ್ವೇಷವನ್ನು ಸಾಧಿಸುವುದು ಸಹ ಮತಾಂಧತೆಯಾಗಿದೆ. ಹಾಗಾಗಿ ಶಾಲೆ ಪಠ್ಯದಲ್ಲಿ ಇರುವ ಇತಿಹಾಸ ಪುರಾಣಗಳನ್ನು ತಿರುಚಿ ಮಕ್ಕಳಿಗೆ ಶಿಕ್ಷಣವನ್ನು ಕೊಡುವುದರಿಂದ ಮತಾಂಧತೆ ಸೃಷ್ಟಿಯಾಗುತ್ತದೆ. ಮಕ್ಕಳು ಇತಿಹಾಸವನ್ನು ಸರಿಯಾಗಿ ಅರಿತುಕೊಳ್ಳಲು ಆಗದಿದ್ದರೆ, ವರ್ತಮಾನವನ್ನು ಮಕ್ಕಳು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಆದ್ದರಿಂದ ಕೇಸರೀಕರಣಕ್ಕೆ ವಿರೋಧವನ್ನು ಲೇಖಕರು ವ್ಯಕ್ತಪಡಿಸುತ್ತಾರೆ.

ಭಾರತದ ಶಿಕ್ಷಣವ್ಯವಸ್ಥೆ ಜಾತೀಯತೆಯಿಂದ ಕೂಡಿದೆ ಹಾಗಾಗಿ ಕೇಸರಿಕರಣವನ್ನು ವಿರೋಧಿಸಲು ಎಲ್ಲಾ ಮತಜಾತಿಯ ಮಕ್ಕಳನ್ನು ಒಂದು ಕಡೆ ಸೇರಿಸಿ ಶಿಕ್ಷಣ ಕೊಡಬೇಕು ಎಂದು ದೇವನೂರ ಮಹಾದೇವ ಅವರು ಹೇಳುತ್ತಾರೆ. "ಭಾರತದ ಛಿದ್ರ ಸಮಾಜದಲ್ಲಿ ಎಲ್ಲ ಜಾತಿಮತ ಅಂತಸ್ತುಗಳ ಎಳೆಯ ಮಕ್ಕಳು ಒಂದು ಕಡೆ ಸೇರಿ ಒಡನಾಡಿ ಶಾಲೆಯಲ್ಲಿ ಕಲಿಯುವುದೇ, ಈ ಸೇರಿ ಒಡನಾಡುವ ಕ್ರಿಯೆಯೇ ಬಲುದೊಡ್ಡ ಶಿಕ್ಷಣ ಎಂದೂ ಕಾಣಿಸುಬಹುದು. ಅದಕ್ಕಾಗಿ ಎಳೆಯ ಮಕ್ಕಳ ಶಿಕ್ಷಣದಲ್ಲಾದರೂ ತಾರತಮ್ಯ ಪಂಚವರ್ಣ ಶಿಕ್ಷಣಪದ್ಧತಿಯನ್ನು ಕೈಬಿಟ್ಟು ಏಕರೂಪ ಶಿಕ್ಕಣಕ್ಕಾಗಿ ಇಡೀ ಸಮಾಜ ಹಾತೊರೆಯುವಂತೆ ಅದಕ್ಕಾಗಿ ಕೂಗುವಂತೆ ಪತ್ರಿಕೆಗಳು ಅಭಿಪ್ರಾಯ ರೂಪಿಸಬಹುದು."[೨೬] ಭಾರತದ ಶಿಕ್ಷಣವ್ಯವಸ್ಥೆಯಲ್ಲಿ ಇರುವ ಭಿನ್ನಭೇದವನ್ನು ತೊಡೆದು, ಸಮಾನ ಶಿಕ್ಷಣಪದ್ಧತಿಯ ಮೂಲಕ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪಠ್ಯ ರಚಿಸಿ, ನಾಳಿನ ಭಾರತ ಕಟ್ಟಬೇಕು ಎಂಬುದು ದೇವನೂರ ಮಹಾದೇವ ಅವರ ಆಶಯವಾಗಿದೆ.

ಶಿಕ್ಷಣದಲ್ಲಿ ಹಿಂದುತ್ವವನ್ನು ಬೆಳೆಸಿ ಭಾರತೀಕರಣ ಮಾಡಲು ಮುಂದಾಗಿರುವ ವೈದಿಕ ಚಿಂತನೆಗಳನ್ನು ಕುವೆಂಪು, ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ವಿರೋಧಿಸುತ್ತಾರೆ. ಶಾಲಾ ಶಿಕ್ಷಣವ್ಯವಸ್ಥೆ ಕೇಸರೀಕರಣದಿಂದ ಮೌಢ್ಯ ಮತ್ತು ಅವೈಜ್ಞಾನಿಕ ಬೋಧನೆಯನ್ನು ಮಾಡುತ್ತಿರುವ ಬಗ್ಗೆ ವಿರೋಧಗಳನ್ನು ಇವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ವೈದಿಕ ಮೂಲಭೂತವಾದಗಳು ಇತಿಹಾಸವನ್ನು ತಿರುಚಿ ಸುಳ್ಳನ್ನು ಸತ್ಯ ಮಾಡಲು ಮುಂದಾಗಿರುವ ಮೂಲಭೂತವಾದಿಗಳ ಹುನ್ನಾರಗಳನ್ನು ಕೃತಿಗಳಲ್ಲಿ ಚರ್ಚಿಸಿದ್ದಾರೆ. ಭಾರತದ ಶಿಕ್ಷಣ ವ್ಯವಸ್ಥೆ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ.

ಒಟ್ಟಿನಲ್ಲಿ ಪ್ರಾಚೀನ ಶಿಕ್ಷಣವ್ಯವಸ್ಥೆ ಮತ್ತು ಆಧುನಿಕ ಶಿಕ್ಷಣವ್ಯವಸ್ಥೆಯಲ್ಲಿ ವೈದಿಕ ಪ್ರಜ್ಞೆ ಯಾವ ರೀತಿ ಕೆಲಸ ಮಾಡಿದೆ ಎಂಬುವ ಸೂಕ್ಷ್ಮ ವಿಚಾರಗಳನ್ನು ಕುವೆಂಪು, ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ವೈದಿಕ ಶಿಕ್ಷಣಪದ್ಧತಿಗೆ ವಿರೋಧವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ಕುವೆಂಪು ಅವರು ಪ್ರಾಚೀನ ವೈದಿಕ ಶಿಕ್ಷಣಪದ್ಧತಿಯನ್ನು ವಿರೋಧಿಸುತ್ತಾರೆ. ವರ್ಣಾಶ್ರಮ ಪದ್ಧತಿ ಮತ್ತು ಜಾತಿಯ ಕಾರಣದಿಂದ ಶೂದ್ರರಿಗೆ ಶಿಕ್ಷಣವನ್ನು ಕೊಡಲು ನಿರಾಕರಿಸಿದ ವೈದಿಕರ ಕಾನೂನುಗಳನ್ನು ಕುವೆಂಪು ಪ್ರಶ್ನಿಸುತ್ತಾರೆ. ಕೆಳವರ್ಗದ ಅನೌಪಚಾರಿಕ ಶಿಕ್ಷಣದ ಜ್ಞಾನವನ್ನು ವೈದಿಕ ಶಿಕ್ಷಣ ಜ್ಞಾನಕ್ಕೆ ವಿರೋಧವಾಗಿ ಚಿತ್ರಿಸುತ್ತಾರೆ. ಆಧುನಿಕ ಶಿಕ್ಷಣದಿಂದ ಶೂದ್ರರಿಗೆ ಶಿಕ್ಷಣವನ್ನು ಪಡೆಯಲು ಅವಕಾಶಗಳು ಸಿಕ್ಕಿದ್ದರೂ, ಹಿಂದೂ ಮೂಲಭೂತವಾದಗಳು ಶೂದ್ರರನ್ನು ಶಿಕ್ಷಣದಿಂದ ವಂಚಿಸುವ ಕೆಲಸವನ್ನು ಮಾಡುತ್ತಿರುವ ಬಗ್ಗೆ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಸಾಹಿತ್ಯದಲ್ಲಿ ಉಲ್ಲೇಖಿಸಿದ್ದಾರೆ. ಶಿಕ್ಷಣದಲ್ಲಿ ನಡೆಯುತ್ತಿರುವ ಕೇಸರೀಕರಣ ಮತ್ತು ಭಾರತೀಕರಣವನ್ನು ವಿರೋಧಿಸುವ ಪ್ರಜ್ಞೆಯನ್ನು ಗುರುತಿಸಬಹುದು. ಈ ರೀತಿ ವೈದಿಕ ವಿರೋಧಿ ಪ್ರಜ್ಞೆ ಶಿಕ್ಷಣದ ಕ್ಷೇತ್ರದಲ್ಲಿ ಕೆಲಸ ಮಾಡಿರುವುದನ್ನು ಗುರುತಿಸಬಹುದು.

ಕೊನೆ ಟಿಪ್ಪಣಿ

೧. ಮಹಾಬಲೇಶ್ವರ ರಾವ್ (ಅನು.). ಭಾರತದಲ್ಲಿ ಶಿಕ್ಷಣ, ಪುಟ ೨

೨. ರಾಜಶೇಖರಯ್ಯ ಎ.ಎಂ., ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ ೩), ಪುಟ ೪೪

೩. ಶಿವಾರೆಡ್ಡಿ ಕೆ.ಸಿ., ಕುವೆಂಪು ವಿಚಾರಧಾರೆಯ ಪ್ರಸ್ತುತತೆ, ಶಿಕ್ಷಣ, ಪುಟ ೪೦

೪. ಕುವೆಂಪು, ಬೆರಳ್‌ಗೆ ಕೊರಳ್ ನಾಟಕ, ಪುಟ ೧೫, ೧೬

೫. ಕುವೆಂಪು, ಶೂದ್ರತಪಸ್ವಿ, ಪುಟ ೨೫

೬. ದೇವನೂರು ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೨೪೧

೭. ಅದೇ, ಪುಟ ೨೪೩

೮. ಕುವೆಂಪು, ನೆನಪಿನ ದೋಣಿ, ಪುಟ ೨೭, ೨೮

೯. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೨೭೯

೧೦. ಕುವೆಂಪು, ನೆನಪಿನ ದೋಣಿ, ಪುಟ ೬೭

೧೧. ಅದೇ, ಪುಟ ೬೯, ೭೦

೧೨. ಕುವೆಂಪು, ಕಾನೂರು ಹೆಗ್ಗಡಿತಿ, ಪುಟ ೬೭

೧೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೭೦

೧೪. ಪೂರ್ಣಚಂದ್ರ ತೇಜಸ್ವಿ, ಅಬಚೂರಿನ ಪೋಸ್ಟಾಫೀಸು, ಮುನ್ನುಡಿ

೧೫. ಪೂರ್ಣಚಂದ್ರ ತೇಜಸ್ವಿ, ಅಣ್ಣನ ನೆನಪು, ಪುಟ ೧೨೫

೧೬. ಕುವೆಂಪು, ಕಾನೂರು ಹೆಗ್ಗಡಿತಿ, ಪುಟ ೧೮೨, ೧೮೩

೧೭. ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ ೧೮

೧೮. ಅದೇ, ಪುಟ ೧೧೧

೧೯. ಅದೇ, ಪುಟ ೧೫೯

೨೦. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೨೬೧ ೨೬೨

೨೧. ಕುವೆಂಪು ಸಮಗ್ರ ಗದ್ಯ ೨, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ ೬೪

೨೨. ಪೂರ್ಣಚಂದ್ರ ತೇಜಸ್ವಿ, ಅಣ್ಣನ ನೆನಪು, ಪುಟ ೬೨, ೬೩

೨೩. ಪೂರ್ಣಚಂದ್ರ ತೇಜಸ್ವಿ, ವಿಮರ್ಶೆಯ ವಿಮರ್ಶೆ, ಪುಟ ೨೭, ೨೮

೨೪. ಅದೇ, ಪುಟ ೨೪

೨೫. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೯೪, ೯೫

೨೬. ಅದೇ, ಪುಟ ೧೪೬

* * *

ಅಧ್ಯಾಯ: ಆರು

ಪ್ರಭುತ್ವ

ಅಧ್ಯಾಯ: ಆರು

ಪ್ರಭುತ್ವ

ಪ್ರಭುತ್ವ ಪರಿಕಲ್ಪನೆಯನ್ನು ಒಡೆತನ ಮತ್ತು ಅಧಿಕಾರದ ಸಂವಾದಿಯಾಗಿ ಬಳಸಲಾಗುತ್ತದೆ. ಪ್ರಭುತ್ವವು ವ್ಯವಸ್ಥೆಯ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಪ್ರಭುತ್ವದ ಸ್ವರೂಪ ಸಂದರ್ಭಕ್ಕೆ ತಕ್ಕಂತೆ ಬದಲಾಗುತ್ತದೆ. ಪ್ರಭುತ್ವ ಒಂದು ನಿರ್ದಿಷ್ಟ ರೂಪಿಯಾಗಿಲ್ಲ. ಪ್ರಭುತ್ವದ ಕಲ್ಪನೆಯ ಮಾದರಿಗಳನ್ನು ಈ ರೀತಿ ಗುರುತಿಸಬಹುದು. ರಾಜನು ರಾಜ್ಯದ ಒಡೆಯನಾಗಿ ತನಗೆ ಬೇಕಾದಂತೆ ರಾಜ್ಯವನ್ನು ರೂಪಿಸಿಕೊಂಡು ಆಡಳಿತ ಮಾಡುವುದು 'ರಾಜಸತ್ತೆಯ ಪ್ರಭುತ್ವ' ಆಗುತ್ತದೆ. ಇಲ್ಲಿ ರಾಜನ ಮಾತೇ ಅಂತಿಮವಾಗುತ್ತದೆ. ಇಲ್ಲಿ ಯಾವುದೇ ವರ್ಗ, ಗುಂಪು ಅಥವಾ ವ್ಯಕ್ತಿಯ ಅಧೀನದಲ್ಲಿದೆ. ಜನತೆಯ ಅಧೀನದಲ್ಲಿ ಅಧಿಕಾರ ಇರುವುದು 'ಪ್ರಜಾಪ್ರಭುತ್ವ'. ಇಲ್ಲಿ ಸಾಮಾನ್ಯ ಪ್ರಜೆಯು ಪ್ರಭುವಾಗಬಲ್ಲ. ಇದು ಒಂದು ಮಾದರಿಯಾಗಿದೆ. ಕುಟುಂಬದ ಸದಸ್ಯರಲ್ಲಿ ಒಬ್ಬನ ಕೈಯಲ್ಲಿ ಅಧಿಕಾರವು ಕೇಂದ್ರೀಕರಣವಾಗಿರುತ್ತದೆ. ಇಲ್ಲಿ ಕೂಡ 'ಏಕವ್ಯಕ್ತಿ ಪ್ರಭುತ್ವವನ್ನು' ಕಾಣಬಹುದು. ಚಳುವಳಿಗಾರರು ನಾಗರಿಕ ಹಕ್ಕುಗಳನ್ನು ಪಡೆದುಕೊಳ್ಳಲು ಪ್ರಭುತ್ವವನ್ನು ಬಳಸುತ್ತಾರೆ. ಭಾರತದ ಸ್ವಾತಂತ್ರ್ಯದ ಸಂದರ್ಭದಲ್ಲಿ ಬ್ರಿಟಿಷ್ ಪ್ರಭುತ್ವವನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಪ್ರಭುತ್ವವನ್ನು ಬಳಸಲಾಗಿದೆ. ಪ್ರಭುತ್ವವನ್ನು ಸಾಂಸ್ಕೃತಿಕ ಪರಿಭಾಷೆಯಲ್ಲಿ ನೋಡಿದಾಗ ಮೇಲು ಸಂಸ್ಕೃತಿ ಮತ್ತು ಕೆಳಸಂಸ್ಕೃತಿ ಎಂದು ಪರಿಗಣಿಸಬಹುದು. ಹೀಗೆ ಪ್ರಭುತ್ವ ಸಮಾಜದ ಎಲ್ಲಾ ರಂಗದಲ್ಲೂ ರೂಪುಗೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ಪ್ರಭುತ್ವದ ವ್ಯಾಖ್ಯಾನವು ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವಣ ಸಂಬಂಧವಾಗಿದೆ.

ಪ್ರಭುತ್ವ ಎಂದರೇನು? ಇದರ ಸ್ವರೂಪ ಯಾವುದು? ಎಂಬುದನ್ನು ಈ ರೀತಿ ಹೇಳಲಾಗಿದೆ. ಉನ್ನತ ತಾತ್ವಿಕತೆ ಮತ್ತು ತಾರ್ಕಿಕ ಸ್ಥಿತಿಯೆಂದು, ಅನುಷ್ಠಾನ ಮತ್ತು ಅರ್ಥೈಸುವಿಕೆಯೆಂದು, ಮಾನವನ ಕೃತಕ ಸೃಷ್ಟಿಯೆಂದು, ಚಲಾಯಿಸುವ ಅಧಿಕಾರವೆಂದು, ಶಕ್ತಿ ಮತ್ತು ಬಲ ಪ್ರಯೋಗವೆಂದು, ವರ್ಗವ್ಯವಸ್ಥೆಯ ಉತ್ಪನ್ನವೆಂದು ಪ್ರಭುತ್ವವನ್ನು ಪರಿಗಣಿಸಲಾಗಿದೆ. "ಜಿ.ಎಸ್. ಶಿವರುದ್ರಪ್ಪ ಅವರು ಪ್ರಭುತ್ವಕ್ಕೆ ಸಂವಾದಿಯಾಗಿ establishment ಎಂಬ ಆಂಗ್ಲಪದವನ್ನು ಬಳಸಿದ್ದಾರೆ. ವಿ.

ಲಕ್ಷ್ಮೀನಾರಾಯಣ ಅವರು ಅಂಬೇಡ್ಕರ್ ಅವರ ರಾಜಕೀಯ ವಿಚಾರಧಾರೆಯನ್ನು ವಿವರಿಸುತ್ತ, ಪ್ರಭುತ್ವಕ್ಕೆ ಸಂವಾದಿಯಾಗಿ State ಆಂಗ್ಲ ಪದವನ್ನು ಬಳಸಿದ್ದಾರೆ. ಅದೇ ಲೇಖನದಲ್ಲಿ ಲಕ್ಷ್ಮೀನಾರಾಯಣರು ಪಾಶ್ಚಾತ್ಯ ಚಿಂತಕರಾದ ಹಾಬ್ಸ್, ಹೆಗಲ್, ಬೋಸ್ಟಾನ್ ಕೋಟ್ ಅವರು 'ಪ್ರಭುತ್ವ ಸಾಪೇಕ್ಷರಹಿತ (Absolute) ಎಂಬ ಪದವು' ಅಂಬೇಡ್ಕರ್ ಅವರಿಗೆ ಪೂರ್ವಪಕ್ಷವಾಗಿತ್ತೆಂಬುದನ್ನು ಪ್ರಸ್ತಾಪಿಸಿದ್ದಾರೆ. ಎನ್. ಮನುಚಕ್ರವರ್ತಿ ಅವರು ಪ್ರಭುತ್ವ ಹಾಗೂ ಸರ್ಕಾರಗಳ ನಡುವೆ ವ್ಯತ್ಯಾಸವನ್ನು ಗುರುತಿಸಬೇಕಾಗಿದೆಯೆಂದು ಹೇಳುತ್ತಾ 'ತಾತ್ವಿಕ ಅರ್ಥದಲ್ಲಿ ಪ್ರಭುತ್ವ ಎನ್ನುವುದು ಕೆಲವೇ ಜಾತಿ, ವರ್ಗಗಳಿಗೆ ಮಾತ್ರ ಮೀಸಲಾಗದೆ ಎಲ್ಲರ ಹಿತಗಳನ್ನೂ ಕಾಯಬೇಕಾದ ಒಂದು ಆದರ್ಶ ವ್ಯವಸ್ಥೆ. ಪ್ರಭುತ್ವವನ್ನು ಕುರಿತು ಮಾತಾಡುವಾಗಲೆಲ್ಲ ನಾವು ಅದು ಸಮಗ್ರತೆಯನ್ನು ಕಾಪಾಡುವ ಒಂದು ಅಂಗವೆಂದೇ ತಿಳಿಯುತ್ತೇವೆ' ಎಂದಿದ್ದಾರೆ."[೧] ಹೀಗೆ ಕನ್ನಡ ಸಾಹಿತ್ಯದಲ್ಲಿ ಪ್ರಭುತ್ವದ ಪರಿಕಲ್ಪನೆಯನ್ನು ವ್ಯಾಖ್ಯಾನ ಮತ್ತು ವಿಶ್ಲೇಷಣೆ ಮಾಡಲಾಗಿದೆ.

"ಪ್ರಭುತ್ವ ಎನ್ನುವ ಪದದ ಅರ್ಥದಲ್ಲಿ ಅಲ್ಪವುಟ್ಟಿಗೆ 'ಅಧಿಕಾರದೊಂದಿಗೆ ಅಂಕಿತದಲ್ಲಿಟ್ಟುಕೊಳ್ಳುವುದು' ಎಂಬ ಅರ್ಥ ಬರುತ್ತದೆ. ಹೀಗೆ ಅಂಕಿತ ಸಾಧಿಸುವಲ್ಲಿ ಪ್ರಭುತ್ವದ ಪ್ರತಿನಿಧಿ ಮತ್ತು ಅಂಕಿತಕ್ಕೆ ಒಳಪಡುವ ವ್ಯಕ್ತಿಯ ಮಧ್ಯೆ ಅನ್ಯೋನ್ಯವಾದ ಒಂದು ಸಂಬಂಧವಿರುತ್ತದೆ. ಇದನ್ನು ತೀರಾ ಸಾಮಾನ್ಯಗೊಳಿಸಿದರೆ ಹೆಂಡತಿಯ ಮೇಲಿನ ಗಂಡನ ಪ್ರಭುತ್ವ, ಸೊಸೆಯ ಮೇಲಿನ ಅತ್ತೆಯ ಪ್ರಭುತ್ವ ಇಲ್ಲಿಯವರೆಗೂ ಪ್ರಭುತ್ವದ ವ್ಯಾಪ್ತಿಯನ್ನು ಹರಿಸಬಹುದಾಗಿದೆ."[೨] ಈ ಉಲ್ಲೇಖದಲ್ಲಿ ಹೇಳಿರುವಂತೆ ವೈದಿಕ ಧರ್ಮವನ್ನು ಬೆಳೆಸುವ ಬ್ರಾಹ್ಮಣರು ಮತ್ತು ಪುರೋಹಿತರು ಸಮಾಜದಲ್ಲಿ ಅಧಿಕಾರವನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳುವುದರ ಮೂಲಕ ಪ್ರಭುತ್ವವನ್ನು ಚಲಾಯಿಸುತ್ತಿದ್ದರು.

"ಪ್ರಭುತ್ವ ಎಂದರೆ ಸ್ಟೇಟ್(tate) ಎನ್ನುವುದೇ ನಿಚ್ಚಳ ಅರ್ಥ. ಸ್ಟೇಟ್ ಎಂದಾಗ ಅದರ ಕೈಯಲ್ಲಿ ಸೈನ್ಯಶಕ್ತಿ, ಪೊಲೀಸ್‌ಶಕ್ತಿ, ನ್ಯಾಯ ಅಥವಾ ಕಾಯ್ದೆ ಕಾನೂನಿನ ಶಕ್ತಿ ಹೀಗೆ ಒಟ್ಟಾರೆಯಾಗಿ ಸಂಪತ್ತನ್ನು ನಿಯಂತ್ರಣದಲ್ಲಿಡುವ ಶಕ್ತಿ ಪ್ರಾಪ್ತವಾಗುತ್ತದೆ. ಹೀಗೆ ಸ್ಟೇಟ್ ಸಂಪತ್ತನ್ನು ನಿಯಂತ್ರಿಸುವ ಶಕ್ತಿಯಾಗಿ ವ್ಯಕ್ತವಾಗುತ್ತದೆ ಎನ್ನುವುದನ್ನು ಗಮನಿಸಿದಾಗ ಸಂಪತ್ತಿನ ಹೆಚ್ಚಳವೇ ಈ ಶಕ್ತಿಯ ಅವಶ್ಯಕತೆಯಾಗಿದೆ ಎಂಬುದು ನಿಚ್ಚಳವಾಗಿ ತೋರುತ್ತದೆ."[೩] ಹೀಗೆ ವೈದಿಕ ಧರ್ಮವನ್ನು ಪೋಷಿಸುವ ಪುರೋಹಿತಶಾಹಿ ಮತ್ತು ಬ್ರಾಹ್ಮಣರು ಪ್ರಭುತ್ವದ ಸಂಪತ್ತನ್ನು ನಿಯಂತ್ರಿಸಲು ಮುಂದಾದರು. ಪ್ರಭುತ್ವವನ್ನು ನಿಯಂತ್ರಿಸುತ್ತಾ ವೈದಿಕ ಧರ್ಮ ವರ್ಗತಾರತಮ್ಯವನ್ನು ಸೃಷ್ಟಿಸಿತು. ಹಾಗಾಗಿ ಆಸ್ತಿ, ಸಂಪತ್ತು ಮತ್ತು ಅಧಿಕಾರಗಳು ಅಸಮಾನವಾಗಿ ಹಂಚಿಕೆ ಆಗಿರುವುದರಿಂದ ವರ್ಗತಾರತಮ್ಯಗಳು, ಜಾತಿ ತಾರತಮ್ಯಗಳು ಸಮಾಜದಲ್ಲಿ ಉಂಟಾಗಿವೆ. ಈ ವರ್ಗ ತಾರತಮ್ಯಗಳು ತಮ್ಮನ್ನು ಸೃಷ್ಟಿ ಮಾಡಿದ ಅಥವಾ ತಮ್ಮ ಹುಟ್ಟಿಗೆ ಕಾರಣವಾಗಿರುವ ಖಾಸಗಿ ಆಸ್ತಿ, ಖಾಸಗಿ ಸಂಪತ್ತು ಹಾಗೂ ಖಾಸಗಿ ಅಧಿಕಾರವನ್ನು ಕಾಯುತ್ತವೆ; ಪೋಷಿಸುತ್ತವೆ ಹಾಗೂ ಬೆಂಬಲಿಸುತ್ತವೆ. ಇವುಗಳ ಬೆಂಬಲದಲ್ಲೆ ಪ್ರಭುತ್ವದ ಯಂತ್ರಾಂಗ ನಡೆಯುತ್ತಿರುತ್ತದೆ. ಪ್ರಭುತ್ವದ ಯಂತ್ರಾಂಗದ ಸಹಾಯ ಮತ್ತು ರಕ್ಷಣೆಯನ್ನು

ಪಡೆದು ಮೇಲುವರ್ಗ ಮತ್ತು ಮೇಲುಜಾತಿಗಳು ಪ್ರಭುತ್ವವನ್ನು ರಕ್ಷಣೆ ಮಾಡುತ್ತವೆ. ಪ್ರಭುತ್ವವು ಮೇಲುವರ್ಗ ಮತ್ತು ಮೇಲುಜಾತಿಗಳ ಸಹಾಯ ಮತ್ತು ರಕ್ಷಣೆಯನ್ನು ಪಡೆದು ಮೇಲುವರ್ಗ ಮತ್ತು ಮೇಲುಜಾತಿಗಳ ಹಿತಗಳನ್ನು ಕಾಯುತ್ತದೆ ಹಾಗೂ ರಕ್ಷಣೆ ಮಾಡುತ್ತದೆ. ಹೀಗೆ ಒಂದು ಕಡೆ ಖಾಸಗಿ ಆಸ್ತಿಯ ಮಾಲೀಕರ ವರ್ಗ ಮತ್ತೊಂದು ಕಡೆ ಪ್ರಭುತ್ವ ಈ ಎರಡೂ ಕೂಡ ಪರಸ್ಪರ ಒಂದನ್ನೊಂದರ ರಕ್ಷಣೆ ಮಾಡಿ ಕಾಯುತ್ತವೆ. ಹಾಗಾಗಿ ಮೇಲುಜಾತಿಗಳು ಹಾಗೂ ಮೇಲುವರ್ಗಗಳು ಸಹಜವಾಗಿ ಪ್ರಭುತ್ವದ ಪರವಾಗಿ ಇರುತ್ತವೆ. ಇದಕ್ಕೆ ಪೂರಕ ಎಂಬಂತೆ ಪ್ರಭುತ್ವವು ಮೇಲುಜಾತಿಗಳು ಹಾಗೂ ಮೇಲುವರ್ಗಗಳ ಪರವಾಗಿ ಇರುತ್ತದೆ.

ಇತಿಹಾಸವನ್ನು ಗಮನಿಸಿದಾಗ ಒಬ್ಬ ರಾಜನ ಹಿಂದೆ ಧರ್ಮಗುರು, ಬ್ರಾಹ್ಮಣ, ಪಂಡಿತ ಅಥವಾ ಪುರೋಹಿತಶಾಹಿ ಇರುವುದನ್ನು ಕಾಣಬಹುದಾಗಿದೆ. ಈ ಬ್ರಾಹ್ಮಣ ಪುರೋಹಿತಶಾಹಿಗಳು ಹಾಕಿದ ನಿಯಮಗಳೇ ರಾಜನ ಮೂಲಕ ಬಂದು ಸಮಾಜದಲ್ಲಿ ರಾಜಾಜ್ಞೆಗಳಾಗಿರುವುದನ್ನು ನೋಡಬಹುದಾಗಿದೆ. ಈ ಮೂಲಕ ರಾಜಪ್ರಭುತ್ವ ಮತ್ತು ಮತ–ಧರ್ಮದ ಪ್ರಭುತ್ವ ಎರಡೂ ಸೇರಿಕೊಂಡು ಜನಸಾಮಾನ್ಯರನ್ನು ಶೋಷಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಪ್ರಾಚೀನ ಕಾಲದಲ್ಲಿನ ರಾಜಪ್ರಭುತ್ವದ ಮೂಲಕ ವೈದಿಕ ಧರ್ಮವನ್ನು ಪೋಷಿಸುವ ಪುರೋಹಿತಶಾಹಿ ಮತಧರ್ಮಗಳ ನಿಯಮಗಳನ್ನು ಜನರ ಮೇಲೆ ಹೇರಿತು. ರಾಜಪ್ರಭುತ್ವ ಮತ್ತು ಮತ–ಧರ್ಮ ಪ್ರಭುತ್ವಗಳು ಸಾಮಾನ್ಯ ಜನತೆಯನ್ನು ಪಶುಪ್ರಾಣಿಗಳಂತೆ, ಗುಲಾಮರಂತೆ ಮತ್ತು ಅಸಹಾಯಕರಂತೆ ಕಂಡಿತು. ಈ ಪ್ರಭುತ್ವಕ್ಕೆ ಅನಿವಾರ್ಯವಾಗಿ ತಲೆಬಾಗಿದವರೇ ಬಹಳಷ್ಟು ಜನರು ಕಾಣಬಹುದು. ಭಯ–ಭಕ್ತಿಯೆಂಬ ಆಯುಧಗಳಿಂದ ಸಾಮಾನ್ಯ ಜನರನ್ನು ನಿಯಂತ್ರಿಣದಲ್ಲಿಟ್ಟಿತು. ರಾಜ ಪ್ರಭುತ್ವದಿಂದ ಆರ್ಥಿಕ ಅಸಮಾನತೆ ಉಂಟಾದರೆ; ವೈದಿಕ ಸಂಪ್ರದಾಯವಾದಿಗಳು ಹುಟ್ಟುಹಾಕಿದ ಮತ–ಧರ್ಮಗಳ ಪ್ರಭುತ್ವ ಹೆಚ್ಚು ಅಪಾಯಕಾರಿಯಾದುದು. ರಾಜ ಸತ್ತ ನಂತರ ರಾಜಪ್ರಭುತ್ವ ಕೊನೆಗೊಳ್ಳಬಹುದು. ಆದರೆ ಶತಮಾನಗಳಿಂದ ನಡೆಸಿರುವ ಚಾತುರ್ವರ್ಣ ಪದ್ಧತಿ, ಸಾಮಾಜಿಕ–ಸಾಂಸ್ಕೃತಿಕ ಅಸಮಾನತೆಗಳ ಪ್ರಭುತ್ವ ಹೆಚ್ಚು ವಿಷಕಾರಿಯಾದುದು. ಆದ್ದರಿಂದಲೇ ಪ್ರಾಚೀನ ಕನ್ನಡ ಸಾಹಿತ್ಯ, ಮಧ್ಯಕಾಲಿನ ವಚನ ಚಳುವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯವು ಮತ–ಧರ್ಮಗಳ ಮೂಲಕ ನಡೆಯುವ ಪ್ರಭುತ್ವದ ವಿರುದ್ಧ ಹೋರಾಟ ನಡೆಸಿದ್ದು.

ವೈದಿಕಶಾಹಿ ಪ್ರಾಚೀನ ಕಾಲದಲ್ಲಿ ರಾಜನ ಪ್ರಭುತ್ವದಲ್ಲಿ ಭಾಗಿಯಾಗಿ ತನ್ನ ಮೂಲಭೂತವಾದವನ್ನು ಬಿತ್ತಿತು. ಆಧುನಿಕ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ರಾಷ್ಟ್ರೀಯತೆಯ ಪ್ರಭುತ್ವದಲ್ಲಿ ಭಾಗಿಯಾಗಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಪ್ರಭುತ್ವದಲ್ಲಿ ತನ್ನ ಅಧಿಕಾರವನ್ನು ಕೆಳವರ್ಗದ ಜನರ ಮೇಲೆ ಚಲಾಯಿಸಿತು. ವೈದಿಕ ಧರ್ಮದ ಆಚರಣೆಗಳಾದ ಕರ್ಮಸಿದ್ಧಾಂತ, ಚಾತುರ್ವರ್ಣ ಸಿದ್ಧಾಂತ, ಯಜ್ಞಯಾಗಾದಿಗಳು ಮತ್ತು ವಿಗ್ರಹಾರಾಧನೆಗಳನ್ನು ಪ್ರಭುತ್ವದ ಮೂಲಕ ಸಮಾಜದಲ್ಲಿ ಹೇರಲಾಯಿತು ಮತ್ತು ಜನಸಾಮಾನ್ಯರಿಗೆ ಈ ಸಿದ್ಧಾಂತಗಳನ್ನು ನಂಬಿಸಲಾಯಿತು. ಹಾಗಾಗಿ ಈ ಪ್ರಭುತ್ವದಿಂದ ಸೃಷ್ಟಿಕೊಂಡ ವೈದಿಕ ಚಿಂತನೆಗಳು ಸರ್ವಶ್ರೇಷ್ಠವಾದದ್ದು

ಎನ್ನುವ ಭ್ರಮೆ ಹುಟ್ಟುಕೊಂಡಿತು. ಆದ್ದರಿಂದ ಶತಶತಮಾನಗಳಿಂದ ವೈದಿಕ ಧರ್ಮದ ಮೂಲಭೂತವಾದಗಳು ಪ್ರಭುತ್ವದ ಮೂಲಕ ಇನ್ನೂ ಜೀವಂತವಾಗಿ ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ವೈದಿಕ ಧರ್ಮದಲ್ಲಿ ಇದ್ದ ಜಾತೀಯತೆ, ಅಸ್ಪೃಶ್ಯತೆ, ಮೂಢನಂಬಿಕೆ, ಪುರೋಹಿತಶಾಹಿ ಯಾಜಮಾನ್ಯ, ಸಾಮಾಜಿಕ ದೌರ್ಜ್ಯನಗಳನ್ನು ಒಪ್ಪಿಕೊಂಡ ಪ್ರಭುತ್ವವನ್ನು ವಿರೋಧಿಸುವುದನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಈ ಅಧ್ಯಾಯದಲ್ಲಿ ಧಾರ್ಮಿಕ ಪ್ರಭುತ್ವ, ಸಾಮಾಜಿಕ ಪ್ರಭುತ್ವ ಮತ್ತು ಆರ್ಥಿಕ ಪ್ರಭುತ್ವ ಎಂಬ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಚರ್ಚಿಸಲಾಗಿದೆ. ವೈದಿಕ ಪ್ರಜ್ಞೆ ಹಾಗೂ ವೈದಿಕ ವಿರೋಧಿ ಪ್ರಜ್ಞೆಯನ್ನು ಪ್ರಭುತ್ವ ಹೇಗೆ ಗ್ರಹಿಸಿದೆ ಎಂಬುದನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

೬.೧. ಧಾರ್ಮಿಕ ಪ್ರಭುತ್ವ

ಧರ್ಮ-ಧರ್ಮಗುರು-ಪುರೋಹಿತಶಾಹಿ ವ್ಯವಸ್ಥೆಗಳು ಧಾರ್ಮಿಕ ಪ್ರಭುತ್ವದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಧಾರ್ಮಿಕ ಪ್ರಭುತ್ವದ ಮುಖ್ಯ ಉದ್ದೇಶ ಧರ್ಮವನ್ನು ಪ್ರಸರಿಸುವುದು. ಶ್ರೇಣಿಕರಣ ವ್ಯವಸ್ಥೆ, ದೇವಾಲಯ ಸಂಸ್ಕೃತಿ, ಆಚರಣೆ, ಮೂಢನಂಬಿಕೆ ಮತ್ತು ಮೂಲಭೂತವಾದಿತನಗಳನ್ನು ಪೋಷಿಸಿ ಬೆಳೆಸುವುದು ಧಾರ್ಮಿಕ ಪ್ರಭುತ್ವದ ಸ್ವರೂಪವಾಗಿದೆ. ಈ ಧಾರ್ಮಿಕ ಪ್ರಭುತ್ವಕ್ಕೆ ದೇವಸ್ಥಾನಗಳೇ ಕೇಂದ್ರಬಿಂದುವಾಗಿದ್ದವು. ಧರ್ಮ-ಸಂಸ್ಕೃತಿಯ ಹೆಸರಿನಲ್ಲಿ ಅನೇಕ ರೀತಿಯ ಅತ್ಯಾಚಾರಗಳಿಗೆ ಈ ದೇವಸ್ಥಾನಗಳು ಮೂಲವಾಗಿದ್ದವು. ಕಪಟ ಸನ್ಯಾಸಿಗಳ ವಾಸಸ್ಥಾನವಾಗಿ, ಪಂಡಿತರು-ಪೂಜಾರಿಗಳು ಗೌಪ್ಯ ಸ್ಥಾನಗಳಾಗಿ ಮಾಡಿಕೊಂಡು. ಧಾರ್ಮಿಕ ಪ್ರಭುತ್ವ ಬೆಳೆಸಲು ದೇವಸ್ಥಾನಗಳನ್ನು ಶಕ್ತಿಕೇಂದ್ರಗಳನ್ನಾಗಿ ಪುರೋಹಿತಶಾಹಿ ಮಾಡಿತು. ಹಾಗಾಗಿ ವೈದಿಕ ಧರ್ಮವು ರಾಜಪ್ರಭುತ್ವದ ಜೊತೆ ಸೇರಿ ತನ್ನ ಧರ್ಮದಲ್ಲಿನ ವರ್ಣಾಶ್ರಮ ವ್ಯವಸ್ಥೆ ಮತ್ತು ಯಜ್ಞಯಾಗಾದಿಗಳನ್ನು ಜನತೆಯ ಮೇಲೆ ಹೇರುವ ಕೆಲಸವನ್ನು ಮಾಡಿತು. ರಾಜಪ್ರಭುತ್ವವನ್ನು ಧಾರ್ಮಿಕವಾಗಿ ಪುರೋಹಿತಶಾಹಿ ಹಿಡಿತದಲ್ಲಿ ಇಟ್ಟುಕೊಂಡಿತು. ಭಕ್ತಿ-ಭಯ, ನಂಬಿಕೆ, ಆತ್ಮ, ಕರ್ಮ, ದೈವ ಮತ್ತು ಪ್ರಾಣಿಬಲಿಗಳನ್ನು ದೇವರ ಹೆಸರಿನಲ್ಲಿ ಧಾರ್ಮಿಕ ಪ್ರಭುತ್ವ ಹಲವಾರು ಆಚರಣೆಗಳನ್ನು ತಂದಿತು.

ಜನರ ಮನಸ್ಸಿನ ಮೇಲೆ ಪಾಪ-ಪುಣ್ಯ, ಸ್ವರ್ಗ-ನರಕ, ದೈವ, ಜನ್ಮಜನ್ಮಾಂತರ, ಕರ್ಮ-ಪ್ರಾರಬ್ಧ ಎಂಬ ಅಮೂರ್ತವಾದ ಭಯವನ್ನು ಧರ್ಮ ಪ್ರಭುತ್ವ ಹುಟ್ಟಿಸಿತು. ಈ ಭಯವನ್ನು ಶಾಸ್ತ್ರ, ಪುರಾಣ ಮತ್ತು ಸಾಹಿತ್ಯದ ಮೂಲಕ ಪ್ರತಿಷ್ಠಾಪಿಸಿತು. ಆದ್ದರಿಂದ ಪ್ರಭುತ್ವವನ್ನು ನಿಯಂತ್ರಿಸುವ ಶಕ್ತಿ ಮತ್ತು ಪ್ರಬಲವಾದ ಶಕ್ತಿಯನ್ನು ಧರ್ಮ ಪಡೆದುಕೊಂಡಿತು. ಹಾಗಾಗಿ ಪ್ರಾಚೀನ ಕಾಲದಲ್ಲಿ ವೈದಿಕ ಧರ್ಮವು ಧಾರ್ಮಿಕ ಪ್ರಭುತ್ವದ ಮೂಲಕ ಅಮಾನವೀಯ ಆಚರಣೆಗಳನ್ನು ತರಲು ಮುಂದಾಗಿದೆ. ದೇವರು-ಧರ್ಮದ ಹೆಸರಿನಲ್ಲಿ ಮುಗ್ಧ ಮಹಿಳೆಯರನ್ನು 'ಸೂಳೆ', 'ಬಸವಿ' ಮತ್ತು

'ದೇವದಾಸಿ'ಯರಾಗಿ ಶೋಷಣೆ ಮಾಡಲಾಯಿತು. ಧಾರ್ಮಿಕ ನ್ಯಾಯ ಪದ್ಧತಿಯ ಮೂಲಕ ಕೆಳವರ್ಗದವರು, ದುಡಿಯುವ ವರ್ಗ, ಶೂದ್ರರು, ದಲಿತರು ಮತ್ತು ಮಹಿಳೆಯರಿಗೆ ಅಮಾನವೀಯ ಆಚರಣೆಗಳನ್ನು ತರಲಾಯಿತು. ಆದ್ದರಿಂದ ವೈದಿಕ ಧರ್ಮದ ಧಾರ್ಮಿಕ ಪ್ರಭುತ್ವವನ್ನು ಬೌದ್ಧ, ಜೈನ ಮತ್ತು ಚಾರ್ವಾಕ ಪಂಥಗಳು ವಿರೋಧಿಸಿದವು. ಆಧುನಿಕ ಸಂದರ್ಭದಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆಗಳ ಮೂಲಕ ವೈದಿಕ ಧರ್ಮವನ್ನು ವಿರೋಧಿಸಲಾಯಿತು. ಈ ಅಧ್ಯಾಯದಲ್ಲಿ ಧಾರ್ಮಿಕ ಪ್ರಭುತ್ವವು ದೇವಾಲಯ, ಧರ್ಮಗ್ರಂಥಗಳು ಮತ್ತು ಪುರೋಹಿತಶಾಹಿಯನ್ನು ಬಳಸಿಕೊಂಡು ಮಾಡಿರುವ ಹುನ್ನಾರಗಳನ್ನು ಗುರುತಿಸುವುದು ಮತ್ತು ಧಾರ್ಮಿಕ ಪ್ರಭುತ್ವವನ್ನು ವಿರೋಧಿಸುವ ನೆಲೆಗಳನ್ನು ಕುರಿತು ಚರ್ಚಿಸಲಾಗುವುದು.

೬.೧.೧. ದೇವಾಲಯ

ವೈದಿಕ ಧರ್ಮದ ಬೆಳವಣಿಗೆಗೆ ದೇವಾಲಯಗಳ ಪಾತ್ರ ಮುಖ್ಯವಾದದ್ದು. ವೈದಿಕ ಧರ್ಮ ಸಮಾಜದಲ್ಲಿ ಪ್ರಭುತ್ವವನ್ನು ಸ್ಥಾಪಿಸಲು ದೇವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿತು. ಈ ದೇವಾಲಯಗಳು ಪುರೋಹಿತಶಾಹಿಗಳ ಸ್ವತ್ತಾಗಿದ್ದವು. ಪ್ರಭುತ್ವವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದು ಮತ್ತು ಪ್ರಭುತ್ವವನ್ನು ಚಲಾಯಿಸುವ ಕೇಂದ್ರವಾಗಿ ದೇವಾಲಯಗಳು ಬೆಳೆದವು. ದೇವಾಲಯಗಳು ಜನಸಾಮಾನ್ಯರಲ್ಲಿ ಭಕ್ತಿ–ಭಯವನ್ನು ಸೃಷ್ಟಿ ಮಾಡಿದವು. ದೇವರ ಹೆಸರಿನಲ್ಲಿ ಪುರೋಹಿತಶಾಹಿ ರಾಜಪ್ರಭುತ್ವವನ್ನು ಯಜ್ಞಯಾಗಾದಿ, ಪೂಜೆ ಮತ್ತು ವ್ರತಗಳಿಂದ ನಿಯಂತ್ರಿಸುತ್ತಾ ತನ್ನ ಅಧೀನದಲ್ಲಿ ಇಟ್ಟುಕೊಂಡಿತು. ಆದ್ದರಿಂದಲೆ ವೈದಿಕ ಧರ್ಮವು ಪ್ರಭುತ್ವವನ್ನು ನಿಯಂತ್ರಿಸುವ ಒಂದು ಶಕ್ತಿಯಾಗಿ ಬೆಳೆಯಿತು. ಹಾಗೂ ವೈದಿಕ ಧರ್ಮದ ದೇವಸ್ಥಾನಗಳು ಸುಲಿಗೆ ಕೇಂದ್ರಗಳು ಮತ್ತು ಶೋಷಣೆಯ ಕೇಂದ್ರಗಳು ಆಗಿದ್ದವು. ದೇವಾಲಯಗಳು ಗ್ರಾಮೀಣ ಆಡಳಿತದಲ್ಲಿ ಉನ್ನತ ನ್ಯಾಯಾಲಯಗಳಂತೆ ವರ್ತಿಸುತ್ತಿದ್ದವು. ದೇವಾಲಯಗಳು ಮಹಿಳೆಯರನ್ನು ಸಂಗೀತ ಮತ್ತು ನೃತ್ಯದ ಹೆಸರಿನಲ್ಲಿ ಶೋಷಿಸುವ ಕೇಂದ್ರಗಳಾಗಿದ್ದವು. ಹಾಗೆಯೇ ಜಮೀನುದಾರರಂತೆ ಕಾರ್ಯ ನಿರ್ವಹಿಸುತ್ತಿದ್ದವು. ಒಟ್ಟಿನಲ್ಲಿ ದೇವಾಲಯಗಳು ಸಮಾಜದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸುವುದರ ಮೂಲಕ ಮೂಢನಂಬಿಕೆ, ಅಸ್ಪೃಶ್ಯತೆ, ಜಾತೀಯತೆ, ಅಸಮಾನತೆ, ದಬ್ಬಾಳಿಕೆ, ಶೋಷಣೆ ಮತ್ತು ಮೂಲಭೂತವಾದಗಳನ್ನು ಸಮಾಜದಲ್ಲಿ ಬೆಳೆಸಿದವು. ಆದರೆ ಪ್ರಾಚೀನ ಕಾಲದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳು ವೈದಿಕ ಧರ್ಮದ ದೇವರು ಮತ್ತು ದೇವಾಲಯಗಳನ್ನು ವಿರೋಧಿಸಿದವು. ೧೨ನೇ ಶತಮಾನದ ವಚನ ಚಳುವಳಿಯ ಮೂಲಕ ಬಸವಣ್ಣ ಮುಂತಾದ ವಚನಕಾರರು ದೇವಸ್ಥಾನಗಳನ್ನು ವಿರೋಧಿಸಿ ದೇಹವೇ ದೇಗುಲ ಎಂದು ಹೇಳುವುದರ ಮೂಲಕ ವೈದಿಕಶಾಹಿಯ ಧಾರ್ಮಿಕ ಪ್ರಭುತ್ವದ ವಿರುದ್ಧ ಬಂಡಾಯವೆದ್ದರು.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದ ಲೇಖಕರು ವೈದಿಕ ಧರ್ಮದ ಶೋಷಣೆಯ ಕೇಂದ್ರವಾದ ದೇವಸ್ಥಾನಗಳ ಪ್ರಭುತ್ವವನ್ನು ತಮ್ಮ ಕಾವ್ಯ, ಕತೆ, ಕಾದಂಬರಿ ಮತ್ತು ವಿಮರ್ಶೆ ಲೇಖನಗಳಲ್ಲಿ ಟೀಕಿಸಿದರು ಮತ್ತು ವಿರೋದಿಸಿದರು. ಶತಮಾನಗಳಿಂದ ಧಾರ್ಮಿಕ ಪ್ರಭುತ್ವವನ್ನು

ಪಸರಿಸುವ ಮತ್ತು ಶೋಷಣೆಯ ಕೇಂದ್ರ ಬಿಂದುವಾದ ದೇವಸ್ಥಾನಗಳನ್ನು ವಿರೋಧಿಸಿ ವೈಜ್ಞಾನಿಕ ಚಿಂತನೆಗಳನ್ನು ಬೆಳೆಸಲು ಮುಂದಾದದ್ದನ್ನು ಕಾಣಬಹುದಾಗಿದೆ. ಕುವೆಂಪು ಅವರು ದೇವಾಲಯಗಳ ಸಂಸ್ಕೃತಿಯನ್ನು 'ಓ, ಬನ್ನಿ, ಸೋದರರೆ, ಬೇಗ ಬನ್ನಿ!' ಕವನದಲ್ಲಿ ಈ ರೀತಿ ವಿರೋಧಿಸುತ್ತಾರೆ.

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ.
ಓ, ಬನ್ನಿ, ಸೋದರರೆ, ಬೇಗ ಬನ್ನಿ![೪]

ಮೌಢ್ಯತೆ ಮತ್ತು ಬಡತನವನ್ನು ಸೃಷ್ಟಿಸುವ ದೇವಾಲಯಗಳ ಸಂಸ್ಕೃತಿಯನ್ನು ಈ ಕವಿತೆ ವಿರೋಧಿಸುತ್ತದೆ. ಈ ವೈದಿಕ ಧರ್ಮ ದೇವಾಲಯಗಳ ಮೂಲಕ ಸೃಷ್ಟಿಸಿದ ಪ್ರಭುತ್ವದಿಂದ ಹೊರಬನ್ನಿ ಎಂದು ಕುವೆಂಪು ಕರೆ ಕೊಡುವುದನ್ನು ಈ ಪದ್ಯದಲ್ಲಿ ಗುರುತಿಸಬಹುದು. ವೈದಿಕ ಧರ್ಮ ಸ್ಥಾಪಿಸಿದ ದೇವಾಲಯಗಳ ಪ್ರಭುತ್ವವನ್ನು ಕುವೆಂಪು ವಿರೋಧಿಸುತ್ತಾರೆ. 'ಮೌಢ್ಯತೆಯ ಮಾರಿಯನ್ನು ಹೊರದೂಡಬನ್ನಿ ವಿಜ್ಞಾನ ದೀವಿಗೆಯ ಹಿಡಿಯಬನ್ನಿ!' ಎಂಬ ಸಾಲಿನಲ್ಲಿ ಧಾರ್ಮಿಕ ಪ್ರಭುತ್ವದ ಮೂಲಕ ಪುರೋಹಿತಶಾಹಿ ಮೌಢ್ಯತೆಯನ್ನು ಸೃಷ್ಟಿಸಿತು. ಈ ಮೌಢ್ಯತೆಗಳನ್ನು ಪಸರಿಸಲು ದೇವಾಲಯಗಳು ಕೇಂದ್ರ ಬಿಂದುವಾದವು. ಆದ್ದರಿಂದ ದೇವಾಲಯಗಳ ಪ್ರಭುತ್ವದಿಂದ ಹೊರಬನ್ನಿ ಎಂದು ಕುವೆಂಪು ಕರೆ ಕೊಟ್ಟರು. ದೇವಾಲಯಗಳ ಪ್ರಭುತ್ವವನ್ನು ವಿರೋಧಿಸಲು ವಿಜ್ಞಾನ ದೀವಿಗೆ ಹಿಡಿಯಬೇಕು. ವೈದಿಕ ಧರ್ಮದ ಪ್ರಭುತ್ವವನ್ನು ವಿಚಾರವಂತಿಕೆ ಮತ್ತು ವೈಚಾರಿಕತೆಯ ಮೂಲಕ ವಿರೋಧಿಸಬೇಕು ಎಂದು ಕರೆ ಕೊಡುತ್ತಾರೆ.

ಕುವೆಂಪು ಅವರ "ಜಲಗಾರ" ನಾಟಕವು ದೇವಾಲಯಗಳನ್ನು ನಿರಾಕರಿಸುವ ವಸ್ತುವನ್ನು ಹೊಂದಿದೆ. ಗುಡಿಯಲ್ಲಿ ದೇವರು ಇಲ್ಲ ಎಂಬ ಸಂದೇಶವನ್ನು ಸಾರುತ್ತದೆ. ವೈದಿಕಶಾಹಿ ತನ್ನ ಪ್ರಭುತ್ವದ ಮೂಲಕ ದೇವಾಲಯಗಳನ್ನು ಸ್ಥಾಪಿಸಿ ಪೂಜೆ, ಭಕ್ತಿ, ಜಾತ್ರೆ, ಮಂತ್ರ, ಯಜ್ಞಗಳನ್ನು ಸೃಷ್ಟಿಸಿತು. ಮೂರ್ತಿಯ ರೂಪದಲ್ಲಿ ದೇವರನ್ನು ಸ್ಥಾಪಿಸಿ ದೇವರನ್ನು ದೇವಾಲಯಗಳಲ್ಲಿ ಬಂಧಿಸಲಾಯಿತು. ಹಾಗಾಗಿ ವೈದಿಕ ಧರ್ಮ ತನ್ನ ಪ್ರಭುತ್ವದ ಮೂಲಕ ಸಮಾಜದಲ್ಲಿ ದೇವಾಲಯಗಳ ಬಗ್ಗೆ ಆಸೆ, ಭಕ್ತಿ ಮತ್ತು ಭಯಗಳನ್ನು ಪಾಲಿಸುವಂತೆ ಮಾಡಿತು. ವಂಚನೆಯ ಮೂಲಕ ಪುರೋಹಿತಶಾಹಿ ತನ್ನ ಯಾಜಮಾನ್ಯವನ್ನು ಜನಸಾಮಾನ್ಯರ ಮೇಲೆ ಹೇರಲಾಯಿತು. ಆದ್ದರಿಂದ ಕುವೆಂಪು ಅವರು "ಜಲಗಾರ" ನಾಟಕದಲ್ಲಿ ಬರುವ ರೈತ ಮತ್ತು ಜಲಗಾರನ ಸಂಭಾಷಣೆಯಲ್ಲಿ ಜಲಗಾರ ದೇವಾಲಯಕ್ಕೆ ಬರುವುದನ್ನು ನಿರಾಕರಿಸುತ್ತಾನೆ.

ರೈತ

ಓಹೊ ನೀನರಿಯೆಯಾ? ಇಂದು ನಮ್ಮೂರ
ಶಿವಗುಡಿಯ ಜಾತ್ರೆ! ಬರುವುದಿಲ್ಲವೆ ನೀನು?
ತೇರೆಳೆಯಲೆಂದನಿಬರೂ ಬರುತಿಹರು.

ಜಲಗಾರ

ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು
ದೇಗುಲದ ಬಳಿಗೆನ್ನ ಸೇರಿಸರು.

ರೈತ

ದೂರದಲ್ಲಿಯೆ ನಿಂತು ಕೈಮುಗಿದು ಬಾ.

ಜಲಗಾರ

ಕರ್ಮಾವಾರಾಧನೆ, ಸೇವೆಯೇ ಪೂಜೆ,
ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೆ
ನನ್ನ ದೇವರು ಪೂಜೆ! ನಿನ್ನೆ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿದು ನೂಕಿದರು.
ಶಿವಗುಡಿಯ ಶಿವನು ಜೋಯಿಸರ ಶಿವನಂತೆ!
ನನ್ನ ಶಿವನು ಮಣ್ಣಿನಲ್ಲಿಹನು. ನನ್ನ ಶಿವ
ಕೊಳೆತ ಕಸದೊಳಗಿಹನು. ಕಪ್ಪುರದೊಳಿಲ್ಲ:
ಮಂಗಳಾರತಿಯೊಳಿಲ್ಲ: ಹೂವುಗಳಲಿಲ್ಲ.
ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.
ನನ್ನೆದೆಯೆ ದೇಗುಲ; ನನ್ನೊಲ್ಮೆಯದೆ ಪೂಜೆ.
ನಾನೆಲ್ಲಿ ಭಕ್ತಿಯಿಂ ಕೈಮುಗಿವೆನೋ ಅಲ್ಲಿ
ತಾನಿಹನು. ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು. ಶಿವಗುಡಿಯದೆನಗೇಕೆ?
ನೀನೇನು ಶಿವಗುಡಿಗೆ ತೆರಳುತಿಹೆಯಾ?"

ಜಲಗಾರ ರೈತನಿಗೆ ಹೇಳುತ್ತಾನೆ, ಗುಡಿಯಲ್ಲಿ ದೇವರು ಇಲ್ಲ ಎಂದು. ನನ್ನ ಎದೆಯೇ ದೇಗುಲ. ನೀನು ಮಾಡುವ ಕೆಲಸದಲ್ಲಿ ದೇವರು ಇದ್ದಾನೆ ಎಂದು ಹೇಳುತ್ತಾನೆ. ದೇವಾಲಯದಲ್ಲಿ ಮಾಡುವ ಪೂಜೆಯು ವಂಚನೆಯಿಂದ ಕೂಡಿದೆ, ಕಸ ಗುಡಿಸುವುದೇ ನನ್ನ ದೇವರ ಪೂಜೆ ಎಂದು ಜಲಗಾರ ಹೇಳುತ್ತಾನೆ. ಕುವೆಂಪು ಅವರು ಪುರೋಹಿತಶಾಹಿಯ ದೇವಾಲಯಗಳನ್ನು ವಿರೋಧಿಸಿ ಪ್ರಕೃತಿಯೇ ದೇವಾಲಯ ಎಂಬುದನ್ನು ಈ ರೀತಿ ಹೇಳುತ್ತಾರೆ.

ಭೂಮಿಯಲಿ ಹುಟ್ಟುಕುರುಡರಿಗಿಂತ ಕಣ್ಣುಳ್ಳ
ಕುರುಡರೆನಿತೊಳರು? ಬನದ ಕೆಂದಳಿರಲ್ಲಿ
ಬಗ್ಗಿಸುವ ಕೋಗಿಲೆಯೆ, ನಿನ್ನ ಪಿಗಳಿಂಚರದಿ
ಪರಮವಾಣಿಯ ಕೇಳದವಗೆ ಕಿವಿಯಿದ್ದರೇಂ?
ಎಲೆ ರಮ್ಯವನಗಳಿರ, ನಿಮ್ಮ ಸೌಂದರ್ಯದಲಿ
ಪರಮಾತ್ಮನಂ ಕಾಣದವಗಿದ್ದರೇಂ ಕಣ್ಣೆರಡು?
ಕಾಣದವನಂತು ಕಾಣ್ಣನು ಶಿವನ. ಗುಡಿಯಲ್ಲಿ?
ತಣ್ಣದಿರ ಬೆಂಗದಿರನರಿಲುಗಳೆ ಸೊಡರುಗಳು.
ಸುಮಮಾಲೆ ಅಲರುಗಳ ಚಲ್ಲುತಿರುವಡವಿಗಳು.
ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ.
ಬಿತ್ತರದ ಬಾಂದಳವೆ ಗೋಪುರಂ! ಹೊಳೆಗಳಲಿ
ಹರಿವ ಸಲಿಲವೆ ತೀರ್ಥ; ಸುಮಗಂಧವೇ ಧೂಪ.
ಹಕ್ಕಿಯಿಂಚರವೆ ಸುಸ್ವರಮೇಳ! ಎದೆಯೊಲವೆ
ವರ ಧರ್ಮಶಾಸ್ತ್ರ. ಭಕ್ತಿಯೆ ದಿವ್ಯಾತ್ಮ ಯಜ್ಞ,
ಎದೆಯ ಮಣೆಯೇ ಯಜ್ಞಶಾಲೆ!
ನಲ್ವಾತುಗಳೆ ಮಂತ್ರಘೋಷ; ನೀತಿಯೆ
ಪರಮ ವೇದ. ತಿರೆಗಿಂತ ದೇಗುಲವದೊಳದೇನ್?[೬]

ಪ್ರಭುತ್ವದ ಮೂಲಕ ಸ್ಥಾಪಿಸಿಕೊಂಡ ವೈದಿಕ ಯಜಮಾನಿಕೆಯನ್ನು ಮತ್ತು ಪುರೋಹಿತಶಾಹಿ ದೇವಾಲಯಗಳ ಮೂಲಕ ಮಾಡುತ್ತಿರುವ ವಂಚನೆಗಳನ್ನು ಕುವೆಂಪು ಅವರು "ಜಲಗಾರ" ನಾಟಕದ ಮೂಲಕ ದೇವಾಲಯಗಳ ಸಂಸ್ಕೃತಿಯನ್ನು ವಿರೋಧಿಸುತ್ತಾರೆ. ವಿಡಂಬನೆ ಮಾಡುತ್ತಾರೆ. ದೇವಾಲಗಳಲ್ಲಿ ಪುರೋಹಿತರ ಸುಲಿಗೆಗೆ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯೆ

ದೇಗುಲವಾಗಲಿ; ಹೊರಗಿನ ಸುಂದರ ಪ್ರಕೃತಿಮಯ ಜಗತ್ತೂ ಅಂತರಂಗದ ದಿವ್ಯ ಪ್ರಪಂಚ, ಮಹಾಪುರುಷರ ಕೃತಿಗಳಲ್ಲಿ ಇರುವ ಮಹದಾಲೋಚನೆಗಳು ನಮಗೆ ದೇವಸ್ಥಾನವಾಗಲಿ ಎಂದು ಕುವೆಂಪು ಹೇಳುತ್ತಾರೆ. ನಾಟಕದ ಕೊನೆಯ ಭಾಗದಲ್ಲಿ, ಚರಂಡಿಗಳನ್ನು ಸ್ವಚ್ಛ ಮಾಡುವ ಜಾಡಮಾಲಿಗೂ ಮತ್ತು ಶಿವನಿಗೂ ಸಂಭಾಷಣೆ ನಡೆಯುತ್ತದೆ. ಅದು ಈ ರೀತಿ ಇದೆ.

"ಶಿವ: ಅಂಜದಿರು, ಸೋದರನೆ ಅಂಜದಿರು, ನಾ ನಿನ್ನ ಬಂಧು!

ಜಲಗಾರ: ಏನು? ನೀನೆನ್ನ ಬಂಧು? ನಾನರಿಯದಿಹ ಬಂಧು!

ಶಿವ: ನಾ ನಿನ್ನ ಜಾತಿ!

ಜಲಗಾರ: ನೀನೆನ್ನ ಜಾತಿ? ಊರ ಜಲಗಾರ ನೀನು!

ಶಿವ: ನಾನೊಬ್ಬ ಜಲಗಾರ. ಅಂಜದಿರು, ಸೋದರನೆ! ಜಗದ ಜಲಗಾರ ನಾನು! ಶಿವನೆಂದು ಕರೆಯುವರು ಎನ್ನ! ಚಣಚಣಕು ಜಗದ ಪಾಪವ ನುಂಗುವನು ನಾನು! ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ! ಉಳುತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ. ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ ಅಲ್ಲಿ ನಾನವನ ಪಕ್ಕದೊಳಿರುವೆ. ಊರ ತೋಟಿಯು ನೀನು; ಜಗದ ತೋಟಿಯು ನಾನು! ಬಾ ಎನ್ನ ಸೋದರನೆ, ನೀನೆನ್ನ ನಿಜಭಕ್ತ! ನಿನ್ನದೇ ಶಿವಭಕ್ತಿ! ನೀನೇ ಶಿವಭಕ್ತ! ನೀನೇ ನಾನಾಗಿಹೆನು! ನಾನೇ ನೀನಾಗಿಹೆನು! ಶಿವ ನೀನು! ಶಿವ ನೀನು!"

ಇಲ್ಲಿಗೆ ನಾಟಕ ಮುಗಿಯುತ್ತದೆ. ಇದು ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿರುವ ಆಲೋಚನೆಗಳನ್ನು, ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಲು ಒಂದು ಸಣ್ಣ ಪ್ರವೇಶಿಕೆ. ಕುವೆಂಪು ಅವರ ಮುಂದಿನ ಎಲ್ಲಾ ಸಾಹಿತ್ಯದಲ್ಲಿ ಈ ಮನೋಧರ್ಮವನ್ನು ನಾವು ಕಾಣುತ್ತೇವೆ. ಪ್ರಸ್ತುತ ನಾಟಕದಲ್ಲಿ ಒಂದು ಕಡೆ ಶಿವ ಇದ್ದಾನೆ. ಮತ್ತೊಂದು ಕಡೆ ತೋಟಿ ಇದ್ದಾನೆ. ಶಿವ ಹೇಳಿಕೇಳಿ ದೇವರು. ತೋಟಿ ಸಮಾಜದ ಅತ್ಯಂತ ಕೆಳಸ್ತರದವನು. ಕೊಳಕನ್ನು ತೆಗೆದು ಸ್ವಚ್ಛ ಮಾಡುವವನು. ಇಂತಹ ತೋಟಿಯನ್ನು ಭಾರತೀಯ ಜಾತಿ ಅಸಮಾನತೆಯ ಸಮಾಜವು ಬಹಳ ಕೆಟ್ಟದ್ದಾಗಿ ನಡೆಸಿಕೊಂಡಿದೆ. ಅವರನ್ನು ಅಸ್ಪೃಶ್ಯವಾಗಿ ಕಂಡಿದೆ. ಅವರಿಗೆ ಶಿವನ ಗುಡಿಗೆ ಪ್ರವೇಶ ಕೊಟ್ಟಿಲ್ಲ. ಇಷ್ಟೊಂದು ಅಸಮಾನತೆಯನ್ನು ಕಾಯ್ದುಕೊಂಡಿರುವ ಭಾರತದ ಅಸ್ಪೃಶ್ಯತೆಯ ಪ್ರಶ್ನೆಯನ್ನು ಕುವೆಂಪು ಅವರು ಈ ನಾಟಕದಲ್ಲಿ ಕೇಂದ್ರ ಚರ್ಚೆಗೆ ತಂದಿದ್ದಾರೆ. ಜೊತೆಗೆ ಶಿವನನ್ನೇ ಜಾಡಮಾಲಿಯನ್ನಾಗಿಯೂ; ಜಾಡಮಾಲಿಯನ್ನು ಶಿವನನ್ನಾಗಿಯೂ ಪರಿವರ್ತಿಸಿದ್ದಾರೆ. ಸಾಹಿತ್ಯದಲ್ಲಿ ಇದು ಬಹಳ ಮಹತ್ವದ ಪ್ರಯೋಗ. ವೈದಿಕ ಧರ್ಮ ಹಾಗೂ ಅದರ ಆಚರಣೆಗಳು ಜಾಡಮಾಲಿಗಳನ್ನು ಅಸ್ಪೃಶ್ಯರನ್ನಾಗಿ ದೇವಸ್ಥಾನಗಳ ಒಳಗೆ ಸೇರಿಸುತ್ತಿರಲಿಲ್ಲ. ಅವುಗಳು ಈ ವಿಷಯದಲ್ಲಿ ಅಸ್ಪೃಶ್ಯತೆ ಆಚರಿಸುತ್ತಿದ್ದವು. ಇದನ್ನು ವಿರೋಧಿಸುವ ಸಲುವಾಗಿ, ಅಂದರೆ ವೈದಿಕ ವಿರೋಧಿ ಪ್ರಜ್ಞೆಯ ಭಾಗವಾಗಿ ಈ ನಾಟಕದಲ್ಲಿ ನಮಗೆ ಜಲಗಾರ ಕಾಣಿಸುತ್ತಾನೆ. ಆ ವಿರೋಧ ಎಲ್ಲಿಯವರೆಗೆ ಹೋಗುತ್ತದೆ ಎಂದರೆ, ಜಲಗಾರನೇ ಶಿವನಾಗುವ, ಶಿವನೇ

ಜಲಗಾರನಾಗುವ ಸ್ವರೂಪಕ್ಕೂ ಹೋಗುತ್ತದೆ. ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ವೈದಿಕ ವಿರೋಧಿ ಪ್ರಜ್ಞೆಯನ್ನು ಸೃಷ್ಟಿಸುವ ವಿಧಾನ ಈ ರೀತಿಯದ್ದು.

ಪ್ರಾಚೀನ ಕಾಲದಲ್ಲಿ ದೇವಾಲಯಗಳು ಸಂಪತ್ತಿನ ಕೇಂದ್ರಗಳಾಗಿದ್ದವು. ಆದ್ದರಿಂದ ಬ್ರಾಹ್ಮಣ ಧರ್ಮದೊಳಗೆ ಹಲವಾರು ಅವೈದಿಕ ದೇವಾಲಯಗಳು ಸೇರಿಕೊಂಡವು. ಆದಿಶಕ್ತಿ, ಕಾಳಿ, ದುರ್ಗಿ ಮೊದಲಾದ ಗ್ರಾಮದೇವತೆಗಳೂ ಪರಿಷ್ಕೃತ ರೂಪವನ್ನು ಪಡೆದು ಗೌರಿ, ಆದಿಶಕ್ತಿ, ಶಾರದೆ ಎಂಬ ಮುಂತಾದ ಹೆಸರುಗಳಿಂದ ವೈದಿಕ ಧರ್ಮ ಕರೆಯತೊಡಗಿತು. ಹಾಗಾಗಿ ರಾಜಪ್ರಭುತ್ವದ ಜೊತೆ ಪುರೋಹಿತಶಾಹಿ ಸೇರಿಕೊಂಡು ಅವೈದಿಕ ದೇವಾಲಯಗಳನ್ನು ಹಿಂದೂ ದೇವಾಲಯವಾಗಿ ಪರಿವರ್ತಿಸಲಾಯಿತು. ವೈದಿಕರು ದೇವಾಲಯಗಳ ಮೇಲೆ ತಮ್ಮ ಪ್ರಭುತ್ವದ ಹೇರಿಕೆ ಮಾಡಿರುವುದನ್ನು ಪೂರ್ಣಚಂದ್ರ ತೇಜಸ್ವಿ ಅವರು ಈ ರೀತಿ ಹೇಳುತ್ತಾರೆ. "ನಮ್ಮ ದೇಶದಲ್ಲಿ ಪ್ರತಿಯೊಂದು ಹೊಸ ಧರ್ಮದ ರಾಜ್ಯಾಡಳಿತ ಬಂದಾಗಲೂ ಹಳೆಯ ದೇಗುಲಗಳನ್ನೂ, ಪ್ರಾರ್ಥನಾ ಮಂದಿರಗಳನ್ನೂ ಪರಿವರ್ತನೆ ಮಾಡಲಾಗಿದೆ. ಇದು ಕೇವಲ ಮುಸ್ಲಿಮರಿಗೆ ಮಾತ್ರ ಸೀಮಿತವಲ್ಲ. ಅನೇಕ ಬೌದ್ಧ ದೇವಾಲಯುಗಳನ್ನು ಜೈನ ಬಸದಿಗಳನ್ನಾಗಿಯೂ, ಜೈನ ಬಸದಿಗಳನ್ನು ವೀರಶೈವ ದೇವಾಲಯಗಳನ್ನಾಗಿಯೂ ಪರಿವರ್ತಿಸಿರುವುದಕ್ಕೆ ಕರ್ನಾಟಕದಲ್ಲೇ ಬೇಕಾದಷ್ಟು ಉದಾಹರಣೆಗಳಿವೆ. ಮೊದಲು ದ್ರಾವಿಡ ದೇವರುಗಳಿದ್ದ ದೇವಸ್ಥಾನಗಳೇ ಆರ್ಯಧರ್ಮದ ಪ್ರಾಬಲ್ಯದೊಂದಿಗೆ ಮಂಜುನಾಥ, ವೆಂಕಟೇಶ್ವರ ದೇಗುಲಗಳಾಗಿವೆ. ಮಸೀದಿ ಹಿಂದೆ ಹಿಂದೂ ದೇವಾಲಯ ಎಂದು ಹೇಳಿ ಪರಿವರ್ತಿಸುವುದಾದರೆ ಈ ಕ್ರಿಯೆ ಇಲ್ಲಿಗೇ ನಿಲ್ಲುವುದಿಲ್ಲ ಎನ್ನುವುದಂತೂ ನಿಜ. ಹಿಂದೂ ಧರ್ಮದೊಳಗೇ ಪರಸ್ಪರ ತಿಕ್ಕಾಟ ಹುಟ್ಟಿಹಾಕುವುದರಲ್ಲಿ ಸಂಶಯವಿಲ್ಲ."[೭] ದೇವಾಲಯಗಳನ್ನು ಕಟ್ಟಲು ಹಲವಾರು ಜನಸಾಮಾನ್ಯರಿಂದ ಸಂಗ್ರಹಿಸಲಾದ ಹಣವನ್ನು ಲಪಟಾಯಿಸುವ ಪುರೋಹಿತಶಾಹಿಯ ಕುತಂತ್ರವನ್ನು ಅವನತಿ ಕಥೆಯಲ್ಲಿ ಈ ರೀತಿ ಪೂರ್ಣಚಂದ್ರ ತೇಜಸ್ವಿ ಅವರು ತೋರಿಸಿದ್ದಾರೆ. "ಈಶ್ವರ ದೇವಸ್ಥಾನ ಕಟ್ಟುವ ಕಾರ್ಯಕ್ರಮ ರದ್ದಾಗಿಹೋಯ್ತು. ಏಕೆಂದರೆ ಅದಕ್ಕಾಗಿ ಶೇಖರಿಸಿದ ಹಣವನ್ನು ಅಲ್ಲಿನ ಪೂಜಾರಿಗಳಾಗಬೇಕಾಗಿದ್ದ ಶಂಕರಭಟ್ಟರು ಮಗಳ ಮದುವೆ ಇತ್ಯಾದಿಗಳಿಗೆ ಉಪಯೋಗಿಸಿ ಉಡುಪಿಗೆ ಓಡಿ ಹೋದರು."[೮] ಹಾಗಾಗಿ ಸೂರಾಚಾರಿಯ ಶಿಲ್ಪಕಲೆಯನ್ನು ಪೂಜಾರಿಗಳು ಕಿತ್ತುಕೊಳ್ಳುತ್ತಾರೆ. ಆದ್ದರಿಂದ ಸೂರಾಚಾರಿಯು ತನ್ನ ಕಲೆಯಿಂದ ಅವನತಿಗೆ ಒಳಗಾಗುತ್ತಾನೆ.

ಪ್ರಭುತ್ವವನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ಪುರೋಹಿತಶಾಹಿ ತನ್ನ ಬೋಧನೆಯಿಂದ ಕೆಳವರ್ಗದ ಜನರನ್ನು ವಂಚಿಸಿ ದೇವಾಲಯಗಳನ್ನು ಕಟ್ಟಲು ಉತ್ತೇಜನ ಮಾಡಿದೆ. ಆದ್ದರಿಂದ ಕೆಳವರ್ಗದ ಜನರಿಗೆ ವಾಸಿಸಲು ಮನೆ ಇಲ್ಲದಿದ್ದರೂ, ಬೀದಿಯಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದರೂ ದೇವಾಲಯಗಳನ್ನು ಕಟ್ಟುತ್ತಿದ್ದಾರೆ. ಹಾಗಾಗಿ ದೇವನೂರ ಮಹಾದೇವ ಅವರು ಅವೈದಿಕ ಪರಂಪರೆಯ ಮಂಚಮ್ಮದೇವಿ ದೇವಾಲಯವನ್ನು ವಿರೋಧಿಸುವುದನ್ನು ಈ ರೀತಿ ಹೇಳಿದ್ದಾರೆ. "ಒಂದ್ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ಟಾ

ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು 'ನಿಲ್ಸಿ ನನ್ ಮಕ್ಕಳಾ' ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲ್ಸ ನಿಲ್ಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ;

'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?'

'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ'

'ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ? ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?'

'ನನಗಿಲ್ಲ ತಾಯಿ' ಅಲ್ಲೊಬ್ಬ ಹೇಳ್ತಾನೆ.

'ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ'[೯]

ಹೀಗೆ ಶತಶತಮಾನಗಳಿಂದ ದೇವಾಲಯಗಳನ್ನು ಕೆಳವರ್ಗದ ಜನರಿಂದ ಕಟ್ಟಿಸಲಾಗಿದೆ. ಗ್ರಾಮದೇವತೆಗಳನ್ನು ವೈದಿಕ ದೇವತಾಲೋಕದೊಳಗೆ ಸೇರಿಸಿಕೊಳ್ಳುವ ಹುನ್ನಾರಗಳು ನಿರಂತರವಾಗಿ ನಡೆದವು. ದೇವರನ್ನು ಮೇಲುವರ್ಗ ಮತ್ತು ಕೆಳಗವರ್ಗದ ದೇವತೆಗಳು ಎಂದು ವರ್ಗೀಕರಣ ಮಾಡಲಾಯಿತು. ಈ ಎಲ್ಲಾ ಬೆಳವಣಿಗೆಗೆ ವೈದಿಕ ಧರ್ಮವೇ ಕಾರಣವಾಗಿತ್ತು. ಆದರೆ ಈ ಕೆಳವರ್ಗದ ಜನರೆ ಕಟ್ಟಿದ ದೇವಾಲಯಗಳಿಗೆ ಪ್ರವೇಶ ಇಲ್ಲದಂತೆ ಪ್ರಭುತ್ವ ನೋಡಿಕೊಂಡಿದೆ. ಆದ್ದರಿಂದಲೆ ಕೆಳವರ್ಗದ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದೆ ಉಳಿದರು. ಈ ಎಲ್ಲಾ ಸಮಸ್ಯೆಗೆ ವೈದಿಕ ಧರ್ಮ ಸೃಷ್ಟಿಸಿದ ನೀತಿ ನಿಯಮಗಳೇ ಕಾರಣವಾಗಿವೆ.

ದೇವಾಲಯಗಳು ಪ್ರಭುತ್ವದಲ್ಲಿ ಯಾವ ರೀತಿ ಕೆಲಸ ಮಾಡುತ್ತವೆ ಎಂಬುದನ್ನು, ದೇವನೂರ ಮಹಾದೇವ ಅವರು ಬರೆದಿರುವ, 'ಡಾಂಬರು ಬಂದುದು' ಕಥೆಯಲ್ಲಿ ನೋಡಬಹುದು. ಊರಿನ ರಸ್ತೆಯನ್ನು ಮಾಡಲು ಸರ್ಕಾರ ಹಣ ಬಿಡುಗಡೆ ಮಾಡಿರುತ್ತದೆ. ಆದರೆ ರಸ್ತೆ ಕಾಮಗಾರಿಯಿಂದ ಹಣವನ್ನು ಪಟೇಲರು ಉಳಿಸಿ ದೇವಸ್ಥಾನ ಊರ್ಜಿತಗೊಳಿಸಲು ಮುಂದಾಗುತ್ತಾರೆ. ಆದರೆ ಯುವಕರಾದ ಲಕುಮ, ರಾಜಪ್ಪ, ಮಾಧು, ಶಂಭು ಇವರು ಪಟೇಲರ ವಿರುದ್ಧ ಈ ರೀತಿ ಪತ್ರಿಕೆಯಲ್ಲಿ ಬರೆಸುತ್ತಾರೆ. "ಸ್ವಾಮೀ ನಮ್ಮೂರಿಗೆ ರೋಡು ಆಗಬೇಕೆಂದು ದೊಡ್ಡ ಮನಸ್ಸು ಮಾಡಿ ಸರ್ಕಾರ ನಡೆಸಿಕೊಡುತ್ತಿರುವುದೂ ಈಗ ರೋಡು ಆಗುತ್ತಿರುವುದೂ ಸರಿಯಷ್ಟೆ, ಆದರೆ ಈ ರೋಡಿನ ಕಂಟ್ರಾಕ್ಟರಾದ ಪಟೇಲರು ಸರ್ಕಾರಿ ದುಡ್ನಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತಗೊಳಿಸುತ್ತಾರೆಂದು ತಿಳಿದುಬಂದಿದೆ. ಏನೇ ಆಗಲೀ ಇದು ಸರ್ಕಾರಿ ಹಣದ ದುರುಪಯೋಗ. ಇಂತಹದು ಆಗದಂತೆ ತಡೆಗಟ್ಟಬೇಕೆಂದು ನಾವು ಸಂಬಂಧಪಟ್ಟವರಲ್ಲಿ ಪ್ರಾರ್ಥಿಸುತ್ತೇವೆ."[೧೦] ಈ ರೀತಿ ವೈದಿಕ ಧರ್ಮವನ್ನು ಪ್ರತಿಪಾದಿಸುವ ಪುರೋಹಿತಶಾಹಿ ಮೇಲುವರ್ಗದ ಬಂಡವಾಳಶಾಹಿಗಳಿಂದ ಸರ್ಕಾರದ ಹಣವನ್ನು ದುರುಪಯೋಗ ಮಾಡಿಸಿದೆ. ಪ್ರಭುತ್ವದ ಮೂಲಕ

ಕೆಳವರ್ಗದ ಜನರಿಗೆ ಬರುವ ಸೌಲಭ್ಯಗಳು ಸರಿಯಾಗಿ ತಲುಪದೆ ವಂಚಿಸಿದೆ. ಹಾಗಾಗಿ ವೈದಿಕಶಾಹಿ ಪ್ರಭುತ್ವವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ.

ದೇವನೂರ ಮಹಾದೇವ ಅವರು ಬರೆದಿರುವ 'ಹೀಗೂ ಒಂದು ಮಕ್ಕಳ ಪಾಠ' ಎಂಬ ಸಣ್ಣ ಪ್ರಸಂಗದ ಪಾಠದಲ್ಲಿ ಅಮ್ಮ ಮತ್ತು ಮಗಳಾದ ಉಜ್ವಲಾ ದೇವಸ್ಥಾನಕ್ಕೆ ಹೊದಾಗ ನಡೆಯುವ ಸಂಭಾಷಣೆಯಲ್ಲಿ ಉಜ್ವಲಾ ದೇವರು ಮತ್ತು ದೇವಸ್ಥಾನವನ್ನು ವಿರೋಧಿಸುವುದನ್ನು ಕಾಣಬಹುದು.

"ಉಜ್ವಲಾ: ಇದೋ ದೇವಸ್ಥಾನ ಬಂತು. ಅಮ್ಮಾ ದೇವಸ್ಥಾನದ ಮುಂದೆ ಕಣ್ಣು ಕಾಲು ಇಲ್ಲದವರು ಯಾಕೆ ಕೈಮುಗಿಯುತ್ತಾ ಇದ್ದಾರೆ?

ಅಮ್ಮ: ಅವರು ಭಿಕ್ಷಕರು ಮಗಳೇ. ಹೊಟ್ಟೆಗೆ ಇಲ್ಲದಕ್ಕೆ ಭಿಕ್ಷೆ ಬೇಡುತ್ತಿರುವರು.

ಉಜ್ವಲಾ: ಅಮ್ಮಾ, ಪೂಜಾರಿ ಮಂಗಳಾರತಿ ತರುತ್ತಿದ್ದಾನೆ!

ಅಮ್ಮ: ಹಿರಿಯರನ್ನು ಬಹುವಚನದಲ್ಲಿ ಮಾತಾಡಿಸಬೇಕು ಮಗಳೇ. ತಿಳಿಯಿತಾ?

ಉಜ್ವಲಾ: ದೇವರಿಗೆ ಯಾಕಮ್ಮ ಕೈ ಮುಗಿಯಬೇಕು?

ಅಮ್ಮ: ಕೈ ಮುಗಿದರೆ ದೇವರು ಒಳ್ಳೆಯದು ಮಾಡುತ್ತಾನೆ ಮಗಳೇ.

ಉಜ್ವಲಾ: ಕಣ್ಣು ಕಾಲು ಇಲ್ಲದವರಿಗೆ ದೇವರು ಒಳ್ಳೆಯದು ಮಾಡಿಲ್ಲ ಯಾಕಮ್ಮ? ಕಣ್ಣು ಕಾಲು ಇಲ್ಲದವರು ಯಾವಾಗಲೂ ಕೈ ಮುಗಿದೇ ಇರುವರಲ್ಲ!

ಅಮ್ಮ : ಅದು ನನಗೆ ತಿಳಿಯದು ಮಗಳೇ.

ಉಜ್ವಲಾ: ಹಾಗಾದರೆ ನಾನು ಕೈಮುಗಿಯುವುದಿಲ್ಲ.

ಅಮ್ಮ : ಬೇಗ ಮನೆಗೆ ಹೋಗೋಣ ಬಾ."[೧೧]

ಪುರೋಹಿತಶಾಹಿ ದೇವಸ್ಥಾನಗಳನ್ನು ಸೃಷ್ಟಿ ಮಾಡಿ ಜನಸಾಮಾನ್ಯರನ್ನು ವಂಚಿಸುತ್ತಿವೆ. ಪ್ರಭುತ್ವದಲ್ಲಿ ಸಮಾನತೆಯನ್ನು ಸೃಷ್ಟಿಸಲು ಆಗದ ದೇವರನ್ನು ಉಜ್ವಲಾ ವಿರೋಧಿಸುವುದನ್ನು ಈ ಮೇಲಿನ ಉಲ್ಲೇಖದಲ್ಲಿ ಕಾಣಬಹುದು. ಕೆಳವರ್ಗದವರು, ಶೋಷಿತರು, ಅಸಹಾಯಕರಿಗೆ ನೆರವಾಗದೆ ಇರುವ ದೇವಾಲಯ ಸಂಸ್ಕೃತಿಯನ್ನು ದೇವನೂರ ಮಹಾದೇವರು ವಿರೋಧಿಸುವುದನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ವೈದಿಕ ಧರ್ಮವು ದೇವಾಲಯಗಳನ್ನು ಪ್ರಭುತ್ವದಲ್ಲಿ ಬಳಸಿಕೊಂಡು ರಾಜಕೀಯವನ್ನು ಮಾಡಿದೆ. ಅಸಮಾನತೆ, ಮೂಢನಂಬಿಕೆ, ಜಾತೀಯತೆ, ಅಸ್ಪೃಶ್ಯತೆಗಳನ್ನು ದೇವಾಲಯಗಳು ಪ್ರತಿಪಾದಿಸಿದವು. ಅವೈದಿಕ ಪರಂಪರೆಯ ಗುಡಿಗಳನ್ನು ದೇವಸ್ಥಾನಗಳಾಗಿ ವೈದಿಕ ಧರ್ಮ ಪರಿವರ್ತನೆ ಮಾಡಿತು. ದೇವಾಲಯಗಳು ಮತೀಯವಾದವನ್ನು ಹುಟ್ಟಿಹಾಕಿ ಧರ್ಮ ಸಂಘರ್ಷಕ್ಕೆ

ಸಾಕ್ಷಿಯಾದವು. ಪ್ರಭುತ್ವದ ಮೂಲಕ ಸ್ಥಾಪಿಸಿಕೊಂಡ ವೈದಿಕ ಧರ್ಮದ ದೇವಾಲಯಗಳಲ್ಲಿ ನಡೆಯುವ ಮೌಢ್ಯ ಸಂಪ್ರದಾಯಗಳು ಮತ್ತು ಮೂರ್ತಿಪೂಜೆಯನ್ನು ಕುವೆಂಪು ಅವರು ವಿರೋಧಿಸುತ್ತಾರೆ. ಹಿಂದೂ ಧರ್ಮವನ್ನು ಪ್ರತಿಪಾದಿಸುವ ಬ್ರಾಹ್ಮಣಧರ್ಮವು ಬೇರೆ ಬೇರೆ ಧರ್ಮದ ದೇವಾಲಯಗಳನ್ನು ಹಿಂದೂಧರ್ಮಕ್ಕೆ ಪರಿವರ್ತನೆ ಮಾಡಿಸಿ ಧರ್ಮಸಂಘರ್ಷಕ್ಕೆ ಮುಂದಾಗುತ್ತಿರುವುದನ್ನು ಪೂರ್ಣಚಂದ್ರ ತೇಜಸ್ವಿ ಅವರು ಗುರುತಿಸುತ್ತಾರೆ. ಕೆಳವರ್ಗದ ಜನರನ್ನು ಧಾರ್ಮಿಕ ಸಂಪ್ರದಾಯದಿಂದ ಶೋಷಣೆ ಮಾಡಿ, ಕೆಳವರ್ಗದ ಜನರು ದೇವಾಲಯಗಳನ್ನು ಕಟ್ಟಲು ಮಾಡುತ್ತಿರುವ ಪುರೋಹಿತಶಾಹಿಯನ್ನು ದೇವನೂರ ಅವರು ವಿರೋಧಿಸುತ್ತಾರೆ.

೬.೧.೨. ಧರ್ಮಪ್ರಜ್ಞೆ

ಮಾನವರು 'ಧರ್ಮಪ್ರಜ್ಞೆ'ಯನ್ನು ಪವಿತ್ರ ಹಾಗೂ ಪೂಜ್ಯ ಭಾವನೆಯಿಂದ ನೋಡಿದ್ದಾರೆ. ಧರ್ಮವನ್ನು ವಿಶಾಲಾರ್ಥದಲ್ಲಿ ಬಳಸಲಾಗಿದೆ. ವೈದಿಕರು ಧರ್ಮವನ್ನು ಪೂಜೆ, ದೇವರು, ಸಂಪ್ರದಾಯ, ಆಚರಣೆ, ಸದ್ಭಕ್ತಿ, ಧಾರ್ಮಿಕ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಮತ್ತು ಧರ್ಮಗ್ರಂಥಗಳ ಬೋಧನೆಯ ನೆಲೆಯಲ್ಲಿ ಗ್ರಹಿಸಿದ್ದಾರೆ. ಧರ್ಮವನ್ನು ನೀತಿ ನಿರೂಪಕವಾಗಿ, ಆದರ್ಶದ ನೆಲೆಯಲ್ಲಿ ಮತ್ತು ಗುಣವಾಚಕದ ಅರ್ಥದಲ್ಲಿ ಸಾಮಾನ್ಯವಾಗಿ ಬಳಸಲಾಗುತ್ತದೆ. ನಿಷ್ಠೆ, ಶ್ರದ್ಧೆ, ದಾನ, ದೇವರು ಮತ್ತು ಭಕ್ತಿಯ ಹೆಸರಿನಲ್ಲಿ ವೈದಿಕರು ಬಳಸುತ್ತಾರೆ. ಧರ್ಮವನ್ನು ವ್ಯಾಪಕವಾದ ಅರ್ಥದಲ್ಲಿ ಸಂದರ್ಭಕ್ಕೆ ತಕ್ಕಂತೆ ಬಳಸಲಾಗಿದೆ. ಲಿಂಗಾಧಾರಿತವಾಗಿ, ಜಾತಿಯಾಧಾರಿತವಾಗಿ ವೈದಿಕರು ಧರ್ಮವನ್ನು ಅರ್ಥೈಸಿದರು ಮತ್ತು ಪ್ರಭುತ್ವದ ಮೂಲಕ ಸಮಾಜದಲ್ಲಿ ಹೇರಿಕೆ ಮಾಡಿದರು. ಮೇಲುವರ್ಗದವರು ಮತ್ತು ಬ್ರಾಹ್ಮಣರು ಕೆಳವರ್ಗದ ಜನರಿಂದ ಸೇವೆ ಮಾಡಿಸಿಕೊಳ್ಳುವುದು ಧರ್ಮ ಎಂದು ಪರಿಗಣಿಸಿದರು. ಪುರೋಹಿತಶಾಹಿ ರಾಜಪ್ರಭುತ್ವದ ಜೊತೆ ಸೇರಿಕೊಂಡು ಧರ್ಮವನ್ನು ದೇವರ ಹೆಸರಿನಲ್ಲಿ ಬಳಸಿ ಪ್ರಭುತ್ವವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿತು. ಆದ್ದರಿಂದ ಸಮಾಜದಲ್ಲಿ ವೈದಿಕರ ಅಮಾನವೀಯ ಆಚರಣೆಗಳನ್ನು ಹೇರಲಾಯಿತು. ರಾಜಪ್ರಭುತ್ವಕ್ಕೆ ಮತ್ತು ಸಾಮಾಜಿಕ ಪ್ರಭುತ್ವಕ್ಕೆ ಧರ್ಮದ ಹೆಸರಿನಲ್ಲಿ ಭಯ ಮತ್ತು ಭಕ್ತಿಯನ್ನು ಮೂಡಿಸಿತು. ಪುರೋಹಿತಶಾಹಿ ಮಾಡುವ ಅನ್ಯಾಯ ಶೋಷಣೆಗಳಿಗೆ ಧರ್ಮವು ಆಕರವಾಯಿತು. ಧರ್ಮವನ್ನು ನಂಬಿಕೆಯ ಭಾಗವಾಗುವಂತೆ ಮಾಡಿತು. ಜನಸಾಮಾನ್ಯರನ್ನು ಧರ್ಮದ ಮೂಲಕ ನಿಯಂತ್ರಣದಲ್ಲಿ ಇರಿಸಿತು. ಅರ್ಥ, ಕಾಮ, ಮೋಕ್ಷಗಳ ಜೊತೆ ಧರ್ಮವನ್ನು ಸಮೀಕರಣಗೊಳಿಸಿತು. ಹಾಗಾಗಿ ಪುರೋಹಿತಶಾಹಿ ನಂಬಿಕೆಯನ್ನೇ ಬಂಡವಾಳವಾಗಿ ಮಾಡಿಕೊಂಡು ಬಹುಸಂಖ್ಯಾತ ಜನಸಮುದಾಯವನ್ನು ಧರ್ಮದ ಹೆಸರಿನಲ್ಲಿ ವಂಚಿಸಿತು. ಧರ್ಮವನ್ನು ತಮ್ಮ ಕೈವ ಶಮಾಡಿಕೊಂಡು ಸಂಪತ್ತಿನ ಮುಂದುವರಿಕೆಯ ಭಾಗವಾಗಿ ಬಳಸಿತು. ಪ್ರಭುತ್ವವನ್ನು ಓಲೈಸಿಕೊಂಡು, ಧರ್ಮಗ್ರಂಥಗಳು ಮತ್ತು ಧರ್ಮಗುರುಗಳನ್ನು ಸೃಷ್ಟಿಸಿಕೊಂಡು ಸಮಾಜವನ್ನು ನಿಯಂತ್ರಿಸುತ್ತಾ ಸಾಗಿತು. ಹಾಗಾಗಿ ಪ್ರಭುತ್ವವನ್ನು ಧರ್ಮದ ಹಿಡಿತದಲ್ಲಿಯೇ ಇರುವಂತೆ ಹುನ್ನಾರಗಳನ್ನು ವೈದಿಕರು ಮಾಡಿದರು.

ವೈದಿಕರು ಪ್ರಭುತ್ವವನ್ನು ಓಲೈಸಲು ಧರ್ಮದ ಮೂಲಕ ಮಾಡುವ ಹುನ್ನಾರಗಳನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅವರು ತಮ್ಮ ಕಾವ್ಯ, ಕಥೆ, ಕಾದಂಬರಿ,

ಲೇಖನ ಮತ್ತು ವಿಮರ್ಶೆಗಳಲ್ಲಿ ವಿಶ್ಲೇಷಿಸಿದ್ದಾರೆ. ಶತಶತಮಾನಗಳಿಂದ ವೈದಿಕರು ಧರ್ಮ ಸೃಷ್ಟಿ ಮಾಡಿರುವ ಯಾಜಮಾನ್ಯ, ದಬ್ಬಾಳಿಕೆ, ಶೋಷಣೆ, ಅಸ್ಪೃಶ್ಯತೆ, ಅಸಮಾನತೆ, ಹಿಂಸೆ, ಜಾತೀಯತೆ ಮತ್ತು ರಾಜಕಾರಣವನ್ನು ವಿರೋಧಿಸಿದ್ದಾರೆ. ದೇವರ ಹೆಸರಿನಲ್ಲಿ ಧರ್ಮವನ್ನು ಬಳಸುತ್ತಿರುವ ಪುರೋಹಿತಶಾಹಿಯ ಯಾಜಮಾನ್ಯವನ್ನು ಪ್ರಶ್ನೆ ಮಾಡಿದ್ದಾರೆ. ವೈದಿಕ ಧರ್ಮವನ್ನು ಪ್ರತಿಪಾದಿಸುವ ಮನು ಬರೆದಿಟ್ಟ ಮನುಸ್ಮೃತಿಯ ನಂಬಿಕೆಗಳನ್ನು ಕುವೆಂಪು ಅವರು 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು' ಎಂಬ ಕವಿತೆಯಲ್ಲಿ ಈ ರೀತಿ ಪ್ರಶ್ನಿಸುತ್ತಾರೆ.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದೆಮಗೆ ಕಟ್ಟೇನು?
ನಿನ್ನೆದೆಯೆ ದನಿ ಋಷಿ, ಮನು ನಿನಗೆ ನೀನು
ಸ್ವರ್ಗ ಹೋಗುವುದಿಲ್ಲ. ನರಕ ಬರುವುದು ಇಲ್ಲ;
ಸ್ವರ್ಗ ನರಕಗಳೇನು ಶಾಸ್ತ್ರಸ್ತವಲ್ಲ
ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಶ್ರೀಧರ್ಮ ಸೂತ್ರ![೨]

ಈ ಪದ್ಯವು ವೇದ ಶಾಸ್ತ್ರಗಳ ನಿರಾಕರಣೆಯನ್ನು ಹೇಳುತ್ತದೆ. ಪ್ರಭುತ್ವವನ್ನು ಓಲೈಸಲು ಪುರೋಹಿತಶಾಹಿ ಧಾರ್ಮಿಕ ಗ್ರಂಥಗಳನ್ನು ಸೃಷ್ಟಿ ಮಾಡಿತು. ಸಮಾಜದಲ್ಲಿ ಮನು ಸೃಷ್ಟಿಸಿದ ಮನುಸ್ಮೃತಿಯ ಆಧಾರದ ಮೇಲೆ ಧರ್ಮದ ನಿಯಮಗಳನ್ನು ಪಾಲಿಸಲು ಜನರ ಮೇಲೆ ಹೇರಲಾಯಿತು. ನಿಷ್ಠೆ, ಶ್ರದ್ಧೆ, ದಾನ, ದೇವರು ಮತ್ತು ಭಕ್ತಿಯ ಹೆಸರಿನಲ್ಲಿ ವೈದಿಕರು ಧರ್ಮವನ್ನು ಪ್ರತಿಪಾದಿಸಿದರು. ವೈದಿಕ ಧರ್ಮಗ್ರಂಥಗಳು ಶೂದ್ರರನ್ನು ಗುಲಾಮರನ್ನಾಗಿ ಮಾಡಿದೆ. ಆದರೆ ಕುವೆಂಪು ಅವರು ಮನುಷ್ಯತ್ವ, ಮಾನವೀಯತೆಗಿಂತ ಬೇರೆ ಧರ್ಮ ಇಲ್ಲ. 'ಎದೆಯ ದನಿ'ಯೇ ಧರ್ಮ ಎಂದು ಹೇಳುತ್ತಾರೆ. ವೇದ ಶಾಸ್ತ್ರಗಳು ಹೇಳುವ ಸ್ವರ್ಗ ನರಕ ಕಲ್ಪನೆಗಳು ಶಾಸ್ತ್ರವೂ ಅಲ್ಲ ಧರ್ಮವೂ ಅಲ್ಲ ಎಂದು ಹೇಳುತ್ತಾರೆ. ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ ಎಂದು

ಹೇಳುವುದರ ಮೂಲಕ ಹಿಂದೂ ಮೂಲಭೂತವಾದವನ್ನು ವಿರೋಧಿಸುತ್ತಾರೆ. ವೈದಿಕ ಪುರಾಣಗಳು ಬರೆದಿಟ್ಟ ಧರ್ಮವೇ ಅಂತಿಮವಾದುದಲ್ಲ. ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ, ನಮ್ಮ ಹೃದಯವೆ ನಮಗೆ ಶ್ರೀಧರ್ಮ ಸೂತ್ರ ಎಂದು ಹೇಳುತ್ತಾರೆ. ಯಾವ ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು' ಎಂದು ವಿಶ್ವಮಾನವ ಸಂದೇಶದಲ್ಲಿ ಕುವೆಂಪು ಹೇಳುತ್ತಾರೆ. ಈ ರೀತಿಯಾಗಿ ಕುವೆಂಪು ವೈದಿಕ ಧರ್ಮಪ್ರಜ್ಞೆಯನ್ನು ವಿರೋಧಿಸುತ್ತಾರೆ.

ವೈದಿಕರು ಪ್ರಭುತ್ವವನ್ನು ಓಲೈಸಲು ಧಾರ್ಮಿಕ ಸಾಹಿತ್ಯವನ್ನು ಸೃಷ್ಟಿ ಮಾಡಿದರು. ಇದರಿಂದ ಸಾಮಾಜಿಕ–ಸಾಂಸ್ಕೃತಿಕ ಅಸಮಾನತೆ ಹುಟ್ಟಿತು. ಮತ, ಧರ್ಮ ಪ್ರಜ್ಞೆ, ಕರ್ಮ, ಮೋಕ್ಷ, ವರ್ಣಾಶ್ರಮವನ್ನು ಪ್ರತಿಪಾದಿಸಲು ರಚಿತವಾದ ಸಾಹಿತ್ಯವನ್ನು ಕುವೆಂಪು ಅವರು ವಿರೋಧಿಸಿ ಈ ರೀತಿ ಹೇಳುತ್ತಾರೆ. "ಈಗ ನಾನು ಶ್ರೀರಾಮಾಯಣ ದರ್ಶನಂ ಬರೆದಿದ್ದೇನೆ. ಅದನ್ನು ನೋಡಿ. ಸಂಪೂರ್ಣವಾಗಿ, ಹಿಂದಿನ ಮನೋಧರ್ಮಕ್ಕೂ ಈ ಮಹಾಕಾವ್ಯದಲ್ಲಿ ಅಭಿವ್ಯಕ್ತಗೊಂಡಿರುವ ದಾರ್ಶನಿಕ ಧರ್ಮಕ್ಕೂ ಒಂದು ಚೂರೂ ಸಂಬಂಧವಿಲ್ಲ. ಪ್ರಾರಂಭದಲ್ಲಿಯೆ ಶುರುವಾಗುತ್ತದೆ "ಬುಧರೊಲಿದ ಸಮದರ್ಶನವನೊಪ್ಪಿ" ದಶರಥನ ಯಾಗ ಶುರುವಾಗುತ್ತದೆ. ಮೇಲುಜಾತಿ ಕೀಳುಜಾತಿ ಭೇದವನ್ನೆಲ್ಲ ಲೆಕ್ಕಿಸದೆ ಅಂತಲೆ ಶುರುವಾಗುತ್ತದೆ. ಹಾಗೆಯೆ ಉದ್ದಕ್ಕೂ ಆ ಕಾವ್ಯದಲ್ಲಿ ಎಲ್ಲಿಯೂ ಹಳೆಯ ಸಂಕುಚಿತ ಮನೋಧರ್ಮದ ಭಾವನೆಗಳು ಸುಳಿಯುವುದಕ್ಕೇ ಸಾಧ್ಯವಿಲ್ಲದಂತೆ ಮುಂದುವರಿಯುತ್ತದೆ. ಹಾಗೆಯೇ ನಾನು ಅವರಿಗೆ ಇನ್ನೊಂದು ಉದಾಹರಣೆಯನ್ನೂ ಕೊಟ್ಟೆ, "ಶೂದ್ರ ತಪಸ್ವಿ" ಎಂಬ ನನ್ನ ನಾಟಕವನ್ನು. ಶಂಭೂಕ ತಪಸ್ಸು ಮಾಡುತ್ತಾ ಇದ್ದ ಅಂತ, ಅವನು ತಪಸ್ಸು ಮಾಡಿದ್ದಕ್ಕೆ ತನ್ನ ಮಗ ಸತ್ತುಹೋದ ಅಂತ, ಅವನನ್ನು ಕೊಲ್ಲಲು ಒಬ್ಬ ಬ್ರಾಹ್ಮಣ ರಾಮನನ್ನು ಕರೆದುಕೊಂಡು ಹೋಗುತ್ತಾನೆ. ಅದು ಹಿಂದಿನ ಕಥೆ. ಆ ಕಥೆಯನ್ನೇ ನಾನು 'ಶೂದ್ರ ತಪಸ್ವಿ' ನಾಟಕದಲ್ಲಿ ಬಳಸಿಕೊಂಡಿದ್ದೇನೆ. ಆದರೆ ಸಂಪೂರ್ಣವಾಗಿ, ಬ್ರಾಹ್ಮಣ ಏನು ಅವಿವೇಕ ಮಾಡಿದ? ಆ ಅವಿವೇಕವನ್ನು ರಾಮ ಹೇಗೆ ತಿದ್ದಿದ? ಎಂಬುದು ಚಿತ್ರತವಾಗಿದೆ. ತಪಸ್ಸು ಬಹಳ ದೊಡ್ಡದು, ಯೋಗ್ಯವಾದದ್ದು. ಯಾರು ಮಾಡಿದರೂ ಅದು ದೊಡ್ಡದೆ–ಅನ್ನುವ ಭಾವನೆ ಅಲ್ಲಿ ಬರುತ್ತದೆ. ಹೀಗೆ ಆ ಹಿಂದಣ ಅಮೂಲ್ಯ ಸಾಹಿತ್ಯವನ್ನೆಲ್ಲ ನೀವು ಎಸೆಯುವುದಕ್ಕೆ ಹೋಗದೆಯೆ, ಆ ಚಿನ್ನದ ಆಭರಣಗಳನ್ನೆಲ್ಲ ಕರಗಿಸಿ ನಮ್ಮ ಧ್ಯೇಯಕ್ಕೆ, ನಮ್ಮ ಇಷ್ಟಕ್ಕೆ ಅನುಸಾರವಾಗಿ ಅವುಗಳನ್ನು ಎರಕ ಹೊಯ್ದುಕೊಳ್ಳಬೇಕು."[೧೨] ಹೀಗೆ ವೈದಿಕ ಧರ್ಮಪ್ರಜ್ಞೆಯಿಂದ ರಚಿತವಾದ ಸಾಹಿತ್ಯವನ್ನು ಕುವೆಂಪು ಮರುವ್ಯಾಖ್ಯಾನ ಮಾಡಿದರು. ಪ್ರಭುತ್ವದ ಹಿಡಿತದಿಂದ ಪುರೋಹಿತಶಾಹಿ ಸ್ಥಾಪಿಸಿದ ಜಾತಿಭೇದ, ವರ್ಗವೈಷಮ್ಯ, ಬಡತನ, ಸುಲಿಗೆ, ಶೋಷಣೆ, ಮೌಢ್ಯಗಳನ್ನು ವಿರೋಧಿಸಿದರು.

ಕುವೆಂಪು ಅವರ, 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬರುವ ಮುಖ್ಯ ಪಾತ್ರವಾದ ಹೂವಯ್ಯ ಮೈಸೂರಿನಲ್ಲಿ ಓದುತ್ತಿದ್ದ ಇವನು ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ, ಹಳ್ಳಿಗೆ

ಬರುತ್ತಾನೆ. ಇವನಿಗೆ ಮಲೆನಾಡು ಹೊರಗಿನದು. ಎಲ್ಲವನ್ನೂ ಕುತೂಹಲದಿಂದ, ಸೂಕ್ಷ್ಮವಾಗಿ ಮತ್ತು ವಿಮರ್ಶಾತ್ಮಕವಾಗಿ ನೋಡುತ್ತಾನೆ. ಮಲೆನಾಡಿನ ಸಂಪ್ರದಾಯಗಳು, ದೇವರು, ಪೂಜೆ, ನಂಬಿಕೆ ಇವೆಲ್ಲವೂ ಅರ್ಥವಿಲ್ಲದವು ಎನಿಸುತ್ತದೆ. ಹಾಗಾಗಿ ಇವನ್ನೆಲ್ಲ ಇವನು ವಿರೋಧಿಸುತ್ತಾನೆ. ಬುದ್ಧನ ಕಡೆಗೆ ತನ್ನ ಆಸಕ್ತಿ ಹಾಗೂ ಒಲವನ್ನು ತೋರಿಸುತ್ತಾನೆ. ಬುದ್ಧನ ಭಾವಚಿತ್ರವನ್ನು ತಂದು ಕೊಠಡಿಯೊಂದರಲ್ಲಿ ಇಟ್ಟುಕೊಳ್ಳುತ್ತಾನೆ. ಈ ಮೂಲಕ ಹಿಂದೂ ಧರ್ಮದ ಕರ್ಮಠಗಳನ್ನು ಕಟುವಾಗಿ ಟೀಕಿಸುತ್ತಾನೆ ಮತ್ತು ತಿರಸ್ಕರಿಸುತ್ತಾನೆ. ಬುದ್ಧನ ಆಶಯಗಳ ಬಗೆಗೆ ಈ ಪಾತ್ರ ಆಲೋಚನೆ ಮಾಡುವುದು ಈ ಕಾದಂಬರಿಯ ಕೆಲವು ಭಾಗಗಳಲ್ಲಿ ಬಂದಿದೆ. ಅಂತಹ ಭಾಗಗಳ ಕೆಲವು ಸಾಲುಗಳನ್ನು ಚರ್ಚೆಯ ಅನುಕೂಲಕ್ಕಾಗಿ ಇಲ್ಲಿ ಉಲ್ಲೇಖಿಸಲಾಗಿದೆ. "ಸೀತೆಯನ್ನು ನೆನೆದು ಕಣ್ಣೀರು ಕರೆದನು. ನಿಜವಾಗಿಯೂ ಸೀತೆ ಕೃಷ್ಣಪ್ಪನನ್ನು ಪ್ರೀತಿಸಿ, ತನ್ನನ್ನು ವಂಚಿಸಿಬಿಟ್ಟಳೆ? ಅವಳು ಗೋಡೆಯ ಮೇಲೆ ಬರೆದಿದ್ದ ಮಾತುಗಳು ನೆನಪಿಗೆ ಬಂದು ಹೂವಯ್ಯ ವಿಕಟವಾಗಿ ನಕ್ಕನು. ಚಿಂತಿಸುತ್ತಿದ್ದ ಹಾಗೆಯೇ ಪ್ರಪಂಚದಲ್ಲಿ ಎಲ್ಲವೂ ನಶ್ವರ, ಎಲ್ಲವೂ ದುಃಖಮಯ ಎಂಬ ಭಾವ ಮನಸ್ಸಿನಲ್ಲಿ ಮೊಳೆತು ಬೆಳೆಯತೊಡಗಿತು."[೧೪] "ಅದನ್ನೆಲ್ಲಾ ನೋಡಿದ ಹೂವಯ್ಯನ ಮನದಲ್ಲಿ ಕೆಲವು ದಿನಗಳಿಂದ ಮೂಡಿದ್ದ ನಿರಾಶಾಭಾವ ಮತ್ತೂ ಪ್ರಬಲತರವಾಯಿತು. ಹಿಂದೆ ಅವನ ದೃಷ್ಟಿಗೆ ಸೌಂದರ್ಯದ ಬೀಡಾಗಿ ತೋರುತ್ತಿದ್ದ ವಿಶ್ವವು ಕ್ರೂರ ಪಿಶಾಚಿಯ ಕರ್ಮಶಾಲೆಯಂತೆ ಕುರೂಪವಾಗಿ ತೋರತೊಡಗಿತು. ಸರ್ವಂ ಕ್ಷಣಿಕಂ ಕ್ಷಣಿಕಂ, ಸರ್ವಂ ದುಃಖಂ ದುಃಖಂ, ಸರ್ವಂ ಶೂನ್ಯಂ ಶೂನ್ಯಂ, ಎಂಬುದಾಗಿ ಆತನೋದಿದ್ದ ಬೌದ್ಧಮತದ ಮೂಲ ಸಿದ್ಧಾಂತಗಳು ಇಂದು ಸತ್ಯವಾಗಿ ಪ್ರತ್ಯಕ್ಷವಾಗಿ ತೋರಿದವು."[೧೫] ಕಾದಂಬರಿಯ ಕೊನೆಗೆ: "ಹತ್ತು ವರ್ಷಗಳಾದ ಮೇಲೆ" ಎಂಬ ಭಾಗವಿದೆ. ಅದರ ಕೆಲವು ಸಾಲುಗಳನ್ನು ಇಲ್ಲಿಯ ಚರ್ಚೆಗೆ ಎತ್ತಿಕೊಳ್ಳಲಾಗಿದೆ. "ಇನ್ನೂ ಅನೇಕರು ಬುದ್ಧ ಜಯಂತಿಯ ಉತ್ಸವಕ್ಕಾಗಿ ಹಸುರು ಹೂ ತಳಿರು ತೋರಣಗಳಿಂದಲೂ, ವಿವಿಧ ಪರಿಮಳಗಳಿಂದಲೂ ತಪೋವನದಂತೆ ಶೋಭಿಸುತ್ತಿದ್ದ ಮಂದಿರದಲ್ಲಿ ಕಿಕ್ಕಿರಿದಿದ್ದರು... ಸ್ವಲ್ಪ ಹೊತ್ತಿನಲ್ಲಿ ಉತ್ಸವ ಆರಂಭವಾಯಿತು. ವಾಸು, ಆತನ ಇಬ್ಬರು ಬ್ರಾಹ್ಮಣ ಮಿತ್ರರು, ಶಂಕರಯ್ಯ, ರಮೇಶ ಇಷ್ಟು ಜನರು ವೇದಿಕೆಯ ಪಕ್ಕದಲ್ಲಿ ನಿಂತು ನವಜೀವನ ಮಂತ್ರಗಾನವನ್ನು ಹಾಡತೊಡಗಿದರು."[೧೬] ಕೊನೆಗೆ ಅಲ್ಲಿ ಸೇರಿದ್ದ ಎಲ್ಲರೂ ನವಜೀವನ ಮಂತ್ರವನ್ನು ಹಾಡಿದರು. ಅಲ್ಲಿಗೆ ಕಾದಂಬರಿ ಮುಗಿಯುತ್ತದೆ. ಬೌದ್ಧಧರ್ಮವು ವೈದಿಕಧರ್ಮವನ್ನು ವಿರೋಧಿಸುತ್ತದೆ. ಅದೇ ರೀತಿಯಲ್ಲಿ ವೈದಿಕ ಧರ್ಮವು ಬೌದ್ಧ ಧರ್ಮವನ್ನು ವಿರೋಧಿಸುತ್ತದೆ. ಕಾದಂಬರಿಯ ಈ ಭಾಗದಲ್ಲಿ ಬೌದ್ಧಧರ್ಮವನ್ನು ಪ್ರತಿಪಾದನೆ ಮಾಡುವುದು ಎಂದರೆ, ಅದು ಪರೋಕ್ಷವಾಗಿ ವೈದಿಕ ಧರ್ಮವನ್ನು, ಅದರ ಮೂಲಭೂತವಾದಗಳನ್ನು ವಿರೋಧ ಮಾಡುವುದು. ಕುವೆಂಪು ಅವರು ತಮ್ಮ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಹೂವಯ್ಯನ ಪಾತ್ರದ ಮೂಲಕ ಬೌದ್ಧಧರ್ಮವನ್ನು ಎತ್ತಿ ಹಿಡಿಯುತ್ತಿದ್ದಾರೆ. ಆ ಮೂಲಕ ತಮ್ಮ ವೈದಿಕ ವಿರೋಧಿ ಪ್ರಜ್ಞೆಯನ್ನು ಅವರು ಪ್ರತಿಪಾದನೆ ಮಾಡುತ್ತಿದ್ದಾರೆ ಎಂಬುದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ವೈದಿಕ ಧರ್ಮದ ಪ್ರಜ್ಞೆಯು ಇಡೀ ಸಮಾಜವನ್ನು ಆವರಿಸಿಕೊಂಡಿದೆ ಎಂಬುದು ತೇಜಸ್ವಿ ಅವರ ಖಚಿತ ವಿಶ್ಲೇಷಣೆ ಮತ್ತು ನಿಲುವು. ಹಾಗಾಗಿ ವೈದಿಕ ಧರ್ಮವು ಇಡೀ ಸಮಾಜವನ್ನೇ ಯಜಮಾನಿಕೆಯಿಂದ ಆವರಿಸಿರುವಾಗ ಅದು ಪ್ರಭುತ್ವವನ್ನು ಬಿಡುತ್ತದೆಯೇ? ವೈದಿಕ ಧರ್ಮವು ಪ್ರಭುತ್ವವನ್ನು ಆವರಿಸಿರುವ ಮತ್ತು ಅಲ್ಲಿ ತನ್ನ ಪ್ರಜ್ಞೆಯನ್ನು ಕ್ರಿಯಾಶೀಲಗೊಳಿಸಿರುವ ಬಗೆಯನ್ನು ತೇಜಸ್ವಿಯವರು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಅದನ್ನು ಅವರ ಈ ಮುಂದಿನ ಮಾತುಗಳಲ್ಲಿ ಗಮನಿಸಬಹುದು. "ಹಿಂದೂ ಧರ್ಮದ ಉಗ್ರ ಪ್ರತಿಪಾದಕರು ಬಹು ಬೇಗ ಲಿಬರಲ್ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಆದುದರಿಂದ ಆರ್ಯ ಧರ್ಮದ ನಿಷ್ಠಾವಂತ ಪ್ರತಿಪಾದಕ ಪಕ್ಷವಾದ ಜನಸಂಘಕ್ಕೆ ಇಂದಲ್ಲ ನಾಳೆ ಇದು ಅನಿವಾರ್ಯವಾಗಿ ಸಂಭವಿಸುವ ರೋಗ. ಹಿಂದೂ ಮುಸ್ಲಿಂ ಸಮಸ್ಯೆ ಭಾರತದಲ್ಲಿ ಸಮಗ್ರವಾಗಿ ತೀರ್ಮಾನವಾದ ನಂತರ "ಆರ್.ಎಸ್.ಎಸ್." ಯುವಕರಿಗೆ ಬ್ರಾಹ್ಮಣ ಕೇರಿಗಳಲ್ಲಿ ಕುರುಬರಿಗೆ ಮನೆ ಸಿಕ್ಕದಂತೆ ಮಾಡುವ ಅಥವಾ ಕಾಲೇಜಿನಲ್ಲಿ ಬ್ರಾಹ್ಮಣ ಯುವತಿಯೊಂದಿಗೆ ಮಾತನಾಡಿದ ಒಕ್ಕಲಿಗ ಯುವಕನನ್ನು ತದುಕುವ ಧರ್ಮ ಪ್ರತಿಪಾದನೆಯ ಧೀರೋದಾತ್ತ ಕಾರ್ಯದಲ್ಲಿ ತೊಡಗುವ ಅನಿವಾರ್ಯತೆ ಬಂದೇಬರುತ್ತದೆ."[೧೭]

ಧಾರ್ಮಿಕ ಕೇಂದ್ರಗಳನ್ನು, ತೀರ್ಥಯಾತ್ರೆಯ ಕೇಂದ್ರಗಳನ್ನು ಮತ್ತು ಪುಣ್ಯಕ್ಷೇತ್ರಗಳನ್ನು ವೈದಿಕ ಧರ್ಮವು ಆವರಿಸಿದೆ. ಇದರ ಮೇಲೆ ತನ್ನ ಯಜಮಾನಿಕೆಯನ್ನೂ ಹಾಗೂ ಪ್ರಭುತ್ವದಿಂದ ಒಡೆತನವನ್ನೂ ಹೊಂದಿದೆ. ಈ ಬಗೆಗೆ ತೇಜಸ್ವಿಯವರ ಆಲೋಚನೆ ಈ ರೀತಿ ಇದೆ. "ತೀರ್ಥಕ್ಷೇತ್ರಗಳು ಪುಣ್ಯಕ್ಷೇತ್ರಗಳ ಗಂಗಾ ಕಾವೇರಿ ಮುಂತಾದ ಪುಣ್ಯ ನದಿಗಳ ಅಖಂಡ ಭಾರತ ಅನೇಕ ದೇವಸ್ಥಾನಗಳ ಅನೇಕ ಧರ್ಮಗಳ ರೂಪದಲ್ಲಿ ವ್ಯಕ್ತವ್ವಾಗುತ್ತಿರುವ ಅಖಂಡ ಪ್ರಾಚೀನ ಭಾರತ. ಇವತ್ತಿಗೂ ಭಾರತೀಯ ಎಂದರೆ ನಮ್ಮ ಜನರ ಮನಸ್ಸಿನಲ್ಲಿ ಮಾರ್ನುಡಿಸುವುದು ಈ ಧಾರ್ಮಿಕ ಮೂಲವಾದ ಅಸೇತು ಹಿಮಾಚಲ ಪರ್ಯಂತದ ಅಖಂಡ ಭಾರತದ ಕಲ್ಪನೆಯೇ. ಆದರೆ ಈಗ ಈ ಕಲ್ಪನೆಯನ್ನು ತೀವ್ರವಾದ ವಿಶ್ಲೇಷಣೆಯ ಮುಖಾಂತರ ಅವಲೋಕಿಸಬೇಕಾಗಿದೆ. ವಿವೇಕಾನಂದ, ರಾಜಾರಾಮ ಮೋಹನರಾಯ್ ಮತ್ತು ಗಾಂಧಿಯಂತಹ ಮಹಾನುಭಾವರಿಗೂ ಈ ಕಲ್ಪನೆ ಸ್ಫೂರ್ತಿ ಕೊಟ್ಟಿತೆಂಬುದನ್ನು ಮರೆಯುವಂತಿಲ್ಲ. ಆದರೂ ಜನಾಂಗ ದ್ವೇಷ ಪರಸ್ಪರ ಅವಹೇಳನ, ಸಂಕುಚಿತ ದೃಷ್ಟಿ, ಮಾನವೀಯ ದೃಷ್ಟಿಯೇ ಇಲ್ಲದ ಅಮಾನುಷ ಪಂಥಗಳು ಎಲ್ಲಕ್ಕಿಂತ ಹೆಚ್ಚಾಗಿ ಈ ಶತಮಾನದ ಉಸಿರಾದ ವಿಜ್ಞಾನಕ್ಕೆ ಮುಖ ತಿರುಗಿಸಿ ನಿಲ್ಲುವ ಪರಮ ಅವೈಜ್ಞಾನಿಕತೆ ಇತ್ಯಾದಿಗಳಿಗೆಲ್ಲ ಇದು ಸ್ಫೂರ್ತಿ ಕೊಟ್ಟಿದೆ."[೧೮] ಅಖಂಡ ಭಾರತವು ವೈದಿಕ ಧರ್ಮ ಪ್ರಜ್ಞೆಯಿಂದ ಸೃಷ್ಟಿಯಾಗಿದೆ ಎಂಬುದು ವೈದಿಕರ ವಾದವಾಗಿದೆ. ಈ ವಾದದಿಂದ ಅವೈಜ್ಞಾನಿಕ ಚಿಂತನೆಗಳನ್ನು ಪ್ರಭುತ್ವದಲ್ಲಿ ವೈದಿಕ ಧರ್ಮ ಬೆಳಸುತ್ತಿದೆ.

ವೈದಿಕ ಧರ್ಮ ಪ್ರತಿಪಾದಿಸಿದ ಆಚರಣೆಗಳನ್ನು ನಮ್ಮ ಸಂಸ್ಕೃತಿ ಎಂದು ಸಮಾಜದಲ್ಲಿ ಪ್ರತಿಬಿಂಬಿಸಲಾಗಿದೆ. ಹಲವಾರು ಮೂಢನಂಬಿಕೆಗಳನ್ನು ಜನಸಾಮಾನ್ಯರಲ್ಲಿ ಸೃಷ್ಟಿಸಿ ಅಸಮಾನತೆ,

ಅಸ್ಪೃಶ್ಯತೆಯನ್ನು ಹುಟ್ಟುಹಾಕಲಾಗಿದೆ. ಸಮಾಜದಲ್ಲಿ ವೈದಿಕ ಧರ್ಮ ಎಂಬುದು ಏಕ ಸಂಸ್ಕೃತಿ ಇದೆ ಎಂದು ಹೇಳುವ ಹಾಗೂ ಅದನ್ನು ನಾನಾ ವಿಧದಲ್ಲಿ ಒಪ್ಪಿಸುವ ಕೆಲಸವನ್ನು ಬ್ರಾಹ್ಮಣ ಧರ್ಮ ಮಾಡುತ್ತಿದೆ. ಈ ವೈದಿಕ ಧರ್ಮವನ್ನು ಪೋಷಿಸುವ ಪುರೋಹಿತಶಾಹಿ ಮೌಢ್ಯಗಳನ್ನು ಮತ್ತು ಆಚರಣೆಗಳನ್ನೇ ನಮ್ಮ ಧರ್ಮ ಮತ್ತು ಸಂಸ್ಕೃತಿ ಎಂದು ಸವರ್ಣೀಯರಿಗೆ ಮತ್ತು ದಲಿತರಿಗೆ ನಂಬಿಸಲಾಗಿದೆ. ಈ ಮೌಢ್ಯಗಳಿಂದ ಸಮಾಜದಲ್ಲಿ ಹಿಂದುಳಿದವರಿಗೆ ಅನ್ಯಾಯವಾಗುತ್ತಿದೆ ಎಂದು ದೇವನೂರ ಮಹಾದೇವ ಅವರು ಬ್ರಾಹ್ಮಣಧರ್ಮವನ್ನು ವಿರೋಧಿಸುತ್ತಾ ಈ ರೀತಿ ಹೇಳಿದ್ದಾರೆ. "ಬ್ರಾಹ್ಮಣರು ನಾನೇ ಶುದ್ಧ ಉಳಿದವರೆಲ್ಲಾ ಅಶುದ್ಧ' ಎಂಬುದು ಮೃಗೀಯ ರಾಕ್ಷಸೀಧರ್ಮ. ಹಿಂದೆ ವಿದ್ಯಾವಂತರೆನ್ನಿಸಿಕೊಂಡವರು ಆಚರಣೆಗಳನ್ನೇ ಧರ್ಮ ಸಂಸ್ಕೃತಿಯನ್ನು ಮಾಡಿಕೊಂಡು ನೀರನ್ನು ಎಡಗೈಯಿಂದ ಕುಡಿಯುವುದೋ ಅಥವಾ ಬಲಗೈಯಿಂದ ಕುಡಿಯುವುದೋ? ಅದನ್ನು ಮೂರು ಸಲ ತೊಳೆಯುವುದೋ ಅಥವಾ ನಾಲ್ಕು ಸಲ ತೊಳೆಯುವುದೋ? ಬಾಯನ್ನು ಐದು ಸಲ ಮುಕ್ಕಳಿಸುವುದೊ ಅಥವಾ ಆರು ಸಲ ಮುಕ್ಕಳಿಸುವುದೋ ಎಂಬುದನ್ನು ಚರ್ಚಿಸುತ್ತಾ ಕಾಲ ಕಳೆದರು. ಇದನ್ನು ನೋಡಿದಾಗ ಹೇಗನ್ನಿಸುತ್ತದೆ? ಇದೇನು ಸಂಸ್ಕೃತಿಯೇ? ನಾವು ಇದಾಗಬೇಕೆ? ಇದಕ್ಕಾಗಿ ಯಾಕೆ ಸ್ಪರ್ಧೆ, ಯಾಕಾಗಿ ದ್ವೇಷ, ಅಸೂಯೆ, ಕೀಳರಿಮೆ, ಮೇಲರಿಮೆ? ಅಂತ ಬೆಚ್ಚಬೇಕಾಗುತ್ತದೆ. ಹೊರನೋಟಕ್ಕೆ ಸಂಸ್ಕೃತಿಯಂತೆ ಕಂಡುಬಂದುದು ಒಳಗಣ್ಣಿಗೆ ಸಾಂಸ್ಕೃತಿಕ ಅಧಃಪತನವಾಗಿ ಕಾಣತೊಡಗುತ್ತದೆ. ಮೇಲರಿಮೆಯ ರೋಗದ ಸವರ್ಣೀಯರು ಸಮಾಜವನ್ನು ಸುಡುತ್ತಿದ್ದರೆ, ಕೀಳರಿಮೆ ರೋಗದ ದಲಿತರು ತಮ್ಮನ್ನೇ ತಾವು ಸುಟ್ಟುಕೊಳ್ಳುತ್ತಿರುವುದು ಕಾಣುತ್ತದೆ. ಐಕ್ಯತೆಯ ಮನಸ್ಸಿಲ್ಲದೆ ಯಾರು ಯಾವುದನ್ನು ಮುಟ್ಟಿದರೂ ಅದು ಧ್ವಂಸವಾಗಿಬಿಡುತ್ತದೆ."[೧೯]

ಹಿಂದೂಧರ್ಮವನ್ನು ಪೋಷಿಸುವ ಪುರೋಹಿತಶಾಹಿ ಧರ್ಮ ಮತ್ತು ದೇವರ ಹೆಸರನ್ನು ತಮ್ಮ ಪ್ರಭುತ್ವ, ರಾಜಕೀಯ, ಹಣ, ಅಧಿಕಾರಕ್ಕಾಗಿ ಬಳಸಿಕೊಂಡು ಧರ್ಮವನ್ನೇ ವ್ಯಭಿಚಾರಕ್ಕೆ ಎಳೆದುಬಿಡುವುದು. ಸಾಮಾನ್ಯ ಜನರನ್ನು ತಮ್ಮ ಮೌಢ್ಯ ಭಕ್ತಿಗಳಿಂದ ಸೆಳೆದು ವಂಚಿಸಿ ಸಮಾಜದಲ್ಲಿ ಅಸಹನೆ, ದ್ವೇಷವನ್ನು ಸೃಷ್ಟಿಸಲು ಮುಂದಾಗುತ್ತಾರೆ. "ಸ್ಥೂಲವಾಗಿ ಎಲ್ಲಾ ಧರ್ಮಗಳಲ್ಲೂ ಅಧ್ಯಾತ್ಮ ಧರ್ಮಿಗಳು, ಕುಟುಂಬ ಧರ್ಮಿಗಳು, ವ್ಯಭಿಚಾರಿ ಧರ್ಮಿಗಳು ಎಂಬ ಮೂರು ಗುಂಪು ಇದ್ದಂತೆ ಕಾಣುತ್ತದೆ. ಅಧ್ಯಾತ್ಮ ಧರ್ಮಿಗಳೆಂದರೆ ದೇಹವನ್ನೇ ದೇಗುಲ ಮಾಡಿಕೊಂಡ ಧ್ಯಾನಚಿಂತನೆಯ ಸಂತರು. ಕುಟುಂಬ ಧರ್ಮಿಗಳೆಂದರೆ ಧರ್ಮ ದೇವರುಗಳನ್ನು ಸಮಾಧಾನಕ್ಕಾಗಿ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಜೀವನ ಸಾಗಿಸುವ ಬಹುಸಂಖ್ಯಾತ ಜನಸಮುದಾಯ. ವ್ಯಭಿಚಾರಿ ಧರ್ಮಿಗಳೆಂದರೆ ಯಾರು ಧರ್ಮ ದೇವರುಗಳ ಹೆಸರನ್ನೇ ಬಂಡವಾಳ ಮಾಡಿಕೊಂಡು ಅಧಿಕಾರ ರಾಜಕೀಯ ಹಣ ಮಾಡಲು ಬಳಸುವರೋ ಅವರು. ಹೀಗಿರುವಾಗ ಯಾವಾಗ ಕುಟುಂಬ ಧರ್ಮಿಗಳ ನೋಟ ಅಧ್ಯಾತ್ಮ ಧರ್ಮಿಗಳ ಕಡೆಯಿರುತ್ತದೋ ಆಗ ಸಹನೆ ಮತ್ತು ಪ್ರೀತಿ ಹೆಚ್ಚು ಇರುತ್ತದೆ. ಯಾವಾಗ ಕುಟುಂಬ ಧರ್ಮಿಗಳನ್ನು ವ್ಯಭಿಚಾರಿ ಧರ್ಮಿಗಳು ಸೆಳೆದುಕೊಳ್ಳುತ್ತಾರೋ

ಆಗ ಅಸಹನೆ ಮತ್ತು ದ್ವೇಷ ಭುಗಿಲೇಳುತ್ತದೆ. ಅಧರ್ಮ ತಾಂಡವವಾಡುತ್ತದೆ."[೨೦] ಆದ್ದರಿಂದ ಈ ಅಸಹನೆ ಮತ್ತು ದ್ವೇಷವನ್ನು ಸೃಷ್ಟಿ ಮಾಡುವ ಧರ್ಮನ್ನು ವಿರೋಧಿಸಬೇಕಾಗಿದೆ. ಪ್ರೀತಿ ಸಹನೆ ಇರುವ ಧರ್ಮವನ್ನು ಅನುಸರಿಸಬೇಕಾಗಿದೆ. ಇಲ್ಲಿ ವ್ಯಭಿಚಾರಿಧರ್ಮಿಗಳಾಗಿ ಪುರೋಹಿತಶಾಹಿ ಕಂಡುಬರುತ್ತದೆ.

ಈ ವೈದಿಕ ಧರ್ಮವನ್ನು ಪ್ರತಿಪಾದಿಸುವ ಆರ್.ಎಸ್.ಎಸ್. ಸಂಘಟನೆಯ ಕೃತ್ಯಗಳನ್ನು ಲೇಖಕರು ಈ ರೀತಿ ವಿವರಿಸಿದ್ದಾರೆ. ಸಮಾಜದಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ, ಧರ್ಮವನ್ನು ಪೋಷಿಸುತ್ತೇವೆ ಎಂದು ಹೇಳಿ ಜನರನ್ನು ವಂಚಿಸುವ ಕೆಲಸವನ್ನು ಮಾಡುತ್ತಿದೆ, ಅಸಮಾನತೆಯನ್ನು ಹುಟ್ಟುಹಾಕಿದೆ. ವೈದಿಕ ಧರ್ಮದ ಚಾತುರ್ವರ್ಣವನ್ನು ಪ್ರತಿಪಾದಿಸಲು ಮುಂದಾಗಿದೆ. "ಹೀಗೆ ಮಂದಿರ ಮಸೀದಿ ನೆಪ ತೆಗೆದು ಭಾರತದ ನೆಮ್ಮದಿಯನ್ನು ಕೆಡಿಸುವ ಆರ್.ಎಸ್.ಎಸ್., ಬಿ.ಜೆ.ಪಿ.ಗಳ ನೆಮ್ಮದಿಯೂ ಹೀಗೆ ಇರಬಹುದೇ? ಆರ್.ಎಸ್.ಎಸ್.ನ ನೆಮ್ಮದಿಯ ಪ್ರಾಣಪಕ್ಷಿ ಎಲ್ಲಿ ಚಟಪಟಗುಟ್ಟುತ್ತಿದೆ? ಶ್ರೀ ಗೋಲ್ವಾಲ್ಕರ್‌ರ ಹೃದಯ ಬಗೆದು ನೋಡಿದರೆ ಅದು ಕಾಣುತ್ತದೆ. 'ಚಾತುರ್ವರ್ಣಕ್ಕೆ ಒಳಪಡುವ ಯಾವ ಹಿಂದೂ ಜನತೆ ಇದೆಯೋ ಅದೇ ನಮ್ಮ ದೇವರು' ಎಂದು ಗೋಲ್ವಾಳ್ಕರ್ ಬರೆಯುತ್ತಾರೆ. ಅಂದರೆ ಚಾತುರ್ವರ್ಣದ ಆಚೆ ಇರುವ ಅಸ್ಪೃಶ್ಯರು ಇವರಿಗೆ ದೆವ್ವವೆ? ಒಟ್ಟಿನಲ್ಲಿ ಶೂದ್ರರು ಸೇವಕರಾಗುವುದು ಇವರಿಗೆ ದೈವ. ಒಟ್ಟಿನಲ್ಲಿ ಈ ದೈವ ಸಾಕ್ಷಾತ್ಕಾರ ಆಗುವವರೆಗೂ ಇವರಿಗೆ ನೆಮ್ಮದಿ ಇಲ್ಲ. ಇವರು ಚಡಪಡಿಸುತ್ತ ಅದಕ್ಕಾಗಿ ಸಮಾಜದ ನೆಮ್ಮದಿ ಕೆಡಿಸುತ್ತಲೇ ಇರುತ್ತಾರೆ. ನೂರೆಂಟು ವೇಷ ಕಟ್ಟುತ್ತಾರೆ. ಚಾತುರ್ವರ್ಣಕ್ಕೆ ವಿರೋಧಿಯಾದ ಮಂಡಲ್ ವರದಿಯನ್ನು ಪ್ರತಿಭಟಿಸುವಾಗ ಒಂದು ಶಾಲಾ ಬಾಲಕಿಯನ್ನು ಬೆಂಕಿಗೆಸೆದು ಹುತಾತ್ಮಳನ್ನಾಗಿಸಿದರು. ಸಾವಿರಾರು ಸಾಧುಸಂತರೆಂಬ ಭ್ರಮಾಧೀನರಿಗೆ ಗಾಂಜಾ ಕುಡಿಸಿ ಆತ್ಮಾಹುತಿಯನ್ನೂ ಮಾಡಿಸುವರು. ಅಷ್ಟೇ ಅಲ್ಲ, ತಮ್ಮ ಭೂತ ತೃಪ್ತಿಗೆ ದೇವರನ್ನೂ ಬಲಿ ಕೊಡುವರು. ಸದ್ಯಕ್ಕೆ ಪಾಪದ ರಾಮನನ್ನು ತಮ್ಮ ಬಾಣ ಮಾಡಿಕೊಂಡಿರುವರು ಹೀಗಿದೆ!"[೨೧]

ವೈದಿಕ ಧರ್ಮವು ಯಾವುದೇ ಆಯಾಮದಿಂದಲೂ ಭಾರತದ ಬಹುಜನರ ಧರ್ಮ ಹಾಗೂ ಸಂಸ್ಕೃತಿ ಆಗಲು ಸಾಧ್ಯವಿಲ್ಲ ಎಂಬುದನ್ನು ತೇಜಸ್ವಿ ಅವರು ವೈದಿಕ ಧರ್ಮದ ತಿರುಳನ್ನು ಬಗೆದು ವಿಶ್ಲೇಷಣೆ ಮಾಡಿದ್ದಾರೆ. ಈ ಬಗ್ಗೆ ಅವರ ಮುಂದಿನ ಮಾತುಗಳನ್ನು ಗಮನಿಸಬಹುದು. "ಅಪೌರುಷೇಯವಾದ ವೇದೋಪನಿಷತ್ತುಗಳ ಅರ್ಥಾತೀತವಾದ ಮಂತ್ರ ಸಮುದಾಯಕ್ಕೆ ನಾವು ಯಾವ್ಯಾವ ರೀತಿಯ ಅರ್ಥಗಳನ್ನೂ ಕಲ್ಪಿಸಿಕೊಂಡರೂ ಅದು ಚತುರ ವ್ಯಾಖ್ಯಾನವಾಗುತ್ತದೆಯೇ ಹೊರತು ನಮ್ಮ ಸಂಸ್ಕೃತಿಯಾಗಲೀ, ಧರ್ಮವಾಗಲೀ ಆಗಲಾರದು. ಸಂಸ್ಕೃತಿ ಎಂಬುದು ಜನಾಂಗ ಒಂದರ ಚಾರಿತ್ರಿಕ ಬದುಕಿನ ಅಂಗ. ಆಚರಣೆಯಾಗಿ ಗೋಚರಿಸದೇ ಇದ್ದುದು ಯಾವ ಕಾಲಕ್ಕೂ ನಮ್ಮ ಸಂಸ್ಕೃತಿಯಾಗಿದ್ದಿತೆಂದು ನಾವು ನಂಬಕೂಡದು. ಭಾರತದಲ್ಲಿನ ಪ್ರತಿಯೊಂದು ಕ್ರಾಂತಿಯೂ, ಪ್ರತಿಯೊಂದು ಸಾಂಸ್ಕೃತಿಕ ಧಾರ್ಮಿಕ ಆಂದೋಳನವೂ ಅತ್ಯಲ್ಪ ಕಾಲದಲ್ಲೋ ಒಂದು ಜಾತಿಯಾಗಿ ತಮ್ಮದೇ ಆದ ಮಠ ಹಾಗೂ ಜಗದ್ಗುರುಗಳನ್ನು

ಸಂಸ್ಥಾಪಿಸಿಕೊಂಡು ಹಿಂದೂ ಧರ್ಮವೆಂಬ ಗಾಢ ತಮಸ್ಸಿನಲ್ಲಿ ಲೀನವಾಗಿ ಹೋದವು."[೨೨] ಹೀಗೆ ಧಾರ್ಮಿಕ ಪ್ರಭುತ್ವ ಅಜ್ಞಾನ, ಮೌಢ್ಯ ಮತ್ತು ಗುಲಾಮಗಿರಿಯಲ್ಲಿ ಬದುಕಬೇಕಾದ ಅನಿವಾರ್ಯತೆಯನ್ನು ನಮ್ಮ ಜನತೆಯಲ್ಲಿ ಬೆಳೆಸಿ ಇದೇ ಸಂಸ್ಕೃತಿ ಎಂದು ಬಿಂಬಿಸಿತು.

ಧಾರ್ಮಿಕ ಪ್ರಭುತ್ವದ ಪ್ರಭಾವದಿಂದ ಭಾರತವನ್ನು ಹಿಂದೂ ರಾಷ್ಟ್ರ ಎಂದು ಕರೆಯಲಾಗುತ್ತಿದೆ. ಭಾರತದಲ್ಲಿ ವಾಸಿಸುವ ಎಲ್ಲಾ ಜನರು ಹಿಂದೂಗಳು ಆಗುತ್ತಾರೆ. ಹಾಗಾದರೆ ಏಕೆ ಈ ಹಿಂದೂ ಸಮಾಜದಲ್ಲಿ ಅಸಮಾನತೆ, ಅಸ್ಪೃಶ್ಯತೆ, ಜಾತೀಯತೆ? ಆದರೆ ಇಲ್ಲಿ ಹಿಂದೂ ಎಂದರೆ ಮೇಲುವರ್ಗದವರಿಗೆ ಮಾತ್ರ ಅನುಸರಿಸಲಾಗುತ್ತಿದೆ. ಮೇಲುನೋಟಕ್ಕೆ ಮಾತ್ರ ತಮ್ಮ ಅಧಿಕಾರವನ್ನು ಚಲಾವಣೆ ಮಾಡಲು ಮೇಲುವರ್ಗದ ಸಂಸ್ಥೆಗಳು ರಾಜಕಾರಣಿಗಳು ಈ ಹಿಂದೂ ಎಂಬುದನ್ನು ಬಳಸಲಾಗುತ್ತಿದೆ. ಆದ್ದರಿಂದ ದೇವನೂರ ಮಹಾದೇವ ಅವರು 'ಹಿಂದೂ ಒಂದು' ಎಂಬುದಾಗಿ ಹಾಗೂ ಸ್ವಜಾತಿಗಳ ನಡುವೆ ಮದುವೆ ಏಕೆ? ಎಂಬ ಪ್ರಶ್ನೆ ಮಾಡುತ್ತಿದ್ದಾರೆ. ನಾವೆಲ್ಲ ಒಂದೇ ಕುಲದವರು ಎಂದು ಘೋಷಣೆ ಮಾಡಿ ಎಂದು ಹಿಂದೂಧರ್ಮದ ಮೂಲಭೂತವಾದವನ್ನು ಪ್ರಶ್ನೆ ಮಾಡುತ್ತಿದ್ದಾರೆ. "ಹೀಗಿರುವಾಗ ಬಿಜೆಪಿ, ಆರ್.ಎಸ್.ಎಸ್.ಗಳಿಗೆ ಒಂದೇ ಪ್ರಾರ್ಥನೆ ಮಾಡುವ ಏನಂತ? ನಮಗೆ ಈ ಮೀಸಲಾತಿಯ ಸಹವಾಸವೇ ಬೇಡ. ಬಡತನ ನಮಗೆ ರೂಢಿಯಾಗಿದೆ. ನಮಗೆ ಒಂದಾದರೆ ಸಾಕು. ಏನೆಂದರೆ 'ಹಿಂದೂ ಒಂದು' ಎನ್ನುವ ನಿಮ್ಮ ನುಡಿಯನ್ನು ನಡೆಯಲ್ಲಿ ತನ್ನಿ. ಅದಕ್ಕಾಗಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದರೆ 'ಹಿಂದೂ ಒಂದು' ಮಾಡುವುದಕ್ಕಾಗಿ 'ಸ್ವಜಾತಿ ಮದುವೆ ಕಾನೂನುಬಾಹಿರ' ಎಂಬುದನ್ನು ಜಾರಿಗೆ ತರುತ್ತೇವೆ ಎಂದು ಬಿ.ಜೆ.ಪಿ. ಘೋಷಿಸಬೇಕು. ಆರ್.ಎಸ್.ಎಸ್. ಇದಕ್ಕಾಗಿ ಪ್ರಚಾರ ಮಾಡಬೇಕು. ಇಂದು ಜಾತಿಯ ಒಳಗೆ ಮದುವೆ ಆಗಿ ಆಗಿ, ಜಾತಿ ಎನ್ನುವುದು ಕುಲದ ಸ್ಥಿತಿಗೆ ಇಳಿದಿದೆ. ಒಂದೇ ಕುಲದೊಳಗೆ ಮದುವೆ ಧರ್ಮಬಾಹಿರ, ಹಿಂದೂ ಪದ ಉಚ್ಚಾರ ಮಾಡುವ ಶ್ರೀ ಪೇಜಾವರ ಮಠಾಧಿಪತಿಗಳು ಇತರ ಮಠಾಧಿಪತಿಗಳನ್ನು ಕಟ್ಟಿಕೊಂಡು 'ಸ್ವಜಾತಿ ಮದುವೆ ಧರ್ಮ ನಿಷಿದ್ಧ' ಎಂದು ಮನೆಮನೆಗೂ ಹೋಗಿ ಮನ ಒಲಿಸಿದರೆ ಆಗ 'ಹಿಂದೂ ಒಂದು' ಎನ್ನುವುದೂ ಒಂದು ಧರ್ಮ ಆಗುತ್ತದೆ. ಆಗ ಹಿಂದೂ ಒಂದಾಗಲು ಪ್ರಾರಂಭಿಸುತ್ತದೆ.."[೨೩] ಆದರೆ ಶ್ರೇಣಿಯ ಸಮಾಜಕ್ಕಾಗಿ ಇರುವ ಕಾನೂನು ಕಟ್ಟಳೆಗಳೇ 'ಹಿಂದೂಧರ್ಮ' ಎಂದಾಗಿದೆ. ಈ ಶ್ರೇಣಿಯ ಕಾನೂನು ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಇದು ಸಾವಿರಾರು ವರ್ಷಗಳಿಂದಲೂ ಧರ್ಮದ ವೇಷ ಹಾಕಿಕೊಂಡು ವಂಚಿಸಿ ವಂಚಿಸಿ ತನ್ನನ್ನು ಧರ್ಮವೆಂದೇ ಭಾವಿಸುವಂತೆ ಮಾಡುತ್ತಿದೆ. ಈ ವೈದಿಕ ಧರ್ಮವು ಯಾವುದೇ ಆಯಾಮದಿಂದಲೂ ಭಾರತದ ಬಹುಜನರ ಧರ್ಮ ಹಾಗೂ ಸಂಸ್ಕೃತಿ ಆಗಲು ಸಾಧ್ಯವಿಲ್ಲ ಎಂಬುದನ್ನು ದೇವನೂರ ಮಹಾದೇವ ಅವರ ವೈದಿಕ ಧರ್ಮದ ತಿರುಳಿನ ಬಗ್ಗೆ ವಿಶ್ಲೇಷಿಸಿದ್ದಾರೆ.

ವೈದಿಕ ಧರ್ಮ ಎಷ್ಟು ಅಪಾಯಕಾರಿ ಎಂಬುದನ್ನು ದೇವನೂರ ಮಹಾದೇವ ಅವರು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. "ಹಿಂದೆ ಇಡೀ ಸಮಾಜವನ್ನು ಬ್ರಾಹ್ಮಣ ಮಠಗಳು ಪ್ರತಿನಿಧಿಸುತ್ತಿದ್ದವು.

ಇತ್ತೀಚೆಗೆ ಮಧ್ಯಮ ಜಾತಿಗಳ ಮಠಗಳು ಪ್ರಬಲಗೊಂಡು ಬಹುಸಂಖ್ಯಾತ ಜನ ಈ ಮಠಗಳಿಗೆ ನಡೆದುಕೊಳ್ಳುತ್ತಿರುವುದರಿಂದ ಬ್ರಾಹ್ಮಣ ಮಠಗಳ ಅಹಂಗೆ ಪೆಟ್ಟು ಬೀಳುತ್ತಿದೆ ಅನ್ನಿಸುತ್ತಿದೆ. ಅದಕ್ಕಾಗಿ ಬ್ರಾಹ್ಮಣ ಮಠಗಳ ಅಹಂ ಇಡೀ ಸಮಾಜವನ್ನು ತಾನು ಪ್ರತಿನಿಧಿಸಬೇಕೆಂಬ ಮೇಲರಿಮೆ ಹುನ್ನಾರವಾಗಿ ಭಜರಂಗದಳ, ಸಂಘಪರಿವಾರಕ್ಕೆ ಆಶೀರ್ವಾದ ಮಾಡುತ್ತಿರುವಂತೆ ಕಾಣುತ್ತಿದೆ. ಹಿಂದುತ್ವ ಪರಿಕಲ್ಪನೆ ಪ್ರಬಲವಾದರೆ ಭಾರತದ ನೂರಾರು ಧರ್ಮಗಳು ಸಾವಿರಾರು ಸಂಪ್ರದಾಯಗಳು ತಂತಾನೇ ನಾಶವಾಗುವುದರಿಂದ ಮತ್ತೆ ಬ್ರಾಹ್ಮಣಶಾಹಿ ತನ್ನ ಮೇಲರಿಮೆ ಕಾಪಾಡಿಕೊಳ್ಳುವುದರ ಹವಣಿಕೆಯಾಗಿ ಇದು ನನಗೆ ಕಾಣಿಸುತ್ತಿದೆ. ಶ್ರೀ ಪೇಜಾವರರ ಚಲನವಲನಗಳೂ ನನಗೆ ಹೀಗೆ ಅನ್ನಿಸಲು ಕಾರಣವಾಯ್ತು."[೨೪] ವೈದಿಕ ಧರ್ಮದ ಪ್ರಾಬಲ್ಯವನ್ನು ಹೆಚ್ಚಿಸಲು ಮೂಲಭೂತವಾದವನ್ನು ಪೋಷಿಸುವ ಭಜರಂಗದಳ, ಸಂಘಪರಿವಾರ, ಸಂಘಸಂಸ್ಥೆಗಳನ್ನು ಹುಟ್ಟುಹಾಕಿ ಅಸಮಾನತೆ, ಹಿಂಸೆ, ತಾರತಮ್ಯ, ಜಾತೀಯತೆ, ಮೇಲು-ಕೀಳು ಸಮಾಜದಲ್ಲಿ ಇರಬೇಕು ಎಂದು ಬಯಸುತ್ತವೆ. ಅಧಿಕಾರಶಾಹಿ ಶತಶತಮಾನದಿಂದ ಬ್ರಾಹ್ಮಣರ ಸ್ವತ್ತಾಗಬೇಕು. ಕಾಲಕ್ಕೆ ತಕ್ಕಂತೆ ತಮ್ಮ ಮೂಲಭೂತವಾದವನ್ನು ಸಮಾಜದಲ್ಲಿ ಬೆಳಸಬೇಕು ಎಂಬುದು ಬ್ರಾಹ್ಮಣಶಾಹಿಯ ಚಿಂತನೆ.

"ಧರ್ಮವು ಜನರನ್ನು ದಾಸ್ಯದಲ್ಲಿರಿಸುವಂತೆ ಮಾಡುವ ಶಕ್ತಿಯನ್ನು ಹೊಂದಿದ್ದು, ಇದೊಂದು ಅಫೀಮಿದ್ದಂತೆ" ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾನೆ. ಹೀಗೆ ವೈದಿಕರು ಧರ್ಮ ಅಫೀಮನ್ನು ಜನರಿಗೆ ಬೋಧಿಸುವುದರ ಮೂಲಕ ಸಮಾಜದಲ್ಲಿ ಸುಗಮದಾರಿಯನ್ನು ಕಂಡುಕೊಂಡಿತು. ಹಾಗಾಗಿ ವೈದಿಕ ಧರ್ಮಪ್ರಜ್ಞೆಯು ಸಮಾಜದಲ್ಲಿ ಅನ್ಯಾಯ, ಅಮಾನವೀಯತೆ, ಅಸಮಾನತೆ, ಶೋಷಣೆ, ಜಾತೀಯತೆ, ಮತಿಯವಾದ, ಅಸ್ಪೃಶ್ಯತೆ ಮತ್ತು ತಾರತಮ್ಯಗಳನ್ನು ಬೆಳೆಸಿತು. ಪ್ರಭುತ್ವದ ಮೂಲಕ ಅವೈಜ್ಞಾನಿಕ ಚಿಂತನೆಗಳನ್ನು ಸಮಾಜದಲ್ಲಿ ಸೃಷ್ಟಿಸಿ ಹೇರಿಕೆ ಮಾಡಿತು. ಹಾಗಾಗಿ ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಿದ ಪ್ರಭುತ್ವವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ವೈದಿಕ ಧರ್ಮ ಶ್ರಮಿಸಿತು. ಆದ್ದರಿಂದ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅವರು ವೈದಿಕ ಧರ್ಮಪ್ರಜ್ಞೆ ಸೃಷ್ಟಿಸಿದ ಕರ್ಮ-ಪ್ರಾರಬ್ಧ, ನರಕ-ಸ್ವರ್ಗ, ಪಾಪ-ಪುಣ್ಯ, ಜನ್ಮ-ಜನ್ಮಾಂತರ ಮುಂತಾದ ಅಮೂರ್ತ ಭಯಗಳನ್ನು ವಿರೋಧಿಸಿದರು ಹಾಗೂ ಸಮಾಜದಲ್ಲಿ ಸಮಾನತೆಯ ಮಾತುಗಳನ್ನು ಹೇಳಿದರು. ಈ ರೀತಿಯಾಗಿ ವೈದಿಕ ಧರ್ಮಪ್ರಜ್ಞೆ ಪ್ರಭುತ್ವದ ಜೊತೆ ನೆಡೆಸಿದ ಯಾಜಮಾನ್ಯವನ್ನು ನೋಡಬಹುದಾಗಿದೆ.

೬.೧.೩. ಪುರೋಹಿತಶಾಹಿ

ಪ್ರಭುತ್ವವು ಸದಾಕಾಲವೂ ತನ್ನ ನಿಯಂತ್ರಣದಲ್ಲಿ ಇರಬೇಕು ಎಂದು ಬಯಸಿದ್ದು ಪುರೋಹಿತಶಾಹಿ. ಹಾಗಾಗಿ ಪ್ರಭುತ್ವವು ವೈದಿಕರ ನಿಯಂತ್ರಣದಲ್ಲಿ ಇತ್ತು. ಪ್ರಾಚೀನ ಕಾಲದಿಂದಲೂ ಪ್ರಭುತ್ವವನ್ನು ರಚಿಸುವ ಹಾಗೂ ಅದನ್ನು ಮಾನ್ಯ ಮಾಡುವ ವಿಧಿಗಳನ್ನು ಪುರೋಹಿತಶಾಹಿ ವ್ಯವಸ್ಥಿತವಾಗಿ ಮಾಡಿಕೊಂಡು ಬಂದಿದೆ. ಆದ್ದರಿಂದ ವೈದಿಕ ಸಂಪ್ರದಾಯಗಳು ಒಂದು ಅಧಿಕಾರ

ಸಂಸ್ಥೆಯಾಗಿ ಬೆಳೆದುಕೊಂಡು ಬಂದಿವೆ. ರಾಜಪ್ರಭುತ್ವದಲ್ಲಿ ರಾಜನ ಹಿತವನ್ನು ಬಯಸಿ, ರಾಜನ ಆಪ್ತರಂಗದಲ್ಲಿ ಅನಿವಾರ್ಯ ಅಂಗವಾಗಿ ಪರಿಗಣಿಸಿತು. ಹೀಗೆ ಪುರೋಹಿತಶಾಹಿ ಒಂದು ಶಕ್ತಿಯಾಗಿ ಸಮಾಜದಲ್ಲಿ ಬೆಳೆಯಿತು. ಧರ್ಮ, ಧರ್ಮಗುರುಗಳು, ಬುದ್ಧಿಜೀವಿಗಳು, ಮಧ್ಯಮವರ್ಗ, ಅಧಿಕಾರಿವರ್ಗ ಮುಂತಾದ ವ್ಯವಸ್ಥೆಗಳಲ್ಲಿ ಪುರೋಹಿತಶಾಹಿ ಪ್ರಧಾನ ಪಾತ್ರ ವಹಿಸಿತು. ರಾಜಪ್ರಭುತ್ವದಲ್ಲಿ ರಾಜನ ಲೌಕಿಕ ಅಧಿಕಾರವನ್ನು ನಿಭಾಯಿಸುವ ಮತ್ತು ಪಲ್ಲಟಗೊಳಿಸುವಲ್ಲಿ ಪುರೋಹಿತಶಾಹಿ ಅನಿವಾರ್ಯ ಅಂಗವಾಗಿ ಗುರುತಿಸಿಕೊಂಡಿತು. ಪ್ರಭುತ್ವಕ್ಕೆ ಅನುಕೂಲಕರವಾದ ಲೋಕದೃಷ್ಟಿಯನ್ನು ಬೆಳೆಸಲು ಮಠ, ಅಗ್ರಹಾರ ಮತ್ತು ದೇವಸ್ಥಾನಗಳನ್ನು ಪುರೋಹಿತಶಾಹಿ ಪರಿಣಾಮಕಾರಿಯಾದ ಅಧಿಕಾರಕೇಂದ್ರಗಳಾಗಿ ಮಾಡಿಕೊಂಡಿತು.

ಪುರೋಹಿತಶಾಹಿ ಎಂಬ ಪರಿಕಲ್ಪನೆಯೇ ಸಾಮಾಜಿಕವಾಗಿ ವಿರೋಧಾತ್ಮಕವಾದ ಮತ್ತು ಅಪಾಯಕಾರಿಯಾದ ಪರಿಭಾಷೆ ಆಗಿದೆ. ಸಮಾಜದಲ್ಲಿರುವ ಸಾಮಾನ್ಯ ಜನರನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ತಮ್ಮದೇ ಹಿಡಿತವನ್ನು ಸಾಧಿಸುವ ಮನೋಧರ್ಮ ಪುರೋಹಿತಶಾಹಿಯದು. ವೈದಿಕ ವಿಧಿವಿದಾನಗಳನ್ನು ಆಚರಿಸುವ ಮತ್ತು ನಾವು ಶ್ರೇಷ್ಠ ಎಂದು ಹೇಳಿಕೊಂಡು ಉಳಿದವರೆಲ್ಲ ಕನಿಷ್ಠ ಎಂದು ಹೇಳುವ ದೃಷ್ಟಿಯಲ್ಲಿ ಮತ್ತು ದೇವರು ಮತ್ತು ಮಾನವನ ನಡುವಿನ ಮಧ್ಯವರ್ತಿಗಳಾಗಿ ಧರ್ಮದ ಏಕಸ್ವಾಮ್ಯವನ್ನು ಹೊಂದಿ ಆಳ್ವಿಕೆಯನ್ನು ಮಾಡುತ್ತಿರುವವರು ಪುರೋಹಿತಶಾಹಿ ಎಂದು ಕರೆಯಲಾಗಿದೆ. ಪುರೋಹಿತಶಾಹಿ ಎಂಬ ಪರಿಕಲ್ಪನೆ ಯಾಜಮಾನ್ಯ ಸಂಸ್ಕೃತಿಯ ಒಂದು ರೂಪಕ. ಆದರೆ ಕುವೆಂಪು ಈ ಪುರೋಹಿತಶಾಹಿಯ ಪರಿಕಲ್ಪನೆಯನ್ನು ಭಿನ್ನವಾಗಿ ನೋಡಿದ್ದಾರೆ. "ನಮ್ಮ ದೇಶದಲ್ಲಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಸಾಮಾನ್ಯವಾಗಿ ಬ್ರಾಹ್ಮಣವರ್ಗ ಅಂತ. ಆದರೆ ವಾಸ್ತವವಾಗಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಬರೀ ಬ್ರಾಹ್ಮಣವರ್ಗವಲ್ಲ. ಹಿಂದೂಗಳಲ್ಲಿ ಬ್ರಾಹ್ಮಣವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿ ಇದೆ. ಅಲ್ಲಿ ಅದನ್ನು ಯಾವ ಜಾತಿ ಎಂದು ಕರೆಯುವುದು? ಮುಸ್ಲಿಮರಲ್ಲೂ ಪುರೋಹಿತಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿ ಇದ್ದೇ ಇದೆ"[೨೫] ಈ ರೀತಿಯಾಗಿ ಕುವೆಂಪು ಪುರೋಹಿತಶಾಹಿಯನ್ನು ವಿಶಾಲ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಯಾವುದೇ ಧರ್ಮ, ಮತ, ವರ್ಗಕ್ಕೆ ಸೀಮಿತವಾಗದೆ ಸಮಷ್ಟಿ ದೃಷ್ಟಿಯಲ್ಲಿ ನೋಡಿದ್ದಾರೆ. ಪುರೋಹಿತಶಾಹಿ ಎಂಬ ಪರಿಕಲ್ಪನೆಯನ್ನು ಒಂದು ಜಾತಿಗೆ ಮಾತ್ರ ಸೀಮಿತಮಾಡಬಾರದು. ಪುರೋಹಿತಶಾಹಿ ಬರಿ ಬ್ರಾಹ್ಮಣ ವರ್ಗವಲ್ಲ, ಇದು ಮುಸ್ಲಿಮರಲ್ಲೂ, ಕ್ರೈಸ್ತರಲ್ಲೂ, ಬೌದ್ಧರಲ್ಲೂ ಇದೆ. ಈ ಪುರೋಹಿತಶಾಹಿಯ ತಾತ್ವಿಕತೆ ಒಂದಥ ಎಂಬುದು ಕುವೆಂಪು ಅವರು ಪುರೋಹಿತಶಾಹಿ ಪರಿಕಲ್ಪನೆಗೆ ವಿಶಾಲ ಅರ್ಥವನ್ನು ಕೊಟ್ಟಿದ್ದಾರೆ.

ಕುವೆಂಪು ಯಾವುದೇ ಗುಂಪು, ಪಂಥ, ಜಾತಿಗಳ ಮೇಲೆ ವಿರೋಧವನ್ನು ವ್ಯಕ್ತಪಡಿಸದೆ ಸಮಾಜದಲ್ಲಿ ಪ್ರಭುತ್ವದ ಸಹಾಯದಿಂದ ಅರ್ಥಹೀನ ಮೌಲ್ಯವನ್ನು ಬೆಳೆಸಲು ಮುಂದಾದ ಪುರೋಹಿತಶಾಹಿಯನ್ನು ಖಂಡಿಸುತ್ತಾರೆ. ಪುರೋಹಿತಶಾಹಿಯು ಸಮಾಜದಲ್ಲಿ ತನ್ನ ಸ್ವಾರ್ಥಕ್ಕಾಗಿ,

ತನ್ನ ಏಳ್ಗೆಗಾಗಿ ಮೂಲೋಪದೇಶಗಳನ್ನು ವಿಕೃತಗೊಳಿಸಿ ದ್ವೇಷ ಅಸೂಯೆಗಳನ್ನು ಸೃಷ್ಟಿಸುತ್ತಿರುವ, ಅಮಾನವಿಯ ನೆಲೆಗಳನ್ನು ಕುವೆಂಪು ಈ ರೀತಿ ಹೇಳಿದ್ದಾರೆ. "ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಹಾಗೆ ಬರಗೊಡಿಸಬೇಕೆ ಬೇಡವೇ ಎಂಬ ಚರ್ಚೆ ನಡೆಸುವುದು; ಇತ್ಯಾದಿ ಕೆಲಸಕ್ಕೂ ಬಾರದ ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ."[೨೬] ಪುರೋಹಿತಶಾಹಿಯ ಹುನ್ನಾರ ಕ್ರೌರ್ಯಗಳು ಮತ್ತು ತಮ್ಮ ಸಂಪ್ರದಾಯ ಕಟ್ಟಲೆಗಳನ್ನು ಕುವೆಂಪು ವಿರೋಧಿಸಿದ್ದಾರೆ. ಅಲ್ಲದೆ ಪ್ರಭುತ್ವದಲ್ಲಿ ಜಾತಿವ್ಯವಸ್ಥೆಯನ್ನು ಸೃಷ್ಟಿ ಮಾಡಿ ಆಳುವ ವರ್ಗವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ಕಾನೂನು ಕಟ್ಟಲೆಗಳನ್ನು ಈ ಪುರೋಹಿತಶಾಹಿ ಮಾಡುತ್ತಿದೆ. ಪುರೋಹಿತಶಾಹಿ ಅಮಾನವೀಯ ಮನೋಭಾವಗಳು ಜನಸಾಮಾನ್ಯರನ್ನು ವಂಚಿಸುವುದು, ನಾಗರಿಕ ಹಕ್ಕುಗಳನ್ನು ದಮನಿಸುವುದು, ಸ್ತ್ರೀಯರನ್ನು ಶೋಷಿಸುವುದು, ವಿದ್ಯೆಯ ಅವಕಾಶಗಳನ್ನು ಕೆಳವರ್ಗದವರಿಗೆ ತಪ್ಪಿಸುವುದು, ಪುರಾಣ ಮತ್ತು ಮಂತ್ರಗಳನ್ನು ತಮ್ಮ ಹಿತಾಸಕ್ತಿಗೆ ಅನುಗುಣವಾಗಿ ಬಳಸಿಕೊಂಡು ಪ್ರಭುತ್ವವನ್ನು ನಿಯಂತ್ರಿಸಿತು.

ಪ್ರಭುತ್ವವನ್ನು ವಸಾಹತುಶಾಹಿ ಮತ್ತು ಪುರೋಹಿತಶಾಹಿಗಳು ಆಳ್ವಿಕೆಯನ್ನು ಮಾಡುತ್ತಾ ಬಂದಿರುವುದನ್ನು ನಾವು ಗಮನಿಸಬಹುದು. ಆದರೆ ವಸಾಹತುಶಾಹಿ ಪ್ರಭುತ್ವವನ್ನು ಆಳ್ವಿಕೆಯನ್ನು ಮಾಡುವಾಗ ಕೆಲವು ಸಕಾರಾತ್ಮಕ ಅಂಶಗಳನ್ನು ಕಾಣಬಹುದು. ಪುರೋಹಿತಶಾಹಿಯಿಂದ ಯಾವುದೇ ಸಕಾರಾತ್ಮಕ ಅಂಶಗಳನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕುವೆಂಪು ಅವರು ಪುರೋಹಿತವರ್ಗವನ್ನು ಹೇಗೆ ಕೊಲ್ಲಬೇಕು ಎನ್ನುತ್ತಾರೆ ಎಂದರೆ, "ಹುಲಿಯನ್ನು ಕೊಲ್ಲುತ್ತೇನೆ ಎಂದು ಹುಲಿ ಅಲ್ಲಿ ಇರುವಾಗ ಒಂದಿಷ್ಟು ಕಲ್ಲು ತೆಗೆದುಕೊಂಡು ಸರಿಯಾಗಿ ತಲೆಗೆ ಗುರಿಯಿಟ್ಟು ಹೊಡೆಯುತ್ತೇನೆಂದರೆ ಏಟು ಬಿದ್ದ ಕೂಡಲೇ ಅದು ಒಂದು ಆಮ್ ಅಂತ ನಿಮ್ಮನ್ನು ಅಪ್ಪಳಿಸಿ ಒಂದೇ ಬಾರಿಗೆ ಪೂರೈಸುತ್ತದೆ. ಅದನ್ನು ಹೊಡೆಯಬೇಕಾದರೆ ನೀವು ಜೋಡುನಳಿಗೆ ತೋಟಾಕೋವಿ ಇಟ್ಟುಕೊಂಡು ಬಿಲ್ಲೆತ್ತಿ ಎಳೆದುಕೊಳ್ಳಬೇಕು; ಹಾಗೆ ಗುರಿಕಟ್ಟಿ ತಲೆಗೆ ಹೊಡೆದರೆ ಒಂದೇ ಹೊಡೆತಕ್ಕೆ ಅದು ಬೀಳಬೇಕು. ಅದು ಬಿಟ್ಟು ಗಾಯಮಾಡಿ ಬಿಡೋದಲ್ಲ. ಹಾಗೆಯೆ ಈ ಪುರೋಹಿತಶಾಹಿ ಹುಲಿಯಂತೆ."[೨೭] ಇಲ್ಲಿ ಕುವೆಂಪು ಯಾವುದೇ ಜಾತಿ ದ್ವೇಷ ಇಲ್ಲದೆ ಪುರೋಹಿತಶಾಹಿಯನ್ನು ಖಂಡಿಸುತ್ತಿದ್ದಾರೆ. ಪ್ರಭುತ್ವದಲ್ಲಿ ಸಮಾನತೆ ಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದಲೇ ಕುವೆಂಪು ವಿಶ್ವಮಾನವ ಸಂದೇಶವನ್ನು ಸಾರಿದ್ದು. ಸಮಾಜದಲ್ಲಿ ಇರುವ ಎಲ್ಲಾ ಮನುಷ್ಯರು ವಿಶ್ವಮಾನವರಾಗಬೇಕು ಎಂದು ತಮ್ಮ ನಾಟಕಗಳಲ್ಲಿ ಕರ್ಣ, ಶಂಬೂಕ, ಜಲಗಾರ, ಏಕಲವ್ಯ,

ಪಾತ್ರಗಳನ್ನು ಸೃಷ್ಟಿಸಿದರು. ಈ ಪಾತ್ರಗಳಿಗೆ ಸಾಮಾಜಿಕ ಸಮಾನತೆಯನ್ನು ಕೊಡುವುದಕ್ಕಾಗಿ ಜಲಗಾರ, ಶೂದ್ರತಪಸ್ವಿ, ಬೆರಳ್‌ಗೆ ಕೊರಳ್ ನಾಟಕದಲ್ಲಿ ಪುರೋಹಿತಶಾಹಿಯನ್ನು ವಿಡಂಬಿಸುವುದರ ಜೊತೆಗೆ ಪ್ರತಿಭಟಿಸಿರುತ್ತಾರೆ.

ಕುವೆಂಪು ಅವರು ತಮ್ಮ ಕತೆ, ಕವಿತೆ, ನಾಟಕ, ಕಾದಂಬರಿ, ಮಹಾಕಾವ್ಯಗಳಲ್ಲಿ ಪುರೋಹಿತಶಾಹಿಯನ್ನು ಸೃಜನಶೀಲ ಮತ್ತು ಸೃಜನೇತರ ಕೃತಿಗಳಲ್ಲಿ ವಿಡಂಬನೆ ಮಾಡಿದ್ದಾರೆ. ಇವರ ಸಾಹಿತ್ಯದಲ್ಲಿ ಹಾಸ್ಯ, ವ್ಯಂಗ್ಯ, ನಕಲಿ, ಗೇಲಿ, ಲೇವಡಿ ಕೊಂಕುನುಡಿ, ಮೂದಲಿಕೆ, ವಿಕಟ ಹಾಸ್ಯ, ಜಾಣ್ನುಡಿಗಳು ಸಿಗುತ್ತವೆ. ಅಲ್ಲದೆ ತಮ್ಮ ಉದ್ದೇಶಗಳನ್ನು ಸಾಧಿಸುವುದಕ್ಕೆ ನೇರವಾಗಿ ಮತ್ತು ವ್ಯಂಗ್ಯವಾಗಿ ವಿಡಂಬನೆ ಮಾಡಿದ್ದಾರೆ. ಪುರೋಹಿತಶಾಹಿ ಸಮಾಜದಲ್ಲಿ ತನ್ನ ಅವೈಜ್ಞಾನಿಕ ವಿಧಾನಗಳು, ಕಂದಾಚಾರಗಳು, ಮೋಸ–ವಂಚನೆ ಮತ್ತು ಅವರ ಪೂಜಾ ವಿಧಾನವನ್ನು ಕುವೆಂಪು "ಧ್ರಾಂ ಧ್ರೀಂ ಧ್ರೂಂ" ಕವಿತೆಯಲ್ಲಿ ವಿಡಂಬನೆ ಮಾಡಿದ್ದಾರೆ. ಘಜನಿಯ ಮಹಮೂದನು ದಂಡೆತ್ತಿ ಬಂದಾಗ ಈ ಪುರೋಹಿತಶಾಹಿಯು ಬೆಚ್ಚಿತು ಬೆದರಿತು ವೈದಿಕ ಕ್ರಿಯವಿಧಿಗಳ ಮೂಲಕ ಘಜನಿಯನ್ನು ಎದುರಿಸಲು ಮುಂದಾಗಿದ್ದು. ಪುರೋಹಿತಶಾಹಿಯು ಈ ಘಜನಿಯ ಮಹಮದನಅನ್ನು ಕತ್ತಿ ಗುರಾಣಿಗಳಿಂದ ಹೆದರಿಸದೆ ವೈದಿಕ ಮಂತ್ರಗಳ ಮೂಲಕ ಎದುರಿಸು ಮುಂದಾದ ಪುರೋಹಿತಶಾಹಿಯ ಬೌದ್ಧಿಕ ಅವನತಿಗೆ ಭರತಖಂಡ ದಾಸ್ಯವಾಯಿತು. "ಧ್ರಾಂ ಧ್ರೀಂ ಧ್ರೂಂ" ಕಾವ್ಯದಲ್ಲಿ ಕುವೆಂಪು ಸೋಮಾರಿಗಳ ವಂಶವಾದ ಪುರೋಹಿತಶಾಹಿಯನ್ನು ವ್ಯಂಗ್ಯ ಮಾಡುತ್ತಾ, ಅಜ್ಞಾನ, ಮೌಢ್ಯ, ದಾರಿದ್ರ್ಯಗಳನ್ನು ತೋರಿಸುತ್ತಾರೆ. ಘಜನಿ ಮಹಮ್ಮದನನ್ನು ಶಸ್ತ್ರಾಸ್ತ್ರಗಳಿಂದ ಎದುರಿಸದೆ ವೈದಿಕ ಮಂತ್ರ ತಂತ್ರಕ್ಕೆ ಎದುರಿಸಲು ಮುಂದಾಗುತ್ತಾರೆ. ಯಾರಿಗೂ ಅರ್ಥವಾಗದ ಮಂತ್ರಗಳನ್ನು ಹೇಳಿಕೊಂಡು ಜನಸಾಮಾನ್ಯರಿಗೆ ವಂಚನೆಯನ್ನು ಮಾಡುತ್ತಿರುವುದು ಈ ಪದ್ಯದಲ್ಲಿ ವ್ಯಕ್ತವಾಗಿದೆ. ರಾಜರ ಜೊತೆ ಕೈ ಜೋಡಿಸಿ ತನ್ನ ರಾಜಕೀಯ ಪ್ರಾಬಲ್ಯವನ್ನು ಮುಂದುವರಿಸಿ ರಾಜರನ್ನು ತನ್ನ ದಾಸ್ಯಕ್ಕೆ ಒಳಗುಮಾಡಿಕೊಂಡಿವೆ. ಕುವೆಂಪು ಪುರೋಹಿತಶಾಹಿಯನ್ನು ಪೂಜಾರಿಗಳ ಡೊಳ್ಳು ಹೊಟ್ಟೆ ಕಂಪಿಸುತ್ತದೆ; ಶಾಸ್ತ್ರವನ್ನೆಲ್ಲಾ ಕೇರೀ, ತೂರೀ ಬಹುಸಂಶೋಧನೆ ಮಾಡಿ ಧ್ರಾಂ ಧ್ರೀಂ ಧ್ರೂಂ ಎಂಬ ಅಜ್ಞಾನಿಗಳ ಡಂಬಾಚಾರವನ್ನು ವ್ಯಂಗ್ಯವಾಗಿ ಕುವೆಂಪು ಚಿತ್ರಿಸಿದ್ದಾರೆ. ಪುರೋಹಿತಶಾಹಿಯ ಸಂಸ್ಕೃತಿಯಿಂದ ದೇಶದ ಪ್ರಗತಿಗೆ ತೊಡಕಾಗಿರುವ ವೈದಿಕ ಧರ್ಮ, ಮಂತ್ರ ಶಕ್ತಿ, ಪೂಜಾರಿಗಳ ವರ್ಗವನ್ನು ಕುವೆಂಪು ತಮ್ಮ ಹಲವಾರು ಕಾವ್ಯಗಳಲ್ಲಿ ಹಾಸ್ಯವಾಗಿ ನಿರೂಪಿಸಿದ್ದಾರೆ.

ಪುರೋಹಿತಶಾಹಿ ಪ್ರಭುತ್ವದಲ್ಲಿ ಸೃಷ್ಟಿ ಮಾಡಿದ ಪೂಜೆ, ಆಚರಣೆ, ನಂಬಿಕೆಗಳನ್ನು ಕುವೆಂಪು ವಿರೋಧಿಸುತ್ತಿದ್ದರು ಎಂದು ಪೂರ್ಣಚಂದ್ರ ತೇಜಸ್ವಿ ಅವರು ಅಣ್ಣನ ನೆನಪು ಪುಸ್ತಕದಲ್ಲಿ ಈ ರೀತಿ ಹೇಳುತ್ತಾರೆ. "ಅಣ್ಣ ದೇವಸ್ಥಾನಗಳಿಗೆ ಹೋಗುವುದು, ಪೂಜೆ ಮಾಡಿಸುವುದು ಇವಕ್ಕೆಲ್ಲಾ ಸಂಪೂರ್ಣ ವಿದಾಯ ಹೇಳಿದ್ದರು. ಅಲ್ಲದೆ ಇದನ್ನೆಲ್ಲಾ ಮಾಡುವವರು ಪಕ್ಕಾ ಮೋಸಗಾರರು, ಇಲ್ಲವೇ ಪಕ್ಕಾ ಮೂಢರು ಎಂದು ನಂಬಿದ್ದರು."[೨೮] ಪುರೋಹಿತಶಾಹಿ ಯಾವುದೇ ಶ್ರಮ

ಕೆಲಸವನ್ನು ಮಾಡದೆ, ಶ್ರಮ ಕೆಲಸ ಮಾಡುವ ಜನರನ್ನು ಭಯ ಭಕ್ತಿಗಳಿಂದ ಅವರನ್ನು ವಂಚಿಸಿ ಪೂಜೆ ಮಾಡುತ್ತಿದ್ದರು. ಆದ್ದರಿಂದ ಪುರೋಹಿತಶಾಹಿಯ ಪೂಜೆ, ಆಚರಣೆ, ನಂಬಿಕೆಗಳನ್ನು ಕುವೆಂಪು ವಿರೋಧಿಸುತ್ತಿದ್ದರು.

ಪುರೋಹಿತಶಾಹಿ ದೇವರ ಹೆಸರಿನಲ್ಲಿ ಮಾಡುತ್ತಿರುವ ಹುನ್ನಾರಗಳು ಮತ್ತು ವಂಚನೆಗಳನ್ನು ದೇವನೂರ ಮಹಾದೇವ ಅವರು ಈ ರೀತಿ ವಿಶ್ಲೇಷಣೆ ಮಾಡಿದ್ದಾರೆ. "ದೇವರು ಧರ್ಮ, ಶಾಸ್ತ್ರಗಳನ್ನೂ ದುರುಪಯೋಗಪಡಿಸಿಕೊಂಡ ಪಾಪವು ಭಾರತದ ನೆಲದಲ್ಲಿ ನಡೆದಿದೆ. ಇಲ್ಲಿ ಧರ್ಮವೂ ಅಪರಾಧಿ. ರೋಮನ್ ಕಾನೂನು ಮನುಷ್ಯನನ್ನು ಗುಲಾಮನನ್ನಾಗಿಸಿದರೆ, ರೋಮನ್ ಧರ್ಮ ಅದನ್ನು ಒಪ್ಪುವುದಿಲ್ಲ. ಆದರೆ ಭಾರತದಲ್ಲಿ ಧರ್ಮಗಳೇ ಮುಂದಾಗಿ ನಿಂತು ತಾರತಮ್ಯದ ಕಾನೂನು ಮಾಡಿಸಿದ ಇತಿಹಾಸವಿದೆ. ಹಾಗಾಗಿ ಇಲ್ಲಿ 'ಮಾದಿಗ ಸತ್ತ, ಮೈಲಿಗೆ ಕಮ್ಮಿಯಾಯಿತು' ಎಂಬಂಥ ಗಾದೆಗಳು ಹುಟ್ಟಿವೆ. ಇಂತ ಮನಃಸ್ಥಿತಿಯೇ ಭಾತದಲ್ಲಿ ವರ್ಣ ವರ್ಣಗಳ ನಡುವೆ ಮದುವೆಯಾದಾಗಲೂ ಈ ಕೂಡುವಿಕೆ ಕೂಡ ಭಾರತವನ್ನು ಐಕ್ಯದ ಕಡೆಗೆ ನಡೆಯದಂತೆ ಮಾಡಿತು. ಬ್ರಾಹ್ಮಣ ಹೆಣ್ಣು ಶೂದ್ರ ಗಂಡಿಗೆ ಹುಟ್ಟಿದ ಸಂತಾನವನ್ನು ಅಸ್ಪೃಶ್ಯನನ್ನಾಗಿಸಿ ಸಮಾಜ ಆಚೆಗೆ ಎಸೆದುಬಿಟ್ಟಿತು. ಮತ್ತಷ್ಟು ಪ್ರತ್ಯೇಕತೆಯನ್ನು ಉಂಟುಮಾಡಿತು."[೨೯] ವೈದಿಕ ಧರ್ಮವನ್ನು ಪ್ರತಿಪಾದಿಸುವ ಪುರೋಹಿತಶಾಹಿ ಕೆಳವರ್ಗದ ಜನರಿಗೆ ಮಾಡಿರುವ ಕಾನೂನು ಕಟ್ಟಳೆಗಳು ಅಮಾನವೀಯ ಕೃತ್ಯಗಳನ್ನು ಲೇಖಕರು ವಿವರಿಸಿದ್ದಾರೆ. ವೈದಿಕ ಧರ್ಮದಲ್ಲಿ ಇರುವ ಅನಿಷ್ಟ ಪದ್ಧತಿಗಳನ್ನು ಉಲ್ಲೇಖಿಸುತ್ತಾ ವಿರೋಧಿಸಿದ್ದಾರೆ.

ಕುವೆಂಪು ಪುರೋಹಿತಶಾಹಿಯನ್ನು ಯಾವುದೇ ಜಾತಿ ದ್ವೇಷ ಇಲ್ಲದೆ ಖಂಡಿಸುತ್ತಾರೆ. ಹಾಸ್ಯ, ವ್ಯಂಗ್ಯ, ನಕಲಿ, ಗೇಲಿ, ಲೇವಡಿ ಕೊಂಕುನುಡಿ, ಮೂದಲಿಕೆಯ ಮೂಲಕ ಪುರೋಹಿತಶಾಹಿಯನ್ನು ವಿರೋಧಿಸುತ್ತಾರೆ. ಪ್ರಪಂಚದ ಎಲ್ಲ ಧರ್ಮಗಳಲ್ಲಿ ಪುರೋಹಿತಶಾಹಿ ಇದೆ ಎಂದು ವಿಶಾಲ ದೃಷ್ಟಿಕೋನದಲ್ಲಿ ಹೇಳುತ್ತಾರೆ. ಪ್ರಭುತ್ವದಲ್ಲಿ ಜಾತಿವ್ಯವಸ್ಥೆಯನ್ನು ಸೃಷ್ಟಿ ಮಾಡಿ ಆಳುವ ವರ್ಗವನ್ನು ತನ್ನ ಹಿಡಿತದಲ್ಲಿ ಇಟ್ಟಿಕೊಂಡು ಕಾನೂನು ಕಟ್ಟಲೆಗಳನ್ನು ಮಾಡುತ್ತಿದೆ. ಪುರೋಹಿತಶಾಹಿಯ ಹುನ್ನಾರ ಕ್ರೌರ್ಯಗಳು ಮತ್ತು ಸಂಪ್ರದಾಯ ಕಟ್ಟಲೆಗಳನ್ನು ಕುವೆಂಪು ವಿರೋಧಿಸಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರು ಕೂಡ ಪುರೋಹಿತಶಾಹಿಯ ಹುನ್ನಾರಗಳನ್ನು ವಿರೋಧಿಸುತ್ತಾರೆ. ಪ್ರಭುತ್ವದಲ್ಲಿ ಪುರೋಹಿತಶಾಹಿ ಕಾನೂನು ಕಟ್ಟಳೆಗಳ ಮೂಲಕ ಕೆಳವರ್ಗದ ಜನರನ್ನು ನಿಯಂತ್ರಿಸುತ್ತಿರುವ ಬಗ್ಗೆ ದೇವನೂರ ಮಹಾದೇವ ಅವರು ವಿರೋಧ ವ್ಯಕ್ತಪಡಿಸುತ್ತಾರೆ.

೬.೨. ಸಾಮಾಜಿಕ ಪ್ರಭುತ್ವ

ಸಾಮಾಜಿಕ ಮೌಲ್ಯಗಳ ಒಡೆತನವೇ ಸಾಮಾಜಿಕ ಪ್ರಭುತ್ವವಾಗಿದೆ. ಹಾಗಾಗಿ ವೈದಿಕ ಧರ್ಮವನ್ನು ಪ್ರತಿಪಾದಿಸುವ ಪುರೋಹಿತಶಾಹಿ ಮತ್ತು ವೈದಿಕ ಮಠಗಳು ಸಾಮಾಜಿಕ ಪ್ರಭುತ್ವವನ್ನು ತಮ್ಮ ಒಡೆತನದಲ್ಲಿ ಮತ್ತು ತಮ್ಮ ಹತೋಟಿಯಲ್ಲಿ ಇರಬೇಕು ಎಂದು ಬಯಸುತ್ತವೆ. ಆದ್ದರಿಂದ ವೈದಿಕರು ವರ್ಗಸಮಾಜವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಮತ್ತು ಸಾಮಾಜಿಕ

ಸಂಪತ್ತಿನ ಮೇಲೆ ಏಕಸ್ವಾಮ್ಯ ಸಾಧಿಸಲು ಸಂಘಸಂಸ್ಥೆಗಳ ಮೂಲಕ ಸಾಮಾಜಿಕ ಪ್ರಭುತ್ವವನ್ನು ನಿಯಂತ್ರಿಸಿದರು. ಈ ಮೂಲಕ ಶ್ರೇಣೀಕರಣದ ಸಾಮಾಜಿಕ ವ್ಯವಸ್ಥೆ ಹೇಗಿರಬೇಕು ಎಂದು ನಿರೂಪಿಸಿದರು. ಹೀಗಾಗಿ ಸಾಮಾಜಿಕ ಸಂಘರ್ಷಗಳ ಮೇಲಿನ ಒಡೆತನ ಹಾಗೂ ಪ್ರಭುತ್ವದ ಮೇಲಿನ ನಿಯಂತ್ರಣದಿಂದ ವೈದಿಕರು ಆಳುವ ವರ್ಗವಾಗಿ ಹಾಗೂ ಯಾಜಮಾನ್ಯ ವರ್ಗವಾಗಿ ಸಮಾಜವನ್ನು ತಮ್ಮ ಲಾಭಕ್ಕೆ ತಕ್ಕಂತೆ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದರು. ವೈದಿಕರು ಧಾರ್ಮಿಕ ಪ್ರಭುತ್ವದಿಂದ ಸಮಾಜದ ಮೇಲೆ ತಮ್ಮ ಮುದ್ರೆಯನ್ನು ಒತ್ತಿ ಸಾಮಾಜಿಕ ಹಿಡಿತವನ್ನು ಸಾಧಿಸುವಲ್ಲಿ ಯಶಸ್ವಿಯಾದರು. ಸಮಾಜದಲ್ಲಿ ಸ್ಥಾಪಿತವಾಗಿರುವ ಜಾತಿ, ವರ್ಣ, ಲಿಂಗ ತಾರತಮ್ಯಗಳನ್ನು ಪೋಷಿಸುವುದೇ ವೈದಿಕ ಧರ್ಮದ ಗುರಿಯಾಗಿದೆ.

ಸಮಾಜದಲ್ಲಿ ವೈದಿಕ ಧರ್ಮ ಮಾಡಿದ ಜಾತಿಪದ್ಧತಿ ಮತ್ತು ವರ್ಣಾಶ್ರಮ ಪದ್ಧತಿಯನ್ನು ಬೌದ್ಧ, ಜೈನ, ಚಾರ್ವಾಕ ಮತ್ತು ವಚನ ಸಾಹಿತ್ಯ ವಿರೋಧಿಸಿತು. ವೈದಿಕರು ತಮ್ಮ ಅನುಕೂಲಕ್ಕೆ ಮಾಡಿಕೊಂಡ ಅನಿಷ್ಟ ಪದ್ಧತಿಗಳನ್ನು ಆಧುನಿಕ ಸಂದರ್ಭದಲ್ಲಿ ಪಾಶ್ಚಾತ್ಯ ಕ್ರೈಸ್ತ ಮಿಷನರಿಗಳೂ ಕೂಡ ವಿರೋಧಿಸಿದವು. ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವದ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಜಾತಿಪದ್ಧತಿ, ವರ್ಣಾಶ್ರಮಪದ್ಧತಿ ಮತ್ತು ಲಿಂಗತಾರತಮ್ಯವನ್ನು ವಿಮರ್ಶಿಸಿ ವಿಶ್ಲೇಷಣೆ ಮಾಡಲಾಯಿತು. ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವೈದಿಕಶಾಹಿಯ ಸಾಮಾಜಿಕ ಪ್ರಭುತ್ವವನ್ನು ವಿರೋಧಿಸಿರುವುದು ಮತ್ತು ವೈದಿಕರು ಪ್ರತಿಪಾದಿಸುವ ಜಾತಿ, ವರ್ಣಗಳ ಬಗ್ಗೆ ಉಲ್ಲೇಖ ಮಾಡಿರುವುದನ್ನು ಗುರುತಿಸಬಹುದು. ಹಾಗಾಗಿ ಈ ಅಧ್ಯಾಯದಲ್ಲಿ ವೈದಿಕರು ಸಾಮಾಜಿಕ ಪ್ರಭುತ್ವದ ಮೇಲೆ ಏಕಸ್ವಾಮ್ಯವನ್ನು ಸಾಧಿಸಲು ಸೃಷ್ಟಿಸಿದ ಜಾತಿ, ವರ್ಣ ಮತ್ತು ಸ್ತ್ರೀ ಅಸಮಾನತೆಗಳನ್ನು ವೈದಿಕ ವಿರೋಧಿ ನೆಲೆಯಲ್ಲಿ ನೋಡಲಾಗಿದೆ.

ಒಂದು ಕಡೆ ಊಳಿಗಮಾನ್ಯಶಾಹಿಯ ಅನ್ಯಾಯ-ಅಸಮಾನತೆ ಹಾಗೂ ಶೋಷಣೆಯ ವಸ್ತುಸ್ಥಿತಿ; ಮತ್ತೊಂದು ಕಡೆ ಇದರ ಅಸಮಾನತೆಗಳನ್ನು ನಿರಂತರವಾಗಿ ಪೋಷಿಸುತ್ತಾ ಬಂದ, ವರ್ಣಾಶ್ರಮ ಪದ್ಧತಿ, ಜಾತಿಪದ್ಧತಿ, ಅಸ್ಪೃಶ್ಯತೆಗಳು, ಲಿಂಗ ಅಸಮಾನತೆಗಳು – ಇವೆಲ್ಲವೂ ಒಟ್ಟು ಸೇರಿ ಒಂದು ಐಕ್ಯತೆಯ ಪರಿವಾರದಂತೆ ಸಾಮಾಜಿಕ ಪ್ರಭುತ್ವವನ್ನು ನಿರ್ಮಾಣ ಮಾಡಿದವು. ನಾವು ಯಾವುದನ್ನು ಸಾಮಾಜಿಕ ಪ್ರಭುತ್ವ ಎಂದು ಕರೆಯುತ್ತೇವೆಯೋ ಅದು ಈ ಎಲ್ಲಾ ರೀತಿಯ ಅಸಮಾನತೆಗಳನ್ನು ಹಾಗೂ ಅಮಾನವೀಯ ಮೌಲ್ಯಗಳನ್ನು ಒಳಗೊಂಡಿದೆ. ಹಾಗಾಗಿ ಊಳಿಗಮಾನ್ಯಶಾಹಿ ಸಮಾಜದಲ್ಲಿ ಹುಟ್ಟುವ ಸಾಹಿತ್ಯವು ಒಂದು ಕಡೆ ಅನಿವಾರ್ಯವಾಗಿ ಮತ್ತೊಂದು ಕಡೆ ಅಗತ್ಯವಾಗಿ ಈ ಮಾನವವಿರೋಧಿ, ದಲಿತವಿರೋಧಿ ಹಾಗೂ ಮಹಿಳಾವಿರೋಧಿ ವಸ್ತುಸ್ಥಿತಿಗಳನ್ನೂ, ಅವುಗಳ ಭಾಗವಾಗಿ ಬರುವಂತಹ ಸಾಮಾಜಿಕ ಮೌಲ್ಯಗಳನ್ನೂ, ನಂಬಿಕೆಗಳನ್ನೂ ವಿವರಿಸುತ್ತಾ, ಅವುಗಳನ್ನು ವಿರೋಧಿಸುತ್ತಾ ಬರುತ್ತವೆ. ಆ ಮೂಲಕ ಸಾಮಾಜಿಕ ಪ್ರಭುತ್ವದ ಅಂತರಂಗದೊಳಗೆ ಹುದುಗಿರುವ ಮಾನವಪರವಾದ ಇಲ್ಲವೆ ಮಾನವ ವಿರೋಧಿಯಾದ

ಸಂಬಂಧಗಳನ್ನು ಹಾಗೂ ಮೌಲ್ಯಗಳನ್ನು ಅನಾವರಣ ಮಾಡುತ್ತದೆ. ಊಳಿಗಮಾನ್ಯ ಸಾಮಾಜಿಕ ವಸ್ತುಸ್ಥಿತಿಯೇ ಲೇಖಕರ ಮೂಲಕ ಇಂತಹ ವೈರುಧ್ಯಗಳನ್ನು, ಸಂಘರ್ಷಗಳನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸಲು ಒತ್ತಾಯಿಸುತ್ತದೆ. ಯಾವುದೇ ಪ್ರಜ್ಞಾವಂತ ಸಾಹಿತಿ, ಬರಹಗಾರ ಈ ಸಾಮಾಜಿಕ ಕಠೋರವಾದ ವಾಸ್ತವಕ್ಕೆ ಬೆನ್ನು ಮಾಡಲು ಸಾಧ್ಯವೇ ಇಲ್ಲ. ಇಂತಹ ಬೆಂಕಿಯ ಒಡಲಿನಿಂದ ಹುಟ್ಟಿಬರುವಂತಹ ಸಾಹಿತ್ಯದಲ್ಲಿ ಮೇಲೆ ಸೂಚಿಸಿದ ಒಂದಿಲ್ಲ ಒಂದು ಮೌಲ್ಯದ ನಿರೂಪಣೆಯು ಬಂದಿರುತ್ತದೆ. ಇದನ್ನು ನಾವು ಪ್ರಾಚೀನ ಕನ್ನಡದ ಕಾವ್ಯಗಳಲ್ಲಿ ನೋಡಬಹುದು; ಜನಪದ ಸಾಹಿತ್ಯದಲ್ಲಿ ನೋಡಬಹುದು; ಇನ್ನು ಉಳಿದಂತೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇದನ್ನು ಬಹಳ ದಟ್ಟವಾಗಿ ನಾವು ಕಾಣಬಹುದು.

ಆಧುನಿಕ ಕನ್ನಡ ಸಾಹಿತ್ಯದ ಒಂದು ಮುಖ್ಯ ಪ್ರಕಾರವಾದ ಕಥಾ ಸಾಹಿತ್ಯವು ಮುಖ್ಯವಾಗಿ ಈ ಸಾಮಾಜಿಕ ಪ್ರಭುತ್ವದ ನಾನಾ ಮುಖಗಳನ್ನು ಅತ್ಯಂತ ತೀಕ್ಷ್ಣವಾಗಿ ಹಾಗೂ ಸೂಕ್ಷ್ಮವಾಗಿ ಗ್ರಹಿಸಿದೆ ಮತ್ತು ಅದನ್ನು ಸಾಹಿತ್ಯಿಕ ನೆಲೆಯಲ್ಲಿ ಕಲಾತ್ಮಕವಾಗಿ ಚಿತ್ರಿಸಿದೆ. ಹಾಗಾಗಿಯೇ ಆಧುನಿಕ ಕನ್ನಡ ಸಾಹಿತ್ಯದ ಕಥಾ ಸಾಹಿತ್ಯವು ನಮ್ಮ ಸಮಾಜದ ಅಂತರಾಳದ ಒಡಲನ್ನು ತೆರೆದುತೋರಿಸಿದೆ. ಆ ಮೂಲಕ ಸಾಂಪ್ರದಾಯಿಕವಲ್ಲದ ಸಾಮಾಜಿಕ ಮೀಮಾಂಸೆಯೊಂದನ್ನು ರೂಪಿಸಿಕೊಟ್ಟಿದೆ ಎಂದು ಹೇಳಬಹುದು.

ಆಧುನಿಕ ಕನ್ನಡ ಸಾಹಿತ್ಯವು ಸಾಮಾಜಿಕ ಪ್ರಭುತ್ವದ ಸ್ವರೂಪವನ್ನು ಗ್ರಹಿಸಿರುವ ಹಾಗೂ ಅದನ್ನು ಅಭಿವ್ಯಕ್ತಿಸಿರುವ ಮುಖ್ಯ ನೆಲೆಗಳನ್ನು ಗುರುತಿಸಿಕೊಳ್ಳಬೇಕು. ಎಲ್ಲಾ ಬಗೆಯ ಅಸಮಾನತೆಗಳನ್ನು, ಶ್ರೇಣೀಕರಣಗಳನ್ನು ಹಾಗೂ ಶ್ರೇಷ್ಠ-ಕನಿಷ್ಠ ಎಂಬ ಮೌಲ್ಯಗಳ್ನು ಇದು ಒಳಗೊಂಡಿದೆ. ಇವನ್ನು ವರ್ಣ, ಜಾತಿ ಮತ್ತು ಮಹಿಳೆಯರ ಮೇಲೆ ಹೇರುವುದರ ಮೂಲಕ ಸಾಮಾಜಿಕ ಪ್ರಭುತ್ವವನ್ನು ಸ್ಥಾಪಿಸಿ ಮುಂದುವರಿಸಲಾಗಿದೆ. ಸಾಮಾಜಿಕ ಪ್ರಭುತ್ವ ಎಂದರೆ ಇದು ಒಂದು ಬಗೆಯ ಆಳ್ವಿಕೆಯ ಸ್ವರೂಪವೇ ಆಗಿದೆ. ಹಾಗಾಗಿ ವೈದಿಕ ಪ್ರಜ್ಞೆಯು ವರ್ಣದ ಮೂಲಕ, ಜಾತಿಯ ಮೂಲಕ ಮತ್ತು ಮಹಿಳೆಯರನ್ನು ತುಚ್ಛವಾಗಿ ಕಾಣುವುದರ ಮೂಲಕ ತನ್ನ ಆಳ್ವಿಕೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಈ ಯಜಮಾನಿಕೆಯ ಪರಂಪರೆಯೇ ಭಾರತದಲ್ಲಿ ಸಾಮಾಜಿಕ ಪ್ರಭುತ್ವದ ಪರಂಪರೆಯಾಗಿದೆ ಎಂದೂ ಹೇಳಬಹುದು. ಆದ್ದರಿಂದ ಈ ಅಧ್ಯಾಯದಲ್ಲಿ ಸಾಮಾಜಿಕ ಪ್ರಭುತ್ವ ಎಂಬುದನ್ನು ವರ್ಣ, ಜಾತಿ ಹಾಗೂ ಮಹಿಳೆ ಎಂಬ ಉಪ ಅಧ್ಯಾಯಗಳಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

೬.೨.೧. ವರ್ಣ

ವರ್ಣಾಶ್ರಮವು ಹಿಂದೂಧರ್ಮದ ಮೂಲಭೂತ ಪದ್ಧತಿಗಳಲ್ಲಿ ಒಂದಾಗಿದೆ. ವೈದಿಕ ಧರ್ಮ ಗ್ರಂಥಗಳು ಸಾಮಾಜಿಕವಾಗಿ ನಾಲ್ಕು ವರ್ಣಗಳ ಸೃಷ್ಟಿಗೆ ಕಾರಣವಾದವು. 'ವರ್ಣ' ಪದವು ಸಂಸ್ಕೃತ ಪದವಾಗಿದ್ದು, ಮೈಬಣ್ಣವೆಂಬ ಅರ್ಥವನ್ನು ಕೊಡುತ್ತದೆ. ಋಗ್ವೇದದ 'ಪುರುಷ ಸೂಕ್ತ'ದ

ಶ್ಲೋಕದಲ್ಲಿ ವರ್ಣಪದ್ಧತಿಯ ಬಗ್ಗೆ ಉಲ್ಲೇಖಿಸಲಾಗಿದೆ. ವರ್ಣ ಪದವನ್ನು ಮನು ಬರೆದ 'ಮನುಸ್ಮೃತಿ' ಪುಸ್ತಕದಲ್ಲಿ ಸಾಮಾಜಿಕ ವರ್ಗಗಳನ್ನಾಗಿ ಸೂಚಿಸಲಾಗಿದೆ. ಆದರೆ ವೈದಿಕ ಧರ್ಮ ಗ್ರಂಥಗಳ ಪ್ರಕಾರ ವರ್ಣದ ಅರ್ಥ ಗುಣ, ಕರ್ಮ ಎಂದು ಉಪಯೋಗಿಸಲಾಗಿದೆ. ವ್ಯಕ್ತಿಯ ಯೋಗ್ಯತೆ ಗುಣ, ಕರ್ಮ ಹಾಗೂ ಆಚಾರಗಳಿಂದ ಮಾಡಲ್ಪಡುತ್ತದೆ ಎಂಬುದು ಹಿಂದೂಧರ್ಮದ ವಾದವಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ತಾತ್ವಿಕವಾಗಿ ನಾಲ್ಕು ವರ್ಣಗಳನ್ನು ಹಿಂದೂಧರ್ಮ ಗ್ರಂಥದಲ್ಲಿ ವರ್ಗೀಕರಣ ಮಾಡಲಾಗಿದೆ. ನಾಲ್ಕು ವರ್ಣಗಳ ವರ್ಗೀಕರಣದಿಂದ ಅಸ್ಪೃಶ್ಯರನ್ನು ದೂರ ಇಡಲಾಗಿದೆ. ಬ್ರಾಹ್ಮಣರನ್ನು ಪೂಜಾರಿ (ಪುರೋಹಿತ) ಮತ್ತು ವಿದ್ವಾಂಸರು ಎಂದು ಪರಿಗಣಿಸಲಾಗಿದೆ. ಕ್ಷತ್ರಿಯರನ್ನು ರಾಜರು, ಯೋಧರು ಎಂದು ಗುರುತಿಸುತ್ತಾರೆ. ವೈಶ್ಯರನ್ನು ವರ್ತಕರು ಎಂದು, ಶೂದ್ರರನ್ನು ಕಾರ್ಮಿಕರು ಮತ್ತು ಸೇವೆ ಒದಗಿಸುವವರು ಎಂದು ವೃತ್ತಿಗಳಿಂದ ವರ್ಗೀಕರಣ ಮಾಡಲಾಗಿದೆ. ಅಸ್ಪೃಶ್ಯರನ್ನು ಕೂಲಿಗಳ ವರ್ಗ, ಜಾತಿಭ್ರಷ್ಟರು ಅಥವಾ ದಲಿತರು ಎಂದು ಪರಿಗಣಿಸಲಾಗಿದೆ. ವೈದಿಕರ ಧರ್ಮಶಾಸ್ತ್ರ, ಮಹಾಕಾವ್ಯ ಮತ್ತು ಪುರಾಣಗಳಲ್ಲಿ ವರ್ಣಪದ್ಧತಿಯ ಬಗ್ಗೆ ವಿವರಿಸುತ್ತವೆ. ಅಂಬೇಡ್ಕರ್ ಅವರು ವರ್ಣವ್ಯವಸ್ಥೆಯ ಬಗ್ಗೆ ಈ ರೀತಿ ಹೇಳಿದ್ದಾರೆ. "ಹಿಂದೂ ಸಾಮಾಜಿಕ ವ್ಯವಸ್ಥೆ ದೈವ ನಿರ್ಮಿತವಾದದ್ದು ಎಂಬುದು ಹಿಂದೂಗಳ ನಂಬಿಕೆ. ಈ ದೈವ ನಿರ್ಮಿತಿಯಲ್ಲಿ ಮೂರು ಮುಖ್ಯ ಅಂಶಗಳಿವೆ. ೧. ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನಾಗಿ ಶಾಶ್ವತವಾಗಿ ವಿಭಜಿಸಲಾಗಿದೆ. ೨. ಈ ವರ್ಗಗಳ ಸ್ಥಾನಮಾನಗಳಲ್ಲಿ ಅಸಮಾನತೆಯಿರುತ್ತದೆ. ಬ್ರಾಹ್ಮಣರು ಉಚ್ಚ ಸ್ಥಾನವನ್ನು ಆಕ್ರಮಿಸಿದರೆ, ಶೂದ್ರರಿಗೆ ಕನಿಷ್ಠ ಸ್ಥಾನ. ೩. ಈ ವರ್ಗಗಳ ಕಸುಬು ಕೂಡ ನಿಗದಿಯಾಗಿರುತ್ತದೆ. ಬ್ರಾಹ್ಮಣರು ಕಲಿಯುವವರು ಮತ್ತು ಕಲಿಸುವವರು. ಕ್ಷತ್ರಿಯರು ಹೋರಾಡುವವರು. ವೈಶ್ಯರು ವ್ಯಾಪಾರಿಗಳು. ಈ ಮೂರೂ ವರ್ಗಗಳ ಸೇವೆ ಶೂದ್ರರ ಪಾಲಿಗೆ. ಇದು ಹಿಂದೂ ವರ್ಣವ್ಯವಸ್ಥೆ. ಇದೇ ಹಿಂದೂಧರ್ಮದ ಆತ್ಮ. ವರ್ಣವ್ಯವಸ್ಥೆಯೊಂದೇ ಹಿಂದೂಧರ್ಮವನ್ನು ಇತರ ಧರ್ಮಗಳಿಗಿಂತ ಭಿನ್ನವಾಗಿಸುತ್ತದೆ."[೩೦]

ಪ್ರಭುತ್ವದಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಲು ಬ್ರಾಹ್ಮಣರು ವರ್ಣವ್ಯವಸ್ಥೆಯನ್ನು ಕಲ್ಪಿಸಿ ಹುಟ್ಟುಹಾಕಿದರು. ಈ ವರ್ಣವ್ಯವಸ್ಥೆ ಸಾಮಾಜಿಕವಾಗಿ ಅಸಮಾನತೆ ಇರುವುದರಿಂದ, ಬ್ರಾಹ್ಮಣರು ಪ್ರಭುತ್ವದ ಉಚ್ಚ ಸ್ಥಾನಗಳಲ್ಲಿ ತಮ್ಮ ಅಸ್ತಿತ್ವವನ್ನು ಇರಿಸಿಕೊಂಡರು. ಆದ್ದರಿಂದ ಪ್ರಭುತ್ವವು ಬ್ರಾಹ್ಮಣರ ನಿಯಂತ್ರಣಕ್ಕೆ ಒಳಪಟ್ಟಿತು. ಹಾಗಾಗಿ ಸಮಾಜದಲ್ಲಿ ಶೋಷಣೆ, ದಬ್ಬಾಳಿಕೆ, ಅಸ್ಪೃಶ್ಯತೆ, ಅನ್ಯಾಯ, ಅಮಾನವೀಯತೆ ಆಚರಣೆಗಳು ಜಾರಿಗೆ ಬಂದವು. ಈ ವೈದಿಕ ಧರ್ಮದ ವರ್ಣ ವ್ಯವಸ್ಥೆಯಿಂದ ಸೃಷ್ಟಿಯಾದ ಅಮಾನವೀಯ ಆಚರಣೆಗಳನ್ನು ಬೌದ್ಧಧರ್ಮ ಮತ್ತು ಚಾರ್ವಾಕರು ವಿರೋಧಿಸಿದರು. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅವರ ಕೃತಿಗಳಲ್ಲಿ ವರ್ಣವ್ಯವಸ್ಥೆಯನ್ನು ವಿರೋಧಿಸಿರುವುದನ್ನು ಗುರುತಿಸಬಹುದು.

ಸಮಾಜದಲ್ಲಿ ಧರ್ಮ ಮತ್ತು ರಾಜಕೀಯ ಪ್ರಬಲ ಶಕ್ತಿಗಳು. ಇವೆರಡೂ ಅಧಿಕಾರದ ಕೇಂದ್ರಗಳು. ಆದ್ದರಿಂದ ಪ್ರಸ್ತುತ ನಮ್ಮ ಸಾಮಾಜಿಕ ಬದುಕಿನ ಮೇಲೆ ಇವುಗಳ ಪರಿಣಾಮ ಅಪಾರ. ವರ್ಣಾಶ್ರಮ ವ್ಯವಸ್ಥೆಯಲ್ಲಿ ಮೇಲೆ ಇರುವ ಬ್ರಾಹ್ಮಣರು, ಪುರೋಹಿತರು ಧರ್ಮ ಮತ್ತು ರಾಜಕೀಯದ ಮೇಲೆ ನಿಯಂತ್ರಣದ ಹಕ್ಕು ಪಡೆದುಕೊಂಡಿದ್ದಾರೆ. ಶೂದ್ರರು ಈ ಅಧಿಕಾರಗಳನ್ನು ಪಡೆಯುವಂತಿಲ್ಲ. ಸಾಮಾಜಿಕವಾಗಿ ಮೇಲ್ತುದಿಯ ಅಧಿಕಾರವನ್ನು ಪಡೆದರೆ ಶಿಕ್ಷಾರ್ಹ ಅಪರಾಧ ಎಂದು ನಂಬಿಸಲಾಗಿತ್ತು. ಹಾಗಾಗಿ ವರ್ಣಾಶ್ರಮದಿಂದ ಸಮಾಜದಲ್ಲಿ ತಾರತಮ್ಯ ಹುಟ್ಟುಕೊಂಡಿತು. ಕುವೆಂಪು ಅವರು ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧಿಸುವ ನೆಲೆಯಲ್ಲಿ ಮತ್ತು ಪ್ರತಿಭಟನೆಯ ಸ್ಪಷ್ಟ ರೂಪಗಳನ್ನು 'ಶೂದ್ರ ತಪಸ್ವಿ' ನಾಟಕದಲ್ಲಿ ಕಾಣಬಹುದಾಗಿದೆ. ವರ್ಣಾಶ್ರಮ ಪದ್ಧತಿಯಲ್ಲಿ ದಬ್ಬಾಳಿಕೆಗೆ ಒಳಗಾದ ಕೆಳತುದಿಯ ವ್ಯಕ್ತಿಗೆ ಸಾಮಾಜಿಕ ನ್ಯಾಯ ದೊರೆಯಬೇಕು ಎನ್ನುವ ದೃಷ್ಟಿಕೋನವಾಗಿದೆ. ಶಂಭೂಕ ಪ್ರಸಂಗದ ಮೂಲ ಕಥೆಯ ಹಿಂದಿರುವ ವರ್ಣಾಶ್ರಮ ಪದ್ಧತಿಯ ಭ್ರಾಂತಿಯನ್ನು ವಿರೋಧಿಸಿ ಕುವೆಂಪು ಹೊಸ ರೂಪವನ್ನು ಕೊಡುತ್ತಾರೆ. ಕುವೆಂಪು ಅವರ "ಶೂದ್ರ ತಪಸ್ವಿ" ನಾಟಕದ ಒಂದು ಭಾಗವನ್ನು ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗುವುದು.

ಶ್ರೀರಾಮ: ಈ ವರ್ಣಗರ್ವಾಂಧಂಗೆ,
ಈ ಶಾಸ್ತ್ರಮೂರ್ಖಂಗೆಂತೊ ಬುದ್ಧಿಗಲಿಪೆನ್?
ಶಂಬೂಕನ್ ಮಹಾಯೋಗಿ.
ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ
ತಂದುದೀತನ ಮುದ್ದು ಕಂದಂಗೆ
ನನ್ನ ರಾಜ್ಯದೊಳುಂ ಅಕಾಲ ಮೃತ್ಯುವಂ.
ತನ್ನ ತಪ್ಪನೆ ತಿಳಿಯಲಾರದೀತನ್,
ಮರೆಯಿಂದಮೆನ್ನನ್,
ಬಹಿರಂಗಮಾ ಶಂಬೂಕಯೋಗಿಯನ್
ನಿಂದಿಸುತ್ತಿರ್ಪನ್.[೩೧]

ಶಂಭೂಕನ ತಪಸ್ಸನ್ನು ತಿರಸ್ಕರಿಸಿದ್ದರಿಂದಾಗಿ ಧರ್ಮ ಮುನಿದು, ಬ್ರಾಹ್ಮಣನ ಮಗ ಮರಣ ಹೊಂದಿದ್ದಾನೆ ಎಂದು ಶ್ರೀರಾಮ ಯೋಚಿಸುತ್ತಾನೆ. ವರ್ಣಾಶ್ರಮ ಪದ್ಧತಿಯಿಂದ ಉಂಟಾಗಿರುವ ಸಾಮಾಜಿಕ ಅಸಮಾನತೆಯಿಂದ ಕೆಳವರ್ಗದ ಜನರ ಸಾಧನೆಯನ್ನು ಗುರುತಿಸುತ್ತಿಲ್ಲ. ಹಾಗಾಗಿ ಕುವೆಂಪು ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧಿಸುತ್ತಾರೆ.

ಬ್ರಾಹ್ಮಣರು ಸೃಷ್ಟಿ ಮಾಡಿದ ವರ್ಣಪದ್ಧತಿಯನ್ನು ದೇವರು ಸೃಷ್ಟಿ ಮಾಡಿದ್ದು ಎಂದು ನಂಬಿಸಲಾಗಿದೆ. ಚಾತುರ್ವರ್ಣ್ಯ ಪದ್ಧತಿಯು ಮಾನವರ ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಹುಟ್ಟಿದ್ದು. ಆದರೆ ಮನುಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಲಾಯಿತು. ಈ ರೀತಿ ವರ್ಣಾಶ್ರಮ ಪದ್ಧತಿಯನ್ನು ಪ್ರತಿಪಾದಿಸುವ ಪ್ರಾಚೀನ ಸಾಹಿತ್ಯ ಸಂಸ್ಕೃತಿಯನ್ನು ಹಳೆಯದೆಂದು ಎಸೆಯದೆ ಅವುಗಳಿಗೆ ಹೊಸ ವ್ಯಾಖ್ಯಾನಗಳನ್ನು ಕೊಡಬೇಕು ಎಂದು ಕುವೆಂಪು ಅವರು ಈ ರೀತಿ ಹೇಳುತ್ತಾರೆ. "ಚಾತುರ್ವರ್ಣ್ಯ: ಗೀತೆಯಲ್ಲಿ ಚಾತುರ್ವರ್ಣ್ಯದ ವಿಚಾರ ಬರುತ್ತದೆ. ಗೀತೆಯನ್ನು ಪ್ರಪಂಚದಾದ್ಯಂತ ಅತ್ಯಂತ ಮಹೋನ್ನತವಾದ ಅಧ್ಯಾತ್ಮಿಕ ಕೃತಿಯೆಂದು ಎಲ್ಲರೂ ಭಾವಿಸುತ್ತಾರೆ. ಆದರೆ ಶ್ರೀ ಕೃಷ್ಣ "ಚಾತುರ್ವರ್ಣ್ಯಂಮಯಾ ಸೃಷ್ಟ್ಯಂ" "ನಾಲ್ಕು ವರ್ಣಗಳನ್ನು ನಾನೆ ಸೃಷ್ಟಿಸಿದ್ದೇನೆ" ಅಂತ ಹೇಳಿಬಿಟ್ಟನಲ್ಲಾ ಎಂದು ಇಡೀ ಗೀತೆಯನ್ನು ಎಸೆಯುವುದಕ್ಕೆ ಹೋಗಬಾರದು. ಅದಕ್ಕೆ ಬೇರೆ ವ್ಯಾಖ್ಯಾನ ಮಾಡಬೇಕು, ಸರಿಯಾದ ಸರ್ವಸಮ್ಮತವಾದ ರೀತಿಯಲ್ಲಿ, ವಿಶ್ವಕ್ಕೆಲ್ಲ ಅನ್ವಯವಾಗುವಂತೆ."[೨] ಹಾಗಾಗಿ ಹಿಂದೂಗಳಿಗೆ ಅನ್ವಯವಾಗುವ ಚಾತುರ್ವರ್ಣ್ಯ ಪದ್ಧತಿಯು ವಿಶ್ವಕ್ಕೆಲ್ಲ ಅನ್ವಯವಾಗುವುದಿಲ್ಲ. ಈ ಪದ್ಧತಿ ವೈಜ್ಞಾನಿಕ ಸತ್ಯಕ್ಕೆ ಹತ್ತಿರವಾಗಿಲ್ಲ. ಆದ್ದರಿಂದ ವೈದಿಕ ಧರ್ಮ ಸೃಷ್ಟಿಸಿದ ವರ್ಣಪದ್ಧತಿಯನ್ನು ವಿರೋಧಿಸಿ ಮರುವ್ಯಾಖ್ಯಾನ ಕೊಡಬೇಕು ಎಂದು ಕುವೆಂಪು ಹೇಳುತ್ತಾರೆ. ಅಲ್ಲದೆ 'ವರ್ಣಾಶ್ರಮವನ್ನು ತಿದ್ದುವುದಲ್ಲ. ಅದನ್ನು ಸಂಪೂರ್ಣ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೋಲಿಕ್, ಪ್ರಾಟಸ್ಟಂಟ್, ಸಿಖ್, ನಿರಂಕಾರಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು' ಎಂದು ಕುವೆಂಪು ವಿಶ್ವಮಾನವ ಸಂದೇಶದಲ್ಲಿ ಹೇಳುತ್ತಾರೆ.

ಡಿ.ಆರ್. ನಾಗರಾಜ್ ಅವರು ಕುವೆಂಪು ಅವರ ಕೃತಿಗಳನ್ನು ವಿಮರ್ಶೆ ಮಾಡುತ್ತಾ, ವರ್ಣವ್ಯವಸ್ಥೆಯ ಬಗ್ಗೆ ಈ ರೀತಿ ಹೇಳಿದ್ದಾರೆ. "ಕುವೆಂಪು ತಮ್ಮ ಬಹುಪಾಲು ಕವನ ಮತ್ತು ನಾಟಕಗಳಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸಿಕೊಂಡದ್ದೇ 'ವರ್ಣವ್ಯವಸ್ಥೆ'ಯ ಪರಿಭಾಷೆಯಲ್ಲಿ. ಈ ಎಲ್ಲ ಕೃತಿಗಳಲ್ಲಿ ವರ್ಣವ್ಯವಸ್ಥೆಯ ಉನ್ನತ ಸ್ಥಾನದಲ್ಲಿದ್ದ ಬ್ರಾಹ್ಮಣ ವರ್ಣವೊಂದೇ ಮುಖ್ಯ ಶತ್ರು. ಅವರ ಬ್ರಾಹ್ಮಣಶಾಹಿ ವಿರೋಧಿ ಕೃತಿಗಳೆಲ್ಲ ಹುಟ್ಟಿದ್ದು ಈ ನೆಲೆಯಿಂದಲೇ. ಭಾರತೀಯ ಸಮಾಜದ ಚಾರಿತ್ರಿಕ ಸಂಘರ್ಷವನ್ನು ಬ್ರಾಹ್ಮಣ ಮತ್ತು ಶೂದ್ರರ ನಡುವಿನ ಸಂಘರ್ಷ ಎಂದು ಅವರು ಅರ್ಥೈಸಿದ್ದರ ಸಾಮಾಜಿಕ ಅನುಭವದ ಹಿನ್ನೆಲೆಯನ್ನು ನಾವು ಕಾಣಬೇಕಾದರೆ ಕರ್ನಾಟಕದ ಬ್ರಾಹ್ಮಣೇತರ ಜಾತಿಗಳ ಚಳುವಳಿಯನ್ನು ವಿಶ್ಲೇಷಿಸಬೇಕು. ಒಟ್ಟಾರೆಯಾಗಿ ದಕ್ಷಿಣ ಭಾರತದ ಬ್ರಾಹ್ಮಣೇತರ ಜಾತಿಗಳ ಚಳುವಳಿಗೆ ಸಾಮಾನ್ಯ ನೆಲೆಯೊಂದಿದೆಯಾದರೂ, ಕರ್ನಾಟಕದ ಈ ಚಳುವಳಿ ಮಾತ್ರ ವಿಶಿಷ್ಟ ಸ್ವರೂಪದ್ದು. ಈ ವಿಶಿಷ್ಟತೆಯ ಅಧ್ಯಯನದಿಂದ ಕುವೆಂಪು ಕೃತಿಗಳಲ್ಲಿ 'ವರ್ಣ' ಸಂಘರ್ಷದ ರೂಪ ಸತ್ವಗಳು ಸ್ಪಷ್ಟವಾಗುತ್ತದೆ"[೩೩] ಹೀಗೆ ಕುವೆಂಪು ಅವರು ಬ್ರಾಹ್ಮಣರನ್ನು ವಿರೋಧಿಸುವ ಹಿನ್ನೆಲೆಯಲ್ಲಿ ವರ್ಣವ್ಯವಸ್ಥೆಯನ್ನು ನೋಡಿರುವುದನ್ನು ಗುರುತಿಸಬಹುದಾಗಿದೆ.

ವೈದಿಕ ಧರ್ಮವು ಮೂಲಭೂತವಾಗಿ ವರ್ಣವ್ಯವಸ್ಥೆಯ ಮೇಲೆ ನಿಂತಿದೆ. ಈ ವರ್ಣ ವ್ಯವಸ್ಥೆಯ ಮೇಲೆ ಜಾತಿವ್ಯವಸ್ಥೆ ನಿಂತಿದೆ. ಜಾತಿವ್ಯವಸ್ಥೆಯ ಒಳಗೆ ಅಸ್ಪೃಶ್ಯತೆ ತಾಂಡವವಾಡುತ್ತಿದೆ. ಅಂದರೆ ವರ್ಣವ್ಯವಸ್ಥೆಗೂ ಮತ್ತು ಅಸ್ಪೃಶ್ಯತೆಗೂ ಅತ್ಯಂತ ಆಳವೂ ಮತ್ತು ಅತ್ಯಂತ ಸೂಕ್ಷ್ಮವೂ ಆದ ಅಂತರ್‌ಸಂಬಂಧವಿದೆ. ಅಂದರೆ ಸಾಮಾಜಿಕ ಅಸಮಾನತೆ ನಿಂತಿರುವುದೇ ವರ್ಣವ್ಯವಸ್ಥೆಯ ಮೇಲೆ. ವೈದಿಕ ಧರ್ಮದ ಆಂತರಿಕ ಆಚರಣೆ ಎಂದರೆ ಅದು ಎಲ್ಲಾ ಬಗೆಯ ಅಸಮಾನತೆಗಳನ್ನು ಹಾಗೇ ಪಾಲಿಸಿಕೊಂಡು ಬರಬೇಕು ಎಂಬುದು. ಹಾಗಾಗಿಯೇ ಅದು ಎಂದೂ ಕೂಡ ಜಾತಿ ಅಸಮಾನತೆಯನ್ನು ಹೋಗಲಾಡಿಸಲು ಕರೆ ಕೊಡಲಿಲ್ಲ; ಅದರ ತಾಯಿಯಾದ ವರ್ಣವ್ಯವಸ್ಥೆಯ ಬದಲಾವಣೆಗೆ ಕರೆ ಕೊಡಲಿಲ್ಲ. ಈ ಬಗೆಗೆ ಪೂರ್ಣಚಂದ್ರ ತೇಜಸ್ವಿ ಅವರ ವಿಚಾರಗಳು ಈ ಮುಂದಿನಂತಿವೆ. "ಹಿಂದೂಧರ್ಮದ ಮೂಲ ವರ್ಣವ್ಯವಸ್ಥೆ, ಇದು ಅರ್ಥವ್ಯವಸ್ಥೆಯಿಂದಲೇ ಉಗಮಗೊಂಡಿದ್ದು. ಕೈಗಾರಿಕೀಕೃತ ಸಮಾಜದಲ್ಲಿ ಬಂಡವಾಳವು ಹೇಗೆ ಬೂರ್ಜ್ವನಿಗೆ ಸಹಾಯಕಾರಿಯಾಗುತ್ತದೆಯೋ ಹಾಗೇ ಜನ್ಮಾಂತರ ಕರ್ಮ ಸಿದ್ಧಾಂತಗಳು ದ್ವಿಜನಿಗೆ ಶೋಷಣೆಯ ವಜ್ರಹಸ್ತಗಳಾದುವು. ವರ್ಣಸಂಕರವನ್ನು ಪರಮ ಪಾತಕವೆಂದೂ "ಸ್ವಧರ್ಮ" ಎಂದರೆ ಜಾತಿಧರ್ಮವನ್ನು ಬಿಡುವುದು ತಪ್ಪೆಂದೂ ಬಹಿಷ್ಕಾರ ಹಾಕಲಾಯಿತು. ಇದಲ್ಲದೆ ಇನ್ನಾವುದೇ ಮಾರ್ಗದಿಂದಲೂ ಹಿಂದೂಗಳಿಗೆ ಶೂದ್ರರನ್ನು ಕಕ್ಕಸು ಬಳಿಯುವ, ದನಕರುಗಳ ಹೆಣ ಹೊರುವ, ಕಸ ಸಾಗಿಸುವ, ಒಟ್ಟಿನಲ್ಲಿ ಮೇಲು ಜಾತಿಯವರ ಒಳಿತಿಗಾಗಿ ದುಡಿಯುವ ಪ್ರಾರಬ್ಧದಲ್ಲಿ ಶತಮಾನಗಳ ಪರ್ಯಂತವೂ ಇಟ್ಟಿರಲಾಗುತ್ತಿರಲಿಲ್ಲ. ಜನ್ಮಾಂತರ ಹಾಗೂ ಕರ್ಮ ಸಿದ್ಧಾಂತಗಳ ದೆಸೆಯಿಂದಲೇ ಒಬ್ಬ ಕಕ್ಕಸು ಬಳಿಯುವ ತೋಟಿಯೇ ಆಗಲಿ ಸತ್ತ ಎತ್ತನ್ನು ತಿನ್ನುವ ಹೊಲೆಯನೇ ಆಗಲಿ ತನ್ನ ದುರ್ದೆಸೆಯನ್ನು ತನ್ನ ಜನ್ಮಾಂತರಗಳಿಗೆ ಸಂಬಂಧಪಟ್ಟ ಪ್ರಾರಬ್ಧವನ್ನಾಗಿ ಪರಿಗಣಿಸುತ್ತಾನೆಯೇ ಹೊರತು ತನಗಾಗಿರುವ ವೈಯಕ್ತಿಕ, ಸಾಮಾಜಿಕ ಅನ್ಯಾಯವನ್ನಾಗಿ ಪರಿಗಣಿಸುವುದೇ ಇಲ್ಲ. ಶೂದ್ರರ ಶ್ರಮಿಕ ಪರಿಸ್ಥಿತಿಯ ಮೇಲೆ ಆಗಾಗ್ಗೆ ಅನೇಕ ಸುಧಾರಣಾ ಪ್ರಯತ್ನಗಳು ನಡೆದಿವೆ. ಆದರೆ ಪ್ರತಿಯೊಂದು ನವೀನ ಪಂಥವೂ ತನ್ನ ತತ್ವ ಸಿದ್ಧಾಂತಗಳನ್ನು ಬಹುಬೇಗ ಗೌಣವಾಗಿ ಪರಿಗಣಿಸಿ ಒಂದಕ್ಕಿಂತ ಕೀಳಾದ ಮತ್ತು ಒಂದಕ್ಕಿಂತ ಮೇಲಾದ ಒಂದು ಜಾತಿಯಾಗಿ ಪರಿವರ್ತಿತವಾಗಿ ಕೆಲವು ಜಾತಿಯ ಮನೆಯಲ್ಲಿ ನೀರು ಕುಡಿಯದೆ ಕೆಲವರ ಮನೆಯಲ್ಲಿ ಊಟ ಮಾಡದೆ ಕೆಲವು ಜಾತಿಯವರನ್ನು ಮುಟ್ಟಿಸಿಕೊಳ್ಳದೆ ಶೋಷಣೆಯ ವಿಷ ವರ್ತುಲದಲ್ಲಿ ನೂರರಲ್ಲಿ ನೂರೊಂದನೆಯದಾಗಿ ಕಾಲಯಾಪನೆ ಮಾಡತೊಡಗಿತು. ಇದೇ ಹಿಂದೂಧರ್ಮ ಮತ್ತು ಹಿಂದೂ ಸಮಾಜ, ಬ್ರಾಹ್ಮಣರು ವೈಶ್ಯರು ವೀರಶೈವರು ಶೂದ್ರರು ಎಲ್ಲರೂ ಕೂಡ ತಮ್ಮ ತಮ್ಮ ಜಾತ್ಯನುಗುಣವಾದ ವಿಶಿಷ್ಟ ದೇವತೆಯನ್ನೋ, ವಿಶಿಷ್ಟ ತತ್ವವನ್ನೋ ಹೇಳಿಕೊಂಡರೂ ಎಲ್ಲರಲ್ಲೂ ಸಮಪ್ರಮಾಣದಲ್ಲಿ ಸಮಾನಾಂತರವಾಗಿ ಇರುವ ಒಂದಂಶವೆಂದರೆ ಜನ್ಮಾಂತರ ಹಾಗೂ ಕರ್ಮದ ಬಗೆಗಿನ ನಂಬುಗೆ."[೩೪]

ಹೀಗೆ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ವೈಚಾರಿಕ ಬರವಣಿಗೆಗಳಲ್ಲಿ ಭಾರತದ ವರ್ಣವ್ಯವಸ್ಥೆಯು ಸೃಷ್ಟಿ ಮಾಡಿರುವ ಅಸಮಾನತೆಗಳನ್ನು ಹಾಗೂ ಶ್ರೇಷ್ಠ-ಕನಿಷ್ಠ ಎಂಬ

ಮೌಲ್ಯಪ್ರಜ್ಞೆಗಳನ್ನು ಗುರುತಿಸಿದ್ದಾರೆ ಮತ್ತು ಅವುಗಳನ್ನು ವಿರೋಧಿಸಿದ್ದಾರೆ. ಮೂಲತಃ ಲೋಹಿಯಾವಾದದಿಂದ ಪ್ರಭಾವಿತರಾಗಿರುವ ಇವರು ಬಹಳ ಸಹಜವಾಗಿ ಭಾರತೀಯ ಸಮಾಜದ ವರ್ಣವ್ಯವಸ್ಥೆಯನ್ನು ಹಾಗೂ ಅದರ ಕರ್ಮಠಗಳನ್ನು ವಿರೋಧಿಸಿದವರಾಗಿದ್ದಾರೆ. ಇವರಿಗೆ ಒಂದು ಕಡೆ ಲೋಹಿಯಾ ಅವರ ಆಲೋಚನೆಗಳ ಪ್ರಭಾವ ಇದ್ದರೆ ಇನ್ನೊಂದು ಕಡೆ ಸ್ವತಃ ಕುವೆಂಪು ಅವರ ನೇರ ಬದುಕಿನ ಪ್ರಭಾವವೇ ಆಗಿದೆ. ಹೀಗಿರುವುದರಿಂದ ಇವರ ವೈಚಾರಿಕ ಬರವಣಿಗೆಗಳಲ್ಲಿ ವೈದಿಕ ವಿರೋಧಿ ಪ್ರಜ್ಞೆಯು ಕೆಲಸ ಮಾಡಿದೆ.

ಚಾತುರ್ವರ್ಣವನ್ನು ಸೃಷ್ಟಿ ಮಾಡಿದ ವೈದಿಕ ಧರ್ಮ ದಲಿತರನ್ನು ಪಂಚಮರು ಹಾಗೂ ಅಸ್ಪೃಶ್ಯರು ಎಂದು ಹೇಳುತ್ತದೆ. ಇವರನ್ನು ಎಲ್ಲಾ ವಿಷಯದಲ್ಲಿಯೂ ದೂರ ಮಾಡಲಾಗಿದೆ. ಸವರ್ಣೀಯರನ್ನು ಕೂಡ ವೈದಿಕ ಧರ್ಮ ಕೀಳಾಗಿ ನೋಡುತ್ತದೆ. ಆದರೆ ಸವರ್ಣೀಯರಿಗೆ ಕಡಿಮೆ ಪ್ರಮಾಣದಲ್ಲಿ ಅಸ್ಪೃಶ್ಯತೆಯನ್ನು ಅನುಸರಿಸುವಂತೆ ಮಾಡಲಾಗಿದೆ. ಆದರೆ ಸಮಾಜದಲ್ಲಿ ಸವರ್ಣೀಯರು ತಪ್ಪು ಮಾಡಿದರೆ ಕಡಿಮೆ ಶಿಕ್ಷೆಯನ್ನು ಕೊಡಲಾಗುತ್ತದೆ. ಅದೇ ಯಾವುದೇ ಒಬ್ಬ ವ್ಯಕ್ತಿ ದಲಿತ ತಪ್ಪು ಮಾಡಿದರೆ ಹಿಡಿ ದಲಿತ ಸಮುದಾಯದ ಮೇಲೆ ಈ ವೈದಿಕ ಧರ್ಮ ತಪ್ಪನ್ನು ಹೊರಿಸುತ್ತದೆ ಎಂಬುದನ್ನು ಲೇಖಕರು ಈ ರೀತಿ ವಿಶ್ಲೇಷಿಸಿದ್ದಾರೆ. "ಕಲುಷಿತವಾಗಿರುವ ಹಿಂದೂಧರ್ಮದ ಕಾರಣವಾಗಿ ಸವರ್ಣೀಯ ತಪ್ಪು ಮಾಡಿದಾಗ ಆ ತಪ್ಪು ಮಾಡಿದ ವ್ಯಕ್ತಿಯನ್ನು ಮಾತ್ರ ಹಿಡಿದುಕೊಳ್ಳುತ್ತದೆ. ಆದರೆ ಅದೇ ತಪ್ಪನ್ನು ಒಬ್ಬ ದಲಿತ ಮಾಡಿದರೆ ಆ ತಪ್ಪು ಮಾಡಿದ ದಲಿತನನ್ನು ಮಾತ್ರ ಹಿಡಿದುಕೊಳ್ಳದೆ, ಆತ ಹುಟ್ಟಿದ ದಲಿತ ಜನಾಂಗವನ್ನೂ ಹಿಡಿದುಕೊಳ್ಳಲು ಹವಣಿಸುತ್ತದೆ, ನಡಾವಳಿ ಇರುವುದು ಹೀಗೆ."[೩೫] ವೈದಿಕ ಧರ್ಮದಲ್ಲಿ ಹಲವಾರು ಕಲುಷಿತಗಳು ಇದ್ದರೂ; ಅಧಿಕಾರದ ಪ್ರಾಬಲ್ಯದಿಂದ ತನ್ನ ಅಧಿಕಾರವನ್ನು ಚಲಾಯಿಸುವುದನ್ನು ಸಮಾಜದಲ್ಲಿ ನಾವು ಕಾಣಬಹುದಾಗಿದೆ.

ವರ್ಣ ಸಮಾಜದ ಮೇಲೆ ವೈದಿಕ ಧರ್ಮ ನಿಂತಿದೆ. ಹಾಗಾಗಿ ವರ್ಣವನ್ನು ವೈದಿಕರು ಪ್ರತಿಪಾದಿಸಿದರು. ವರ್ಣವ್ಯವಸ್ಥೆ ಅಸಮಾನತೆಯನ್ನು ಹುಟ್ಟುಹಾಕಿತ್ತು. ಆದ್ದರಿಂದ ಕುವೆಂಪು, ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ವೈದಿಕ ಪ್ರಜ್ಞೆಯನ್ನು ವಿರೋಧಿಸಿದ್ದು. ಕುವೆಂಪು ಅವರು ವೈದಿಕರು ರಚಿಸಿದ ಪುರಾಣ ಕಾವ್ಯವನ್ನೆ ವಸ್ತುವಾಗಿ ಇಟ್ಟುಕೊಂಡು ವೈದಿಕ ಧರ್ಮದ ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಿದರು. ತೇಜಸ್ವಿ ಅವರು ವರ್ಣಾಶ್ರಮದಿಂದ ಸಮಾಜದಲ್ಲಿ ಸೃಷ್ಟಿಯಾದ ಅಸಮಾನತೆ ಮತ್ತು ವೃತ್ತಿಗಳಲ್ಲಿನ ತಾರತಮ್ಯವನ್ನು ವಿಶ್ಲೇಷಣೆ ಮಾಡುತ್ತಾರೆ. ಹಾಗೂ ಸಾಮಾಜಿಕ ಪ್ರಭುತ್ವದಲ್ಲಿ ವರ್ಣಾಶ್ರಮದ ಪರಿಣಾಮದಿಂದ ಹಲವಾರು ಜಾತಿಗಳು ಹುಟ್ಟಿಗೆ ಕಾರಣವಾಗಿರುವುದರ ಬಗ್ಗೆ ವಿವರಿಸುತ್ತಾರೆ. ವರ್ಣವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳಿಂದ ದೂರ ಮಾಡಿ, ಅಸ್ಪೃಶ್ಯರ ಬಗ್ಗೆ ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಹಾಗಾಗಿ ವೈದಿಕ ಧರ್ಮ ಸೃಷ್ಟಿಸಿದ ಮತ್ತು ಪ್ರತಿಪಾದಿಸುವ ವರ್ಣವ್ಯವಸ್ಥೆಯನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿರೋಧಿಸುವ ನೆಲೆಗಳನ್ನು ಗುರುತಿಸಬಹುದಾಗಿದೆ.

೬.೨.೨. ಜಾತಿ

ನಾನು ಮೇಲೆ, ನೀನು ಮಧ್ಯ, ಅವನು ಕೆಳಗೆ ಎಂದು ಸಾಮಾಜಿಕವಾಗಿ ಗುರುತಿಸುವುದೇ ಜಾತಿಯ ಗುಣವಾಗಿದೆ. 'ಜಾತಿ' ಎಂಬ ಪರಿಕಲ್ಪನೆ ಅಶುದ್ಧ ಮತ್ತು ಶುದ್ಧ ಎಂಬ ಮಾನದಂಡವನ್ನು ಹೊಂದಿದೆ. ವ್ಯಕ್ತಿಯ ಗುಣ ಮತ್ತು ಕರ್ಮಗಳ ಅನುಸಾರವಾಗಿ ಹಿಂದೂಧರ್ಮದ ಚಾತುರ್ವರ್ಣ ಪದ್ಧತಿಯಿಂದ ಜಾತಿಗಳು ಹುಟ್ಟಿಕೊಂಡವು. ಕಾಲವು ಸರಿದಂತೆ ಅನೇಕ ಕಾರಣಗಳಿಂದಾಗಿ ಬಹುಪ್ರಕಾರದ ಕೆಲಸಗಳು, ನಂಬಿಕೆಗಳು, ಮತಧರ್ಮಗಳು, ಆಚರಣೆಗಳು, ಹಿಂದೂ ಸಮಾಜದಲ್ಲಿ ಸೇರಿಕೊಂಡವು. ಇದರಿಂದ ವಿವಿಧ ಪಂಗಡಗಳು ಹುಟ್ಟಿಕೊಂಡವು. ಈ ಪಂಗಡಳೇ ನೂರಾರು ಜಾತಿ ವರ್ಗವಾದವು. ವರ್ಣವಿಭಜನೆಯನ್ನು ಸಮಾಜದಲ್ಲಿ 'ಜಾತಿ' ಎಂದು ಕರೆಯುವ ವಾಡಿಕೆಯಾಯಿತು. ಹಾಗಾಗಿ ಭಾರತದ ಹಿಂದೂ ಸಮಾಜದಲ್ಲಿ ಜಾತಿಯು ಅಧಿಕಾರ ಕೇಂದ್ರವಾಯಿತು. ಆದ್ದರಿಂದ ವೈದಿಕರು ಜನಸಮುದಾಯದ ಮನಸ್ಸಿನಲ್ಲಿ ದೇವರು, ಧರ್ಮ, ಪೂಜೆ, ಆಚರಣೆ, ಧರ್ಮಶಾಸ್ತ್ರ ಮತ್ತು ನಂಬಿಕೆ ಅಸ್ತ್ರಗಳ ಮೂಲಕ ಜಾತಿಪದ್ಧತಿಯ ಅಸ್ತಿತ್ವವನ್ನು ಸ್ಥಾಪಿಸಿದೆ. ಜಾತಿಪದ್ಧತಿಯನ್ನು ಉಲ್ಲಂಘಿಸಿದವರಿಗೆ ದಂಡನೆ, ಬಹಿಷ್ಕಾರ ಮತ್ತು ತಲೆದಂಡಗಳ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಈ ರೀತಿಯಾಗಿ ಜಾತಿಯನ್ನು ಪ್ರಭುತ್ವದ ಒಂದು ಅಂಗವಾಗಿ ವೈದಿಕರು ಚಲಾಯಿಸುತ್ತಿದ್ದರು.

ಭಾರತದಲ್ಲಿ ಜಾತಿಪದ್ಧತಿಯು ದೈವ ನಿಯಮವಾದ ಒಂದು ನ್ಯಾಯ ನಿಬಂಧನೆಯಾಗಿ ಮುಗ್ಧ ಜನರ ಮೇಲೆ ಹೇರಲ್ಪಟ್ಟಿದೆ. ಪ್ರಭುತ್ವದಲ್ಲಿ ಕೆಳಜಾತಿಯ ಜನಸಮುದಾಯವರಿಗೆ ಶಿಕ್ಷಣ, ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ತಾರತಮ್ಯವನ್ನು ಮಾಡಲಾಗಿದೆ. ಮನು ಸೃಷ್ಟಿಸಿದ ವರ್ಣಪದ್ಧತಿಯೇ ಜಾತಿಪದ್ಧತಿಗೆ ಮೂಲವಾಗಿ ಅಸಮಾನತೆಯನ್ನು ಸೃಷ್ಟಿಸಿತು. ಅಸಮಾನತೆಯನ್ನು ವೈದಿಕ ಧರ್ಮ ಪ್ರತಿಪಾದಿಸಿತು. ಹಾಗಾಗಿ ಜಾತಿಯು ಪ್ರಭುತ್ವದಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿತು. ಜಾತಿಗೆ ಧಾರ್ಮಿಕ ಸ್ಪರ್ಶವನ್ನು ಕೊಡಲಾಯಿತು. ಜಾತಿ ಶ್ರೇಣೀಕರಣದ ಲಾಭವನ್ನು ಪುರೋಹಿತಶಾಹಿ, ಬ್ರಾಹ್ಮಣರು ಮತ್ತು ಹಿಂದೂಧರ್ಮದ ಸಂಘಸಂಸ್ಥೆಗಳು ರಾಜಕೀಯವಾಗಿ ಬಳಸಿಕೊಂಡವು. ಜಾತಿ ಪ್ರಭುತ್ವದಲ್ಲಿ ಅಧಿಕಾರ ಮತ್ತು ಗೌರವದ ಸಂಕೇತವಾಗಿ ಕಾಣಿಸಿಕೊಂಡಿತು. ಆದ್ದರಿಂದ ಶತಶತಮಾನದಿಂದ ಅಸಮಾನತೆಗೆ ಕಾರಣವಾದ ಜಾತಿಪದ್ಧತಿಯನ್ನು ಅಂಬೇಡ್ಕರ್, ಲೋಹಿಯಾ, ಪೆರಿಯಾರ್ ಅವರು ವಿರೋಧಿಸಿದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಇವರ ಬರಹಗಳಲ್ಲಿ ಜಾತಿ ಪದ್ಧತಿಯನ್ನು ವಿರೋಧಿಸಿದ್ದಾರೆ. ಹಾಗಾಗಿ ಜಾತಿಪದ್ಧತಿಯ ವಿರೋಧವನ್ನು ಈ ಉಪ ಅಧ್ಯಾಯಗಳಲ್ಲಿ ಚರ್ಚೆ ಮಾಡಲಾಗುವುದು.

"ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು. 'ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ,

ವಿನಾಶಗೊಳಿಸಬೇಕು.' ಎಂದು ಕುವೆಂಪು ವಿಶ್ವಮಾನವ ಸಂದೇಶದ ಸಪ್ತಸೂತ್ರದಲ್ಲಿ ಹೇಳುತ್ತಾರೆ. ಅಲ್ಲದೆ ವಿಶ್ವಮಾನವ ಗೀತೆಯಾದ ಅನಿಕೇತನ ಪದ್ಯದಲ್ಲಿ ಜಾತಿಪದ್ಧತಿಯನ್ನು ವಿರೋಧಿಸಿ ವಿಶ್ವಮಾನವ ಆಗಬೇಕು ಎಂದು ಜಾಗೃತಿ ಮೂಡಿಸುತ್ತಾರೆ.

ನೂರು ಮತದ ಹೊಟ್ಟ ತೂರಿ
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ[ನ೩೬]

ಪ್ರಭುತ್ವವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುವ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಗಳಿಂದ ಜಾತಿ ಎಂಬುವುದು ಹುಟ್ಟಿತು. ಪ್ರಭುತ್ವದಲ್ಲಿ ಜನಸಾಮಾನ್ಯರನ್ನು ಬೆದರಿಸುವುದರಿಂದ ಮತ್ತು ಮೋಸ ಮಾಡುವ ಮೂಲಕ ಮತ(ಜಾತಿ) ಸೃಷ್ಟಿ ಮಾಡಲಾಗಿದೆ ಎಂದು ಈ ಪದ್ಯದಲ್ಲಿ ಕುವೆಂಪು ಹೇಳುತ್ತಾರೆ.

"ದೊರೆ ಮತ್ತು ಪುರೋಹಿತ
ಕೂಡಿದಾಗ ಹುಟ್ಟಿತು ಮತ!
ಮೊದಲ ಠಕ್ಕ ಮೊದಲ ಬೆಪ್ಪ
ಕೂಡಿದಾಗ ಮೂಡಿತು ಮತ!
ಯಾವುದನೃತ? ಯಾವುದು ಋತ?
ಅಂತೂ ನಡೆಯಿತದ್ಭುತ![೩೭]

ಪ್ರಭುತ್ವದಲ್ಲಿ ಅಸಮಾನತೆಯನ್ನು ಸೃಷ್ಟಿಸಲು ಜಾತಿ ಪದ್ಧತಿಯನ್ನು ಪುರೋಹಿತಶಾಹಿ ರಾಜಪ್ರಭುತ್ವದ ಜೊತೆ ಸೇರಿಕೊಂಡು ಮಾಡಿದ ಕುತಂತ್ರವನ್ನು ಕುವೆಂಪು ವಿರೋಧಿಸುತ್ತಾರೆ. ಅಲ್ಲದೇ ವ್ಯಂಗ್ಯ ಮಾಡಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳಲ್ಲಿ ಬಹಳ ವಿಸ್ತಾರವಾಗಿ, ವಾಸ್ತವವಾಗಿ ಜಾತಿಪದ್ಧತಿ ಚಿತ್ರಿತಗೊಂಡಿದೆ. ಜಾತೀಯತೆಯನ್ನು ಪ್ರತಿಪಾದಿಸುತ್ತಾ ಅದರಂತೆ ಜೀವಿಸುವ ಮೇಲುಜಾತಿಗಳ ಸಮಗ್ರತೆ ಈ ಕಾದಂಬರಿಗಳಲ್ಲಿ ದೊರೆಯುತ್ತದೆ. ಬ್ರಾಹ್ಮಣರ ಆಚಾರ ಪದ್ಧತಿಗಳು, ಪೂಜೆ, ಉಡುಗೆ, ಊಟದ ಪದ್ಧತಿ ಮತ್ತು ಸಂಪ್ರದಾಯಗಳನ್ನು ಈ ಕಾದಂಬರಿಗಳಲ್ಲಿ ವಿರೋಧಿಸಲಾಗಿದೆ. "ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ 'ದೇವಯ್ಯಗೌಡರು' ಬ್ರಾಹ್ಮಣ ಜಾತಿಯನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ಕಾದಂಬರಿಯಲ್ಲಿ

ಕುವೆಂಪು ಈ ರೀತಿ ಚಿತ್ರಣ ಮಾಡಿದ್ದಾರೆ. "ಬೆಟ್ಟಳ್ಳಿ ಕಲ್ಲಯ್ಯಗೌಡರು ಬಂದಿಲ್ಲ; ಬದಲಾಗಿ, ಅವರ ದೊಡ್ಡಮಗ ದೇವಯ್ಯಗೌಡರು ಬಂದಿದ್ದಾರೆ ಎಂಬುದನ್ನು ಕೇಳಿದ ಜೋಯಿಸರ ಮುಖ ಮಂಡಲ ತುಸು ನಿಸ್ತೇಜವಾಯಿತು. ಬ್ರಾಹ್ಮಣರಿಗೆ ತೋರಿಸಬೇಕಾಗಿದ್ದ ಗೌರವದಲ್ಲಿಯೂ ಅವರಿಗೆ ನೀಡಬೇಕಾಗಿದ್ದ ದಾನದಕ್ಷಿಣೆಗಳ ವಿಚಾರದಲ್ಲಿಯೂ ತಮ್ಮ ಸಂಪ್ರದಾಯ ಬದ್ಧತೆಯಿಂದಲೂ ನಿಷ್ಠೆಯಿಂದಲೂ, ಔದಾರ್ಯದಿಂದಲೂ ವಿಪ್ರಪೂಜಾಧುರಂಧರ ಎಂದು ಕಲ್ಲೂರಿನ ಹಾರುವರಲ್ಲಿ ಕೀರ್ತಿ ಪಡೆದಿದ್ದ ಕಲ್ಲಯ್ಯಗೌಡರು ಬರದಿದ್ದುದು ಅಪಾರ ನಷ್ಟದ ಬಾಬತ್ತಾಗಿತ್ತು, ಪೂಜಾರಿಗಳಾಗಿದ್ದ ಭಟ್ಟರಿಗೂ ಜೋಯಿಸರಿಗೂ ಜೊತೆಗೆ, ಹಾರುವರ ವಿಚಾರದಲ್ಲಿ ಪಾದ್ರಿಗಳೊಡನೆ ಸೇರಿಕೊಂಡು, ಕೆಟ್ಟ ಅಭಿಪ್ರಾಯವನ್ನು ಸಂಪಾದಿಸಿ, ಅವರನ್ನು ತಿರಸ್ಕಾರದಿಂದಲೂ, ದ್ವೇಷದಿಂದಲೂ ಕಾಣುತ್ತಿದ್ದಾನೆ ಎಂಬ ದೇವಯ್ಯನ 'ಅಪಕೀರ್ತಿ' ಜನಿವಾರದವರಲ್ಲಿ ತಕ್ಕಮಟ್ಟಿಗೆ ಹಬ್ಬಿಬಿಟ್ಟಿತ್ತು."[೩೮] ಈ ರೀತಿಯಾಗಿ ದೇವಯ್ಯಗೌಡರು ಬ್ರಾಹ್ಮಣ ಜಾತಿಯನ್ನು ವಿರೋಧಿಸುತ್ತಾರೆ. ಜಾತಿಯ ಇನ್ನೊಂದು ಮುಖವಾದ ಅಸ್ಪೃಶ್ಯತೆಯನ್ನು ಮೇಲುವರ್ಗದವರು ಕಟ್ಟುನಿಟ್ಟಾಗಿ ಪಾಲಿಸುತ್ತ ಬರಲಾಗಿದೆ. ಹಾಗಾಗಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಕ್ರೈಸ್ತಧರ್ಮದ ಪಾದ್ರಿಗಳು ಶ್ರಮಿಸಿದರು. ಆದ್ದರಿಂದ ದೇವಯ್ಯಗೌಡರು ಕ್ರೈಸ್ತ ಪಾದ್ರಿಗಳ ಪ್ರಭಾವಕ್ಕೆ ಒಳಗಾಗಿ ವೈದಿಕ ಧರ್ಮದ ಜಾತಿ ಪದ್ಧತಿಯನ್ನು ವಿರೋಧಿಸಿತ್ತಾರೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬರುವ ಹೂವಯ್ಯ ಕೂಡ ವೈದಿಕ ಧರ್ಮದ ಜಾತಿಪದ್ಧತಿ, ಕಂದಾಚಾರ ಮುಂತಾದುವುಗಳನ್ನು ವಿರೋಧಿಸಿ ಬೌದ್ಧಧರ್ಮವನ್ನು ಪ್ರತಿಪಾದಿಸುತ್ತಾನೆ.

ಕುವೆಂಪು ಜಾತಿಪದ್ಧತಿಯನ್ನು ವಿರೋಧಿಸಲು 'ಮಂತ್ರ ಮಾಂಗಲ್ಯ' ಎಂಬ ಸರಳ ವಿವಾಹ ಪದ್ಧತಿಯನ್ನು ತಂದರು. "ಶಾಸ್ತ್ರಾಚಾರಗಳನ್ನಾಗಲೀ, ಜೋಯಿಸರಿಂದ ಜಾತಕಾದಿಗಳನ್ನು ನೋಡಿಸುವುದೇ ಆಗಲಿ ನಿಷಿದ್ಧ, ಜಾತಿಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ ಮೊದಲಾದ ಅನಿಷ್ಟಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಈ ಶಾಸ್ತ್ರಾಚಾರಗಳಿಂದ ಭಾರತೀಯರನ್ನು ವಿಮುಕ್ತಗೊಳಿಸುವುದೇ ಮಂತ್ರಮಾಂಗಲ್ಯದ ಮೂಲ ಉದ್ದೇಶ."[೩೯] ವೈದಿಕ ಧರ್ಮ ಪ್ರತಿಪಾದಿಸುವ ಜಾತಿ ಆಧಾರಿತ ಮದುವೆ ಸಂಪ್ರದಾಯಗಳನ್ನು ಕುವೆಂಪು ವಿರೋಧಿಸಿದರು. ವೈದಿಕ ವಿಧಿವಿಧಾನಗಳು ಇಲ್ಲದೆ ಸರಳವಾಗಿ ಮದುವೆಯನ್ನು ಮಾಡಿಕೊಳ್ಳುವುದರ ಬಗ್ಗೆ ಹೇಳುತ್ತಾರೆ. ತೇಜಸ್ವಿ ಅವರು ಜಾತಿಪದ್ಧತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು ಹಾಗಾಗಿ "ನಮ್ಮ ಯುವಕರು ಜಾತಿಪದ್ಧತಿಯನ್ನು ಸಂಪೂರ್ಣ ತಿರಸ್ಕರಿಸಿ ತಮಗೆ ಯಾರು ಇಷ್ಟವಾಗುತ್ತಾರೋ ಅವರನ್ನು ಮದುವೆಯಾಗುವಂತಹ ಪೂರ್ಣ ಸ್ವತಂತ್ರ ಪರಿಸರ ಒಂದನ್ನು ನಿರ್ಮಾಣ ಮಾಡುವುದೇ ಅಂತರ್ಜಾತೀಯ ವಿವಾಹಿತರ ಸಮಾವೇಶದ ಗುರಿಯಾಗಿರಬೇಕು."[೪೦]

ಪೂರ್ಣಚಂದ್ರ ತೇಜಸ್ವಿ ಅವರ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ರಾಮಪ್ಪ, ಚಂದ್ರ, ಜೋಸೆಫ್ ಅಂಗಾರ ಮತ್ತು ರಮೇಶ ಇವರು ಜಾತಿವಿನಾಶದ ಬಗ್ಗೆ ಮಾತನಾಡುತ್ತಾರೆ. "ಹಿಂದೊಮ್ಮೆ ಜಾತಿವಿನಾಶ ಕಾರ್ಯಕ್ರಮ ಹಾಕಿ ಅಂತರ್ಜಾತೀಯ ವಿವಾಹವಾಗಬೇಕು, ಜಾತಿಗಳನ್ನೂ, ಕಂದಾಚಾರವನ್ನೂ, ಮೂಢನಂಬುಗೆಗಳನ್ನೂ ತಿರಸ್ಕರಿಸಬೇಕು ಎಂದೆಲ್ಲಾ ತೀರ್ಮಾನ ತಗೊಂಡಾಗಲೂ

ಅವರಿಗೆ ತಾತ್ಕಾಲಿಕವಾಗಿಯಾದರೂ ಹೀಗೆ ನೆಮ್ಮದಿಯಾಗಿತ್ತು."[೬೧] ವೈದಿಕರು ಸೃಷ್ಟಿ ಮಾಡಿದ ಜಾತಿಪದ್ಧತಿಯಿಂದ ಸಾಮಾಜಿಕವಾಗಿ ಅಸಮಾನತೆಯನ್ನು ಸೃಷ್ಟಿಸಲು ಕಾರಣವಾಗಿತ್ತು. ಆದ್ದರಿಂದ ಚಿದಂಬರ ರಹಸ್ಯದಲ್ಲಿ ಬರುವ ಯುವಕರು ಆಧುನಿಕ ಶಿಕ್ಷಣದ ಪ್ರಭಾವಕ್ಕೆ ಒಳಗಾಗಿ, ವೈಚಾರಿಕತೆಯ ಪ್ರಭಾವದಿಂದ ಜಾತಿಪದ್ಧತಿಯನ್ನು ವಿರೋಧಿಸುತ್ತಾರೆ ಹಾಗೂ ಜಾತಿಪದ್ಧತಿ ನಾಶವಾಗಬೇಕೆಂದರೆ "ಒಟ್ಟಿನಲ್ಲಿ ಕ್ರಾಂತಿ ಆಗಬೇಕಪ್ಪಾ" ಎಂದು ಹೇಳುತ್ತಾರೆ.

ಬ್ರಾಹ್ಮಣರು ಸಮಾಜದಲ್ಲಿ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಜಾತಿಪದ್ಧತಿಯನ್ನು ಜಾರಿಗೆ ತಂದರು. ಅಲ್ಲದೆ ಜಾತಿ ಜಾತಿಗಳ ನಡುವೆ ದ್ವೇಷ ಅಸಹನೆಗಳನ್ನು ತಂದರು. ಹಾಗಾಗಿ ತೇಜಸ್ವಿ ಅವರು ಚಿದಂಬರ ರಹಸ್ಯ ಕಾದಂಬರಿಯಲ್ಲಿ ಬ್ರಾಹ್ಮಣನಾದ ರಾಮಾಚಾರಿಯ ಜಾತಿ ರಾಜಕಾರಣವನ್ನು ಈ ರೀತಿ ನೋಡಬಹುದು. "ರಾಮಾಚಾರಿ ಕೆಸರೂರಿನ ಬೆರಳೆಣಿಕೆಯಷ್ಟಿದ್ದ ಬ್ರಾಹ್ಮಣರ ಮುಂದಾಳು. ಅವರ ಬ್ರಾಹ್ಮಣ್ಯ ಉಳಿಸಲು ಕಟಿಬದ್ಧನಾಗಿ ನಿಂತಿದ್ದವ. ಜಾತಿ ಜಾತಿಗಳನ್ನು ಒಂದರ ಮೇಲೊಂದು ಎತ್ತಿಕಟ್ಟಿ ಬ್ರಾಹ್ಮಣರ ಹಿತಾಸಕ್ತಿ ಕಾಪಾಡುವುದರಲ್ಲಿ, ಬ್ರಾಹ್ಮಣರ ವಿರುದ್ಧ ಶೂದ್ರರು ಎಗರಿ ಬಿದ್ದಾಗ ಶೋಷಣೆ ಮಾಡುತ್ತಿದ್ದವರು ಒಕ್ಕಲಿಗರು ಲಿಂಗಾಯ್ತರೇ ಎಂದು ಹರಿಜನರನ್ನು ಅವರ ಮೇಲೆ ಎತ್ತಿಕಟ್ಟಿದ. ಬೇಸಾಯಗಾರರೆಲ್ಲಾ ಒಟ್ಟಾದಾಗ ಇವರೆಲ್ಲಾ ಭೂ ಮಾಲೀಕರು, ಭೂರಹಿತ ಕೃಷಿ ಕಾರ್ಮಿಕರನ್ನು ಶೋಷಿಸುತ್ತಿದ್ದಾರೆಂದು ಕಮ್ಯುನಿಸ್ಟ್ ಪಕ್ಷ ಒಂದನ್ನು ಮಾಡಿ ಭೂರಹಿತರನ್ನೂ ತೋಟದ ಆಳುಗಳನ್ನೂ ಬೇಸಾಯಗಾರರ ಮೇಲೆ ಎತ್ತಿ ಕಟ್ಟಿದ."[೬೨] ಹೀಗೆ ಸಾಮಾಜಿಕ ಪ್ರಭುತ್ವದಲ್ಲಿ ವೈದಿಕರು ತಮ್ಮ ಅಧಿಕಾರವನ್ನು ಚಲಾಯಿಸಲು ಜಾತಿಪದ್ಧತಿಯನ್ನು ಅಸ್ತ್ರವಾಗಿ ಮಾಡಿಕೊಂಡರು. ಆಧುನಿಕತೆಯ ಪ್ರಭಾವದಿಂದ ಪ್ರಭಾವಿತರಾದ ಹರಿಜನರು, ಬ್ರಾಹ್ಮಣರು ಮಾಡುತಿದ್ದ ಅಸ್ಪೃಶ್ಯತೆಯನ್ನು ಪ್ರಶ್ನೆ ಮಾಡತೊಡಗಿದರು. 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಬ್ರಾಹ್ಮಣನಾದ ರಾಮಾಚಾರಿಗೆ ಹರಿಜನರು ಈ ರೀತಿ ಪ್ರಶ್ನೆ ಕೇಳುತ್ತಾರೆ. "ನಿಮ್ಮ ದೇವಸ್ಥಾನಕ್ಕೆ ನಮ್ಮನ್ನು ಸೇರಿಸ್ಕೋತೀರಾ! ನಿಮ್ಮ ಮನೆ ಒಳಗೆ ನಮ್ಮನ್ನು ಬಿಟ್ಕೋತೀರಾ? ನಮ್ಮನ್ನ ಮುಟ್ಟಿಸ್ಕೋತೀರಾ?" ಎಂದೆಲ್ಲಾ ಪ್ರಶ್ನೆ ಕೇಳಿ ಕಿಚಾಯಿಸತೊಡಗಿದರು. ರಾಮಾಚಾರಿ "ಮುಟ್ಟಿಸ್ಕೋಬೌದು! ಮುಟ್ಟಿಸ್ಕೋಬಾರ್ದಂತ ಏನೂ ಇಲ್ಲ. ಅವೆಲ್ಲಾ ಹಳೇ ಕಂದಾಚಾರ ಅಲ್ಲೇನ್ರಯ್ಯ, ಮುಖ್ಯ ನೀವೂ ಸ್ವಲ್ಪ ಶುಚಿಯಾಗಿ ಇರೋದನ್ನ ಕಲೀಬೇಕು. ಸುಮ್ಮ ಸುಮ್ಮನೆ ಒಬ್ಬರು ಮತ್ತೊಬ್ರನ್ನ ಮುಟ್ಟೋದು ಅಂದರೆ ಏನ್ರಯ್ಯ? ಹೆಣ್ತೀರನ್ನ ಯಾವನೋ ದಾರಿಹೋಕ ಬಂದು ಮುಟ್ಟಿದರೆ ನೀವು ಸುಮ್ನೆ ಬಿಡ್ತೀರಾ? ಆ ತರಾನೇ ಬಂದವು ಈ ಕಟ್ಲೆಕಾನೂನು ಆಚಾರ ಎಲ್ಲಾ. ದೇವಸ್ಥಾನದ ಒಳಗೆ ಪೂಜಾರಿ ಬಿಟ್ಟು ಇನ್ನು ಯಾರ್ಗೂ ಬಿಡಬಾರ್ದು ಅಂತ ಮಾಡಿದೀವಿ. ಯಾಕಂತ ಕಾರಣ ತಿಳೀದೇ ನೀವು ಮಾತಾಡ್ತೀರಿ. ನಿಮಗೇ ನಮಗೇ ಕ್ಷೇಮ ಅಂತಲ್ವೆ? ದೇವರಿಗೆ ಮೈಲಿಗೆ ಆದರೆ ನಿಮಗೆ ತೊಂದ್ರೇನೋ! ದೇವರಿಗೋ! ನಮಗೇ ನಿಮಗೇ ತಾನೆ! ಅದಕ್ಕೆ ಸ್ವಲ್ಪ ತಿಳಿದು ಮಾತಾಡಿ" ಇತ್ಯಾದಿಯಾಗಿ ಅಡ್ಡಗೋಡೆ ಮೇಲಿನ ದೀಪದಂತೆ ಮಾತಾಡತೊಡಗಿದ. ಅವನು ಮುಖ್ಯವಾಗಿ ಬಂದದ್ದು ಈ ಹರಿಜನರ ಮನಸ್ಸಿನ ಮರ್ಮ ತಿಳಿಯೋದಕ್ಕೆ ಹೊರತು, ಯಾವ ಆಶ್ವಾಸನೆಯನ್ನೂ

ಕೊಡೋದಕ್ಕಲ್ಲ. ಹರಿಜನರು ಇದೇ ಸಮಯ ಎಂದು ನಮಗೆ ನೀವು ಎನೆಲ್ಲಾ ಅನ್ಯಾಯ ಮಾಡಿದ್ದೀರಿ ಎಂದು ಸವರ್ಣೀಯರ ವರ್ತನೆಗಳನ್ನೆಲ್ಲಾ ಪಟ್ಟಿ ಮಾಡಿ ಹೇಳತೊಡಗಿದರು. ಇದನ್ನೆಲ್ಲಾ ಕೇಳುತ್ತಾ ಕೇಳುತ್ತಾ ರಾಮಾಚಾರಿ ಹಿಂದೆ ನಿಂತಿದ್ದ ಗೌಡನಿಗೆ ಸಿಟ್ಟು ಏರತೊಡಗಿತು. ರಾಮಾಚಾರಿಯಂಥ ಮಹಾನುಭಾವನಿಗೆ ಇವರು ಈ ರೀತಿ ಚುಡಾಯಿಸಬಹುದೇ? ಎಂದು."[೪೩] ಈ ರೀತಿ ಹರಿಜನರು ಜಾತಿಪದ್ಧತಿಯನ್ನು ಪ್ರಶ್ನೆ ಮಾಡುವುದು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಅಲ್ಲದೇ ಜಾತಿಕೇಂದ್ರಿತ ರೋಗಗ್ರಸ್ತ ಸಮಾಜಕ್ಕೆ 'ಚಿದಂಬರ ರಹಸ್ಯ' ಕಾದಂಬರಿ ಪರಿಹಾರವನ್ನು ಸೂಚಿಸುತ್ತದೆ. ಕಾದಂಬರಿಯ ಕೊನೆಯಲ್ಲಿ ರಫಿ ಹೇಳುವ ಮಾತು "ನನಗೆ ಕಾಣ್ತದೆ. ಅವರಿಗೆ ಕಾಣ್ತದ? ಈ ಹೊಗೇಲಿ" ಎಂಬ ಮಾತು ಜಾತಿ ನಾಶವಾಗಿ ಜಾತ್ಯತೀತವಾದ ಸಮಾಜ ಮೂಡಬೇಕು ಎಂಬ ಆಶಾವಾದ ಈ ಮಾತಿನಲ್ಲಿ ಇದೆ.

ಅಧಿಕಾರಕ್ಕಾಗಿ ಸಮಾಜದಲ್ಲಿ ತನ್ನ ಪ್ರಾಬಲ್ಯವನ್ನು ಪಡೆಯಲು ಮೇಲುವರ್ಗದವರು ಕೆಳವರ್ಗದ ಜನರನ್ನು ವಂಚಿಸುವ ಬುದ್ಧಿಯನ್ನು ಉಪಯೋಗಿಸುತ್ತಾರೆ. ಸಾಮಾನ್ಯ ಜನರಿಗೆ ಭಯ-ಭಕ್ತಿ, ದೇವರ ಹೆಸರಿನಲ್ಲಿ ವಂಚನೆ ಮಾಡಲು ಕಟ್ಟು ಕತೆಗಳನ್ನು ಸೃಷ್ಟಿ ಮಾಡಲಾಗುತ್ತದೆ. ಸಮಾಜದಲ್ಲಿ ಜಾತೀಯತೆ, ಅಸಮಾನತೆಯನ್ನು ಉಂಟುಮಾಡಿ ಕೆಳವರ್ಗದ ಜನರ ನಡುವೆ ಜಗಳ ಹಚ್ಚುವ ಮೇಲುವರ್ಗದ ಬ್ರಾಹ್ಮಣರ ಜನಪದ ಕಥೆಯನ್ನು ಲೇಖಕರು ಈ ರೀತಿ ಉಲ್ಲೇಖ ಮಾಡುತ್ತಾರೆ. "ನಮ್ಮಲ್ಲಿ ಇರುವ ಒಂದು ಜನಪದ ಕಥೆಯನ್ನು ನೆನಪಿಸುವೆ. ದಲಿತರಾದ ನಮ್ಮಲ್ಲಿ ಮಾರಮ್ಮನಿಗೆ ಕೋಣ ಬಲಿ ಕೊಡುವ ಪದ್ಧತಿ ಇತ್ತು. ಈ ಪದ್ಧತಿಯ ಹಿಂದೆ ಇರುವ ಕಥೆ ಏನೆಂದರೆ, ಒಬ್ಬ ಅಸ್ಪೃಶ್ಯನು ಬ್ರಾಹ್ಮಣ ಕನ್ಯೆಯನ್ನು ಪ್ರೀತಿಸಿ, ತಾನು ಬ್ರಾಹ್ಮಣ ಎಂದು ಸುಳ್ಳು ಹೇಳಿ ವಂಚಿಸಿ ಆಕೆಯನ್ನು ಮದುವೆಯಾಗುತ್ತಾನೆ. ಮುಂದೆ ತಾನು ಮದುವೆಯಾದಾತ ಅಸ್ಪೃಶ್ಯ ಎಂದು ಆ ಬ್ರಾಹ್ಮಣಿಗೆ ತಿಳಿದಾಗ ಆಕೆ ಕುಪಿತಳಾಗಿ ಅಗ್ನಿ ಪ್ರವೇಶ ಮಾಡುತ್ತಾ 'ಜಾತಿ ಸುಳ್ಳು ಹೇಳಿ ನನ್ನನ್ನು ಕೆಡಿಸಿದ ಪ್ರಯುಕ್ತ ಆ ಅಸ್ಪೃಶ್ಯ ಕೋಣವಾಗಿ ಹುಟ್ಟಲಿ, ಆ ಕೋಣವನ್ನು ನನಗೆ ಬಲಿ ಕೊಡಲಿ' ಎಂದು ಶಾಪ ಕೊಡುತ್ತಾಳೆ. ಇದು ಕಥೆ. ಕೋಣವಾದ ತಮ್ಮವನನ್ನೇ ನಮ್ಮವರು ಬಲಿ ಕೊಡುತ್ತಾ, ಅಷ್ಟೇ ಅಲ್ಲ ತಿಂದು ಬಂದಿದ್ದಾರೆ. ಇಂದು ಕೋಣ ಬಲಿಯ ಮಾಂಸ ಮಾತ್ರವಾಗಿರಬಹುದು. ಆದರೆ ಹಿಂದೆ, ನಮ್ಮವರನ್ನು ನಮ್ಮಿಂದಲೇ ಕೊಲ್ಲಿಸುವುದನ್ನು ಈ ಕತೆ ಮಾಡಿಸಿತ್ತು. ವರ್ಣಸಂಕರವನ್ನು ತಡೆದಿತ್ತು.[೪೪] ವೈದಿಕ ಧರ್ಮ ಜಾತಿಯ ಹೆಸರಿನಲ್ಲಿ ಕೆಳವರ್ಗದ ಜನರನ್ನು ಕಟ್ಟುಕಥೆಗಳ ಮೂಲಕ ವಂಚಿಸುತ್ತಿರುವುದನ್ನು ಲೇಖಕರು ವಿರೋಧಿಸುತ್ತಾರೆ.

ಭಾರತದಲ್ಲಿ ಜಾತಿ ಶ್ರೇಣೀಕರಣದಿಂದ ಅಸಮಾನತೆ ಎಂಬುದು ಒಂದು ಧರ್ಮವಾಗಿ ಬೆಳೆದಿದೆ. ಕೆಳಜಾತಿಗಳ ನಡುವೆ ಜಗಳಗಳು ನಡೆದರೆ ಅವುಗಳ ಲಾಭವನ್ನು ಮೊದಲು ಪಡೆಯುವವರು ಬ್ರಾಹ್ಮಣರಾಗಿದ್ದಾರೆ. ಏಕೆಂದರೆ ಇವರು ಮೇಲು ವರ್ಗದವರಾಗಿದ್ದು, ಹಾಗೂ ಧರ್ಮ, ಪ್ರಭುತ್ವ ಅಧಿಕಾರಗಳನ್ನು ನಿಯಂತ್ರಿಸುವವರಾಗಿದ್ದಾರೆ. ತಲತಲಾಂತರಗಳಿಂದ ಬ್ರಾಹ್ಮಣ್ಯವು ಪಾಳೇಗಾರಿಕೆ ಜುಟ್ಟನ್ನು ಹಿಡಿದುಕೊಂಡು ಬರುತ್ತಿರುವುದರಿಂದ "ಜಾತಿ ಶ್ರೇಣಿಯಲ್ಲಿ ಮೇಲಿರುವಾತ ಸಾಮಾಜಿಕವಾಗಿ

ಮೇಲು-ಕೀಳು, ಕಿತ್ತಾಟ ಯಾರಲ್ಲೇ ಆದರೂ ಸಾಮಾಜಿಕ ಪ್ರತಿಷ್ಠೆಯ ಲಾಭ ಹೆಚ್ಚು ದಕ್ಕುವುದು ಮೊದಲು ಬ್ರಾಹ್ಮಣನಿಗೆ ಆಮೇಲೆ ಕ್ಷತ್ರಿಯನಿಗೆ ಹೀಗೆ."[೪೫] ಸಣ್ಣ ಪುಟ್ಟ ಜಾತಿಗಳಲ್ಲಿ ಪ್ರತಿಷ್ಠೆಗಾಗಿ ಕಿತ್ತಾಟ ನಡೆದರೂ ಇದರ ಫಲ ದಕ್ಕುವುದು ಮೇಲೆ ಇರುವ ಜಾತಿಯವರಿಗೆ. ಊರಾಚೆಯ ಹೊಲೆಮಾದಿಗರ ಒಳಗೊಳಗೆ ಪ್ರತಿಷ್ಠೆಗಾಗಿ ಜಗಳವಾದರೆ ಈ ಇಬ್ಬರಲ್ಲೂ ಮೇಲು ಕೀಳು ಏನೂ ಹೆಚ್ಚು ಕಮ್ಮಿ ಆಗದೆ ಇವರು ಸಾಮಾಜಿಕವಾಗಿ ಮತ್ತಷ್ಟೂ ದೂರ ಎಸೆಯಲ್ಪಡುವರು. ಇವರ ಸ್ಥಾನಮಾನದ ವ್ಯಾಜ್ಯ ಬಗೆಹರಿಯದೆ, ಜಾತಿಶ್ರೇಣಿಯಲ್ಲಿ ಮೇಲಿರುವವನ ಪಟ್ಟವನ್ನು ಮತ್ತೂ ಹೆಚ್ಚು ಭದ್ರ ಮಾಡುತ್ತದೆ.

ವೈದಿಕ ಧರ್ಮವನ್ನು ಪ್ರತಿಪಾದಿಸುವ ಪುರೋಹಿತಶಾಹಿಯ ಹುನ್ನಾರಗಳು ಯಾವ ರೀತಿ ಇತಿಹಾಸವನ್ನು ಸೃಷ್ಟಿಸುತ್ತವೆ ಎಂಬುದನ್ನು ಗಮನಿಸಿದಾಗ "ಇಂದು ನಾವು ಜೀವಿಸುತ್ತಿರುವ ಕಾಲವು, 'ದೇವರೇ ಚಾತುರ್ವರ್ಣವನ್ನು ಕಷ್ಟಪಟ್ಟು ಸಂಪಾದಿಸಿಕೊಂಡಿದೆ. ಅದುವರೆಗಿನ ಕಾಲದ ನಡಿಗೆಯಲ್ಲಿ 'ಜಾತಿ ದೇವರ ಸೃಷ್ಟಿ' ಎಂದು ನಂಬಿದ ತುಳಿಯುವವರೂ ಚೆನ್ನಾಗಿ ತುಳಿದು; 'ಜಾತಿ ದೇವರ ಕಟ್ಟಳೆ; ಎಂದು ನಂಬಿದ ತುಳಿಸಿಕೊಳ್ಳುವವರೂ ಚೆನ್ನಾಗಿ ತುಳಿಸಿಕೊಂಡು ಇದರಿಂದಾಗಿ ಚೆಲ್ಲಿದ ರಕ್ತವು ಹರಿದರೆ ನದಿಯಷ್ಟು, ನಿಂತರೆ ಸರೋವರದಷ್ಟು, ಇಷ್ಟೊಂದು ಸಾಲದೆ?"[೪೬] ಮೇಲುವರ್ಗದವರು ಜಾತಿ ದೇವರ ಸೃಷ್ಟಿ ಎಂದು ಹೇಳಿ ಜನಸಾಮಾನ್ಯರನ್ನು ಕೆಳವರ್ಗದವರನ್ನು ವಂಚಿಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನದ ಕಾಲದಲ್ಲಿ ನಾವು ಇದ್ದರೂ ಜಾತಿತಾರತಮ್ಯ ಇನ್ನೂ ಕಡಿಮೆ ಆಗಿಲ್ಲ. ಇದು ಸಾಗರ, ಸರೋವರದಷ್ಟು ದೊಡ್ಡದಾಗಿ ಬೆಳೆಯುತ್ತಿರುವುದಕ್ಕೆ ಕಾರಣ. ಈ ವೈದಿಕ ಧರ್ಮದ ಮೂಲಭೂತವಾದವೇ ಎಂಬುದು ಲೇಖಕರ ಆಶಯವಾಗಿದೆ.

ಹೀಗೆ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಕೃತಿಗಳಲ್ಲಿ ಜಾತಿಪದ್ಧತಿಯನ್ನು ವಿರೋಧಿಸಿದ್ದಾರೆ. ಸಮಾಜದಲ್ಲಿ ಪ್ರಭುತ್ವವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ಜಾತಿಪದ್ಧತಿಯನ್ನು ಸೃಷ್ಟಿಮಾಡಿದ ವೈದಿಕರ ಬೌದ್ಧಿಕ ಮನಸ್ಥಿತಿಯನ್ನು ವಿರೋಧಿಸುತ್ತಾರೆ. ಕುವೆಂಪು ಅವರು ನನ್ನ ಪ್ರಜ್ಞೆ 'ವಿಶ್ವಪ್ರಜ್ಞೆ' ಎಂದು ಹೇಳುವುದರ ಮೂಲಕ ಜಾತಿ ಪದ್ಧತಿಯನ್ನು ವಿಶಾಲ ದೃಷ್ಟಿಕೋನದಿಂದ ವಿರೋಧಿಸುತ್ತಾರೆ. ಹಾಗೂ ಪ್ರಭುತ್ವದಲ್ಲಿ ಎಲ್ಲರಿಗೂ ಸಮಾನತೆ ಸಿಗಬೇಕು ಎಂದು ವಿಶ್ವಮಾನವ ಸಂದೇಶವನ್ನು ಹೇಳುತ್ತಾರೆ. ಪೂರ್ಣಚಂದ್ರ ತೇಜಸ್ವಿ ಅವರ ಸೃಜನಶೀಲ ಕೃತಿಯೊಳಗೆ ತಮ್ಮ ವೈಚಾರಿಕವಾದ ಹಾಗೂ ಬೌದ್ಧಿಕವಾದ ಚರ್ಚೆ ಚಿಂತನೆಗಳಲ್ಲಿ ಜಾತಿಪದ್ಧತಿಯನ್ನು ವಿವರಿಸುತ್ತಾರೆ ಮತ್ತು ವಿರೋಧಿಸಿದ್ದಾರೆ. ಅಲ್ಲದೇ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಲೇಖನದಲ್ಲಿ ಕನ್ನಡ ಸಾಹಿತ್ಯದ ಇತಿಹಾಸ ಮುಖಾಂತರ ಜಾತಿಯನ್ನು ವಿಶ್ಲೇಷಣೆ ಮಾಡುತ್ತಾರೆ. ಕನ್ನಡ ಸಾಹಿತ್ಯ ಪ್ರಾರಂಭದಿಂದಲೂ ಜಾತಿಪದ್ಧತಿ ಮತ್ತು ಬ್ರಾಹ್ಮಣರ ಬಗ್ಗೆ ಬಂಡಾಯವಾಗಿದೆ ಎಂದೂ ಹೇಳುತ್ತಾರೆ. ಸಮಾಜದಲ್ಲಿ ಬ್ರಾಹ್ಮಣರು ಪ್ರಭುತ್ವದ ಜೊತೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಮಾಡುತ್ತಿರುವ ಹುನ್ನಾರಗಳ ಬಗ್ಗೆ ಮಾತನಾಡಿದ್ದಾರೆ. ದೇವನೂರ

ಮಹಾದೇವರ ಒಟ್ಟು ಸಾಹಿತ್ಯವು ಜಾತಿಪದ್ಧತಿಯನ್ನು ವಿರೋಧಿಸುವ ಹಿನ್ನೆಲೆಯಲ್ಲೇ ರಚಿತವಾಗಿದೆ. ಕೆಳವರ್ಗದ ಜನರ ಮೇಲೆ ಜಾತಿಯ ಕಾರಣದಿಂದ ಮಾಡುತ್ತಿರುವ ಶೋಷಣೆಯನ್ನು ಪ್ರಶ್ನೆ ಮಾಡುತ್ತಾರೆ. ಶತಶತಮಾನಗಳಿಂದ ವೈದಿಕರು ಮತ್ತು ಸವರ್ಣೀಯರು ದಲಿತರ ಮೇಲೆ ಮಾಡಿಕೊಂಡು ಬಂದಿರುವ ಯಾಜಮಾನ್ಯವನ್ನು ವಿರೋಧಿಸುತ್ತಾರೆ. ಒಟ್ಟಿನಲ್ಲಿ ಸಾಮಾಜಿಕ ಪ್ರಭುತ್ವದಲ್ಲಿ ವೈದಿಕರು ಜಾತಿಪದ್ಧತಿಯ ಮೂಲಕ ಅಧಿಕಾರವನ್ನು ಚಲಾಯಿಸುತ್ತಾ ಬಂದಿದ್ದಾರೆ. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವೈದಿಕರು ಸೃಷ್ಟಿ ಮಾಡಿದ ಅಮಾನವೀಯ ಜಾತಿಪದ್ಧತಿಯನ್ನು ಈ ಮೂರು ಲೇಖಕರು ವಿರೋಧಿಸುತ್ತಾರೆ. ಇದನ್ನೇ ಕ್ರೋಡೀಕರಿಸಿ ವೈದಿಕ ವಿರೋಧಿ ಪ್ರಜ್ಞೆ ಎಂದು ಇಲ್ಲಿ ಚರ್ಚೆ ಮಾಡಲಾಗಿದೆ.

೬.೨.೩. ಮಹಿಳೆ

ಮನುಸ್ಮೃತಿಯಲ್ಲಿ ಮಹಿಳೆಯನ್ನು ಮಾಯೆ, ಬಲಿಷ್ಠೆ, ಕಂಟಕಿ, ಪಾಪಾತ್ಮೆ ಎಂದು ಬರೆಯಲಾಗಿದೆ. ವೇದಗಳ ಕಾಲದಲ್ಲಿ ಉನ್ನತ ವರ್ಗದ ಋಷಿಪತ್ನಿಯ ಮಹಿಳೆಯರಿಗೆ ಪುರುಷರಷ್ಟು ಸಮಾನವಾದ ಸ್ಥಾನಮಾನ ಇತ್ತು ಎಂದು ಹೇಳಲಾಗಿದೆ. ಆದರೆ ಸಾಮಾನ್ಯ ಮಹಿಳೆಯರಿಗೆ ಇರಲಿಲ್ಲ. ವೈದಿಕ ಸಂಸ್ಕೃತಿಯು ಪುರುಷಪ್ರಧಾನವಾದುದ್ದಾಗಿದೆ. ವೈದಿಕ ಧರ್ಮಶಾಸ್ತ್ರಗಳು ಮಹಿಳೆಯರ ಸ್ವಾತಂತ್ರ್ಯವನ್ನು ಕಿತ್ತುಕೊಂಡು ನೀತಿ ನಿಯಮಗಳನ್ನು ರೂಪಿಸಿವೆ. ಮಹಿಳೆಯರು ವೇದವನ್ನು ಓದುವಂತಿಲ್ಲ. ಮಹಿಳೆಯರಿಗೆ ಯಾವುದೇ ಆಸ್ತಿಯ ಹಕ್ಕು ಇಲ್ಲ. ಪತಿಗೆ ನಿಷ್ಠೆಯಿಂದಿರಬೇಕು ಮತ್ತು ವಿಧೇಯತೆಯಿಂದ ಇರಬೇಕು ಎಂಬುದು ವೈದಿಕ ಧರ್ಮದಲ್ಲಿ ಇರುವ ನಿಯಮಗಳಾಗಿವೆ. ಹೆಣ್ಣನ್ನು ಒಂದು ಭೋಗದ ವಸ್ತುವೆಂದು ಪರಿಗಣಿಸುವುದರಿಂದ ಹೆಣ್ಣನ್ನು ಕನ್ಯಾದಾನ ಮಾಡುವುದು ಮತ್ತು ಮಕ್ಕಳನ್ನು ಹೆರುವ ಯಂತ್ರದಂತೆಯೂ ವೈದಿಕ ಧರ್ಮ ಭಾವಿಸಿದೆ. ಸಾಮಾಜಿಕ ಪ್ರಭುತ್ವದ ಮೂಲಕ ಮಹಿಳೆಯ ಮೇಲೆ ಸತಿಸಹಗಮನ ಪದ್ಧತಿ, ಬಾಲ್ಯವಿವಾಹ, ವಿಧವೆ, ದೇವದಾಸಿ ಪದ್ಧತಿ ಎನ್ನುವ ಅನಿಷ್ಟ ಪದ್ಧತಿಗಳನ್ನು ಹೇರಲಾಯಿತು. ಧಾರ್ಮಿಕ ನಂಬಿಕೆಗಳ ಭಾಗವಾಗಿ ಮತ್ತು ದೇವರ ಹೆಸರಿನಲ್ಲಿ ಮಹಿಳೆಯರನ್ನು ಬಲಿಪಶು ಮಾಡಲಾಗಿದೆ. ಪುರೋಹಿತವರ್ಗವು ಪ್ರಭುತ್ವದ ಅಡಿಯಲ್ಲಿಯೇ ದೇವದಾಸಿ ಮಹಿಳೆಯರನ್ನು ತಮ್ಮ ಕಾಮದಾಹಕ್ಕಾಗಿ ಬಳಸಿಕೊಂಡಿತು. ದೇವದಾಸಿ ಪದ್ಧತಿಯೂ ದೇವರ ಹೆಸರಿನಲ್ಲಿ ಕೆಳವರ್ಗ, ಕೆಳಜಾತಿಯ ಮಹಿಳೆಯರನ್ನು ಉಳ್ಳವರು ಅಧಿಕೃತವಾಗಿ ಅನುಭವಿಸುವ ಪರಿಪಾಟವಾಗಿ ಬೆಳೆಯುವಂತೆ ಪುರೋಹಿತಶಾಹಿ ಪ್ರಭುತ್ವದ ಮೂಲಕ ಕಾನೂನು ನಿಯಮಗಳನ್ನು ಮಾಡಿತು. ಹೀಗೆ ವೈದಿಕ ಧರ್ಮ ಸಾಮಾಜಿಕ ಪ್ರಭುತ್ವದಲ್ಲಿ ಮಹಿಳೆಯನ್ನು ಗುರುತಿಸಲಾಗಿದೆ ಮತ್ತು ಬಳಸಲಾಗಿದೆ.

ವೈದಿಕಶಾಹಿ ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆ ಮಾಡಲಾಗಿದೆ. ಈ ಶೋಷಣೆಯನ್ನು ವಚನ ಚಳುವಳಿ ವಿರೋಧಿಸಿ ಮಹಿಳೆಯರ ಧಾರ್ಮಿಕ, ಆಧ್ಯಾತ್ಮಿಕ ಸ್ವಾತಂತ್ರ್ಯ ಕುರಿತು ಕೆಲವು ಮೂಲಭೂತ ಪ್ರಶ್ನೆ ಎತ್ತಲಾಯಿತು. ಆಧುನಿಕ ಸಂದರ್ಭದಲ್ಲಿ ಪಾಶ್ಚಿಮಾತ್ಯ

ಚಿಂತನೆ ಮತ್ತು ಸುಧಾರಣಾವಾದಿಗಳ ಪ್ರಭಾವದಿಂದ ವೈದಿಕ ಧರ್ಮದಲ್ಲಿ ಇದ್ದ ಅನಿಷ್ಟ ಪದ್ಧತಿಗಳು ಮತ್ತು ಮೂಢನಂಬಿಕೆಗಳನ್ನು ವಿರೋಧಿಸಲಾಯಿತು. ಮಹಿಳೆಯರಿಗೂ ಪುರುಷರಷ್ಟೇ ಸ್ಥಾನಮಾನವನ್ನು ಕೊಡುವಂತೆ ಆಗ್ರಹಿಸಲಾಯಿತು. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯವು ವೈದಿಕ ಧರ್ಮ ಪ್ರಭುತ್ವದ ಮೂಲಕ ಮಹಿಳೆಯರ ಮೇಲೆ ಸ್ಥಾಪಿತವಾದ ಮೌಲ್ಯಗಳನ್ನು ವಿರೋಧಿಸಿದೆ. ಸ್ತ್ರೀವಾದಿ ಚಿಂತನೆಗಳನ್ನು ಸಾಹಿತ್ಯದಲ್ಲಿ ಚರ್ಚಿಸಿ ವಿಶ್ಲೇಷಣೆ ಮಾಡಿದೆ. ಭಾರತೀಯ ಮಹಿಳೆಯರ ಮೇಲೆ ವೈದಿಕರು ನಡೆಸಿದ ಶೋಷಣೆ, ಕಟ್ಟುಪಾಡುಗಳು, ಸಂಪ್ರದಾಯ, ನಿಷೇದ, ವಿಧಿವಿಧಾನ, ತೊಳಲಾಟ, ಆತಂಕ, ತಲ್ಲಣ, ಕೀಳರಿಮೆ ಮತ್ತು ನೋವುಗಳನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಇವುಗಳನ್ನು ಅರಿತರು. ಆದ್ದರಿಂದ ಈ ಎಲ್ಲಾ ಸಮಸ್ಯೆಗೆ ಕಾರಣ ವೈದಿಕ ಧರ್ಮ ಮಹಿಳೆಯರ ಮೇಲೆ ಹೇರಿರುವ ನಿಯಮಗಳೇ ಎಂದು ತಿಳಿದು ವೈದಿಕರನ್ನು ವಿರೋಧಿಸಿದರು.

ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಕೃತಿಗಳಲ್ಲಿ ಮಹಿಳೆಯ ಪಾತ್ರಗಳನ್ನು ಕುರಿತು ಚಿಂತಿಸಲಾಗಿದೆ. ಅಲ್ಲದೇ ಸ್ತ್ರೀ ಪರವಾದ ಧೋರಣೆಗಳನ್ನು ಕಾಣಬಹುದು. ಸಾಮಾಜಿಕ ಪ್ರಭುತ್ವದಲ್ಲಿ ಮಹಿಳೆ ಪುರುಷರು ಮುಖ್ಯ. ಆದರೆ ಸಮಾಜದಲ್ಲಿ ಪುರುಷರು ಮಹಿಳೆಯರನ್ನು ನೋಡುವ, ಗುರುತಿಸುವ ಪರಿಯೇ ಬೇರೆಯದು. ಮಹಿಳೆಯನ್ನು ಭೋಗದ ವಸ್ತು, ಕೆಲಸವನ್ನು ಮಾಡುವ ಆಳು, ಪುರುಷನಿಗೆ ದಾಸಿ ಎನ್ನುವ ಭಾವನೆಯಿಂದಲೇ ನೋಡಲಾಗಿದೆ. ಈ ರೀತಿ ನೋಡಲು ಕಾರಣ ವೈದಿಕ ಧರ್ಮದಲ್ಲಿ ಸ್ತ್ರೀಯರಿಗೆ ಕೊಟ್ಟಿರುವ ಸ್ಥಾನಮಾನವಾಗಿದೆ. ಆದರೆ ಕುವೆಂಪು ಅವರು ತಮ್ಮ ಕೃತಿಗಳಲ್ಲಿ ಮಹಿಳೆಯನ್ನು ಗೌರವ, ಅನುಕಂಪ ಮತ್ತು ಪೂಜ್ಯ ಭಾವನೆಯಿಂದ ನೋಡಿದ್ದಾರೆ. ವೈದಿಕರ ಯಾಜಮಾನ್ಯ ಸಂಸ್ಕೃತಿಯಿಂದ ಮಹಿಳೆ ಪುರುಷನ ನೆರಳಿನಲ್ಲಿಯೇ ಬದುಕಬೇಕು, ಮಹಿಳೆಗೆ ಬೌದ್ಧಿಕತೆಯನ್ನು ನಿರಾಕರಿ ಲಾಗಿರುವುದನ್ನು ಕುವೆಂಪು ವಿರೋಧಿಸುತ್ತಾರೆ. ಗಂಡ ಇಲ್ಲದೆ ಹೆಣ್ಣಿಗೆ ಬಾಳಿಲ್ಲ ಎಂಬ ನಂಬಿಕೆಯನ್ನು ಭಾರತೀಯ ಸಂಸ್ಕೃತಿಯಲ್ಲಿ ವೈದಿಕರು ಸೃಷ್ಟಿಸಿದ್ದಾರೆ. ಈ ರೀತಿಯ ವ್ಯವಸ್ಥೆಯನ್ನು ಕುವೆಂಪು ಅವರು 'ಬಾಲವಿಧವೆ' ಕವಿತೆಯಲ್ಲಿ ಪ್ರಶ್ನಿಸುತ್ತಾರೆ ಹಾಗೂ ಸಮಾಜದಲ್ಲಿ ಯಾವುದು ಧರ್ಮ ಎಂದು ಪ್ರಶ್ನಿತ್ತಾರೆ.

ಮನುಜ ಲೋಕವೆ ನರಕ, ಬೇರೆ ನರಕವದೆಲ್ಲಿ
ಆ ವಿಧವೆಗೆ?
ಪತಿಯ ಲೋಕವೆ ನಾಕ, ಬೇರೆ ನಾಕವದೆಲ್ಲಿ
ಆ ಬಾಲೆಗೆ?
ಧರ್ಮಶಾಸ್ತ್ರಜ್ಞರೇ ಬನ್ನಿ ಧರ್ಮವ ತೋರಿ!
ನೀತಿಯಲಿ ಪಂಡಿತರೆ ಬನ್ನಿ ದಾರಿಯ ತೋರಿ!

ಧಾರೆಯನು ಎರೆದವನೆ, ಜೋಯಿಸನೆ, ಬಾ ಈಗ
ಕರೆ ನಿನ್ನ ಸಾಕ್ಷಿಗಳ! ಅಪರಾಧಿ ಯಾರು?
ಇದನೆಲ್ಲ ಸರಿಯೆಂದು ಹೊಗಳುವ ಸಮಾಜವೇ
ಎಲ್ಲಿ ಗೊರಕೆಯ ಹೊಡವೆ? ಬಾ ಬೇಗ ಇಲ್ಲಿ!
ಇಲ್ಲಿ ನ್ಯಾಯಾಸ್ಥಾನ! ಇಲ್ಲಿ ಧರ್ಮವ ಹೇಳು!
ಮರದ ಕರಿನೆರಳಲ್ಲಿ ಕೊರಲ ಕಣ್ಣಿಯನಪ್ಪಿ
ನೇತಾಡುತಿರುವಳೈ ಬಾಲವಿಧವೆ![೪೭]

ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿಯನ್ನು ಪ್ರೋತ್ಸಾಹ ಮಾಡಿದ ಪುರೋಹಿತಶಾಹಿ ವ್ಯವಸ್ಥೆಯು ಮಹಿಳೆಯರನ್ನು ಬಲಿ ತೆಗೆದುಕೊಂಡಿತು. ಅತಿ ಚಿಕ್ಕ ವಯಸ್ಸಿಗೆ ವಿಧವೆಯೆಂಬ ಪಟ್ಟವನ್ನು ಕಟ್ಟಿದೆ. ಜೋಯಿಸರು, ನೀತಿ ಹೇಳುವ ಪಂಡಿತರು, ಧರ್ಮಶಾಸ್ತ್ರಜ್ಞರು ಮತ್ತು ಸಮಾಜದ ಎಲ್ಲರನ್ನು ಕುವೆಂಪು ಪ್ರಶ್ನೆ ಮಾಡುತ್ತಾರೆ. ನ್ಯಾಯವೇ ಇಲ್ಲವೆ ಈ ವಿಧವೆಗೆ? ವೈದಿಕರ ಮೂಲಭೂತವಾದಿತನಗಳು ಮಹಿಳೆಯರ ಮೇಲೆ ಹೇರಿರುವ ಅನ್ಯಾಯಗಳನ್ನು ಕುವೆಂಪು ಪ್ರಶ್ನೆ ಮಾಡುವುದರ ಮೂಲಕ ಮಹಿಳೆ ಪರವಾದ ಧೋರಣೆಯನ್ನು ಕಾಣಬಹುದಾಗಿದೆ.

ಕುವೆಂಪು ಹಿಂದೂಧರ್ಮದ ಸ್ತ್ರೀ ಪುರಾಣಗಳನ್ನು ವಿರೋಧಿಸಿ ಭಿನ್ನ ನೆಲೆಯಲ್ಲಿ ನೋಡುತ್ತಾರೆ. ಹಾಗಾಗಿ ವೈದಿಕ ರಾಮಾಯಣದಲ್ಲಿ ಮಂಥರೆಗೆ ಚರಿತ್ರೆ ಇಲ್ಲ. ಆದರೆ ಕುವೆಂಪು 'ಶ್ರೀ ರಾಮಾಯಾಣ ದರ್ಶನಂ' ಕೃತಿಯಲ್ಲಿ ಇವರಿಗೆ ಚರಿತ್ರೆಯನ್ನು ಕಟ್ಟಿಕೊಡುತ್ತಾರೆ. ಹಾಗೆಯೇ ಊರ್ಮಿಳೆಗೆ ದನಿಯನ್ನು ಕೊಡುತ್ತಾರೆ. ಅತ್ಯಂತ ತಳ ಸಮುದಾಯದ ಮಹಿಳೆರಾದ ತಿಮ್ಮಿ, ಸೇಸಿ, ಪೀಂಚಲು ಪಾತ್ರಗಳನ್ನು ಪ್ರಧಾನವಾಗಿ ನಿಲ್ಲಿಸುತ್ತಾರೆ.

ವೈದಿಕ ಧರ್ಮದ ತಾತ್ವಿಕ ಚಿಂತನೆ ಪುರುಷಪ್ರಧಾನವಾದುದ್ದು. ಸ್ತ್ರೀಯರಿಗೆ ಯಾವುದೇ ಸ್ಥಾನ-ಮಾನಗಳನ್ನು ಕೊಟ್ಟಿಲ್ಲ. ವರ್ಣಾಶ್ರಮ ಧರ್ಮದಿಂದ ಜಾತಿಗಳಾಗಿ ಸಾಮಾಜಿಕವಾಗಿ ಮೇಲುಕೀಳು ಹುಟ್ಟಿತು. ಮಹಿಳೆಯನ್ನು ಕೀಳು ಭಾವನೆಯಿಂದ ನೋಡಲಾಯಿತು. ಶೂದ್ರರ ಜೊತೆಗಿಟ್ಟು ಲಿಂಗಭೇದವನ್ನು ಮಾಡಿತು. ಹಾಗಾಗಿ ಮಹಿಳೆಯರಿಗೆ ಸಾಮಾಜಿಕವಾಗಿ ಆಗುತ್ತಿರುವ ಶೋಷಣೆಯನ್ನು ಪೂರ್ಣಚಂದ್ರ ತೇಜಸ್ವಿ ಅವರು ವಿರೋಧಿಸುತ್ತಾರೆ. 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಬರುವ ಮಹಿಳಾ ಪಾತ್ರಗಳು ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡಾಯ ಮಾಡುವುದನ್ನು ಕಾಣಬಹುದು. "ಇವರ ಜಾತಿಗಳು, ಆಚಾರಗಳು, ಮದುವೆಗಳು, ಪಂಚಾಯ್ತಿಗಳು, ಪ್ರತಿಯೊಂದೂ ಹೆಂಗಸರಿಗೆ ಹಿಂಸೆ ಕೊಡುವ ಗಂಡಸರ ನೀಚ ತಂತ್ರವಾಗಿ ದಾನಮ್ಮನಿಗೆ ಕಾಣಿಸಿತು. ಇವರೆ ಏನೇನೋ ಮಾಡಿಕೊಂಡು ಅನಂತರ ಎಲ್ಲವನ್ನೂ ತಂದು ಯಾವಳಾದರೂ ಹೆಂಗಸಿನ ತಲೆಗೆ ಸುತ್ತುವ ಎಲ್ಲ ಗಂಡಸರ ಮೇಲೂ ರೇಗಿಹೋಯ್ತು. ಇದನ್ನೆಲ್ಲಾ ನೆನೆದೇ

ಕಟಕಟ ಹಲ್ಲು ಕಡಿಯುತ್ತಾ ಅವಳು ತಲೆ ಎತ್ತಿದ್ದಳು."[೬೮] ಈ ರೀತಿ ವೈದಿಕ ವ್ಯವಸ್ಥೆ ಸೃಷ್ಟಿಸಿದ ಪುರುಷ ಪ್ರಧಾನ ವ್ಯವಸ್ಥೆಯನ್ನು ದಾನಮ್ಮ ವಿರೋಧಿಸುತ್ತಾಳೆ. ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ಸ್ತ್ರೀ ಅಸಮಾನತೆಯ ಬಗ್ಗೆ ಪ್ರಶ್ನಿಸುತ್ತಾರೆ. ಪುರುಷರಷ್ಟೆ ಮಹಿಳೆಗೂ ಸಮಾನವಾದ ಸ್ಥಾನಮಾನ ಸಿಗಬೇಕು ಎಂದು ಬಯಸುತ್ತಾರೆ.

ವೈದಿಕಶಾಹಿ ಚಿಂತನೆಗಳು ಸ್ತ್ರೀಯರನ್ನು ಸಮಾಜದಲ್ಲಿ ಕೀಳಾಗಿ ನೋಡಿವೆ. ಹಿಂದೂ ಧರ್ಮ ಸಂಪ್ರದಾಯದ ಹೆಸರಿನಲ್ಲಿ ಮಹಿಳೆಯರನ್ನು ಶೋಷಣೆ ಮಾಡಿದೆ. ಇದನ್ನು ಪೂರ್ಣಚಂದ್ರ ತೇಜಸ್ವಿ ಅವರ 'ಲ್ಯಾಂಬ್ರಟಾ–ವೆಸ್ಪಾ' ಕವಿತೆಯು ಸ್ತ್ರೀಪ್ರಾತಿನಿಧ್ಯತೆಯನ್ನು ಪ್ರಕಟಿಸುವ ಕವಿತೆಯಾಗಿದೆ. ಕವಿತೆಯಲ್ಲಿ ಸ್ತ್ರೀ ಬರೀ ಸೌಂದರ್ಯ ಸಾಧನಗಳ ಜಾಹೀರಾತು ವಸ್ತು ಅಲ್ಲ; ಆಕೆಗೂ ಒಂದು ವ್ಯಕ್ತಿತ್ವವಿದೆ, ಸ್ತ್ರೀ ಗಂಡಿನಷ್ಟು ಸಮನಾಳು, ಆರ್ಥಿಕವಾಗಿ ಸಾಮಾಜಿಕವಾಗಿ ಇರುವ ಅಸಮಾನತೆಯನ್ನು ಮೀರಬೇಕೆಂದು ಕನಸು ಕಾಣವಳು.

ಗ್ರಹಗತಿಯೊಂದುವ ಬ್ರಾಹ್ಮಣರೆಲ್ಲಾ
ಸತ್ತೇ ಹೋಗಲಿ ವಿಪ್ಲವದಲ್ಲಿ
ಬಂಧು ಬಾಂಧವರಿಷ್ಟರ ಗೊಟ್ಟಿಯ
ಚಂದನ ಕಾಷ್ಠಕ್ಕೊಟ್ಟರಿ ಬೆಂಕಿಯ.
ಸುಟ್ಟೇ ಹೋಗಲಿ ಹಿಂದೂ ಧರ್ಮ
ತುಂಟ ಹುಡುಗನ ಸೊಂಟಾ ಸುತ್ತಿ
ಲ್ಯಾಂಬ್ರಟಾ, ವೆಸ್ಪಾ ಬೆನ್ನನ್ನು ಹತ್ತಿ
ಕೀಲು ಕುದುರೆ ರಾಜಕುಮಾರಿ ಒಮ್ಮೆಯಾದರೂ ಅದೇನು!
ನರಕಕ್ಕೂ ಹೋದೇನು.[೬೯]

ಹಿಂದೂಧರ್ಮ ಪ್ರಭುತ್ವದ ಮೂಲಕ ಮಹಿಳೆಯರ ಮೇಲೆ ಸ್ಥಾಪಿತವಾದ ಮೌಲ್ಯಗಳನ್ನು ವಿರೋಧಿಸಲಾಗಿದೆ. ಮಹಿಳೆಯರನ್ನು ಕೀಳಾಗಿ ನೋಡುವಂತೆ ಮಾಡಿದ ಬ್ರಾಹ್ಮಣರೆಲ್ಲ ಸತ್ತೆ ಹೋಗಲಿ ಈ ಜಗತ್ತಿನಲ್ಲಿ, ಹಿಂದೂ ಧರ್ಮವು ಸುಟ್ಟೇ ಹೋಗಲಿ ಎಂಬುದನ್ನು ಮೇಲಿನ ಪದ್ಯದಲ್ಲಿ ಕಾಣಬಹುದು.

ಶತಶತಮಾನದ ಮುಗಿಯದ ಬವಣೆಗೆ
ಯಾರುದ್ಧಾರಕೊ ನವೆನವೆದವರೆ!
ನೆಂಟರಿಷ್ಟರು ಅಪ್ಪಾ ಅಮ್ಮರ
ಸರ್ಪಾಕಾಂಕ್ಷೆಗೆ ಸೊಪ್ಪಾದವರೆ!

ತುಳಸೀ ಕಟ್ಟೆಯ ಸುತ್ತೇ ಸುತ್ತುವ
ಹೆಡ್ಡ ಜೋಯಿಸಾ! ನಿಲ್ಲಿಸು ಪ್ರವರ.

ಜಾತಕ ಜಾತಕ ನನಗಿಲ್ಲ.
ಸಾಕೋ ಸಾಕು. ಸಾಕೋ ಸಾಕು.
ಜೀವನವೆಲ್ಲಾ ನಶ್ವರವನೆನ್ನುವ
ಹಿಂದೂ ಧರ್ಮವೆ ಹೀಗಾದಾಗ
ಯಾರುಳಿದೇನು ಯಾರುಳಿದೇನು.
ಅನಿಸಿದ್ದೆಲ್ಲಾ ಆಗೇ ಬಿಡಲಿ.
ಆಟಂಬಾಂಬಿನ ಅಣುಸಮರಕ್ಕೆ
ನಾಂದಿಯಾದರೂ ನನಗೇನಿಲ್ಲ![೫೦]

ವೈದಿಕ ಪುರೋಹಿತಶಾಹಿ ಮಾಡುವ ಆಚರಣೆ ಸಂಪ್ರದಾಯಗಳಾದ ಗ್ರಹಗತಿ, ಹಿಂದೂಧರ್ಮ, ತುಳಸೀಕಟ್ಟೆ, ಜಾತಕ ಈ ಎಲ್ಲಾ ಸಮಸ್ಯೆಗಳನ್ನು ಮೀರಲು ಸ್ತ್ರೀ ಮುಂದಾಗುವುದನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಹೀಗೆ ವೈದಿಕಶಾಹಿ ಪ್ರಭುತ್ವದಲ್ಲಿ ಸಾಮಾಜಿಕ ಕಟ್ಟುಪಾಡುಗಳಿಂದ ಸ್ತ್ರೀಯರನ್ನು ಶೋಷಣೆ ಮಾಡುತ್ತಿರುವುದರಿಂದ ಬಿಡುಗಡೆಯನ್ನು ಪಡೆಯಲು ಮುಂದಾಗಿರುವುದನ್ನು ಈ ಪದ್ಯದಲ್ಲಿ ಗುರುತಿಸಬಹುದಾಗಿದೆ.

ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ಮಹಿಳೆ ಪಾತ್ರಗಳ ಚಿತ್ರಣ ವೈದಿಕ ವಿರೋಧಿ ನಿಲುವುಗಳಿಂದ ರಚಿತವಾಗಿರುವುದನ್ನು ಕಾಣಬಹುದಾಗಿದೆ. ಕುಸುಮಬಾಲೆ ಕಾದಂಬರಿಯಲ್ಲಿ ವರ್ಣ–ಸಂಕರವನ್ನು ಕಾಣಬಹುದು. ಮೇಲ್ವರ್ಗದ ಹೆಣ್ಣುಗಳು ಕೆಳವರ್ಗದ ಗಂಡುಗಳನ್ನು ಬಯಸಿ ವರ್ಣ ಸಂಕರವುಂಟಾಗುವುದನ್ನು ಮೇಲುಜಾತಿಯ ಬ್ರಾಹ್ಮಣ ಕುಲದಲ್ಲಿ ಜನಿಸಿದ ಭಗವತಿ ಅಮಾಸನೊಡನೆ ರಾತ್ರಿಯಿಡೀ ಬಿಗಿದಪ್ಪಿ ಕೊಂಡಿರುವಂತೆ ಕನಸು ಕಾಣುವುದು ಕುಸುಮಬಾಲೆ ಕಾದಂಬರಿಯಲ್ಲಿ ಕಾಣಬಹುದಾಗಿದೆ. ವೈದಿಕ ಧರ್ಮ ಸೃಷ್ಟಿಸಿದ ಜಾತಿಯಲ್ಲಿನ ಮೇಲು ಕೀಳನ್ನು ದೇವನೂರ ಮಹಾದೇವ ಅವರು ವಿರೋಧಿಸಿ ವರ್ಣಸಂಕರಕ್ಕೆ ಮುಂದಾಗುವುದನ್ನು ಗಮನಿಸಬಹುದಾಗಿದೆ. ಇದು ವೈದಿಕವಿರೋಧಿ ಚಿಂತನೆಯಾಗಿದೆ.

ಒಟ್ಟಿನಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಅವರು ಮಹಿಳೆಯನ್ನು ಪುರುಷರಷ್ಟೇ ಸಮಾನಗಳು ಎಂಬ ಭಾವನೆಯಿಂದ ನೋಡಲಾಗಿದೆ. ಶತಶತಮಾನಗಳಿಂದ ಮಹಿಳೆಯನ್ನು ಶೂದ್ರರಷ್ಟೇ ಸಮಾನವಾಗಿ ಕಾಣುತ್ತಾ ಬಂದಿರುವ ವೈದಿಕ ಯಾಜಮಾನ್ಯವನ್ನು ಲೇಖಕರು ವಿರೋಧಿಸಿದ್ದಾರೆ. ಕುವೆಂಪು ಅವರು ವೈದಿಕ ಪುರಾಣಗಳು ಸೃಷ್ಟಿಸಿರುವ ಮಹಿಳೆ

ಪಾತ್ರಗಳನ್ನು ಭಿನ್ನವಾಗಿ ಚಿತ್ರಿಸುತ್ತಾರೆ. ಮಹಿಳೆ ಪಾತ್ರಗಳಿಗೆ ಇರುವ ಕಳಂಕವನ್ನು ತೆಗೆದುಹಾಕುತ್ತಾರೆ. ಪೂರ್ಣಚಂದ್ರ ತೇಜಸ್ವಿ ಅವರು ಸಾಮಾಜಿಕವಾಗಿ ಸ್ತ್ರೀಯರಿಗೆ ಕಿತ್ತುಕೊಂಡಿರುವ ಹಕ್ಕುಗಳ ಬಗ್ಗೆ ಮಾತನಾಡುತ್ತಾರೆ. ದೇವನೂರ ಮಹಾದೇವ ಅವರು ಮೇಲು-ಕೀಳು ಎಂಬ ಭಾವನೆಯಿಂದ ಮಹಿಳೆಯನ್ನು ಶೋಷಣೆ ಮಾಡುತ್ತಿರುವ ಮೇಲುವರ್ಗದ ತಾತ್ವಿಕ ಚಿಂತನೆಗಳನ್ನು ವಿರೋಧಿಸುತ್ತಾರೆ.

೬.೩. ಆರ್ಥಿಕ ಪ್ರಭುತ್ವ

ಆರ್ಥಿಕತೆ, ಸಮಾಜ ಮತ್ತು ಪ್ರಭುತ್ವವು ಒಂದಕ್ಕೊಂದು ಸಂಬಂಧವನ್ನು ಹೊಂದಿವೆ. ಸಮಾಜದ ಜನಜೀವನ ಆರ್ಥಿಕತೆಯಿಂದ ಪ್ರಭಾವಿತಗೊಂಡಿದೆ. ಹಾಗೆ ಸಾಮಾಜಿಕ ಸಂಬಂಧಗಳಿಂದ ಆರ್ಥಿಕ ವ್ಯವಸ್ಥೆಯು ನಿಂತಿದೆ. ಪ್ರಭುತ್ವವು ಆರ್ಥಿಕತೆಯನ್ನು ನಿಯಂತ್ರಿಸುತ್ತದೆ. ಹಾಗಾಗಿ ವೈದಿಕರು ಆರ್ಥಿಕ ಪ್ರಭುತ್ವವನ್ನು ಓಲೈಸುತ್ತಾರೆ. ಸಾಮಾಜಿಕವಾಗಿ ಪುರೋಹಿತಶಾಹಿ ಸಮಾಜದಲ್ಲಿ ವರ್ಣಶ್ರೇಣಿಯಿಂದ ಮೇಲುಕೀಳೆಂಬ ಜಾತಿಯನ್ನು ಸೃಷ್ಟಿಸಿದ್ದರಿಂದ ಹಣಕಾಸು, ಒಡೆತನ, ಆಸ್ತಿಯ ಆಧಾರದಿಂದ ಮೇಲುವರ್ಗ ಮತ್ತು ಕೆಳವರ್ಗಗಳು ಸೃಷ್ಟಿಯಾದವು. ಹಾಗಾಗಿ ಸಮಾಜದಲ್ಲಿ ಆರ್ಥಿಕ ಪ್ರಭುತ್ವದಿಂದ ಅಸಮಾನತೆ ಹುಟ್ಟಿಕೊಂಡಿತು. ಕೆಳವರ್ಗದ ಜನರಿಂದ ಆರ್ಥಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಕೆಳವರ್ಗದವರು ಮೇಲುವರ್ಗದವರ ಸೇವೆಯನ್ನು ಮಾಡುವುದರಿಂದ ಆರ್ಥಿಕವಾಗಿ ಮೇಲುವರ್ಗದವರನ್ನೇ ಅವಲಂಬಿಸಿದ್ದರು. ಆದ್ದರಿಂದ ಗುಲಾಮಗಿರಿ, ಜೀತದಾಳು ಪದ್ಧತಿ, ಜಮೀನ್ದಾರಿ ಪದ್ಧತಿಗಳು ಹುಟ್ಟಿಕೊಂಡವು. ಈ ಅನಿಷ್ಟಪದ್ಧತಿಗಳ ಹುಟ್ಟಿಗೆ ವೈದಿಕ ಧರ್ಮದಲ್ಲಿ ಇದ್ದ ಮೂಲಭೂತವಾದವೇ ಕಾರಣವಾಗಿದೆ.

ಪ್ರಾಚೀನ ಕಾಲದಿಂದಲೂ ಬ್ರಾಹ್ಮಣರಿಗೆ ಅರಸರು ದಾನ ಕೊಡುವ ಪದ್ಧತಿಯನ್ನು ಪಾಲಿಸಿಕೊಂಡು ಬಂದಿರುವುದನ್ನು ಕಾಣಹುದಾಗಿದೆ. ರಾಜಪ್ರಭುತ್ವವು ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಧಾರ್ಮಿಕ ಪ್ರಭುತ್ವವನ್ನು ಆರ್ಥಿಕವಾಗಿ ಓಲೈಸುವ ಕೆಲಸವನ್ನು ಮಾಡಲಾಯಿತು. ಈ ರೀತಿಯ ಆರ್ಥಿಕ ವ್ಯವಸ್ಥೆಯಿಂದ ಧಾರ್ಮಿಕ ಪ್ರಭುತ್ವ ಇನ್ನಷ್ಟು ಗಟ್ಟಿಯಾಯಿತು. ದಾನದ ವಿಚಾರದಲ್ಲಿ ವೈದಿಕರು ಸೃಷ್ಟಸಿದ ವರ್ಣಾಶ್ರಮ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಹೀಗಾಗಿ ಬಹುಪಾಲು ಮೇಲುವರ್ಗದ ಬ್ರಾಹ್ಮಣರು ಮತ್ತು ವೈದಿಕ ದೇವಾಲಯಗಳು ಆರ್ಥಿಕವಾಗಿ ಬಲಿಷ್ಠವಾದವು. ಸಮಾಜದಲ್ಲಿ ಶ್ರಮಜೀವಿಗಳು ದುಡಿದ ಸಂಪತ್ತನ್ನು ಮಧ್ಯವರ್ತಿಗಳ ಮೂಲಕ ಅರಸನಿಗೆ ನೀಡಲಾಗುತಿತ್ತು. ಈ ರೀತಿ ಕ್ರೋಢೀಕರಿಸಿದ ಸಂಪತ್ತು ವೈದಿಕರ ದೇವಾಲಯಗಳಿಗೆ ಮತ್ತು ಬ್ರಾಹ್ಮಣರಿಗೆ ದಾನದ ರೂಪದಲ್ಲಿ ಕೊಡಲಾಗುತ್ತಿತ್ತು. ಹೀಗೆ ದಾನ ಕೊಡುವ ಪದ್ಧತಿ ಆರ್ಥಿಕ ಚಟುವಟಿಕೆಯಾಗಿದ್ದರೂ ಇದನ್ನು ಧಾರ್ಮಿಕ ಆಚರಣೆಯಾಗಿ ಮಾಡಲಾಗಿತ್ತು. ದಾನವಾಗಿ ಬಂದ ಆರ್ಥಿಕ ಸಂಪತ್ತನ್ನು ಬ್ರಾಹ್ಮಣರು ಮಠ ಮತ್ತು ದೇವಸ್ಥಾನಗಳನ್ನು ಕಟ್ಟಲು ಉಪಯೋಗಿಸಿದರು. ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿ ನೀಡಿದ್ದರಿಂದ ಹೊಸ ಭೂಮಾಲೀಕರ ಸೃಷ್ಟಿಗೆ ಕಾರಣವಾಯಿತು. ಇದರಿಂದ ಜೀತದಾಳು ಪದ್ಧತಿ ಮತ್ತು ಗುಲಾಮಗಿರಿ ಪದ್ಧತಿಗಳು ಹುಟ್ಟಿಗೆ ಕಾರಣವಾಯಿತು.

ಬ್ರಾಹ್ಮಣರಿಂದ ಉದಯವಾದ ಪುರೋಹಿತಶಾಹಿ ಯಜ್ಞ ಯಾಗಗಳನ್ನು ಮಾಡಿ ರಾಜ ಮಹಾರಾಜರುಗಳು, ಶ್ರೀಮಂತರನ್ನು ಹೆಮ್ಮೆ ಪಡಿಸುತಿದ್ದರು. ಹಾಗಾಗಿ ಇವರು ಪುರೋಹಿತರಿಗೆ ಭಾರಿ ಬೆಲೆ ಬಾಳುವ ಉಡುಗೊರೆಗಳನ್ನು ಕೊಟ್ಟರು. ಈ ಸಂಪತ್ತಿನ ಮೇಲೆ ಆಸೆಪಟ್ಟು ಪುರೋಹಿತಶಾಹಿ ಸರಳ ಯಜ್ಞ-ಯಾಗ ಆಚರಣೆಗಳನ್ನು ಸಂಕೀರ್ಣ ವ್ಯವಸ್ಥೆಯ ಆಚರಣೆಗಳಾಗಿ ಮಾಡಿದರು. ಹಾಗಾಗಿ ಅರಸರು ದಾನ ದಕ್ಷಿಣೆಗಳು, ಅಮೂಲ್ಯ ಉಡುಗೊರೆಗಳನ್ನು ನೀಡಿದರು. ಹೀಗಾಗಿ ಪುರೋಹಿತರು ಯಜ್ಞಗಳನ್ನು ನಡೆಸಿ ತಮ್ಮ ಸ್ಥಾನ ಮಾನ ಸಂಪತ್ತುಗಳನ್ನು ಹೆಚ್ಚಿಸಿಕೊಂಡರು. ಅಲ್ಲದೇ ಬಹು ಬೇಗ ಶ್ರೀಮಂತರಾದರು. "ಹೀಗೆ ಪೌರೋಹಿತ್ಯ ಆ ಕಾಲದ ಅತ್ಯಂತ ಲಾಭದಾಯಕ ವೃತ್ತಿಯಾಯಿತು: ಪುರೋಹಿತರು ಪ್ರತ್ಯೇಕ ವರ್ಗವಾಗಿ ರೂಪುಗೊಳ್ಳುವುದು ಅಸಹಜವಾಗಲಿಲ್ಲ. ಬಂದ ಲಾಭವನ್ನು ಆದಷ್ಟುಮಟ್ಟಿಗೆ ತಮ್ಮ ಕುಟುಂಬಗಳಿಗೆ ಮಾತ್ರವೇ ಇಟ್ಟುಕೊಳ್ಳಲು ಮನಸ್ಸು ಮಾಡಿದರು; ತಂದೆಯ ವೃತ್ತಿಯನ್ನು ಮಗ ಅನುಸರಿಸುವುದು ವಾಡಿಕೆಯಾಯಿತು. ಹಾಗಾಗಿ ವಂಶ ಪಾರಂಪರ್ಯವಾದ ಪುರೋಹಿತವರ್ಗ ಅಸ್ತಿತ್ವಕ್ಕೆ ಬಂದಿತು. ಶಾಂತಿ ಮತ್ತು ಭೋಗದ ಕಾಲದಲ್ಲಿ. ಧನಿಕರ ಶಕ್ತಿಯನ್ನು ಯುದ್ಧದಲ್ಲಿ ತೊಡಗಿಸದೆ ಇದ್ದ ಸಮಯದಲ್ಲಿ ಐಶ್ವರ್ಯ ಅಟ್ಟಹಾಸವನ್ನೂ ಪೌರೋಹಿತ್ಯ ಕೌಶಲ್ಯವನ್ನೂ ಪ್ರದರ್ಶಿಸುವ ಸಲುವಾಗಿ ಯಜ್ಞಗಳು ಸಾಮಾಜಿಕ ಉತ್ಸವಗಳ ಮಟ್ಟಕ್ಕೆ ಇಳಿದವು;"[೫೧] ಹೀಗೆ ವೈದಿಕರು ಯಾವುದೇ ಶ್ರಮ ಕೆಲಸವನ್ನು ಮಾಡದೆ ಅನ್ಯಾಯವಾಗಿ ಸಂಪತ್ತನ್ನು ಸಂಗ್ರಹಿಸಿದರು. ತಮ್ಮ ಅನುಕೂಲಕ್ಕೆ ತಕ್ಕಂತೆ ಯಾವ ಎಗ್ಗೂ ಇಲ್ಲದೆ ಸಮಾಜದಲ್ಲಿ ಆರ್ಥಿಕ ಸುಲಿಗೆ ಮಾಡಲು ಪ್ರಾರಂಭಿಸಿದರು. ಇದರಿಂದ ಪ್ರಭುತ್ವದಲ್ಲಿ ಆರ್ಥಿಕವಾಗಿ ಹೆಚ್ಚು ಶಕ್ತಿಯನ್ನು ಪಡೆದುಕೊಂಡು ಸಾಮಾಜಿಕ ಕಾನೂನುಗಳನ್ನು ಮಾಡಿದರು. ಮನುಧರ್ಮ ಶಾಸ್ತ್ರವನ್ನು ರಚಿಸಿತು, ಕಸುಬುಗಳನ್ನಾಧರಿಸಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವರ್ಣಗಳಾಗಿ ವಿಂಗಡಿಸಿತು. ಈ ಒಂದೊಂದು ವರ್ಣದವರಿಗೆ ತನ್ನದೇ ಕಸುಬನ್ನು ನಿಗದಿಪಡಿಸಿತು. ತನ್ನ ಕಸುಬನ್ನು ಬಿಟ್ಟು ಬೇರೆ ಕಸುಬನ್ನು ಮಾಡಿದರೆ ಶಿಕ್ಷಾರ್ಹ ಅಪರಾಧವೆಂದು ಪರಿಗಣನೆ ಮಾಡಿತು. ವರ್ಣಭೇದದಿಂದ ಹುಟ್ಟಿಕೊಂಡ ಜಾತಿಪದ್ಧತಿಯು ಆಸ್ತಿಯ ಹಂಚಿಕೆಯಲ್ಲಿ ಮುಖ್ಯವಾಯಿತು. ಹಾಗಾಗಿ ಹೆಚ್ಚು ಸಂಪತ್ತು ಹೊಂದಿದ ಬ್ರಾಹ್ಮಣರು ಸಾಮಾಜಿಕ ಆರ್ಥಿಕ ಹಿಡಿತವನ್ನು ಸಾಧಿಸಿದರು. ಹಾಗಾಗಿ ವೈದಿಕರು ಅನ್ಯಾಯದಿಂದ ಸಂಗ್ರಹಿಸಿದ ಸಂಪತ್ತನ್ನು ಪ್ರಾಚೀನ ಕಾಲದಿಂದಲೂ ವಿರೋಧಿಸುತ್ತಾ ಬರಲಾಗಿದೆ. ಆಧುನಿಕ ಸಂದರ್ಭದಲ್ಲಿ ದೇವರು, ದೇವಸ್ಥಾನ ಮತ್ತು ಪೂಜೆ ಯಜ್ಞಯಾಗಾದಿಗಳ ಮೂಲಕ ಜನಸಾಮಾನ್ಯರನ್ನು ವಂಚಿಸಿ ಪುರೋಹಿತಶಾಹಿ ಹಣವನ್ನು ಸಂಗ್ರಹಿಸಿ ಆರ್ಥಿಕವಾಗಿ ಬಲಿಷ್ಠವಾಗಿರುವುದನ್ನು ಆಧುನಿಕ ಲೇಖಕರಾದ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ವೈದಿಕರನ್ನು ವಿರೋಧಿಸುತ್ತಾರೆ.

ಪುರೋಹಿತಶಾಹಿ ದೇವರ ಹೆಸರಿನಲ್ಲಿ ಕೆಳವರ್ಗದ ಜನರನ್ನು ವಂಚಿಸಿ ಸಂಪತ್ತನ್ನು ಸಂಗ್ರಹಿಸಿಕೊಂಡಿದೆ. ಯಾವುದೇ ಶ್ರಮ ಕೆಲಸವನ್ನು ಮಾಡದೆ ವಂಚನೆಯ ಮಾತುಗಾರಿಕೆಯಿಂದ ಹಣವನ್ನು ಸಂಗ್ರಹಿಸುವುದನ್ನು 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಬರುವ ಅಗ್ರಹಾರದ

ಜೋಯಿಸರು ಚಂದ್ರಯ್ಯಗೌಡರನ್ನು ಧಾರ್ಮಿಕ ಭಯ-ಭಕ್ತಿಗಳಿಂದ ಹೆದರಿಸಿ ಹಣವನ್ನು ಸಂಗ್ರಹಿಸುತ್ತಿರುವ ಬಗ್ಗೆ ಕುವೆಂಪು ಕಾದಂಬರಿಯಲ್ಲಿ ಹೀಗೆ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. "ಚಂದ್ರಯ್ಯ, ಆ ಸತ್ಯನಾರಾಯಣ ವ್ರತಕ್ಕೆ ಇಪ್ಪತ್ತು ರೂಪಾಯಿ ಖರ್ಚಾಗಿದೆ. ಅದನ್ನು ಕೊಟ್ಟಿದ್ದರೆ ಆಗುತ್ತಿತ್ತು. ಜೋಯಿಸರ ವಾಣಿ ಯಾವುದೋ ಒಂದು ಮಹಾಬುದ್ಧಿವಾದವನ್ನು ಬೋಧಿಸುವಂತಿತ್ತು. ರೂಪಾಯಿ ಕೊಡುವುದರಿಂದ ಸಾಹುಕಾರರಿಗೆ ಅಪಾರ ಶ್ರೇಯಸ್ಸು ಲಭಿಸುತ್ತದೆ ಎನ್ನುವಂತಿತ್ತು.

ಗೌಡರು ಒಂದು ಸಾರಿ ಕೆಮ್ಮಿ, ಗಂಟಲು ಸರಿಮಾಡಿಕೊಂಡು "ಅವತ್ತು ಮೂವತ್ತು ಕೊಟ್ಟಿದ್ದೆನಲ್ಲಾ, ಅದರಲ್ಲೇ ಮುರುಕೊಂಡುಬಿಡಿ. ನಿಮ್ಮ ಲೆಕ್ಕಕ್ಕೆ ಹತ್ತು ರೂಪಾಯಿ ಮಾತ್ರ ಖರ್ಚು ಬರೆದುಕೊಳ್ತೀನಿ" ಎಂದು ಜೋಯಿಸರ ಕಡೆ ಪ್ರಶ್ನಪೂರ್ವಕವಾಗಿ ನೋಡಿದರು.

ಜೋಯಿಸರು ಬಹಳ ಗಾಂಭೀರ್ಯದಿಂದಲೂ ಧಾರ್ಮಿಕತೆಯಿಂದಲೂ "ದೇವರ ಲೆಖ್ಖವನ್ನು ನನ್ನ ಲೆಕ್ಕಕ್ಕೆ ಯಾಕೆ ಸೇರಿಸುವುದು? ಹಾಗೆ ಮಾಡುವುದರಲ್ಲಿ ನಿನಗೂ ಅನಿಷ್ಟವಿದೆ. ಖಾತೆ ಬೇರೆ ಬೇರೆಯಾಗಿದ್ದರೆ ವಾಸಿ..." ಎಂದು ಕಣ್ಣು ಮುಚ್ಚಿ ತೆರೆದರು."[೫೨] ಹೀಗೆ ಪುರೋಹಿತಶಾಹಿ ಸತ್ಯನಾರಾಯಣ ವ್ರತ, ಪೂಜೆ, ಹೋಮ ಎಂದು ಹಣವನ್ನು ಸಂಗ್ರಹಿಸಿ ಆರ್ಥಿಕ ಪ್ರಭುತ್ವವನ್ನು ಪಡೆದುಕೊಂಡಿರುವುದನ್ನು ಕುವೆಂಪು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಒಂದು ಕಡೆ ಆರ್ಥಿಕ ಸಂಗತಿ ಮತ್ತೊಂದು ಕಡೆ ಸಾಮಾಜಿಕ ಸಂಗತಿ. ಈ ಎರಡನ್ನೂ ಕಾದಂಬರಿಯ ಈ ಭಾಗ ಒಟ್ಟೊಟ್ಟಿಗೇ ಕಟ್ಟಿಕೊಡುತ್ತಿದೆ. ಊಳಿಗಮಾನ್ಯಶಾಹಿ ಪ್ರಭುತ್ವವು ಆರ್ಥಿಕ ಪ್ರಭುತ್ವದೊಂದಿಗೂ; ಆರ್ಥಿಕ ಪ್ರಭುತ್ವವು ಊಳಿಗಮಾನ್ಯಶಾಹಿ ಪ್ರಭುತ್ವದೊಂದಿಗೂ ಬೆರೆತು ಈ ಎರಡೂ ನೆಲೆಯ ಅಸಮಾನತೆಗಳನ್ನು ಹೇಗೆ ಮುಂದುವರಿಸುತ್ತಿದೆ, ಹೇಗೆ ಅವನ್ನು ಕಾಯ್ದುಕೊಂಡಿದೆ ಎಂಬುದನ್ನು ಇದು ತೋರಿಸುತ್ತಿದೆ. ಈ ಮೂಲಕ ಕಾದಂಬರಿಯ ಈ ಭಾಗವು ವೈದಿಕ ವಿರೋಧಿ ಪ್ರಜ್ಞೆಯನ್ನು ಪ್ರಕಟಪಡಿಸುತ್ತಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಕಲ್ಲೂರು ಸಾಹುಕಾರ ಮಂಜಭಟ್ಟರು ಕೂಡ ಪೂಜಾರಿಯಾಗಿ ಬಂದವರು ನಂತರ ಆರ್ಥಿಕವಾಗಿ ಶ್ರೀಮಂತರಾಗಿ ಬೆಳೆದಿರುವುದನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕಾಣಬಹುದು. ಬ್ರಾಹ್ಮಣರು ಒಡೆಯರಾಗಿದ್ದ ಕಡೆ ಅವರ ಬ್ರಾಹ್ಮಣಿಕೆ, ವೈದಿಕತನಗಳು ಹೇಗೆ ಕೆಲಸ ಮಾಡುತ್ತಿದ್ದವು ಎಂಬುದನ್ನು ಕುವೆಂಪು ಅವರ ಕಾದಂಬರಿಗಳು ಸೂಕ್ಷ್ಮವಾಗಿ ತೆರೆದಿಟ್ಟಿವೆ. "ಕಲ್ಲೂರು ಸಾಹುಕಾರ ಮಂಜಭಟ್ಟರಂತಹ ಬುದ್ಧಿವಂತ ಬ್ರಾಹ್ಮಣರು ಜಮೀನನ್ನು ಲಪಟಾಯಿಸಿಕೊಳ್ಳುವುದಕ್ಕೆ ಒಂದು ನೆವವಾದರೂ ಇರಲಿ ಎಂದೇ ಮಂದಬುದ್ಧಿಯ ಗೌಡರು ನಾಯಕರು ಹೆಗ್ಗಡೆಗಳಿಗೆ ಸಾಲ ಕೊಡುತ್ತಿದ್ದರು. ಹಾಗಲ್ಲದಿದ್ದಲ್ಲಿ, ಕಲ್ಲೂರು ದೇವಸ್ಥಾನಕ್ಕೆ ಪೂಜಾರಿಯಾಗಿ ಕನ್ನಡ ಜಿಲ್ಲೆಯಿಂದ ಬಂದಾತನು ಕೆಲವು ವರ್ಷದಲ್ಲಿಯೆ ನಾಡಿನಲ್ಲೆಲ್ಲಾ ದೊಡ್ಡ ಜಮೀನುದಾರನೂ, ಶ್ರೀಮಂತನೂ ಎಂದು ಹೆಸರು ಪಡೆಯಲು ಹೇಗೆ ಸಾಧ್ಯವಾಗುತ್ತಿತ್ತು? ತೊಟ್ಟ ಜನಿವಾರ, ಉಟ್ಟ ಪಾಣಿಪಂಚೆ, ಬಹುಶಃ ಕೈಲೊಂದು ಪಂಚಪಾತ್ರೆ– ಇಷ್ಟೇ ಆಸ್ತಿಯಾಗಿ ಬಂದಿದ್ದ ಬಡ ಹಾರುವನು ಈಗ ದೊಡ್ಡ ಚೌಕಿಮನೆಯ ಯಜಮಾನನಾಗಿ

ದರ್ಬಾರು ನಡೆಸಲು ಹೇಗೆ ಸಾಧ್ಯವಾಗುತಿತ್ತು? ಗೌಡ ಹೆಗ್ಗಡೆ ನಾಯಕರುಗಳ ಮನೆಮನೆಗೆ ಅಲೆದು, ದೇಶಾವರ ನಡೆಸಿ, ಸಂಭಾವನೆ ಬೇಡಿ ಅಡಕೆ ಅಕ್ಕಿ ಕಾಯಿಪಲ್ಯಗಳನ್ನು ಒಟ್ಟುಮಾಡಿ ಜೀವನಯಾಪನೆ ಮಾಡುತ್ತಿದ್ದವನು ಈಗ ಗೌಡ ಹೆಗ್ಗಡೆ ನಾಯಕರುಗಳನ್ನೆಲ್ಲ ತನ್ನ ಮನೆಯ ಅಂಗಳದ ಕೆಳಜಗಲಿಯಲ್ಲಿ ನಿಲ್ಲಿಸಿಯೊ ನೆಲದಮೇಲೆ ಕೂರಿಸಿಯೊ ಅಥವಾ ಹೆಚ್ಚು ಎಂದರೆ ಚಾಪೆಯ ದಾಕ್ಷಿಣ್ಯಕ್ಕೆ ಏರಿಸಿಯೊ ಆಜ್ಞೆ ಮಾಡಿ, ತಪ್ಪಿದರೆ ಶಿಕ್ಷೆ ವಿಧಿಸುತ್ತೇನೆ ಎಂದು ಗರ್ಜಿಸಲು ಹೇಗೆ ಸಾಧ್ಯವಾಗುತ್ತಿತ್ತು? ಮೊದಮೊದಲು 'ಏನು ವೆಂಕಟಪ್ಪನಾಯಕರೆ?' ಎಂದು ಸಂಬೋಧಿಸುತ್ತಿದ್ದವನು ಬರಬರುತ್ತಾ 'ಏನು ವೆಂಕಟಣ್ಣ?' ಎಂದು ಸಲಿಗೆಯಿಂದ ಕರೆಯುವಂತಾಗಿ ಈಗ 'ಏನು ಬಂದೆಯೊ, ಎಂಕ್ಟ?' ಎಂದು ಪ್ರಶ್ನಿಸಲು ಹೇಗೆ ಸಾಧ್ಯವಾಗುತ್ತಿತ್ತು?"[೫೩] ಹೀಗೆ ಪುರೋಹಿತಶಾಹಿ ಕೆಳವರ್ಗದ ಜನರನ್ನು ವಂಚಿಸಿ ಸಾಲವನ್ನು ಕೊಡುವುದು ಮತ್ತು ಸಾಲವನ್ನು ವಸೂಲಿ ಮಾಡುವಷ್ಟು ಆರ್ಥಿಕ ಪ್ರಭುತ್ವವನ್ನು ಸಮಾಜದಲ್ಲಿ ಪಡೆದುಕೊಂಡಿದ್ದರು. ಬ್ರಾಹ್ಮಣರು ಶೂದ್ರರ ಜಮೀನುಗಳನ್ನು ಲಪಟಾಯಿಸಲು ನಡೆಸುತ್ತಿದ್ದ ಕುತಂತ್ರಗಳನ್ನು ಇದು ನಮಗೆ ತೋರಿಸುತ್ತಿದೆ. ಈ ಮೂಲಕ ಇದು ವೈದಿಕ ವಿರೋಧಿ ನೆಲೆಗಳನ್ನು ಅನಾವರಣ ಮಾಡುತ್ತಿದೆ. ಜೊತೆಗೆ ಇದರ ಆರ್ಥಿಕ ಪ್ರಭುತ್ವದ ಶೋಷಣೆಯ ಮುಖಗಳನ್ನೂ ಅನಾವರಣ ಮಾಡುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಕಲ್ಲೂರು ದೇವಸ್ಥಾನಕ್ಕೆ ಪೂಜೆ ಮಾಡಲೆಂದು ಬಂದ ಮಂಜಭಟ್ಟರು, ಸ್ಥಳೀಯ ಒಕ್ಕಲಿಗರಿಗೆ ಸಾಲ ಕೊಟ್ಟು, ಇವರಿಂದ ಸಾಲ ವಸೂಲಿ ಮಾಡಿಕೊಳ್ಳುವ ನೆಪದಲ್ಲಿ ಇವರನ್ನು ಸಾಲದಲ್ಲಿ ಇರಿಸಿ, ಆ ಸಾಲ ತೀರಿಸುವ ಭಾಗವಾಗಿ ಈ ಒಕ್ಕಲಿಗರ ಜಮೀನುಗಳನ್ನೇ ಲಪಟಾಯಿಸುತ್ತಿದ್ದ ಚಾರಿತ್ರಿಕ ಸಂದರ್ಭವನ್ನು ಕಾದಂಬರಿಯ ಈ ಭಾಗವು ನಮಗೆ ತೋರಿಸುತ್ತಿದೆ. ಅಂದರೆ ಊಳಿಗಮಾನ್ಯಶಾಹಿಯ ಜಮೀನುದಾರಿಕೆಯೂ; ವೈದಿಕಶಾಹಿಯ ಬ್ರಾಹ್ಮಣಿಕೆಯೂ ಒಂದಾಗಿ ಶೂದ್ರರನ್ನು ಶೋಷಣೆ ಮಾಡುತ್ತಿದ್ದ ಸಾಮಾಜಿಕ ಪರಿಸ್ಥಿತಿಯೊಂದರ ಬಗೆಗೆ ಮೇಲಿನ ಉಲ್ಲೇಖವು ಬೆಳಕು ಚೆಲ್ಲುತ್ತಿದೆ. ಹಾಗಾಗಿ ಸಮಾಜದಲ್ಲಿ ಆರ್ಥಿಕವಾಗಿ ಅಸಮಾನತೆ ಹುಟ್ಟುವುದಕ್ಕೆ ಕಾರಣವಾಗದ ಬ್ರಾಹ್ಮಣಶಾಹಿಯನ್ನು ಕುವೆಂಪು ವಿರೋಧಿಸುತ್ತಾರೆ.

ವೈದಿಕರು ಸೃಷ್ಟಿಸಿದ ದೇವಾಲಯಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳಾಗಿವೆ. ಈ ದೇವಾಲಯಲ್ಲಿ ಇರುವ ದೇವರನ್ನು ಪ್ರತಿಷ್ಠಾಪಿಸಿ ಜನಸಾಮಾನ್ಯರನ್ನು ದೇವಾಲಯಗಳಿಗೆ ಸೇಳೆಯುವ ಕೆಲಸವನ್ನು ಪುರೋಹಿತಶಾಹಿ ಮಾಡಿದೆ. ಭಯ ಭಕ್ತಿ, ಮೂಡನಂಭಿಕೆ, ಆಚರಣೆಗಳು, ಯಜ್ಞ ಪೂಜೆ, ಹೆಸರಿನಲ್ಲಿ ಕೋಟಿ ಕೋಟಿ ಹಣವನ್ನು ಸುಲಿಗೆ ಮಾಡಲಾಗುತ್ತಿದೆ ಎಂಬುದನ್ನು ಕುವೆಂಪು ಅವರು ಈ ರೀತಿ ಧ್ವನಿಸುತ್ತಾರೆ. "ಈ ದೇವರು ಧರ್ಮಗಳ ಹೆಸರಿನಲ್ಲಿ ಸಾಲ ಮಾಡಿಯಾದರೂ ತಿರುಪತಿ ವೆಂಕಟರಮಣನ ಕಿರೀಟಕ್ಕೆ ಎರಡು ಕೋಟಿ ರೂಪಾಯಿಗಳದ್ದೇನೊ ವಜ್ರದ ಕಿರೀಟ ಮಾಡಿಸಿದ್ದಾರಂತೆ. ಎಂತಹ ಹುಡುಗರಿಗೂ ಕೂಡ ಗೊತ್ತಾಗುತ್ತದೆ ಏಕೆ ಆ ಕಿರೀಟಕ್ಕೆ ಅಷ್ಟು ಕೋಟಿ ರೂಪಾಯಿ? ಅದರ ಬದಲು ಸುತ್ತಮುತ್ತ ಇದ್ದ ಹಳ್ಳಿಗಳಲ್ಲಿ ಬಾವಿಗಳನ್ನು ತೋಡಿಸಬಾರದಿತ್ತೇಕೆ? ಈ ದೇವರು, ಧರ್ಮ ದಾನದ ಹೆಸರಿನಲ್ಲಿ ವರಮಾನ ತೆರಿಗೆ ಕೊಡಲು

ಕದಿಯುವ ಜನ ತಪ್ಪಿಸಿಕೊಳ್ಳುತ್ತಾರೆ ಎಂದು ಹೇಳತ್ತಾರೆ. ಆದರೆ ಇದಕ್ಕೆ ಮಾತ್ರ ಬೇಕಾದಷ್ಟು ಹಣವಿರುತ್ತದೆ. ತಿರುಪತಿ ದೇವಸ್ಥಾನದೊಳಗೆ ಒಂದು ಲಕ್ಷ ರೂಪಾಯಿಯನ್ನು ಯಾರೋ ಕಾಣಿಕೆ ಹಾಕಿದ್ದರು ಎಂದು ಕೇಳುತ್ತಿರುತ್ತೇವೆ. ಹೀಗೆ ಈ ತರಹದ ನಂಬಿಕೆಗಳು ಈ ದೇವರು, ಧರ್ಮ, ಮತ ಅನ್ನುವ ನಂಬಿಕೆಗಳನ್ನೂ, ಮೌಲ್ಯಗಳು ಇವೆಯಲ್ಲಾ ಅವುಗಳನ್ನೂ, ಪ್ರಶ್ನಿಸುವ ಮನೋಧರ್ಮವನ್ನೂ, ಒಂದು ವಿಚಾರದೃಷ್ಟಿಯನ್ನೂ ನಾವು ನಮ್ಮ ಹುಡುಗರಿಗೆಲ್ಲಾ ತಂದು ಕೊಡಬೇಕಾಗುತ್ತದೆ."[೫೪] ಹಾಗಾಗಿ ಪುರೋಹಿತಶಾಹಿ ಅಕ್ರಮದಿಂದ ಸಂಪಾದಿಸುತ್ತಿರುವ ಆರ್ಥಿಕ ಸಂಪತ್ತಿನ ಬಗ್ಗೆ ಪ್ರಶ್ನಿಸಬೇಕು. ದೇವರು, ಧರ್ಮ, ಮತದ ಹೆಸರಿನಲ್ಲಿ ಆರ್ಥಿಕ ಪ್ರಭುತ್ವವನ್ನು ಸ್ಥಾಪಿಸುತ್ತಿರುವ ಪುರೋಹಿತಶಾಹಿಯನ್ನು ಕುವೆಂಪು ವಿರೋಧಿಸುತ್ತಾರೆ. ವೈದಿಕ ಪ್ರಜ್ಞೆಗೆ ಒಳಗಾದ ಮಲೆನಾಡಿನ ಗೌಡರು ಜಮೀನ್ದಾರಿ ಪದ್ಧತಿ, ಲೇವಾದೇವಿ ಪದ್ಧತಿ, ಜೀತದಾಳು ಪದ್ಧತಿಗಳನ್ನು ಜಾರಿಗೆ ತಂದು ಕೆಳವರ್ಗದ ಜನರನ್ನು ಶೋಷಣೆ ಮಾಡುವುದನ್ನು ಕುವೆಂಪು 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳಲ್ಲಿ ಮತ್ತು ಕಥೆಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಪೂರ್ಣಚಂದ್ರ ತೇಜಸ್ವಿ ಅವರ ಅಬಚೂರಿನ ಪೋಸ್ಟಾಫೀಸು ಕಥಾಸಂಕಲನದಲ್ಲಿ ಇರುವ 'ಅವನತಿ' ಕತೆಯಲ್ಲಿ "ಈಶ್ವರ ದೇವಸ್ಥಾನ ಕಟ್ಟುವ ಕಾರ್ಯಕ್ರಮ ರದ್ದಾಗಿಹೋಯ್ತು. ಏಕೆಂದರೆ ಅದಕ್ಕಾಗಿ ಶೇಖರಿಸಿದ ಹಣವನ್ನು ಅಲ್ಲಿನ ಪೂಜಾರಿಗಳಾಗಬೇಕಾಗಿದ್ದ ಶಂಕರಭಟ್ಟರು ಮಗಳ ಮದುವೆ ಇತ್ಯಾದಿಗಳಿಗೆ ಉಪಯೋಗಿಸಿ ಉಡುಪಿಗೆ ಓಡಿ ಹೋದರು."[೫೫] ಹೀಗೆ ಪುರೋಹಿತಶಾಹಿ ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ಕಾಣಬಹುದು. ಮೋಸ ಮತ್ತು ವಂಚನೆಗಳಿಂದ ಪುರೋಹಿತಶಾಹಿಗಳು ಆರ್ಥಿಕವಾಗಿ ಸದೃಢವಾಗುತ್ತಿದ್ದರು. ದೇವಸ್ಥಾನವನ್ನು ಕಟ್ಟಲು ಸಂಗ್ರಹಿಸಿದ ಹಣವನ್ನು ಶಂಕರಭಟ್ಟರು ಉಪಯೋಗಿಸಿದಕ್ಕೆ ದೇವಸ್ಥಾನ ಕಟ್ಟುವ ಸೂರಾಚಾರಿ ಕಲೆ ಅವನತಿಯ ಹಾದಿ ಹಿಡಿಯುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಭಾರತದ ವೈದಿಕ ಕಲ್ಪನೆಯ ಮೂಲವು ಆರ್ಯ ಸಂಸ್ಕೃತಿಯಲ್ಲಿದೆ. ಶೂದ್ರಾತಿಶೂದ್ರರನ್ನು ಈ ಆರ್ಯ ಮೂಲದವರು ತುಚ್ಛವಾಗಿ ಕಾಣಲು ಇವರ ಆರ್ಥಿಕ ಹಿಂದುಳಿದಿರುವಿಕೆ, ಕುಲ ಕಸುಬುಗಳ ಸ್ವರೂಪ ಮತ್ತು ಮಾನವಶಾಸ್ತ್ರೀಯವಾದ ಜನಾಂಗ ವೈಲಕ್ಷಣ್ಯಗಳು ಮೂಲಭೂತ ಕಾರಣ ಎಂಬುದು ಪೂರ್ಣಚಂದ್ರ ತೇಜಸ್ವಿ ಅವರ ನಿಲುವು. "ಕಾಶಿಯಿಂದ ರಾಮೇಶ್ವರದವರೆಗಿನ ಆರ್ಯ ಸಂಸ್ಕೃತಿ ಎಂಬ ಕಲ್ಪನೆಯೇ ವೈದಿಕ ಕಲ್ಪನೆ. ಶೂದ್ರರಲ್ಲಿ ಹರಿಜನರು, ಗಿರಿಜನರು ಇವರೆಲ್ಲಾ ಅಖಂಡ ಭಾರತ ವ್ಯಾಪ್ತಿಯ ಕೋಮುಗಳೆಂದು ಬ್ರಾಹ್ಮಣರು ಇಂದು ಮಾತನಾಡುತ್ತಿರುವುದು ಅವರ ರಾಜಕೀಯ ಧೂರ್ತತನವನ್ನು ತೋರಿಸುತ್ತದೆ. ಏಕೆಂದರೆ ಈ ಎಲ್ಲ ಶೂದ್ರಸ್ತೋಮಕ್ಕೂ ಈಗ ಸಿಕ್ಕಿರುವ 'ಹರಿಜನ' 'ಗಿರಿಜನ' ನಾಮಧೇಯಗಳೇ ಬ್ರಾಹ್ಮಣರು ದಯಪಾಲಿಸಿರುವುದು. ಈ ಶೂದ್ರರು ಎಂದೂ ತಾವೆಲ್ಲಾ ಒಂದು ಜನಾಂಗವೆಂಬಂತೆ ಸಂಪರ್ಕ ಮಾಧ್ಯಮವನ್ನೇ ಆಗಲಿ, ಗೆಳೆತನ ನೆಂಟಸ್ತಿಕೆಯನ್ನೇ ಆಗಲಿ ರೂಪಿಸಿಕೊಂಡೇ ಇರಲಿಲ್ಲ. ಇದಕ್ಕೆ ಮೂಲ ಕಾರಣ, ಇವರ ಆರ್ಥಿಕ ಹಿಂದುಳಿದಿರುವಿಕೆ. ಎರಡನೆಯದು ಕುಲಕಸುಬುಗಳ ಸ್ವರೂಪ. ಮೂರನೆಯದು

ಮಾನವಶಾಸ್ತ್ರೀಯವಾದ ಜನಾಂಗ ವೈಲಕ್ಷಣ್ಯಗಳು"[೫೬] ಹೀಗೆ ಆರ್ಥಿಕವಾಗಿ ಹಿಂದೆ ಉಳಿಯುವಂತೆ ವೈದಿಕ ಮೂಲಭೂತವಾದ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಕೆಳವರ್ಗದ ಜನರು ನಾಗರಿಕವಾಗಿ ಮುಂದುವರಿಯಬಾರದು ಎಂಬ ಸಂಕುಚಿತ ಮನೋಭಾವ ವೈದಿಕ ಸಂಸ್ಕೃತಿಯಲ್ಲಿ ಇರುವುದನ್ನು ನೋಡಬಹುದಾಗಿದೆ. ವೈದಿಕರು ಆರ್ಥಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಅಸಮಾನತೆ ಹಾಗೂ ತಾರತಮ್ಯಗಳನ್ನು ಸೃಷ್ಟಿ ಮಾಡಿದವರು ಜೊತೆಗೆ ಅವನ್ನು ಸಾಕಿ ಪೋಷಣೆ ಮಾಡಿದವರು. ಎಲ್ಲ ಕೆಳಜಾತಿಗಳ, ಅದರಲ್ಲೂ ಮುಖ್ಯವಾಗಿ ಶೂದ್ರ ಸಮುದಾಯಗಳ ವಿವಿಧ ಜಾತಿಗಳ ಹೆಸರುಗಳನ್ನು ಕೊಟ್ಟವರೇ ವೈದಿಕರು ಎಂಬುದು ಪೂರ್ಣಚಂದ್ರ ತೇಜಸ್ವಿ ಅವರ ಗ್ರಹಿಕೆ. ವಂಚನೆ ಬುದ್ಧಿಯಿಂದ ಕೆಳವರ್ಗದ ಜನರ ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸುತ್ತಿರುವ ವೈದಿಕ ಪ್ರಜ್ಞೆಗೆ ಪೂರ್ಣಚಂದ್ರ ತೇಜಸ್ವಿ ಅವರು ವಿರೋಧ ವ್ಯಕ್ತಪಡಿಸುತ್ತಾರೆ.

ದಲಿತರನ್ನು ಪ್ರಭುತ್ವವು ಆರ್ಥಿಕವಾಗಿ ಹೇಗೆ ಅವಕಾಶ ವಂಚಿತರನ್ನಾಗಿ ಹಾಗೂ ಸೌಲಭ್ಯಗಳ ವಂಚಿತರನ್ನಾಗಿ ಮಾಡುತ್ತದೆ ಎಂಬುದು, ಪ್ರಭುತ್ವವು ದಲಿತರನ್ನು ಶೋಷಣೆ ಮಾಡುವಂತಹ, ಅವರಿಗೆ ಸಿಗಬೇಕಿದ್ದ ಸೌಲಭ್ಯಗಳನ್ನು ಅವರಿಗೆ ನ್ಯಾಯೋಚಿತವಾಗಿ ಕೊಡದಿರುವಂತಹ ಒಂದು ಮಾನಸಿಕ ಒಪ್ಪಿಗೆಯನ್ನು ನಿರ್ಮಾಣ ಮಾಡಿದೆ ಎಂಬುದು, ಈ ಬಗೆಯ ಭೌತಿಕ ನೆಲೆಯ ಹಾಗೂ ಅಭೌತಿಕ ನೆಲೆಯ ಸ್ತರ ವಿನ್ಯಾಸಗಳನ್ನು ಕುರಿತು ದೇವನೂರ ಮಹಾದೇವ ಅವರ ಹೀಗೆ ಹೇಳುತ್ತಾರೆ. "ಆದರೆ ಭಾರತದ ಪರಿಸ್ಥಿತಿಯೇ ಬೇರೆಯಾದುದು. ಇಲ್ಲಿನ ತಾರತಮ್ಯ ಸುಲಿಗೆ ವಂಚನೆ ದರೋಡೆಗಳು ಭೌತಿಕ ಮಟ್ಟದಲ್ಲಿ ಮಾತ್ರ ನಿಂತಿಲ್ಲ. ಅದರಾಚೆಗೆ, ಅಂದರೆ ಸಾಮಾಜಿಕ ಸಾಂಸ್ಕೃತಿಕ ಏನೆಲ್ಲಾ ಕ್ಷೇತ್ರಗಳಿವೆಯೋ ಅಲ್ಲೆಲ್ಲಾ ಮನಸ್ಸಿನ ತಳಸ್ತರದವರೆಗೂ ತಾರತಮ್ಯದ ಸೋಂಕು ತಗುಲಿದೆ. ಈ ತಾರತಮ್ಯದ ಸಮಾಜವನ್ನು ಸ್ಥಿರವಾಗಿಸಲು ಶಾಸ್ತ್ರ, ಧರ್ಮ, ದೇವರು ಇವುಗಳನ್ನೂ ದುರುಪಯೋಗಪಡಿಸಿಕೊಂಡ ಕಳಂಕಿತ ನೆಲ ನಮ್ಮದಾಗಿದೆ. ಹಾಗಾಗಿ ಸಮಾನತೆ ಎಂಬುದೇ ನಮ್ಮ ಸಮಾಜಕ್ಕೆ, ನಮ್ಮ ಧರ್ಮಕ್ಕೆ ಅಪರಿಚಿತವಾದ ಪರಿಕಲ್ಪನೆಯಾಗಿದೆ. ಇಂತಹ ಪರಿಸ್ಥಿತಿ ಇರುವುದರಿಂದಲೇ ಭಾರತದಲ್ಲಿ ಮೀಸಲಾತಿ ಕಾನೂನು ಇದ್ದರೂ ಅದರೊಳಗೇನೆ ದಲಿತರನ್ನು ವಂಚಿಸುವುದು ಹೇಗೆ, ದಲಿತರಿಗೆ ಮೀಸಲಾಗಿಟ್ಟ ಗ್ರ್ಯಾಂಟನ್ನು ಬಳಸದೇ ಇರುವುದು ಹೇಗೆ – ಹೀಗೆ ಇಂತವರಲ್ಲೆ ಭಾರತದ ಪ್ರತಿಭೆ ಸಾಕಷ್ಟು ವ್ಯಯವಾಗುತ್ತಿದೆ. ಇಂತಹದರಲ್ಲಿ ಖಾಸಗಿ ಕ್ಷೇತ್ರದಲ್ಲಿ ಸ್ವಪ್ರೇರಣೆಯಿಂದ ದಲಿತರಿಗೆ, ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಿಕೊಡಲು ಕಷ್ಟವಾಗುತ್ತದೆ. ದಲಿತರಿಗೆ ಹಿಂದುಳಿದವರಿಗೆ ಉನ್ನತ ಸ್ಥಾನಮಾನ ಸಿಗದಿರುವುದೇ ನ್ಯಾಯ, ಸಿಗುವುದೇ ಅನ್ಯಾಯ ಎಂಬ ಪರಂಪರೆಯು ಭಾರತದಲ್ಲಿ ಇರುವುದರಿಂದಲೇ ಒಬ್ಬ ದಲಿತನಿಗೆ ಒಂದು ಕೆಲಸ ಸಿಕ್ಕಿದರೆ ಹತ್ತು ಜನಕ್ಕೆ ಕೆಲಸ ಸಿಕ್ಕಂತೆ ಅದು ಪರಿಣಾಮ ಬೀರುತ್ತದೆ. ಭಾರತದಲ್ಲಿ ಖಾಸಗೀಕರಣ ಎಂದರೆ ಹೆಚ್ಚು ಕಮ್ಮಿ ನವಜಾತೀಯತೆಯಾಗಿ ಬಿಡುತ್ತದೆ. ಸರ್ಕಾರಗಳು ಇದರಲ್ಲಿ ಶಾಮೀಲಾಗದಿದ್ದರೆ ಒಂದು ಕಾನೂನು ಮಾಡಿ ನೋಡಲಿ! ಅದೇನೆಂದರೆ, ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಶೇಕಡ ೩೦ರಷ್ಟು ಮೀಸಲಾತಿ ಕೊಡಬೇಕು ಎಂದು. ಆಗ ಖಾಸಗಿ ಕ್ಷೇತ್ರಗಳು ಬಹುತೇಕ ಮುಚ್ಚಿ

೪. ಕುವೆಂಪು ಸಮಗ್ರ ಕಾವ್ಯ ಸಂಪುಟ ೧, ಓ, ಬನ್ನಿ, ಸೋದರರೆ, ಬೇಗ ಬನ್ನಿ!, ಪುಟ ೩೭೨

೫. ಕುವೆಂಪು, ಜಲಗಾರ ಮತ್ತು ಶ್ಮಶಾನ ಕುರುಕ್ಷೇತ್ರಂ ಎರಡು ನಾಟಕಗಳು, ಪುಟ, ೫ರಲ್ಲಿ

೬. ಅದೇ, ಪುಟ ೬, ೭

೭. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಹೊಸ ವಿಚಾರಗಳು, ಪುಟ ೪೬೪, ೪೬೫

೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಬಚೂರಿನ ಪೋಸ್ಟಾಫೀಸು, ಅವನತಿ, ಪುಟ ೨೧

೯. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೫, ೬

೧೦. ದೇವನೂರ ಮಹಾದೇವ ಅವರ ಕೃತಿಗಳು, ಡಾಂಬರು ಬಂದುದು, ಪಟು ೩೦

೧೧. ದೇವನೂರ ಮಹಾದೇವ, ಯಾರ ಜಪ್ತಿಗೂ ಸಿಗದ ನವಿಲುಗಳು, ಪುಟ ೩೯೯

೧೨. ಕುವೆಂಪು, ಸಮಗ್ರ ಕಾವ್ಯ ಸಂಪುಟ ೧, ಪುಟ ೩೬೮

೧೩. ಕುವೆಂಪು, ಸಮಗ್ರ ಗದ್ಯ ಸಂಪುಟ ೨, ಪುಟ ೪೮೧, ೪೮೨

೧೪. ಕುವೆಂಪು, ಕಾನೂರು ಹೆಗ್ಗಡಿತಿ, ಪುಟ ೨೫೪

೧೫. ಅದೇ, ಪುಟ ೨೭೨

೧೬. ಅದೇ, ಪುಟ ೫೯೦

೧೭. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಹೊಸ ವಿಚಾರಗಳು, ಪುಟ ೪೫೯

೧೮. ಅದೇ, ಪುಟ ೪೪೬, ೪೪೭

೧೯. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೧೯, ೨೦

೨೦. ಅದೇ, ಪುಟ ೯೮

೨೧. ಅದೇ, ಪುಟ ೯೧, ೯೨

೨೨. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಹೊಸ ವಿಚಾರಗಳು, ಪುಟ ೪೫೫

೨೩. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೧೦೧, ೧೦೨

೨೪. ಅದೇ, ಪುಟ ೧೧೭

೨೫. ಕುವೆಂಪು ಸಮಗ್ರ ಗದ್ಯ ಸಂಪುಟ ೨, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ!, ಪುಟ ೪೭೯

೨೬. ಅದೇ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೩೬೬

೨೭. ಅದೇ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ!, ಪುಟ ೪೯೮

೨೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಣ್ಣನ ನೆನಪು, ಪುಟ ೨೯

೨೯. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ ಪುಟ ೯೧, ೯೨

೩೦. ದಂಡಪ್ಪ ಎಚ್.(ಸಂ.), ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳು, ಪುಟ ೯೬

೩೧. ಕುವೆಂಪು, ಶೂದ್ರತಪಸ್ವಿ, ಪುಟ ೨೬

೩೨. ಕುವೆಂಪು ಸಮಗ್ರ ಗದ್ಯ ಸಂಪುಟ ೨, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ!, ಪುಟ ೪೮೪

೩೩. ಡಿ.ಆರ್. ನಾಗರಾಜ್, ಅಮೃತ ಮತ್ತು ಗರುಡ, ಪುಟ ೩೦, ೩೧

೩೪. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಹೊಸ ವಿಚಾರಗಳು, ಪುಟ ೪೫೭, ೪೫೮

೩೫. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೬೪

೩೬. ಕುವೆಂಪು, ಸಮಗ್ರ ಕಾವ್ಯ ೨, ಅನಿಕೇತನ, ಪುಟ ೨೦೯

೩೭. ಅದೇ, ಮಂತ್ರಾಕ್ಷತೆ, ಪುಟ ೨೯೫

೩೮. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೪೨೫

೩೯. ಕುವೆಂಪು ಸಮಗ್ರ ಗದ್ಯ ಸಂಪುಟ ೨, ಮಂತ್ರಮಾಂಗಲ್ಯ ಪುಟ ೧೨೧೩

೪೦. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಹೊಸ ವಿಚಾರಗಳು, ಪುಟ ೬೩೩

೪೧. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಚಿದಂಬರ ರಹಸ್ಯ, ಪುಟ ೬

೪೨. ಅದೇ, ಪುಟ ೧೪೬, ೧೪೭

೪೩. ಅದೇ, ಪುಟ ೧೪೭, ೧೪೮

೪೪. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೩೫, ೩೬

೪೫. ಅದೇ, ಪುಟ ೪೭

೪೬. ಅದೇ, ಪುಟ ೬೬

೪೭. ಕುವೆಂಪು ಸಮಗ್ರ ಕಾವ್ಯ ಸಂಪುಟ ೨, ಬಾಲವಿಧವೆ, ಪುಟ ೫೫೧

೪೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಕಿರುಗೂರಿನ ಗಯ್ಯಾಳಿಗಳು, ಪುಟ ೫೬, ೫೭

೪೯. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಬೃಹನ್ನಳೆ ಸೋಮುವಿನ ಸ್ವಗತಲಹರಿ ಮತ್ತು ಇತರ ಕವನಗಳು, ಪುಟ ೩೩

೫೦. ಅದೇ, ಪುಟ ೩೩

೫೧. ಭಗವಾನ್ (ಅನು.), ಸಾಮಿ ಧರ್ಮತೀರ್ಥ (ಮೂಲ), ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಪುಟ ೬೦

೫೨. ಕುವೆಂಪು, ಕಾನೂರು ಹೆಗ್ಗಡಿತಿ, ಪುಟ ೬೬

೫೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ ೧೮೭

೫೪. ಕುವೆಂಪು ಸಮಗ್ರ ಗದ್ಯ ಸಂಪುಟ ೨, ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಪುಟ ೭೩೯

೫೫. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಅಬಚೂರಿನ ಪೋಸ್ಟಾಫೀಸು, ಅವನತಿ, ಪುಟ ೨೧

೫೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ವಿಮರ್ಶೆಯ ವಿಮರ್ಶ, ಪುಟ ೨೫

೫೭. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪುಟ ೨೭೪

* * *

ಅಧ್ಯಾಯ: ಏಳು

ಸಮಾರೋಪ/ಫಲಿತಗಳು

ಅಧ್ಯಾಯ: ಏಳು

ಸಮಾರೋಪ

ಕನ್ನಡ ಸಾಹಿತ್ಯವು ಸಮಾಜದಲ್ಲಿ ಇರುವ ಅಸಮಾನತೆಯ ವಿರುದ್ಧ ತನ್ನ ಪ್ರತಿರೋಧವನ್ನು ಮಾಡುತ್ತ ಬಂದಿದೆ. ಹಾಗಾಗಿ ಸಾಹಿತ್ಯಕ್ಕೆ ತನ್ನದೆ ಆದ ಜವಾಬ್ದಾರಿಗಳಿರುತ್ತವೆ. ಪ್ರಸ್ತುತ ಸಮಾಜದ ವಾಸ್ತವ ಜೀವನ ಶೈಲಿ, ರಾಜಕೀಯ, ಧರ್ಮಪ್ರಜ್ಞೆ, ಶೋಷಣೆ, ಸಂವೇದನಾಶಕ್ತಿ ಇವುಗಳನ್ನು ವಿಮರ್ಶಿಸಿ ಪ್ರಶ್ನಿಸುವ ಕೆಲಸವನ್ನು ಆಯಾ ಕಾಲಘಟ್ಟದ ಸಮಕಾಲೀನ ಸಾಹಿತ್ಯ ಮಾಡುತ್ತಾ ಬಂದಿದೆ. ವೈದಿಕ ಪ್ರಜ್ಞೆ ಶತಶತಮಾನದಿಂದ ಕೆಳವರ್ಗದ ಜನರ ಮೇಲೆ ಭಾಷೆ, ಶಿಕ್ಷಣ, ಪ್ರಭುತ್ವದಲ್ಲಿ ದಬ್ಬಾಳಿಕೆ ಮಾಡಿಕೊಂಡು ಬಂದಿದೆ. ಈ ದಬ್ಬಾಳಿಕೆಯನ್ನು ಸಮಾಜದಲ್ಲಿ ಇರುವ ಅಸಮಾನತೆಯನ್ನು ಕನ್ನಡ ಸಾಹಿತ್ಯ ಪ್ರಶ್ನಿಸಿದೆ. ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯ, ಭಿನ್ನ ಭಿನ್ನ ದೃಷ್ಟಿಕೋನಗಳನ್ನು ಪಡೆಯುತ್ತಾ ಹೋಯಿತು. ಪಾಶ್ವಿಮಾತ್ಯ ನಾಗರಿಕತೆಯ ಬೆಳಕಿನಲ್ಲಿಯೇ ಭಾರತೀಯ ಸಂಸ್ಕೃತಿಯ ಅಮಾನವೀಯ ಸಂಗತಿಗಳನ್ನು ಕನ್ನಡ ಸಾಹಿತ್ಯ ವಿಮರ್ಶಿಸಿ ವಿಶ್ಲೇಷಣೆ ಮಾಡಿತು. ಸಮಾಜದಲ್ಲಿ ಇರುವ ಅಸಮಾನತೆಯ ವಿರುದ್ಧ ತನ್ನ ಪ್ರತಿರೋಧವನ್ನು ಮಾಡುತ್ತಾ ಮೂಢನಂಬಿಕೆ, ಅರ್ಥಹೀನ ಆಚರಣೆ ಮತ್ತು ಶೋಷಣೆ, ಸುಲಿಗೆಯನ್ನು ಉಗ್ರವಾಗಿ ಪ್ರತಿಭಟಿಸಿತು. ಆಧುನಿಕ ಕನ್ನಡ ಸಾಹಿತ್ಯ ಪ್ರಾರಂಭದಲ್ಲಿ ವೈದಿಕ ಸಾಹಿತ್ಯ ಕೃತಿಗಳನ್ನು ಆಕರವಾಗಿ ಮಾಡಿಕೊಂಡು ಆಧುನಿಕ ಸಂದರ್ಭಕ್ಕೆ ತಕ್ಕಂತೆ ರೂಪಾಂತರ ಮಾಡಿ, ಸನಾತನವಾದಿ ಚಿಂತನೆಗಳಿಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿದೆ. ಶೂದ್ರ, ಅವೈದಿಕ ಸಾಹಿತ್ಯ ಚಿಂತನೆಗಳು, ಬ್ರಾಹ್ಮಣ, ವೈದಿಕ, ಪುರೋಹಿತಶಾಹಿ, ಸಂಸ್ಕೃತ ಸಾಹಿತ್ಯ ಚಿಂತನೆಗಳನ್ನು ವಿರೋಧಿಸಿ ಎದುರಾಳಿಗಳನ್ನಾಗಿ ಮಾಡಿಕೊಂಡಿದೆ. ಆದ್ದರಿಂದ ವೈದಿಕ ವಿರೋಧಿ ಚಿಂತನೆಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಚರ್ಚಿತವಾದ ವಿಷಯವಾಗಿದೆ.

ಕನ್ನಡ ಸಾಹಿತ್ಯದ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವೈದಿಕ ವಿರೋಧಿ ಪ್ರಜ್ಞೆಯೊಂದರ ಅಂತರಾಳದಲ್ಲಿ ಸ್ಫೂರ್ತಿಯಾಗಿ ಕೆಲಸ ಮಾಡಿರುವುದು ನಮಗೆ ಗೋಚರವಾಗುತ್ತದೆ. ಹೀಗಾಗಿ ಪ್ರಾಚೀನ ಕನ್ನಡ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯನ್ನು ವ್ಯಕ್ತಪಡಿಸುವ ಹಿನ್ನೆಲೆಯಲ್ಲಿ

ಹುಟ್ಟಿಕೊಂಡಿದೆ. ಶ್ರೀವಿಜಯನ 'ಕವಿರಾಜಮಾರ್ಗ' ಕೃತಿಯಲ್ಲಿ ಸಂಸ್ಕೃತ ಭಾಷೆಯ ಹೇರಿಕೆಯ ಪ್ರಭಾವವನ್ನು ತಡೆಯಲು ಭಾಷಾ ನಿಯಮಗಳ ಬಗ್ಗೆ ಮಾತನಾಡುತ್ತಾನೆ. ಸಂಸ್ಕೃತ ಪದಗಳು ಕನ್ನಡ ಪದಕೋಶದಲ್ಲಿ ಸೇರುವಾಗ ಎಚ್ಚರ ವಹಿಸಬೇಕು ಎಂದು ಹೇಳುತ್ತಾನೆ. ಪಂಪ ಕವಿಯು ವೈದಿಕ ಧರ್ಮದ ಜಾತಿಪದ್ಧತಿಯನ್ನು ವಿರೋಧಿಸಿ "ಮನುಷ್ಯ ಜಾತಿ ತಾನೊಂದೆ ವಲಂ" ಎಂದು ಹೇಳುವುದರ ಮೂಲಕ ವಿಶ್ವಮಾನವ ಸಂದೇಶವನ್ನು ಸಾರುತ್ತಾನೆ. ಆರಂಭದಲ್ಲಿ ಕನ್ನಡ ಮಹಾಕಾವ್ಯಗಳನ್ನು ರಚಿಸುವಾಗ ಕನ್ನಡ ಭಾಷೆಗೆ ಹೆಚ್ಚು ಒತ್ತು ಕೊಟ್ಟಿರುವುದನ್ನು ಕಾಣಬಹುದು. ಆಂಡಯ್ಯ ಸಂಸ್ಕೃತವನ್ನು ತ್ಯಜಿಸಿ ಅಚ್ಚಕನ್ನಡದಲ್ಲಿ ಕಾವ್ಯವನ್ನು ರಚಿಸಲು ಮುಂದಾಗುತ್ತಾನೆ. ನಾಗಚಂದ್ರ ಕವಿಯು ಹಿಂಸೆಯ ಹಿನ್ನೆಲೆಯಿಂದ ರಚಿಸಿದ ವೈದಿಕ ರಾಮಾಯಣಕ್ಕಿಂದ ಅಹಿಂಸೆಯನ್ನು ಪ್ರತಿಪಾದಿಸುವ 'ರಾಮಚಂದ್ರ ಚರಿತಪುರಾಣ' ಕೃತಿಯನ್ನು ರಚಿಸುತ್ತಾನೆ. ಬ್ರಹ್ಮಶಿವ 'ಸಮಯ ಪರೀಕ್ಷೆ' ಮತ್ತು 'ತ್ರೈಲೋಕ್ಯ ಚೂಡಾಮಣಿ ಸ್ತೋತ್ರ' ಕೃತಿಯಲ್ಲಿ ವೈದಿಕ ಧರ್ಮದ ತಾತ್ವಿಕ ಚಿಂತನೆಗಳನ್ನು ವಿಡಂಬನೆ ಮಾಡಿ ವೈದಿಕ ಧರ್ಮವನ್ನು ವಿರೋಧಿಸುತ್ತಾನೆ. ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಚಿಂತನೆಗಳು ವ್ಯಕ್ತವಾಗಿವೆ.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವೈದಿಕ ವಿರೋಧಿ ಚಿಂತನೆಗಳು ವಚನಕಾರರ ಮೂಲಕ ವ್ಯಕ್ತವಾಗಿವೆ. ವೈದಿಕ ಧರ್ಮದಲ್ಲಿ ಇದ್ದ ಜಾತೀಯತೆ, ವಂಚನೆ, ಡಾಂಬಿಕ ಭಕ್ತಿ, ಪೊಳ್ಳುತನವನ್ನು ವಿರೋಧಿಸಲು ವಚನ ಸಾಹಿತ್ಯ ಹುಟ್ಟಿಕೊಂಡಿತು. ವೈದಿಕ ಧರ್ಮದ ಆಚರಣೆಗಳಲ್ಲಿ ಸಿಲುಕಿಕೊಂಡಿದ್ದ ಜನಸಾಮಾನ್ಯರನ್ನು ಎಚ್ಚರಿಸಲು ಆಡುಭಾಷೆಯಲ್ಲಿ ಅನುಭವಗಳನ್ನು ಹೇಳುವುದರ ಮೂಲಕ ವಿವೇಚನೆಯನ್ನು ಮೂಡಿಸಿತು. ವೈಚಾರಿಕತೆ ಮಾರ್ಗವನ್ನು ಅನುಸರಿಸಲಾಯಿತು. ಹರಿಹರ, ರಾಘವಾಂಕ ಮತ್ತು ಕನಕದಾಸ ಕೂಡ ವಚನಕಾರರ ಮಾರ್ಗವನ್ನು ಮುಂದುವರಿಸಿದರು. ಹೀಗೆ ವೈದಿಕ ಸಂಸ್ಕೃತಿಗೆ ವಿರುದ್ಧವಾದ ಪ್ರತಿಭಟನೆ ಹುಟ್ಟಿಕೊಂಡಿದೆ.

ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯ ಭಿನ್ನ ಭಿನ್ನ ದೃಷ್ಟಿಕೋನಗಳನ್ನು ಹೊಂದುತ್ತಾ ಹೋಯಿತು. ಹಾಗಾಗಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಭಾಷಿಕವಾಗಿ ಶತಶತಮಾನಗಳಿಂದ ವೈದಿಕ ಪ್ರಜ್ಞೆ ಮಾಡುತ್ತಿದ್ದ ಅಸಮಾನತೆಯನ್ನು ವಿರೋಧಿಸಲು ಮುಂದಾಯಿತು. ನವೋದಯ, ನವ್ಯ, ನವ್ಯೋತ್ತರ ಮತ್ತು ದಲಿತ ಬಂಡಾಯದ ಲೇಖಕರು ವೈದಿಕ ಪ್ರಜ್ಞೆಯನ್ನು ವಿರೋಧಿಸುವ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ. ಸಂಕುಚಿತ ಮನೋಧರ್ಮ ಹೊಂದಿದ ವೈದಿಕ ಧರ್ಮವನ್ನು ವಿರೋಧಿಸಿದ್ದಾರೆ. ವೈದಿಕ ಯಾಜಮಾನ್ಯ, ವೈದಿಕ ಕ್ರಿಯಾಚರಣೆಗಳ ಪ್ರತಿರೋಧ, ಶೂದ್ರ ಮತ್ತು ವೈದಿಕರ ಊಟೋಪಚಾರಗಳ ನಡುವಿನ ಅಂತರ, ಉಡುಗೆ ತೊಡುಗೆಗಳು, ಸ್ತ್ರೀ ಪುರುಷರ ನಡುವಿನ ಅನೈತಿಕ ಸಂಬಂಧ, ಸ್ಥಳೀಯ ಧಾರ್ಮಿಕ ನಂಬಿಕೆಗಳು, ಸ್ಥಳೀಯ ಮತಮಾನ್ಯಗಳ ಧೋರಣೆಗಳು, ಶೂದ್ರರ ಶಿಕ್ಷಣ, ನವ ವೈಚಾರಿಕತೆ, ವೈದಿಕ ಕುಟುಂಬಗಳ ಬದುಕಿನ ಹಾಸ್ಯಾಸ್ಪದ ಚಿತ್ರಣಗಳು, ಜಾತಿ-ಮತಗಳ ತಾರತಮ್ಯ, ಪುರೋಹಿತಶಾಹಿ ಆಧುನಿಕ ಯುಗ ಪ್ರಜ್ಞೆಗೆ ಮುಖಾಮುಖಿ, ಪಾರಂಪರಿಕ ಮೌಢ್ಯಗಳ ಬಗ್ಗೆ ಆಧುನಿಕ ಕನ್ನಡ ಸಾಹಿತ್ಯ ಪ್ರಶ್ನೆ ಮಾಡಿದೆ. ವೈದಿಕ ಪ್ರಜ್ಞೆಯ

ಅಮಾನವೀಯ ನೆಲೆಗಳನ್ನು ಯಾವುದೇ ಧರ್ಮ, ಮತ, ವರ್ಗಕ್ಕೆ ಸೀಮಿತವಾಗದೆ ಸಮಷ್ಟಿ ದೃಷ್ಟಿಯಲ್ಲಿ ವಿಮರ್ಶಿಸಿ ವಿಶ್ಲೇಷಣೆಗೆ ಗುರಿಪಡಿಸಿದೆ.

ವೈದಿಕರು ಸಂಸ್ಕೃತ ಭಾಷೆಯನ್ನು ದೇವಭಾಷೆ ಎಂದು ಪರಿಗಣಿಸಿದ್ದರಿಂದ ಪ್ರಭುತ್ವದಲ್ಲಿ ಸಂಸ್ಕೃತ ಭಾಷೆಗೆ ವಿಶೇಷ ಸ್ಥಾನಮಾನ ಸಿಕ್ಕಿತು. ಹಾಗಾಗಿ ಪ್ರಾದೇಶಿಕ ಭಾಷೆಗಳ ಮೇಲೆ ಸಂಸ್ಕೃತ ಭಾಷೆಯ ಹೇರಿಕೆ ಹೆಚ್ಚಾಗಿದೆ. ಆದ್ದರಿಂದ ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳು ಬಂದು ಸೇರಿಕೊಂಡಿವೆ. ಹೀಗೆ ಅಧಿಕಾರದ ಭಾಷೆಯಾದ ಸಂಸ್ಕೃತ ಭಾಷೆಯು ಸ್ಥಳೀಯ ಭಾಷೆಗಳನ್ನು ಕೀಳಾಗಿ ನೋಡಿದೆ. ಆದ್ದರಿಂದ ಸಮಾಜದಲ್ಲಿ ವರ್ಗತಾರತಮ್ಯ, ಜಾತೀಯತೆ, ಅಸ್ಪೃಶ್ಯತೆ, ಲಿಂಗತಾರತಮ್ಯ ಮತ್ತು ವರ್ಣತಾರತಮ್ಯಗಳ ಹುಟ್ಟಿಗೆ ಕಾರಣವಾಗಿದೆ. ಸಮಾಜದಲ್ಲಿ ಅಸಮಾನತೆ ಸೃಷ್ಟಿಗೆ ಕಾರಣವಾದ ಸಂಸ್ಕೃತ ಭಾಷೆಯನ್ನು ವಿರೋಧಿಸುವ ಚಿಂತನೆಗಳು ಕನ್ನಡ ಸಾಹಿತ್ಯದಲ್ಲಿ ಹುಟ್ಟಿಕೊಂಡಿವೆ. ಪ್ರಾಚೀನ ಕಾಲದಿಂದಲೂ ಸಂಸ್ಕೃತ ಭಾಷೆಯ ಹೇರಿಕೆಯಿಂದ ಕನ್ನಡ ಭಾಷೆಯ ಮೇಲೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಆಗುತ್ತಿರುವ ಅಸಮಾನತೆಯನ್ನು ವಿರೋಧಿಸಲಾಗಿದೆ. ಪ್ರಭುತ್ವದಲ್ಲಿ ಭಾಷೆ ಸೃಷ್ಟಿಸಿದ ಅಸಮಾನತೆ ಅನ್ಯಾಯಗಳನ್ನು ವಿರೋಧಿಸಲು ಮತ್ತು ಶೋಷಣೆಯನ್ನು ವಿರೋಧಿಸಲು ಕನ್ನಡದ ಲೇಖಕರು ಪ್ರಾದೇಶಿಕ ಭಾಷೆಗಳನ್ನು ಸಾಹಿತ್ಯ ಕೃತಿಯಲ್ಲಿ ಬಳಕೆ ಮಾಡಿದ್ದಾರೆ. ಪ್ರಭುತ್ವದ ಭಾಷೆ ಸಂಕೇತಿಸುವ ಯಜಮಾನ ವರ್ಗದ ಮೌಲ್ಯಗಳನ್ನು ಮತ್ತು ವೈದಿಕ ಪ್ರಜ್ಞೆಯ ಸಾಮಾಜಿಕ ನೈತಿಕ ಮೌಲ್ಯಗಳನ್ನು ಆಧುನಿಕ ಕನ್ನಡ ಸಾಹಿತ್ಯ ತಿರಸ್ಕರಿಸಿದೆ.

ವೈದಿಕ ಪ್ರಜ್ಞೆಯಿಂದ ಸೃಷ್ಟಿಯಾದ ವರ್ಗಬೇಧ, ಜಾತಿಬೇಧ, ಲಿಂಗಬೇಧ ಮತ್ತು ವರ್ಣಭೇದ ರೂಪಗಳು ಭಾಷೆಯ ಮೂಲಕ ತೋರುತ್ತವೆ. ಆದ್ದರಿಂದ ಮಡಿ, ಮೈಲಿಗೆ, ಸಾಮಾಜಿಕ ನಿಷೇಧಗಳು, ಕೊಡು ಕೊಳ್ಳುವಿಕೆಯಲ್ಲಿನ ನಿರ್ಬಂಧ, ಯಾಜಮಾನಿಕೆ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ನಿಷೇಧಗಳನ್ನು ವಿರೋಧಿಸುವುದನ್ನು ಭಾಷಿಕ ಸ್ವರೂಪ ತೆರೆದು ತೋರಿಸಿದೆ. ಹಾಗಾಗಿ ಭಾಷಿಕ ಸಂವಹನದ ಧ್ವನಿ ಉಚ್ಚಾರದಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ. ಹೀಗಾಗಿ ಸಾಮಾಜಿಕ ಸಂವಹನದ ಸಂದರ್ಭದಲ್ಲಿ ಬಳಸುವ ಭಾಷಾಕೃತಿಗಳಲ್ಲಿ ವೈದಿಕ ವಿರೋಧ ವ್ಯಕ್ತವಾಗಿದೆ. ವೈದಿಕರು ಮಾತನಾಡುವ ಸಂಸ್ಕೃತ ಭಾಷೆಯನ್ನು ಶೂದ್ರರು ಮಾತನಾಡುವಂತಿಲ್ಲ ಮತ್ತು ಭಾಷೆಯನ್ನು ಕಲಿಯುವಂತಿಲ್ಲ ಎಂದು ಕಾನೂನನ್ನು ಸಮಾಜದಲ್ಲಿ ಮಾಡಲಾಯಿತು. ಶೂದ್ರರಿಗೆ ಸಂಸ್ಕೃತವನ್ನು ಉಚ್ಚರಿಸಲು ಬರುವುದಿಲ್ಲ ಎಂದು ವೈದಿಕ ಪ್ರಜ್ಞೆ ಪರಿಗಣಿಸಿತು. ಈ ರೀತಿ ಭಾಷೆಯ ಮೂಲಕ ಸ್ಥಾಪಿಸಿದ ನಂಬಿಕೆಯ ಮೌಲ್ಯಗಳ್ನು ಆಧುನಿಕ ಕನ್ನಡ ಸಾಹಿತ್ಯ ವಿರೋಧಿಸಿದೆ. ವೈದಿಕ ಸಂಪ್ರದಾಯಗಳನ್ನು ಬೈಗುಳ ರೂಪದಲ್ಲಿ ಬಳಸಿ ಭಾಷಿಕ ಸಂವಹನದ ಮೂಲಕ ವ್ಯಕ್ತಿಗಳನ್ನು ನಿಂದಿಸುವುದು, ಹೀಯಾಳಿಸುವುದು ಕಾಣಬಹುದಾಗಿದೆ. ವೈದಿಕರು ಯಜ್ಞ-ಯಾಗಾದಿಗಳಲ್ಲಿ ಬಳಸುವ ಮಂತ್ರಗಳನ್ನು ವ್ಯಂಗ್ಯದ ಮೂಲಕ ಹೀಯಾಳಿಸಲಾಗಿದೆ. ವೈದಿಕ ಪ್ರಜ್ಞೆಯಿಂದ ಸೃಷ್ಟಿಯಾದ ನೈತಿಕ ಮೌಲ್ಯಗಳನ್ನು ಕೂಡ ಆಧುನಿಕ ಕನ್ನಡ ಸಾಹಿತ್ಯ ವ್ಯಂಗ್ಯದ ಮೂಲಕ ವೈದಿಕ ಪ್ರಜ್ಞೆಯನ್ನು ವಿರೋಧಿಸಿದೆ.

ವೈದಿಕ ಧರ್ಮದ ವರ್ಣಪದ್ಧತಿಯಿಂದ ಕೆಳವರ್ಗದ ಜನರು ಶಿಕ್ಷಣ ಪಡೆಯುವಂತಿಲ್ಲ ಎಂದು ಕಾನೂನು ಮಾಡಿದ್ದರಿಂದ ಕೆಳವರ್ಗದ ಜನರನ್ನು ಶಿಕ್ಷಣದಿಂದ ವಂಚಿಸುವ ಕೆಲಸವನ್ನು ವೈದಿಕ ಪ್ರಜ್ಞೆ ಮಾಡಿದೆ. ಶೂದ್ರರು ಶಿಕ್ಷಣವನ್ನು ಪಡೆದರೆ ಕ್ರೂರವಾದ ಶಿಕ್ಷೆಯನ್ನು ಕೊಡಲಾಗುತ್ತಿತ್ತು. ಶ್ರೇಣೀಕೃತ ಸಮಾಜದಲ್ಲಿ ಪ್ರತಿಯೊಂದು ಜಾತಿಗೂ ವೃತ್ತಿಯನ್ನು ನಿಗದಿಪಡಿಸಲಾಗಿತ್ತು. ಹಾಗಾಗಿ ಶಿಕ್ಷಣ ಬೋಧಿಸುವುದು ಮತ್ತು ಕಲಿಯುವುದು ಬ್ರಾಹ್ಮಣರ ವೃತ್ತಿಯಾಗಿತ್ತು. ಅಧ್ಯಯನ ಮತ್ತು ಅಧ್ಯಾಪನ ಮಾಡುವವರು ಬ್ರಾಹ್ಮಣರು ಎಂದು ಸಾಮಾಜಿಕವಾಗಿ ಅಂಗೀಕಾರವನ್ನು ಪಡೆದಿದ್ದರು. ಬ್ರಾಹ್ಮಣರು ಧಾರ್ಮಿಕ ಕಾರ್ಯಗಳನ್ನು ನಡೆಸುವವರಾಗಿದ್ದರಿಂದ ಶಿಕ್ಷಣವು ಬ್ರಾಹ್ಮಣರಿಗೆ ಮಾತ್ರ ಎಂದು ಸಮಾಜದಲ್ಲಿ ನಂಬಿಸಲಾಗಿತ್ತು. ವೇದಾಧ್ಯಯನವೇ ಶಿಕ್ಷಣ ಎಂದು ವೈದಿಕ ಪ್ರಜ್ಞೆ ಪರಿಗಣಿಸಿತ್ತು. ವೇದಗಳ ಹೊರಗೆ ಜ್ಞಾನವೆಂಬುದೇ ಇಲ್ಲವೆಂಬುದು ವೈದಿಕ ಪ್ರಜ್ಞೆಯ ನಂಬಿಕೆಯಾಗಿದೆ. ಪಾರಂಪರಿಕ ಜ್ಞಾನದಿಂದ ಪಡೆದ ಜ್ಞಾನವನ್ನು ವೈದಿಕ ಪ್ರಜ್ಞೆ ಜ್ಞಾನ ಎಂದು ಪರಿಗಣಿಸಲಿಲ್ಲ. ಹಾಗಾಗಿ ವೈದಿಕ ಶಿಕ್ಷಣ ಪದ್ಧತಿ ಅಸಮಾನತೆಯಿಂದ ಕೂಡಿದೆ. ಶಿಕ್ಷಣವು ದೈವ ಸಮಾನವಾದುದ್ದು ಎಂದು ಬಿಂಬಿಸಿದ್ದರಿಂದ ಕೆಳವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಜಾತಿ ಮತ್ತು ಲಿಂಗತಾರತಮ್ಯದಿಂದಾಗಿ ಶಿಕ್ಷಣ ಕೊಡುವುದನ್ನು ನಿರಾಕರಿಸಲಾಗಿತ್ತು. ಈ ಅಮಾನವೀಯ ಚಿಂತನೆಗಳು ಶತಶತಮಾನದಿಂದ ಮುಂದುವರಿದುಕೊಂಡು ಬರಲು ವೈದಿಕ ಮೂಲಭೂತವಾದಗಳು ಕಾರಣವಾಗಿವೆ. ಆದ್ದರಿಂದ ವೈದಿಕ ಪ್ರಜ್ಞೆಯ ಹಿನ್ನೆಲೆಯಿಂದ ಹುಟ್ಟಿಕೊಂಡ ಶಿಕ್ಷಣ ವ್ಯವಸ್ಥೆಯನ್ನು ಆಧುನಿಕ ಕನ್ನಡ ಸಾಹಿತ್ಯ ವಿರೋಧಿಸಿದೆ.

ಮೂಲಭೂತವಾದವನ್ನು ಪ್ರತಿನಿಧಿಸುವ ಪುರಾಣ ಕೃತಿಗಳಲ್ಲಿ ಶೂದ್ರರು ಮತ್ತು ಶೂದ್ರೇತರರು ವಿದ್ಯೆಯನ್ನು ಪಡೆಯುವುದು ಅಪರಾಧವೆಂದು ಭಾವಿಸಿದೆ. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯ ಪುರಾಣ ಕೃತಿಗಳನ್ನು ಮರುಸೃಷ್ಟಿಸುವುದರ ಮೂಲಕ ವೈದಿಕ ಶಿಕ್ಷಣ ವ್ಯವಸ್ಥೆಗೆ ವಿರೋಧ ವ್ಯಕ್ತ ಪಡಿಸಿದೆ. ಆಧುನಿಕ ಶಿಕ್ಷಣದಲ್ಲಿ ಬ್ರಾಹ್ಮಣತ್ವ, ಹಿಂದುತ್ವ ಮತ್ತು ಮೂಲಭೂತವಾದಗಳು ಸೇರಿಕೊಂಡು ಶೂದ್ರರಿಗೆ ಮಾಡುತ್ತಿರುವ ಅನ್ಯಾಯಗಳನ್ನು ವಿರೋಧಿಸಲಾಗಿದೆ. ಕೆಳವರ್ಗದ ಜನರ ಪಾರಂಪರಿಕ ಜ್ಞಾನದಿಂದ ಮೇಲುವರ್ಗದ ಜ್ಞಾನ ನಿಂತಿದೆ. ಹಾಗಾಗಿ ವೈದಿಕ ಶಿಕ್ಷಣ ಪದ್ಧತಿಯು ಅನುಭ ದಿಂದ ಕೂಡಿಲ್ಲ ಎಂದು ಆಧುನಿಕ ಕನ್ನಡ ಸಾಹಿತ್ಯ ಪರಿಗಣಿಸಿದೆ.

ವೈದಿಕಶಾಹಿ ಪ್ರಾಚೀನ ಕಾಲದಲ್ಲಿ ರಾಜನ ಪ್ರಭುತ್ವದಲ್ಲಿ ಭಾಗಿಯಾಗಿ ತನ್ನ ಮೂಲಭೂತವಾದವನ್ನು ಬಿತ್ತಿತು. ವೈದಿಕ ಧರ್ಮದ ಆಚರಣೆಗಳಾದ ಕರ್ಮಸಿದ್ಧಾಂತ, ಚಾತುರ್ವರ್ಣ ಸಿದ್ಧಾಂತ, ಯಜ್ಞಯಾಗಾದಿಗಳು ಮತ್ತು ವಿಗ್ರಾಹಾರಾಧನೆಗಳನ್ನು ಪ್ರಭುತ್ವದ ಮೂಲಕ ಸಮಾಜದಲ್ಲಿ ಹೇರಲಾಯಿತು. ಜನಸಾಮಾನ್ಯರಿಗೆ ಈ ಸಿದ್ಧಾಂತಗಳನ್ನು ನಂಬಿಸಲಾಯಿತು. ಹೀಗೆ ಪ್ರಭುತ್ವದಿಂದ ಸೃಷ್ಟಿಸಿಕೊಂಡ ವೈದಿಕ ಚಿಂತನೆಗಳು ಸರ್ವಶ್ರೇಷ್ಠವಾದದ್ದು ಎನ್ನುವ ಭ್ರಮೆ ಹುಟ್ಟಿಕೊಂಡಿತು. ಧರ್ಮ ಗ್ರಂಥಗಳು, ದೇವಾಲಯಗಳು ಮತ್ತು ಪುರೋಹಿತಶಾಹಿ ಪ್ರಭುತ್ವವನ್ನು ನಿಯಂತ್ರಿಸುವ

ಶಕ್ತಿ ಕೇಂದ್ರಗಳಾದವು. ಸಾಮಾಜಿಕ ಪ್ರಭುತ್ವದ ಮೂಲಕ ಜಾತಿ, ವರ್ಣ ಮತ್ತು ಲಿಂಗತಾರತಮ್ಯವನ್ನು ವೈದಿಕ ಪ್ರಜ್ಞೆ ಸಮಾಜದಲ್ಲಿ ಬೆಳೆಸಲು ಸಹಕರಿಸಿತು. ವೈದಿಕ ಆಧಾರದಿಂದ ಮೇಲುವರ್ಗ ಮತ್ತು ಕೆಳವರ್ಗಗಳು ಸೃಷ್ಟಿಯಾದವು. ಆದ್ದರಿಂದ ಸಮಾಜದಲ್ಲಿ ಆರ್ಥಿಕ ಪ್ರಭುತ್ವದಿಂದ ಅಸಮಾನತೆ ಹುಟ್ಟಿಕೊಂಡಿತು. ಕೆಳವರ್ಗದ ಜನರಿಂದ ಆರ್ಥಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಹಾಗಾಗಿ ವೈದಿಕ ಪ್ರಜ್ಞೆ ಆರ್ಥಿಕ ಪ್ರಭುತ್ವವನ್ನು ಓಲೈಸಿ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿತು. ಹೀಗೆ ಶತಶತಮಾನಗಳಿಂದ ವೈದಿಕ ಪ್ರಜ್ಞೆ ಸಮಾಜದಲ್ಲಿ ವರ್ಣಶ್ರೇಣಿಯಿಂದ ಮೇಲುಕೀಳೆಂಬ ಜಾತಿಯನ್ನು ಸೃಷ್ಟಿಸಿದ್ದರಿಂದ ಹಣಕಾಸು, ಒಡೆತನ, ಆಸ್ತಿಯ ಧರ್ಮದ ಮೂಲಭೂತವಾದಗಳು ಪ್ರಭುತ್ವದ ಮೂಲಕ ಇನ್ನೂ ಜೀವಂತವಾಗಿ ಇರುವುದನ್ನು ಕಾಣಬಹುದಾಗಿದೆ. ಹಾಗಾಗಿ ವೈದಿಕ ಪ್ರಜ್ಞೆಗೆ ಆಧುನಿಕ ಕನ್ನಡ ಸಾಹಿತ್ಯ ವಿರೋಧವನ್ನು ವ್ಯಕ್ತಪಡಿಸಿದೆ.

ವೈದಿಕ ಪ್ರಭುತ್ವದ ಮೂಲಕ ಸ್ಥಾಪಿಸಿಕೊಂಡ ವೈದಿಕ ಧರ್ಮದ ದೇವಾಲಯಗಳಲ್ಲಿ ನಡೆಯುವ ಮೌಢ್ಯ ಸಂಪ್ರದಾಯಗಳು, ಮೂರ್ತಿಪೂಜೆ ಮತ್ತು ಧರ್ಮ ಸಂಘರ್ಷಗಳನ್ನು ಆಧುನಿಕ ಕನ್ನಡ ಸಾಹಿತ್ಯ ವಿರೋಧಿಸಿದೆ. ವೈದಿಕ ಪ್ರಜ್ಞೆಯು ಧರ್ಮ ಗ್ರಂಥಗಳ ಮೂಲಕ ಸೃಷ್ಟಿಸಿದ ಕರ್ಮ–ಪ್ರಾರಬ್ಧ, ನರಕ–ಸ್ವರ್ಗ, ಪಾಪ–ಪುಣ್ಯ, ಜನ್ಮ–ಜನ್ಮಾಂತರ ಮುಂತಾದ ಅಮೂರ್ತ ಕಲ್ಪನೆಗಳ ಬಗ್ಗೆ ಕನ್ನಡ ಸಾಹಿತ್ಯ ವಿರೋಧ ವ್ಯಕ್ತಪಡಿಸಿರುವುದನ್ನು ಕಾಣಬಹುದು. ವೈದಿಕ ಪ್ರಜ್ಞೆಯನ್ನು ಪ್ರಭುತ್ವದಲ್ಲಿ ಬೆಳೆಸಲು ಶ್ರಮಿಸುತ್ತಿರುವ ಪುರೋಹಿತಶಾಹಿಯ ಕುತಂತ್ರ ಬುದ್ಧಿಯನ್ನು ವ್ಯಂಗ್ಯ, ಹಾಸ್ಯ, ನಕಲಿ, ಗೇಲಿ ಮತ್ತು ಲೇವಡಿ ಮಾಡುವುದರ ಮೂಲಕ ವಿರೋಧವನ್ನು ವ್ಯಕ್ತಪಡಿಸಲಾಗಿದೆ. ಸಾಮಾಜಿಕ ಪ್ರಭುತ್ವದ ಮೂಲಕ ಜಾತಿಪದ್ಧತಿ, ವರ್ಣಪದ್ಧತಿ ಮತ್ತು ಮಹಿಳಾ ತಾರತಮ್ಯ ಸೃಷ್ಟಿಸಿದ ವೈದಿಕ ಪ್ರಜ್ಞೆಯ ಅಮಾನವೀಯ ಚಿಂತನೆಗಳನ್ನು ವಿರೋಧಿಸಿ ಸಮಾಜದಲ್ಲಿ ಸಮಾನತೆಯ ಮೌಲ್ಯಗಳನ್ನು ಬೆಳಸಲು ಕನ್ನಡ ಸಾಹಿತ್ಯ ಮುಂದಾಗಿರುವುದನ್ನು ಕಾಣಬಹುದು. ಪ್ರಭುತ್ವದ ಮೂಲಕ ಜನಸಮಾನ್ಯರಿಗೆ ಧರ್ಮ ಮತ್ತು ದೇವರ ಹೆಸರಿನಲ್ಲಿ ಆರ್ಥಿಕವಾಗಿ ವಂಚಿಸುವ ವೈದಿಕ ಪ್ರಜ್ಞೆಗೆ ಆಧುನಿಕ ಕನ್ನಡ ಸಾಹಿತ್ಯ ವಿರೋಧ ವ್ಯಕ್ತಪಡಿಸಿದೆ.

ಪ್ರಾಚೀನ ಕನ್ನಡ ಸಾಹಿತ್ಯ ವೈದಿಕ ವಿರೋಧಿ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತ ಬಂದಿದೆ. ಆದರೂ ಆಧುನಿಕ ಜಗತ್ತು ಹೆಚ್ಚಿದಂತೆ ವೈದಿಕ ಚಿಂತನೆಗಳು ಹೆಚ್ಚಾಗಿ ವೈಚಾರಿಕ ಪ್ರಜ್ಞೆ ಕುಗ್ಗುತ್ತ ನಡೆದಿದೆ. ಹಾಗಾಗಿ ಆಧುನಿಕ ಸಂದರ್ಭದಲ್ಲಿ ಕೂಡ ವೈದಿಕಶಾಹಿ ಪಂಚಮರ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತನ್ನ ಮೂಲಭೂತವಾದಿತನವನ್ನು ಬೆಳೆಸಿ ಹಿಂಸೆ, ರಾಜಕೀಯ, ಅಸಮಾನತೆ, ದಬ್ಬಾಳಿಕೆಯನ್ನು ಮಾಡುತ್ತಾ ಬಂದಿದೆ. ಹಾಗಾಗಿ ವೈದಿಕ ಪ್ರಜ್ಞೆಯ ಮೂಲಕ ಸೃಷ್ಟಿಯಾದ ಅಮಾನವೀಯ ವೈದಿಕ ಚಿಂತನೆಗಳನ್ನು ವಿರೋಧಿಸಲು ಆಧುನಿಕ ಕನ್ನಡ ಸಾಹಿತ್ಯ ಮುಂದಾಗಿದೆ.

ಫಲಿತಗಳು

೧. ಆಧುನಿಕ ಕನ್ನಡ ಸಾಹಿತ್ಯವು ವೈದಿಕ ವಿರೋಧಿ ಪ್ರಜ್ಞೆಯನ್ನು ವ್ಯಕ್ತಪಡಿಸಲು ಪ್ರಾಚೀನ ಕನ್ನಡ ಸಾಹಿತ್ಯ, ಮಧ್ಯಕಾಲೀನ ಸಾಹಿತ್ಯ ಮತ್ತು ಸುಧಾರಣಾವಾದಿ ಚಳುವಳಿಗಳಿಂದ ಪ್ರಭಾವ ಮತ್ತು ಪ್ರೇರಣೆ ಪಡೆದಿದೆ.

೨. ಶೂದ್ರರು ಸಂಸ್ಕೃತ ಭಾಷೆಯನ್ನು ಬಳಸಬಾರದು ಎಂಬ ಮನುಸ್ಮೃತಿಯ ನಿಯಮವನ್ನು ವಿರೋಧಿಸಿ ಸಂಸ್ಕೃತ ಪದಗಳನ್ನು ಸಾಹಿತ್ಯದಲ್ಲಿ ಬಳಕೆ ಮಾಡಲಾಗಿದೆ. ಹೀಗೆ ಸಂಸ್ಕೃತ ಪದಗಳನ್ನು ಬಳಸಲು ಕಾರಣ ಬ್ರಾಹ್ಮಣಶಾಹಿಯ ಭಾಷೆ ಮತ್ತು ಭಾಷಾಶೈಲಿಯಲ್ಲಿ ಹುದುಗಿರುವ ಜ್ಞಾನ ಮತ್ತು ಪ್ರಗತಿಪರ ಚಿಂತನೆಗಳನ್ನು ಪುನರ್‌ಸೃಷ್ಟಿಸಿ, ಸಂಸ್ಕೃತ ಭಾಷೆಯಿಂದಲೇ ವೈದಿಕಶಾಹಿಯನ್ನು ವಿರೋಧಿಸುವ ಭಾಷಾಶೈಲಿಯನ್ನು ಕಾಣಬಹುದಾಗಿದೆ.

೩. ವೈದಿಕ ಧರ್ಮವು ಸಮಾಜದಲ್ಲಿ ಭಾಷೆಯ ಮೂಲಕ ಸ್ಥಾಪಿಸಿದ ನಂಬಿಕೆಯ ಮೌಲ್ಯಗಳನ್ನು ಉಲ್ಲಂಘನೆ ಮಾಡಲಾಗಿದೆ. ಸಂಸ್ಕೃತ ಭಾಷೆಯನ್ನು ಬಳಸುವುದು ಮತ್ತು ಓದಲು ಮುಂದಾಗುವುದನ್ನು ಕಾಣಬಹುದಾಗಿದೆ. ಬ್ರಾಹ್ಮಣರಿಗೆ ಏಕವಚನದಲ್ಲಿ ಮಾತನಾಡಿಸುವುದನ್ನು ಗುರುತಿಸಬಹುದು.

೪. ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಬಳಸುವ ಭಾಷೆಯು, ರೂಢಿಯಲ್ಲಿ ಇರುವ ಶಿಷ್ಟಾಚಾರದ ಭಾಷೆಯನ್ನು ನಿರಾಕರಿಸಿ ತನ್ನ ಸಮುದಾಯ ಮತ್ತು ಪ್ರಾದೇಶಿಕ ಉಪಭಾಷೆಯನ್ನು ಬಳಸುವುದರ ಮೂಲಕ ಸಂಸ್ಕೃತ ಭಾಷೆಯನ್ನು ವಿರೋಧಿಸುವುದನ್ನು ಗುರುತಿಸಬಹುದು.

೫. ಸಮಾಜದಲ್ಲಿ ವೈದಿಕರ ಅನಿಷ್ಟ ಪದ್ಧತಿಗಳು ಮತ್ತು ಆಚರಣೆಗಳಿಗೆ ವಿರೋಧ ವ್ಯಕ್ತವಾಗುತ್ತಲೇ ಬಂದಿದೆ. ಈ ಹಿನ್ನೆಲೆಯಲ್ಲಿ ವೈದಿಕರ ಸಂಪ್ರದಾಯಗಳನ್ನು ಬೈಗುಳ ರೂಪದಲ್ಲಿ ಬಳಸಿ ಭಾಷಿಕ ಸಂವಹನದ ಮೂಲಕ ವ್ಯಕ್ತಿಗಳನ್ನು ನಿಂದಿಸುವುದು, ಹೀಯಾಳಿಸುವುದು ಕಾಣಬಹುದಾಗಿದೆ. ಉದಾಹರಣೆಗೆ: ಮುಂಡೆಮಗ, ಬೋಳೀಮಗನೆ, ಬೋಳೀಮಕ್ಕಳ, ಮುಂಡೆಗಂಡ್ರು, ಹರಕಲು ಕಚ್ಚೆ ಆಚಾರಿ, ಪಾಪಿ ಮುಂಡೆ, ತುತ್ ಬ್ರಾಮರಂತೆ, ನರಿಗಳು, ಕಲ್ಮಂಡೆಮಕ್ಕಳು ಹೀಗೆ ಬೈಗುಳಗಳಲ್ಲಿ ವೈದಿಕ ವಿರೋಧ ವ್ಯಕ್ತವಾಗಿರುವುದನ್ನು ಗುರುತಿಸಬಹುದಾಗಿದೆ.

೬. ವೈದಿಕ ಪುರೋಹಿತಶಾಹಿಯನ್ನು ವ್ಯಂಗ್ಯವಾಗಿ ಟೀಕಿಸುವುದರ ಮೂಲಕ ವೈದಿಕ ಧರ್ಮದ ಡಾಂಬಿಕ ನಂಬಿಕೆಗಳನ್ನು ವಿರೋಧಿಸುವುದನ್ನು ಕಾಣಬಹುದಾಗಿದೆ. ವೈದಿಕ ಭಾಷೆಯನ್ನು ವ್ಯಂಗ್ಯವಾಗಿ ಟೀಕಿಸಿದೆ. ವೈದಿಕ ಪ್ರಜ್ಞೆಯ ನೈತಿಕ ಮೌಲ್ಯಗಳನ್ನು ವ್ಯಂಗ್ಯವಾಗಿ ಹೇಳುವುದರ ಮೂಲಕ ವಿರೋಧ ವ್ಯಕ್ತಪಡಿಸಿದೆ. ಹೀಗೆ ಸಾಹಿತ್ಯದಲ್ಲಿ ಬಳಸಿರುವ ವ್ಯಂಗ್ಯ ಭಾಷಾ ಸಂವಹನವು ವೈದಿಕ ಧರ್ಮದ ಧಾರ್ಮಿಕ ವಿಧಿ ವಿಧಾನಗಳನ್ನು ವಿರೋಧ ವ್ಯಕ್ತಪಡಿಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದೆ.

೭. ಪುರಾಣ ಕಥೆಗಳ ಮೂಲಕ ವೈದಿಕರು ಸಮಾಜದಲ್ಲಿ ಮೂಲಭೂತವಾದವನ್ನು ಪ್ರತಿಪಾದಿಸಿತು. ಆದರೆ ಆಧುನಿಕ ಕನ್ನಡ ಸಾಹಿತ್ಯ ವರ್ತಮಾನದ ಹಲವು ಸಂದಿಗ್ಧತೆಗಳಿಗೆ

ಭೂತಕಾಲದ ಚಿಂತನೆಗಳ ಮೂಲಕ ಉತ್ತರವನ್ನು ನೀಡುವುದನ್ನು ಕಾಣಬಹುದಾಗಿದೆ. ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳಲ್ಲಿನ ಅನೇಕ ತಪ್ಪುಗಳನ್ನು ಸರಿಪಡಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯ ಆಶಯಗಳಿಗೆ ತಕ್ಕಂತೆ ವೈದಿಕ ಪುರಾಣ ಮೌಲ್ಯಗಳನ್ನು ಪುನರ್ ಮೌಲ್ಯೀಕರಿಸುವುದನ್ನು ಕಾಣಬಹುದಾಗಿದೆ.

೮. ಬ್ರಾಹ್ಮಣೇತರರು ಶಿಕ್ಷಣವನ್ನು ಪಡೆಯುವಂತಿಲ್ಲ ಎಂಬ ಬ್ರಾಹ್ಮಣರ ತಾತ್ವಿಕ ಚಿಂತನೆಯ ಪ್ರಜ್ಞೆಯನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ವಿರೋಧಿಸಿದ್ದಾರೆ. ಆಧುನಿಕ ಶಿಕ್ಷಣದ ಪ್ರಭಾವದಿಂದ ಬ್ರಾಹ್ಮಣತ್ವ, ಹಿಂದುತ್ವ, ಕೇಸರೀಕರಣ ಭಾರತೀಕರಣ ಮತ್ತು ಮೂಲಭೂತವಾದಗಳು ಶಿಕ್ಷಣದಲ್ಲಿ ಸೇರಿಕೊಂಡು ಶೂದ್ರರಿಗೆ ಮಾಡುತ್ತಿರುವ ಅನ್ಯಾಯಗಳನ್ನು ವಿರೋಧಿಸಿದೆ. ಆಧುನಿಕ ಶಿಕ್ಷಣವನ್ನು ಪಡೆದ ಬ್ರಾಹ್ಮಣವರ್ಗ ತನ್ನ ಮೂಲಭೂತವಾದವನ್ನು ಸಮಾಜದಲ್ಲಿ ಯಾವ ರೀತಿ ಬೆಳೆಸಲು ಮುಂದಾಗಿದೆ ಎಂಬುದರ ಬಗ್ಗೆ ವಿಮರ್ಶೆ, ವಿಶ್ಲೇಷಣೆ ಮಾಡಲಾಗಿದೆ. ವೈದಿಕ ಪ್ರಜ್ಞೆಯಿಂದ ಹುಟ್ಟಿಕೊಂಡ ಅಸ್ಪೃಶ್ಯತೆ, ಅಸಮಾನತೆ, ಅನ್ಯಾಯಗಳು ಮತ್ತು ದಬ್ಬಾಳಿಕೆ ದೌರ್ಜನ್ಯಗಳನ್ನು ಆಧುನಿಕ ಶಿಕ್ಷಣ ಪಡೆದ ದಲಿತರು ವಿರೋಧಿಸಲು ಮುಂದಾಗುವುದನ್ನು ನೋಡಬಹುದು.

೯. ಕೆಳವರ್ಗದ ಜನರ ಅನುಭವದಿಂದ ಪಡೆದ ಪಾರಂಪರಿಕ ಜ್ಞಾನವನ್ನು ವೈದಿಕ ಪ್ರಜ್ಞೆ ಶಿಕ್ಷಣ ಎಂದು ಪರಿಗಣಿಸಿಲ್ಲ. ಹಾಗಾಗಿ ಕೆಳವರ್ಗದ ಜನರ ವಿದ್ಯೆಯನ್ನು ಆಧುನಿಕ ಕನ್ನಡ ಸಾಹಿತ್ಯ ಚಿತ್ರಿಸಿದೆ. ಕೆಳವರ್ಗದ ಜನರ ಜ್ಞಾನದ ಮೇಲೆ ಮೇಲುವರ್ಗದ ಜನರು ಬದುಕುತ್ತಿರುವ ಚಿತ್ರಣಗಳನ್ನು ಸಾಹಿತ್ಯದಲ್ಲಿ ರಚಿಸಿದೆ. ವೈದಿಕ ಶಿಕ್ಷಣದ ಜ್ಞಾನಕ್ಕಿಂತ ಕೆಳವರ್ಗದ ಪಾರಂಪರಿಕ ಜ್ಞಾನದಲ್ಲಿ ಹೆಚ್ಚು ಮೌಲ್ಯಗಳನ್ನು ಕಾಣಬಹುದಾಗಿದೆ. ವೈದಿಕ ಪ್ರಜ್ಞೆಯಿಂದ ಪಡೆದ ಶಿಕ್ಷಣವು ಅನುಭವಗಳಿಂದ ಕೂಡಿಲ್ಲ ಎಂದು ಟೀಕಿಸಿದೆ. ಅಲಕ್ಷಿತ ವರ್ಗದ ಜನರು ಪಡೆಯುವ ಜ್ಞಾನವು ಅನುಭವಗಳಿಂದ ಕೂಡಿದೆ ಎಂಬವ ನಿಲುವನ್ನು ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಅಜ್ಞಾನ, ಅವೈಚಾರಿತೆಯನ್ನು ಸೃಷ್ಟಿ ಮಾಡುವ ವೈದಿಕ ಶಿಕ್ಷಣವು ಸಮಾಜದಲ್ಲಿ ಮನುಷ್ಯನಿಗೆ ಬದುಕಲು ಬೇಕಾದ ಜ್ಞಾನವನ್ನು ಕೊಡುವುದಿಲ್ಲ. ಕೆಳವರ್ಗದ ಜನರು ಶ್ರಮದಿಂದ ಬರುವ ವಿದ್ಯೆ ಮನುಷ್ಯನನ್ನು ಬದುಕಿಸುತ್ತದೆ ಎಂಬ ನಿಲುವುಗಳನ್ನು ಕಾಣಬಹುದಾಗಿದೆ.

೧೦. ಅವೈದಿಕ ಪರಂಪರೆಯ ಗುಡಿಗಳನ್ನು ದೇವಸ್ಥಾನಗಳಾಗಿ ವೈದಿಕ ಧರ್ಮ ಪರಿವರ್ತನೆ ಮಾಡಿತು. ದೇವಾಲಯಗಳು ಮತೀಯವಾದವನ್ನು ಹುಟ್ಟುಹಾಕಿ ಧರ್ಮ ಸಂಘರ್ಷಕ್ಕೆ ಸಾಕ್ಷಿಯಾದವು. ಪ್ರಭುತ್ವದ ಮೂಲಕ ಸ್ಥಾಪಿಸಿಕೊಂಡ ವೈದಿಕ ಧರ್ಮದ ದೇವಾಲಯಗಳಲ್ಲಿ ನಡೆಯುವ ಮೌಢ್ಯ ಸಂಪ್ರದಾಯಗಳು ಮತ್ತು ಮೂರ್ತಿಪೂಜೆಯನ್ನು ವಿರೋಧಿಸಲಾಗಿದೆ.

೧೧. ವೈದಿಕ ಧರ್ಮಪ್ರಜ್ಞೆ ಸೃಷ್ಟಿಸಿದ ಕರ್ಮ-ಪ್ರಾರಬ್ಧ, ನರಕ-ಸ್ವರ್ಗ, ಪಾಪ-ಪುಣ್ಯ, ಜನ್ಮ-ಜನ್ಮಾಂತರ ಮುಂತಾದ ಅಮೂರ್ತ ಭಯಗಳನ್ನು ವಿರೋಧಿಸಲಾಗಿದೆ. ಹಾಗೂ ಸಮಾಜದಲ್ಲಿ ಜಾತಿಭೇದ, ವರ್ಗವೈಷಮ್ಯ, ಬಡತನ, ಸುಲಿಗೆ, ಶೋಷಣೆ, ಮೌಢ್ಯಗಳಿಗೆ ವಿರೋಧ ವ್ಯಕ್ತಪಡಿಸಲಾಗಿದೆ.

ವೈದಿಕ ಧರ್ಮಪ್ರಜ್ಞೆ ಪ್ರಭುತ್ವದ ಜೊತೆ ನಡೆಸಿದ ಯಾಜಮಾನ್ಯದ ಕ್ರೌರ್ಯವನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರು ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

೧೨. ಪುರೋಹಿತಶಾಹಿಯನ್ನು ಯಾವುದೇ ಜಾತಿ ದ್ವೇಷ ಇಲ್ಲದೆ ಖಂಡಿಸಲಾಗಿದೆ. ಹಾಸ್ಯ, ವ್ಯಂಗ್ಯ, ನಕಲಿ, ಗೇಲಿ, ಲೇವಡಿ, ಕೊಂಕುನುಡಿ, ಮೂದಲಿಕೆಯ ಮೂಲಕ ಪುರೋಹಿತಶಾಹಿಯನ್ನು ವಿರೋಧಿಸಲಾಗಿದೆ. ಪ್ರಪಂಚದ ಎಲ್ಲ ಧರ್ಮಗಳಲ್ಲಿ ಪುರೋಹಿತಶಾಹಿ ಇದೆ ಎಂದು ವಿಶಾಲ ದೃಷ್ಟಿಕೋನದಲ್ಲಿ ಹೇಳಲಾಗಿದೆ. ಪುರೋಹಿತಶಾಹಿಯ ಹುನ್ನಾರ ಕ್ರೌರ್ಯಗಳು ಮತ್ತು ಸಂಪ್ರದಾಯ ಕಟ್ಟಲೆಗಳನ್ನು ವಿರೋಧಿಸಿದೆ.

೧೩. ವರ್ಣ ಸಮಾಜದ ಮೇಲೆ ವೈದಿಕ ಧರ್ಮ ನಿಂತಿದೆ. ಹಾಗಾಗಿ ವರ್ಣವನ್ನು ವೈದಿಕರು ಪ್ರತಿಪಾದಿಸಿದರು. ವರ್ಣವ್ಯವಸ್ಥೆ ಅಸಮಾನತೆಯನ್ನು ಹುಟ್ಟುಹಾಕಿತ್ತು. ಆದ್ದರಿಂದ ವೈದಿಕ ಪ್ರಜ್ಞೆಯನ್ನು ವಿರೋಧಿಸಲಾಗಿದೆ. ವೈದಿಕರು ರಚಿಸಿದ ಪುರಾಣ ಕಾವ್ಯವನ್ನೇ ವಸ್ತುವಾಗಿ ಇಟ್ಟುಕೊಂಡು ವೈದಿಕ ಧರ್ಮದ ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಲಾಗಿದೆ. ವರ್ಣಾಶ್ರಮದಿಂದ ಸಮಾಜದಲ್ಲಿ ಸೃಷ್ಟಿಯಾದ ಅಸಮಾನತೆ ಮತ್ತು ವೃತ್ತಿಗಳಲ್ಲಿನ ತಾರತಮ್ಯವನ್ನು ವಿಶ್ಲೇಷಣೆ ಮಾಡಲಾಗಿದೆ. ಸಾಮಾಜಿಕ ಪ್ರಭುತ್ವದಲ್ಲಿ ವರ್ಣಾಶ್ರಮದ ಪರಿಣಾಮದಿಂದ ಹಲವಾರು ಜಾತಿಗಳ ಹುಟ್ಟಿಗೆ ಕಾರಣವಾಗಿರುವ ಬಗ್ಗೆ ವಿವರಿಸಲಾಗಿದೆ. ಹಾಗಾಗಿ ವೈದಿಕ ಧರ್ಮ ಸೃಷ್ಟಿಸಿದ ಮತ್ತು ಪ್ರತಿಪಾದಿಸಿದ ವರ್ಣವ್ಯವಸ್ಥೆಯನ್ನು ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯದಲ್ಲಿ ವಿರೋಧಿಸುವ ನೆಲೆಗಳನ್ನು ಗುರುತಿಸಬಹುದಾಗಿದೆ.

೧೪. ಸಮಾಜದಲ್ಲಿ ಪ್ರಭುತ್ವವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಜಾತಿಪದ್ಧತಿಯನ್ನು ಸೃಷ್ಟಿ ಮಾಡಿದ ವೈದಿಕರ ಬೌದ್ಧಿಕ ಮನಸ್ಥಿತಿಯನ್ನು ಕನ್ನಡ ಸಾಹಿತ್ಯ ವಿರೋಧಿಸಿದೆ. ಕನ್ನಡ ಸಾಹಿತ್ಯ ಪ್ರಾರಂಭದಿಂದಲೂ ಜಾತಿಪದ್ಧತಿ ಮತ್ತು ಬ್ರಾಹ್ಮಣರ ಬಗ್ಗೆ ಬಂಡಾಯ ಮಾಡಿದೆ. ಹಾಗಾಗಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ಸಾಹಿತ್ಯವು ಜಾತಿಪದ್ಧತಿಯನ್ನು ವಿರೋಧಿಸುವ ಹಿನ್ನೆಲೆಯಲ್ಲೆ ರಚಿತವಾಗಿದೆ. ಕೆಳವರ್ಗದ ಜನರ ಮೇಲೆ ಜಾತಿಯ ಕಾರಣದಿಂದ ಮಾಡುತ್ತಿರುವ ಶೋಷಣೆಯನ್ನು ಪ್ರಶ್ನೆ ಮಾಡಲಾಗಿದೆ. ಹಾಗೂ ಶತಶತಮಾನಗಳಿಂದ ವೈದಿಕರು ಮತ್ತು ಸವರ್ಣೀಯರು ದಲಿತರ ಮೇಲೆ ಮಾಡಿಕೊಂಡು ಬಂದಿರುವ ಯಾಜಮಾನ್ಯವನ್ನು ವಿರೋಧಿಸಿದೆ.

೧೫. ಶತಶತಮಾನಗಳಿಂದ ಮಹಿಳೆಯನ್ನು ಶೂದ್ರರಷ್ಟೇ ಸಮಾನವಾಗಿ ಕಾಣುತ್ತಾ ಬಂದಿರುವ ವೈದಿಕ ಯಾಜಮಾನ್ಯವನ್ನು ಲೇಖಕರು ವಿರೋಧಿಸಿದ್ದಾರೆ. ವೈದಿಕ ಪುರಾಣಗಳು ಸೃಷ್ಟಿಸಿರುವ ಮಹಿಳೆಯ ಪಾತ್ರಗಳನ್ನು ಭಿನ್ನವಾಗಿ ಚಿತ್ರಿಸಲಾಗಿದೆ. ಮಹಿಳೆಯ ಪಾತ್ರಗಳಿಗೆ ಇರುವ ವೈದಿಕ ಪ್ರಜ್ಞೆಯ ಕಳಂಕವನ್ನು ತೆಗೆದುಹಾಕಲಾಗಿದೆ. ವೈದಿಕ ಧರ್ಮ ಸಾಮಾಜಿಕವಾಗಿ ಸ್ತ್ರೀಯರಿಂದ ಕಿತ್ತುಕೊಂಡಿರುವ ಹಕ್ಕುಗಳ ಬಗ್ಗೆ ಸಾಹಿತ್ಯ ಮಾತನಾಡುತ್ತದೆ. ಮೇಲು-ಕೀಳು ಎಂಬ ಭಾವನೆಯಿಂದ ಮಹಿಳೆಯನ್ನು ಶೋಷಣೆ ಮಾಡುತ್ತಿರುವ ಮೇಲುವರ್ಗದ ತಾತ್ವಿಕ ಚಿಂತನೆಗಳನ್ನು ವಿರೋಧಿಸಲಾಗಿದೆ.

೧೬. ವೈದಿಕರು ಸೃಷ್ಟಿಸಿದ ದೇವಾಲಯಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳಾಗಿವೆ. ಪುರೋಹಿತಶಾಹಿ ಕೆಳವರ್ಗದ ಜನರನ್ನು ವಂಚಿಸಿ ಸಾಲವನ್ನು ಕೊಡುವುದು ಮತ್ತು ಸಾಲವನ್ನು ವಸೂಲಿ ಮಾಡುವಷ್ಟು ಆರ್ಥಿಕ ಪ್ರಭುತ್ವವನ್ನು ಸಮಾಜದಲ್ಲಿ ಪಡೆದುಕೊಂಡ ಪುರೋಹಿತಶಾಹಿ, ಬ್ರಾಹ್ಮಣಶಾಹಿಯ ಆರ್ಥಿಕ ಹಿಡಿತವನ್ನು ವಿರೋಧಿಸಲಾಗಿದೆ. ವೈದಿಕ ಮೂಲಭೂತವಾದಗಳು ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಮತ್ತು ವಂಚನೆ ಬುದ್ಧಿಯಿಂದ ಕೆಳವರ್ಗದ ಜನರ ಆರ್ಥಿಕ ವ್ಯವಸ್ಥೆಯ ಮೇಲೆ ನಿಯಂತ್ರಣ ಸಾಧಿಸುತ್ತಿರುವ ವೈದಿಕ ಪ್ರಜ್ಞೆಯನ್ನು ವಿರೋಧಿಸಲಾಗಿದೆ. ಸನಾತನ ಸುಲಿಗೆ ಮನಸ್ಸುಗಳು ದಲಿತರನ್ನು ಆರ್ಥಿಕವಾಗಿ ಹೇಗೆ ಅವಕಾಶ ವಂಚಿತರನ್ನಾಗಿ ಹಾಗೂ ಸೌಲಭ್ಯ ವಂಚಿತರನ್ನಾಗಿ ಮಾಡುತ್ತದೆ ಎಂಬುದು ಆರ್ಥಿಕವಾಗಿ ದರೋಡೆ ಮಾಡುವುದರ ಬಗ್ಗೆ ಲೇಖಕರು ವಿರೋಧ ವ್ಯಕ್ತಪಡಿಸುವುದನ್ನು ಕಾಣಬಹುದಾಗಿದೆ. ದೇವರು, ದೇವಸ್ಥಾನ ಮತ್ತು ಪೂಜೆ, ಯಜ್ಞಯಾಗಾದಿಗಳ ಮೂಲಕ ಜನಸಾಮಾನ್ಯರನ್ನು ವಂಚಿಸಿ ಪುರೋಹಿತಶಾಹಿ ಹಣವನ್ನು ಸಂಗ್ರಹಿಸಿ ಆರ್ಥಿಕವಾಗಿ ಬಲಿಷ್ಠವಾಗುತ್ತಿರುವುದರ ಕುರಿತು ವಿರೋಧ ವ್ಯಕ್ತಪಡಿಸಲಾಗಿದೆ.

* * *

ಆಕರ ಗ್ರಂಥಗಳು

ಮೂಲ ಆಕರಗಳು
ಪೂರಕ ಆಕರಗಳು
ಲೇಖನಗಳು

ಆಕರ ಗ್ರಂಥಗಳು

ಮೂಲ ಆಕರಗಳು

ಕುವೆಂಪು, ೧೯೯೨, ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು.

ಕುವೆಂಪು, ೧೯೯೩, ನನ್ನ ದೇವರು ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು.

ಕುವೆಂಪು, ೧೯೯೫, ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು.

ಕುವೆಂಪು, ೧೯೯೭, ಶ್ರೀರಾಮಾಯಣ ದರ್ಶನಂ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ಕುವೆಂಪು, ೨೦೦೭, ಶ್ರೀರಾಮಕೃಷ್ಣ ಪರಮಹಂಸ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು.

ಕುವೆಂಪು, ೨೦೦೯, ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು.

ಕುವೆಂಪು, ೨೦೧೦, ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ದೇವನೂರು ಮಹಾದೇವ, ೧೯೯೭, ದೇವನೂರ ಮಹಾದೇವ ಅವರ ಕೃತಿಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು.

ದೇವನೂರ ಮಹಾದೇವ, ೨೦೧೩, ಎದೆಗೆ ಬಿದ್ದ ಅಕ್ಷರ, ಅಭಿನವ, ಬೆಂಗಳೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೧೯೯೨, ಕರ್ವಾಲೊ, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೧೯೯೩, ಕಿರಗೂರಿನ ಗಯ್ಯಾಳಿಗಳು, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೧೯೯೫, ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೧೯೯೫, ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೧೯೯೭, ಹುಲಿಯೂರಿನ ಸರಹದ್ದು, ಸ್ವರೂಪ, ನಿಗೂಢ ಮನುಷ್ಯರು, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೦೪, ಅಬಚೂರಿನ ಪೋಸ್ಟಾಫೀಸು, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೦೮, ಬೃಹನ್ನಳೆ ಸೋಮುವಿನ ಸ್ವಗತಲಹರಿ ಮತ್ತು ಇತರ ಕವನಗಳು, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೦೯, ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೧೦, ವಿಮರ್ಶೆಯ ವಿಮರ್ಶೆ, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೧೧, ಮಾಯಾಲೋಕ, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೧೧, ವ್ಯಕ್ತಿವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ, ಪುಸ್ತಕ ಪ್ರಕಾಶನ, ಮೈಸೂರು.

ಪೂರ್ಣಚಂದ್ರ ತೇಜಸ್ವಿ ಕೆ.ಪಿ., ೨೦೧೨, ಹೊಸ ವಿಚಾರಗಳು, ಪುಸ್ತಕ ಪ್ರಕಾಶನ, ಮೈಸೂರು.

ಶಿವಾರೆಡ್ಡಿ ಕೆ.ಸಿ. (ಸಂ.), ೨೦೦೦, ಕುವೆಂಪು ಸಮಗ್ರ ಕಾವ್ಯ ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾರೆಡ್ಡಿ ಕೆ.ಸಿ. (ಸಂ.), ೨೦೦೦, ಕುವೆಂಪು ಸಮಗ್ರ ಕಾವ್ಯ ಸಂಪುಟ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾರೆಡ್ಡಿ ಕೆ.ಸಿ. (ಸಂ.), ೨೦೦೩, ಕುವೆಂಪು ಸಮಗ್ರ ಗದ್ಯ ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾರೆಡ್ಡಿ ಕೆ.ಸಿ. (ಸಂ.), ೨೦೦೪, ಕುವೆಂಪು ಸಮಗ್ರ ಗದ್ಯ ಸಂಪುಟ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾರೆಡ್ಡಿ ಕೆ.ಸಿ. (ಸಂ.), ೨೦೦೪, ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೂರಕ ಆಕರಗಳು

ಅಂಗಡಿ ಎಸ್.ಎಸ್. (ಸಂ.), ೨೦೦೯, ಸರಳ ಕವಿರಾಜಮಾರ್ಗ, ಮಂಗಳಾ ಪ್ರಕಾಶನ, ಹೊಸಪೇಟೆ

ಅನಂತರಂಗಾಚಾರ್ .ಎನ್., ೨೦೦೫, ಪಂಪಭಾರತಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅನಂತಮೂರ್ತಿ ಯು.ಆರ್., ೧೯೨೧, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ.

ಅಗ್ರಹಾರ ಕಷ್ಣಮೂರ್ತಿ (ಸಂ.), ೨೦೦೮, ಡಾ. ಡಿ.ಆರ್. ನಾಗರಾಜ್ ಸಂಸ್ಕೃತಿ ಕಥನ, ಸಪ್ನ ಬುಕ್ ಹೌಸ್, ಬೆಂಗಳೂರು.

ಅಮರೇಶ ನುಗಡೋಣಿ, ೨೦೧೧, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅರವಿಂದ ಮಾಲಗತ್ತಿ, ೨೦೦೫, ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ, ೧೯೮೯, ದಲಿತ ಸಾಹಿತ್ಯ ಚಳುವಳಿಯ ತಾತ್ವಕ ಚಿಂತನೆಗಳು, ಹೊಸದಿಕ್ಕು ಪ್ರಕಾಶನ, ಬೆಂಗಳೂರು.

ಅಶೋಕ ಟಿ.ಪಿ., ೧೯೯೩, ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ, ಸಾಗರ.

ಅಶೋಕ ಟಿ.ಪಿ., ೧೯೮೮, ಸಾಹಿತ್ಯ ಮತ್ತು ಸಮಾಜ, ಅಕ್ಷರ ಪ್ರಕಾಶನ, ಸಾಗರ.

ಅಶೋಕ ಟಿ.ಪಿ., ೨೦೧೩, ಕುವೆಂಪು ಕೆಲವು ಅಧ್ಯಯನಗಳು, ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು.

ಅಶೋಕ ಟಿ.ಪಿ., ೨೦೧೧, ತೇಜಸ್ವಿ ಕಥನ, ಅಕ್ಷರ ಪ್ರಕಾಶನ ಹಗ್ಗೋಡು.

ಆಚಾರ್ಯ ಪಾ.ವೆಂ. ಬ್ರಾಹ್ಮಣರೇನು ಮಾಡಬೇಕು?, ೨೦೦೨, ಅಂಕಿತ ಪುಸ್ತಕ, ಬೆಂಗಳೂರು.

ಆಮೂರ ಜಿ.ಎಸ್., ೨೦೧೫, ಕುವೆಂಪು: ಯುಗದ ಕವಿ, ಮನೋಹರ ಗ್ರಂಥ ಮಾಲಾ ಧಾರವಾಡ.

ಇಂದಿರಾ ಆರ್, ೧೯೯೫, ಭಾರತೀಯ ಸಮಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಉದ್ದಂಡಯ್ಯ, ೨೦೧೫, ಕುವೆಂಪು ಕಥನ, ವಿಹಾ ಪುಸ್ತಕ, ಬೆಂಗಳೂರು.

ಎರ್ಮಾಕೋವ ಎ.ವಿ. ರಾತ್ನಿಕವ್, ೧೯೮೮, ವರ್ಗ, ಹೋರಾಟ ಎಂದರೇನು?, ಪ್ರಗತಿ ಪ್ರಕಾಶನ, ಮಾಸ್ಕೊ.

ಕಂಚ ಐಲಯ್ಯ (ಮೂಲ), ಮಂಗ್ಳೂರ ವಿಜಯ (ಅನು.), ೨೦೦೦, ನಾನೇಕೆ ಹಿಂದೂ ಅಲ್ಲ, ಒಕೆಬಿಸಿ ಪ್ರಕಾಶನ, ಬೆಂಗಳೂರು.

ಕರೀಗೌಡ ಬೀಚನಹಳ್ಳಿ, ೨೦೧೧, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಬದುಕು–ಬರಹ, ಸಾಹಿತ್ಯ ಅಕಾದೆಮಿ, ನವದೆಹಲಿ.

ಕರೀಗೌಡ ಬೀಚನಹಳ್ಳಿ, ೨೦೦೭, ಸಾಹಿತ್ಯ ವಿಸ್ತಾರ, ಅಜಂತ ಪ್ರಕಾಶನ, ಬೆಂಗಳೂರು.

ಕಲಬುರ್ಗಿ ಎಂ.ಎಂ., ೨೦೦೯, ಕನ್ನಡ ಸಂಶೋಧನ ಶಾಸ್ತ್ರ, ಸಪ್ನ ಬುಕ್ ಹೌಸ್, ಬೆಂಗಳೂರು.

ಕಾರ್ಲ್ ಮಾರ್ಕ್ಸ್, ಗೋಪಾಲಕೃಷ್ಣ ರಾವ್ (ಕನ್ನಡಕ್ಕೆ), ೨೦೧೮, ಮತಧರ್ಮದ ಕುರಿತು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಕಾರ್ಲೋಸ್ ಎಸ್. (ಸಂ.), ೨೦೧೬, ಪೆರಿಯಾರ್ ವಿಚಾರಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ಕೀರ್ತಿನಾಥ ಕುರ್ತಕೋಟಿ, ೨೦೦೪, ಸಾಹಿತ್ಯದಲ್ಲಿ ವೈಚಾರಿಕತೆ, ಮನೋಹರ ಗ್ರಂಥಾಲಯ, ಧಾರವಾಡ.

ಕುಮಾರ ಕಕ್ಕಯ್ಯ ಪೋಳ, ೨೦೧೬, ಚಾತುರ್ವರ್ಣ ಧರ್ಮ ದರ್ಶನ, ಲೋಹಿಯಾ ಪ್ರಕಾಶನ, ಬಳ್ಳಾರಿ.

ಕುಲಕರ್ಣಿ ಪ್ರ.ವಿ., ಹರಿಕೃಷ್ಣಭರಣ್ಯ, ಸದಾಶಿವ ಬಿ., ೧೯೮೯, ಸಂಶೋಧನ ವಿಧಾನ, ಪ್ರಭಸ ಬಿಡುಗಡೆ, ಮದುರೈ.

ಕುಲಕರ್ಣಿ ಆರ್.ವಿ., ೨೦೦೪, ಕಬ್ಬಿಗರ ಕಾವಂ. ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೃಷ್ಣಕುಮಾರ್ ಸಿ.ಪಿ., ೧೯೯೫, ಕುವೆಂಪು ಸಾಹಿತ್ಯ ಸಂಧಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಕೇಶವಶರ್ಮ ಕೆ., ೨೦೧೪, ವಿಮರ್ಶೆಯ ಪರಿಕಲ್ಪನೆಗಳು, ದೇಸಿ ಪುಸ್ತಕ, ಬೆಂಗಳೂರು.

ಕೋ. ಚೆನ್ನಬಸಪ್ಪ (ಸಂ.), ೨೦೦೨, ಶ್ರೀ ಕುವೆಂಪು ಸಂದರ್ಶನ ಮತ್ತು ಪ್ರಸಂಗಗಳು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಗಂಗಾನಾಯಕ್ ಕೆ.ಎನ್. (ಪ್ರ.ಸಂ.), ೨೦೧೧, ಪ್ರಾಚೀನ ಕನ್ನಡ ಸಾಹಿತ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಗಣೇಶನ್ ಎಸ್., ೧೯೮೨, ದಲಿತಸಾಹಿತ್ಯ ಚಳವಳಿ, ಪಂಚಮ ಪ್ರಕಾಶನ, ಬೆಂಗಳೂರು.

ಗುರುಪಾದ ಮರಿಗುದ್ದಿ, ೧೯೮೯, ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಮೈಸೂರು.

ಗೋಪಾಲಕೃಷ್ಣಯ್ಯ ಕೆ.ಎಲ್., ೨೦೧೧, ಭಾಷೆಯ ಬೆಳಕು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಗೌರೀಶ ಕಾಯ್ಕಿಣಿ, ೧೯೯೯, ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಂದ್ರ ಪೂಜಾರಿ ಎಂ., ಚಂದ್ರಶೇಖರ್ ಟಿ.ಆರ್., ಶ್ರೀಧರ ವಿ.ಎಸ್. (ಸಂ.), ೨೦೧೫, ಪರಿಭಾಷಾ ಕೋಶ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ಚಂದ್ರಿಕಾ (ಸಂ.), ೨೦೧೬, ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ, ಬೆಂಗಳೂರು.

ಚಂದ್ರೇಗೌಡ ಬಿ., ರಾಜು ಬಿ.ಎಲ್, ೨೦೦೭, ತೇಜಸ್ವಿ ನೆನಪು ಸಂಗ್ರಹ ಲೇಖನಗಲು, ರಂಗ ಭಾರತಿ, ಬಳ್ಳಾರಿ.

ಚಂದ್ರಪ್ಪ. ಸಿ., ಪ್ರದೀಪ ಬಿ., (ಕನ್ನಡಕ್ಕೆ), ೨೦೧೪, ವೈದಿಕ ಯುಗ, ಚಿಂತನ ಪುಸ್ತಕ, ಬೆಂಗಳೂರು.

ಚಂದ್ರ ಪೂಜಾರಿ ಎಂ., ೨೦೦೫, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರ ಪೂಜಾರಿ ಎಂ., ೨೦೦೮, ಸಂಶೋಧನ ಜವಾಬ್ದಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ ನಂಗಲಿ ವಿ., ೨೦೦೫, ಆಲಿಸಯ್ಯ ಮಲೆಯ ಕವಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಚಕ್ಕರೆ ಶಿವಶಂಕರ್ (ಸಂ.), ೨೦೦೪, ಸಹ್ಯಾದ್ರಿಯ ಸೂರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಕ್ರವರ್ತಿ ಜಿ. ಎಸ್., ೧೯೯೮, ಋಕ್‌ಸಂಹಿತಾಸಾರ, ಸಾಹಿತ್ಯ ಅಕಾದೆಮಿ, ನವದೆಹಲಿ.

ಚಕ್ರಕೋಡಿ ಈಶ್ವರಶಾಸ್ತ್ರೀ (ಅನು.), ೧೯೯೪, ಮನುಸ್ಮೃತಿ, ಸಮಾಜ ಪುಸ್ತಕಾಲಯ, ಧಾರವಾಡ.

ಚನ್ನಮ್ಮ ಕೆ.ಸಿ., ೨೦೧೦, ಕುವೆಂಪು ಬಿಂಬಿಸಿದ ಆರ್ಥಿಕ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಲಪತಿ ಆರ್., ೨೦೧೬, ಕುವೆಂಪು ಬರೆಹಗಳ ಓದಿನ ರಾಜಕಾರಣ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ಚಿದಾನಂದಮೂರ್ತಿ ಎಂ., ೧೯೭೫, ವಚನ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು..

ಚಿದಾನಂದಮೂರ್ತಿ ಎಂ., ೨೦೧೩, ಸಂಶೋಧನೆ, ತಾತ್ವಿಕ ಮತ್ತು ಆನ್ವಯಿಕ, ಸಪ್ನ ಬುಕ್ ಹೌಸ್, ಬೆಂಗಳೂರು.

ಚಿನ್ನಸ್ವಾಮಿ ಸೋಸಲೆ ಎನ್., ೨೦೦೮, ಭಾರತೀಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜಗದೀಶ ಕೊಪ್ಪ (ಅನು.) ಡಾ. ಬಿ.ಆರ್. ಅಂಬೇಡ್ಕರ್ (ಮೂಲ), ೨೦೧೮, ಬುದ್ಧ ಮತ್ತು ಅವನ ಧಮ್ಮ, ಪಾಲಿ ಇನ್ಸ್‌ಟಿಟ್ಯೂಟ್, ಕಲಬುರಗಿ.

ಜವರಯ್ಯ ಮ.ನ., ೨೦೦೮, ದಲಿತಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು, ಬಹುಜನ ಮಾಧ್ಯಮ ಕೇಂದ್ರ, ಮೈಸೂರು.

ಜಾತಿ ವಿನಾಶ ಸಮಿತಿ, ೨೦೧೬, ಜಾತಿ ವ್ಯವಸ್ಥೆಯ ಇತಿಹಾಸ ಹಾಗೂ ಜಾತಿ ವಿನಾಶದ ರೂಪುರೇಷೆ, ಕರ್ನಾಟಕ ಜನಶಕ್ತಿ, ಬೆಂಗಳೂರು.

ಜಾನ್ ವೆಸ್ಲಿ ಟಿ. (ತೆಲುಗಿನಲ್ಲಿ), ಸುಜ್ಞಾನಮೂರ್ತಿ ಬಿ. (ಕನ್ನಡಕ್ಕೆ), ೨೦೧೬, ಅಸ್ಪೃಶ್ಯತೆ ವೈಕಂ ಸತ್ಯಾಗ್ರಹ, ಪೆರಿಯಾರ್, ಲಡಾಯಿ ಪ್ರಕಾಶನ, ಗದಗ.

ಝಾ ಡಿ.ಎನ್. (ಮೂಲ), ಪ್ರದೀಪ ಕುಮಾರ ಶೆಟ್ಟಿ ಕೆ. (ಕನ್ನಡಕ್ಕೆ), ೨೦೧೯, ಹಿಂದೂ ಅಸ್ಮಿತೆಗಾಗಿ ಹುಡುಕಾಟ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಡಿ.ವಿ.ಜಿ., ೧೯೯೮, ಸಾಹಿತ್ಯ ಶಕ್ತಿ, ಕಾವ್ಯಾಲಯ ಪ್ರಕಾಶಕರು, ಮೈಸೂರು.

ತಾರಿಣಿ ಚಿದಾನಂದ, ೨೦೦೭, ಮಗಳು ಕಂಡ ಕುವೆಂಪು, ಪುಸ್ತಕ ಪ್ರಕಾಶನ, ಮೈಸೂರು.

ತಿಪ್ಪೇರುದ್ರಸ್ವಾಮಿ ಎಚ್., ೧೯೯೩, ಕುವೆಂಪು ಅವರ ವೈಚಾರಿಕತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ತಿಪ್ಪೇರುದ್ರಸ್ವಾಮಿ ಎಚ್., ೨೦೦೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ತಿಪ್ಪೇರುದ್ರಸ್ವಾಮಿ ಎಚ್., ೧೯೬೯, ಕುವೆಂಪು ಅವರ ನಾಟಕಗಳು, ಗೀತಾ ಬುಕ್ ಹೌಸ್, ಮೈಸೂರು.

ದಂಡಪ್ಪ ಎಚ್. (ಸಂ.), ೨೦೧೬, ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ದುರ್ಗಾದಾಸ್ ಕೆ.ಆರ್., ಆನಂದಮೂರ್ತಿ ಜಿ.ವಿ. (ದಾಖಲಿಸಿದವರು), ೧೯೯೬, ಮೂರು ದಲಿತ ಕಮ್ಮಟಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ದೇಜಗೌ, ೧೯೮೫, ರಾಷ್ಟ್ರಕವಿ ಕುವೆಂಪು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ದೇಜಗೌ, ೧೯೯೧, ಕುವೆಂಪು ಶೈಲಿ, ಸಹ್ಯಾದ್ರಿ ಪ್ರಕಾಶನ, ಮೈಸೂರು.

ದೇಜಗೌ, ೨೦೦೨. ಕುವೆಂಪು ಪ್ರಣೀತ ಮಾನವತಾ ಸಿದ್ಧಾಂತ, ಸಹ್ಯಾದ್ರಿ ಪ್ರಕಾಶನ, ಮೈಸೂರು.

ದೇಜಗೌ, ೨೦೦೬, ಕುವೆಂಪು ದರ್ಶನ ಸಂಪುಟ ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇಜಗೌ, ೨೦೧೦, ಮಹಾಕವಿ ಕುವೆಂಪು ದರ್ಶನ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

ದೇಜಗೌ, ೨೦೧೦, ಕುವೆಂಪು ದರ್ಶನ ವಿಚಾರ, ಸಪ್ನ ಬುಕ್ ಹೌಸ್, ಬೆಂಗಳೂರು.

ದೇಜಗೌ, ೨೦೧೪, ಕುವೆಂಪು ಸಾಹಿತ್ಯ ವಿಲೋಕನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ದೇವಯ್ಯ ಹರವೆ, ೨೦೧೫, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ದೇವಿಪ್ರಸಾದ್ ಚಟ್ಟೋಪಾಧ್ಯಾಯ (ಮೂಲ), ಕಕ್ಕಿಲ್ಲಾಯ ಬಿ.ವಿ. (ಅನು.), ೧೯೮೯, ಪ್ರಾಚೀನ ಭಾರತದಲ್ಲಿ ಭೌತಿಕವಾದ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ದೇವಿಪ್ರಸಾದ್ ಚಟ್ಟೋಪಾಧ್ಯಾಯ (ಮೂಲ), ಕಕ್ಕಿಲ್ಲಾಯ ಬಿ.ವಿ. (ಅನು.), ೧೯೯೪, ಭಾರತೀಯ ದರ್ಶನಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ದೇವಿಪ್ರಸಾದ್ ಚಟ್ಟೋಪಾಧ್ಯಾಯ (ಸಂ.), ಕುಮಾರಪ್ಪ ಜಿ. (ಅನು.), ೨೦೧೩, ಪ್ರತಿರೋಧ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ದೇವಿಪ್ರಸಾದ್ ಚಟ್ಟೋಪಾಧ್ಯಾಯ (ಸಂ.), ಗಾಯತ್ರಿ ಎನ್. (ಅನು.), ೨೦೧೯, ಆರಂಭಿಕ ಹಂತಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ದೊಡ್ಡೇಗೌಡ ಆರ್. (ಸಂ.), ೨೦೧೫, ತೇಜಸ್ವಿಯನ್ನು ಹುಡುಕುತ್ತಾ..., ಸಪ್ನ ಬುಕ್ ಹೌಸ್, ಬೆಂಗಳೂರು.

ಧನಂಜಯ ಜೀವಾಳ ಬಿ.ಕೆ., ೨೦೧೧, ಕಾಡಿನ ಸಂತ–ತೇಜಸ್ವಿ ಕೆಲವು ನೆನಪುಗಳು, ಅಂಕಿತ ಪುಸ್ತಕ, ಬೆಂಗಳೂರು.

ನಟರಾಜ ಬೂದಾಳು ಎಸ್., ೨೦೧೬, ಕನ್ನಡ ಕಾವ್ಯಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನರಹಳ್ಳಿ ಬಾಲಸುಬ್ರಹ್ಮಣ್ಯ, ೨೦೧೧, ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು.

ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಾವ್ಯ ಸಂಸ್ಕೃತಿ ಚರಿತ್ರೆಯ ರೂಪಕ, ಅಂಕಿತ ಪ್ರಕಾಶನ, ಬೆಂಗಳೂರು.

ನರೇಂದ್ರ ರೈ ದೇರ್ಲ (ಸಂ.), ೨೦೧೫, ತೇಜಸ್ವಿ ಪತ್ರಗಳು, ಕನಸು ಪ್ರಕಾಶನ, ದಕ್ಷಿಣ ಕನ್ನಡ.

ನಾಗಭೂಷಣಸ್ವಾಮಿ ಓ.ಎಲ್. (ಸಂ.), ೨೦೦೪, ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಲಯ, ಹಂಪಿ.

ನಾಗಭೂಷಣ ಡಿ.ಎಸ್. (ಸಂ.), ೨೦೦೫, ಕುವೆಂಪು ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ.

ನಾಗಭೂಷಣ ಡಿ.ಎಸ್., ೨೦೦೭, ಕುವೆಂಪು ಸಾಹಿತ್ಯ ದರ್ಶನ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

ನಾಗಭೂಷಣ ಸ್ವಾಮಿ ಓ. ಎಲ್., ೧೯೯೮, ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬೆಂಗಳೂರು.

ನಾಗರಾಜ್ ಡಿ. ಅರ್., ೨೦೧೩, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು.

ನಾಗರಾಜ್ ಡಿ.ಆರ್., ೨೦೦೯, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು.

ನಾಗರಾಜ್ ಡಿ.ಆರ್. (ಲೇ.), ಹಿರೇಮಠ ಎಸ್.ಎಸ್. (ಸಂ.), ೧೯೯೬, ಭಾರತೀಯ ನಾಸ್ತಿಕ ದರ್ಶನಗಳು, ವಿಚಾರ ಸಾಹಿತ್ಯ ೧೯೯೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾರ್ಲ ವಿ.ಆರ್., ಗಂಗಾಧರ ಮೂರ್ತಿ (ಕನ್ನಡಕ್ಕೆ), ೨೦೦೩, ವೈಚಾರಿಕ ಬರಹಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ನಾರಾಯಣ ಕೆ.ವಿ., ೨೦೧೮, ಕನ್ನಡ ಜಗತ್ತು, ಅರ್ಧಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., ೧೯೯೭, ಬೇರು–ಕಾಂಡ–ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು.

ನಾರಾಯಣ ಕೆ.ವಿ. (ಸಂ.), ೨೦೦೯, ಭಾಷೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., ೨೦೧೫, ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

ನಾರಾಯಣ ಪಿ.ವಿ. (ಸಂ.), ೨೦೦೬, ಶಾಂತಿನಾಥ–ಆಂಡಯ್ಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಸ್ವಾಮಿ ಜ.ಹೊ., (ಸಂ.), ೨೦೦೪, ಚೈತನ್ಯರೂಪಿ ಕುವೆಂಪು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ನಾರಾಯಣ ಸ್ವಾಮಿ ಜ.ಹೊ., (ಸಂ.), ೨೦೧೬, ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು, ಮಾನವ ಪ್ರಕಾಶನ, ಹಾಸನ.

ಪಂಡಿತ ಕೆ. ರಾಠೋಡ, ೨೦೧೮, ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ, ಅರವಿಂದ್ ಇಂಡಿಯಾ, ಬೆಂಗಳೂರು.

ಪದ್ಮಾ ರಾಮಚಂದ್ರನ್, ವಸಂತ ರಾಮಕುಮಾರ್ (ಮೂಲ), ಮಹಾಬಲೇಶ್ವರ ರಾವ್ (ಅನು.) ೨೦೧೬, ಭಾರತದಲ್ಲಿ ಶಿಕ್ಷಣ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

ಪರಮೇಶ್ವರಭಟ್ಟ ವಿ.ಎಸ್., ೧೯೯೬, ರಸಮಷಿ ಕುವೆಂಪು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪ್ರಧಾನ್ ಗುರುದತ್ತ (ಪ್ರ. ಸಂ.), ನರಸಿಂಹಮೂರ್ತಿ ಎ.ವಿ. (ಸಂ.), ೨೦೧೦, ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ಪ್ರದೀಪ ಕುಮಾರ ಶೆಟ್ಟಿ ಕೆ. (ಕನ್ನಡಕ್ಕೆ), ೨೦೧೯, ಹಿಂದೂ ಅಸ್ಮಿತೆಗಾಗಿ ಹುಡುಕಾಟ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಪ್ರಭುಶಂಕರ (ಅನು.), ಹಿರಿಯಣ್ಣ ಎಂ. (ಮೂಲ), ೧೯೭೩, ಭಾರತೀಯ ತತ್ವಶಾಸ್ತ್ರದ ರೂಪು ರೇಖೆಗಳು, ಅಭಿನವ, ಪ್ರಕಾಶನ, ಬೆಂಗಳೂರು.

ಪ್ರಭುಶಂಕರ, ೧೯೯೪, ಕುವೆಂಪು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.

ಪ್ರಭುಶಂಕರ, ೨೦೦೨, ಹೀಗಿದ್ದರು ಕುವೆಂಪು, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು.

ಪ್ರಸಾದ್ ರಕ್ಷಿದಿ, ೨೦೧೦, ನಮ್ಮ ನಡುವಿನ ತೇಜಸ್ವಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಶಾಂತ ನಾಯಕ ಜಿ., ೨೦೦೭, ಕನ್ನಡ ಸಾಹಿತ್ಯ ಮತ್ತು ದಲಿತ ಪರಂಪರೆ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಪ್ರಹ್ಲಾದ್ ಡಿ.ವಿ. (ಸಂ.), ಪೂರ್ಣಚಂದ್ರ ತೇಜಸ್ವಿ ವಿಶೇಷ ಸಂಚಿಕೆ, ಸಂಚಯ, ತ್ರೈಮಾಸಿಕ ಸಂಪು: ೧೧, ಸಂಚಿಕೆ: ೪,(೫೭), ಜೂನ್ ೨೦೦೨.

ಪುಟ್ಟಯ್ಯ ಬಿ.ಎಂ., ೨೦೧೦, ಜಾತಿ ವಿಶ್ಲೇಷಣೆಯ ಸಮಸ್ಯೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುಟ್ಟಯ್ಯ ಬಿ.ಎಂ., ೨೦೧೫, ಸಂಶೋಧನೆ ತಾತ್ವಿಕ ಆಯಾಮಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಷೋತ್ತಮ ಬಿಳಿಮಲೆ (ಕನ್ನಡಕ್ಕೆ), ಅಬ್ರಹಾಂ ಟಿ. ಕೋವೂರ್, ೨೦೧೪, ದೇವರು, ದೆವ್ವ ವಿಜ್ಞಾನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಪೋತೆ ಎಚ್.ಟಿ. (ಸಂ.),೨೦೦೭, ವಿಚಾರ ಸಾಹಿತ್ಯ ೨೦೦೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಪೆರಿಯಾರ್ (ಮೂಲ), ಸುಜ್ಞಾನಮೂರ್ತಿ ಬಿ. (ಕನ್ನಡಕ್ಕೆ), ೨೦೧೬, ಸ್ವಾಭಿಮಾನದ ಮದುವೆಗಳು, ಲಡಾಯಿ ಪ್ರಕಾಶನ, ಗದಗ.

ಬರಗೂರು ರಾಮಚಂದ್ರಪ್ಪ, ೧೯೮೧, ಸಾಹಿತ್ಯ ಮತ್ತು ರಾಜಕಾರಣ, ಸಮತಾ ಪ್ರಕಾಶನ, ಹುಬ್ಬಳ್ಳಿ.

ಬಸವರಾಜ ಸಬರದ, ೧೯೯೨, ವಚನ ಚಳವಳಿ, ಪಲ್ಲವಿ ಪ್ರಕಾಶನ, ಗುಲಬರ್ಗಾ.

ಬಸವಾರಾಧ್ಯ ಎನ್. (ಪ್ರ. ಸಂ.), ೨೦೦೧, ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಬ್ರಜ್ ರಂಜನ್ ಮಣಿ, ಪಮೇಲಾ ಸರ್ದಾಲ್ (ಸಂ.), ಬಿ. ಸುಜ್ಞಾನಮೂರ್ತಿ (ಕನ್ನಡಕ್ಕೆ), ೨೦೧೪, ಸಾವಿತ್ರಿಬಾಯಿ ಫುಲೆ, ಪ್ರಜ್ವಲ ಪ್ರಕಾಶನ, ಜಿಗಣಿ.

ಬಾಲಗೋಪಾಲ್ ಕೆ. (ತೆಲುಗಿನಲ್ಲಿ), ಸುಜ್ಞಾನಮೂರ್ತಿ ಬಿ. (ಕನ್ನಡಕ್ಕೆ), ೨೦೧೫, ಮನುಸ್ಮೃತಿ ಅಪರಾಧ-ಶಿಕ್ಷೆ, ಲಡಾಯಿ ಪ್ರಕಾಶನ, ಗದಗ.

ಬೇಂದ್ರೆ ದ. ರಾ., ೧೯೭೮, ಮತ ಧರ್ಮ ಮತ್ತು ಆಧುನಿಕ ಮಾನವ, ಸಮಾಜ ಪುಸ್ತಕಾಲಯ, ಧಾರವಾಡ.

ಬೈರೇಗೌಡ ಎಂ., ಸತ್ಯನಾರಾಯಣ ಬಿ.ಆರ್. (ಸಂ.), ೨೦೧೨, ತೇಜಸ್ವಿ ಬದುಕು - ಬರಹ, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ.

ಭಂಡಾರಿ ಆರ್.ವಿ., ೨೦೦೫, ಪ್ರಭುತ್ವ ಮತ್ತು ಸಾಹಿತ್ಯ, ಹೇಮಂತ ಸಾಹಿತ್ಯ, ಬೆಂಗಳೂರು.

ಭಗವತ್ ಶರಣ ಉಪಾಧ್ಯಾಯ (ಮೂಲ), ಪ್ರಧಾನ್ ಗುರುದತ್ತ (ಅನು.), ೨೦೦೪, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಭಗವಾನ್ ಕೆ.ಎಸ್., ೧೯೯೦, ಕುವೆಂಪು ಯುಗ, ಸಹ್ಯಾದ್ರಿ ಪ್ರಕಾಶನ, ಮೈಸೂರು.

ಭಗವಾನ್ ಕೆ.ಎಸ್., ೧೯೯೩, ಬದಲಾವಣೆ, ಮಹಿಮ ಪ್ರಕಾಶನ, ಮೈಸೂರು.

ಭಗವಾನ್ ಕೆ.ಎಸ್., ೨೦೦೯, ಅನನ್ಯತೆ, ಶ್ರುತಿಲೋಕ ಪ್ರಕಾಶನ, ಮೈಸೂರು.

ಭಗವಾನ್ (ಅನು.), ಸಾಮಿ ಧರ್ಮತೀರ್ಥ (ಮೂಲ), ೧೯೯೪, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮ ಪ್ರಕಾಶನ, ಮೈಸೂರು.

ಭಟ್ಟ ಜಿ.ಎಸ್. (ಸಂ.),೧೯೮೯, ಕುವೆಂಪು ಸಾಹಿತ್ಯ ಕೆಲವು ನೋಟಗಳು, ಚೇತನ ಬುಕ್ ಹೌಸ್, ಮೈಸೂರು.

ಭಾಗ್ಯನಾರಾಯಣ, ೨೦೦೭, ಕುವೆಂಪು ನಾಟಕಗಳಲ್ಲಿ ವರ್ಣ–ವರ್ಗ ಸಂಘರ್ಷ(ಎಂ.ಫಿಲ್. ಗ್ರಂಥ), ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭೈರಪ್ಪ (ಪ್ರ.ಸಂ.) ೨೦೦೪, ಕುವೆಂಪು: ಪುನರ್ಮನನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಬೋರಲಿಂಗಯ್ಯ ಹಿ.ಚಿ., (ಸಂ.), ೨೦೧೦, ಕುವೆಂಪು: ಮಹಿಳಾ ಮಂಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೋರಲಿಂಗಯ್ಯ ಎನ್., ೨೦೦೫, ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು, ದಾರಿದೀಪ ಪ್ರಕಾಶನ, ಮೈಸೂರು.

ಮಲ್ಲಿಕಾ ಘಂಟಿ (ಸಂ.), ೨೦೦೮, ದಲಿತ ಸಾಹಿತ್ಯ ಚಳವಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಮಹಾಬಲೇಶ್ವರ ರಾವ್ (ಅನು.). ೨೦೧೬, ಭಾರತದಲ್ಲಿ ಶಿಕ್ಷಣ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

ಮಹಾದೇವಯ್ಯ ಪಿ., ೨೦೦೦, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಯ್ಯ ಪಿ. (ಸಂ.), ೨೦೦೬, ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಪ್ಪ ಎನ್.ಜಿ., ೨೦೧೭, ಲಿಂಗಾಯತರು ಹಿಂದೂಗಳಲ್ಲ ಮತ್ತು ಇತರ ಲೇಖನಗಳು, ಲಡಾಯಿ ಪ್ರಕಾಶನ, ಬೆಂಗಳೂರು.

ಮಳಲಿ ವಸಂತಕುಮಾರ್, ೧೯೯೫, ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ, ಪಂಪ ಪ್ರಕಾಶನ, ಮೈಸೂರು.

ಮಿರ್ಜಿ ಅಣ್ಣಾರಾಯ, ೧೯೯೭, ಜೈನಧರ್ಮ, ಶಾಂತಿ ಸೇವಾ ಸದನ, ಸೇಡಬಾಳ.

ಮುಗಳಿ ರಂ.ಶ್ರೀ., ೧೯೬೪, ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು.

ಮುಗಳಿ ರಂ.ಶ್ರೀ., ೧೯೭೬, ಕನ್ನಡ ಸಾಹಿತ್ಯದ ಇತಿಹಾಸ, ಕಾವ್ಯಾಲಯ, ಮೈಸೂರು.

ಮೂರ್ತಿ ಕೆ.ಆರ್.ಕೆ., ೧೯೯೮, ಧರ್ಮಸಂಗಮ, ಸಾಹಿತ್ಯಲೋಕ, ಬೆಂಗಳೂರು.

ಮೂರ್ತಿರಾವ್ ಎ.ಎನ್., ೨೦೦೫, ದೇವರು, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

ಮೋಗಳ್ಳಿ ಗಣೇಶ್ (ಸಂ.), ೨೦೦೨, ದಲಿತ ಚಿಂತನೆ ಕುವೆಂಪು ವೈಚಾರಿಕ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಗಳ್ಳಿ ಗಣೇಶ್ (ಸಂ.), ೨೦೦೯, ಮತೀಯ ಭಯಾವತಾರ, ಕುವೆಂಪು ವೈಚಾರಿಕ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನ್‌ಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯಳನಾಡು ಅಂಜನಪ್ಪ, ೨೦೦೮, ಧರ್ಮ ಮತ್ತು ಮುಕ್ತ ವಿಚಾರ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರವಿಂದ್ರನಾಥ ಕೆ. (ಸಂ.), ೨೦೦೮, ಅಧ್ಯಯನದ ವಿಧಿವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ (ಸಂ.), ೨೦೦೦, ಧರ್ಮ ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: ೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಹಮತ್ ತರೀಕೆರೆ, ೨೦೧೦, ಮಲೆಗಳಲ್ಲಿ ಮದುಮಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೧೮, ಸಂಶೋಧನೆ ಮೀಮಾಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೦೭, ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರಹಮತ್ ತರೀಕೆರೆ, ೨೦೧೧, ಇಲ್ಲಿ ಯಾರೂ ಮುಖ್ಯರಲ್ಲ, ಲಡಾಯಿ ಪ್ರಕಾಶನ, ಬೆಂಗಳೂರು,

ರಹಮತ್ ತರೀಕೆರೆ, ೨೦೧೨, ಕನ್ನಡ ಸಾಹಿತ್ಯ ವಾಗ್ವಾದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರಾಘವೇಂದ್ರರಾವ್ ಎಚ್.ಎಸ್., ೧೯೫೫, ಹಾಡೆ ಹಾದಿಯ ತೋರಿತು, ಕನ್ನಡ ಸಂಘ, ಬೆಂಗಳೂರು.

ರಾಜಶೇಖರಯ್ಯ ಎ.ಎಂ. (ಸಂ.), ೨೦೧೫, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ ೩), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

ರಾಜೇಂದ್ರ ಚೆನ್ನಿ, ೨೦೧೦, ಅಸಮಗ್ರ, ಪಲ್ಲವ ಪ್ರಕಾಶನ, ಚನ್ನಪಟ್ಟಣ.

ರಾಜೇಂದ್ರ ಡಿ.ಕೆ., ೧೯೮೫, ಕುವೆಂಪು ಸಾಹಿತ್ಯಾವಲೋಕನ, ಸಹ್ಯಾದ್ರಿ ಪ್ರಕಾಶನ, ಮೈಸೂರು.

ರಾಜೇಶ್ವರಿ ತೇಜಸ್ವಿ, ೨೦೧೧, ನನ್ನ ತೇಜಸ್ವಿ, ಪುಸ್ತಕ ಪ್ರಕಾಶನ, ಮೈಸೂರು.

ರಾಮಕೃಷ್ಣ ಜಿ., ೧೯೯೪, ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ರಾಮಕೃಷ್ಣ ಜಿ. (ಅನು), ೨೦೧೪, ವಾನರನಿಂದ ಮಾನವನವರೆಗೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ರಾವ್‌ಸಾಹೇಬ್ ಕಸಬೆ (ಮೂಲ), ಚಂದ್ರಕಾಂತ ಪೋಕಳೆ (ಅನು.), ೨೦೧೯, ಧರ್ಮ, ನವಕರ್ನಾಡಕ ಪ್ರಕಾಶನ, ಬೆಂಗಳೂರು.

ರೆವ್. ಎಫ್. ಕಿಟೆಲ್, ೧೯೯೪, ಕನ್ನಡ–ಇಂಗ್ಲೀಷ್ ಡಿಕ್ಷನರಿ, ಬಾಸೆಲ್ ಮಿಷನ್ ಬುಕ್ ಆ್ಯಂಡ್ ಟ್ರಾಕ್ಟ್ ಡಿಪಾಸಿಟರಿ, ಮಂಗಳೂರು.

ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್., ೨೦೧೫, ಕನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು.

ವಡ್ಡಗೆರೆ ನಾಗರಾಜಯ್ಯ (ಸಂ.), ೨೦೧೨, ಸಮಾಜವಾದಿಗಳ ನೆನಪಿನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವಾವಿದ್ಯಾಲಯ, ಹಂಪಿ.

ವಸಂತ ಕುಮಾರ್ ಎಂ.ಸಿ. (ಸಂ.), ೧೯೭೭, ಕುವೆಂಪು ನಾಟಕ ಸಮೀಕ್ಷೆ, ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು.

ವಸಂತಕುಮಾರ್ ಬಿ.ವಿ., ೨೦೧೧, ಕನ್ನಡ ಭಾಷೆಯ ಚರಿತ್ರೆ, ಕಾಂತಶ್ರೀ ಪ್ರಕಾಶನ, ಮೈಸೂರು.

ವಸುಂಧರಾ ಭೂಪತಿ, ೨೦೧೪, ಮಹಿಳೆ ಮತ್ತು ಮೌಢ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವಾಸವಿ ಎ.ಆರ್. (ಇಂಗ್ಲಿಷ್ ಮೂಲ), ೨೦೧೫, ಸಾಮಾಜಿಕ ಆಕಾರರೇಖೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.), ೨೦೧೦, ಭಾರತ ಉಪಖಂಡದ ಆಧುನಿಕ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಠಲ್‌ರಾವ್ ಗಾಯಕ್ವಾಡ್, ೧೯೯೪, ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಕುವೆಂಪು ವಿ.ವಿ.

ವಿನಯ ಲಾಲ್ ಮತ್ತು ಅಶೀಶ್ ನಂದಿ(ಸಂ.), ೨೦೦೭, ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೫, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿವಿಧ ಲೇಖಕರು, ೧೯೯೨, ಕೋಮು ಸಮಸ್ಯೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಿವಿಧ ಲೇಖಕರು, ೧೯೯೩, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಿವಿಧ ಲೇಖಕರು, ೧೯೯೩, ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಿವಿಧ ಲೇಖಕರು, ೨೦೧೪, ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಬೆಂಗಳೂರು

ವೀರಣ್ಣ ಸಿ., ೧೯೮೬, ಕನ್ನಡ ಸಾಹಿತ್ಯ: ಚಾರಿತ್ರಿಕ ಬೆಳವಣಿಗೆ-೧, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವೀರಭದ್ರಪ್ಪ ಬಿ.ವಿ., ೧೯೯೫, ವೇದಾಂತ ರೆಜಿಮೆಂಟ್ ಮತ್ತು ಇತರ ವೈಚಾರಿಕ ಬರಹಗಳು, ಪತ್ರಿಕೆ ಪ್ರಕಾಶನ, ಬೆಂಗಳೂರು.

ವೀರಭದ್ರಪ್ಪ ಬಿ.ವಿ., ೨೦೦೯, ಧರ್ಮ ಮತ್ತು ವೈಚಾರಿಕತೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವೀರಭದ್ರಪ್ಪ ಬಿ.ವಿ., ೨೦೧೬, ವೇದಗಳಲ್ಲಿ ಜನಸಾಮಾನ್ಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವೀರಮಣಿ ಕೆ. (ಸಂಗ್ರಹ), ಮಾಯಿಗೌಡ ಕೆ. (ಅನು.), ೨೦೧೪, ಪೆರಿಯಾರ್ ಫಿಲಾಸಫಿ, ಸಪ್ನ ಬುಕ್ ಹೌಸ್, ಬೆಂಗಳೂರು.

ವೃಷಭೇಂದ್ರಸ್ವಾಮಿ ಎಸ್. ಎಂ., ೨೦೦೪, ತರಗತಿಗಳಲ್ಲಿ ಕುವೆಂಪು, ಪುಸ್ತಕ ಪ್ರಕಾಶನ, ಮೈಸೂರು.

ವೆಂಕಟಾಚಲ ಶಾಸ್ತ್ರೀ (ಸಂ.), ೨೦೦೬, ಪಂಪಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟಾಚಲ ಶಾಸ್ತ್ರೀ ಟಿ.ವಿ., ರಾಘವೇಂದ್ರರಾವ್ ಕೆ. (ಸಂ.), ೨೦೦೬, ಬ್ರಹ್ಮಶಿವ-ವೃತ್ತವಿಲಾಸ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶಮೂರ್ತಿ ಟಿ., ೨೦೦೯, ಕನ್ನಡ ನಾಟಕ: ಯಾಜಮಾನ್ಯ ಸಂಕಥನ, ಅಧ್ಯಯನ ಮಂಡಲ, ಬೆಂಗಳೂರು.

ವೇಣುಗೋಪಾಲ ರಾವ್ ಎ.ಎಸ್., ೧೯೯೪, ಶ್ರೀ ಕುವೆಂಪು ಅವರ ದಾರ್ಶನಿಕ ವಿಚಾರಗಳು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ.

ವೇಮಣ್ಣ (ಅನು.), ಪೆರಿಯಾರರ ವಿಚಾರಶೀಲ ಲೇಖನಗಳು, ಚಿಂತಕ ಚಾವಡಿ, ಬೆಂಗಳೂರು.

ಶಂಕರ್ ಎನ್.ಎಸ್. (ಕನ್ನಡಕ್ಕೆ), ೨೦೧೨, ಬ್ರಾಹ್ಮಣಧರ್ಮದ ದಿಗ್ವಿಜಯ!, ಆದಿಮ ಪ್ರಕಾಶನ, ಕೋಲಾರ.

ಶಂಕರಭಟ್ ಡಿ.ಎನ್., ೨೦೦೬, ಕನ್ನಡ ನುಡಿಯ ಬಗೆಗೆ ಚಿಂತನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಶಂಕರಭಟ್ ಡಿ.ಎನ್., ೨೦೦೨, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿರೂರ ಬಿ.ವಿ., ೨೦೧೨, ಸಂಶೋಧನೆಯ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

ಶಿವರುದ್ರಪ್ಪ ಜಿ.ಎಸ್. (ಸಂ.), ೧೯೯೦, ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್. (ಸಂ.), ೨೦೦೩, ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್., ೨೦೦೭, ಸಮಗ್ರ ಗದ್ಯ ಸಂಪುಟ ೧, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್., ೨೦೦೨, ಕುವೆಂಪು ಪುನರಾಲೋಕನ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

ಶಿವರಾಮ ಪಡಿಕ್ಕಲ್, ೨೦೦೧, ನಾಡು-ನುಡಿಯ ರೂಪಕ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ.

ಶಿವರಾಮು ಕಾಡನಕುಪ್ಪೆ, ೨೦೦೪, ಕುವೆಂಪು ಸಾಹಿತ್ಯ ಮತ್ತು ವಿಚಾರ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಶಿವಾರೆಡ್ಡಿ ಕೆ.ಸಿ., ೨೦೦೩, ಕನ್ನಡದ ಹಾಡುಪಾಡು, ಅಧ್ಯಯನ ಮಂಡಲ, ಬೆಂಗಳೂರು.

ಶಿವಾರೆಡ್ಡಿ ಕೆ.ಸಿ., ಸೋಮಶೇಖರ್ ಎಸ್.ವೈ. (ಸಂ.), ೨೦೦೪, ಕುವೆಂಪು ವಿದಾರಧಾರೆಯ ಪ್ರಸ್ತುತತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾರೆಡ್ಡಿ ಕೆ.ಸಿ., ೨೦೦, ಸ್ಥಿತ್ಯಂತರ, ಶಕ್ತಿಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.

ಶ್ರೀಕಂಠಯ್ಯ ಬಿ.ಎಂ., ೧೯೮೨, ಶ್ರೀಸಾಹಿತ್ಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶ್ರೀಕಂಠ ಕೂಡಿಗೆ, ೨೦೦೪, ಕುವೆಂಪು ಕುರಿತು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಶ್ರೀನಿವಾಸ ಗಿಳಿಯಾರ, ೨೦೧೩, ಆಧುನಿಕತೆ, ರಾಷ್ಟ್ರ: ಕಾರಂತ-ಕುವೆಂಪು ಕಥನ, ಆಕೃತಿ ಆಶಯ ಪಬ್ಲಿಕೇಷನ್ಸ್, ಮಂಗಳೂರು.

ಶ್ರೀನಿವಾಸಮೂರ್ತಿ ಜಿ., ೨೦೦೦, ಭಾರತೀಯ ಭಾಷಾಧ್ಯಯನದ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಪಾದ ಬಿ., ೨೦೧೫, ಹಿಂದುತ್ವ ರಾಜಕಾರಣ, ಚಿಂತನ ಪುಸ್ತಕ, ಬೆಂಗಳೂರು.

ಶ್ರೀನಿವಾಸ ಬಿ. (ಕನ್ನಡಕ್ಕೆ), ಜ್ಯೋತಿಬಾ ಫುಲೆ (ಮೂಲ), ೨೦೧೫, ಪುರೋಹಿತಶಾಹಿ ಮತ್ತು ಗುಲಾಮಗಿರಿ, ಲಡಾಯಿ ಪ್ರಕಾಶನ, ಗದಗ.

ಶ್ರೀನಿವಾಸಮೂರ್ತಿ ಕಾ.ವೆಂ., ೨೦೦೦, ಕನ್ನಡಪರ ಚಿಂತನೆ ಮತ್ತು ಪರಂಪರೆ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಬೆಳಗಾವಿ.

ಶ್ರೀನಿವಾಸ ಹಾವನೂರು (ಸಂ.), ೨೦೧೩, ಕನ್ನಡ ಸಾಹಿತ್ಯ ಚರಿತ್ರೆಯ ಮುಂದುವರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀನಿವಾಸ ಹಾವನೂರು, ೧೯೭೪, ಹೊಸಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಶೇಷಗಿರಿರಾವ್ ಎಲ್. ಎಸ್., ೨೦೧೧, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಬೆಂಗಳೂರು.

ಸಂಗಮೇಶ ಸವದತ್ತಿಮಠ, ೧೯೯೫, ಸಾಹಿತ್ಯ ಸಂಶೋಧನ ಮಾರ್ಗ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ

ಸಂಗಮೇಶ ಸವದತ್ತಿಮಠ, ೨೦೦೩, ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸರ್ದೇಸಾಯಿ ಎಸ್.ಜಿ. (ಮೂಲ), ಗೋಪಾಲಕೃಷ್ಣ ರಾವ್ ಕೆ.ಎಲ್. (ರೂಪಾಂತರ), ೨೦೧೪, ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಸರ್ದೇಸಾಯಿ ಎಸ್.ಜಿ. (ಮೂಲ), ಗೌರೀಶ ಕಾಯ್ಕಿಣಿ (ಅನು.), ೨೦೧೭, ಭಾರತೀಯ ತತ್ವಜ್ಞಾನ(ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಸಬಿಹಾ ಭೂಮಿಗೌಡ (ಸಂ.), ೨೦೦೯, ಕುವೆಂಪು ಶತಮಾನೋತ್ತರ ನೋಟ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ.

ಸರ್ವಪಲ್ಲಿ ರಾಧಾಕೃಷ್ಣನ್ (ಮೂಲ ಸಂ.), ೧೯೭೦, ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಪುಟ ೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸ್ವಾಮಿ ಧರ್ಮತೀರ್ಥ (ಮೂಲ), ಭಗವಾನ್ (ಅನು), ೧೯೯೪, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮ ಪ್ರಕಾಶನ, ಮೈಸೂರು.

ಸಿದ್ಧಲಿಂಗಯ್ಯ, ೨೦೦೯, ಉರಿಕಂಡಾಯ, ಅಂಕಿತ ಪುಸ್ತಕ, ಬೆಂಗಳೂರು.

ಸೀತಾರಾಮಯ್ಯ ಎಂ.ವಿ. (ಸಂ.), ೨೦೧೧, ಕವಿರಾಜಮಾರ್ಗಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಸುಬ್ಬಣ್ಣ ಕೆ.ವಿ., ೧೯೯೫, ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸುಬ್ಬಣ್ಣ ಕೆ.ವಿ., ೨೦೦೯, ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಪ್ರಕಾಶನ, ಹೆಗ್ಗೋಡು.

ಸುಮಿತ್ರಾ ಬಾಯಿ ಕೆ. (ಪ್ರ.ಸಂ.), ೨೦೦೬, ಕನ್ನಡ ಸಾಹಿತ್ಯ: ಕುವೆಂಪು ಸಂಸ್ಕೃತಿ ಚಿಂತನೆ, ಸ್ವಾಯತ್ತ ಯುವರಾಜ ಕಾಲೇಜು, ಮೈಸೂರು.

ಸುಂದರಂ ಆರ್.ವಿ.ಎಸ್. (ಪ್ರ.ಸಂ.), ೨೦೦೭, ಕುವೆಂಪು ಕರ್ನಾಟಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಹನುಮಂತಪ್ಪ ಸಿ.ಎಸ್., ೨೦೧೧, ಮಿದುಳತ್ವ, ಹಪ್ಪ ಪ್ರಕಾಶನ, ಬೆಂಗಳೂರು.

ಹನುಮಂತರಾವ್ ಜಿ., ೨೦೦೪, ಲೋಕಾಯತ, ಚಾರ್ವಾಕ ಮತ್ತು ಸ್ವಭಾವವಾದ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

ಹಾ.ಮಾ. ನಾಯಕ (ಪ್ರ.ಸಂ.), ೧೯೭೦, ಭಾರತೀಯ ದರ್ಶನ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.

ಹೊಸ್ಕೆರೆ ಶಿವಸ್ವಾಮಿ, ೧೯೭೯, ಸಂಶೋದನ ಶಾಸ್ತ್ರ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

ಲೇಖನಗಳು

ಅನಂತಮೂರ್ತಿ ಯು.ಆರ್., ೧೯೬೫, ಇಂಗ್ಲಿಷ್ ಬ್ರಾಹ್ಮಣ, ಕನ್ನಡ ಶೂದ್ರ, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ.

ಅನಂತಮೂರ್ತಿ ಯು.ಆರ್., ೧೯೬೫, ಭಾರತೀಯ ಸಂಸ್ಕೃತಿ ಮತ್ತು ಲೇಖಕ, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ.

ತೇಜಸ್ವಿ ಕಟ್ಟಿಮನಿ, ೨೦೦೫, 'ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಮತ್ತು ದ್ರಾವಿಡ ಚಳುವಳಿ', ದಲಿತರು ಮತ್ತು ಚರಿತ್ರೆ, ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನೇಶ್ ಹೆಗಡೆ, ೨೦೧೦, ದ್ರಾವಿಡ ಮತ್ತು ಹಿಂದುಳಿದ ವರ್ಗಗಳ ಚಳವಳಿಗಳು, ಭಾರತ ಉಪಖಂಡದ ಆಧುನಿಕ ಚರಿತ್ರೆ, ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., ೨೦೧೧, ಕುವೆಂಪು ಸಾಹಿತ್ಯ ವೈಚಾರಿಕತೆ, ಮೇ–ಜೂನ್, ಸಂಚಿಕೆ ೨೦, ದ್ವೈಮಾಸಿಕ, ಬೆಂಗಳೂರು.

ನಾರಾಯಣಸ್ವಾಮಿ ಜ.ಹೊ, ೨೦೦೭, 'ಬ್ರಾಹ್ಮಣ್ಯದ ತಂತ್ರಗಳು, ಅದರ ಭಾಷೆ, ನುಡಿಕಟ್ಟು ಇತ್ಯಾದಿ, ವಿಚಾರ ಸಾಹಿತ್ಯ ೨೦೦೬, ಸಂ. ಪೋತೆ ಎಚ್.ಟಿ., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.


ಬರಗೂರು ರಾಮಚಂದ್ರಪ್ಪ, ೨೦೧೪, ಕನ್ನಡ–ಸಂಸ್ಕೃತ ಸಂಬಂಧ ಸ್ಥಾನಮಾನ, ಫೆಬ್ರವರಿ, ಸಂಪುಟ ೩, ಸಂಚಿಕೆ ೪ ಸಿಹಿಗಾಳಿ ಮಾಸಿಕ, ಬೆಂಗಳೂರು.

ರಹಮತ್ ತರೀಕೆರೆ, ೨೦೦೭, 'ವೈದಿಕ ವಿರೋಧದ ಸಮಸ್ಯೆ', ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಾರಾಮ ಹೆಗಡೆ, ೨೦೧೪, ಕುವೆಂಪು 'ನೆನಪಿನ ದೋಣಿಯಲ್ಲಿ'; ಜಾತಿ ವ್ಯವಸ್ಥೆ ಕುರಿತ ಅಭಿಜಾತ ಕ್ಲಾಸಿಕಲ್ ನಿರೂಪಣೆಯ ಚೌಕಟ್ಟು, ಜುಲೈ–ಆಗಸ್ಟ್, ಸಂಚಿಕೆ ೧೦೫, ಸಂಚಯ ದ್ವೈಮಾಸಿಕ, ಬೆಂಗಳೂರು.

ಸುಮಿತ್ರಾಬಾಯಿ ಬಿ.ಎನ್., ೨೦೧೧, ಕುವೆಂಪು ಕಾದಂಬರಿಗಳು ಮತ್ತು ಪೂರ್ಣದೃಷ್ಟಿ, ಮಾರ್ಚ್–ಏಪ್ರಿಲ್, ಸಂಚಿಕೆ ೯೧, ಸಂಚಯ, ದ್ವೈಮಾಸಿಕ, ಬೆಂಗಳೂರು.

* * *



ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ